ಕನ್ನಡ ಚುಟುಕು ಸಾಹಿತ್ಯ : ಸಾಮಾಜಿಕ ಪ್ರಜ್ಞೆ

(ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ.ಪದವಿಗಾಗಿ ಸಲ್ಲಿಸುತ್ತಿರುವ
ಮಹಾಪ್ರಬಂಧ)

ಸಂಶೋಧಕ

ಎ.ಎಂ.ರಾಜಶೇಖರಯ್ಯ

ಮಾರ್ಗದರ್ಶಕರು

ಡಾ.ಎಸ್.ಆರ್.ಚನ್ನವೀರಪ್ಪ

ಸಹಾಯಕ ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೧

ಕನ್ನಡ ಚುಟುಕು ಸಾಹಿತ್ಯ : ಸಾಮಾಜಿಕ ಪ್ರಜ್ಞೆ

(ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ.ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕ

ಎ.ಎಂ.ರಾಜಶೇಖರಯ್ಯ

ಮಾರ್ಗದರ್ಶಕರು

ಡಾ.ಎಸ್.ಆರ್.ಚನ್ನವೀರಪ್ಪ

ಸಹಾಯಕ ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೦

ಪ್ರಮಾಣ ಪತ್ರ

ಕನ್ನಡ ಚುಟುಕು ಸಾಹಿತ್ಯ : ಸಾಮಾಜಿಕ ಪ್ರಜ್ಞೆ ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಪಿಎಚ್.ಡಿ.ಪದವಿಗಾಗಿ ಡಾ.ಎಸ್.ಆರ್.ಚನ್ನವೀರಪ್ಪ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

A.M. Rajashekharaiah

ಎ.ಎಂ.ರಾಜಶೇಖರಯ್ಯ
ಸಂಶೋಧಕ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : 15/09/2010

ದೃಢೀಕರಣ ಪತ್ರ

ಶ್ರೀ ಎ.ಎಂ.ರಾಜಶೇಖರಯ್ಯ ಅವರು, **ಕನ್ನಡ ಚುಟುಕು ಸಾಹಿತ್ಯ : ಸಾಮಾಜಿಕ ಪ್ರಜ್ಞೆ**, ಎಂಬ ಶೀರ್ಷಿಕೆಯ ಸಂಶೋಧನ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ **ಹಸ್ತಪ್ರತಿಶಾಸ್ತ್ರ** ವಿಭಾಗಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಇವರು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಎಸ್.ಆರ್.ಚನ್ನವೀರಪ್ಪ
ಸಹಾಯಕ ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ : 15-9-2010

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಸುಮಾರು ಎರಡು ಸಾವಿರ ವರ್ಷಗಳ ಸುದೀರ್ಘ ಪರಂಪರೆಯನ್ನು ಹೊಂದಿರುವ ಕನ್ನಡ ಸಾಹಿತ್ಯದಲ್ಲಿ ಅನೇಕ ಬಗೆಯ ಸಾಹಿತ್ಯ (ತ್ರಿಪದಿ, ರಗಳೆ, ಷಟ್ಪದಿ, ಸಾಂಗತ್ಯ ಮುಂತಾದವು) ರೂಪಗಳನ್ನು ಕಾಣುತ್ತೇವೆ. ಅಂತಹವುಗಳಲ್ಲಿ ಚುಟುಕು ಸಾಹಿತ್ಯವೂ ಒಂದು. ಈ ರೂಪದ ಸಾಂಸ್ಕೃತಿಕ ವೈರುಧ್ಯಕ್ಕೆ ತಾತ್ವಿಕ ಹಿನ್ನೆಲೆಯಿದೆ. ಚುಟುಕುಗಳು ಒಂದು ಕಾಲಘಟ್ಟದ ಹಾಗೂ ಪ್ರಾದೇಶಿಕ ಅರಿವಿಗೆ ಕಾರಣವಾಗಿ ಸಾಂಸ್ಕೃತಿಕ ಸತ್ವದ ನೆಲೆಗಟ್ಟಿನಲ್ಲಿ ಪ್ರತಿಕ್ರಿಯಿಸುವ ಆ ಮೂಲಕ ಭಾಷೆ ಮತ್ತು ಸಂಸ್ಕೃತಿಗೆ ಮರುಜೀವ ಕೊಡುವ ಕ್ರಿಯಾತ್ಮಕ ಹಾಗೂ ರಚನಾತ್ಮಕ ಕಾರ್ಯ ಎಸಗಿದವು ಎಂಬುದು ಐತಿಹಾಸಿಕ ಸತ್ಯವಾಗಿದೆ.

ವೈಚಾರಿಕ ನೆಲೆಗಟ್ಟಿನ ಮೇಲೆ ಹುಟ್ಟಿಕೊಂಡಂಥ ಅರ್ಥಪೂರ್ಣವಾದ ಚುಟುಕು ಸಾಹಿತ್ಯದಿಂದ ಮಾನವನ ಜೀವನ ಪರಿವರ್ತನೆಯಾಗುತ್ತಿದೆ. ಇಂತಹ ಸಾಹಿತ್ಯದಿಂದ ಜೀವನದಲ್ಲಿ ಬರುವ ವಾಸ್ತವಿಕ ಸಮಸ್ಯೆಗಳು ಅಥವಾ ಗೊಂದಲಗಳು ದೂರಾಗಿ ಮನಸ್ಸು ಹಗುರವಾಗುವುದು. ಬದುಕು ಲಾಲಿತ್ಯಮಯ ವಾಗುವುದು.

ಚುಟುಕು ಸಾಹಿತ್ಯ ಸಾಮಾಜಿಕ ನೆಲೆಯಲ್ಲಿ ಹಾಗೂ ಸಾಮಾಜಿಕ ಚೌಕಟ್ಟಿನಲ್ಲಿ ಸೃಷ್ಟಿಗೊಂಡಿದೆ ಯೆಂದರೆ ಅಚ್ಚರಿಪಡಬೇಕಾಗಿಲ್ಲ. 'ಆಡುಮುಟ್ಟದ ಗಿಡವಿಲ್ಲ' ಚುಟುಕು ಸಾಹಿತ್ಯ ನಿರೂಪಿಸಲಾರದ ಸಾಮಾಜಿಕ ವಿಷಯ ಸಂಗತಿಗಳೇ ಇಲ್ಲ ಎನ್ನಬಹುದು. ಚುಟುಕು ಕವಿ ತನಗಿರುವ ಲೌಕಿಕಾನುಭವವನ್ನು ತನ್ನ ಚುಟುಕುಗಳಲ್ಲಿ ಹುದುಗಿಸಿದ್ದಾನೆ. ಸಮಾಜದ ಓರೆ-ಕೋರೆ, ಅಂಕು-ಡೊಂಕು, ಏರು-ಪೇರುಗಳನ್ನು ಕಂಡು ವಿಡಂಬಿಸಿದ್ದಾನೆ. ವಿಮರ್ಶಿಸಿದ್ದಾನೆ. ಚುಟುಕು ಕವಿಗಳು ಸಮಾಜಶಾಸ್ತ್ರಜ್ಞನ ಚಿಕಿತ್ಸಕ ಬುದ್ಧಿಯನ್ನು ಪಡೆದವನಾದುದರಿಂದ ಸಮಾಜದ ಎಲ್ಲವನ್ನೂ, ಎಲ್ಲರನ್ನೂ, ಪರಿಶೀಲಿಸುವ ಸಾಮಾಜಿಕ ಚಿಂತಕನೆನಿಸಿದ್ದಾನೆ. ಚುಟುಕು ಸಾಹಿತ್ಯ ಸಮಾಜವನ್ನು ಹೂವಿನ ಹಾಸಿಗೆ, ಸುಂದರ ಸ್ವಪ್ನವೆಂದು ಭಾವಿಸಿದಂತಿಲ್ಲ. ನಾಡಿನಲ್ಲಿಯ ಕಾಡುಮೃಗಗಳ ಶೋಷಣೆ, ದೌರ್ಜನ್ಯ, ದುರಾಸೆ, ವಂಚನೆ, ಪ್ರತ್ಯೇಕತೆ, ಭ್ರಷ್ಟಾಚಾರ ಮುಂತಾದವನ್ನು ಚುಟುಕು ಯಥಾವತ್ತಾಗಿ ಚಿತ್ರಿಸಿವೆ. ಬಡತನ, ಹಸಿವು, ಲೈಂಗಿಕ ತೃಷೆ, ಅಂಧಾನುಕರಣೆಗಳ

ವಾಸ್ತವ ಚಿತ್ರವನ್ನು ಮಾರ್ಮಿಕವಾಗಿ ನೀಡಿವೆ. ಎಲ್ಲ ವಿಷಯವನ್ನು ಜೀವನದ ದೇಶೀ ಭಾಷೆಯಲ್ಲಿ ಅಭಿವ್ಯಕ್ತಿಸಿದ್ದರಿಂದ ಚುಟುಕು ಸಾಹಿತ್ಯ ಅತ್ಯಂತ ತೀವ್ರವಾಗಿ ಓದುಗನ ಹೃದಯವನ್ನು ಮುಟ್ಟಿವೆ, ತಟ್ಟಿವೆ. ಸಾಮಾಜಿಕ ಅಥವಾ ಸಾಂಸ್ಕೃತಿಕ ಮೌಲ್ಯಗಳ ಮತ್ತು ಆದರ್ಶಗಳು, ಅನುಕಂಪ, ಸಹೃದಯತೆ, ಸಹನ ಶೀಲತೆ ಮೊದಲಾದ ಸಾಮಾಜಿಕ ನೀತಿ ವಿಚಾರಗಳು ಹಾಗೂ ಸಾಮಾಜಿಕ ಜೀವನದ ಮುಖ್ಯ ಅಂಗ ರಾಜಕೀಯ ವಾತಾವರಣ ಈ ನೆಲೆಗಳಲ್ಲಿ ಚುಟುಕುಗಳ ಸಾಮಾಜಿಕ ಚಿಂತನೆಯನ್ನು ಪರಿಶೀಲಿಸಲು ಸೂಕ್ತ ಸಂದರ್ಭ ಎಂದು ತಿಳಿದು ಈ ವಿಷಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದೇನೆ.

ಇಂತಹ ಬಹುಮುಖ್ಯವಾದ ಚುಟುಕು ಸಾಹಿತ್ಯ ರೂಪದ ಬಗ್ಗೆ ಕನ್ನಡ ಸಾಹಿತ್ಯದಲ್ಲಿ ವಿಮರ್ಶೆ, ಸಂಶೋಧನೆ ಈವರೆಗೂ ಹೆಚ್ಚು ಇಲ್ಲ. ಮೈಸೂರಿನಲ್ಲಿರುವ ವೈದ್ಯವಾರ್ತಾ ಪ್ರಕಾಶನದ ಡಾ.ಎಂ.ಜಿ.ಆರ್. ಅರಸ್‌ರವರು ಸಂಪಾದಿತ ಚುಟುಕು ಸಾಹಿತ್ಯ ಕುರಿತು ಕೆಲವು ಸಂಕಲನ ಗ್ರಂಥಗಳನ್ನು ಬಿಟ್ಟರೆ ಆ ಸಾಹಿತ್ಯ ರೂಪದ ಬಗ್ಗೆ ಸಮಗ್ರವಾದ, ಗಂಭೀರವಾದ ಅಧ್ಯಯನ ನಡೆದಿಲ್ಲವೆಂದೇ ಹೇಳಬೇಕು. ನಮ್ಮ ಅನೇಕ ಪ್ರಮುಖ ಸಾಹಿತ್ಯ ರೂಪಗಳ ಬಗ್ಗೆಯೂ ಈ ಮಾತು ನಿಜ. ಪ್ರಾಚೀನ ಸಾಹಿತ್ಯ, ವಚನ ಸಾಹಿತ್ಯ, ಆಧುನಿಕ ಸಾಹಿತ್ಯದಲ್ಲಿ ಡುಂಡಿರಾಜ್, ಲಕ್ಷ್ಮಣರಾವ್, ಚಂಪಾ ಭಿಕ್ಷಾವರ್ತಿಮಠ್, ವೈದೇಹಿ, ಬಿ.ಟಿ.ಲಲಿತಾನಾಯಕ್ ಇನ್ನು ಮುಂತಾದವರ ಚುಟುಕುಗಳ ಬಗ್ಗೆ ಪ್ರಶಂಸೆ ಸಾಕಷ್ಟಿದ್ದರೂ ಅವರ ಚುಟುಕುಗಳ ವೈಶಿಷ್ಟ್ಯ, ಮಹತ್ವದ ಬಗ್ಗೆ, ಹೆಚ್ಚು ಚರ್ಚೆ ಆಗಿಲ್ಲ. ಇವರೆಲ್ಲರ ಚುಟುಕುಗಳ ಮನೋ ಭಾವದಲ್ಲೇ ಮೂಲಭೂತವಾದ ವ್ಯತ್ಯಾಸವಿದೆ. ಪ್ರಗತಿಶೀಲ, ಬಂಡಾಯ ಚಟುವಟಿಕೆ ವಚನಕಾರರ ಮತ್ತು ಆಧುನಿಕ ಕವಿ ಬರಹಗಾರರ ಚುಟುಕುಗಳು ಸ್ಪಂದಿಸಿದ ಬಗ್ಗೆ ಕನ್ನಡ ವಿಮರ್ಶೆಯಲ್ಲಿ ಪ್ರಸ್ತಾಪವೇ ಇಲ್ಲ. ಚುಟುಕುಗಳು ಯಾವಾಗಲೂ ಪ್ರಯೋಗಶೀಲವಾಗಿ ಸಾಹಿತ್ಯಿಕ ವಾಗ್ವಾದಗಳಿಗೆ ಸೃಜನಶೀಲ ನೆಲೆಯಲ್ಲಿ ಸ್ಪಂದಿಸುತ್ತ ಬಂದಿವೆ. ಆ ಮೂಲಕ ಕನ್ನಡ ಸಾಹಿತ್ಯದ ಅರಿವಿನ ಎಲ್ಲೆಯನ್ನು ವಿಸ್ತರಿಸಿವೆ.

ಜಿಡ್ಡುಗಟ್ಟಿದ ಸಾಮಾಜಿಕ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ಬಯಸುವಲ್ಲಿ ಚುಟುಕುಗಳ ಪ್ರಭಾವ ಮಹತ್ತರವಾದುದು. ಕಲ್ಪನಾಂಶ, ಚಿಂತನಾಂಶ, ಗೇಯಾಂಶ, ನವಿರಾದ ಹಾಸ್ಯ, ವ್ಯಂಗ್ಯ, ವಿಡಂಬನೆ, ಗೇಲಿ, ಕಟಕಿ, ಶಬ್ದ ಚಮತ್ಕಾರ, ಚತುರೋಕ್ತಿ, ಶ್ಲೇಷ, ಅಂತ್ಯಪ್ರಾಸ, ಅರ್ಥಧ್ವನಿ, ಶಬ್ದಧ್ವನಿ, ಧ್ವನಿಪೂರ್ಣ ಅಂತ್ಯ ಇವೇ ಮುಂತಾದ ಗುಣಲಕ್ಷಣಗಳನ್ನು ಚುಟುಕು ಹೊಂದಿರುತ್ತದೆ. ಕೆಲವೇ ಶಬ್ದಗಳ ಮೂರ್ನಾಲ್ಕು ಸಾಲುಗಳ ಕವಿ ಭಾವವೊಂದು ಅಭಿವ್ಯಕ್ತಿಗೊಂಡು, ವಾಚಕನ ಮನವನ್ನು ತೀವ್ರವಾಗಿ ಸ್ಪಂದಿಸುತ್ತದೆ. ಶಬ್ದಾಡಂಬರ, ಅನಗತ್ಯ ವೈಭವೀಕರಣ, ಛಂದಸ್ಸಿನ ಬಂಧನ, ಅಲಂಕಾರಗಳ ಕೃತಕತೆಗಳಿಗೆ ಅಲ್ಲಿ ಅವಕಾಶವೇ ಇಲ್ಲ. ಸರಳ, ನೇರ, ಸ್ಪಷ್ಟ ಮತ್ತು ಸಂಕ್ಷಿಪ್ತ ನಿರೂಪಣೆ ಇದರ ಜೀವಾಳ ಹೀಗಾಗಿ ಕವಿಯ ಭಾವನೆಯನ್ನು ಜನತೆಗೆ ಮುಟ್ಟಿಸುವ ಅತ್ಯಂತ ಪ್ರಭಾವಿ ಮತ್ತ ಪರಿಣಾಮಕಾರಿ ಮಾಧ್ಯಮವೆಂದರೆ

ಚುಟುಕು ಸಾಹಿತ್ಯ. ಪಂಡಿತ ಪಾಮರರನ್ನು ಮೆಚ್ಚಿಸಬಲ್ಲ ಶಕ್ತಿ ಇದಕ್ಕಿದೆ. ಸಾಮಾಜಿಕ ಚಿಂತನೆಗಳ ಧ್ವನಿಪೂರ್ಣ ಅಭಿವ್ಯಕ್ತಿಯಾದ ಚುಟುಕೂ ಶ್ರೇಷ್ಠ ಕಾವ್ಯವೇ.

ಆದರೆ ಚುಟುಕು ಕಾವ್ಯ ಕುರಿತಾಗಿ ಚಿಂತನ-ಮಂಥನ, ವಾದ-ವಿವಾದ, ವಿಮರ್ಶೆ ನಡೆಯದಿರುವುದರಿಂದ "ಕನ್ನಡ ಚುಟುಕು ಸಾಹಿತ್ಯ : ಸಾಮಾಜಿಕ ಪ್ರಜ್ಞೆ" ಎನ್ನುವ ಶೀರ್ಷಿಕೆ ಅಡಿ ಅಧ್ಯಯನಕ್ಕಿಳಿದಿದ್ದೇನೆ. ಚುಟುಕು ಕಾವ್ಯ ಮೀಮಾಂಸೆ ಸೃಷ್ಟಿಯಾಗಬೇಕು. ಚುಟುಕಿಗೆ ಸಂಬಂಧಿಸಿದ ಕನ್ನಡ ಕಾವ್ಯ ಸಾಹಿತ್ಯ ವಿಮರ್ಶಾ ಮಾನದಂಡಗಳನ್ನು ರೂಪಿಸಬೇಕು. ಚುಟುಕು, ಹನಿಗವನ, ಮಿನಿಗವನ, ಮಿಡಿಗವನ, ನಗೆಹನಿ, ಕಿರುಗವನಗಳಲ್ಲಿಯ ಸೂಕ್ಷ್ಮ ವ್ಯತ್ಯಾಸವನ್ನು ಗುರುತಿಸಿ, ಚುಟುಕು ಜನಪ್ರಿಯ ಕಾವ್ಯವೆಂದು ಉದಾಸೀನ ಮಾಡದೆ ಅದರಲ್ಲಿಯ ಕಾವ್ಯ ಮೌಲ್ಯ ಮತ್ತು ಸಾಮಾಜಿಕ ಪ್ರಜ್ಞೆಗಳನ್ನು ಗುರುತಿಸಬೇಕೆಂದು ತಿಳಿದು ಈ ವಿಷಯವನ್ನು ಇಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಹತ್ತುಕಟ್ಟುವ ಕಡೆ ಒಂದು ಮುತ್ತು ಕಟ್ಟು ಎನ್ನುವ ಕನ್ನಡ ನಾಣ್ನುಡಿ ಚುಟುಕು ಸಾಹಿತ್ಯ ಕೃಷಿಯನ್ನು ಈ ಮಾತಿಗೆ ಹೋಲಿಸಬಹುದಾಗಿದೆ. ಹೇಳುವುದನ್ನು ಕ್ಲುಪ್ತವಾಗಿ, ಕ್ಷಿಪ್ರವಾಗಿ, ವೇಗವಾಗಿ, ಲಘುವಾಗಿ, ಸಹಾಸ್ಯವಾಗಿ, ಸಮನ್ವಯವಾಗಿ ಹೇಳುವುದೇ ಅಲ್ಲದೆ ಸಕಾಲಿಕವೂ ಆದ ಕಾವ್ಯ ಗಗನದಲ್ಲಿ ಕವಿ ಸಮಯದಲ್ಲಿ ಹೊಳೆಯುವ ವಿದ್ಯುಲ್ಲತೆಯೇ "ಚುಟುಕು ಸಾಹಿತ್ಯ".

ಈ ಎಲ್ಲ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಪ್ರಾಚೀನ ಸಾಹಿತ್ಯದ ಆಯ್ದ (ಪ್ರಾತಿನಿಧಿಕ) ಚುಟುಕುಗಳನ್ನು ಅನುಲಕ್ಷಿಸಿ (ಸಮಗ್ರತೆ ಪ್ರಾಪ್ತವಾಗುವಂತೆ) ಸಮಗ್ರ ಚರ್ಚೆ ಅಗತ್ಯವೆಂದು ಭಾವಿಸಿ ಅಧ್ಯಯನಕ್ಕೆ ಆರಿಸಿಕೊಳ್ಳಲಾಗಿದೆ. ಈ ನಿಬಂಧದಲ್ಲಿ ಒಟ್ಟು ಎಂಟು ಅಧ್ಯಾಯಗಳಿವೆ. ಅಧ್ಯಾಯ ಒಂದರಲ್ಲಿ ನಿಬಂಧದ ಉದ್ದೇಶ ಮತ್ತು ವ್ಯಾಪ್ತಿಯನ್ನು ಕುರಿತಾಗಿ ಸ್ಪಷ್ಟಪಡಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಚುಟುಕು ಸಾಹಿತ್ಯ ಮತ್ತು ಅದರ ಸ್ವರೂಪ ಎನ್ನುವ ಹಿನ್ನೆಲೆಯಲ್ಲಿ ಚುಟುಕು ಶಬ್ದದ ಅರ್ಥ ಮತ್ತು ಸ್ವರೂಪವನ್ನು ವಿವರಿಸಲಾಗಿದೆ. ಚುಟುಕು ಎನ್ನುವುದಕ್ಕೆ ಹನಿಗವನ, ಮಿನಿಗವನ, ಮುಕ್ತಕ ಎಂಬಿತ್ಯಾದಿಯಾಗಿ ಕರೆದರೂ ಇವುಗಳ ಸಾಮ್ಯತೆ ಒಂದೇ ಎಂದು ಅಧ್ಯಯನದಲ್ಲಿ ಕಂಡುಕೊಂಡಿದ್ದೇನೆ. ಚುಟುಕುಗಳ ವೈಶಿಷ್ಟ್ಯತೆ ಚುಟುಕು ಕವಿಗಳ ಮನೋಧರ್ಮ ಇವುಗಳಿಗೆ ಕಾರಣವಾದ ಹಿನ್ನೆಲೆಯನ್ನು ವಿವರಿಸಲಾಗಿದೆ. ಯಾವ ಅಂಶಗಳು ಇತರ ಸಾಹಿತ್ಯ ರೂಪಗಳಿಗಿಂತ ಚುಟುಕು ಕಾವ್ಯ ಭಿನ್ನವಾಗಿ ಬೆಳೆಯುವುದಕ್ಕೆ ಕಾರಣವಾಗಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ.

ಚುಟುಕು ಕಾವ್ಯದ ಹಿನ್ನೆಲೆಯನ್ನು ಮುಖ್ಯವಾಗಿ ನಾಲ್ಕು ನೆಲೆಗಳಲ್ಲಿ ವಿವರಿಸಲಾಗಿದೆ. ಐತಿಹಾಸಿಕ ನೆಲೆಗಳು, ಸಾಮಾಜಿಕ ಬದಲಾವಣೆಗಳು, ಸಾಂಸ್ಕೃತಿಕ ವೈಶಿಷ್ಟ್ಯಗಳು, ಸಾಹಿತ್ಯಿಕ ಚಟುವಟಿಕೆಗಳು ಎಂಬ ನಾಲ್ಕು ನೆಲೆಗಳಲ್ಲಿ ಚುಟುಕು ಕಾವ್ಯದ ಹಿನ್ನೆಲೆಯನ್ನು ವಿಶ್ಲೇಷಿಸಲಾಗಿದೆ. ಈ ನಾಲ್ಕು ನೆಲೆಗಳು ಚುಟುಕು

ಸಾಹಿತ್ಯದಲ್ಲಿ ಒಂದು ಪ್ರತ್ಯೇಕವಾದ ಸಂಸ್ಕೃತಿಯನ್ನು ನಿರ್ಮಿಸಿವೆ. ಮತ್ತು ಚುಟುಕು ಕವಿಗಳ ಮನೋಧರ್ಮ ಭಿನ್ನವಾಗಿ ರೂಪುಗೊಳ್ಳುವುದಕ್ಕೆ ಕಾರಣವಾಗಿದೆ. ವಸಹಾತುಶಾಹಿ ಸಂಸ್ಕೃತಿಯಿಂದಾದ ಶೈಕ್ಷಣಿಕ ಬೆಳವಣಿಗೆಗಳು ಸಾಂಸ್ಕೃತಿಕ ಕ್ರಿಯೆಗಳಾದ ಬೀಸುವ ಮತ್ತು ಕುಟ್ಟುವ ಮುಂತಾದ ಕ್ರಿಯಾತ್ಮಕ ಅಂಶಗಳು ಈ ಚುಟುಕು ಸಾಹಿತ್ಯದಲ್ಲಿ ಇಪ್ಪತ್ತನೆಯ ಶತಮಾನದಲ್ಲಿ ಉಳಿದ ಪ್ರದೇಶಕ್ಕೆ ಭಿನ್ನವಾದ ಒಂದು ಕಾವ್ಯ ಶೈಲಿ ರೂಪಗೊಳ್ಳುವುದಕ್ಕೆ ಕಾರಣವಾಗಿವೆ. ಈ ಕೆಲವು ಹಿನ್ನೆಲೆಯನ್ನು ಮೊದಲನೆಯ ಅಧ್ಯಾಯದಲ್ಲಿ ವಿವರಿಸುವ ಮೂಲಕ ಉಳಿದ ಅಧ್ಯಾಯಗಳಲ್ಲಿ ಈ ಅಂಶಗಳು ಮತ್ತು ಚುಟುಕು ಕಾವ್ಯಕ್ಕಿರುವ ಸಾಮ್ಯಗಳನ್ನು ಅಧ್ಯಯನ ಮಾಡುವ ಸಂಗತಿಯಾಗಿದೆ. ಹೀಗೆ ಒಂದು ಸಾಹಿತ್ಯ ರೂಪವನ್ನು ಪ್ರತ್ಯೇಕವಾಗಿಟ್ಟುಕೊಂಡು ಅಧ್ಯಯನ ಮಾಡಿದಾಗ ಆ ಕಾವ್ಯದ ಭಿನ್ನತೆ ಮತ್ತು ವಿಶಿಷ್ಟತೆಗಳನ್ನು ಅದಕ್ಕೆ ಕಾರಣಗಳನ್ನು ಹೆಚ್ಚು ಸೂಕ್ಷ್ಮವಾಗಿ ಗುರುತಿಸಲು ಸಾಧ್ಯವಾಗುತ್ತದೆ ಹಾಗೂ ಕನ್ನಡ ಕಾವ್ಯ ಪರಂಪರೆಯಲ್ಲಿ ಹೆಚ್ಚು ಚರ್ಚೆಗೊಳಗಾದ ಚುಟುಕು ಕವಿಗಳನ್ನು ಚರ್ಚಿಸಲು ಸಾಧ್ಯವಾಗುತ್ತದೆ ಎಂಬ ಅರಿವಿನಲ್ಲಿ ''ಕನ್ನಡ ಚುಟುಕು ಸಾಹಿತ್ಯ : ಸಾಮಾಜಿಕ ಪ್ರಜ್ಞೆ'' ಎಂಬ ವಿಷಯವನ್ನು ನನ್ನ ಸಂಶೋಧನ ವಿಷಯವನ್ನಾಗಿ ಮಾಡಿಕೊಂಡು ಅಧ್ಯಯನ ಮಾಡಿರುತ್ತೇನೆ.

ಮೂರನೇ ಅಧ್ಯಾಯವಾದ ''ಹಳಗನ್ನಡ ಸಾಹಿತ್ಯದಲ್ಲಿ ಚುಟುಕುಗಳು : ಸಾಮಾಜಿಕ ಸಂರಚನೆ'' ಇಲ್ಲಿ ಹಳಗನ್ನಡ ಕಾವ್ಯದಲ್ಲಿ ಕಾಣಿಸುವ ಸಾಮಾಜಿಕ ಚಿಂತನೆಯುಳ್ಳ ಕವನಗಳನ್ನು ಅಳೆಯುವ ಮಾನದಂಡ ಯಾವುದು? ಎಂಬುದು ಬಹಳ ಮುಖ್ಯವಾದ ಪ್ರಶ್ನೆ ಯಾಕೆಂದರೆ ಸಾಮಾಜಿಕ ಧೋರಣೆಗಳು ಎರಡು ರೀತಿಯಲ್ಲಿ ಹೊರ ಹೊಮ್ಮುವ ಸಾಧ್ಯವಿದೆ. ಒಂದು ಭೌದ್ಧಿಕ ನೆಲೆಯಾದರೆ, ಇನ್ನೊಂದು ಭಾವನಾತ್ಮಕ ನೆಲೆಯಾಗಿದೆ. ಬೌದ್ಧಿಕ ನೆಲೆಯಿಂದ ಹೊರಡುವ ಕವನಗಳು ಸಮಸ್ಯೆಯ ಒಳಹೊಕ್ಕು ನೋಡುತ್ತವೆ. ಆದರೆ ಭಾವನಾತ್ಮಕ ನೆಲೆಯಿಂದ ಹೊರಡುವ ಕವನಗಳು ಕೇವಲ ಭಾವಾವೇಶದ ಹೇಳಿಕೆಗಳಾಗಿ ಉಳಿದುಕೊಳ್ಳುವುದೂ ಇದೆ. ಈ ದೃಷ್ಟಿಯಿಂದ ನೋಡಿದರೆ ಚುಟುಕು ಕವಿಗಳ ಸಾಮಾಜಿಕ ಕವನಗಳು ಬೌದ್ಧಿಕ ನೆಲೆಯಿಂದ ಹೊರಟರೂ ಸಾಮಾಜಿಕ ಸಮಸ್ಯೆಯ ಉತ್ಕರ್ಷ ಸ್ಥಿತಿಯನ್ನು ಅನಾವರಣಗೊಳಿಸುತ್ತವೆ. ಇದನ್ನು ಪಂಪಾದಿ ಚಂಪು ಕವಿಗಳು, ವಚನಕಾರರು, ದಾಸರು ಇವರ ಉದಾಹರಣೆಗಳ ಮೂಲಕ ವಿಶ್ಲೇಷಿಸಲಾಗಿದೆ. ಇಲ್ಲೆಲ್ಲ ಸಾಮಾಜಿಕ ಸಮಸ್ಯೆಗಳ ಸೂಕ್ಷ್ಮ ವಿಶ್ಲೇಷಣೆ ಇರುವ ಕಾರಣ ಈ ಕವನಗಳಿಗೆ ಚಾರಿತ್ರಿಕ ಮಹತ್ವ ಇದೆ. ಪಂಪ, ಪೊನ್ನ, ರನ್ನ, ಜನ್ನ ಮೊದಲಾದ ಎಲ್ಲ ಪೂರ್ವ ಕವಿಗಳ ಹಾಗೂ ಪಂಪ ಭಾರತ, ಆದಿಪುರಾಣ, ವಡ್ಡಾರಾಧನೆ, ಕವಿರಾಜ ಮಾರ್ಗಗಳಂತಹ ಅನೇಕ ಕಾವ್ಯಗಳಲ್ಲಿ ಪ್ರತ್ಯೇಕ ಅಸ್ತಿತ್ವ ಉಳಿಸಿಕೊಳ್ಳುವಂತಹ ಪದ್ಯಗಳಿವೆ. ಅವೆಲ್ಲವೂ ಶಕ್ತಿಯುತ ಚುಟುಕುಗಳೇ ಆಗಿವೆ. ಈ ಎಲ್ಲ ಅಂಶಗಳನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಕೊನೆಯಲ್ಲಿ ಉಳಿದ ಪ್ರದೇಶದ ಚುಟುಕು ಕವಿಗಳ ಸಾಮಾಜಿಕ ಕವನಗಳಿಗೆ ಹೋಲಿಸಿ ಇವುಗಳ ಮಹತ್ವ ಎಷ್ಟು ಎಂಬುದನ್ನು ಶೋಧಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ "ನಡುಗನ್ನಡ ಸಾಹಿತ್ಯದಲ್ಲಿ ಚುಟುಕುಗಳು : ಸಾಮಾನ್ಯ ಸ್ವರೂಪ" ಎನ್ನುವ ಅಧ್ಯಾಯದ ಶೀರ್ಷಿಕೆಯಡಿ ವಚನಕಾರರ, ದಾಸರ ಅನೇಕ ಕವಿಗಳ ಸಾಹಿತ್ಯ ಕುರಿತಾಗಿ ಚರ್ಚಿಸಲಾಗಿದೆ.

ವಚನಗಳಂತೂ ಬಿಡಿ ಬಿಡಿ ರಚನೆಗಳೇ, ಇಡಿ ಇಡೀ ರಚನೆಗಳೇ ಸರ್ವಜ್ಞನ ತ್ರಿಪದಿಗಳು ಕೂಡ. ಇವು ಸಮಾಜದಲ್ಲಿ ಉಂಟು ಮಾಡಿದ ಪರಿಣಾಮ ಅದ್ಭುತವಾದದ್ದು. ಅಕ್ಷರಸ್ಥರಿಗೂ, ಅನಕ್ಷರಸ್ಥರಿಗೂ ಇವು ಪರಮಾಪ್ತವಾಗಿ ಬಿಟ್ಟವು. ಅವರ ಬದುಕನ್ನು ತಿದ್ದಿದವು. ರೂಪಿಸಿದವು. ೧೨ನೇ ಶತಮಾನದ ವಚನಗಳು ಆಧುನಿಕ ಚುಟುಕು ಪ್ರಕಾರದ ಮೇಲೆ ಬೆಳಕು ಚಲ್ಲಿದವು. ಬಸವಣ್ಣನವರಾದಿಯಾಗಿ ಎಲ್ಲಾ ವಚನಕಾರರು ನಾಲ್ಕು ಇಲ್ಲವೇ ಐದು ಸಾಲುಗಳಲ್ಲಿ ಸರಳ, ಸುಲಭ ಅರ್ಥವಾಗುವ ಮಾತುಗಳಲ್ಲಿ ಹೇಳಿದ್ದಾರೆ. ಇಲ್ಲಿ ಪ್ರಭುದೇವ, ಬಸವಣ್ಣ, ಜೇಡರ ದಾಸೀಮಯ್ಯ, ಅಕ್ಕಮಹಾದೇವಿ ಇವರನ್ನೊಳಗೊಂಡಂತೆ ರುದ್ರಭಟ್ಟ, ಆಂಡಯ್ಯ, ನೇಮಿಚಂದ್ರ, ಹರಿಹರ, ರಾಘವಾಂಕರಾದಿಯಾಗಿ ಇನ್ನೂ ಅನೇಕ ಕವಿಗಳ ವಚನಗಳ, ಕವಿತೆಗಳನ್ನು ಇಲ್ಲಿ ಚರ್ಚೆಗೆ ಒಳಪಡಿಸಿದ್ದೇನೆ.

ಸರ್ವಜ್ಞ ಒಬ್ಬ ಅಪ್ಪಟ ಚುಟುಕು ಕವಿ. ಈತ ತ್ರಿಪದಿಯನ್ನು ಆಯ್ಕೆ ಮಾಡಿಕೊಂಡದ್ದು ಸಮಾಜದ ಅಂಕು ಡೊಂಕುಗಳನ್ನು ತಿದ್ದುವಲ್ಲಿ ನೇರ ನಿಷ್ಠುರದ ಮಾತುಗಳನ್ನಾಡಿದ ಒಬ್ಬ ಧೀಮಂತ ಕವಿ. ಸರಳವಾದರೂ ಸುಂದರವಾದ ಶೈಲಿಯಲ್ಲಿ ಪಾಮರರಿಗೆ ಪ್ರಿಯವಾದ ಮೋಹಕವಾದ ತ್ರಿಪದಿಯ ಛಂದಸ್ಸಿನಲ್ಲಿ ತನ್ನ ವಚನಗಳನ್ನು ಸೃಷ್ಟಿಸಿದ್ದಾನೆ. ಈ ಹಿನ್ನೆಲೆಯಲ್ಲಿ ಆತನ ವಚನಗಳನ್ನು ನನ್ನ ಅಧ್ಯಯನದಲ್ಲಿ ಬಳಸಿಕೊಂಡಿದ್ದೇನೆ.

ದಾಸ ಪರಂಪರೆಯಲ್ಲಿ ಪುರಂದರದಾಸರು, ಕನಕದಾಸರ ಕೀರ್ತನೆಗಳ ಹಿನ್ನೆಲೆಯಲ್ಲಿ ಹಾಗೂ ರತ್ನಾಕರವರ್ಣಿಯ ಕಾವ್ಯದ ಅಂಶಗಳನ್ನು ಚರ್ಚಿಸಲಾಗಿದೆ. ಇನ್ನು ಗದ್ಯ ಕವಿ ಎಂದೇ ಹೆಸರಾದ ಮುದ್ದಣನ ಸಾಹಿತ್ಯ ಕುರಿತಾಗಿ ಇಲ್ಲಿ ಚಿಂತನೆಯನ್ನು ಮಾಡಲಾಗಿದೆ. ಒಟ್ಟಾರೆಯಾಗಿ ಈ ಅಧ್ಯಾಯದಲ್ಲಿ ಶರಣರ ವಚನಗಳಿಂದ ಸರ್ವಜ್ಞ ದಾಸರಾದಿಯಾಗಿ ಮುದ್ದಣನವರೆಗೂ ಚುಟುಕುಗಳ ಸಾಮಾನ್ಯ ಸ್ವರೂಪ ಕುರಿತು ವಿಶೇಷವಾಗಿ ನಾನು ನನ್ನ ಅಧ್ಯಯನಕ್ಕೆ ಒಳಪಡಿಸಿ ಅದರಲ್ಲಿರುವ ಹಲವು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ವಿಚಾರಗಳನ್ನು ಫಲಿತಗಳನ್ನು ಚರ್ಚೆಗೆ ಒಳಪಡಿಸುವುದೇ ನನ್ನ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಅಧ್ಯಾಯ ಐದರಲ್ಲಿ "ಆಧುನಿಕ ಸಾಹಿತ್ಯದಲ್ಲಿ ಚುಟುಕುಗಳು ವೈವಿಧ್ಯತೆ ಮತ್ತು ಸ್ವರೂಪ" ಎನ್ನುವಲ್ಲಿ ಹೊಸಗನ್ನಡ ಚುಟುಕುಗಳ ಪ್ರಭಾವ ಕುರಿತಾಗಿ ವಿವೇಚಿಸಲಾಗಿದೆ. ಇಂದಿನ ಕಾವ್ಯ ಪ್ರಪಂಚದಲ್ಲಿ ಈ ಚುಟುಕು ಚುರುಕಿನ ಬೆಡಗಿನ ಲಾವಣ್ಯಕ್ಕೆ ಮನಸೋಲದವರೇ ಇಲ್ಲ. ಇವುಗಳಲ್ಲಿ

ಆಧುನಿಕ ಚುಟುಕು ಕವಿಗಳು ಪ್ರಕೃತಿ, ರಾಜಕೀಯ, ಸಮಾಜದರ್ಶನ ಇವುಗಳ ಸಂಬಂಧ ಕುರಿತು ಅರ್ಥಪೂರ್ಣವಾಗಿ ಚರ್ಚಿಸಿದ್ದಾರೆ. ಯುವ ಪೀಳಿಗೆಯ ಮೈ-ಮನ ಹೃದಯಗಳಿಗೆ ಲಗ್ಗೆ ಇಟ್ಟು ಹುಚ್ಚು ಹಿಡಿಸಿದ ಈ ಚುಟುಕು ಚುರುಕಿನ ಬೆಡಗಿ, ಇಳಿವಯಸ್ಸಿನವರ ಮನಸ್ಸನ್ನು ಆಕರ್ಷಿಸಿದೆ. ಇಂದಿನ ಈ ಚುಟುಕು ಸಾಹಿತ್ಯ ದೃಷ್ಟಿಯಲ್ಲಿ ಚುಟುಕಾಗಿ, ಮಿನಿಗವನವಾಗಿ, ಹನಿಗವನವಾಗಿ ತನ್ನದೇ ಆದ ಸೃಷ್ಟಿಯಲ್ಲಿ ತೊಡಗಿರುವುದನ್ನು ವಿವೇಚಿಸಲಾಗಿದೆ. ಈ ಚುಟುಕು ಸಾಹಿತ್ಯ ಗಾತ್ರದಲ್ಲಿ ಕಿರಿದಾದರೂ ಪಾತ್ರದಲ್ಲಿ ಹಿರಿದಾಗಿದೆ. ಇಂದಿನ ಕಾವ್ಯ ಪ್ರಪಂಚದಲ್ಲಿ ತನ್ನದೇ ಆದ ಒಂದು ಸ್ಥಾನವನ್ನು ಗಟ್ಟಿಗೊಳಿಸಿಕೊಂಡದ್ದನ್ನು ಆಯಾ ಕವಿಗಳ ಚುಟುಕುಗಳನ್ನು ಬಳಸಿಕೊಂಡು ಅಧ್ಯಯನ ಮಾಡಲಾಗಿದೆ.

ಚುಟುಕು ಕಾವ್ಯದಲ್ಲಿ ಕಾಣಿಸುವ ಪ್ರಕೃತಿ ಶೋಧನೆಯೇ ಭಿನ್ನವಾದುದು ಎಂಬ ಧೋರಣೆಯಿಂದ ಆರಂಭವಾಗಿ ಆ ಭಿನ್ನತೆ ಏನು? ಎಂಬುದನ್ನು ಮುಂದಿನ ಅಧ್ಯಾಯಗಳಲ್ಲಿ ವಿಶ್ಲೇಷಿಸಲಾಗಿದೆ. ಅನಾದಿ ಕಾಲದಿಂದಲೂ 'ಪ್ರಕೃತಿ' ಕವಿಗಳಿಗೆ ಬದುಕಿನ ನಿರಂತರ ಶೋಧನೆಯ ರೂಪಕವಾಗಿ ಬೇರೆ ಬೇರೆ ರೀತಿಯಲ್ಲಿ ಪ್ರಕಟಗೊಂಡಿದೆ. ಕೆಲವರಿಗೆ ಪ್ರಕೃತಿ ದೈವಿಕ ನೆಲೆಯಾದರೂ ಇನ್ನು ಕೆಲವರಿಗೆ ಬದುಕಿನ ಅರ್ಥಪೂರ್ಣತೆಯನ್ನು ತಂದುಕೊಡುವ ವಸ್ತುವೂ ಹೌದು. ಚುಟುಕು ಕಾವ್ಯದಲ್ಲಿ ಪ್ರಕೃತಿ ಮಾನವೀಯ ನೆಲೆಯಲ್ಲಿ ಬರುತ್ತದೆ. ಈ ಅಧ್ಯಾಯದಲ್ಲಿ ಅನೇಕ ಅಂಶಗಳನ್ನು ಇಟ್ಟುಕೊಂಡು ಚರ್ಚಿಸಲಾಗಿದ್ದು, ಅದರಲ್ಲಿ ಪ್ರಮುಖವಾಗಿ ವ್ಯಕ್ತಿಚಿತ್ರಣ, ಮಹಿಳಾ ದೃಷ್ಟಿಕೋನ, ವ್ಯಂಗ್ಯ ವಿಡಂಬನೆ, ಹಾಸ್ಯ, ಜೀವನದರ್ಶನ, ರಾಜಕೀಯ ಚಿತ್ರಣ, ಕುರಿತಾಗಿ ಚರ್ಚಿಸಲಾಗಿದೆ. ಈ ಸಾಹಿತ್ಯದಲ್ಲಿ ಕೃಷಿ ಮಾಡಿದ ರಾಜರತ್ನಂ, ಕುವೆಂಪು, ದಿನಕರ ದೇಸಾಯಿ, ಡುಂಡಿರಾಜ್, ಅಕ್ಬರ್‌ಅಲಿ, ಭಿಕ್ಷಾವರ್ತಿಮಠ, ಲಲಿತಾ ನಾಯ್ಕರನ್ನು ಮೊದಲ್ಗೊಂಡು ಅನೇಕ ಕವಿಗಳ ಸೃಜನಶೀಲತೆಯನ್ನು ಅಧ್ಯಯನಕ್ಕೆ ಬಳಸಿಕೊಂಡಿದ್ದೇನೆ. ಇದೇ ಅಧ್ಯಾಯದಲ್ಲಿ ಸಾಮಾಜಿಕ ಪರಿಕಲ್ಪನೆ ಯಾವ ಸ್ವರೂಪದ್ದು ಎಂಬುದನ್ನು ಉದಾಹರಣೆಗಳ ಮೂಲಕ ಚರ್ಚಿಸಲಾಗಿದೆ. 'ಸಾಮಾಜಿಕತೆ' ಎಂಬುದು ಒಂದು ಮನೋಧರ್ಮ ಇದು ಒಂದು ವಿಶಿಷ್ಟ ಕಾಲದಲ್ಲಿ ಮೂರ್ತ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ವಸಾಹತುಶಾಹಿ ಸಂಸ್ಕೃತಿಯಿಂದ ಭಾರತದಲ್ಲಿ ಈ ಸಾಮಾಜಿಕತೆಯ ಬಗೆಗೆ ಚಿಂತನೆ ತೀವ್ರವಾಗಿ ನಡೆದಿದೆ. ಆದರೆ ಇದು ಪ್ರದೇಶಕ್ಕೆ ತಕ್ಕಂತೆ ಬೇರೆ ಬೇರೆ ನೆಲೆಯಲ್ಲಿ ಬೆಳೆದಿದೆ. ಈ ಲಿಬರಲ್ ದೃಷ್ಟಿಕೋನ ಚುಟುಕು ಕವನಗಳ ಮೂಲಕ ಚರ್ಚಿಸಲಾಗಿದೆ.

ಚುಟುಕು ಸಾಹಿತ್ಯದಲ್ಲಿ ಪ್ರಮುಖವಾಗಿ ಹಾಸ್ಯ, ವಿಡಂಬನೆ ವ್ಯಂಗ್ಯ ಕುರಿತಾಗಿ ರಾಜಕೀಯ ಚಿತ್ರಣ ಸ್ಪಷ್ಟವಾಗಿ ಮೂಡಿ ಬಂದಿದೆ. ಅಲ್ಲದೆ ಜೀವನ ದರ್ಶನದಲ್ಲಿ ಕವಿಯ ಆಂತರಿಕ ಭಾವನೆಗಳನ್ನು ಅರ್ಥೈಸಿ ಕೊಂಡು ವಿವೇಚಿಸಲಾಗಿದೆ. ಇದು ಹೆಚ್ಚಾಗಿ ಪ್ರಕೃತಿ ನೆಲೆಯಲ್ಲಿ ಪ್ರಕಟಗೊಂಡಿದ್ದು. ಅದು ಆರಾಧನೆಯ ವಸ್ತುವಾಗದೇ ಮಾನವನ ಒಳಗಿರುವ ವಸ್ತುವೇ ಆಗಿದೆ. ಪ್ರಕೃತಿಯ ಹುಡುಕಾಟವೆಂದರೆ ಕವಿಗಳಿಗೆ ತಮ್ಮ ಬದುಕಿನ ಶೋಧನೆಯೂ ಹೌದು. ಇಲ್ಲಿನ ಜೀವನ ಮನೋಧರ್ಮವೇ ಈ ರೀತಿಯ ದೃಷ್ಟಿಕೋನ

ಮೂಡುವುದಕ್ಕೆ ಕಾರಣವಾಗಿದೆ. ಪ್ರಕೃತಿಯನ್ನು ಒಂದು ಘಟನೆಯನ್ನೋ ಅಥವಾ ಒಂದು ಸಂದರ್ಭದ ತೀವ್ರತೆಯನ್ನು ಕಟ್ಟಿಕೊಡುವುದಕ್ಕೆ ಭಾವ ಪೋಷಕವಾಗಿ ಬಳಸಿಕೊಳ್ಳುವ ಪ್ರಯತ್ನವನ್ನು ಚುಟುಕು ಕಾವ್ಯದಲ್ಲಿ ಕಾಣಬಹುದಾಗಿದೆ. ಇದನ್ನು ಇಲ್ಲಿನ ಕವಿಗಳ ಚುಟುಕುಗಳ ಮೂಲಕ ವಿಶ್ಲೇಷಿಸ ಲಾಗಿದೆ.

ಆರನೇ ಅಧ್ಯಾಯವಾದ ಜಾನಪದ ಸಾಹಿತ್ಯದಲ್ಲಿ ಚುಟುಕುಗಳು "ಸಾಮಾಜಿಕ ಪ್ರಜ್ಞೆ"ಯಲ್ಲಿ ಜನಪದ, ಸಾಂಸ್ಕೃತಿಕ ಅನನ್ಯತೆಯನ್ನು ತೋರಿಸುವಂತಿರುವ ಜನಪದ ಹಾಡುಗಳಿಗೂ ಮತ್ತು ಕಾವ್ಯಕ್ಕೂ ಇರುವ ಸಂಬಂಧವನ್ನು ಗುರುತಿಸುವುದಾಗಿದೆ. ಚುಟುಕು ಕಾವ್ಯದ ಭಾಷಾರೂಪ ಭಿನ್ನವಾಗುವುದಕ್ಕೆ ಜಾನಪದ ಸಾಹಿತ್ಯ ಕಾರಣವಾಗಿದೆ. ಜನಪದ ಚುಟುಕುಗಳು ಚುಟುಕು ಸಾಹಿತ್ಯದಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಕಾರಣ ಅದರ ಒಟ್ಟು ಸ್ವರೂಪ, ಅದರ ಭಾಷೆ, ಸಾಂಕೇತಿಕತೆ, ಲಯ ಇವೆಲ್ಲವೂ ಕವಿಗಳ ಮೇಲೆ ಸಹಜವಾಗಿಯೇ ಪ್ರಭಾವವನ್ನು ಬೀರಿವೆ. ಇದನ್ನು ನಾಲ್ಕು ನೆಲೆಗಳಲ್ಲಿ ವಿಶ್ಲೇಷಿಸಲಾಗಿದೆ. ಮೊದಲನೆಯದಾಗಿ "ವಸ್ತು"ವಿನ ನೆಲೆಯಲ್ಲಿಯೂ, ಎರಡನೆಯದಾಗಿ "ಭಾಷೆ ಮತ್ತು ಪ್ರತಿಮಾನಿರ್ಮಾಣದ ನೆಲೆಯಲ್ಲಿಯೂ ಮೂರನೆಯದಾಗಿ "ತಂತ್ರ ಮತ್ತು ಶೈಲಿಯ" ನೆಲೆಯಲ್ಲಿಯೂ ನಾಲ್ಕನೆಯದಾಗಿ "ಲಯ ಮತ್ತು ಛಂದೋವೈವಿಧ್ಯ"ದ ನೆಲೆಯಲ್ಲಿಯೂ ಜನಪದ ಸಾಹಿತ್ಯದ ಚುಟುಕುಗಳನ್ನು ವಿಶ್ಲೇಷಿಸಲಾಗಿದೆ. ಜನಪದ ಸಾಹಿತ್ಯದಲ್ಲಿ ವ್ಯಕ್ತವಾಗುವ ನಾಟಕೀಯತೆ ಇವು ದಾಖಲಾರ್ಹ.

ಮಾವ ಮತ್ತು ಅಳಿಯ, ಅತ್ತೆ ಮತ್ತು ಸೊಸೆ ಕಲ್ಪನೆ ಘೋಷಲಯದ ಬಳಕೆ, ಪ್ರತಿಮಾ ನಿರ್ಮಾಣ ಕ್ರಮ ಪಾತ್ರಗಳ ಮಾತಿನ ಶೈಲಿ, ರೇಂಕಾರ ಇವೆಲ್ಲವೂ ಚುಟುಕು ಕಾವ್ಯದಲ್ಲಿ ಹೇಗೆ ಮತ್ತು ಎಷ್ಟರ ಮಟ್ಟಿಗೆ ಕಾಣಿಸಿಕೊಂಡಿವೆ ಎಂಬುದನ್ನು ಮೇಲಿನ ನಾಲ್ಕು ವಿಭಾಗಗಳ ಮೂಲಕ ಶೋಧಿಸಲಾಗಿದೆ. ಜನಪದ ಸಾಹಿತ್ಯದ ಈ ವಿವಿಧ ಅಂಶಗಳು ಚುಟುಕು ಕಾವ್ಯಕ್ಕೆ ಒಂದು ಹೊಸ ರೂಪವನ್ನು ಕೊಟ್ಟಿವೆ ಯಲ್ಲದೆ, ಉಳಿದ ಸಾಹಿತ್ಯ ರೂಪಗಳ ಕಾವ್ಯಕ್ಕಿಂತ ಭಿನ್ನ ದಾರಿಯಲ್ಲಿ ನಡೆಯುವಂತೆ ಮಾಡಿದೆ. ಜನಪದ ಗೀತೆಗಳು ಜನಪದ ಸಂಸ್ಕೃತಿಯ ಅಧ್ಯಯನಕ್ಕೆ ಮೂಲ ಸಾಮಗ್ರಿಗಳಾಗಿರುವುದನ್ನು ಕಂಡುಕೊಳ್ಳಲಾಗಿದೆ. ಜನಪದರಿಗೆ ಮೂಲ ದೈವದ ಪರಿಕಲ್ಪನೆ ಕುರಿತಾಗಿ ಹಂತಿ ಪದಗಳು, ಬೀಸುವ, ಕುಟ್ಟುವ ಹಾಡುಗಳನ್ನು ಈ ಅಧ್ಯಾಯದಲ್ಲಿ ವಿಸ್ತಾರವಾಗಿ ಬಳಸಿಕೊಂಡಿದ್ದೇನೆ. ಮದುವೆ, ಸೋಬಾನ, ಬಾಗಿನ ಮೊದಲಾದ ಹಾಡುಗಳು ಜನಪದ ಸಂಸ್ಕೃತಿಯನ್ನು ಎತ್ತಿ ತೋರಿಸುತ್ತವೆ. ಜನಪದ ಸಾಹಿತ್ಯದಲ್ಲಿ ಸಾವಿರಾರು ಚುಟುಕು ಗಳಿವೆ. ಅವುಗಳಲ್ಲಿ ಕೆಲವು ಮಾದರಿಗಳನ್ನು ಇಲ್ಲಿ ವಿವೇಚಿಸಲಾಗಿದೆ. ಜನಪದ ಬದುಕಿನ ಹಲವಾರು ಭಾವನೆಗಳು ಅಂದರೆ ನೋವು-ನಲಿವು, ಹಾಸ್ಯ, ಶೃಂಗಾರ, ಇವು ಚುಟುಕುಗಳಲ್ಲಿ ಅಭಿವ್ಯಕ್ತವಾಗಿವೆ. ಹಲವಾರು ಸಾಮಾಜಿಕ ಸಮಸ್ಯೆಗಳಿಗೆ ಅವು ಪರಿಹಾರವನ್ನು ಒದಗಿಸುತ್ತವೆ. ಒಟ್ಟಿನಲ್ಲಿ ಸಾಮಾಜಿಕ ಅಥವಾ ಸಾಂಸ್ಕೃತಿಕ ಮೌಲ್ಯಗಳು ಮತ್ತು ಆದರ್ಶಗಳು, ಅನುಕಂಪ, ಸಹೃದಯತೆ, ಸಹನಶೀಲತೆ ಮೊದಲಾದ ಸಾಮಾಜಿಕ ನೈತಿಕ ವಿಚಾರಗಳು ಈ ನೆಲೆಯಲ್ಲಿ ಚುಟುಕುಗಳು ಸಾಮಾಜಿಕ ಚಿಂತನೆಯನ್ನು

ಪರಿಶೀಲಿಸುತ್ತವೆ. ಅವುಗಳ ಕ್ರಿಯಾಕಲ್ಪದ ಚಿಂತನೆ ಅದು ವ್ಯಂಜಿಸಬಹುದಾದ ವಾಸ್ತವತೆಯ ನೆಲೆಗಟ್ಟು ಸಾಮಾಜಿಕ ಅಧ್ಯಯನಕ್ಕೆ ನೆರವಾಗುತ್ತದೆ. ಆಧುನಿಕತೆಯನ್ನು ಮತ್ತು ಪರಕೀಯತೆಯನ್ನು ಎದುರಿಸಲು ಒಂದು ಸಮರ್ಥ ಭೂಮಿಕೆಯನ್ನು ಒದಗಿಸಿಕೊಟ್ಟಿದೆ ಎಂಬ ನೆಲೆಯನ್ನು ಈ ಅಧ್ಯಾಯದಲ್ಲಿ ಕಂಡುಕೊಳ್ಳಲಾಗಿದೆ.

ಏಳನೇ ಅಧ್ಯಾಯದಲ್ಲಿ ''ಚುಟುಕು ಸಾಹಿತ್ಯ ಭಾಷೆ ಮತ್ತು ಶೈಲಿ''. ಇದರಲ್ಲಿ ಸಾಹಿತ್ಯದ ಭಾಷಾ ಪ್ರಯೋಗದ ವೈಶಿಷ್ಟ್ಯತೆ ಮತ್ತು ವೈವಿಧ್ಯತೆಗಳ ಬಗ್ಗೆ ಚರ್ಚಿಸಲಾಗಿದೆ. ಚುಟುಕುಗಳ ಭಾಷಾ ಬಳಕೆಯ ಸ್ವರೂಪ ಭಿನ್ನವಾಗಿದೆ. ಇದನ್ನು ಉಳಿದ ಸಾಹಿತ್ಯ ರೂಪಗಳ ಜೊತೆಗಿಟ್ಟು ನೋಡಿದಾಗ ಎದ್ದು ಕಾಣುವ ಅಂಶವಾಗಿದೆ. ಛಂದಸ್ಸಿನ ಬಳಕೆಯಲ್ಲೂ ಅನೇಕ ಕ್ರಾಂತಿಕಾರಿ ಬೆಳವಣಿಗೆಗಳು ಇಲ್ಲಿ ನಡೆದಿವೆ. ಸಾಂಸ್ಕೃತಿಕ ಅನನ್ಯತೆ ಮತ್ತು ಕಾಲದ ಅನಿವಾರ್ಯ ಒತ್ತಡಗಳಲ್ಲಿ ಚುಟುಕು ಕವಿಗಳಲ್ಲಿ ರೂಪಗೊಂಡ ಪ್ರಯೋಗಶೀಲ ಗುಣವೇ ಈ ವೈವಿಧ್ಯಮಯ ಪ್ರಯೋಗಗಳಿಗೆ ಕಾರಣವಾಗಿದೆ. ಹಳೆಯ ನಿಯಮಗಳನ್ನು ಮುರಿದು ಹೊಸದಾಗಿ ಕಟ್ಟುವುದು, ಹಳೆಯ ಛಂದಸ್ಸನ್ನು ಹೊಸ ರೀತಿಯಲ್ಲಿ ಬಳಸುವುದು. ಆ ಮೂಲಕ ಗ್ರಾಂಥಿಕ ಭಾಷೆಗೆ ಹಾಗೂ ಗ್ರಾಂಥಿಕ ನುಡಿಗಟ್ಟುಗಳಿಗೆ ಹೊಸರೂಪ ಕೊಡುವುದು. ಒಂದು ಭಾಷಾರೂಪ ಹಳೆದಾಗುತ್ತಾ ಹೋದಂತೆ ಮತ್ತೆ ಅದಕ್ಕೆ ಹೊಸರೂಪ ಕೊಡುವಪ್ರಯತ್ನ ಮಾಡಿದ್ದು ಇವೆಲ್ಲವೂ ಚುಟುಕುಗಳ ಭಾಷಾ ಪ್ರಯೋಗದಲ್ಲಿ ಕಾಣಿಸುವ ಮುಖ್ಯ ಅಂಶಗಳಾಗಿವೆ. ವಚನಕಾರರು, ದಾಸರು ಮಾಡಿದ ಭಾಷಾ ಪ್ರಯೋಗಗಳು, ಬಿ.ಆರ್.ಲಕ್ಷ್ಮಣರಾವ್, ಚಂಪಾ, ಡುಂಡಿರಾಜ್ ರವರು ಪ್ರಾಸವನ್ನು ಮುರಿಯುವಲ್ಲಿ ತೆಗೆದುಕೊಂಡ ಪ್ರಯೋಗಶೀಲತೆ ಅಕ್ಬರ್ ಅಲಿ, ಎಚ್ಚೆಸ್ಕೆ ಇವರುಗಳು ಪರಂಪರೆಯ ಸಾರವನ್ನು ಹೀರಿ ಅದುವರೆಗಿನ ಕಾವ್ಯದಲ್ಲಿಯ ಲಯ, ಪ್ರಾಸ, ವಸ್ತು, ಭಾಷೆ, ಛಂದಸ್ಸು ಮೊದಲಾದವುಗಳನ್ನು ಮುರಿದು ಭಿನ್ನವಾದ ಕಾವ್ಯವನ್ನು ಸೃಷ್ಟಿಸಲು ಮಾಡಿದ ಪ್ರಯೋಗಗಳು ಆಯಾ ಕಾಲಘಟ್ಟದಲ್ಲಿ ಉತ್ತಮ ನಿದರ್ಶನಗಳಾಗಿವೆ. ದೇ.ಜ.ಗೌ, ಸಿ.ಪಿ.ಕೆ, ಸುಬ್ರಾಯ ಚೊಕ್ಕಾಡಿ, ವೈದೇಹಿ, ಲಲಿತಾನಾಯ್ಕ, ವಿ.ಗ.ನಾ, ಭಿಕ್ಷಾವರ್ತಿ ಮಠ ಮೊದಲಾದ ಕವಿಗಳು ಮಾಡುತ್ತಿರುವ ವೈವಿಧ್ಯಮಯ ಪ್ರಯೋಗಗಳು ಮೊದಲಾದ ಅಂಶಗಳನ್ನೆಲ್ಲಾ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಈ ಮೂಲಕ ಉಳಿದ ಸಾಹಿತ್ಯ ರೂಪಗಳಿಗಿಂತ ಭಿನ್ನವಾದ ಭಾಷಾರೂಪವೊಂದು ಸೃಷ್ಟಿಸಿದ ಚುಟುಕು ಕಾವ್ಯದ ಭಾಷಿಕ ನೆಲೆಗಳನ್ನು ಶೋಧಿಸುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಇದರಲ್ಲಿ ಪ್ರಾಚೀನ ಸಾಹಿತ್ಯದಿಂದ ಆಧುನಿಕ ಸಾಹಿತ್ಯದವರೆಗೂ ಹಲವು ಕವಿಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದ್ದು, ಗ್ರಾಂಥಿಕ ಶೈಲಿ, ವ್ಯವಹಾರಿಕ ಶೈಲಿ, ವ್ಯವಹಾರಿಕ ಶಿಷ್ಟಶೈಲಿ, ಅಲಂಕಾರ ಯೋಜನೆ, ಉಪಮೆಗಳು, ದೃಷ್ಟಾಂತಗಳ ಮೂಲಕ ಚುಟುಕು ಭಾಷಾ ಸ್ವರೂಪವನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡಲು ಪ್ರಯತ್ನಿಸಲಾಗಿದೆ.

ಹೀಗೆ ಚುಟುಕು ಕಾವ್ಯ ವಸ್ತು, ಭಾಷೆ, ಲಯ, ಛಂದಸ್ಸು, ಇವೆಲ್ಲವುಗಳ ಅಭಿವ್ಯಕ್ತಿಯನ್ನು ಭಿನ್ನ ರೀತಿಯಲ್ಲಿ ತೋರಿಸಿಕೊಟ್ಟಿದೆ. ತನ್ನ ಪ್ರಾದೇಶಿಕ ಜನಪದ ಸಾಹಿತ್ಯದ ಸಾರವನ್ನು ಹೀರಿಕೊಂಡು ಹೊಸ

ರೀತಿಯಲ್ಲಿ ಬೆಳೆದಿದೆ. ಕಾಲದ ಬದಲಾವಣೆಗಳಿಗನುಗುಣವಾಗಿ ಕಾವ್ಯದ ಸ್ವರೂಪ ಮತ್ತು ಅಭಿವ್ಯಕ್ತಿಯಲ್ಲಿಯೂ ಕೂಡಾ ಅನೇಕ ಪ್ರಯೋಗಗಳನ್ನು ಮಾಡುವ ಮೂಲಕ ಕನ್ನಡ ಕಾವ್ಯ ಇನ್ನೊಂದು ದಿಕ್ಕಿನಲ್ಲಿ ಬೆಳೆಯುವುದಕ್ಕೆ ಕಾರಣವಾಗಿದೆ. ಪಂಪಾದಿ ಚಂಪೂ ಕವಿಗಳು, ವಚನಕಾರರು, ದಾಸರು, ಹೊಸಗನ್ನಡ ಕವಿಗಳು ಈ ಕಾರಣಕ್ಕಾಗಿಯೇ ಕನ್ನಡ ಕಾವ್ಯ ಕ್ಷೇತ್ರದಲ್ಲಿ ಮುಖ್ಯವಾಗಿ ಕಾಣಿಸುತ್ತಾರೆ. ಅವರ ಕಾವ್ಯ ಕನ್ನಡ ಕಾವ್ಯ ಬೆಳೆಯುವುದಕ್ಕೆ ಹೊಸ ದಾರಿಯನ್ನು ತೋರಿಸಿಕೊಟ್ಟಿದೆ. ಹೊಸ ತಲೆ ಮಾರಿನಲ್ಲಿ ಡುಂಡಿರಾಜ್ ಅಕ್ಬರ್ ಅಲಿ, ಚಂಪಾ ಮೊದಲಾದವರು ತಮ್ಮ ನೆಲದ ಸತ್ವದ ಹರಿವಿನಲ್ಲಿ ಹೊಸದೊಂದನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ. ಆಧುನಿಕ ಸವಾಲುಗಳನ್ನು ಎದುರಿಸಲು ಹೋರಾಡುತ್ತಿದ್ದಾರೆ. ಈ ಮೂಲಕ ಚುಟುಕು ಕಾವ್ಯ ಜೀವಂತವಾಗಿದ್ದು, ಪ್ರತ್ಯೇಕ ರೀತಿಯಲ್ಲಿಯೇ ಬೆಳೆಯುತ್ತವೆ. ಈ ಕಾರಣದಿಂದಾಗಿಯೇ ಈ ವಿಷಯವನ್ನು ಆರಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಸಮಾರೋಪ. ಇದರಲ್ಲಿ ಈ ಹಿಂದಿನ ಏಳು ಅಧ್ಯಾಯಗಳ ಅಧ್ಯಯನದ ಫಲಿತಗಳನ್ನು ನಿರೂಪಿಸಲಾಗಿದೆ. ಪ್ರಾಚೀನ ಪರಂಪರೆಯಿಂದ ಹಿಡಿದು ನಡುಗನ್ನಡ, ಹೊಸಗನ್ನಡ ಅನೇಕ ಚುಟುಕು ಕವಿಗಳ ಅವಲೋಕನ ಮಾಡಲಾಗಿದೆ. ಒಂದು ನೆಲೆಯಿಂದ ನೋಡಿದರೆ ಕಾವ್ಯದ ಅಧ್ಯಯನವನ್ನು ಒಂದು ಕಾವ್ಯರೂಪಕ್ಕೆ ಸೀಮಿತಗೊಳಿಸಿಕೊಂಡು ಅಧ್ಯಯನ ಮಾಡುವುದು ಮಿತಿ ಎಂದು ಅನಿಸಿದರೂ ಕನ್ನಡ ಕಾವ್ಯದಲ್ಲಿ ಹೆಚ್ಚು ಚರ್ಚೆಗೊಳಗಾಗದೆ ಇರುವ ಉಪೇಕ್ಷಿತ ಚುಟುಕು ಕವಿಗಳ ಬಗ್ಗೆ ಇಲ್ಲಿ ಹೆಚ್ಚು ವಿವರವಾಗಿ ಚರ್ಚಿಸಲು ಸಾಧ್ಯವಾಗಿದೆ. ಇದರಲ್ಲಿ ಕೆಲವರ ಕುರಿತು ಬಿಡಿಬಿಡಿಯಾಗಿ ಚರ್ಚೆಯಾಗಿದೆ ನಿಜ. ಆದರೆ ಕನ್ನಡ ಕಾವ್ಯದ ಪರಂಪರೆಯ ಹಿನ್ನೆಲೆಯಲ್ಲಿ ಈ ಚುಟುಕು ಕವಿಗಳ ಬಗ್ಗೆ ಇಲ್ಲಿ ಚರ್ಚೆಯನ್ನು ಮಾಡಿರುತ್ತೇನೆ. ಮಾತ್ರವಲ್ಲದೆ ಒಂದು ಕಾವ್ಯ ರೂಪದ ಕವಿಗಳಲ್ಲಿ ಕಾಣಿಸುವ ಏಕಸೂತ್ರತೆ, ಪರಸ್ಪರ ಸಾಮ್ಯ, ಪ್ರಭಾವ ಮೊದಲಾದ ಅಂಶಗಳನ್ನು ಬಿಟ್ಟು ಕಾವ್ಯ ಪರಂಪರೆಯ ಹಿನ್ನೆಲೆಯಲ್ಲಿ ಗುರುತಿಸಲು ಸಾಧ್ಯವಾಗಿದೆ. ಮೇಲ್ನೋಟಕ್ಕೆ ಒಂದೇ ಎಂದು ಅನ್ನಿಸುವ ಆದರೆ ಒಳ ವ್ಯತ್ಯಾಸಗಳು ಇರುವ ಬೇರೆ ಬೇರೆ ಪ್ರದೇಶದ ಕವಿಗಳಲ್ಲಿರುವ ಭಿನ್ನತೆಯನ್ನು ಸೂಕ್ಷ್ಮವಾಗಿ ಚರ್ಚಿಸಲು ಇದರಿಂದ ಸಾಧ್ಯವಾಗಿದೆ. ಕೊನೆಯಲ್ಲಿ ಅಧ್ಯಯನಕ್ಕೆ ಪೂರಕವಾಗಿ ಉಪಯೋಗಿಸಿದ ಪರಾಮರ್ಶನ ಗ್ರಂಥಗಳ ಸೂಚಿಯನ್ನು ನೀಡಲಾಗಿದೆ.

ಹೀಗೆ ಒಂದು ಸಾಹಿತ್ಯ ರೂಪವನ್ನು ಇಟ್ಟುಕೊಂಡು ಅಧ್ಯಯನ ಮಾಡುವಾಗ ಅದಕ್ಕೆ ಎರಡು ದಾರಿಗಳಿವೆ. ಒಂದು ಆಯಾ ಪ್ರದೇಶದಲ್ಲಿ ಬೆಳೆದುಬಂದ ಕಾವ್ಯವನ್ನು ಹಂತ ಹಂತವಾಗಿ ಆಯಾ ಕಾಲಘಟ್ಟದ ನೆಲೆಗಳಲ್ಲಿ ಗುರುತಿಸುವುದು ಮತ್ತು ಅದರ ಐತಿಹಾಸಿಕ ಮಹತ್ವವನ್ನು ವಿವರಿಸುವುದು ಎರಡನೆಯದಾಗಿ ಕೆಲವೊಂದು ವಿಷಯಗಳನ್ನು ಮುಖ್ಯವಾಗಿಟ್ಟುಕೊಂಡು ಅದು ಚುಟುಕು ಕಾವ್ಯದಲ್ಲಿ ಯಾವ ರೀತಿ ಬಂದಿದೆಯೆಂಬುದನ್ನು ಮತ್ತು ಉಳಿದ ಪ್ರದೇಶದ ಕಾವ್ಯದಲ್ಲಿ ಹೇಗೆ ಭಿನ್ನವಾಗಿದೆ

ಎಂಬುದನ್ನು ಚರ್ಚಿಸುವ ಮೂಲಕ ಚುಟುಕು ಕಾವ್ಯದನೆಲೆಗಳನ್ನು ಗುರುತಿಸುವುದು ಈ ಎರಡು ದಾರಿಗಳಲ್ಲಿ ಒಂದನೆಯ ದಾರಿ ಹೆಚ್ಚು ವಿವರಣಾತ್ಮಕವಾದ ದಾರಿಯಾದರೆ ಎರಡನೆಯದು ಮೌಲ್ಯ ಮಾಪನದತ್ತ ನಮ್ಮನ್ನು ಕೊಂಡೊಯ್ಯಬಲ್ಲ ದಾರಿ. ಪ್ರಸ್ತುತ ಈ ಬರವಣಿಗೆ ಒಂದನೆಯ ದಾರಿಯನ್ನು ಹೆಚ್ಚು ಅವಲಂಬಿಸಿದೆ. ಕೆಲವೊಂದು ವಿಷಯಗಳನ್ನು ಇಟ್ಟುಕೊಂಡು ಅಧ್ಯಯನ ಮಾಡಿದ ರೀತಿ ಇದಾದ ಕಾರಣ ಚುಟುಕು ಸಾಹಿತ್ಯದ ಎಲ್ಲ ಕವಿಗಳನ್ನು ಗುರುತಿಸಲು ಇಲ್ಲಿ ಸಾಧ್ಯವಾಗಿಲ್ಲ. ಆದರೆ ಕನ್ನಡ ಕಾವ್ಯ ಪರಂಪರೆಯಲ್ಲಿ ಚುಟುಕು ಸಾಹಿತ್ಯದ ಪಾತ್ರವನ್ನು ಕುರಿತು ಚರ್ಚಿಸುವ ಮೂಲಕ ಚುಟುಕು ಕಾವ್ಯದ ನೆಲೆಗಳನ್ನು ಗ್ರಹಿಸುವ ಮತ್ತು ಅದರ ಮಹತ್ವವನ್ನು ಗುರುತಿಸುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಅಧ್ಯಾಯ ೨

ಚುಟುಕು ಸಾಹಿತ್ಯ ಮತ್ತು ಅದರ ಸ್ವರೂಪ

೨

ಚುಟುಕು ಸಾಹಿತ್ಯ ಮತ್ತು ಅದರ ಸ್ವರೂಪ

ಅರ್ಥ

ಕನ್ನಡ ಸಾಹಿತ್ಯದ ಹಲವು ಸಾಹಿತ್ಯ ರೂಪಗಳಲ್ಲಿ ಚುಟುಕು ಸಾಹಿತ್ಯವೂ ಒಂದಾಗಿದೆ; ಪ್ರಮುಖವಾಗಿದೆ. ಕನ್ನಡದ ಸಂದರ್ಭದಲ್ಲಿ ಚುಟಕಕ್ಕೆ ಸಂವಾದಿಯಾಗಿ 'ಹನಿಗವನ', 'ಮಿನಿಗವನ' ಮುಂತಾದ ಹೆಸರುಗಳು ಇವೆ. ಕಿಟ್ಟೆಲ್ ಕೋಶದಲ್ಲಿ ಇದನ್ನು 'ಇಡಕುಂಗಬ್ಬ' ಎನ್ನಲಾಗಿದೆ. "The meaning of which is complete in itself" ಎಂಬ ಅರ್ಥ ವಿವರವೂ ಇದೆ.[೧] 'ಕಾವ್ಯಾದರ್ಶ'ದಲ್ಲಿ ದಂಡಿಯು 'ಅನಿಬದ್ಧ ಕಾವ್ಯ' ಎಂದು ಇದನ್ನು ಗುರ್ತಿಸಿದ್ದಾರೆ.[೨] ಇಂಗ್ಲೀಷಿನಲ್ಲಿ ಇದು "Epigram". ಕೋಲೆರಿಜ್ ಕವಿ ತುಂಬ ಸಂಕ್ಷಿಪ್ತವಾಗಿ ಲಕ್ಷಣ ತಿಳಿಸಿದ್ದಾನೆ.

What is an Epigram? A Drawfish whole
Its body Brevity and wit its Soul.


'ಪುಟ್ಟ ದೇಹ ಮತ್ತು ಚಮತ್ಕಾರಿಕ ಆತ್ಮ', ಇವೇ ರಾಜರತ್ನಂ ಅವರು ಕರೆದ 'ಚುಟುಕ', ಚಾಟೋಕ್ತಿ ಅಥವಾ ಜಾಣ್ನುಡಿ.

ಎಸ್.ವಿ.ರಂಗಣ್ಣ ಅವರು, 'ಅದು, ಕುಳ್ಳಾದರೂ ರೂಪವತಿ ಹೆಣ್ಣಿನ ಹಾಗೆ' ಎಂದು ಬಣ್ಣಿಸಿರುವುದು ಅರ್ಥವತ್ತಾಗಿದೆ.

ಸಾಮಾನ್ಯವಾಗಿ ಹನಿಗವನ ಅಥವಾ ಚುಟುಕವನ್ನು ವಿವರಿಸುವವರೆಲ್ಲರೂ ಜೇನುಹುಳುವಿನ ರೂಪಕ ಬಳಸಿರುವುದು ಗಮನಾರ್ಹ. ಮೈಯೆಲ್ಲ ಮಧುವಿರುವ ಕೀಟ, ಇದರ ಚುಂಬನದ ಪರಿಣಾಮ ಮಾತ್ರ ಘೋರ! ವ್ಯಂಗ, ವಿಡಂಬನೆ, ವಕ್ರತೆ ಇವುಗಳ ಮುಖ್ಯ ಲಕ್ಷಣಗಳು.

ಈ ಚುಟುಕು ಸೃಷ್ಟಿಯ ಮೂಲವನ್ನು ಆಂಗ್ಲಭಾಷೆಯ 'Limericks'ದಲ್ಲಿ ದೃಷ್ಟಿಸುವವರೂ ಇದ್ದಾರೆ. 'Limericks'ದ ಅರ್ಥ. 'humorous of nonsense poem of five line' ಎಂಬುದು. ಪ್ರಾಸಬದ್ಧವಾದ ಹಾಸ್ಯಮಯ ನಿರರ್ಥಕ ಐದು ಸಾಲುಗಳ ಪದ್ಯ. Nonsense ಪದಗಳೆಂದು sense ಇದ್ದವರ ಅಭಿಮತ.

ಓದುಗರ ಚಿತ್ತಭಿತ್ತಿಯಲ್ಲಿ ಒಂದರಗಳಿಗೆಯಾದರೂ ಅಚ್ಚೊತ್ತಿನಿಲ್ಲುವ ಈ ಚುಟುಕು ಬಿಡಿಬಿಡಿಯಾದ ನುಡಿಯರಳಿನ ಮಡಿಲು, ಕ್ಷಣಭಾವದ ಒಡಲು, ಈ ನುಡಿ ಒಡಲಿನ ಸೃಷ್ಟಿಗೆ ಒಂದೊಂದು ದೃಷ್ಟಿಯ ಹೆಸರು. ಚುಟುಕು ಎಂದಲ್ಲಿ ಭಾವಕ್ಕೆ ಮೊಟಕಿಲ್ಲ. ಮಿನಿಗವನಗಳೆಂದರೂ ಓದಿ ತಣಿಯದವರಿಲ್ಲ. ಹನಿ Honey ಗವನಗಳೆಂದರೆ ಜೇನುಹನಿ (Hone) ನಾಲಿಗೆಯ ಮೇಲಿರಿಸಿಕೊಂಡು ಸವಿದಂತೆ ಆಧರಕ್ಕೂ ಹಿತ. ಇನ್ನು 'ಮಿಡಿ' ಗವನಗಳೆಂದಲ್ಲಿ 'ಮಿಡಿ' ಉಪ್ಪಿನಕಾಯಿಗಳ ರುಚಿ ರಸನೆಯಲ್ಲಿ ನೀರೂರಿಸುವಂತೆ, ಮುಕ್ತಕಗಳೆನ್ನುವಲ್ಲಿ ಮುಕ್ತಕದ ಅಂದ ಚಂದಗಳಿಂದ ಚಿಕ್ಕದಾದರೂ ಚೊಕ್ಕವಾಗಿ ಆಕರ್ಷಿಸಬಲ್ಲ ಓದುಗರನ್ನು 'ಖುಷಿ' ಪಡಿಸಬಲ್ಲ ಶಕ್ತಿ ಇವುಗಳಲ್ಲಿದೆ. ಆಂಗ್ಲದ Limerick ಕನ್ನಡದಲ್ಲಿ ವ್ಯಂಜ್ಯನ, ವಿಡಂಬನೆ ಹಾಸ್ಯರಸಾಯನಗಳ ಸಮ್ಮಿಲನವಿದ್ದ ಹಾಗೆ. ಹಲವರಿಗೆ ಈ ಚುಟುಕು ಕ್ಯಾಪ್ಸೂಲ್ (Capsule) ಕವನಗಳೆಂದೂ ಮಾತ್ರೆಗಳೆಂದು ಕರೆದಿದ್ದಾರೆ. Capsule a measured amount of medicine inside an outer covering. the whole of which is swallowed. ವ್ಯಂಗ್ಯ, ಕಟಕಿ, Wit ಮೊದಲಾದುವುಗಳನ್ನು ತುಂಬಿಕೊಂಡ ಮೇಲೆ ಶಬ್ದಗಳ ಹೊದಿಕೆಯುಳ್ಳ ಈ ಚುಟುಕು ಮಾತ್ರೆಗಳು ಇಡಿಯಾಗಿ ನುಂಗತಕ್ಕಂಥವುಗಳಾಗಿವೆ. ಈವರೆಗಿನ ಚರ್ಚೆಯನ್ನು ಆಧರಿಸಿ ಚುಟುಕು ಸಾಹಿತ್ಯವನ್ನು ಹೀಗೆ ರೇಖಿಸಬಹುದು.[3]



ಈ ರೇಖಾಚಿತ್ರವು ಚುಟುಕುಗಳ ಚಾರಿತ್ರಿಕ ಬೆಳವಣಿಗೆಯ ಕ್ರಮವನ್ನು ಸ್ಥೂಲವಾಗಿ ತಿಳಿಸಿಕೊಡುತ್ತದೆ. ನಾಟುನುಡಿ-ಚಾಟುನುಡಿ-ಗದ್ಯಗಂಧಿ ಅವು ಒಂದು ಇನ್ನೊಂದಕ್ಕೆ ಪೂರಕವಾಗಿವೆ.

ಸ್ವರೂಪ

ಕನ್ನಡದ ಜನಪದ-ತ್ರಿಪದಿಗಳು-ಒಗಟುಗಳು. ಶಿವಶರಣರ ವಚನಗಳು, ದಾಸರ ಕೀರ್ತನೆಗಳು, ಸಂಸ್ಕೃತ ಮುಕ್ತಕಗಳು ಈ ಚುಟುಕುಗಳ ಸೃಷ್ಟಿಗೆ ಮೂಲವಾಗಿರಬೇಕೆಂಬುದು ನನ್ನ ಅಭಿಪ್ರಾಯ. ಕನ್ನಡದ ಜನಪರ ಕವಿ ಸರ್ವಜ್ಞನ ತ್ರಿಪದಿಗಳಲ್ಲಿ ಚುಟುಕಿನ ಚುರುಕು, ಕಟಕಿ, ವ್ಯಂಗ್ಯ, ವಿನೋದ ಎಲ್ಲವನ್ನೂ ಕಾಣಬಹುದು.

ಕನ್ನಡಕ್ಕೆ ಚುಟುಕು ಸಾಹಿತ್ಯ ಹೊಸತೇನಲ್ಲ. ಚಿಕ್ಕ ಚಿಕ್ಕ ಪದ್ಯಗಳನ್ನು ಚೊಕ್ಕವಾಗಿ ಹೇಳುವ ಶರಣರ ವಚನಗಳು ಚುಟುಕು ಸಾಹಿತ್ಯಕ್ಕೆ ಒಳ್ಳೆಯ ಉದಾಹರಣೆ. ಸೋಮೇಶ್ವರ ಶತಕಗಳಲ್ಲಿ ರತ್ನಾಕರವರ್ಣಿಯ ಭರತೇಶ ವೈಭವ, ವಿದುರ ನೀತಿಗಳು, ಸರ್ವಜ್ಞನ ವಚನಗಳು, ಒಂದುಗೂಡಿಸಿದ ಚುಟುಕುಗಳೇ ಆಗಿವೆ. (ಅಧ್ಯಾಯ ನಾಲ್ಕರಲ್ಲಿ ಈ ಕುರಿತು ವಿಸ್ತಾರವಾಗಿ ಚರ್ಚೆ ಬೆಳೆಸಲಾಗಿದೆ).

"ಚುಟುಕು" ಎನ್ನುವುದಕ್ಕೆ ನಿಘಂಟಿನಲ್ಲಿ 'ಸಣ್ಣದು', 'ಚಿಕ್ಕದಾದ' ಎಂದೂ ಚುಟುಕ ಎನ್ನುವುದಕ್ಕೆ ಅಣಕದಿಂದ ಕೂಡಿದ ಸಣ್ಣ ಪದ್ಯ ಎಂದೂ ಅರ್ಥೈಸಲಾಗಿದೆ. ಹೀಗೆ ಅಣಕದಿಂದ ಕೂಡಿದ ಸಣ್ಣ ಚುಟುಕುಗಳನ್ನು ರಚಿಸಿದವರಲ್ಲಿ ಚುಟುಕು ರತ್ನಾಕರ ದಿನಕರ ದೇಸಾಯಿಯವರನ್ನು ಇಲ್ಲಿ ಸ್ಮರಿಸಬೇಕು. ಸಾವಿರಾರು ಚೌಪದಿಗಳಲ್ಲಿ, ಬಹುವಾಗಿ ರಾಜಕೀಯ ವಿಡಂಬನೆಯನ್ನು ವಸ್ತುವಾಗುಳ್ಳ ಚುಟುಕುಗಳನ್ನು ರಚಿಸಿದ ದೇಸಾಯಿಯವರು ಚುಟುಕು ಸಾಹಿತ್ಯಕ್ಕೆ ಹಿರಿಯಣ್ಣ ಎನ್ನಬಹುದು.

ಅಲ್ಲಲ್ಲಿ ಅಷ್ಟಷ್ಟು ಗೋಚರಿಸುತ್ತಿದ್ದ ಚುಟುಕಗಳೂ, ಹನಿಗವನಗಳೂ, ಈಗ್ಗೆ ಸುಮಾರು ಮೂರು ದಶಕಗಳಿಂದ ಹೆಚ್ಚಿನ ಪ್ರಾಬಲ್ಯ ಪಡೆದವು. ನಿಯತಕಾಲಿಕೆಗಳು ಉಳಿದ ಸ್ಥಳ ತುಂಬುವ ಸಲುವಾಗಿ ಪ್ರಕಟಗೊಳ್ಳುತ್ತಿದ್ದ ಹನಿಗವಿತೆಗಳು ಬರುಬರುತ್ತಾ ಪ್ರಾಮುಖ್ಯತೆ ಪಡೆದು, ನಂತರ ಅನಿವಾರ್ಯಗಳಾಗಿಬಿಟ್ಟವು; ಕ್ರಮೇಣ ಅಧ್ಯಯನ ವಸ್ತುಗಳಾದವು. ಮಾಸಿಕಗಳು, ವಾರಪತ್ರಿಕೆಗಳಲ್ಲದೆ ದಿನಪತ್ರಿಕೆಗಳೂ ಸಹ ಚುಟುಕುಗಳನ್ನಾಯ್ದು ಪ್ರಕಟಿಸಲು ಪ್ರಾರಂಭಿಸಿದವು.

ಚುಟುಕು-ಹಲವು ಬಿಡಿ ನುಡಿಗಳು. ಕವಿ ಭಾವನೆಗಳ ಮಿಂಚುಹುಳಗಳಂತಿರುವ ನಾಲ್ಕು ಸಾಲುಗಳ ಪದ್ಯಗಳ ಗೊಂಚಲು. ಇವು ಮಿಂಚಿನ ಗೊಂಚಲು. ಇಲ್ಲಿ ಚುಚ್ಚುವ ವಿಡಂಬನೆಯಿದೆ, ವಿಡಂಬನೆಯ ಮಧ್ಯದಲ್ಲಿ ಮೆಚ್ಚುವ ವಿಚಾರವೂ ಇದೆ. ಸರ್ವಜ್ಞನ ಲೋಕೋಕ್ತಿಗಳಂತೆ ಭಾವಪೂರಿತ ನುಡಿಗಳಿವು. ಈ ನುಡಿಗಳಲ್ಲಿ ಸೌಂದರ್ಯವೂ ಅಡಕವಾಗಿವೆ. ಅನಿರೀಕ್ಷಿತ ಬೆರಗೂ ಇಲ್ಲಿಯ ನುಡಿಗಳಲ್ಲಿದೆ. ಇಲ್ಲಿ ಎರಡನೆಯ ಹಾಗೂ ನಾಲ್ಕನೆಯ ಸಾಲಿನಲ್ಲಿ ಅಂತ್ಯ ಪ್ರಾಸವಿದೆ. ಚುಟುಕು ಜೀವನ ಮೌಲ್ಯ ಮತ್ತು ಕಾವ್ಯ ಮೌಲ್ಯಗಳೆರಡನ್ನೂ ಒಳಗೊಂಡು ಒಂದು ವಿಶಿಷ್ಟ ಪದ್ಯ ಜಾತಿ.

ಚುಟುಕುಗಳ ಸ್ವರೂಪದ ಬಗ್ಗೆ ಈವರೆಗೆ ಕೆಲಮಟ್ಟಿಗೆ ಆಲೋಚನೆ ನಡೆದಿದೆ. ಈ ಪದ್ಯಪ್ರಭೇದಕ್ಕೆ ವಿಶೇಷವಾದ ಲಕ್ಷಣಗಳೂ ಇವೆ, ರಸಸಂಬಂಧವನ್ನು ಪಡೆದು ಕೆಲವು ಚುಟುಕುಗಳಲ್ಲಾದರೋ ಈ ವಿಶೇಷ ಲಕ್ಷಣಗಳು ಎದ್ದು ಕಾಣುವುವು. ಹಾಸ್ಯ ವಿಡಂಬನೆಯಿಂದ ಕವಿತಾವೇಶವು ತಲೆದೋರಿದಾಗ ಈ ಚುಟುಕುಗಳು ಹೊರಟುಹೋದುದರಿಂದ ಕಾವ್ಯಲಕ್ಷಣವಾದ ರಸಸ್ಫೂರ್ತಿಯನ್ನು ಅವು ಪಡೆಯುತ್ತವೆ. ಹಾಡುಗಬ್ಬಗಳಿಗೆ ಸರಿಯಾಗುವ ಪದಬಂಧವನ್ನು ಪಡೆದು ತಾಳಲಯಯತಿಗಳಿಗೆ ಅವಕಾಶ ಕೊಟ್ಟು ಕೇಳುವುದಕ್ಕೆ ಇಂಪಾಗಿರುತ್ತವೆ. ಇವುಗಳಿಂದ ಮುಂದೆ, ದ್ವಿಪದಿ, ತ್ರಿಪದಿಗಳಿಗೂ ಕೆಲವು ಷಟ್ಪದಿಗಳಿಗೂ

ಸಂಬಂಧವು ಚೆನ್ನಾಗಿ ಕಂಡುಬರುವುದು. ಛಂದೋನಿಯಮಗಳ ಶೃಂಖಲೆಯಿಲ್ಲದೆ, ಪ್ರಾಸಸ್ಥಾನದ ಬಂಧನವಿಲ್ಲದೆ, ರಸಸ್ಫೂರ್ತಿಯಿಂದ ಮಾತ್ರ ಬರೆಯಬಹುದಾದ ಚುಟುಕುಗಳನ್ನು ಹಾಸ್ಯರಸದಿಂದ ಮೈಮರೆತ ಅನೇಕ ಮಂದಿ ಬರಹಗಾರರು (ಪ್ರಾಚೀನ ಮತ್ತು ಆಧುನಿಕ) ಚುಟುಕುಗಳನ್ನು ಬರೆದಿರುವುದು ಸಹಜವಾಗಿದೆ.

ಇಲ್ಲಿ ಚುಟುಕುಗಳ ವಿಡಂಬನಾತ್ಮಕ ಸ್ವರೂಪವನ್ನು ವಿವರಿಸಲಾಗಿದೆ. ಆದರೆ ಅವು ಹಾಡುಗಬ್ಬಗಳಿಗೆ ಸರಿಯಾದ ಪದಬಂಧವನ್ನು ತಾಳ ಲಯ ಯತಿಗಳಿಗೆ ಅವಕಾಶ ಕೊಟ್ಟು ಇಂಪಾಗಿರುತ್ತವೆ ಎಂಬ ಉಕ್ತಿ 'ಛಂದೋನಿಯಮಗಳ ಶೃಂಖಲೆಯಿಲ್ಲದೆ' ಇತ್ಯಾದಿಯಾದ ಹೇಳಿಕೆಯೊಡನೆ ಹೊಂದಿಕೊಳ್ಳುವುದಿಲ್ಲ. ದ್ವಿಪದಿ-ತ್ರಿಪದಿ-ಷಟ್ಪದಿಗಳಿಗೂ, ಚುಟುಕುಗಳಿಗೂ, ಸಂಬಂಧವು ಚೆನ್ನಾಗಿ ಕಂಡುಬರುವುದೆಂಬುದು ನಮ್ಮ ದೃಷ್ಟಿಯಲ್ಲಿ ಅಭ್ಯಾಸ ಮಾತ್ರ. ಚುಟುಕುಗಳ ಸ್ವಚ್ಛಂದಲಯದಿಂದ ಇಂಥ ಅಭಾಸಕ್ಕೆ ಎಡೆ ದೊರೆಯುತ್ತದೆ. ಇಷ್ಟೇ ಏಕೆ, ಚುಟುಕುಗಳು ಹಾಸ್ಯ ಮತ್ತು ಚಿಂತನಾತ್ಮಕ ಗೀತೆಗಳೆಂದೂ ತಿಳಿಯಲು ಅವಕಾಶವಿದೆ. 'ಚುಟುಕುಗಳಲ್ಲಿ ಸಾಮಾನ್ಯವಾಗಿ ಕೆಲವು ಹಾಸ್ಯ ರೂಪವಾದವು. ಕೆಲವು ಸಾಮಾಜಿಕ ಪರಿಶೋಧನೆಯ ರೂಪವಾದವು, ಕೆಲವು ವಿಡಂಬನೆ ರೂಪವಾದವು. ಕೆಲವು ರಾಜಕೀಯ ನಿರೂಪಣೆಯವೂ, ಮತ್ತೆ ಕೆಲವು ಶೃಂಗಾರ ನಿರೂಪಣವಾದವು. ಇವುಗಳಲ್ಲಿ ಮೊದಲಿನ ಮೂರು ತೆರದವು ಗೀತಜಾತಿಗೆ ಸೇರಿದುವೆಂದು ಹೇಳಬೇಕು.

ಕನ್ನಡ ಸಾಹಿತ್ಯಕ್ಕೆ ಎಷ್ಟು ವರ್ಷಗಳ ದೀರ್ಘ ಇತಿಹಾಸವಿದೆಯೋ ಅಷ್ಟೇ ದೀರ್ಘ ಇತಿಹಾಸ ಚುಟುಕು ಸಾಹಿತ್ಯಕ್ಕೂ ಇದೆ. ಏಕೆಂದರೆ ಎಲ್ಲ ಕಾಲದಲ್ಲಿಯೂ ಮಿತಭಾಷಿಗಳಿದ್ದರು, 'ಹತ್ತು ಕಟ್ಟುವ ಬದಲು ಒಂದು ಮುತ್ತು ಕಟ್ಟು'ವವರಿದ್ದರು. ನಮ್ಮ ಜಾನಪದರನ್ನೇ ನೋಡೋಣ

ಪಾಂಡವರು ಜೂಜಾಡಿ ರಾಜ್ಯವ ಸೋತಾರು
ಜೂಜಾಡಿ ನಳನು ಬಳಲೀದ ಕಂದಯ್ಯ
ಜೂಜೀಗೆ ಮನವ ಕುಡದೀರು

ಇಡೀ ಮಹಾಭಾರತ ಕಥನವನ್ನು, ನಳಚರಿತ್ರೆಯನ್ನು, ಜೂಜಿನ ದುಷ್ಪರಿಣಾಮವನ್ನು ಇದಕ್ಕಿಂತ ಚುಟುಕಾಗಿ ವರ್ಣಿಸುವುದು ಇನ್ನಾರಿಂದ ಸಾಧ್ಯ ಹೇಳಿ.

ಕಂದನ ಕೊಡು ಶಿವನೆ ಬಂಧನ ಪಡಲಾರೆ
ಹಂಗೀನ ಬಾನ ಉಣಲಾರೆ ಮರ್ತ್ಯದಾಗ
ಬಂಜೆಂಬ ಶಬ್ದ ಹೊರಲಾರೆ.

ಇಪ್ಪತ್ತನೆಯ ಶತಮಾನ ಮುಗಿದು ಇಪ್ಪತ್ತೊಂದನೆಯ ಶತಮಾನಕ್ಕೆ ಕಾಲಿಡುತ್ತಿರುವ ಈ ಸಂಧಿಕಾಲದಲ್ಲೂ 'ಬಂಜೆಯ ಬೇನೆ'ಯನ್ನು ಇಷ್ಟು ಚುಟುಕಾಗಿ, ಇಷ್ಟು ಸಂಕೀರ್ಣವಾಗಿ, ಇಷ್ಟು ಪರಿಣಾಮಕಾರಿಯಾಗಿ

ಹೇಳಲು ಸಾಧ್ಯವಾಗಿದೆಯೇ? ಮೈದೆಗೆದುಕೊಳ್ಳಬೇಕು; ಮನದೆಗೆದುಕೊಳ್ಳಬೇಕು. ಪ್ರತಿಯೊಬ್ಬ ಚುಟುಕು ಕರ್ತೃವಿಗೂ ಇದು ಆದರ್ಶವಾಗಿದೆ.

ಸಾಹಿತ್ಯಿಕವಾಗಿ ಚುಟುಕುಗಳು ಬೆಳೆದುಬಂದ ಬಗೆಯನ್ನು ಹಾಗೂ ಅವುಗಳ ಸ್ವರೂಪವನ್ನು ಸಂಕ್ಷಿಪ್ತವಾಗಿ ಅವಲೋಕಿಸಿ ಹೇಳುವುದಾದರೆ, ಹಳಗನ್ನಡ ಚಂಪೂ ಕಾವ್ಯಗಳಲ್ಲಿ, ವಡ್ಡಾರಾಧನೆಯಲ್ಲಿ ಅಸಂಖ್ಯಾತ ಚುಟುಕು ಮಾತುಗಳಿವೆ.[೪] ಅವುಗಳನ್ನು ಕಾವ್ಯದಿಂದ ಅನಾಮತ್ತಾಗಿ ಎತ್ತಿ ಇರಿಸಿದರೆ, ಸುಲಕ್ಷಣವಾದ ಚುಟುಕು ಆಗಿರುತ್ತವೆ. ಸನ್ನಿವೇಶಗಳಲ್ಲಿ ಹೆಣೆದುಕೊಂಡಿರುವ, ಪ್ರಸಂಗಾನುಬಂಧಿ ಲೋಕೋಕ್ತಿಗಳನ್ನು ಚುಟುಕು ಎನ್ನಲಾಗದಿರಬಹುದು. ಆದರೆ ತನ್ನಷ್ಟಕ್ಕೆ ಸ್ವಯಂಪೂರ್ಣವಾದ, ಸಾರ್ವತ್ರಿಕವಾದ, ಸರ್ವಕಾಲಿಕ ಅಥವಾ ಅಂದಿನ ಸಮಕಾಲೀನ ಚಿಂತನಾಂಶವನ್ನು ಕಟ್ಟಿಕೊಡುವ ನೂರಾರು ಮಾತುಗಳು ಚಂಪೂ ಕಾವ್ಯಗಳಲ್ಲಿ ಕಿಡಿಗುಟ್ಟುತ್ತಿವೆ. ಅವುಗಳಲ್ಲಿ ಕೆಲವನ್ನು ಗಮನಿಸಬಹುದು. ಅವು ಉಪಮೇಯೋ, ರೂಪಕವೋ ಆಗಿರಬಹುದು. ಅವು ಚುಟುಕುವಿನ ಪೂರ್ವಾರ್ಧವೋ, ಉತ್ತರಾರ್ಧವೋ ಆಗಬಹುದು.

ಪಂಪಕವಿ : ೧. ಅಡವಿಯೊಳಗೆ ಪೂತಪೂವು... ೨. ಸೂಚಿಯ ಕೂರ್ಪು ಕುಂಬಳದೊಳಡಗುವಂತೆ, ೩. ಮರುಳ್ಗೆ ಧೂಪಂ ತೋರಿದ ಮಾಳ್ಕೆ... ೪. ಆನೆ ಮೆಟ್ಟಿದ ಕುಳುಂಪೆ ನೀರಂತೆ... ೫. ಇರುಳ್ ಕಂಡ ಕನಸಂ ಮರುದೆವಸಂ ನೆನೆವಂತೆ... ಇತ್ಯಾದಿ. ಇನ್ನು ಕೆಲವಂತು ಅವುಗಳ ಧ್ವನಿಶಕ್ತಿಯಿಂದ ಚುಟುಕುವಿನಲ್ಲಿ ಚುಟುಕಾಗಿದ್ದು, ಸ್ವಯಂನಿಷ್ಠ ಮುಕ್ತಕಗಳಂತಿವೆ. ಕೆಲವು ತಕ್ಷಣವೇ ಇರುವೆ ಕಡಿದಂತೆ ಚುಟುಕಾಗಿರುತ್ತವೆ.

೧. ಆನೆಯ ಕೋಡುಬಾಗದು ೨. ಬಡಿಗಂಡನಿಲ್ಲ : ಪಾಲನೆಕಂಡಂ
೩. ಎನ್ನ ನುಡಿ ಟಾಠಡಾಢಣಂ ೪. ಪಗೆಯಿರಿಯ ಬಂದು ಮೂಗನಿರಿದರ್
೫. ಪೆಡೆಯೋಡಲ್ ಬಂದರಂ ಗುಡಿವೊರಿಸಿದರ್ ೬. ಕಾಯ್ದು ಬೆನ್ನೀರ್ ಮನೆಸುಡದು.
೭. ನಿಡಿಯರ್ಗನಿಡಿಯರೊಳರ್ ೮. ಕಟ್ಟಿದುದೆ ಸುರಿಗೆ, ಮೆಟ್ಟಿದುದೆ ಕಳಂ

ಇವು ಬಿಡಿ ಮುತ್ತುಗಳಾಗಿದ್ದು, ಅರ್ಥ ವ್ಯಂಜಕವೂ, ಧ್ವನಿಪೂರ್ಣವೂ ಆಗಿವೆ. ಇವನ್ನು ಪರಿಣಾಮಕ್ಕನುಗುಣವಾಗಿ ಎರಡು ಪಾದಗಳಾಗಿ ಒಡೆಯಬಹುದು. ಕ್ರಮಸಂಖ್ಯೆ ೭ ಅನ್ನು ಉದಾಹರಣೆಗೆ ಪರಿಶೀಲಿಸಬಹುದು. ಕುಳ್ಳರ ರಾಜ್ಯದಲ್ಲಿ ೪ ಅಡಿ ಎತ್ತರದವನೇ ತಾನು ಉನ್ನತ ಎಂದು ಬೀಗುತ್ತಿರುತ್ತಾನೆ. ಅವನೆದುರಿಗೆ ೫ ಅಡಿ ಎತ್ತರದವನು ಆರು ಅಡಿ ಎತ್ತರದವನು ಎದುರಾದಾಗ, ಅಪೂರ್ವಕ್ಕೆ ಏಳು ಅಡಿ ಎತ್ತರದ ಸೈಂಧವ ಕಾಣಿಸಿಕೊಂಡಾಗ ಅಹಂಕಾರ ನೀರಸವಾಗುತ್ತ ಹೋಗುತ್ತದೆ. ಇದರ ಅರ್ಥ ವ್ಯಂಜಕಶಕ್ತಿ ವಾಚ್ಯಾರ್ಥದಲ್ಲಿ ವಿರಮಿಸುವುದಿಲ್ಲ. ಪಂಡಿತನನ್ನು ಮೀರಿಸುತ್ತ ಇರುವ ಮತ್ತೊಬ್ಬ ಪಂಡಿತ, ಅವನನ್ನು ಮೀರಿಸುವ ಮಗದೊಬ್ಬ, ವೀರನಿಗೆ, ವೀರ, ಸುಂದರನಿಗೆ ಸುಂದರ - ಹೀಗೆ ಸಾಗುತ್ತದೆ. ಅನಂತವಾಗಿ ಹಿರಿಮೆಯ ಲೆಕ್ಕಾಚಾರ. ಇದು ಉತ್ತಮ ಚುಟುಕು ಅಲ್ಲದೆ ಮತ್ತೇನು? ಮೇಲಿನ ಎಲ್ಲ

ರಚನೆಗಳನ್ನು ಹೀಗೆ ಪರಿಭಾವಿಸುತ್ತ ಸುಖಿಸಬಹುದು. ಈ ಪುಟ್ಟ ಚುಟುಕು ಧ್ವನಿಶಕ್ತಿಯನ್ನು ಹೊಂದಿದೆ. ಅದರ ಅರ್ಥವನ್ನು ಇನ್ನೂ ವಿಸ್ತರಿಸಬಹುದು.

ಪೊನ್ನ : ೧. ಅಂಬಿಂ ಸವೆದುದೆ ನಭಂ? ೨. ಗಳೆವಳೀಯ ಪಾವು ಬರ್ಪಂಕೆ ೩. ತಾಮರೆಯ ನೂಲೊಳ್ ಆನೆಗಟ್ಟುವಂತೆ... ೪. ಕಿರುಕುಳನೊಳ್ ಪಡೆದ ಗೆಲ್ಲದಿಂದಂ ಪಿರಿಯನೊಳ್ ಪಡೆವ ಸೋಲಂ ಉತ್ತಮಂ. ೫. ನೊಳವಿಗೆ ಕುಪ್ಪೆ ವರಂ ೬. ತಾಮ್ ಕಿರಿವ ಗೊರವಿ ಬೆನಕನುಂ ತಿರಿಯಿಪಳ್ ... ಇವುಗಳಲ್ಲಿ ೧, ೨, ೩ ಚುಟುಕದ ಭಾಗಗಳಂತಿದ್ದರೆ, ೪, ೫, ೬ ಸಂಪೂರ್ಣ ಚುಟುಕುಗಳೇ ಆಗಿವೆ. ೬ನೆಯ ಚುಟುಕು ಆ ಕಾಲದ ಸಾಂಸ್ಕೃತಿಕ ಆಚರಣೆಯ ಬಗ್ಗೆ ಪಿಸುನುಡಿಯುತ್ತಿದೆ, ಸ್ವೋಪಜ್ಞವಾಗಿದೆ. ಸ್ವಂತಿಕೆ ಅಥವಾ ಸ್ವೋಪಜ್ಞತೆ ನಾವು ಚುಟುಕುವಿನಲ್ಲಿ ಅಪೇಕ್ಷಿಸುವ ಗುಣವಲ್ಲವೇ?

ರನ್ನ : ೧. ಅತ್ತ ಪುಲಿ, ಇತ್ತ ದರಿ ೨. ಏರ್ಪೆತ್ತರ್ ಏರ್ಪಟ್ಟರಂ ಪದುಳಂ ಮಾಳ್ಪುದು ಚಿತ್ರಂ ೩. ಕಪಿಗೆ ಚಪಲಕೆ ಸಹಜಂ ೪. ಕಯ್ಯೇ ಸೋರೆಯ ಕುಡಿಯೇಂ ಮಿಡಿಯೇ? ೫. ಸೂತಾವತಾರಂ ಹರಿಗಾಯ್ತೇ? ೬. ಪಿಕ್ಕುವೊಡೆ ಅತ್ತಿಯ ಪಣ್ಣಲ್ಲ ಅತ್ತಿಮಬ್ಬೆ ಇವೆಲ್ಲವೂ ಹೊಸ ಅರ್ಥಛಾಯೆಯನ್ನು ತಕ್ಷಣವೇ ನೀಡುತ್ತವೆ. ಮೊದಲನೆಯದು ತೀರ ಪರಿಚಿತವಾದ ಗಾದೆ ಮಾತೇ ಇದ್ದೀತು. ೨. ಗಾಯಗೊಂಡವರು ಗಾಯಗೊಂಡವರನ್ನು ಉಪಚರಿಸುವುದು ಉಚಿತ ಎಂಬ ಮಾತು ವಾಚ್ಯಾರ್ಥದಲ್ಲಿ ನಿಲ್ಲುವುದಿಲ್ಲ. ನೊಂದವರನ್ನು, ಅವಮಾನಿತರನ್ನು, ಕಳೆದುಕೊಂಡವರನ್ನು ಬಡವರನ್ನು ಅದು ಸೂಚಿಸುತ್ತದೆ. ೫ನೆಯ ದರಲ್ಲಿಯ ವಿಡಂಬನೆಯ ಮೊನಚನ್ನು ಗಮನಿಸಿ. ಅಲ್ಲಿಯವರೆಗೆ ವಿಷ್ಣುವಿನ ಮೂರು ನಾಲ್ಕು ಅವತಾರ ಗಳಾಗಿರುತ್ತವೆ. ಆದರೆ ಕೃಷ್ಣವತಾರದಲ್ಲಿಯೇ ಮತ್ತೊಂದು ಉಪ ಅವತಾರ, ಅದೇ ಸೂತಾವತಾರ! ಎಂಬ ಚುಟುಕು. ಇದು ಚುಟುಕುವಿನ ಹರಿತವಾದ ಅಸ್ತ್ರವಲ್ಲವೇ? ೬ನೆಯದರಲ್ಲಿರುವ ಶಬ್ದಶ್ಲೇಷ ಅರ್ಥವತ್ತಾಗಿ, ಸ್ವಂತಿಕೆಯಿಂದ ಕೂಡಿದೆ. ಅದರಂತೆ ನಯಸೇನ, ದುರ್ಗಸಿಂಹ, ವಚನಕಾರರು, ದಾಸರು ಮುಂತಾದವರ ಕೃತಿಗಳಲ್ಲಿ ಚುಟುಕುಗಳು ಹಾಸುಹೊಕ್ಕಾಗಿ ಬಳಕೆಯಲ್ಲಿವೆ. ಹೊಸಗನ್ನಡ ಸಾಹಿತ್ಯದಲ್ಲಿ ರಾಜರತ್ನಂ, ಪರಮೇಶ್ವರಭಟ್ಟರು, ವಿ.ಜಿ.ಭಟ್ಟರು, ಡಿ.ವಿ.ಜಿಯವರು, ದಿನಕರ ದೇಸಾಯಿಯವರು ರಾಶಿರಾಶಿ ಚುಟುಕುಗಳನ್ನು ಕೊಟ್ಟರು. ಸಮಕಾಲೀನತೆ, ಸಾಮಾನ್ಯ ಪ್ರಜ್ಞೆಗಳನ್ನು ಮೂಡಿಸಿದರು. ಎಲ್ಲ ಪ್ರಕಾರಗಳಿಗಿರುವಂತೆ ಇದಕ್ಕೂ ಜನಪದ ಪ್ರೇರಣೆಯಿತ್ತು ಎಂದು ನಿರ್ವಿವಾದವಾಗಿ ಹೇಳಬಹುದು.

> ಊರಾಗ ಜಾತುರಿ ಯಾರಿದ್ದರೇನ
> ನನ ತಾಯಿದ್ದಂಗಾದೀತೇನ?

ಎಂಬೆರಡು ಸಾಲುಗಳು ಎಂಥವರ ಕೊರಳನ್ನು ಉಬ್ಬಿಸಬಲ್ಲವಲ್ಲವೆ? ಇಂಥ ಭಾವುಕತೆಯ ಉತ್ತುಂಗ, ಇನ್ನೊಂದು ಕಲ್ಲುಸಕ್ಕರೆ ತುಂಡು.

ಒಬ್ಬಳಿರುವ ಮನೆಗೆ ಹಬ್ಬದಿರು ಮಲ್ಲಿಗೆ
ಒಬ್ಬಳೇ ಕುಯ್ದು ಮುಡಿಲಾರೆ ಮಲ್ಲಿಗೆ
ಹಬ್ಬೋಗು ನನ್ನ ತವರೀಗೆ.

ಜನಪದ ಚುಟುಕುಗಳಲ್ಲಿ ಆಳವಾದ ಸಂಸ್ಕೃತಿಯ ಜನಪದ ಸಂವೇದನೆಯಿದೆ. ಅದರಂತೆ, ಭಾವುಕತೆಯ ಜೊತೆಗೆ ವೈಚಾರಿಕತೆಯೂ ಇದೆ.[೫] ಎಂಬುದು ಗಮನಿಸಬೇಕಾದ ಸಂಗತಿ. ಆಧುನಿಕ ಕವಿಗಳಲ್ಲಿ ಕುವೆಂಪು ಅವರು, ಆ ಕುರಿತು ಚುಟುಕುಗಳನ್ನೂ ರಚಿಸಿದ್ದಾರೆ.

ಓ ಯಾರಾದರೂ ಬನ್ನಿ!

ಎಲ್ಲಿಂದಾದರೂ ಬನ್ನಿ!

ಏನಾದರೂ ಮಾಡಿ

ಹೆಣಹೊರೆಯ ಇಂಗ್ಲೀಷಿನಿಂದೆಮ್ಮ ಪಾರುಮಾಡಿ!

'ಚುಟುಕು ಬ್ರಹ್ಮ' ಎನಿಸಿಕೊಂಡ ದಿನಕರ ದೇಸಾಯಿಯವರು, ರಾಜಕೀಯದ ಘಾಟಿನ ವಾಸನೆಯನ್ನು ಚುಟುಕುಗಳಲ್ಲಿ ಬೆರೆಸಿಕೊಂಡರು.

ಈ ಚುನಾವಣೆಯಲ್ಲಿ ನಾನಾ ನಮೂನೆ
ಕತ್ತೆ ಆರಿಸಿ ಬಂತು, ಬಿತ್ತು ಮದ್ದಾನೆ!

ಒಟ್ಟಾರೆ ಆಧುನಿಕ ಮುಕ್ತಕ ಅಥವಾ ಹನಿಗವಿತೆಗಳನ್ನು 'ಕ್ಯಾಪ್ಸೂಲ್ 'ಗಳೆಂದು ಕರೆಯಬಹುದೆನಿಸುತ್ತದೆ. ಮುಷಯಿರಾಗಳಲ್ಲಿಯಂತೆ, ಸಮಯ ಸ್ಫೂರ್ತಿಯಿಂದ ಹುಟ್ಟಿದ ಜೋಕುಗಳೂ, 'ವಾಹವ್ವಾ' ಎಂಬ ಉದ್ಗಾರ ಹುಟ್ಟಿಸಿದ್ದಿವೆ. ವೃನೋದಿಕವಾದ ರಚನೆಗಳನ್ನು ಕೇಳಿ ಕ್ಷಣ ನಕ್ಕು, ಮರೆತುಬಿಡುವ ಸಾಧ್ಯತೆಯೇ ಹೆಚ್ಚು ಎಂಬ ಟೀಕೆಯೂ ಇದೆ. ಆದರೆ ಶ್ಲೇಷೆಯು ಹುಟ್ಟಿಸುವ ಬೆರಗನ್ನು ಸುಲಭವಾಗಿ ತಳ್ಳಿ ಹಾಕಲಾಗದು. ಡುಂಡಿರಾಜರು ಹೇಳುವಂತೆ

'Punch' ಬೇಕು,
ಪಂಚೇ ಇಲ್ಲದಿದ್ದರೆ ಅವಮಾನ!

ಈಚೆಗೆ ಕೇಬಲ್ ಟಿ.ವಿ. ಹಾವಳಿಯಿಂದ, ಕವಿಗೋಷ್ಠಿಗಳಲ್ಲಿ ಬರೇ ಕವಿಗಳೇ ಸಭಿಕರಾಗಿರುವ ಶೋಚನೀಯ ಪರಿಸ್ಥಿತಿಯಲ್ಲಿ ಇಂಥ 'ಚುಟುಕು'ಗಳ ಅಗತ್ಯತೆಯಿದೆ. ಸಾಹಿತ್ಯ ಸಮ್ಮೇಳನಗಳಲ್ಲಿಯ ದೀರ್ಘ ಅಕಳಿಕೆಯ ನಡುವೆ, ತಲೆ ಹಗುರಾಗುವಂಥ ಅಥವಾ ವಾಹ್!' ಎಂದು ಉದ್ಗರಿಸುವಂತ ಗುಳಿಗೆ ಕವನಗಳು ಬೇಕೇಬೇಕು. ಇವು ಜೀರ್ಣಕಾರಿ. 'ಹಿಂಗೋಲಿ' ಅಥವಾ 'ಹಜ್ ಮೋಲಾ'ದಂತೆ ಎಂದರೆ, ಎಲ್ಲವನ್ನೂ ಹೇಳಿದಂತೆ! ಅವು ಚುಟುಕುಗಳೇ. ಅವುಗಳ ಮುಖ್ಯ ಉದ್ದೇಶ ವಿರಾಮ ವೇಳೆಯ

ಸದುಪಯೋಗವಾಗಿದೆ. ಕನ್ನಡದಲ್ಲಿ ಹನಿಗವನ ಸಂಕಲನಗಳು ಬಹಳಷ್ಟು ಬಂದಿದ್ದರೂ, ಪ್ರಾತಿನಿಧಿಕವಾದ ಸಮಗ್ರ ಸಂಕಲನ ಈವರೆಗೆ ಪ್ರಕಟವಾಗಿಲ್ಲ. ನಾನಾ ಭಾಗದ, ನುಡಿಗಟ್ಟಿನ, ವಿವಿಧ ರುಚಿಯ 'ಕಿರುಗವನ'ಗಳನ್ನು 'ಹನಿಗವನ'ದಲ್ಲಿ ಸೇರಿಸಿದೆ. ನವೋದಯ, ನವ್ಯ, ಬಂಡಾಯ ಹಾಗೂ ನವ್ಯೋತ್ತರ ಕವನಗಳೂ ಇಲ್ಲಿ ಸೇರಿವೆ. ಇದರಂತೆ ವೈದೇಹಿ, ಲಲಿತಾನಾಯಕ, ವಿಜಯಾ ದಬ್ಬೆ, ಶಶಿಕಲಾ ವೀರಯ್ಯಸ್ವಾಮಿ, ಶೈಲಜಾ ಉಡಚಣ ಮುಂತಾದ ಕವಯಿತ್ರಿಯರ ಬಹುಪಾಲು ಕವನಗಳು ಸ್ತ್ರೀವಾದ-ಪ್ರಕೃತಿ ಹಾಗೂ ಬಂಡಾಯದ ಧೋರಣೆಗಳನ್ನು ಪ್ರತಿನಿಧಿಸಿವೆ.

ಹಾಸ್ಯಮಿಶ್ರಿತ ವೈಚಾರಿಕ ಕವಿಗಳೆಂದೇ ಪರಿಗಣಿತರಾದ ವೈಎನ್ಕೆ, ಶಿವತೀರ್ಥನ್, ಚಂಪಾ, ಡುಂಡಿರಾಜ್, ಲಕ್ಷ್ಮಣರಾವ್, ಎಚ್.ಎ.ಭಿಕ್ಷಾವರ್ತಿಮಠ ಅಪರೂಪಕ್ಕೆಂಬಂತೆ ಸೀರಿಯಸ್ ಕಿರುಗವನ ಗಳನ್ನೂ ಬರೆದಿದ್ದುಂಟು. ಮಿಕ್ಕವರು 'ಮೌನ ಮುರಿಯುವ' ಕವಿಗಳು. ವಿಷಾದವೇ ಸ್ಥಾಯಿಯಾಗುಳ್ಳ ತಿರುಮಲೇಶ್, ಚೈತ್ರದಲ್ಲಿ ಒಣಗಿದೆನೆಂದು ಸದಾ ಹಪಿಹಪಿಸುತ್ತಿದ್ದ ಗೋಪಾಲಕೃಷ್ಣ ವಂಡ್ಸೆ, ಕಮಲಾ ಮುಂತಾದವರು. ಕ್ಯಾಂಡಲ್ ಲೈಟ್ ಡಿನ್ನರಿಗಾಗಿ ಇಬ್ಬರು ಟೇಬಲ್ ಗೊತ್ತುಪಡಿಸಿಕೊಂಡು ಕೂತ ಹಾಗೆ, ಈ ಅನುಭವ, ಕೊಂಚ 'ಹೆವಿ'ಯಾದರೆ ಅನುಭಾವ ! ವೈಯನ್ಕೆಯವರ 'ಕರುಣಾಳು ಬಾ (ರ್) ಎಂದು ಕವನದ ಮೂಲಕ ಈ ಅನುಭವವನ್ನೇ 'ಲೈಟ್' ಆಗಿ ಹೇಳುವ ರೀತಿಯನ್ನು ಗಮನಿಸೋಣ

ಕರುಣಾಳು ಬಾ ಬೆಳಕೆ
ಮುಸುಕಿದೀ Pub ಇನಲಿ
ಕೈ ಹಿಡಿದು ಕುಡಿಸೆನ್ನನು.

ಸಾಮಾನ್ಯವಾಗಿ ಲಘು ಪ್ರಬಂಧಗಳಲ್ಲೋ, ಹರಟೆಗಳಲ್ಲೋ ಹೆಂಡತಿಯನ್ನು ಲೇವಡಿ ಮಾಡುವ 'ಯಜಮಾನ'ರುಗಳುಂಟು. ಇಲ್ಲಿ ಹೊರಡಿಯವರು ಕೊಟ್ಟ ಚಿತ್ರ.

ಹೆಂಡತಿ : 'ಪೂರ್ವಕ್ಕ ಹುಟ್ಟಿ ಸೂರ್ಯ ಯಾವಾಗ್ಲೂ ಮುಳುಗೋದ್ಯಾಕ್ರೀ ಪಶ್ಚಿಮ ದಿಕ್ಕಿನಾಗ?'

ಗಂಡ : 'ಇಂಥಾ ಪ್ರಶ್ನೆಗೆ ಉತ್ತರಾನ ಎಂಥ ಮೂರ್ಖನೂ ಕೊಡಬಲ್ಲ'

ಹೆಂಡತಿ : 'ಅದಕ್ಕೆ ನಿಮ್ಮನ್ನ ಕೇಳಿದ್ದು'

ವಿಡಂಬನೆಗೆ ಮತ್ತೊಂದು ಹೆಸರಾದ ಚಂಪಾ, ಸಮಯಸ್ಫೂರ್ತಿಯ ಮಾತಿಗೆ ಖ್ಯಾತರು. ಸಾಮಾನ್ಯರನ್ನೂ ನಗಿಸಬಲ್ಲ ಲಘು ಹನಿಗವನಕ್ಕೆ ಇದು ನಿದರ್ಶನ.

'ಪ್ರಿಯತಮಾ ಪ್ರಿಯತಮಾ'
ಎನ್ನುತ್ತಿದ್ದವಳು

ಮತ್ತಾರೋ ಕೊರಳಿಗೆ
ತಾಳಿ ಬಿಗಿದಾಗ
'ಪ್ರಿಯ ತಮ್ಮಾ'
ಎನ್ನತೊಡಗಿದಳು.

ರಘುನಾಥ ಅವರು, ತಿಳಿಯಾದ ಹಾಸ್ಯರಸ ಹರಿಸಿದ್ದಾರೆ ಇಲ್ಲಿ.

ಪ್ರಸ್ಥದ ರಾತ್ರಿ
ಹಾಲಿನ ಹನುಮಪ್ಪ
ಹೆಂಡತಿಯ ಕೈಹಿಡಿದು
ಹಿಂಡಿದ.
'ಹಾಲು ನೀರು ಒಂದಾದ ಹಾಗೆ'
ನನ್ನ ನಿನ್ನ ಜೀವನ'

ಚುಟುಕ ಚಕ್ರವರ್ತಿ ಎಂದು ಹೆಸರಾದ ಡುಂಡಿರಾಜ್ ಶ್ಲೇಷೆಗೂ, ಕಟಕಿಗೂ ಪ್ರಸಿದ್ಧರು. 'ಕಿರಿದರಲ್ಲಿ ಹಿರಿದರ್ಥ' ತೋರುವ, ಹನಿಗವನದ ಸ್ವರೂಪ ಹೇಳುವ ಈ ಶಬ್ದ ಸಮುಚ್ಚಯ ಪರಿಭಾವಿಸಿ.

ಅಯ್ಯಾ ಕುಮಾರವ್ಯಾಸ
ನಾನು ನಿನ್ನ ದಾಸ
ನೀನು ಬರೆದದ್ದು
ಭಾಮಿನಿ
ನನ್ನದು ಬರೇ
ಮಿನಿ!

ಇನ್ನೊಬ್ಬ ಚುಟುಕು ಕವಿ ಲಕ್ಷ್ಮಣರಾವ್ ಅವರು ಪುರಾಣ ಮೂಲವನ್ನು ಆಶ್ರಯಿಸಿ ಮಾಡಿದ ವಿಮರ್ಶೆಯ ಮಾದರಿ.

ಕರ್ಣನ ದಾನಶೂರತ್ವವ ಮೆಚ್ಚಿ
'ವರ ಬೇಡಿಕೋ' ಎಂದ ಇಂದ್ರ
'ನಿನ್ನ ವಜ್ರಾಯುಧವನ್ನೇ ನೀಡುವೆಯ?'
ಕೇಳಿದ ಕಿಲಾಡಿ ಕರ್ಣ
ವಜ್ರಾಯುಧ ನೀಡಿ ಹೇಳಿದ ಇಂದ್ರ;
ಇದು ಭಾರತದ ಬ್ಲೇಡಿನ ಹಾಗೆ

ಒಮ್ಮೆ ಮಾತ್ರ ಉಪಯೋಗಿಸಬಹುದು
ನಂತರ ನಿರುಪಯೋಗಿ ನಿನಗೆ'

ನಮ್ಮ ಉತ್ಪಾದನೆಯ ಅಪಕ್ವತೆಯನ್ನು ಇಲ್ಲಿ ಸಮರ್ಥವಾಗಿ ಹೇಳಿದ್ದಾರೆ. ಇವುಗಳಲ್ಲೆಲ್ಲಾ ಬದುಕಿನ ಸೂಕ್ಷ್ಮ ಸಂವೇದನೆಯಿದೆ. ಅಂತ್ಯ ಪ್ರಾಸದಿಂದ ಪರಿಣಾಮ ತೀವ್ರವಾಗುವಂತೆ ಮಾಡುವುದರಲ್ಲಿ ಕಾಶೀನಾಥ ಅಂಬಲಗೆ ನಿಷ್ಣಾತರು.

ಪ್ರೇಮಕವಿತೆ
ಬರೆಯೋದು ಗದ್ಯ
ಆದರೆ ಪ್ರೇಮ
ಮಾಡೋದು ಪದ್ಯ

ಕಾಮ, ಪ್ರೇಮ, ಅಗಲಿಕೆ, ಈ ಬದುಕಿನ ತಿರುವು ಇಲ್ಲಿಯ ಮುಖ್ಯ ರಚನಾ ವಿಧಾನ. ಚುಟುಕುಗಳು ಬೆಳೆಯುತ್ತಾ ಅನಿರೀಕ್ಷಿತ ತಿರುವುಗಳ ಕಡೆಗೆ ಧಾವಿಸುವುದೇ ಇಲ್ಲಿಯ ಶಿಲ್ಪದ ತರ್ಕ. ಗಮನಾರ್ಹ ಸಂಗತಿಯೆಂದರೆ ಇಲ್ಲಿಯ ಚುಟುಕುಗಳ ಶಿಲ್ಪ ಸಾಂದ್ರವಾದುದಲ್ಲ ಎಂಬುದು ಮುಖ್ಯವಾದ ಸಂಗತಿಯಾಗಿದೆ.

ಎಚ್.ಎ.ಭಿಕ್ಷಾವರ್ತಿಮಠರು ಈಗಾಗಲೇ ತಮ್ಮ ಪ್ರೀತಿ ಮೋಹಕವಾದ ಶೈಲಿಯ ಮೋಹಕ ಚುಟುಕುಗಳಿಂದ, ಶಾಯಿರಿಗಳಿಂದ ಪ್ರಭಾವಿತರಾಗಿದ್ದಾರೆ. ಸಹಜ ಅನುಭವಗಳ ಜೊತೆಗೆ ವಿಡಂಬನೆಯ ಲವಲವಿಕೆಯಿಂದ ಕೂಡಿದ ಕಾಂತತ್ವದಿಂದ ಪ್ರಫುಲ್ಲ ಮನಸ್ಸಿನ ಲಹರಿಗಳು ಭೀಕ್ಷಾವರ್ತಿ ಮಠರ ಕಾವ್ಯದ ಹಾದಿಯಲ್ಲಿವೆ. ಇವರ ಚುಟುಕಿನಲ್ಲಿ ಆಧುನಿಕತೆಯ ಸೋಗಿನ ಬಣ್ಣ ಬಯಲು ಮಾಡುವ ತಂತ್ರವಿದೆ. ಗಾಂಧೀಜಿಯನ್ನು ಕುರಿತಾದ ಈ ಚುಟುಕು

ಚುನಾವಣೆ
ಇಂದು ಗಾಂಧೀಜಿ
ಎದುರಿಸಿದರೆ ಪಂಚಾಯಿತಿ
ಚುನಾವಣೆ
ಠೇವಣಿ ಕಳೆದುಕೊಳ್ಳುತ್ತಾನೆ
ದೇವರಾಣೆ

ಎನ್ನುವ ಈ ಚುಟುಕದಲ್ಲಿ ಆಧುನಿಕರ ಹಣದ ಆರ್ಭಟದ ಮಧ್ಯೆ ನ್ಯಾಯ ನೀತಿ ಧರ್ಮ ಮರೆಯಾಗಿವೆ. ಇದಕ್ಕಿಂತಲೂ ಶೈಲಿ ಇನ್ನೇನು ಬೇಕಾಗಿದೆ.

ಹಾಸ್ಯ ರಚನೆಗಳಿಂದ ಜನಮನ ಗೆದ್ದ ಪಿ.ಎಸ್.ರಾಮಾನುಜಂ ಧಾಟಿಗೊಂಡ ನಿದರ್ಶನ ಇಲ್ಲಿದೆ.

ಕುಂಭಕರ್ಣ ಸಾಯುವಾಗ
'ಇನ್ನು ನನ್ನ ನಿದ್ರೆಯ ಗತಿ'

ಎಂದು ಶ್ರೀರಾಮನನ್ನು ಕೇಳಿದಾಗ,
ಶ್ರೀರಾಮ ಹೇಳಿದನಂತೆ
'ಚಿಂತಿಸಬೇಡ
ಕಲಿಯುಗದಲ್ಲಿ
ಕಚೇರಿಗಳಿವೆ
ಅಲ್ಲಿ ಅದು ನೆಲೆಸುವುದು
ನಿರಂತರವಾಗಿ!'

ಮಧ್ಯಮ ವರ್ಗದ ಗಂಡ, ತಾವಿಬ್ಬರೂ ಹೊಂದಿಕೊಂಡಿದ್ದೇವೆಂದು ಹೇಳುವ ಪರಿ ಇದು. ಹೆಚ್ಚು ವೈವಿಧ್ಯಮಯ ಆಕೃತಿಗಳ ಕಡೆಗೆ ಕವಿಯ ಗಮನ ಹರಿದಿದೆ. ಅಶೋಕ ಚೊಳಚಗುಡ್ಡರದು

ಸತಿಪತಿ
ನಾವಿಬ್ಬರೂ
ಹೊಂದಿಕೊಂಡಿದ್ದೇವೆ
Each other
ಹೊದ್ದುಕೊಳ್ಳುತ್ತೇವೆ
ಒಂದೇ ಚಾದರ್ !

ಅಕಬರ ಅಲಿಯವರ ಚೇತನ, ಭ್ರಷ್ಟತೆ, ಢಂಬಾಚಾರಗಳಿಗೆ ಹೇಸಿ ಪ್ರತಿಕ್ರಿಯಿಸಿದೆ. ಇಂಥಹ ಕಡೆಗೆ ಸೂಕ್ಷ್ಮವಾದ ಒಳನೋಟಗಳನ್ನು ಚುಟುಕುಗಳ ರಚನೆಯಲ್ಲಿ ಕಾಣಲು ಸಾದ್ಯವಾಗಿದೆ.

ಗಾಳಿಯೂದುವ ಮುದುಕ ಮನೆಯಲ್ಲಿ ಇರುವತನಕ
ಝುಗ ಝುಗ ಜ್ವಲಿಸಿತ್ತು ಅಗ್ನಿಕುಂಡ
ಮನೆ ಹಿರಿಯ ಮರೆಯಾದ ಕ್ಷಣದಿಂದ ನರಳಿತ್ತು
ಬಿಳಿ ಬೂದಿಯಡಿಯಲ್ಲಿ ಬೆಂಕಿ-ಕೆಂಡ.

ಗಾಂಧಿಯೋತ್ತರ ಭಾರತದ ಅವನತಿಯ, ಹತಾಶ ಚಿತ್ರ ಇದು. ಹಾಸ್ಯಭರಿತವಾದ ಈ ಚುಟುಕುಗಳಲ್ಲಿ ಹರಿತವಾದ ಸಾಮಾಜಿಕ ಚಿಂತನೆಯಿದೆ. ಅವು ಜನರನ್ನು ವೈಚಾರಿಕತೆಗೆ ಹಚ್ಚುತ್ತವೆ. ಕೋಡು ಬೋಜಶೆಟ್ಟಿಯವರು 'ಉಡುಪಿ ಕೃಷ್ಣ' ಮಾಡಿದ ಪರಿಣಾಮವನ್ನು ನೋಡಿರುವ ಕಣ್ಣೇ ಬೇರೆ.

ನಿನ್ನ ಹೆಸರಲ್ಲಿ ಇಡ್ಲಿ ದೋಸೆ ಮಾರಿ
ಇಡೀ ಇಂಡಿಯಾವನ್ನು
ಗಡದ್ದಾಗಿ ದೋಚಿದ್ದೇವೆ ನಾವು.

ಈ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಶೋಷಣೆ ಸಾಗಿರುವುದೆಂಬುದರ ಬಗೆಗೆ ಕವಯಿತ್ರಿಯರು ಕಳವಳ ವ್ಯಕ್ತಪಡಿಸಿದ್ದಾರೆ.

'ಬೇವಿನಂಥವ ನೀನು 'ಮಾವಾ'ಗುವೆಯೆಂದು
ನನ್ನವ್ವ ನಂಬಿದ್ದು ಹುಸಿಯಾಯಿತು'
ರಾತ್ರಿ ರಾಣಿಯರೇ
ಇರುಳು ಮಿನುಗಿದ್ದು ಸಾಕು
ನನ್ನ ಹಗಲನ್ನೂ
ಕಸಿದುಕೊಳ್ಳುವ ಹುನ್ನಾರ ಬೇಡ'

ಎಂದು ಲಲಿತಾನಾಯಕರೆಂದರೆ, ಸ್ತ್ರೀವಾದವನ್ನು ಪ್ರತಿನಿಧಿಸುವ ವಿಜಯಾ ದಬ್ಬೆಯವರು ಸ್ತ್ರೀಶೋಷಣೆ ಹಾಗೂ ವೈಚಾರಿಕ ಚಿಂತನೆಯನ್ನು ಇಲ್ಲಿ ಎತ್ತಿತೋರಿಸಿದ್ದಾರೆ.

ಶೇಷಶಾಹಿಯ ಕಾಲ ಬುಡದಲ್ಲಿ
ಕೂರಲಿಕ್ಕಷ್ಟೆ ಹುಟ್ಟಿದೆವೆ?

ಎಂಬ ಪ್ರಶ್ನೆ ಇತ್ತಿದ್ದಾರಲ್ಲದೆ, ಕಚೇರಿಯ ಸಿಬ್ಬಂದಿಯೋರ್ವಳು ಪರಪುರುಷನೊಂದಿಗೆ ಸಲ್ಲಾಪಿಸಿದ್ದಕ್ಕೇ ಆಕ್ಷೇಪಿಸಿದ ನಿರ್ದೇಶಕರು 'ಇದು ಸರಿಯೇನ್ರಿ' ಎಂದು ದಬಾಯಿಸಿ, ನಂತರ ಮುಕ್ತ ಲೈಂಗಿಕತೆಯ ಬಗ್ಗೆ ಮಾತನಾಡುವಾಗ 'ಅದು ಮೋರ್ ಹ್ಯೂಮನ್ ' ಎಂಬ ದ್ವಂದ್ವ ನೀತಿಯನ್ನು ನಿಶ್ಚಿತವಾಗಿ ಟೀಕಿಸುತ್ತಾರೆ. 'ಮಸಿಯ ಜತೆಗೆ ಬೂದಿಯಾಗುವ' ಅನ್ನಪೂರ್ಣೆಯ ಅಸಹಾಯಕತೆಗೆ ಮರುಗುತ್ತಾರೆ. ಸಮಕಾಲೀನ ಇಂತಹ ಘಟನೆಗಳನ್ನು ಚುಟುಕುಗಳ ಮೂಲಕ ಅಭಿವ್ಯಕ್ತಿಸಿದ್ದಾರೆ.

ಚುಟುಕುಗಳ ಮುಖ್ಯ ಉದ್ದೇಶ ಹಾಸ್ಯ ಮತ್ತು ವಿಡಂಬನೆ. ಅದು ಕನ್ನಡ ಸಾಹಿತ್ಯದಲ್ಲಿ ಈಗಂತೂ ತುಂಬ ಜನಪ್ರಿಯವಾಗಿದೆ. ಇದು ಶೃಂಗಾರರಸದ ಅಭಿವ್ಯಕ್ತಿಗೂ ಪ್ರಧಾನ ಮಾಧ್ಯಮವಾಗಿವೆ. ಚುಟುಕುಗಳಲ್ಲಿನ ಹಾಸ್ಯ ವಿಡಂಬನೆಗಳು ಸಾಮಾಜಿಕ, ರಾಜಕೀಯ ಇಲ್ಲವೇ ಆರ್ಥಿಕವಾಗಿರಬಹುದು. ಅವು ಯಾವ ಬಗೆಯ ಚುಟುಕುಗಳೇ ಆಗಿರಲಿ, ಅವು ಸುಲಭ ಗ್ರಾಹ್ಯವಾಗಿದ್ದು ಸಾಮಾನ್ಯ ಮನುಷ್ಯನಿಗೆ ನಿಲುಕುವಂತಿರುವುದರಿಂದಲೇ, ಅವು ತುಂಬಾ ಜನಪ್ರಿಯವಾಗಿವೆ. ಚುಟುಕುಗಳತ್ತ ಕನ್ನಡಿಗರ ಗಮನಸೆಳೆದು, ಅವನ್ನು ತುಂಬಾ ಜನಪ್ರಿಯಗೊಳಿಸಿದ ಕೀರ್ತಿ ಚುಟುಕು ಬ್ರಹ್ಮರೆಂದು ಖ್ಯಾತನಾಮರಾದ ದಿವಂಗತ ಶ್ರೀ ದಿನಕರ ದೇಸಾಯಿಯವರಿಗೆ ಸಲ್ಲಬೇಕು. ಅವರಂತೆ ೧೯೭೦ರ ದಶಕದಲ್ಲಿ ತುಂಬಾ ಜನಪ್ರಿಯರಾದ ಚುಟುಕು ಬರಹಗಾರರಲ್ಲಿ ಶ್ರೀ ದಿನಕರ ದೇಸಾಯಿ, ಶ್ರೀ ಅಕಬರ ಅಲಿ ಮತ್ತು ಶ್ರೀ ವಿ.ಜಿ.ಭಟ್ಟರವರು ಪ್ರಮುಖರಾದವರು. ದಿನಕರ ದೇಸಾಯಿಯವರ ರಾಜಕೀಯ ಹಾಸ್ಯದಿಂದ ಕೂಡಿದ ಈ ಕೆಳಕಂಡ ಚುಟುಕುಗಳು ಗಮನಾರ್ಹ.

ಇವರ ಸಮತಾವಾದ

ಇವರ ಸಮತಾವಾದ ಗಾಳಿಯಲ್ಲಿ ಘೋಷ
ಎಷ್ಟು ದಿನ ನಡೆಯುವುದು ಈ ಹಗಲವೇಷ?
ಕೊನೆಗೊಮ್ಮೆ ಮೈ ತುಂಬ ಬರುವನಕ ಬೆವರು
ಕೈಲಿ ಚಪ್ಪಲಿ ಹಿಡಿದು ಹೊಡೆಯುವರು ಜನರು

ನಮ್ಮೂರ ವ್ಯಾಪಾರಿ

ನಮ್ಮೂರ ವ್ಯಾಪಾರಿ ಸಿದ್ಧವೀರಪ್ಪ
ಮುಖ್ಯಮಂತ್ರಿಯ ತುಟಿಗೆ ಹಚ್ಚಿದನು ತುಪ್ಪ
ಇದರಿಂದ ಎಲ್ಲವೂ ಸರಿ ಹೋಗಿ ಕೊನೆಗೆ
ಕಾಳಸಂತೆಯ ಲಕ್ಷ್ಮಿ ಇವನ ಮನೆಯೊಳಗೆ

ಶ್ರೀ ವಿ.ಜಿ.ಭಟ್ಟರ ಚುಟುಕುಗಳು ತಿಳಿಹಾಸ್ಯಕ್ಕೆ ಪ್ರಸಿದ್ಧವಾದವುಗಳು. ಚುಟಕು ರಚನೆ ಭಟ್ಟರಿಗೆ ಕರಗತವಾಗಿರುವ ಕಲೆ. ನವಿರಾದ ತಿಳಿಹಾಸ್ಯ ಇವರ ವೈಶಿಷ್ಟ್ಯ. ದಿನಕರ ದೇಸಾಯಿಯವರ ಚುಟುಕುಗಳಲ್ಲಿರುವ ಚುಚ್ಚುವಂತಹ ಮೊನಚು ಇವರಲ್ಲಿಲ್ಲ.

ಹೆಂಡತಿಯ ಗೆಳತಿ

ಇವಳೇ ಉಮೆ ನನ್ನ ಗೆಳತಿ
ಬಾಲ್ಯದ ಹಳೇ ದೋಸ್ತಿ
ಪರಿಚಯ ಮಾಡಿರೆ ಮಡದಿಯು
ಎದೆಯ ಬಡಿತವು ಜಾಸ್ತಿ
ನನಗಾಯಿತು - ಉಮೆಗೂ ಸಹ
ಒಂಥರ ಹಣೆ ಬೆವರು
ಮಡದಿಗೆ ತಿಳಿಯದು ಪಾಪ
ಹಳೇ ಪ್ರೇಮಿಗಳಿವರು.

ವಿ.ಜಿ.ಭಟ್ಟರ ಚುಟುಕವನ್ನು ನೋಡಿ.

ಮುಂದೆ ಬಿತ್ತು

ಅವಳ ಹೆರಿಗೆಯ ಸಮಾರಂಭ ಈ ಹೊತ್ತು
ಮೂರು ಘಂಟೆಯ ಸುಮಾರಿಗೆ ಆಗಲಿತ್ತು
ಅಧ್ಯಕ್ಷತೆಗೆ ಮಾನ್ಯ ಬರಲಿದ್ದ ಗೊತ್ತು
ಬರಲಿಲ್ಲ, ಹೆರಿಗೆಯೂ ತುಸು ಮುಂದೆ ಬಿತ್ತು

ಇಂತಹ ಕಡೆಗಳಲ್ಲಿ ಭಟ್ಟರ ಪ್ರಭುದ್ಧತೆ ಎದ್ದುಕಾಣುತ್ತದೆ. ಸರಳ ಸಾಮಾಜಿಕ ಆಶಯಗಳನ್ನು ಹೊತ್ತಿರುವ ಇಂತಹ ಚುಟುಕುಗಳು ತುಂಬಾ ಯಶಸ್ಸನ್ನು ಸಾಧಿಸಿವೆ. ಹಾಸ್ಯಮಯವಾದ ಚುಟುಕು ರಚನೆಯಲ್ಲಿ ಖ್ಯಾತ ಕವಿ ಅಕಬರ ಅಲಿಯವರು ಸಿದ್ಧಹಸ್ತ.

ನಮ್ಮ ಹುಡುಗ

ನಮ್ಮ ಹುಡುಗನಿಗೆ ಸೈಕಲ್ ಎಂದರೆ
ಬಡಕೊಳ್ಳುವುದ್ಯೆ ಭೂತ
ಹತ್ತಿ, ಪೆಡಲನೊತ್ತಿಬಿಟ್ಟಾನೋ
ಧಾಳಿಗೆ ಹೊರಟಿಹ ಯಮದೂತ.

ಭಾರತದ ಸ್ವಗತ

ಜನಕ್ಕಲ್ಲದಿದ್ದರೂ ಮನಕಂಜಿ
ನಾನಿದ್ದರೂ ಮೌನವ ತಾಳಿ
ದಿನವೂ ದೋಷಾರೋಪಿಸಿ ಕುಸ್ತಿಗೆ
ಕರೆವಳು ನೆರೆಮನೆ ಗಯ್ಯಾಳಿ.

ಸರಳ ಹಾಗೂ ಲಲಿತವಾದ ಶೈಲಿಯಲ್ಲಿರುವ ಶಂ.ಗು.ಬಿರಾದಾರರ ಚುಟುಕುಗಳು ಉಲ್ಲೇಖಾನಾರ್ಹ. ಇವರ ಚುಟುಕುಗಳಲ್ಲಿ ಶಿಶುಪ್ರಾಸಗಳ ಸೊಗಡಿದೆ, ಆಡುನುಡಿಯ ಸೊಗಸಿದೆ.

ತ್ಯಾಗಿ

ಪುಣ್ಯವಂತರ ಸಾಲಿನಲ್ಲಿ ಕುಳಿತಿರುವಂಥ
ರಾಜಕಾರಣಿಯನು ಕೇಳಿದನು ಯಮದೂತ
ಮಾಡಿರುವೆ ಹೇಳಯ್ಯಾ ನೀನಾವತ್ಯಾಗ?
ಎನಲು ಹೇಳಿದನವರು "ಬರಿ ಪಕ್ಷತ್ಯಾಗ"

ಏನೇನು ಬೇಕು

ಲಾಟರಿಯ ಟಿಕೆಟ್ ಕೊಂಡಿಹೆನು ನೀರೆ
ಅದಕಾಗಿ ತಂದಿಲ್ಲ ಹಬ್ಬಕ್ಕೆ ಸೀರೆ
ಬಹುಮಾನ ದೊರೆತಾಗ ಏನೇನು ಬೇಕು?
ಈಗಿನಿಂದಲೇ ಲೆಕ್ಕವನು ಹಾಕು.

ಸಾಮಾನ್ಯ ಜನರ ದಿನನಿತ್ಯದ ಬವಣೆಯನು ಗಮನಿಸಿ, ಸಂವೇದಿಸುವ ಅಕಬರ ಅಲಿ ಹೀಗೆ ಹೇಳುತ್ತಾರೆ.

ಇಲ್ಲ-ಸಲ್ಲ!

ಪ್ಯಾಟಿಯೊಳಗೆ ಅಕ್ಕಿ ಜೋಳ ಸಕ್ಕರೀ
ಚಿಮಣಿ ಎಣ್ಣೆ ಇಲ್ಲ
ಸರಕಾರಕೋ ಕಿವಿಕಣ್ ವ್ಯಾಪಾರಿಗೋ
ಹೃದಯವೆಂಬುದಿಲ್ಲ - ಜನರೊದ್ದಾಟ ಹೇಳಸಲ್ಲ.

ಈ ಚುಟುಕುಗಳಿಗೆ ಗದ್ಯಾತ್ಮಕ ತಾರ್ಕಿಕತೆಯ ಸಂಬಂಧವಿದೆ. ಬಿ.ಆರ್.ಲಕ್ಷ್ಮಣರಾಯರ ಚುಟುಕು ರಚನಾ ಶೈಲಿ ಅದ್ವಿತೀಯ. ಮೂರ್ಖತನದಲ್ಲಿ ಹಳೆಯ ಸಂಪ್ರದಾಯಗಳಿಗೆ ಜೋತು ಬೀಳುವವರ ಬಗೆಗೆ ಅವರ ಲೇಖನ ತುಂಬಾ ತೀಕ್ಷ್ಣವಾದದ್ದು ಹಾಗೂ ತಿಳಿಹಾಸ್ಯದಿಂದ ಕೂಡಿದ್ದು.

ಶಾಸ್ತ್ರ

ಡೈನಿಂಗ್ ಟೇಬಲ್ ಮೇಲಿನ
ಸ್ಟೀಲ್ ತಟ್ಟೆಗೆ
ಪರೀಕ್ಷಿಸಿ ಚಿತ್ರಾಹುತಿಯಿಟ್ಟು
ಅಪೋಶನ ಸ್ವೀಕರಿಸುವ
ಟೆರಿಲೀನ್ ನರಹರಿ
ನುಣುಪು ಕಾಂಕ್ರೀಟ್ ನೆಲದ
ಏಕಾಂತ ಮೂಲೆಯಲ್ಲಿ
ಪರಪರಕೆರೆದು
ನಿರಾಳ ಹೇತು ಬರುವ ಬೆಕ್ಕಿನಮರಿ.

ಒಂದೇ

ಪಂಚತಾರಾ ಹೋಟೆಲಿನಲ್ಲಿ
ಸ್ಕಾಚ್ ಕುಡಿದೋನು
ಕೊಳಗೇರಿಯ ಜೋಪಡಿಯಲ್ಲಿ
ಸೇಂದಿ ಕುಡಿದೋನು
ಬಿಕ್ಕಬಿಕ್ಕಿ ತೋಡಿಕೊಳ್ಳುವ
ಪಾಡು ಬೇರೆ ಬೇರೆ
ಭಾವ ಮಾತ್ರ ಒಂದೇ

ಶೃಂಗಾರರಸದ ಹಿತವಾದ 'ಲೇಪವಿರುವ ಚದುರಂಗರ ಚುಟುಕುಗಳು ತುಂಬಾ ಸೊಗಸಾಗಿದೆ. ಅಭಿವ್ಯಕ್ತಿಯ ನಿರ್ದಿಷ್ಟತೆ ಮತ್ತು ಸಂಯಮದ ಅಭಿವ್ಯಕ್ತಿ ಕಡೆಗೆ ಕವಿ ಸಾಕಷ್ಟು ಗಮನಹರಿಸಿದ್ದಾನೆ.

ಮರದ ಪರಿತಾಪ

ಬುಡದಲಿ ಕುಳಿತ ಪ್ರೇಮಿ
ಸುಂದರಿಯನ್ನು ಚುಂಬಿಸಿದಾಗ
ಹೊಂಗೆಯಮರ 'ನಾನೂ
ಗಂಡಸಾಗಬಾರದಿತ್ತೇ' ಎಂದು ಪರಿತಪಿಸಿತು.

ನೆಪ

ಬೆಳುದಿಂಗಳ ರಾತ್ರಿ ಮಡದಿ
ಇನಿಯನನ್ನು ತಬ್ಬಿದಾಗ
ನಿದ್ದೆ ಬರುತ್ತಿದೆ
ಎಂದು ಹೊರಳಿದ

ತಾತ್ವಿಕ ಚಿಂತನೆಗೆ ದಾರಿ ಮಾಡುವ ತಿಳಿಹಾಸ್ಯದಿಂದ ಕೂಡಿದ ಶ್ರೀ ಕೃಷ್ಣ ಚೆನ್ನಂಗೋಡರ ಈ ಚುಟುಕವನ್ನು ನೋಡಿ

ನಿಮ್ಮಲ್ಲಿ ಪ್ರತಿಯೊಬ್ಬರೂ ಒಳ್ಳೆಯವರು
ಆದರೆ ನಿಮ್ಮ ನಿಮ್ಮ ಪಕ್ಕದಲ್ಲಿ ಕುಳಿತವರೆಲ್ಲಾ ಕೆಟ್ಟವರು
ಕುಳಿತವರೆಲ್ಲಾ ಕೆಟ್ಟವರು
ಎನ್ನುತ್ತಿದ್ದರು ತಮ್ಮ ಮೇಷ್ಟ್ರು
ನಾನು ಒಂದನೇ ತರಗತಿಯಲ್ಲಿದ್ದಾಗ
ಒಗಟಿನಂತಹ ಅವರ ಮಾತು
ದಿನಗಳೆದಾತೆ ಹೆಚ್ಚು
ಹೆಚ್ಚು ಅರ್ಥವಾಗುತ್ತಿದೆ.

ಚುಟುಕು ರಚನೆಯೆಂಬುದು ಅತ್ಯಂತ ತೀಕ್ಷ್ಣವಾದ ಬೌದ್ಧಿಕ ಚುಟುಕಾದರೆ, ಆ ತೀಕ್ಷ್ಣತೆ ತನಗೆ ಸಿಕ್ಕ ಹೊಸ ಹೊಸ ರೂಪಗಳಲ್ಲಿ ಪ್ರಕಟವಾಗಿದೆ. ಬದುಕಿನ ನೋವು ನಲಿವುಗಳನ್ನು ತಾತ್ವಿಕ ಚೌಕಟ್ಟಿನಲ್ಲಿ ಕವಿ ಹೆಣೆದಿದ್ದಾನೆ. ಚಿಂತನಶೀಲವಾದ ನಗೆ ಚುಟುಕಗಳಿಗೆ ಇನ್ನೊಂದು ಹೆಸರು ಡಾ.ಪಿ.ಎಸ್.ರಾಮಾನುಜಂ.

ಜ್ಞಾನ

ತನಗೇನೂ ತಿಳಿದಿಲ್ಲ
ಎಂಬ ಜ್ಞಾನ
ಜ್ಞಾನಿಯ ಜ್ಞಾನ

ಆಗಿರಬೇಕೇ ವಿನಾ
ಅಜ್ಞಾನಿಯ ಜ್ಞಾನವಲ್ಲ.

ಸಂಬಂಧ

ಸತಿಯು ತನ್ನರ್ಧವೆಂದು
ಭಾವಿಸಬೇಕಾದ ಪತಿಗಳೆಲ್ಲಾ
ಸತಿಯ 'ಅರ್ಥ' ತನ್ನದೆಂದು
ಭಾವಿಸುವ ಪತಿಗಳಾಗಿರುವುದು
ಸತಿಪತಿಯ ಸಂಬಂಧವನ್ನು
'ಅರ್ಥ'ವತ್ತಾಗಿಸಲು ಮಾತ್ರ

ವ್ಯಾಕರಣ ಉವಾಚ

ನಾನು
'ಉತ್ತಮ ಪುರುಷ'
ನಾನೇನು ಮಾಡಲಿ
ವ್ಯಾಕರಣವೇ
ಹಾಗೆ ಹೇಳುತ್ತದೆಯಲ್ಲಾ!

ಈ ಕವಿಗೆ ಪದಗಳ ಅರ್ಥವಿನ್ಯಾಸದ ಕಲ್ಪನೆ ಸೊಗಸಾಗಿದೆ. ಚುಟುಕು ರಚನೆಯಲ್ಲಿ ಪದಲಾಲಿತ್ಯಕ್ಕೆ ಹೆಸರಾದ ಶ್ರೀ ಡುಂಡೀರಾಜರು ತಮ್ಮ ಕ್ಷೇತ್ರದಲ್ಲಿ ಅದ್ವಿತೀಯರು. ಇತ್ತೀಚಿನ ಚುಟುಕುವಿನ ಚಮತ್ಕಾರವನ್ನು ನೋಡಿ.

ಊಟ ಆಟ

ಊಟ-ಅಂದ್ರೆ
ನೆನಪಾಗುತ್ತೆ
ತಂದೂರಿ ಚಿಕನ್
ಆಟ ಅಂದ್ರೆ
ನೆನಪಾಗುತ್ತೆ
ತೆಂಡೂಲ್ಕರ್ ಸಚಿನ್

ನಮ್ಮವರು

ನಮ್ಮವರು
ಬಾಲು

ತಡೆಯಲು ಬೀಳುವುದಿಲ್ಲ
ಯಾಕೆಂದರೆ
ಹಾಗೆ ಬಿದ್ದರೆ
ಏಳುವುದಿಲ್ಲ

ಶ್ರೀ ನಾರಾಯಣ ರಾಯಚೂರರ ಹನಿಗವನಗಳೂ ತಿಳಿಹಾಸ್ಯಕ್ಕೆ ಪ್ರಸಿದ್ಧವಾಗಿವೆ. ಭಾಷೆ ಮತ್ತು ಸಂವೇದನ ಎರಡರ ದೃಷ್ಟಿಯಿಂದಲೂ ಇವರ ಚುಟುಕುಗಳು ಗಮನಾರ್ಹವಾಗಿವೆ. ಉದಾಹರಣೆಗೆ ಈ ಮುಂದಿನ ಹನಿಗವನವನ್ನು ನೋಡಿ.

ಗ್ರಹಣ

ಭೂಮಿಸೂರ್ಯರ ನಡುವೆ ಚಂದ್ರ ಬಂದರೆ
ಸೂರ್ಯಗ್ರಹಣ
ಸೂರ್ಯಚಂದ್ರರ ನಡುವೆ ಭೂಮಿ ಬಂದರೆ ಚಂದ್ರಗ್ರಹಣ
ವಧುವರರ ನಡುವೆ ಪುರೋಹಿತ ಬಂದರೆ
ಪಾಣಿಗ್ರಹಣ

ಬೃಹತ್ತಾದ ಸಾಹಿತ್ಯದ ರಸದೌತಣಕ್ಕೆ ಬಂದಿರುವ ರಸಿಕರಿಗೆ ಚುಟಕಗಳು 'ರುಚಿ ಮತ್ತು ಕಾರಕಗಳಂತೆ' ಇರುತ್ತವೆ, ಹಿತಮಿತವಾಗಿ ರುಚಿ ಮತ್ತು ಕಾರಕಗಳನ್ನು ಸೇವಿಸಿದಾಗ ಮಾತ್ರ ಮುಖ್ಯ ಭೋಜನವನ್ನು ತೃಪ್ತಿಕರವಾಗಿ ಸವಿಯಬಹುದು. ರುಚಿ ಮತ್ತು ಕಾರಕಗಳ ಮಿತಿ ಮೀರಿದ ಸ್ವೀಕಾರ ಮುಖ್ಯ ಬೋಜನದ ಸ್ವೀಕಾರಕ್ಕೇ ಸಂಚಕಾರವಾಗುವ ಸಾಧ್ಯತೆಯನೆಂದಿಗೂ ಮರೆಯಬಾರದು.

ಸಾಮಾಜಿಕ ಚಿಂತನೆ ಚುಟುಕುಗಳ ಉದ್ದೇಶಗಳಲ್ಲಿ ಒಂದಾಗಿದೆ. ಇಡೀ ಚುಟುಕು ಸಾಹಿತ್ಯ ಸಾಮಾಜಿಕ ಚಿಂತನೆಯ ನೆಲೆಯಲ್ಲಿ ಹಾಗೂ ಸಾಮಾಜಿಕ ಚೌಕಟ್ಟಿನಲ್ಲಿ ಸೃಷ್ಟಿಗೊಂಡಿದೆಯೆಂದರೆ ಅಚ್ಚರಿಪಡಬೇಕಾಗಿಲ್ಲ. ಆಡು ಮುಟ್ಟದ ಗಿಡವಿಲ್ಲ ಚುಟುಕು ನಿರೂಪಿಸಲಾರದ ಸಾಮಾಜಿಕ ವಿಷಯ ಸಂಗತಿಗಳೇ ಇಲ್ಲವೆನ್ನಬಹುದು. ಚುಟುಕು ಕವಿ, ತನಗಿರುವ ಲೌಕಿಕ ಅನುಭವವನ್ನು ಬೀಜದಲ್ಲಿ ಮರವು ಹುದುಗಿಕೊಂಡಿರುವಂತೆ, ತನ್ನ ಚುಟುಕುಗಳಲ್ಲಿ ಹುದುಗಿಸಿದ್ದಾನೆ. ಸಮಾಜದ ಅಂಕು-ಡೊಂಕು, ಏರು-ಪೇರುಗಳನ್ನು ಕಂಡು ವಿಡಂಬಿಸಿದ್ದಾನೆ, ವಿಮರ್ಶಿಸಿದ್ದಾನೆ. ಚುಟುಕು ಕವಿ ಸಮಾಜ ಶಾಸ್ತ್ರಜ್ಞನ ಚಿಕಿತ್ಸಕ ಬುದ್ಧಿಯನ್ನು ಪಡೆದವನಾದುದರಿಂದ, ಸಮಾಜದ ಎಲ್ಲವನ್ನೂ, ಎಲ್ಲರನ್ನೂ ಪರಿಶೀಲಿಸುವ ಸಾಮಾಜಿಕ ಚಿಂತಕನೆನಿಸಿದ್ದಾನೆ. ಚುಟುಕು ನಮ್ಮ ಸಮಾಜವನ್ನು ಹೂವಿನ ಹಾಸಿಗೆ, ಸುಂದರ ಸ್ವಪ್ನವೆಂದು ಭಾವಿಸಿದಂತಿಲ್ಲ. ನಾಡಿನಲ್ಲಿಯ ಕಾಡುಮೃಗಗಳ ಶೋಷಣೆ, ದೌರ್ಜನ್ಯ, ದುರಾಸೆ, ವಂಚನೆ, ಪ್ರತ್ಯೇಕತೆ, ಭ್ರಷ್ಟಾಚಾರ ಮುಂತಾದುವನ್ನು ಚುಟುಕು ತದ್ವತ್ತಾಗಿ ಚಿತ್ರಿಸಿವೆ. ಬಡತನ, ಹಸಿವು, ಲೈಂಗಿಕ ತೃಷೆ, ಅಂಧಾನುಕರಣೆಗಳ ವಾಸ್ತವ ಚಿತ್ರವನ್ನು

ಮಾರ್ಮಿಕವಾಗಿ ನೀಡಿವೆ. ಈ ಎಲ್ಲ ಸಾಮಾಜಿಕ ವಿಷಯವನ್ನು ದೇಸೀ ಭಾಷೆಯಲ್ಲಿ ಅಭಿವ್ಯಕ್ತಿಸಿದ್ದರಿಂದ ಚುಟುಕು ಅತ್ಯಂತ ತೀವ್ರವಾಗಿ ಓದುಗರ ಹೃದಯವನ್ನು ಮುಟ್ಟಿವೆ. ತಟ್ಟಿನೆ. ಸಾಮಾಜಿಕ ಅಥವಾ ಸಾಂಸ್ಕೃತಿಕ ಮೌಲ್ಯಗಳು ಮತ್ತು ಆದರ್ಶಗಳು; ಅನುಕಂಪ, ಸಹೃದಯತೆ, ಸಹನಶೀಲತೆ ಮೊದಲಾದ ಸಾಮಾಜಿಕ ನೀತಿ ವಿಚಾರಗಳು ಹಾಗೂ ಸಾಮಾಜಿಕ ಜೀವನದ ಮುಖ್ಯ ಅಂಗ ರಾಜಕೀಯ ವಾತಾರವಣ- ಈ ನೆಲೆಯಲ್ಲಿ, ಚುಟುಕುಗಳ ಸಾಮಾಜಿಕ ಚಿಂತನೆಯನ್ನು ಪರಿಶೀಲಿಸಬಹುದು.

ಮಳೆಗಾಲದಲ್ಲಿ ನಾಯಿಕೊಡೆಗಳು ಹುಟ್ಟಿಕೊಳ್ಳುವ ಹಾಗೆ, ಇಂದು ಸಮಾಜದಲ್ಲಿ ಸ್ವಾಮಿಗಳು (ಸನ್ಯಾಸಿಗಳು) ಲೆಕ್ಕವಿಲ್ಲದಷ್ಟು ಹುಟ್ಟಿಕೊಂಡಿದ್ದಾರೆ. ಯಾವ ಪದವಿ, ಅಧಿಕಾರ ಬಯಸದ ಕಿಂಕರನಾಗಿ ಬಾಳಿಹೋದ ಬಸವಣ್ಣನ ಭಕ್ತರು ತಾವೆಂದು ಎದೆ ಎದೆ ಬಡಿದುಕೊಳ್ಳುವ ಈ ಸನ್ಯಾಸಿಗಳೆಲ್ಲರಿಗೂ ಜಗತ್ತಿಗೇ ಗುರುಗಳಾಗುವ ವಿಪರೀತ ಆಸೆ, ದುರಾಸೆ, ಪಲ್ಲಕ್ಕಿಯಲ್ಲಿ ಕುಳಿತು ಮೆರೆಯುವ ಈ ವಿಲಾಸಿಗಳ ಆಸೆಗೆ ಅಂತ್ಯವೇ ಇಲ್ಲ. ಇದು ಅವರ ಸ್ವಾರ್ಥ. ಇದನ್ನು ದೃಷ್ಟಾಂತದ ಮೂಲಕ ವ್ಯಂಗ್ಯವಾಗಿ ಈ ಚುಟುಕು ಧ್ವನಿಸಿದೆ.

ನಾಡಿನ ತುಂಬಾ ನೂರು ಜಗದ್ಗುರು
ಇರುವುದು ಜಗವೊಂದೇ
ಕಾಡಿನ ತುಂಬಾ ಬಣ್ಣದ ಹೂಗಳು
ವಾಸನೆ ಕೆಲವೊಂದೇ - ಜಗದ್ಗುರು - ಕಣವಿ ಚೆನ್ನವೀರ

ಕಾಡಿನ ತುಂಬಾ ಹೂಗಳಿರುತ್ತವೆ. ಅವೆಲ್ಲಕ್ಕೂ ವಾಸನೆ ಇರುವುದಿಲ್ಲ. ಒಂದೋ ಎರಡಕ್ಕೋ ಇರಬಹುದು. ಅಂತೆಯೇ ನಾಡಿನ ತುಂಬ ನೂರಾರು ಸ್ವಾಮಿಗಳಿರುತ್ತಾರೆ. ಅವರಲ್ಲಿ ನಿಜವಾದ ಯೋಗ್ಯತೆಯುಳ್ಳವರು ಜಗದ್ಗುರುಗಳಾಗಲಿಕ್ಕೆ ಒಬ್ಬರೋ ಇಬ್ಬರೋ ಅಷ್ಟೇ. ಹೀಗಿರುವಾಗ ಇರುವ ಜಗವೊಂದರಲ್ಲಿ 'ಜಗದ್ಗುರು' ಒಬ್ಬನಿಗೇ ಅಥವಾ ಉಪಜಗದ್ಗುರು ಎಂದು ಇಬ್ಬರಿಗೆ ಅವಕಾಶ ಕೊಡಬಹುದು. ಉಳಿದವರು ಸಾಮಾನ್ಯ ಸನ್ಯಾಸಿಗಳಾಗಿ ಉಳಿಯಬೇಕು.

ಆದರೆ ಪರಿಸ್ಥಿತಿ ಹೀಗಿಲ್ಲ. ಅಧಿಕಾರದ ದಾಹ ಹೆಚ್ಚಾದ ಸ್ವಾಮಿಗಳು ಹುಚ್ಚು ಹವ್ಯಾಸಕ್ಕೆ ಬಲಿಬೀಳುತ್ತಿದ್ದಾರೆ. ಸ್ವಾಮಿಗಳ ಸ್ವಾರ್ಥವನ್ನು ತುಂಬ ಮಾರ್ಮಿಕವಾಗಿ ಈ ಚುಟುಕು ವಿಡಂಬಿಸಿದೆ. ಸಮಾಜಕ್ಕೆ ಮಾರ್ಗದರ್ಶಿಯಾದ ಗುರುಗಳೇ ಸ್ವಾರ್ಥಕ್ಕೆ ಬಲಿಯಾದರೆ, ಸಾಮಾನ್ಯರ ಪಾಡೇನು? ಎಂಬುದರ ಕಡೆಗೂ ಈ ಚುಟುಕು ಬೆಳಕು ಚೆಲ್ಲುತ್ತದೆ. ವಿಚಾರಿಸಿದಷ್ಟು ಅರ್ಥಸ್ಫುರಿಸುತ್ತಲೇ ಹೋಗುತ್ತದೆ. ಇಡೀ ಚುಟುಕು ಧ್ವನಿಪೂರ್ಣವಾಗಿರುವುದರಿಂದ, ಅರ್ಥ ಪರಂಪರೆಯೇ ಇಲ್ಲಿದೆ. ಈ ಬಗೆಯ ಚುಟುಕು ಎಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತ.

ಒಂದು ಕಡೆ ದೀನದಲಿತರಿಗೆ ಹೊಟ್ಟೆತುಂಬ ಊಟವಿಲ್ಲ; ಅರೆ ಹೊಟ್ಟೆ ಊಟ. ಇನ್ನೊಂದೆಡೆ ಸರ್ವಸಂಗ ಪರಿತ್ಯಾಗಿಗಳೆಂಬ ಸೋಗು ಹಾಕಿದ, ಚಿನ್ನದ ಕಿರೀಟದ ಜಗದ್ಗುರುಗಳ ವೈಭವೋಪೇತ ಜೀವನ ಮೆರವಣಿಗೆ, ಇಂದೂ ನಡೆದುದು ಅದೆಂಥ ವಿಪರ್ಯಾಸ. ಜನ ಇದಕ್ಕೆ ಅವಕಾಶ ಕೊಟ್ಟುದು ಅದೆಂಥ ಮೌಢ್ಯ? ಮೂರ್ಖತನ ಸಮಾಜಕ್ಕೆ.

ಆಡೆ : ನೀನು ಮುಟ್ಟದಿರುವ
ಗಿಡವೇ ಇಲ್ಲ ಅಂತೆಯೇ
ನೋಡು : ನಾವು ಕಟ್ಟುತ್ತಿರುವ
ಸಂಸ್ಥೆಯಲ್ಲ ಸಂತೆಯೇ 'ಸಂಸ್ಥೆಸಂತೆ' - ಕಣವಿ

ಸಾಮಾಜಿಕ ಸಂದರ್ಭದ ಕಟುವಾಸ್ತತೆಯನ್ನು ಈ ಚುಟುಕು ತಿಳಿಸುತ್ತದೆ. ನಮ್ಮಷ್ಟಕ್ಕೆ ನಾವೆಲ್ಲ ಸರ್ವಜ್ಞರೆಂದೇ ತಿಳಿದಿದ್ದೇವೆ. ನಿಜವಾದ ವಿದ್ವತ್ತು, ಪಾಂಡಿತ್ಯ, ಯೋಗ್ಯತೆ ಇಲ್ಲದವರು ಎಲ್ಲವನ್ನೂ ಬಲ್ಲೆವು ಎಂಬ ಜಂಬ ಕೊಚ್ಚಿಕೊಳ್ಳುತ್ತಿದ್ದೇವೆ. ಅರ್ಧಮರ್ಧ ಓದಿ ಎಲ್ಲವನ್ನೂ ತಿಳಿದವರೆನ್ನುವ ಹವ್ಯಾಸ ಹೆಚ್ಚಿಸಿಕೊಳ್ಳುತ್ತಿದ್ದೇವೆ. ಹೀಗಾಗಿ ನಿಜವಾದ ಸರಸ್ವತಿ ಆರಾಧಕರು ಜ್ಞಾನಿಗಳು ತುಂಬ ವಿರಳ. ಅಂತೆಯೇ ಅಯೋಗ್ಯರು, ಅಜ್ಞಾನಿಗಳು ಆದ ನಾವು ಕಟ್ಟುವ ಸಂಘ ಸಂಸ್ಥೆಗಳು ನಿಜವಾದುವು ಅಲ್ಲ. ಅವಕ್ಕೆ ಅರ್ಥವೂ ಇಲ್ಲ. ಬರೀ ಗದ್ದಲದ ಸಂತೆಗಳಾಗಿವೆ.

ಮೋಸ ವಂಚನೆ, ಭ್ರಷ್ಟಾಚಾರಗಳ ಆಗರವಾಗಿವೆ. ಒಟ್ಟಿನಲ್ಲಿ, ಅವಿವೇಕಿಗಳಾದವರು ಏನೆಲ್ಲ ಬಲ್ಲೆವೆಂಬ ಅಹಮಹಮಿಕೆಯಿಂದ, ಗೊತ್ತಿರುವ ಗೊತ್ತಿಲ್ಲದಿರುವ, ತಮ್ಮ ಸಾಮರ್ಥ್ಯಕ್ಕೆ ಅಳವಡಲಾರದ ಸಂಘ-ಸಂಸ್ಥೆಗಳನ್ನು ಕಟ್ಟತೊಡಗುವರು. ಅಂಥವರಿಂದ ನಿಜವಾದ ಸಂಸ್ಥೆಗಳು ಸೃಷ್ಟಿಗೊಳ್ಳಲಾರವು ಎಂಬ ಲೋಕಾನುಭವ ಈ ಚುಟುಕಿನಲ್ಲಿ ಬಿಂಬಿತವಾಗಿದೆ.

ಗೃಹಿಣಿಯಿಂದ ಗೃಹ. ನಮ್ಮ ಸಂಸ್ಕೃತಿಯಲ್ಲಿ ಗೃಹಿಣಿಗೆ ಮೇಲಾದ ಸ್ಥಾನವಿದೆ. ಸಮಾಜದಲ್ಲಿಯೂ ಅವಳಿಗೆ ಹಿರಿಯ ಸ್ಥಾನ. ಯಾವ ಸ್ತ್ರೀಗೂ ಇಲ್ಲದ ಗೌರವ ಇವಳಿಗೆ ನಮ್ಮ ಸಂಸ್ಕೃತಿ, ಸಮಾಜ ನೀಡಿದೆ. ತನ್ನ ಮನೆಯ ಉದ್ಧಾರದೊಂದಿಗೆ ಸಮಾಜವನ್ನು ಉದ್ಧರಿಸುವವಳು, ಸಂಸ್ಕೃತಿಯನ್ನು ಎತ್ತರಿಸುವವಳು ಈ ಗರತಿ. ಈ ಜಗದಲ್ಲಿ ಸಹಸ್ರಾರು ಹೂಗಳಿವೆ. ಎಲ್ಲ ಹೂವಿನಿಂದ ಮಧು, ಮಕರಂದ, ಪರಿಮಳ ದೊರೆದೀತೆ? ಹಾಗಾಗಿ ಈ ಗೃಹಿಣಿ ನೀರಮಡಿ, ಜೇನಸವಿ, ಗೀತಸುಧೆ' ಎಂದು ಚುಟುಕು ಪ್ರಕೀರ್ತಿಸಿದೆ.

ಏನ ಕುಡಿದರೆ ತಾನೆ ನೀರು ಕುಡಿದಂತಹುದು?
ಎಲ್ಲ ಹೂವಿನ ರಸಕು ಒಸರವುದೆ ಜೇನು?
ಏರುವುದು ಇಳಿಯುವುದು ಸ್ವರದ ತಾನಿನ ತಾನು
ನೀರ ಮಡಿ, ಜೇನಸವಿ, ಗೀತಸುಧೆ ನೀನು - ಗೃಹಿಣಿ - ಕಣವಿ

ಇಲ್ಲಿ ಚುಟುಕೊಂದರಲ್ಲಿ 'ಕೊಡೆ' ಶಬ್ದ ತುಂಬ ಚಮತ್ಕಾರಿಕವಾಗಿ ಪ್ರಯೋಗಗೊಂಡಿದೆ. ಕೊಡೆ-ಶ್ಲೇಷೆಯ ಮೂಲಕ ತಿಳಿ ಹಾಸ್ಯವನ್ನೂ ಉಂಟು ಮಾಡಿದೆ. ಇಲ್ಲಿ ಮಕ್ಕಳು ಅವರಿವರನ್ನು ಕೊಡೆ ಕೇಳುವುದು. ಅವರು ಕೊಡದೇ ಇದ್ದಾಗ, 'ಕೊಡದಿದ್ದರೆ ಬಿಡು' ಎಂದು ಸಿಟ್ಟು ಮಾಡುವುದು ಕೊನೆಗೆ ದೇವರ ಕೊಡೆ ನೆನಪಾಗಿ ಮನಸ್ಸಿಗೆ ಸಮಾಧಾನ ತಂದುಕೊಳ್ಳುವುದು, ಸಾಮಾಜಿಕ ಬದುಕಿನಲ್ಲಿ ಅದೆಷ್ಟು ನೈಜ ! ಆ ಚುಟುಕು ನೋಡಿ.

ನಾ ಕೊಡೆ, ನೀಕೊಡೆ, ಕೊಡದಿದ್ದರೆ ಬಿಡೆ
ಏರಿಸಿ ಹಿಡಿ, ನಡೆಯಾರ ಭಿಡೆ
ಬಿಸಿಲಿಗೆ ಕಾಯದೆ, ಮಳೆಯಲಿ ತೋಯದೆ
ಎಲ್ಲರ ಮೇಲಿದೆ ನೀಲ ಕೊಡೆ - 'ಕೊಡೆ' - ಚೆನ್ನವೀರ ಕಣವಿ.

ಕೊಡೆಯನ್ನು ಮೇಲಿಂದ ಮೇಲೆ ಕೇಳುವುದು ಕೊಡದಿದ್ದಾಗ ಬಿಡು ಎನ್ನುವುದು ಇದೆಲ್ಲ ಮಾನವ ಸಮಾಜದ ಅಸಹಕಾರ, ಅಸಮಾಧಾನಗಳನ್ನು ಸೂಚಿಸುತ್ತದೆ. ಅಷ್ಟರಲ್ಲಿಯೇ ದೇವನಿರ್ಮಿತ ನೀಲಿ ಬಣ್ಣದ ಕೊಡೆ(ಆಕಾಶ)ಯ ನೆನಪಾಗಿ ಸಮಾಧಾನಗೊಂಡು, ಉತ್ಸಾಹದಿಂದ 'ಏರಿಸಿ ಹಿಡಿ', ಗಡಿಯಾರ ಭಿಡೆ' ಎನ್ನುವುದರ ಜೊತೆಗೆ, ಬಿಸಿಲಿಗೆ ಕಾಯದ, ಮಳೆಯಲಿ ತೋಯದ, ಎಲ್ಲರ ಮೇಲಿನ ನೀಲಿ ಕೊಡೆಯನ್ನು ಕೊಂಡಾಡುವಷ್ಟು ಅರ್ಥಪ್ರತೀತಗೊಳ್ಳುತ್ತಲೇ ಹೋಗುತ್ತದೆ.

ಸ್ವಾತಂತ್ರ್ಯದಿಂದ ಸಮಾಜದಲ್ಲಿ ನೈತಿಕ ಅಧಃಪತನವಾದುದನ್ನು ಇಲ್ಲೊಂದು ಚುಟುಕು ಮಾರ್ಮಿಕವಾಗಿ ಚಿತ್ರಿಸಿದೆ.

"ನಾಡಿಗೆ ದೊರೆತಿಹ ಸ್ವಾತಂತ್ರ್ಯದ ಸವಿ
ಹತ್ತಿದ ಕೆಲವರಿಗೆ
ಎಡಗೈ ಬಲಗೈ ಬೆಚ್ಚಗೆ ಇಡದಿರೆ
ಕೊಡುವರು ಕಸಬರಿಗೆ - ಸ್ವಾತಂತ್ರ್ಯದ ಸವಿ" - ಚೆನ್ನವೀರ ಕಣವಿ.

ಲಂಚ ಕೊಡದಿದ್ದರೆ ಅಧಿಕಾರಿಗಳು ಕೆಲಸಕ್ಕೆ ಅಡೆತಡೆ ಒಡ್ಡುವರು ಅಥವಾ ಆ ಕೆಲಸ ಆಗದಂತೆ ಮಾಡುವರು. ಸ್ವಾತಂತ್ರ್ಯ ದೊರೆತು ಅರ್ಧ ಶತಮಾನ ಕಳೆದರೂ, ಅದರ ದುರುಪಯೋಗವಾಗುವುದು ಇನ್ನೂ ನಿಂತಿಲ್ಲದಿರುವುದು ನಾಚಿಗ್ಗೇಡು. ಹಾಗೆಯೇ ನೌಕರಿ ಮಾಡುವವರು ಲಂಚಕೋರರು-ಭ್ರಷ್ಟರು ಎನ್ನುವ ಪ್ರಸ್ತುತ ಸಾಮಾಜಿಕ ಸಂದರ್ಭದ ಕಟು ಸತ್ಯವನ್ನು ಕೆಳಗಿನ ಚುಟುಕು ಬಯಲಿಗೆಳೆದಿದೆ.

ನೌಕರಿಗೇರಲಿ ಅರಳಿತು ಆಸೆ
ಬೇಕೆಂದನು ಬರಿ ತುಪ್ಪದ ದೋಸೆ
ಕೈವಶನಾಗಲು ಮೇಲಿನ ಹುದ್ದೆ
ಎರಡೂ ಕೈಯಲಿ ಲಂಚದ ಮುದ್ದೆ - ದಿನಕರ ದೇಸಾಯಿ

ಹಗಲಿರುಳು ನೋಯುವುದು ಮೈ ಬೆನ್ನು ಮೂಳೆ
ಬಡತನದ ಸೂಳೆ ನಾ ಕಡೆತನಕ ಹಾಳೆ? - ದಿನಕರ ದೇಸಾಯಿ

ಇಲ್ಲಿಯ ಕೊನೆಯ ಸಾಲಿನಲ್ಲಿ ಕಾವ್ಯದ ಧ್ವನಿಯಿದೆ. ಇಲ್ಲಿಯ ಸೂಳೆ ಶ್ರೀಮಂತಳಲ್ಲ, ಬಡವಿ. ಇವಳಿಗೆ ಭದ್ರತೆಯೆಂಬುದೇ ಇಲ್ಲ. ಇವಳೊಂದು ಹಾಳೆ. ಅದರಲ್ಲಿ ಗೀಚುವವರೇ ಎಲ್ಲ; ಗೀಚಿ ಬಿಸಾಡುವವರೆ. ಆ ಅರಿವು ಈ ಸೂಳೆಗಿದೆಯಾದರೂ ಮಾಡುವುದೇನು? ಸೂಳೆ ಗರತಿಯಾಗಬಲ್ಲಳೇ? ಗರತಿಯಾದರೂ ನಮ್ಮ ಜನ ಒಪ್ಪೀತೆ? ನಮ್ಮ ಸಮಾಜ-ಸಂಸ್ಕೃತಿಯಲ್ಲಿ ಸೂಳೆಗಿರುವ ಸ್ಥಾನ ಇದು.

ಸಾಮಾಜಿಕ ಬದುಕಿನ ಅಸ್ವಸ್ಥ್ಯತೆಗೆ ಕಾರಣವಾದ ಜಾತಿಮೌಢ್ಯತೆಯಿಂದ ತುಂಬ ನೊಂದುಕೊಂಡ ಚುಟುಕು ಕವಿ, ಚಾತ್ಯಂಧರ ವಂಚಕ ಪ್ರವೃತ್ತಿಯನ್ನು ಹೀಗೆ ಹೊರಗೆ ಹಾಕಿದ್ದಾನೆ.

ಮಾತು ಎತ್ತಿದರೆ ಮತ-ಸಂಸ್ಕೃತಿ ರ
ಕ್ಷಕ ತಾನೆನ್ನುವ ಮುಠ್ಠಾಳ
ಹೊರಗೆ ಬಸಪ್ಪ, ಒಳಗೆ ಉಷಪ್ಪ
ಜಾತಿಗಳಲಿ ಹಚ್ಚುವ ಜಗಳ - ಜಾತಿವಾದಿ - ಎಂ.ಅಕಬರ ಅಲಿ

ರೇಷನ್ನಿನ ವ್ಯವಸ್ಥೆಯನ್ನು, ಅಲ್ಲಿ ನಡೆಯುವ ಭ್ರಷ್ಟಾಚಾರವನ್ನು, 'ಕ್ಯೂನಲ್ಲಿ ನಿಂತು ದಶಕೋಟಿ ಚಿಕ್ಕಿ ಎಣಿಸಿದೆ' ಎನ್ನುವ ಬಡವನ ವೇದನೆಯನ್ನು ಚುಟುಕು ಸೂಕ್ಷ್ಮವಾಗಿ ಗ್ರಹಿಸಿ, ಚಿತ್ರಿಸಿದೆ.

ಬೆಳದಿಂಗಳಲಿ ತಿಂದು ಬೇಕಷ್ಟು ಬೆಣ್ಣೆ
ಮನೆಯೊಳಗೆ ಒಗ್ಗರಣೆಗೂ ಇಲ್ಲ. ಎಣ್ಣೆ
ಇಡ್ಲಿಗೂ ಸಿಗಲಿಲ್ಲ ರೇಷನ್ನಿನಕ್ಕಿ
ಕ್ಯೂನಲ್ಲಿ ಎಣಿಸಿದೆನು ದಶಕೋಟಿ ಚಿಕ್ಕಿ - ದಿನಕರ ದೇಸಾಯಿ

ಇಲ್ಲಿನ ನಾಲ್ಕು ಸಾಲು ಸಾಲುಗಳು ಧ್ವನಿಪೂರ್ಣವಾಗಿವೆ. ರೇಷನ್ನಿಗಾಗಿ ಕ್ಯೂನಲ್ಲಿ ಕಾಯುತ್ತ ನಿಂತ-ಬಡಪಾಯಿಯ ಬಗೆಗೆ ಮರುಕ ಹುಟ್ಟದೆ ಇರದು. ವಿದ್ಯಾರ್ಥಿಗಳ ಅಶಿಸ್ತಿಗೆ ಹಿರಿಯರೇ ಕಾರಣವೆಂಬುದನ್ನು ಈ ಚುಟುಕು ಪ್ರಬಲವಾಗಿ ಸಮರ್ಥಿಸುತ್ತದೆ.

ಅರಿವಿನ ಹಂಬಲ ಶೀಲದ ಬೆಂಬಲ
ಶಿಸ್ತು ಇರದ ವಿದ್ಯಾರ್ಥಿಗಳು
ಎನ್ನುವ ಎಳೆಯರ ಜರೆಯುವ ಹಿರಿಯರೆ
ಅವರಲ್ಲದೆ ನಿಮ್ಮಯ ನೆರಳು? - ಎಂ.ಅಕಬರ ಅಲಿ

ಇಲ್ಲಿ ಕೊನೆಯ ಸಾಲಿನಲ್ಲಿ ಕಾವ್ಯದ ಧ್ವನಿಯಿದೆ. ಅದು ಅಗೆದಷ್ಟು ಅರ್ಥವನ್ನು ಸುರಿಸುತ್ತಲೇ ಹೋಗುತ್ತದೆ. ಚುಟುಕುಗಳು ಹಾಸ್ಯದಂತೆ ಗಂಭೀರ ಅರ್ಥಛಾಯೆಯನ್ನು, ಸಾಮಾಜಿಕ ಚಿಂತನೆಯನ್ನು

ಪುಟ್ಟಪುಟ್ಟ ಸಾಲುಗಳಲ್ಲಿ ಅಭಿವ್ಯಕ್ತಿಸುತ್ತವೆ. ಬಡವರಿಗೆ ಸಾಮಾನ್ಯವಾಗಿ ಮಕ್ಕಳು ಹೆಚ್ಚೆಂದು ಈ ಸಮಾಜ ಅಣಕಿಸುತ್ತದೆ. ಹೆಚ್ಚು ಮಕ್ಕಳು ಬಡವರಿಗೆ ಸಮಾಧಾನವನ್ನೂ ಹೇಳುತ್ತದೆ. ಇಲ್ಲೊಂದು ಚುಟುಕು. ಈ ಸಮಾಧಾನದ ಮಾತನ್ನು ಇಂದಿನ ನಾವು ಇದ್ದರೂ ಚುಟುಕು ಕವಿಯ ಮಾನವೀಯ ಅಂತಃಕರಣ ಮೆಚ್ಚುವಂಥದ್ದು.

ಬಡಮಾಸ್ತರರಿಗೆ ಕಾರಕೂನರಿಗೆ
ಮನೆಯ ತುಂಬ ಮಕ್ಕಳು ಎಂದು
ನಗುವನೆ ಯೋಚಿಸು, ಆ ಸುಖಕೊ ಅವ
ರೆರವಾದರೆ ಬದುಕುವೆಂದೆಂತು? - ಎಂ.ಅಕಬರ ಅಲಿ

ಕೊನೆಯ ಸಾಲು ಆಲೋಚಿಸುವಂಥದು. ಚುಟುಕು ಕವಿಯ ಪ್ರತಿಭೆ ಮಿಂಚಿದ್ದು ಈ ಸಾಲಿನಲ್ಲಿಯೆ. ನಮ್ಮ ಜನರ ಮೌಢ್ಯ-ಅಂಧಾನುಕರಣೆಯನ್ನು ಚುಟುಕುಗಳು ಲೇವಡಿ ಮಾಡುತ್ತವೆ. ಅವನ್ನು ಕೇಳಿದಾಗ ನಗು ಬರುತ್ತದೆ. ಆದರೆ ನಗುವವರು ಕೂಡ ಒಂದಿಲ್ಲ ಒಂದು ದೃಷ್ಟಿಯಿಂದ ಪಾರಂಪರಿಕ ನಂಬುಗೆಗಳನ್ನು ಇಟ್ಟುಕೊಂಡೇ ಮುಂದುವರೆದವರು. ಆದರೆ ಇನ್ನೊಬ್ಬರನ್ನು ಗೇಲಿ ಮಾಡಿ ಖುಶಿಗೊಳ್ಳುವ ಸ್ವಭಾವದವರು.

ಮಕ್ಳಾಗ್ಲೀಂತ ಸುತ್ಲಿಕ್ ಹೊರಟ್ಲು
ಅರಳಿಮರದ್ ಕಟ್ಟೆ
ಒಂದ್ಸುತ್ತಿನ್ನೂ ಆಯ್ತೊ ಇಲ್ವೊ
ಮುಟ್ ನೋಡ್ಕೊಂಡ್ಲು ಹೊಟ್ಟೆ - ಹೊಟ್ಟೆ - ಸುಮತೀಂದ್ರ ನಾಡಿಗ್

'ಅಶ್ವತ್ಥ ಪ್ರದಕ್ಷಿಣೆ ಹಾಕಿದ್ರೆ ಮಕ್ಕಳಾಗುತ್ತೇಂದ್ರೆ, ಒಂದು ಸುತ್ತು ಸುತ್ತಿ ಹೊಟ್ಟೆ ಮುಟ್ಟಿ ನೋಡಿಕೊಂಡ್ಲಂತೆ ಎಂಬ ಗಾದೆಯಿಂದ ಪ್ರೇರಣೆಗೊಂಡು ಮೇಲಿನ ಚುಟುಕು ಸೃಷ್ಟಿಗೊಂಡಿದೆ. ಜಿಡ್ಡುಗಟ್ಟಿದ ಸಾಮಾಜಿಕ ವ್ಯವಸ್ಥೆಯಲ್ಲಿ ಕ್ರಾಂತಿಕಾರ ವಿಚಾರಗಳ ಹಿನ್ನೆಲೆಯಲ್ಲಿ ಬದಲಾವಣೆಯನ್ನು ತರಲು ಚುಟುಕು ಬಯಸಿದುದೂ ಉಂಟು.

ಮೊನ್ನೆಯೇ ಹರಿದು ಹಾಕಿದೆನು ಜನಿವಾರ
ಜನಿವಾರ ಜಾತಿವಾದಿಯ ಸೂತ್ರಧಾರ
ಜಾತಿ ಎಂಬುದು ಕೋತಿ ಮಾನಸಿಕ ಗೋಡೆ
ಈ ಗೋಡೆ ಎನ್ನುವುದು ಭಾರತದ ಪೀಡೆ - ದಿನಕರ ದೇಸಾಯಿ

ಮನಸ್ಸಿನ ಅಡ್ಡಗೋಡೆಯಾದ ಅಷ್ಟೇ ಏಕೆ, ಭಾರತದ ಪೀಡೆಯಾದ ಈ ಜಾತಿಯ ಸೂಚಕವಾದ ದಾರ-ಜನಿವಾರ ಹರಿದು ಹಾಕಿ, ಜಾತಿ ಕೋಡಿಯನ್ನು ಹೊಡೆದೋಡಿಸುವ ಧೀರ ನಿರ್ಧಾರ ಚುಟುಕು ಕವಿ ದಿನಕರ ದೇಸಾಯಿಯವರು ಕೈಗೊಂಡುದು ಜಾತಿ ವಿರುದ್ಧದ ಪ್ರಬಲ ಪ್ರತಿಭಟನೆ. ಇದು ಬಂಡಾಯದ

ಧೋರಣೆಯಲ್ಲದೆ ಮತ್ತೇನು? ಬಂಡಾಯ ಸಾಹಿತ್ಯದ ನೆಲ ಹದಗೊಳ್ಳುವ ಮುನ್ನವೆ ಚುಟುಕು ಬಂಡಾಯದ ಪ್ರತಿಭಟನಾ ಕಿಡಿ ಕಾರಿದುದು ಗಮನಾರ್ಹ. 'ಹೂ-ಹಣ್ಣೂ, ಹೆಣ್ಣು, ತಾರೆ, ಸೂರ್ಯ, ಚಂದ್ರರ ಮೇಲೆ ಕವಿತೆ ಬರೆಯುವುದನ್ನು ನಿಲ್ಲಿಸಿ, ದೀನರ-ದಲಿತರ-ಬಡ-ಬಗ್ಗರ ಮೇಲೆ, ಶೋಷಿತರ ಮೇಲೆ ಕವಿತೆ ಬರೆ. ಕವಿತೆ ಬೀದಿಗೆ ಬರಬೇಕು ಅದು ಜನಸಾಮಾನ್ಯರ ಮನೆಮನೆಗೆ, ಮನಮನಕ್ಕೆ ಮುಟ್ಟಬೇಕು ಅವರನ್ನು ಎಚ್ಚರಿಸಬೇಕು, ಎನ್ನುವ ಬಂಡಾಯದ ಧ್ವನಿ ಮಾರ್ಮೊಳಗುವ ಮುನ್ನವೇ ಚುಟುಕು, ಸದ್ದುಗದ್ದಲವಿಲ್ಲದೆ ಈ ಕೆಲಸ ಮಾಡಿದೆ.

ಎಲೆ ಕವಿಯೇ ಸುಡು ನಿನ್ನ ಕವನಗಳ ಕೀರ್ತಿ
ತಿಳಿಬಾನು ಗಿರಿಕಾನುಗಳೆ ನಿನ್ನ ಸ್ಫೂರ್ತಿ
ಕೇರಿ ಕೇರಿಗಳಲಿ ಉರಿದರೂ ಜ್ವಾಲೆ
ಕವನ ಕಟ್ಟುವೆ ನೀನು ಮಲ್ಲಿಗೆಯ ಮೇಲೆ - ದಿನಕರ ದೇಸಾಯಿ

ಸೌಂದರ್ಯಾರಾಧಕ ಕವಿಯನ್ನು ಈ ಚುಟುಕು ಎಚ್ಚರಿಸುವಂತಿದೆ. ಚುಟುಕುಗಳು ಹೆಚ್ಚಾಗಿ ಸಾಮಾಜಿಕ ಪ್ರಜ್ಞೆಯನ್ನೇ(ಸಾಮಾಜಿಕ ಜಾಗೃತಿಯನ್ನು) ಸ್ಥಾಯಿಯಾಗಿಸಿಕೊಂಡಿವೆ. ಅವು ಸಾಮಾಜಿಕ ಬದುಕಿಗೆ ಮುಖಾಮುಖಿಯಾಗಿವೆ. ಸಾಹಿತ್ಯ ಒಂದು ನಿರ್ದಿಷ್ಟ ಕಾಲದ ಸಾಮಾಜಿಕ ಸಂದರ್ಭದ ವಿಶಿಷ್ಟ ಆವಿಷ್ಕಾರ, ಕವಿ ಸಮಾಜದ ಒಂದಂಗವಾಗಿ ರೂಪುಗೊಳ್ಳುವುದರಿಂದ ಸಾಮಾಜಕ ಚಿಂತನೆಯನ್ನು ಸಹಜವಾಗಿ ಮಾಡುತ್ತಾನೆ. ಗುರುತರವಾದ ಸಾಮಾಜಿಕ ಜವಾಬ್ದಾರಿಯೂ ಆತನ ಮೇಲಿದೆ. ಹೀಗಾಗಿ, ಚುಟುಕುಗಳಲ್ಲಿ ಸಾಮಾಜಿಕ ಕಾಳಜಿ ಎದ್ದು ಕಾಣುವ ಗುಣವಾಗಿದೆ. ಚುಟುಕುಗಳು ಕೇವಲ ಭಾವಗೀತೆಯ ತುಣುಕುಗಳಾಗಿ ಮಾತ್ರ ಉಳಿಯದೆ, ಓದುಗನನ್ನು ಚಿಂತನೆಗೆ, ವಿಚಾರಕ್ಕೆ ಖಂಡಿತ ತೊಡಗಿಸುತ್ತವೆ.

ಚುಟುಕು-ಹನಿಗವನ - ಮಿನಿಗವನ - ಮಿಡಿಗವಿತೆ - ನಗೆಹನಿಗಳೆಂಬ ಹೆಸರುಗಳಿಂದ ಕರೆಯಲಾಗುವ ಇತ್ತೀಚಿನ ಕಿರುಗವನಗಳಿಗೆ ವಿವರಣೆಯ ಅಗತ್ಯವೇ ಇಲ್ಲವೆಂದು ತೋರುತ್ತದೆ. ದಿನಕರ ದೇಸಾಯಿಯವರ ಚುಟುಕ್ಕೊಂದು ಇದಕ್ಕೆ ಸಮರ್ಥನೆ ನೀಡುತ್ತದೆ.

ಅನುಭವದ ಹೊರಗೆ ನಾ ಬರೆಯಲಿಲ್ಲಣ್ಣ
ಹಚ್ಚಲಿಲ್ಲವೊ ಮತ್ತೆ ಯಾವುದು ಬಣ್ಣ
ಬರೆದದ್ದು ನುಡಿದದ್ದು ಎಲ್ಲವೂ ಸಾದಾ
ಹೀಗಾಗಿ ಮನದೊಳಗೆ ಹೋಗುವುದು ಸೀದಾ

ಈಗಿನ ಕೆಲವು ನಗೆಹನಿ(ಹನಿಗವನ)ಗಳಲ್ಲಿ ಮಿಂಚಿದ ಕವಿಯ ಭಾವಮಿಂಚನ್ನು ಅವಲೋಕಿಸೋಣ. ಈ ನಗೆಹನಿಗಳಲ್ಲಿ ಹನಿಗವಿಯ ತೀವ್ರವಾದ ಪ್ರತಿಭೆ ಖಂಡಿತ ಇದೆ. ಅದು ಭಾವ ಮಿಂಚನ್ನು ಸೃಷ್ಟಿಸಿದ್ದನ್ನು ಅಲ್ಲಗಳೆಯಲಾಗದು. ಆದರೆ, ಈ ಕವಿಗಳು ತಮ್ಮ ಪ್ರತಿಭೆಯ ಜೊತೆ ಒಂದಿಷ್ಟು

ಸರಿಯಾದ ಅಧ್ಯಯನ ಶೀಲ ಪರಿಶ್ರಮಿಗಳಾದರೆ, ಗಾಢ ಅನುಭವಗಳಿಗೆ ಮಾತ್ರ ಅಕ್ಷರ ರೂಪಕೊಡಲು ಪ್ರಯತ್ನಿಸಿದರೆ, ಕಣವಿ, ದೇಸಾಯಿ, ಅಕಬರ ಅಲಿ ಅಂಥವರ ಧ್ವನಿಪೂರ್ಣ ಚುಟುಕುಗಳನ್ನು ಖಂಡಿತವಾಗಿಯೂ ಸೃಷ್ಟಿಸಬಲ್ಲರು. ಈವರೆಗೆ ಉಲ್ಲೇಖಿಸಿದ ಸಾಮಾಜಿಕ ಚಿಂತನೆಯ ಚುಟುಕುಗಳಿಗೂ ಈಗ ಉಲ್ಲೇಖಿಸಿರುವ ಸಾಮಾಜಿಕ ಚಿಂತನೆಯ ಇಂದಿನ ನಗೆಹನಿಗಳಿಗೂ ಶಿಲ್ಪ, ಸಾಹಿತ್ಯ, ಛಂದಸ್ಸುಗಳಲ್ಲಿ ವ್ಯತ್ಯಾಸವಿರುವುದನ್ನು ಗುರುತಿಸಬಹುದು.

ಅವಳು ಅಕಸ್ಮಾತ್ ಸಿಕ್ಕಳು
ನನ್ನನ್ನು ನೋಡಿ ನಕ್ಕಳು
ನಮಗೀಗ ಎರಡು ಮಕ್ಕಳು - 'ಪರಿಣಾಮ' - ಎಚ್ .ಡುಂಡಿರಾಜ

ಇಂತಿಂತಹ ಕವಿಗಳು ಸತ್ತರು
ಎಂದು ಸಹೃದಯಿಯೊಬ್ಬರು ಅತ್ತರು
ಅವರ್‍ಯಾವಾಗ ಜೀವಂತವಾಗಿದ್ದರು?
ಎಂದು ವಿಮರ್ಶಕರು ಕೇಳಿದರು - 'ಜೀವಂತಿಕೆ' - ಕಾಶೀನಾಥ ಅಂಬಲಿಗೆ

ಕನ್ನಡಕೆ ಹೋರಾಡು
ಕನ್ನಡದ ಕಂದಾ
ಕನ್ನಡವ ಕಾಪಾಡು
ಕನ್ನಡಿಗರಿಂದ - 'ಕನ್ನಡಕೆ' - ಚಿಂತಾಮಣಿ

ಬಹುತೇಕ ಸತೀಮಣಿಗಳಿಗೆ
ಪತಿಯೇ ಪರದೈವ
ಕೆಲವು ಖಾಲಿ ಮಣಿಗಳಿಗೆ ಮಾತ್ರ
ಪರಪತಿಯೇ ದೈವ - ನಮ್ಮ ದೇಶದಲ್ಲಿ - ಚಂಪಾ

ಹೀಗೆ ಚುಟುಕುಗಳಲ್ಲಿ ಬದುಕಿನ ನೋವು-ನಲಿವುಗಳನ್ನು ಬಿಂಬಿಸುವ ಸಾಮಾಜಿಕ ಆಯಾಮ ಅನಾವರಣಗೊಂಡಿದೆ. ಇಂದಿನ ಕಾವ್ಯ ಪ್ರಪಂಚದಲ್ಲಿ ಈ ಚುಟುಕು ಚುರುಕಿನ ಬೆಡಗಿನ ಲಾವಣ್ಯಕ್ಕೆ ಮನಸೋಲದವರೆ ಇಲ್ಲ. ಹದಿಹರೆಯದವರ ಮೈ-ಮನ-ಹೃದಯಗಳಿಗೆ ಲಗ್ಗೆ ಇಟ್ಟು ಹುಚ್ಚು ಹಿಡಿಸಿದ ಈ ಚುಟುಕು ಚಟಾಕಿನ ಹುಡುಗಿ, ಇಳಿವಯಸ್ಸಿನವರ ಮನಸ್ಸನ್ನು ಕದ್ದಿದ್ದಾಳೆ ಎಂದರೆ ಅತಿಶಯೋಕ್ತಿಯಾಗಲಾರದು ! ಈ ಸಾದೃಶ್ಯ ಚುಟುಕಿನ ಭಾವವನ್ನು ಹೇಳುತ್ತದೆ. ಇಂದು ಈ ಚುಟುಕು ಸಾಹಿತ್ಯದ ದೃಷ್ಟಿಯಲ್ಲಿ ಚುಟುಕಾಗಿ, ಮಿನಿಗವನವಾಗಿ, ಹನಿಗವನವಾಗಿ ತನ್ನದೇ ಆದ ಸೃಷ್ಟಿಯಲ್ಲಿ ತೊಡಗಿರುವುದು ಆಧುನಿಕ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸುವರ್ಣ ಕಾವ್ಯ ಸಂಪುಟ. ಸಹೃದಯರೆಲ್ಲರಿಗೂ ಮೋಡಿ ಮಾಡಿರುವ ಈ ಚುಟುಕು ಸಾಹಿತ್ಯ ಗಾತ್ರದಲ್ಲಿ ಕಿರಿಯದಾದರೂ ಪಾತ್ರದಲ್ಲಿ ಹಿರಿಯದಾಗಿದೆ.

ಇಂದಿನ ಕಾವ್ಯ ಪ್ರಪಂಚದಲ್ಲಿ ತನ್ನದೇ ಆದ ಒಂದು ಸ್ಥಾನವನ್ನು ಗಟ್ಟಿಗೊಳಿಸಿಕೊಳ್ಳುವಲ್ಲಿ ಸಾಧನೆಗೈಯುತ್ತಿರುವುದನ್ನು ಕಾಣುತ್ತಿದ್ದೇವೆ.

ಚುಟುಕು, ಸಾಹಿತ್ಯವೂ ಹೌದು. ಇಲ್ಲಿ ಸಹಹಿತವಿದೆ. ಪರಗತಿಯೂ ಇದೆ. 'ರಸಾತ್ಮಕಂ ವಾಕ್ಯಂ ಕಾವ್ಯಂ' - 'ರಮಣೀಯಾರ್ಥ ಪ್ರತಿಪಾದಕ ಶಬ್ದ : ಕಾವ್ಯಂ' ಎಂಬ ಉಕ್ತಿ ಈ ಚುಟುಕು ಸಾಹಿತ್ಯಕ್ಕೆ ಬುನಾದಿ. ಇವುಗಳ ವಸ್ತು, ದ್ರವ್ಯ ಬದುಕಿನಲ್ಲಿ ಕಂಡದ್ದು ಒಸರಿದ್ದು ಆ ಕ್ಷಣದ ಸಂವೇದನೆಗಳಿಗೆ ಥಟ್ಟನೆ ಸ್ಪಂದಿಸಬಲ್ಲ, ಆಲೋಚನೆಗೆ ಅರಳಬಲ್ಲ, ರಸ ಒಸರಿಸಬಲ್ಲ ಭಾವ-ಸ್ವಭಾವಗಳೆರಡನ್ನೂ ಅಭಿವ್ಯಕ್ತ ಗೊಳಿಸಬಲ್ಲ ಶಕ್ತಿ ಈ ಚುಟುಕು ಸಾಹಿತ್ಯಕ್ಕಿದೆ.

ಚುಟುಕು ಮುತ್ತಾಗದ ಹೂವಲ್ಲ. ಮಲ್ಲಿಗೆ ಅದನ್ನು ಅನಗತ್ಯವಾಗಿ ವೈಭವೀಕರಿಸಬೇಕಿಲ್ಲ. ಸರ್ವೋತ್ಕೃಷ್ಟ ಕಾವ್ಯ ಪ್ರಕಾರ ಅದು ಕಾವ್ಯವಲ್ಲ ಅಥವಾ ಮೌಲಿಕ ಕಾವ್ಯದಲ್ಲಿ ಎಂದು ಯಾರಾದರೂ ವಾದಿಸಿದರೆ ಅದು ಅವಿವೇಕದ ಮತ್ತು ಅತಿರೇಕದ ನಿಲುವಾಗುತ್ತದೆ. ಚುಟುಕು ಮಿಂಚುವ ಭಾವದ ಸಣ್ಣಗೊಂಚಲು ಕಿರಿದಾದ ಪದಗಳಲ್ಲಿ ಹಿರಿದಾದ ಅರ್ಥವನ್ನು ನೀಡಬಲ್ಲ ಶಕ್ತಿ ಈ ಕಾವ್ಯ ಪ್ರಕಾರಕ್ಕಿದೆ.

ಒಟ್ಟಾರೆ, ಚುಟುಕು ಸಾಹಿತ್ಯ ಅತ್ಯಂತ ಜನಪ್ರಿಯ ಕಾವ್ಯ ಪ್ರಕಾರ ಚಿಕ್ಕದಾದರೂ ಚೊಕ್ಕವಾಗಿ ಪ್ರತಿಯೊಬ್ಬ ಸಹೃದಯಿ ಸವಿಯಬಲ್ಲ ಅಲ್ಪೋಪಹಾರ. ಸಾಹಿತ್ಯದ ಸವಿಯೂಟದಲ್ಲಿ ಉಪ್ಪಿನಕಾಯಿಗಿರುವ ಸ್ಥಾನ-ಮಾನ ಈ ಚುಟುಕು ಸಾಹಿತ್ಯಕ್ಕಿದೆ. ಇಂದು ಇದರದೇ ಒಂದು ದೊಡ್ಡ ಸಾಮ್ರಾಜ್ಯ. ಇಲ್ಲಿ ಯಾವುದೂ ಇಲ್ಲ ತ್ಯಾಜ್ಯ ಕಿರಿಯದರಲ್ಲಿ ಹಿರಿದಾದ ಅರ್ಥವನ್ನು ಒಳಗೊಂಡಿರುವ ಚುಟುಕುಗಳ ವ್ಯಾಪ್ತಿ ಮತ್ತು ಅವುಗಳ ಸ್ವರೂಪ ವೈವಿಧ್ಯಮಯವಾಗಿದೆ. ಕನ್ನಡ ಸಂಸ್ಕೃತಿಯ ಸಂವೇದನೆ ಚುಟುಕುಗಳಲ್ಲಿ ತುಂಬಾ ಅರ್ಥಪೂರ್ಣವಾಗಿ ಅನಾವರಣಗೊಂಡಿದೆ.

ಅಡಿಟಿಪ್ಪಣಿಗಳು

೧. F.Kittel- A Kannad-English Dictionery (1996) AES, New Delhi, Pp.616

೨. ಕೆ.ಕೃಷ್ಣಮೂರ್ತಿ(ಅನುವಾದ) ದಂಡಿ ಕಾವ್ಯಾದರ್ಶ, ಶಾರದ ಮಂದಿರ, ಮೈಸೂರು, ಪು.೭೮

೩. ದೇ.ಜ.ಗೌ.೨೦೦೦, ಚುಟುಕು ಸಾಹಿತ್ಯದ ನೆಲೆ-ಬೆಲೆ, ಚುಟುಕು ಮಂದಾರ, ಸಂ : ಎಂ.ಜಿ.ಆರ್.ಅರಸ್, ವೈದ್ಯವಾರ್ತಾ ಪ್ರಕಾಶನ, ಮೈಸೂರು, ಪು.೬

೪. ಶಾಸ್ತ್ರೀ ಕೆ.ಜಿ.ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂ-೩, ಪು.೫೫೫, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೫. ಡಾ. ಪ್ರಭುಶಂಕರ, ಕನ್ನಡದಲ್ಲಿ ಭಾವಗೀತೆ, ಪು.೧೮೧

ಅಧ್ಯಾಯ ೩

ಹಳಗನ್ನಡ ಸಾಹಿತ್ಯದಲ್ಲಿ ಚುಟುಕುಗಳು : ಸಾಮಾಜಿಕ ಸಂರಚನೆ

೩

ಹಳಗನ್ನಡ ಸಾಹಿತ್ಯದಲ್ಲಿ ಚುಟುಕುಗಳು : ಸಾಮಾಜಿಕ ಸಂರಚನೆ

I

ಚುಟುಕುಗಳು ಪ್ರಾಚೀನ ಕನ್ನಡ ಕಾವ್ಯಗಳಲ್ಲಿಯೂ ಅಲ್ಲಲ್ಲಿ ಬಿಡಿಬಿಡಿಯಾಗಿ ದೊರೆಯುತ್ತವೆ. ಈ ರೀತಿಯ ಭಾವಗೀತಾತ್ಮಕ ಪದ್ಯಗಳಿಲ್ಲದ ಕನ್ನಡ ಕಾವ್ಯಗಳೇ ಇಲ್ಲವೆನ್ನುವಷ್ಟರಮಟ್ಟಿಗೆ ಚುಟುಕುಗಳು ಅಲ್ಲಿ ಸೃಷ್ಟಿಯಾಗಿವೆ. ಎಂದರೆ ಕವಿಗಳು ತಾವು ಯಾವುದೋ ಒಂದು ಸಂದರ್ಭವನ್ನೋ ಒಬ್ಬ ವ್ಯಕ್ತಿಯನ್ನೋ ಒಂದು ಘಟನೆಯನ್ನೋ ಅಥವಾ ಇನ್ನೇನನ್ನಾದರೂ ಕುರಿತು ಯಾವುದೋ ಸಂದರ್ಭದಲ್ಲಿ ಕಟ್ಟಿದ ಬಿಡಿಪದ್ಯಗಳನ್ನು ತಮಗೆ ಅಗತ್ಯವೆನ್ನಿಸಿದಾಗ ತಮ್ಮ ಕೃತಿಗಳಲ್ಲಿ ಸಂದರ್ಭವರಿತು ಅಳವಡಿಸಿಕೊಂಡಿರುವುದನ್ನು ನಾವು ಕಾಣುತ್ತೇವೆ. ಜೀವನದಲ್ಲಿ ಯಾವಾಗಲೋ ಕಂಡುದನ್ನು ಕಂಡಾಗಲೇ ಬರೆದಿಟ್ಟೋ ಅಥವಾ ಈ ಮಹಾಕಾವ್ಯದ ಪೂರ ಹರಿಯುತ್ತಿರುವಾಗ ನೆನಪು ಮಾಡಿಕೊಂಡೋ, ಅತ್ಯಂತ ರಮ್ಯವಾದ ರೀತಿಯಲ್ಲಿ ಚಿತ್ರಿಸಿರುತ್ತಾರೆ. ಕವಿಯ ವೈಯಕ್ತಿಕ ಅನುಭವದ ಅಭಿವ್ಯಕ್ತಿಯಾದ ಅದು ನಿಜವಾಗಿ ಹಾಸ್ಯಮಿಶ್ರಿತ, ಭಾವಗೀತೆ, ಈ ಕಾವ್ಯದ ಹಿನ್ನೆಲೆಯಿಂದ ಹೊರಕ್ಕೆ ತೆಗೆದಿಟ್ಟರೂ ಅದು ಸ್ವಯಂಪೂರ್ಣವಾದ ಭಾವಗೀತೆಯಾಗಿ ನಿಲ್ಲುವ ಶಕ್ತಿಯನ್ನು ಹೊಂದಿರುತ್ತದೆ.

ಇಂದು ಚುಟುಕು, ಹನಿಗವನ, ಮಿನಿಗವನ, ಮುಕ್ತಕ ಮೊದಲಾದ ಹೆಸರುಗಳಲ್ಲಿ ಗುರುತಿಸಲಾಗುವ ಜನಪ್ರಿಯ ಸಾಹಿತ್ಯ ಪ್ರಕಾರದ ಹೆಜ್ಜೆಪಾಡುಗಳನ್ನು ಹಳಗನ್ನಡ ಸಾಹಿತ್ಯದಲ್ಲಿ ಹುಡುಕುವುದು ಕೇವಲ ಪಾಂಡಿತ್ಯ ಪ್ರದರ್ಶನವೊ ವ್ಯರ್ಥ ಪ್ರಯತ್ನವೋ ಆಗಲಾರದೆಂಬ ನಂಬಿಕೆ ನನ್ನದು. ಚುಟುಕುವಿನ ಚಹರೆ, ಜೀವ, ಆಕಾರಗಳನ್ನು ಗುರುತಿಸುವಾಗ ನಾವು ಸಾಮಾನ್ಯವಾಗಿ ಪರಿಗಣಿಸುವ ಅದರ ಹ್ರಸ್ವಸ್ವರೂಪ, ಒಂದು ಸ್ಫೋಟ, ಒಂದು ಮಿಂಚು, ಒಂದು ವಿಡಂಬನೆಯ, ಒಂದು ವ್ಯಂಗ್ಯದ ಮೊನಚು, ಸಂಕೀರ್ಣ ಅರ್ಥಗೌರವ, ಪರ್ಯಾಪ್ತವಾದ ಸ್ವಯಂ ನಿಷ್ಠತೆ-ಇವುಗಳಲ್ಲಿ ಕೆಲವಾದರೂ ಗುಣಾಂಶಗಳು ಅಗತ್ಯವಾಗಿರ ಬೇಕೆಂಬುದನ್ನು ಮನಗಂಡಿದ್ದೇವೆ.

ಈ ಗುಣಾಂಶಗಳು ಸಾಮಾನ್ಯವಾಗಿ ಚಾಟೋಕ್ತಿಗಳಲ್ಲಿ, ಗಾದೆ ಮಾತುಗಳಲ್ಲಿ ಪಡಿನುಡಿಗಳಲ್ಲಿ ಹೇರಳವಾಗಿದ್ದು, ಅಂತಲೇ, ಪರಂಪರಾಗತವಾಗಿ ಬಾಳಿಕೊಂಡು ಬಂದಿರುತ್ತವೆ; ಜನಪದದ ನಾಲಗೆಯಲ್ಲಿ

ನಲಿಯುತ್ತಿವೆ. ನಮ್ಮ ಪ್ರಾಚೀನ ಮಹಾಕಾವ್ಯಗಳಲ್ಲಿ ಇಂಥ 'ಶಕ್ತ್ಯಸ್ತ್ರ'ಗಳನ್ನು ಕವಿ ತನ್ನ ಕಥನದಲ್ಲಿ ಬಳಸಿರುವುದನ್ನು ಕಾಣುತ್ತೇವೆ. ಆದರೆ ಅವು ಸಾಮಾನ್ಯವಾಗಿ ಕಾವ್ಯ ಸಂದರ್ಭಗಳಲ್ಲಿ ಹೆಣೆದುಕೊಂಡು, ಬೇರ್ಪಡಿಸಲಾಗದಂತೆ, ಬೇರ್ಪಡಿಸಿದರೆ ಅರ್ಥಹೀನವಾಗಿಬಿಡುವಂತೆ ಅಥವಾ ಅನರ್ಥವಾಗುವಂಥ ರೀತಿಯಲ್ಲಿ 'ತನ್ಮಯ'ವಾಗುತ್ತವೆ. ಅವುಗಳನ್ನು ಮುಕ್ತಕ ಅಥವಾ ಚುಟುಕು ಎನ್ನಲಾಗದು. ಆದರೆ ಕೆಲವು ಅಂಥ ಉಕ್ತಿಗಳು ಮಾತ್ರ ಪ್ರಸಂಗದಿಂದ ಬೇರ್ಪಡಿಸಿದರೂ ಬಿಡಿಮುತ್ತುಗಳಾಗಿ, ಚುಟುಕುಗಳಾಗಿ, ಸ್ವಯಂನಿಷ್ಠ ಘಟಕಗಳಾಗಿ ಸ್ವತಂತ್ರ ಜೀವಿಗಳಾಗಿರುತ್ತವೆ. ಅವುಗಳು ಸಂಖ್ಯಾ ಪ್ರಮಾಣದಲ್ಲಿ ಕಡಿಮೆ ಇದ್ದರೂ ಪರಿಶೀಲನಾರ್ಹವಾಗಿವೆ. ಒಂದು ವ್ಯಕ್ತಿ ಚಿತ್ರಣವಿರಬಹುದು; ವರ್ಣನೆಯಿರಬಹುದು; ಭಾವೋದ್ಗಾರವಿರಬಹುದು; ವಿಮರ್ಶೆಯಿರಬಹುದು. ಉಪದೇಶವಿರಬಹುದು. ಅವುಗಳಲ್ಲಿ ಒಂದು ಸಾರ್ವತ್ರಿಕ ಗುಣವಿದ್ದು ಸನ್ನಿವೇಶದಿಂದ ಬೇರ್ಪಡಿಸಿದರು ಅದರ ಹಂಗಿಲ್ಲದೆ, ಇಲ್ಲು ಎಲ್ಲು ಸಲ್ಲುವ ತಗುದಿಯನ್ನು ಹೊಂದಿರುತ್ತದೆ.

ಒಂದು ಸುಪ್ರಸಿದ್ಧ ಉದಾಹರಣೆಯನ್ನು ಕೊಡುವುದಾದರೆ, ಕಾಳಿದಾಸರು ರಘುವಂಶ ಕಾವ್ಯದ ಇಂದುಮತಿ ಸ್ವಯಂವರ ಪ್ರಸಂಗದಲ್ಲಿ ಬಳಸಿದ ಈ ಉಕ್ತಿ; "ಲೋಕೋ ಭಿನ್ನರುಚಿಃ" (ಲೋಕದಲ್ಲಿ ಬೇರೆ ಬೇರೆ ಅಭಿರುಚಿಗಳು ಸಹಜವಲ್ಲವೆ!") ಕಾಳಿದಾಸನು ಯಾವ ಸಂದರ್ಭದಲ್ಲಿ ಬಳಸಿದ ಎನ್ನುವುದು ಅನೇಕರಿಗೆ ಗೊತ್ತಿಲ್ಲದಿದ್ದರೂ ಅದನ್ನು ಸ್ವೀಕರಿಸಿ, ತಮ್ಮ ವಾದಕ್ಕೆ ಉಪಷ್ಟಂಬಕವಾಗಿ ಎಷ್ಟು ಜನ ಬಳಸುವುದಿಲ್ಲ? ಅದರ ಅರ್ಥ ಗೌರವವನ್ನು ಪರಿಭಾವಿಸಲು, ಅದು ಬಳಕೆಯಾದ ಸನ್ನಿವೇಶ ಸಂದರ್ಭಗಳ ಹಂಗು ಬೇಕಾಗಿಲ್ಲ, ಅದು ಸ್ವತಂತ್ರವಾಗಿ ನಿಲ್ಲಬಲ್ಲದು; ಬಾಳಬಲ್ಲದು.

ಪ್ರಾಚೀನ ಕನ್ನಡ ಶಾಸನವೊಂದರಲ್ಲಿ ಸಿಗುವ ಈ ವ್ಯಕ್ತಿ ಚಿತ್ರಣ ನೋಡಿ.

ಸಾಧುಗೆ ಸಾಧು
ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ
ಕಲಿಯುಗ ವಿಪರೀತನ್
ಮಾಧವನೀತನ್
ಪೆರನಲ್ಲ.

ಮಾಧವ ಎಂಬ ಕನ್ನಡ ವೀರನ ಉದಾತ್ತವಾದ ಗುಣವರ್ಣನೆ ಇದು. ಇದು ಚುಟುಕವೇ. ಇಲ್ಲಿ 'ಮಾಧವನ್' ಎಂಬ ಕಡೆ 'ಕನ್ನಡಿಗನ್' ಎಂದು ಪದಪಲ್ಲಟ ಮಾಡಿದರೆ ಕನ್ನಡಿಗರ ಹಿರಿಮೆಯನ್ನು ಸಾರುವ ಸುಂದರ ಮುಕ್ತಕವಾಗಿಬಿಡುತ್ತದೆ. ಅದರ ಹಿಂದುಮುಂದಿನ ಪದ್ಯಗಳನ್ನು ತಂದು ಸೇರಿಸಬೇಕಾದ ಅಗತ್ಯವು ಇಲ್ಲ. ಅರ್ಥಘಟಕವಾಗಿ ಇದು 'ಸ್ವನಿಷ್ಠ'. ಪಂಪನ ಆದಿ ಪುರಾಣದಲ್ಲ ಬರುವ ಈ ಸುಪ್ರಸಿದ್ಧ ವಾಕ್ಯವನ್ನು ಗಮನಿಸಿ.

ಪರಮಜಿನೇಂದ್ರವಾಣಿಯೇ
ಸರಸ್ವತಿ,
ಬೇರದು ಪೆಣ್ಣ ರೂಪಮಂ
ಧರಿಯಿಸಿ ನಿಂದುದಲ್ತು

ಒಂದು ವೃತ್ತದ ಭಾಗ ಇದು. ಪಾದಗಳನ್ನು ಅರ್ಥಾನುಗುಣವಾಗಿ ಪುನರ್ ರಚಿಸಿದ್ದೇನೆ ಅಷ್ಟೆ. ಇಲ್ಲಿ ಎರಡು ವಾಕ್ಯಗಳಿವೆ. ಮೊದಲನೆಯದು ಒಂದು ಗುಣಾತ್ಮಕವಾದ ಹೇಳಿಕೆ. (Positive statemente) ಸರಸ್ವತಿ ತತ್ತ್ವವನ್ನು ಕವಿ ದರ್ಶಿಸಿದ ಬಗೆ ಅದು. ಎರಡನೆಯ ಹೇಳಿಕೆಯಲ್ಲಿ ಕವಿ ಸಂಪ್ರದಾಯಕ ಕಲ್ಪನೆಯನ್ನು ನಿರ್ಭಿಡೆಯಿಂದ ಅಲ್ಲಗಳೆದಿದ್ದಾನೆ.

ಈ ಚುಟುಕುವಿನಲ್ಲಿ (ಹಾಗೆಂದರೆ ಕವಿಯ ದರ್ಶನ ವೈಭವಕ್ಕೆ ಅಪಚಾರ ಮಾಡಿದಂತಾಗುವುದೆ?) ಕವಿ ವಿನೂತನ ಆಲೋಚನಾಂಶವನ್ನು ಒಂದು ಗುಣಾತ್ಮಕ ಹಾಗೂ ಒಂದು ನಿಷೇಧಾತ್ಮಕ ಹೇಳಿಕೆಗಳಲ್ಲಿ ಕಟ್ಟಿಕೊಟ್ಟಿದ್ದಾನೆ. ಯಾರಿಗಾದರೂ ಈ ಉಲ್ಲೇಖ ಚುಟುಕುವಿನ ವ್ಯಾಪ್ತಿಗೆ ಮೀರಿದ್ದು ಎಂದೆನಿಸಿದರೆ, ಚುಟುಕು ಈ ಎತ್ತರಕ್ಕೂ ಏರಬಹುದುದಾದ ಒಂದು ಸಂಭಾವ್ಯ ಸಾಧ್ಯತೆಯ ಸೂಚನೆಯನ್ನಾದರು ಗ್ರಹಿಸಿದರೆ ಸಾಕು.

ಮತ್ತೊಂದು ಪ್ರಸಿದ್ಧ ವಾಕ್ಯ : ಪಂಪನ 'ವಿಕ್ರಮಾರ್ಜುನ ವಿಜಯ'ದಲ್ಲಿ ಪರಾಶರಮುನಿ ಸತ್ಯವತಿಯನ್ನು ಕೂಡಿ. ಅವಳಿಗೆ ಪುನಃ ಕನ್ಯಾಭಾವವನ್ನು ದಯೆಗೆಯ್ದು'' ಹೋದ ಪ್ರಸಂಗದಲ್ಲಿ ಪಂಪ, ಒಂದು ಉದ್ಗಾರವೆತ್ತಿದ್ದಾನೆ.

....
ದಿವ್ಯ ಮುನಿಗಳ್
ಏಗೆಯ್ದೊಡಂ ತೀರದೆ?''

(= ದಿವ್ಯ ಮುನಿಗಳು ಏನು ಮಾಡಿದರು ನಡೆಯುತ್ತದೆ ಅಲ್ಲವೆ?) (ಪಂಪನ ಧಾರ್ಮಿಕ ಹಿನ್ನೆಲೆ, ಅವನಿಗಿದ್ದ ಅನುಕೂಲ್ಯಗಳನ್ನು ಗಮನಿಸಿಯೂ) ನನಗೆ ತಿಳಿದ ಮಟ್ಟಿಗೆ ಕನ್ನಡ ಸಾಹಿತ್ಯದಲ್ಲಿ ಕಾಣುವ ಮೊತ್ತಮೊದಲ ವೈಚಾರಿಕ ಪ್ರತಿಭಟನೆಯ ಧ್ವನಿ ಇದು. ಇಲ್ಲಿ ಚುಟುಕುವಿಗೆ ಬೇಕಾದ ದ್ರವ್ಯವಿದ್ದರು ಇದು ಚುಟುಕು ಆಗಲಾರದು, ಇದನ್ನು ಸಂದರ್ಭದಿಂದ ಬೇರ್ಪಡಿಸುವುದು ಕಷ್ಟ. ಇದನ್ನು ಮುಡಿಯಾಗಿ ಇರಿಸಿಕೊಂಡು, ಮೊದಲೆರಡು ಪಾದಗಳನ್ನು ರೂಪಿಸಿದರೆ ಸುಂದರವಾದ, ಅತ್ಯುತ್ತಮವಾದ ಮುಕ್ತಕವಾಗುತ್ತದೆ. ಪಂಪನಿಗೆ ಇಷ್ಟವಾದ ಒಂದು ಪ್ರೇಮ ಜಿಜ್ಞಾಸೆ ಪಂಪಭಾರತದಲ್ಲೂ ಆದಿಪುರಾಣದಲ್ಲೂ ಸಿಗುತ್ತದೆ.

ಓಪರ್ ಓಪರೋಳ್
ಒಡಸಾಯುಲ್ ಪಡೆದರ್
ಇನ್ನವೇಂ ಸಯ್ಪು ಒಳವೆ?

(= ಪ್ರೇಮಿಗಳು ಜೊತೆಯಾಗಿ ಸಾಯಲು (ಭಾಗ್ಯ) ಪಡೆದುಕೊಂಡು ಬಂದಿದ್ದಾರೆ; ಅದಕ್ಕಿಂತ ಬೇರೆ ಪುಣ್ಯವುಂಟೆ?) ಇದು ಆದಿಪುರಾಣದಲ್ಲಿ ಶ್ರೀಮತಿ-ವಜ್ರಜಂಘ ದಂಪತಿಗಳು ಪರಸ್ಪರ ಅಪ್ಪುಗೆಯಲ್ಲಿ ಕೂಡಿ ಸಾವಪ್ಪಿದಾಗ ಪಂಪ ತೆಗೆದ ಉದ್ಗಾರ. ಇದೇ ಹೇಳಿಕೆ ಅದೇ ಪದಪುಂಜಗಳಲ್ಲಿ (ಒಂದೆರಡು ಸ್ವರಗಳು ಮಾತ್ರ ವ್ಯತ್ಯಾಸ) ಖಾಂಡವನದ ದಹನ ಪ್ರಸಂಗದಲ್ಲಿ ಅಲ್ಲಿನ ಲತಾಗೃಹ, ಧಾರಾಗೃಹಗಳಲ್ಲಿದ್ದ ಪ್ರಣಯಿಗಳು ಪರಸ್ಪರ ಅಪ್ಪುಗೆಯಲ್ಲಿ ಕೂಡ ಸಾವನ್ನಪ್ಪಿದಾಗ ಪಂಪ ಮತ್ತೆ ಅದೇ ಉದ್ಗಾರವೆತ್ತಿದ್ದಾನೆ. ಬಹುಶಃ ಪಂಪನಿಗೆ ಪ್ರಿಯವಾದ ಪ್ರೇಮ ಮೀಮಾಂಸೆ ಇದು. ಇದನ್ನು ಒಂದು ಸುಂದರ ಚುಟುಕು ಎನ್ನಲಡ್ಡಿಯಿಲ್ಲ. ಈ ಎರಡು ಪ್ರಸಂಗಗಳಿಂದ ಈ ಹೇಳಿಕೆಯನ್ನು ಪ್ರತ್ಯೇಕಿಸಿದರು. ಇದರ ಸ್ವತಂತ್ರ ಅಸ್ತಿತ್ವಕ್ಕೆ ಧಕ್ಕೆಯಿಲ್ಲ. ಅದು ಒಂದು ಸಾರ್ವತ್ರಿಕ, ಸಾರ್ವಕಾಲಿಕ 'ಭಾವ'ವಾಗಿ ನಿಲ್ಲುತ್ತದೆ.

ಇನ್ನು "ಬಡಿಗಂಡನಿಲ್ಲ, ಪಾಲನೆ ಕಂಡಂ" (=ಹಾಲು ಕುಡಿಯುವ ಬೆಕ್ಕು, ಹಾಲನ್ನು ಮಾತ್ರ ಕಂಡು, ಅದನ್ನು ಕಾಪಾಡುತ್ತಿರುವ ಬೀಸುವ ದೊಣ್ಣೆಯನ್ನು ಕಾಣದಂತೆ) 'ಅದೇ ರೂಪಕವನ್ನು ನಾಗಚಂದ್ರನು ಬಳಸಿದ್ದಾನೆ. "ಪಡೆನೋಡಲ್ ಬಂದವರಂ ಗುಡಿ ಪೋರಿಸಿದರ್"(= ಸೇನೆಯನ್ನು ಕುತೂಹಲಕ್ಕೆ ನೋಡಲು ಬಂದವರ ಕೈಗೆ ಧ್ವಜಸ್ತಂಭ ಕೊಟ್ಟು ಜವಾಬ್ದಾರಿ ಹೊರಿಸಿದಂತೆ). ಇತ್ಯಾದಿ ಹತ್ತಾರು ಸಾಂದರ್ಭಿಕ ವಾಕ್ಯಗಳಲ್ಲಿ ಚುಟುಕು ಚುಳುಕಾಗಿ ಮೈಮರೆಸಿಕೊಂಡಿದೆ. ಅದನ್ನು ಹಿಗ್ಗಿಸಿ ಬರೆದರೆ ಆಧುನಿಕ ಚುಟುಕು ಸಿದ್ಧ. ಅಲ್ಲಿ ಚುಟುಕಿಗೆ ಬೇಕಾದ 'ದ್ರವ್ಯ'ವಿದೆ; ಆಕರವಿದೆ.

ರನ್ನ ಕವಿ ದಾನಚಿಂತಾಮಣಿ ಅತ್ತಿಮಬ್ಬೆಯ ಗುಣಾತಿಶಯಗಳಿಗೆ ಮಾರುಹೋಗಿ ಒಂದು ಚಿರನೂತನ ವ್ಯಕ್ತಿ ಚಿತ್ರಣ ಮಾಲೆಯನ್ನೆ ಕಟ್ಟಿಕೊಟ್ಟಿದ್ದಾನೆ. ಅವುಗಳಲ್ಲಿ ಈ ವಾಕ್ಯ ಅತ್ಯಂತ ಧ್ವನಿ ಗರ್ಭಿತವಾಗಿ ರಂಜಿಸುತ್ತಿದೆ.

"ಪಿಕ್ಕುವೊಡೆ ಅತ್ತಿಯಪಣ್ಣಲ್ಲ

ಅತ್ತಿಮಬ್ಬೆ" (= ಅತ್ತಿಯ ಹಣ್ಣು ಹೊರಕ್ಕೆ ಸುಂದರ, ಒಳಗೆ ಅನೇಕ ಹುಳುಗಳಿಂದ ಕೂಡಿದೆ : ಆದರೆ ಅತ್ತಿಮಬ್ಬೆಯ ಒಳಗನ್ನು ತೆರೆದು ನೋಡಿದರೂ ಸುಂದರ.) ಹತ್ತಾರು ವಾಕ್ಯಗಳಲ್ಲಿ ತಿಳಿಸಲಾರದ್ದನ್ನು ಈ ಒಂದು ರೂಪಕ ವ್ಯಂಜಿಸುತ್ತದೆ. ರನ್ನ ಕವಿಯ ಗದಾಯುದ್ಧ ಕಾವ್ಯದಲ್ಲಿ ಅಶ್ವತ್ಥಾಮನು ಶ್ರೀಲಕ್ಷ್ಮಿಯನ್ನು ತನ್ನ ದೃಷ್ಟಿಯಿಂದ ಟೀಕಿಸಿದ್ದಾನೆ. ಇದು ಅಶ್ವತ್ಥಾಮನ ಹೇಳಿಕೆ ಎಂಬ ಸಾಂದರ್ಭಿಕ ಅಂಶವನ್ನು ಮರೆತರು, ತನ್ನಷ್ಟಕ್ಕೆ ಅದೊಂದು ವಿಭಿನ್ನ ದೃಷ್ಟಿಯ ಚಿಂತನಾರ್ಹ ವಿಚಾರವಾಗಿದೆ.

ಕಲಿ, ಪಂದೆಯೆಂದು ಬಗೆಯದೆ
ಕುಲಜಂ ಕುಲಹೀನನೆಂದು ಬಗೆಯದೆ
ತರುಣಂ ಸಲೆ ವೃದ್ಧನೆಂದು ಬಗೆಯದೆ

ನೆಲೆಸುವೆ!

ನಿನ್ನಿಂ ನಿಕೃಷ್ಟರುಂ ಒಳರೆ?

(= ವೀರ, ಹೇಡಿ, ಕುಲವಂತ, ಕುಲಹೀನ, ತರುಣ, ವೃದ್ಧ ಎಂಬ ವ್ಯತ್ಯಾಸವಿಲ್ಲದೆ ಯಾರಲ್ಲಿಯು ಸಿರಿ ಸೇರುವುದರಿಂದ ಆ ಲಕ್ಷ್ಮಿಗಿಂತ ಹೀನರು ಯಾರಿದ್ದಾರೆ?)

ಯೋಧನ ಧರ್ಮದ ಬಗ್ಗೆ ಚಿಂತಿಸುತ್ತ ರನ್ನ ಹೇಳಿರುವ ಮಾತುಗಳು ಆ ಯುಗ ಧರ್ಮಕ್ಕೆ ಹೊಂದಿಕೊಂಡರೂ, ಅದರಲ್ಲಿ ಸರ್ವಕಾಲಿಕ ಸತ್ಯ ಅಡಗಿದೆ.

ಗೆಲಲ್ ಆರ್ಪೊಡೆ

ಇರಿದು ಗೆಲ್ವುದು

ಗೆಲಲಾರದೊಡೆ, ಅಣ್ಮಿ ಸಾವುದು

ಆಳ್ಗೆ ಇನಿತೆ ಗುಣಂ''

(= ಗೆಲ್ಲಲು ಬಲವಿದ್ದರೆ ಎದುರಾಳಿಯನ್ನು ಕೊಂದು ಗೆಲ್ಲಬೇಕು; ಅದಾಗದಿದ್ದರೆ ಹೋರಾಡಿ ಸಾಯಬೇಕು. ವೀರನಿಗೆ ಇದೇ ಭೂಷಣ.)

'ಒಡಲು ಒಡಮೆ ಎಂಬಿವು

ಕೆಡಲಿರ್ಪುವು

ಕೆಡದ ಕಸವರಂ ಜಸಂ'-

(= ಒಡಲು, ಸಿರಿ, ಎಂಬಿವು ಕೆಡುವಂಥದ್ದು; ಕೆಡದೆ ಇರುವ ಚಿನ್ನವೆಂದರೆ ಕೀರ್ತಿ ಮಾತ್ರ). ತನ್ನ ಕಾಲದ ವೀರಯುಗದ ಮೌಲ್ಯಗಳನ್ನು ರನ್ನ ಪ್ರತಿಪಾದನೆ ಮಾಡುತ್ತಿದ್ದರು, ಅದರಲ್ಲಿ ಸಾರ್ವತ್ರಿಕ, ಸಾರ್ವಕಾಲಿಕ ಅಂಶಗಳಿರುವುದರಿಂದ, ಅದನ್ನು ಪ್ರಾಸಯುಕ್ತವಾಗಿ ಬರೆದರೆ ಇಂದಿನ ಚುಟುಕು ಆಗಿಬಿಡಬಹುದು.

ಉದಾ : ಒಡಲು ಒಡಮೆ

ಎಂದಿದ್ದರೂ ಬನ್ನ

ಕಡೆಗೂ ಉಳಿಯುವುದು ನೋಡ

ಜಸವೆಂಬ ಚಿನ್ನ.

ರನ್ನನ ಮತ್ತೊಂದು ಕಲ್ಪನೆ ಹೀಗಿದೆ.

ಕರವಾಳಂ ಮಸೆವಂತಿದೆ

ಮರವಾಳಂ ಮಸೆಯೆ

ಕೂರಿತಕ್ಕುವೆ?

(= ಕೈಯ ಖಡ್ಗವನ್ನು ಮಸೆಯುವಂತೆ ಮರದ ಕತ್ತಿಯನ್ನು ಮಸೆದರೆ ಹರಿತವಾಗುವುದೆ? ಕಾವ್ಯ ಸಂದರ್ಭದಿಂದ ಬೇರ್ಪಡಿಸಿದಾಗಲು ಲೋಕೋಕ್ತಿಯಾಗಿ ಇದು ಸಲ್ಲುತ್ತದೆ. ಆದರೆ ಇದೇ ಮಾತನ್ನು ರನ್ನನ ಗದಾಯುದ್ಧದಲ್ಲಿ ಬರುವ ಮತ್ತೊಂದು ಹೇಳಿಕೆಯ ಬಗ್ಗೆ ಅನ್ವಯಿಸಲಾಗದು. ದುರ್ಯೋಧನನು ಕೋಪದಿಂದ ದ್ರೋಣಾಚಾರ್ಯ ಮತ್ತು ಅಶ್ವತ್ಥಾಮರನ್ನು ನೆನಪಿಸಿಕೊಂಡು;

"ಕೊಲೆ ಥೋ ಎನ್ನಲುಂ, ಭೋ ಎನಲು ಬಲ್ಲರ್ ಈ ಬ್ರಾಹ್ಮಣರ್
ಈಯಲ್, ಇರಿಯಲ್ ಶರಣ್ಬುಗೆ ಕಾಯಲ್ ಅವರೆತ್ತರಿವರ್?"

ಎನ್ನುತ್ತಾನೆ. ಇದು ಕಾವ್ಯ ಸಂದರ್ಭದಲ್ಲಿ ಮಾತ್ರ ಉಚಿತವಾಗಿದ್ದು ದುರ್ಯೋಧನನ ಸದ್ಯದ ಮನಃಸ್ಥಿತಿಯನ್ನು ಬಿಂಬಿಸುತ್ತದೆ. (= ಬ್ರಾಹ್ಮಣರು ಕೊಲಲು ಬಂದರೆ 'ಥೋ' ಕಾಪಾಡಿ ಎನ್ನುತ್ತಾರೆ. ಎರಗಿದರೆ 'ಭೋ' ಎಂದು ಆಶೀರ್ವಾದ ಮಾಡಲು ಮಾತ್ರ ಲಾಯಕ್ಕು, ಕೊಡಲು ಕಾಪಾಡಲು ಅವರಿಗೇನು ಗೊತ್ತು.) ಏಕೆಂದರೆ ಅದೇ ದುರ್ಯೋಧನ ಮತ್ತೆ, ಮನಸ್ಸು ತಿಳಿಯಾದಾಗ ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತಾನೆ. ಆದ್ದರಿಂದ ಕಾವ್ಯ ಸನ್ನಿವೇಶದಿಂದ ಬೇರ್ಪಡಿಸಲಾರದ್ದನ್ನು ಬೇರ್ಪಡಿಸಿದರೆ ಆಶಯಕ್ಕೆ ಭಂಗ ಬರುತ್ತದೆ. ಅದನ್ನು ಚುಟುಕುವೆಂದು ಸ್ವೀಕರಿಸಲಾರದು. ಪೊನ್ನ ಕವಿಯಲ್ಲಿ ಈ ಒಂದು ಹೇಳಿಕೆ ಇದೆ.

ಕಿರುಕುಳನೊಳು ಪಡೆದ
ಗೆಲ್ಲದಿಂದಂ ಪಿರಿಯನೋಳ್ ಪಡೆದ
ಸೋಲಂ ಉತ್ತಮಂ.
(ಇದರ ದ್ರವ್ಯವನ್ನು ಹೀಗೆ ಚುಟುಕು ಮಾಡಬಹುದು
ಅಲ್ಪನಲಿ ಪಡೆದ
ಗೆಲುವುಹೊಲ್ಲ
ಹಿರಿಯನಲಿ ಪಡೆದ
ಸೋಲೇ ಬೆಲ್ಲ.)

ಇದರ ಆಶಯದೊಡನೆ "ಸಗಣಿಯವನೊಡನೆ ಸರಸಕ್ಕಿಂತ ಗಂಧವನೊಡನೆ ಗುದ್ದಾಟ ಮೇಲು" ಎಂಬ ಅತಿ ಪ್ರಚಲಿತ ಗಾದೆ ಮಾತನ್ನು ಹೋಲಿಸಿ ನೋಡಬಹುದು. ಅದು ಚುಟುಕುವಿನ ಸತ್ವವನ್ನು ಧರಿಸಿಕೊಂಡಿದೆ. ಅಭಿನವ ಪಂಪ ನಾಗಚಂದ್ರನಲ್ಲಿ,

೧. "ಆರುಂ ಕೋಲಲ್ ಆರ್ಪರೆ ಸಾಯದರಂ?
ಲಲಾಟದೋಳ್ ವಿಧಿ ಬರೆದ ಲಿಪಿ ಜಲ ಲಿಪೆಯೆ?"

(ಅವರು ಸಾಯಕೂಡದು ಎಂದು ವಿಧಿಯಿದ್ದರೆ ಯಾರು ಕೊಲ್ಲಲು ಆಗುವುದಿಲ್ಲ; ಹಣೆಯಲ್ಲಿ ಬ್ರಹ್ಮ ಬರೆದ ಬರವೇನು, ನೀರಿನಲ್ಲಿ ಬರೆದ ಅಕ್ಷರದಂತೆ ಕ್ಷಣಿಕವೆ? ಅದು ಕಲ್ಲಿನಲ್ಲಿ ಕೆತ್ತಿದ ಬರಹದಂತೆ ಗಟ್ಟಿ ಎಂದು ಭಾವ.)

೨. 'ಕಾರಣ ವಿಘಟನಮೇ ಕಾರ್ಯ ವಿಘಟಮಲ್ತೇ?

(ಕಾರಣವನ್ನು ಭಂಗಗೊಳಿಸಿದರೆ ಅದರಿಂದಾಗುವ ಕಾರ್ಯವು ಭಂಗವಾಗುತ್ತದೆ.)

ಕಾವ್ಯ ಸಂದರ್ಭದಿಂದ ಬೇರ್ಪಡಿಸಿದಾಗಲು ಇದು ತನ್ನಷ್ಟಕ್ಕೆ ಬಾಳುತ್ತದೆ. ಒಂದು ಸಾರ್ವತ್ರಿಕ ಸತ್ಯವಾಗಿ ಎಲ್ಲ ಕಾಲಕ್ಕೂ ಸಲ್ಲುತ್ತದೆ. ಅಲ್ಲದೆ ಇಲ್ಲಿರುವುದು ಅದರ ಮೇಲಿನ ವಾಕ್ಯದಂತೆ ವಿಧಿವಾದವಲ್ಲ; ಪುರುಷ ಪ್ರಯತ್ನಕ್ಕೆ ಇಂಬಾಗುವ ವೈಜ್ಞಾನಿಕ ಧೋರಣೆ.

೩. ಕಿಂಕರಭಾವದಿನ್ ಅಪ್ರಸ್ತುತಂ
ಅವುದುಂ ಉಂಟೇ?

(ಸೇವಕನ ಸ್ಥಿತಿಗಿಂತ ಹೀನಾಯವಾದುದು ಯಾವುದಿದೆ?) ಹೀಗೆ ಪರಿತಪಿಸುವವನು, ಪಂಪರಾಮಾಯಣದಲ್ಲಿ ರಾಮನ ಆಜ್ಞೆಯಂತೆ ಸೀತೆಯನ್ನು ಕಾಡಿನಲ್ಲಿ ಬಿಟ್ಟುಬರಲು ನಿಯಮಿತನಾದ ಕೃತಂತವಕ್ತ್ರನೆಂಬ ಸೇವಕ.(ಪಂಪ ರಾಮಾಯಣದಲ್ಲಿ ಲಕ್ಷ್ಮಣನಲ್ಲ ಸೀತೆಯನ್ನು ವನದಲ್ಲಿ ಬಿಟ್ಟುಬರಲು ಆಜ್ಞಾಪಿತನಾದವನು.)

೪. ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೆ?

(ಕಡಲು ಸಹ ಒಂದು ಸಲ ಕಾಲ ಮಹಿಮೆಯಿಂದ ತನ್ನ ತೀರವನ್ನು ದಾಟುವುದಿಲ್ಲವೆ?) ಇತ್ಯಾದಿ ಅನೇಕ ಅರ್ಥಾಂತರನ್ಯಾಸ ಅಲಂಕಾರಗಳನ್ನು ಪೇರಿಸುವುದರಲ್ಲಿ ಕವಿ ನಾಗಚಂದ್ರ ಪ್ರವೀಣ, ಸಿದ್ಧಹಸ್ತ. ಅವು ಒಂದು ಆಲೋಚನಾಂಶದ 'ಮುಡಿ'ಯಾಗಿ ಒಂದು ಭಾವದೀಪ್ತಿಯನ್ನು ಪ್ರಸರಿಸುತ್ತದೆ. ನಾವು ಅತ್ಯುತ್ತಮ ಚುಟುಕುಗಳಲ್ಲಿ ಅಪೇಕ್ಷಿಸುವುದು ಎಂಥ ಪರಿಣಾಮವನ್ನು ತಾನೆ! ಜನ್ನನು ತನ್ನ 'ಯಶೋಧರ ಚರಿತೆ'ಯನ್ನು ಕಂದಗಳಲ್ಲಿ ನಿರ್ವಹಿಸಿರುವುದರಿಂದ ಅದು ಕಥನಕ್ಕಿಂತ ಮುಕ್ತಕಕ್ಕೆ ಹೇಳಿ ಮಾಡಿಸಿದಂತಿದೆ. ಇದು ಹ್ರಸ್ವತೆ, ಸಂಕ್ಷಿಪ್ತತೆ, ಸಮಗ್ರತೆಗಳಲ್ಲಿ ಆಧುನಿಕ ಚುಟುಕಗಳಿಗೆ ಬಾಹ್ಯ ಲಕ್ಷಣಗಳಲ್ಲಿಯು ಸಮೀಪವಾಗಿವೆ.

೧. "ಮನಸಿಜನ ಮಾಯೆ
ವಿಧಿ ವಿಳಸನದ ನೆರಂಬಡೆಯೆ
ಕೊಂದು ಕೂಗದೆ ನರರಂ?"

(ಕಾಮದೇವನ ಮಾಯಾಜಲಕ್ಕೆ ವಿಧಿವಿಲಾಸದ ನೆರವು ಸಹ ದೊರೆತರೆ, ಅದು ನರರನ್ನು ಮೆಟ್ಟಿ ಕುಳಿತು ತನ್ನ ಜಯಘೋಷ ಮಾಡದೇ?)

೨. ಪೆತ್ತಪರೀಷಯ ಜಯಮೇ ತಪಂ
ತಪಕೆ ಬೇರೆ ಕೋಡೆರಡೊಳವೆ?

ಇಲ್ಲಿ ತಪಸ್ಸಿಗೆ ಹೊಸ ವ್ಯಾಖ್ಯಾನವಿದೆ. ಕಾವಿ, ಗಡ್ಡ, ವೇಷ ಇತ್ಯಾದಿ ಬಾಹ್ಯ ಲಕ್ಷಣಗಳು ತಪಸ್ಸಿಗೆ ಇಲ್ಲ. ಅದನ್ನು ಗುರುತಿಸಲು ಅದಕ್ಕೆ ಎರಡು ಕೊಂಬುಗಳಿಲ್ಲ. ಎದುರಾದ ಸಂಕಟಗಳನ್ನು ಸಹಿಸುವ ಗುಣವೇ ತಪಸ್ಸು. ಇಲ್ಲಿನ ಶೈಲಿಯಲ್ಲಿ ಜಾನಪದ ಸೊಗಡು ಇದೆ.

ಕೆಳಗಿನ ಉಕ್ತಿಯಲ್ಲಿ ಶುಚಿ ಅಶುಚಿಯ ಚರ್ಚೆ ಇದೆ.

ತನು ಅರ್ಗಂ ಅಶುಚಿ
ಶುದ್ಧಾತ್ಮನೇ ಶುಚಿ
ಕಾಗೆಯವೊಲ್ ಏನೋ, ಮಿಂದುವನ್
ಏಂ ಶುದ್ಧನೆ?

ಅರ್ಥಾನುಗುಣವಾಗಿ ನಿಲುಗಡೆ ಕೊಟ್ಟು, ಪಾದ ವಿಂಗಡಿಸಿದರೆ, ಸಾಕು. ಹೊಸ ರೂಪ ಬರುತ್ತದೆ. ಆಧುನಿಕ ಚುಟುಕಿವಿನಂತೆಯೇ ತೋರುತ್ತದೆ. ಜನ್ನನ ಈ ಹೇಳಿಕೆಯನ್ನು ಗಮನಿಸಿ.

ಪೊಡವಡಲ್ ಎತ್ತುವ ಕೈಗಳ್
ಪೊಡೆಯಲ್ಕೆ ಇತ್ತುಗುಮೆ?

ಇದು ಚುಟುಕದ ಪೂರ್ವಾರ್ಧವೋ ಉತ್ತರಾರ್ಧವೋ ಆಗಿರುವಂತೆ ಅನಿಸುವುದಿಲ್ಲವೆ? ನಾಗವರ್ಮನ ಕಾದಂಬರಿ ಕಾವ್ಯದಲ್ಲಿ, ಹಾರೀತ ಮುನಿಯಮ್ಮ ಕುರಿತು ಗಿಳಿ ಹೀಗೆ ಪ್ರಶಂಸಿಸುತ್ತದೆ.

೧. 'ಗುಣಿಗಳ ಮನಮೆಂದುಂ
ಅಕಾರಣದೊಳೆ ಕರುಣಾರಸಾದ್ರಂ
ಆರೋಳಂ''

(ಗುಣವಂತರ ಮನಸ್ಸು ಯಾವ ಕಾರಣವು ಇಲ್ಲದೆಯೇ ಯಾರಲ್ಲಿಯೇ ಆದರೂ ಕಾರುಣ್ಯಪೂರಿತ ವಾಗಿರುತ್ತದೆ.)

೨. ಪೂರ್ವೋಕ್ತವಾದ ಪಂಪನ ಪ್ರೇಮಮಿಮಾಂಸೆಗೆ ಪ್ರತ್ಯುತ್ತರವೆಂಬಂತೆ ನಾಗವರ್ಮ ಕವಿ ವಿಭಿನ್ನ ದೃಷ್ಟಿಯನ್ನು ವ್ಯಕ್ತಪಡಿಸಿದ್ದಾನೆ ಇಲ್ಲಿ. ಚಂದ್ರಾಪೀಡ ಮಹಾಶ್ವೇತೆಗೆ ಹೇಳಿದ್ದು, ಮೂಲಕೃತಿಯಲ್ಲಿಯೇ ಈ ಭಾವ ಇರಬಹುದು.

ಸತ್ತವರ್ ಏಳ್ವರೆ ಪೇಳ್ ಒಡಸತ್ತೊಡೆ?
ತಮ್ಮ ಅಳಲಿನ ಅಳವಿಯಂ ಮಳ್ಗಿಸಲೆಂದು
ಉತ್ತವಳಿಕೆಯುಳ್ಳ ಸಾವರ್

(ಇದರಿಂದ) ಸತ್ತವರ್ಗೆ

ಆವ ಹಿತವನ್ ಆಚರಿಸುವರ್?

(ಸತ್ತವರ ಜೊತೆ ಸತ್ತರೆ, ಸತ್ತವರು ಎದ್ದೇಳುವರೇ) ತಮ್ಮ ದುಃಖದ ಬೇಗೆಯನ್ನು ನಿವಾರಿಸಲು ಇಂಥ ಪ್ರಯತ್ನ ಮಾಡಿ ಸಾಯುತ್ತಾರೆ. ಇದರಿಂದ ಸತ್ತವರಿಗೇನು ಉಪಕಾರ ಮಾಡಿದಂತಾತು?) ಇಲ್ಲಿರುವ ಆಲೋಚನಾಂಶ ತರ್ಕಬದ್ಧವಾಗಿದೆ. ವಾದಕ್ಕೆ ಪ್ರತಿವಾದವಾಗಿದೆ. ಮಾತಿನ ಚಕಮಕಿ ಚುಟುಕಿನ ಲಕ್ಷಣ ತಾನೆ? ಕವಿ ರುದ್ರಭಟ್ಟನ ಜಗನ್ನಾಥ ವಿಜಯದಲ್ಲಿ ಬರುವ ಈ ಅನ್ಯೋಕ್ತಿರೂಪಕದಲ್ಲಿ ಒಂದು ಉತ್ತಮ ಚುಟುಕನ್ನು ರೂಪಿಸುವ ಮೂಲ ದ್ರವ್ಯವಿದೆ.

'ಕಡಲಂ ಪೀರ್ವಂಗಂ ಅರಿದೆ ಕುಡಿಕೆಯ ಸಲಿಲಂ?

(ಸಮುದ್ರವನ್ನೇ ಕುಡಿಯಬಲ್ಲವನಿಗೆ ಬಟ್ಟಲಿನ ನೀರು ಒಂದು ಲೆಕ್ಕವೆ?)

ಹಾಗೆಯೇ ಇಲ್ಲಿ ಬರುವ ಒಂದು ಉಪಮಾಲಂಕಾರ.

'ಮಳೆಗಂಜದೊಡಂ ಪುಲಿಗಂಜುವಂತೆವೊಲ್'.

ಇದು ಯಾರೂ ರಚಿಸಬಹುದಾದ ಚುಟುಕುವಿನ ಉತ್ತರಾರ್ಧವಾಗಿ ಪರಿಣಮಿಸಬಹುದು. ಕವಿ ಬ್ರಹ್ಮಶಿವನಂತು ವಿಡಂಬನೆಗೆ ಎತ್ತಿದ ಕೈ. ಆಧುನಿಕ ಚುಟುಕುಗಳಲ್ಲಿ ವಿಡಂಬನೆ ವ್ಯಂಗ್ಯ, ಒಂದು ಪರಿಣಾಮಕಾರಿ ಅಸ್ತ್ರವಾಗಿರುವುದನ್ನು ಬಲ್ಲವರಿಗೆ ಅದರ ಮೂಲವನ್ನು ಬ್ರಹ್ಮಶಿವನಲ್ಲಿ ಕಂಡಾಗ ಆಶ್ಚರ್ಯವಾಗದಿರದು.

೧. ಒಡಲೊಳರ್ ಭಾಗಮನ್ ಇತ್ತಂ (ಗಡ)

ಕಾಂತೆಗೆ ಶಂಭು

ಶಂಭುಗಂ ಕೊಟ್ಟಳ್

ತನ್ನೊಡಲೊಳರ್ ಭಾಗಮನ್ ಅಗಸುತೆ (ಗಡ)

ಮಿಕ್ಕರಡೆರೆಯನ್ ಆರ್ಗೆ ಕೊಟ್ಟರೋ ಪೇಳಿಂ

ಇದಂತೂ ಆಧುನಿಕ ಚುಟುಕವೇ ಆಗಿದೆ; ಅಷ್ಟೇ ಅಲ್ಲ ಮೊನಚಾದ ವಿಡಂಬನೆ ಇದೆ; ತೀರ ಸ್ವೋಪಜ್ಞವಾಗಿದೆ.

ದೇಹದ ಒಂದು ಭಾಗವನ್ನು ಈಶ್ವರನು ತನ್ನ ಹೆಂಡತಿಗೆ ಕೊಟ್ಟ. ಹಾಗೆಯೇ ಪಾರ್ವತಿಯು ತನ್ನ ಒಡಲ ಅರ್ಧಭಾಗವನ್ನು ಈಶ್ವರನಿಗೆ ಕೊಟ್ಟಳು. ಮಿಕ್ಕ ಅರ್ಧ ಭಾಗಗಳನ್ನು ಅವರಿಬ್ಬರು ಯಾರಿಗೆ ಕೊಟ್ಟರು? ಈ ಕೊಂಕಿನ ಹಿಂದೆ ಮತೀಯ ಅಸಹಿಷ್ಣುತೆ ಇರುವುದು ನಿಜವಾದರೂ, ವಿಡಂಬನೆಯಲ್ಲಿರುವ ತರ್ಕವನ್ನು ಸುಲಭವಾಗಿ ತಳ್ಳಿ ಹಾಕುವಂತಿಲ್ಲ.

೨. ಕಾಳಗದೆಡೆಯೊಳ್

ತೊಟ್ಟನೆ ಮಾದೇವಿಯರಸನ್

ಅರೆವೆಣಾದಂ

(= ಕಾಳಗದ ಸಂದರ್ಭದಲ್ಲಿ ತಟ್ಟನೆ ಮಾದೇವಿಯ ಗಂಡನು ಅರ್ಧ ಹೆಚ್ಚಾಗಿಬಿಟ್ಟ) ಇಲ್ಲಿ ವಕ್ರದೃಷ್ಟಿ, ಅಪಹಾಸ್ಯ, ಲೇವಡಿ ಪರಿಣಾಮಕಾರಿಯಾಗಿದೆ. ಹಾಗೆಯೇ ನಯಸೇನನ ಧರ್ಮಾಮೃತದಲ್ಲಿ ಅಡಿಗಡಿಗೆ ಕಾಣುವ ಪಡೆನುಡಿ, ಗಾದೆಗಳು, ಅಪೂರ್ವ ಸಂಪತ್ತಿನಿಂದ, ಧ್ವನಿಶಕ್ತಿಯಿಂದ ಕೂಡಿದ್ದು ಅನ್ಯೋಕ್ತಿರೂಪಕಗಳಾಗಿವೆ. ಅವುಗಳ ಮೂಲ ಚಿಂತನಾದ್ರವ್ಯವನ್ನು ಬಳಸಿ ಅನೇಕ ಚುಟುಕುಗಳನ್ನು ರಚಿಸಬಹುದು.

೧. ಬೇಡವಳ್ಳಿಗೆ ಪಂದಿ ಮದ್ದಾನೆ

೨. ನೆಚ್ಚಿನೆಮ್ಮೆ ಕೋಣನನ್ ಈದತ್ತು

೩. ಸೆಟ್ಟಿಯ ಮಾತೊಳ್ಳಿದವು; ಬಳ್ಳಂ ಕಿರಿದು.

೪. ಪಣ್ಣಿಂಗಿಟ್ಟೊಡೆ ಕಾಯ್ ಬಿರ್ದುದು

೫. ಕೊರಲ ಸತ್ತ್ವಮಿಲ್ಲದೆ ಒರಲಂ ನುಂಗಿದರ್

೬. ಒಡ೧ ಪಿಡಿದೊಡೆ ಕೈಮಸಿ

-ಇತ್ಯಾದಿ

ಹಳಗನ್ನಡ ಕಾವ್ಯಗಳಲ್ಲಿ ಕಣ್ಣಾಡಿಸಿದರೆ ಇಂಥ ನೂರಾರು ಕಿಡಿನುಡಿಗಳು, ಬಿಡಿನುಡಿಗಳು, ಪಡೆನುಡಿಗಳು, ನುಡಿಗಟ್ಟುಗಳು ಬಳಕೆಯಾಗಿವೆ. ಅವುಗಳಲ್ಲಿ ಚುಟುಕುಗಳ ಸ್ವರೂಪ ಸ್ಪಷ್ಟವಾಗಿ ಗೋಚರಿಸುತ್ತದೆ. ಹಳಗನ್ನಡದ ಪ್ರಮುಖ ಕಾವ್ಯಗಳಲ್ಲಿ ಬಳಕೆಯಾಗಿರುವ ಚುಟುಕುಗಳನ್ನು ಹೀಗೆ ಕಲೆ ಹಾಕಿ ಕೆಳಗಿನಂತೆ ವಿವೇಚಿಸಬಹುದು.

II

ಕನ್ನಡ ಸಾಹಿತ್ಯದ ಉಪಲಬ್ಧ ಆದಿಗ್ರಂಥವೆನ್ನಿಸಿರುವ 'ಕವಿರಾಜಮಾರ್ಗ' ಅದೊಂದು ಅಲಂಕಾರಿಕ ಗ್ರಂಥ. ಆದರೂ ಅದರಲ್ಲಿ ಬರುವ ಕನ್ನಡ ನಾಡು, ಕನ್ನಡಿಗರು, ಕನ್ನಡ ಭಾಷೆ ಮುಂತಾದವುಗಳನ್ನು ಕುರಿತ ಪದ್ಯಗಳು ಸಂಪೂರ್ಣವಾಗಿ ಚುಟುಕು ಲಕ್ಷಣಗಳನ್ನೊಳಗೊಂಡಿವೆ. ಅವು ಬಿಡಿಯಾಗಿವೆ, ಇಡಿಯಾಗಿವೆ ಮತ್ತು ಭಾವದೀಪ್ತ, ಧ್ವನಿಪ್ರಚುರವಾಗಿವೆ. ಕನ್ನಡ ನಾಡವರ ಹಿರಿಮೆಯನ್ನು ಕುರಿತ ಅದರಲ್ಲಿಯ ಚುಟುಕುಗಳು ಇವು.

ಪದನಱಿದು ನುಡಿಯಲುಂ ನುಡಿ
ದುದನಱಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುಱಿತೋ
ದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್

ಆ ನಾಡ ಜನರು ಕ್ರಮವನ್ನು ಅರಿತು ನುಡಿಯುವುದರಲ್ಲಿಯೂ; ನುಡಿದುದನ್ನು ತಿಳಿದುಕೊಂಡು ಪರ್ಯಾಲೋಚಿಸುವುದರಲ್ಲಿಯೂ ಸಮರ್ಥರು. ಅಲ್ಲದೆ ಸ್ವಭಾವತಃ ಜಾಣರಾದ ಅವರು ಉದ್ದೇಶ

ಪೂರ್ವಕವಾಗಿ ಓದದೆಯೂ ಕಾವ್ಯ ಪ್ರಯೋಗದಲ್ಲಿ ಪರಿಣತರು. ಓದದವರು ಹೀಗಿದ್ದರೆ, ಇನ್ನು ಓದಿದವರು ಕೂಡ ಜಾಣರು. ಚಿಕ್ಕ ಮಕ್ಕಳೂ ಹುಟ್ಟು ಮೂಗರೂ ವಿವೇಕ ಹೇಳಬಲ್ಲರು. ಜಾಣ್ನುಡಿಗಳಾಡಬಲ್ಲರು.

ಕುಱಿತವರಲ್ಲದೆ ಮತ್ತಂ
ಪೆರರುಂ ತಂತಮ್ಮ ನುಡಿಯೊಳೆಲ್ಲರ್ ಜಾಣರ್
ಕಿಱುವಕ್ಕಳ್ ಮಾಮೂಗರು
ಮಱಿಪಲ್ಕಱುವರ್ ವಿವೇಕಮಂ ಮಾತುಗಳು

ಜಾಣರಲ್ಲದವರೂ ಅಭ್ಯಾಸಶೀಲರಾಗಿರುತ್ತಿದ್ದರು. ಅವರು ತಿಳಿದವರಲ್ಲದಿದ್ದರೂ ತಿಳಿದವರಂತೆ, ಕೃತಿಯಲ್ಲಿ ಕಿಂಚಿತ್ತೂ ದೋಷವಿದ್ದರೂ ಅದನ್ನೇ ಎತ್ತಿ ಹಿಡಿದು ದೂಷಿಸುತ್ತಿದ್ದರು.

ಜಾಣರ್ಕಳಲ್ಲದವರುಂ
ಪೂಣೆಗರಱಿಯದೆಯುಮಱಿವವೋಲವಗುಣದಾ
ತಾಣಮದಿನಿಸೆಡೆವೊತ್ತೊಡೆ
ಮಾಣದೆ ಜಡಿದದನೆ ಕೃತಿಗಳು ಕೆಡೆನುಡಿವರ್

ಇದೇ ಗ್ರಂಥದಿಂದ ಇನ್ನೆರಡು ಚುಟುಕುಗಳು. ಇವು ಅಲ್ಲಿ, ಮಾಧುರ್ಯ ಮತ್ತು ಸುಕುಮಾರ ಗುಣಗಳಿಗೆ ಉದಾಹರಣೆಗಳಾಗಿ ಬಂದಿವೆ. ಈ ಬಿಡಿಪದ್ಯಗಳಿಗೂ ಬೇರೆ ಪದ್ಯಗಳಿಗೂ ಸಂಬಂಧವೇ ಇಲ್ಲ, ಇವು ಸ್ವತಂತ್ರವಾಗಿವೆ.

ದೆಸೆಗಳ್ ವಿಶಾಲಮಾದುವು
ಕೆಸಱಿಂ ಪಿಂಗಿತ್ತು ಧರಣಿ ತಿಳಿದವು ಕೊಳಗಳ್
ಶ್ವಸನಪಥಮಳಮಾಯ್ತಿಂ
ದೊಸಗೆಗಳಂ ಬೀಱುವಂತೆ ಶರದಾಗಮದೊಳ್

ಶರತ್ಕಾಲದ ಆಗಮನದ, ಪ್ರಿಯವಾರ್ತೆಯನ್ನು ಎಲ್ಲೆಡೆಗೂ ತಿಳಿಸುವಂತೆ ದಿಕ್ಕುಗಳು ವಿಶಾಲವಾದುವು, ಕೆಸರೆಲ್ಲ ಇಂಗಿಹೋಗಿ ನೆಲ ಒಣಗಿತು, ಬಗ್ಗಡ ತುಂಬಿದ್ದ ಕೊಳಗಳು ತಿಳಿಯಾದವು. ಆಕಾಶ ನಿರ್ಮಲವಾಯಿತು.

ತೊಳಪೆಳೆವೆಱಿಯುಂ ಮೊರೆವಳಿ
ಕುಳಂಗಳುಂ ಮೆಲ್ಲನೆಸವ ಮಳಯಾನಿಳನುಂ
ಮುಳಿಸಂ ಕಟಲ್ಚಿ ಕಳೆದವು
ಕಳಿಕಾಂಕುರಚೂತತತಿಗಳುಂ ಕಾಮಿಗಳ್

ತೊಳಗುವ ಬಾಲಚಂದ್ರನೂ ಮೊರೆವ ದುಂಬಿವಿಂಡೂ ಮೆಲ್ಲನೆ ಬೀಸುವ ಮಲಯಮಾರುತನೂ ಮಾವಿನ ಹೂ ಮೊಗ್ಗೆಗಳೂ ಕಾಮಿಗಳ ಪ್ರಣಯಕೋಪವನ್ನು ಇಲ್ಲವಾಗಿಸಿದವು. ಇಂಥ ವರ್ಣನೆಗಳನ್ನೊಳಗೊಂಡ ಚುಟುಕುಗಳು ಈ ಗ್ರಂಥದಲ್ಲಿ ಇನ್ನೂ ಬಹಳವಾಗಿವೆ. ಅವುಗಳಲ್ಲಿ ಕೆಲವು ಇಂತಿವೆ.

ಆರ್ತನ ತೆಱನಱಿಯದೆ ಮರ್ದುವೇೞ್ಪ ಬೆಜ್ಜನ ತೆಱಂ (೩-೧೫೨)

ಉಭಯ ಲೋಕಹಿತದೊಳ್ ನೆಗೞ್ಗೆ ಜನಂ ಪೞಗೆ ಪೊಗೞು ತನಗೇನದ ಜೊಳ್ (೩-೧೮೦)

ಎರಡಕ್ಕೆ ಬಿಟ್ಟ ಕಱುವಂ ಪೋಲ್ಗುಂ (೨-೯)

ಒತ್ತುಂಗರಡೆಯ ಮದ್ದಳೆಯ ಜರ್ಝರ ಧ್ವನಿಗಳವೋಲ್ ಪರಷತರಮಕ್ಕುಂ (೧-೫೩)

ಕಾಣದಂತೆಂದುಂ ಕಣ್ಗಳ್ ತಮ್ಮ ಕಾಡಿಗೆಯಂ (೧-೪೫)

ಕಿಱುದೆಂದೇೞುಸಿ ಪಗೆಯಂ ಪೞುಪಡೆ ಕಿಡಿಸದೊಡೆ ಪೆತ್ತು ಕಾಲದ ಬಲಮಂ ನೆಱೆದಿಱುಗುಂ(೩-೧೪೯)

ಕೂಸಿನ ತಲೆಯೊಳ್ ಬಿಣ್ಪೊಱೆಯನಿಟ್ಟವೋಲ್ (೨-೬)

ಜರದ್ವಧೂ ವಿಷಯಸುರತರಸರಸಿಕತೆವೋಲ್ (೧-೫೦)

ತಲೆಯಂ ಕಿರಿಯಿಸಿ ದಿವಸಮನಸಲದೆ ಬೆಸಗೊಳ್ವನಂತು (೩-೧೪೫)

ನೆಲ್ಲುಂ ಮೊಸರುಂಗುಡಿದಂತೆ (೨-೪)

ಪಾೞು ನಿಲೆ ನೆಗೞು ಬಾೞ್ವುದು ಬಾೞಿಂಬುದು ನಿಕ್ಕುವಂ (೩-೧೭೮)

ಮಱುಗುವ ಪಾಲ್ಗಳೆಯ ಪನಿಗಳಮ್ ಬೆರಸಿದವೋಲ್ (೧-೫೮)

ಮುತ್ತುಂ ಮೆೞುಸುಂ ಕೋದಂತೆ (೨-೫)

ಮೃತಕ ಕೃತೋಪಕೃತಿಯಮವೊಲನರ್ಥಾಯಾಸಂ (೩-೧೪೬)

ಕವಿರಾಜಮಾರ್ಗದ ಅನಂತರದ ಎಲ್ಲ ಪ್ರಾಚೀನ ಕನ್ನಡ ಕಾವ್ಯಗಳಲ್ಲಿಯೂ ಈ ಬಗೆಯ ಬಿಡಿಪದ್ಯಗಳನ್ನು ಕಾಣುತ್ತೇವೆ. ಈ ಪದ್ಯಗಳು ವರ್ಣಿಸದ ವಿಷಯಗಳಿಲ್ಲ. ಎಂದರೆ, ಪ್ರಕೃತಿವರ್ಣನೆ, ಸಂದರ್ಭ ಅಥವಾ ಸನ್ನಿವೇಶಗಳ ಚಿತ್ರಣ, ಸೌಂದರ್ಯ ವರ್ಣನೆ, ವ್ಯಕ್ತಿಚಿತ್ರ, ಕವಿ-ಕಾವ್ಯ ಪ್ರಶಂಸೆ, ಸಜ್ಜನ-ದುರ್ಜನರ ಗುಣಾವಗುಣಗಳು, ಕುಕವಿನಿಂದೆ, ಸತ್ಕವಿ ಪ್ರಶಂಸೆ, ವೈರಾಗ್ಯ ನಿರೂಪಣೆ, ನೀತಿಬೋಧೆ, ಧರ್ಮೋಪದೇಶ ಹೀಗೆ ಈ ಚುಟುಕುಗಳು ನಾನಾ ವಿಷಯಗಳ ಚಿತ್ರಣಗಳನ್ನೊಳಗೊಂಡು ಪ್ರಾಚೀನ ಕಾವ್ಯಗಳಲ್ಲಿ ಮಧ್ಯೆ ಮಧ್ಯೆ ಬಂದು ಸೇರಿಕೊಂಡಿವೆ. ಇಲ್ಲಿ ಎಲ್ಲ ಕಾವ್ಯಗಳಿಂದಲೂ ಉದಾಹರಣೆಗಳನ್ನು ತೆಗೆದು ತೋರಿಸುವುದು ಅಸಾಧ್ಯವಾದ ಕಾರಣ, ಪ್ರಾತಿನಿಧಿಕವಾಗಿ ಕೆಲವರಿಂದ ಮಾತ್ರ ಚುಟುಕುಗಳನ್ನು ಉದಾಹರಿಸಿ ಅವುಗಳನ್ನು ವಿವರಿಸಲಾಗಿದೆ.

ಪ್ರಕೃತಿವರ್ಣನೆ ಎಂದರೆ ಸಾಮಾನ್ಯವಾಗಿ ಸಮುದ್ರ, ಋತುಗಳು, ಸೂರ್ಯ-ಚಂದ್ರ, ನದಿ, ಗುಡ್ಡ, ಬೆಟ್ಟ, ಊರು-ಕಾಡು, ಉದ್ಯಾನ-ಕೊಳ, ಹೂವು-ಹಣ್ಣು, ಹಗಲು-ರಾತ್ರಿ, ಪ್ರಾಣಿ-ಪಕ್ಷಿ, ಹೊಲ-ಗದ್ದೆ

ಮುಂತಾದುವುಗಳ ವರ್ಣನೆಯೇ ಆಗಿದೆ. ಅವುಗಳ ವರ್ಣನೆಗಳಿಲ್ಲದ ಪ್ರಾಚೀನ ಕನ್ನಡ ಕಾವ್ಯಗಳೇ ಇಲ್ಲವೆನ್ನಬಹುದು. ಹೀಗೆ ಅವು ಎಲ್ಲ ಕಾವ್ಯಗಳಲ್ಲಿ ಬಂದಿದ್ದರೂ ಇದನ್ನು ಕಂಡ ಬಗೆ ಮತ್ತು ಚಿತ್ರಿಸುವ ರೀತಿ ಕವಿಯಿಂದ ಕವಿಗೆ ಭಿನ್ನವಾಗಿರುತ್ತವೆ. ಕನ್ನಡದ ಆದಿಕವಿ ಪಂಪನ ಕಾವ್ಯಗಳಲ್ಲಿ ಇಂಥ ಚುಟುಕುಗಳು ಹೇರಳವಾಗಿ ದೊರೆಯುತ್ತವೆ.

ವಡ್ಡಾರಾಧನೆಯಲ್ಲಿ ಹತ್ತೊಂಬತ್ತು ಮಹಾಪುರುಷರ ಕತೆಗಳಿವೆ. ಕತೆಯ ಮಾಧ್ಯಮ ಪದ್ಯವಾಗಿರದೆ ಗದ್ಯವಾಗಿದೆ. ಪ್ರತಿಯೊಂದು ಕತೆಯ ಉದ್ದೇಶ ಸ್ಪಷ್ಟವಾಗಿ ಧರ್ಮಾಚರಣೆ, ಧರ್ಮೋಪದೇಶ, ಕತೆಗಳ ನಾಯಕರೆಲ್ಲ ಆಸನ್ನಭವ್ಯರು; ಉಳಿದ ಪಾತ್ರಗಳು ಇವರ ಮೋಕ್ಷಸಾಧನೆಗೆ ಅನುಕೂಲಕರವಾಗಿಯೋ ಪ್ರತಿಕೂಲವಾಗಿಯೋ ಬರುವಂಥವರು. ಇಷ್ಟಾಗಿಯೂ ಈ ಕತೆಗಳು ನಮ್ಮ ಅತ್ಯಂತ ಪ್ರಾಚೀನ ಕಲೆಯಾದ ಕತೆಗಾರಿಕೆಯ ಅನೇಕ ಮಹತ್ವದ ಲಕ್ಷಣಗಳನ್ನು, ನಿಯಮಗಳನ್ನು ಸ್ಪಷ್ಟವಾಗಿ ಪ್ರತಿಪಾದಿಸುತ್ತವೆ. ಆ ಕೃತಿಯಲ್ಲಿ ಬಳಕೆಯಾದ ಚುಟುಕುಗಳು ಹೀಗಿವೆ.

ಅಱಿಪ ಬಳ್ಳಿ ಕಾಲ್ತೊಡರ್ದುತ್ತು (೪.ಪುಟ, ೫೯-ಸಾಲು, ೧೮)

ಅಱಿನೀರ ಮೀಂಗಳ್ವೊಲಾದರ್ (೪.ಪುಟ, ೫೭-ಸಾಲು, ೧೩)

ಅಹೋ ಧನುಷಿ ಕೌಶಲ್ಯಂ ಮನ್ಮಥಸ್ಯ ಮಹಾತ್ಮನಃ

ಅಸ್ಪೃಶನ್ನಪಿ ಗಾತ್ರಾಣಿ ಭಿನತ್ತ್ಯಂತರ್ಗತಂ ಮನಃ (೪-ಪುಟ, ೫೭-ಸಾಲು, ೧೫-೧೬)

ಆಕಾಶಗಾಮಿಯಪ್ಪ ಕಾಗೆಯನ್ನೆಂ ಕೊಲ್ವುದರಿದೆ? (೪-ಪು ೫೯-ಸಾಲು, ೨೪)

ಆವ ಕಾಲಮುಂ ಮಾಣಿಕದ ಬೆಳಗಿನೊಳಿರ್ಪುದಱಿಂದಂ ಸೊಡರ ಬೆಳಗಿಂಗೆ ಸೈರಿಸದೆ ಕಣ್ಣೀರ್ ಬರ್ಕುಂ! (೧-ಪುಟ, ೨೭-ಸಾಲು, ೫)

ಎನ್ನ ಬೇಡಿದುದನೀವೊಡೆ ನಿನ್ನಂ ಕಾವೆನ್ (೧-ಪುಟ, ೧೫-ಸಾಲು, ೨೨-೨೩)

ಕಳ್ಳನೊಳ್ಳಿದನೆಂದೊಡಾತನ್ ಕಳ್ಳನ್ (೧-ಪುಟ, ೧೭-ಸಾಲು, ೧೫)

ಕಾಲಮಲ್ಲದ ಕಾಲದೊಳ್ ಕಱುಗಾಲಮನೆಂತು ಪಡೆಯಲಕ್ಕುಂ (೧೪-ಪುಟ, ೧೫೭-ಸಾಲು, ೧೭)

ಕ್ಲೇಶಭಾಗಿಯಪ್ಪ ಪುರುಷಂ ಸ್ವರ್ಗಮನೆಯ್ದಿ ಮಾಱ(ಪ್ಪವೊ)ಲೆ (ಆ)ಯ್ತು (೪-ಪುಟ ೬೧-ಸಾಲು ೬-೭)

ಭವಿತವ್ಯಂ ಭವತ್ಯೇವ ಕರ್ಮಣಾಮೇಷ ನಿಶ್ಚಯಃ

ವಿಪತ್ತೌ ಕಿಂ ವಿಷಾದೇನ ಸಂಪತ್ತೌ ವಿಸ್ಮಯೇನ ಕಿಂ (೪-ಪುಟ ೫೮-ಸಾಲು ೨೩-೨೪)

ಭಾಗ್ಯವಿಲ್ಲದುದಂ ಪೆಱಲಾಗದು (೨-ಪುಟ ೪೦-ಸಾಲು ೧೬)

ಮಾನಸವಾಱೆಂದುಬು ಪನಿಪುಲ್ಲ ಮುಗಿನ ಲಂಚೆಯೊಳೋರಂತಪ್ಪುದು (೨-ಪುಟ ೪೭-ಸಾಲು, ೬-೭)

ಯದಪಿ ನಿಷೇವ್ಯಮಾಣಮನಸಸ್ಸಂತುಷ್ಟಿಕಾರಕಾ ವಿಷಯಾಃ

ಕಿಂಪಾಕಫಲಾಷನವದ್ಭವಂತಿ ಪಶ್ಚಾದತಿದುರಂತಾಃ (೧೦-ಪುಟ ೧೧೩-ಸಾಲು ೧೮-೧೯)

ಪ್ರತಿಯೊಂದು ಕತೆ ಯಾವುದೋ ಹಿಂದಿನ ಕಾಲದಲ್ಲಿ ನಡೆದ ಸಂಗತಿಯ ನೆನಪಾಗಿರಬಹುದು. ಕತೆಗೆ ಮುಖ್ಯವಾಗಿರುವುದು ಭೌತಕಾಲ ಮಾತ್ರ ಕತೆಯಲ್ಲಿಯ ಪಾತ್ರಗಳೆಲ್ಲ ಕತೆಯ ಮಾನುಷ ರೂಪಗಳಾಗಿರುತ್ತವೆ. ಕತೆಯನ್ನು ಹೇಳಲು ಮಾತ್ರ ಅವು ಬದುಕಿರುತ್ತವೆ. ಕತೆ ಹೇಳಿದೊಡನೆ ಬಾಣ ಕಾದಂಬರಿಯಲ್ಲಿರುವ ಗಿಳಿಯಂತೆ ಅವು ಸತ್ತು ಹೋಗಬೇಕು. ಈ ಕತೆಗಳೆಲ್ಲ ಕೂಡಿಕೊಂಡು ಕೊನೆಯಲ್ಲಿ ಒಂದು ಅರ್ಥವನ್ನು ನಿರ್ಮಿಸುತ್ತವೆ. ಕಥನ ಮತ್ತು ವರ್ಣನೆಗಳು ಸಂಗೀತದಲ್ಲಿಯ ಸ್ವರ ಮತ್ತು ಲಯಗಳಂತೆ ಒಂದರಿಂದೊಂದು ಭಿನ್ನವಾಗಿದ್ದರೂ ಒಂದಕ್ಕೊಂದು ಸಹಾಯ ನೀಡುತ್ತ ಕತೆಯ ಒಟ್ಟು ಅರ್ಥವನ್ನು ಕಟ್ಟುತ್ತವೆ.

ಪಂಪಭಾರತ : ಪಂಪನೇ ಹೇಳುವಂತೆ ಅದು ಒಂದು ಲೌಕಿಕ ಕಾವ್ಯ. ಮೂಲಕತೆ ಮಹಾಭಾರತದ್ದು ಎಂದ ಮೇಲೆ ಅದರಲ್ಲಿಯೂ ಧಾರ್ಮಿಕ ಅಂಶಗಳಿವೆ. ಪಂಪನ ಎರಡು ಕೃತಿಗಳಲ್ಲಿ ಧರ್ಮ ಮತ್ತು ಕಾವ್ಯಧರ್ಮ ಸಮ್ಮಿಳಿತವಾಗಿರುತ್ತವೆ. ಸಂದರ್ಭಕ್ಕೆ ತಕ್ಕಂತೆ ಕಾವ್ಯದ ಉದ್ದಕ್ಕೂ ಪಂಪ ಕಾವ್ಯಾಭಿವ್ಯಕ್ತಿಗೆ ಸೊಗಸಾದ ಚುಟುಕುಗಳನ್ನು ಬಳಸಿದ್ದಾನೆ.

ಕುಲಮಿರ್ದುದೆ ಕೊಡದೊಳಂ ಶರಸ್ತಂಬದೊಳಂ? (೨-೫೩)
ಕುಲಂ ಕುಲಮಲ್ತು, ಚಲಂ ಕುಲಂ, ಗುಣಂ ಕುಲಮಭಿಮಾನವೊಂದೆ ಕುಲ
ಮಣ್ಮುಕುಲಂ (೧೦-೨೧)
ಕೆಯ್ಗೞಿದ ಮನೆವಾೞ್ತೆಗೆ ಬುದ್ಧಿವೇೞಲೆಡೆಯಿಲ್ಲ (೭-೧೬ ವ)
ಕಃ ಕೇನಾರ್ಥೀ ಕೋ ದರಿದ್ರಃ? (೬-೪೦)
ಖಳ ನೊಳವಿಂಗೆ ಕುಪ್ಪೆವರಂ (೨-೫೦)
ಗರ್ವಮೆ ದೋಷಮ್, ಅಟ್ಟುಗಂ ದೋಷಮೆ? (೧-೧೩)
ಜಾಗದೊಳ್ಪಿನಚ್ಚೊತ್ತದೆ ಮಾಣ್ದು ಬಾೞ್ವ ಪಟುವಾನಸನೆಂಬನಜಾಂಡಮೆಂಬು
ದೊಂದತ್ತಿಯ ಪಣ್ಣೊಳಿರ್ಪ ಪುೞುವಲ್ಲದೆ ಮಾನಸನೇ ಮುರಾಂತಕಾ (೫-೭೫)
ಜಲಕ್ಕನೀಗಳಟುದೆಂ ಸಿರಿ ಕಳ್ಳೊಡವುಟ್ಟಿತೆಂಬುದಂ (೨-೪೭)
ತಣಿಯುಂಡಮರ್ದಂ ಗೋಮೂತ್ರದಿಂದೆ ಬಾಯ್ಪೂಸಿದವೋಲ್ (೬-೪೮)
ತನ್ನಿಕ್ಕಿದ ತತ್ತಿಯನೆ ಪಾವು ನೊಣೆವಂತೆ (೧೦-೧೩)
ತಲೆಯಂ ಮೂಗುಮನೊತ್ತೆಯಿಟ್ಟು ನೆರೆವಂತುಂತೇನಾರ್ ಗಾಂಪರೇ (೪-೮೪)
ತಾನೆ ಓಡಿ, ಯಾರೋಡಿದರ್ ? (೪-೯೪ ವ)
ತಾವೊಳಗಂ ತವೆತೋಡಿ ತಿಂದು ಪೊಱಗಣ್ಗೆ ಸಯ್ದರೆನೆ ಮಾೞ್ಪರ್ (೯-೮೪)
ತೊಡವೇವುದೊ ರೂಪೆ ಸಾಲದೇ? (೩-೪೬)
ದೀವಳಿಗೆಯುಂ ಮಾನಾಮಿಯುಂ ಮಾಡೆನೇ? (೪-೯೩)
ದೆಯ್ವಮನಾರಯ್ಕು ಮೀಱು ಬಾೞಿಲ್ ನೆಱೆವರ್ !? (೪-೩)
ನಗುವರನಱಿಯದೆಣ್ಬರೇಱುದ ಕರ್ತೆಯಂತೆ! (೪-೯೪ ವ)

(ಕತ್ತೆ ಮೇಲೆ ಕೂತುಕೊಂಡರೆ ನಗೆಪಾಟಲು. ಎಂಟು ಜನ ಕೂತುಕೊಂಡರೆ ಇನ್ನೂ ಹಾಸ್ಯಾಸ್ಪದ, ಜನರ ಕಣ್ಣಿಗೆ ಬಿದ್ದರೆ 'ಜನ ಏನಂದಾರು? ಎಂಬ ಪರಿಜ್ಞಾನವಿಲ್ಲದೆ ಎಂಟು ಜನ ಕತ್ತೆಯನ್ನು ಏರಿ ಕುಳಿತುಕೊಂಡರೆ ಅವರ ಪಚ್ಚಪಸಿ ಎಗ್ಗರೇ ಸರಿ!)

ನಾಡೆ ಲೋಭಿಯುಂ ಪಂದೆಯುಮಾಗಿಯೆ ಬಾಟ್ಸಂಗಲ್ಲದೆ ಸೂಳೆಯ ಕಣ್ ಪಾಸಗೆಯಕಣ್ಣು ಮೆನುಱುಗುಗುಮೇ (೬-೭೩)

ನಾಮೆಲ್ಲಮೊಂದೆ ಗರುಡಿಯೊಳೋದಿರ್ದಮಾನಸರ್ (೯-೪೮ ವ)

ನಿನ್ನುಪಕಾರಮನದೇತಱೊಳ್ ನೀಗುವೆನೋ! (೧೪-೩೭)

(ಅರ್ಜುನನು ಕೃಷ್ಣನಿಗೆ ಕೃತಜ್ಞತಾಭಾವದಿಂದ ಹೇಳಿದ ಮಾತು)

ನೋವಱುದಂಜುವುದೇಕೆ? (೧೩-೧೯)

ನೋಂತರ ಪಗೆವರನೆಟ್ಟುಱಿದಂತಾಯ್ತು! (೭-೩೪)

ಪಗೆಯಿಱುಯ ಬಮ್ಮರ ಮೂಗನರಿದರ್ ! (೭-೩೨ ವ)

ಪಡೆನೋಡಲ್ ಬಂದವರಂ - ಗುಡಿವೋಱುಸಿದರ್ (೩-೧೫)

ಬಡಿಗಂಡನಿಲ್ಲ ಪಾಲನೆ ಕಂಡಂ (೭-೧೯)

ಬಱುಬಂ ಪೊಯಿಲ್ವೆತ್ತಂತೆ (೮-೭೯ ವ)

ಬಿದಿ ಸಮಕಟ್ಟಿ ಕೊಟ್ಟೊಡೆಡೆಯೊಳ್ ಕಿಡಿಸಲ್ -ಕುಡಿಸಲ್ ಸಮರ್ಥರಾರ್? (೧೨-೧೮೨)

ಬಿಸಿದುಂ ಬೆಟ್ಟಿತ್ತು ಮುಸಿರದೇಂ ತೀರ್ದಪುದೇ? (೪-೬೫)

ಬೇರೊಳ್ ಬೆನ್ನೀರಂ ಪೋಯ್ (೮-೩೪)

ಬಂದ ಬಟ್ಟೆಯಿದೆ ಬಿಜಯಂಗೆಯ್ಯಿಂ (೯-೪೮ ವ)

ಭಾನುವೆ ಸಾಲದೆ ಪಗಲೆನಿತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ? (೧೩-೧೧)

ಮರುಳ್ಗೆ ಧೂಪಂ ತೋಱುದ ಮಾಟೆ (೭-೧೧)

ಮಹಾಪುರುಷರಾಜ್ಞಾಲಂಘನಂ ಗೇಯ್ವರೇ? (೭-೯)

ಮಾನಸರೇನಿನ್ನೂರು ವರ್ಷಮಂ ಬಟ್ದಪರೇ? (೧೨-೧೭೬)

ಮುಳಿವೊಡಮೆಯ್ದೆ ಕೇಳ್ದುಮುಳಿ (೧೩-೮೯)

ಮಂತ್ರಪಟಕ್ಕುರಗಂ ಸುಗಿವಂತೆ (೭-೪೩)

ರಕ್ಕಸಿಯರ ಕಂಡ ಕುಂಬಳದ ಮಾಟ್ಕೆವೊಲ್ (೯-೪೮)

(ಒಳಗೇ ಮೇದ ಗಳಿಗೇ ಸಿದ್ಧ ಎಂದು ಹೇಳುವ ಹಾಗೆ ರಾಕ್ಷಸ ಸ್ತ್ರೀಯರು ತಮ್ಮ ಕಣ್ಣಿಗೆ ಬಿದ್ದ ಕುಂಬಳವನ್ನು 'ತೋವೊಳಗಂ ತವೆ ತೋಡಿ ತಿಂದು' 'ಪೊಱಗಣ್ಗೆ ಸಯ್ದರೆನೆ ಮಾಟ್ಪರ್' ಎಂಬ ಒಂದು ನಂಬಿಕೆ). ಪಂಪಭಾರತದ ಕತೆಯನ್ನು ಆಯ್ದುಕೊಂಡದ್ದೇ ಒಂದು ಕಲಾತ್ಮಕವಾದ ನೀತಿಯನ್ನು

ಮಂಡಿಸುತ್ತದೆ. ಅವನಿಗಿಂತ ಮೊದಲ ಸಂಸ್ಕೃತದಲ್ಲಿ ಪ್ರಚಲಿತವಾಗಿದ್ದ ರಾಮಾಯಣ ಕಾವ್ಯಮಾರ್ಗವನ್ನು ಬಿಟ್ಟು ಬೇರೆ ದಾರಿಯನ್ನು ತೆರೆಯುವುದು ಅವನಿಗೆ ಸಾಧ್ಯವಾಯಿತು. ಕಾಳಿದಾಸನಿಗಿಂತ ಸಾಕಷ್ಟು ಪ್ರತಿಭೆಯನ್ನು ಕಡ ತೆಗೆದುಕೊಂಡ ಪಂಪ ಬೇರೆ ಮಾರ್ಗವನ್ನೇ ಹಿಡಿದ. ಈ ಕ್ರಾಂತದರ್ಶನ ಅವನಿರುವುದರಿಂದಲೇ ಅವನು ಕನ್ನಡ ಕಾವ್ಯದ ಆದಿಕವಿಯಾಗಿದ್ದಾನೆ.

ಒಂದನೇ ನಾಗವರ್ಮ ಬಾಣಭಟ್ಟನ ಸಂಸ್ಕೃತ ಕಾದಂಬರಿಯನ್ನು **ಕರ್ಣಾಟಕ ಕಾದಂಬರಿ** ಎಂಬ ಹೆಸರಿನಲ್ಲಿ ಅನುವಾದ ಮಾಡಿದ್ದಾನೆ. ಕಥಾಸಂವಿಧಾನದಲ್ಲಿ ಸ್ವತಂತ್ರ ಸೃಷ್ಟಿಯೂ ಅಲ್ಲಿದೆ. ನಾಗವರ್ಮನ ಅನುವಾದಕ್ಕೆ ಐತಿಹಾಸಿಕ ಮಹತ್ವವಿದೆ. ಕಾದಂಬರಿ ಮೊದಲಿನಿಂದ ಕೊನೆಯವರೆಗೆ ಕಾಮದ ಕತೆಯಾಗಿದೆ. ಅದರ ಕಥಾನಾಯಕ ಚಂದ್ರಾಪೀಡ ಚಂದ್ರನ ಅವತಾರವಿರುವುದರಿಂದ ಕತೆಯಲ್ಲಿ ಬೇಕೆಂದಾಗ ಬೆಳದಿಂಗಳು ಬೀಳುತ್ತದೆ. ಕತೆಯ ಉದ್ದಕ್ಕೂ ಚುಟುಕುಗಳು ಬಂದು ಸಹೃದಯವಾಚಕರಿಗೆ ರಸದೌತಣ ನೀಡುತ್ತವೆ.

ಇವಳಮ್ ನೋಡಲ್ ಪಡೆದೆ |
ನ್ನ ವಿಲೋಚನಮಾವ ನೋಂಪಿಯಂ ನೋಂತುವೊ ಮಾ ||
ಯ್ದ ವಿಧಾತ್ರನೇಕೆ ವಿರಚಿಸ |
ನೊ ವಿಲೋಚನಮಯಮೆನಲ್ ಮದಿಂದ್ರಿಯಚಯಮಂ || (೫-೧೯)

ಇಂತಪ್ಪವರುಮಟುವಂದಮದ್ಭುತಂ (೩-೪೬ ವ)

ಉತ್ತವಳಿಕೆಯೊಳೆ ಸಾವರ್ ಸತ್ತವರವರ್ಗಾವ ಹಿತಮನಾಚರಿಸುವರೋ? (೪-೧೨೦)

ಇನಿತೊಂದು ಪಕ್ಷಪಾತಮೊ ವನಿತೆಯರಂ ಮಾಡುವೆಡೆಯೊಳಬ್ಜಭವಂಗೆ! (೫-೯೦)

ಎಳವೆಗಮಸದೃಶಮೆನಿಸುವನುಷ್ಠಾನಗೊಳಿದೇಕೆ ನಿನ್ನಯ ಯತ್ನಂ? (೭-೧೩)

ಎಂತುಮೆನಿಪ್ಪವಸ್ಥೆಗಳನೆಯ್ದುತ್ತಿರ್ಪಿನಂ ಜೀವಮಂ ಬಿಸುಡಲ್ ಜೀವಿಗಪೇಕ್ಷೆ ಪಟ್ಟುದು ವಲಂ (ಕಥಾವತರಣ - ೬೧)

ಒದವಿದ ಸಿಗ್ಗಿಂದಮಾರುಮೇನನೋಡರ್ಚರ್? (೪-೫೫)

ಕಯ್ಯೊಳಿರ್ದಾಮಳಕ ಫಳಮ್ (ಕಥಾವತರಣ-೬೧)

ಕೆಮ್ಮಗೆ ಸುಖಮೆಂದಸಕ್ಕಿಷಯ ಸುಖ್ಯದೊಳಿಂತೆಜಗಲ್ಕೆ ತಕ್ಕುದೆ? (೪-೬೪)

ಗಾಳಿಗೊಡ್ಡಿದ ದೀಪಾಂಕುರದಂತೆ (೪-೧೩)

ಗುಣಿಗಳ ಮನಮೆಂದುಮಕಾರಣದೊಳೆ ಕರುಣಾರಸಾರ್ದ್ರಮಾರೋಳಮ್ (ಕತಾವತರಣ -೬೬)

ತತ್ಪಸವ್ಯೆಕ ಕಾರಣಂ ವನನಿಧಿಯಾದೊಡೇನುರಿಯದಿರ್ಪುದೆ ದಳ್ಳಿರಿ ಬಾಡಬಾನಲಂ?

ತನ್ಮನಿ ಯುಮಂ ಕಾಮಂ ಚಲಂ ಮಾಡಿದು (೪-೧೩)

ತಪದಿಂ ದೊರೆಕೊಳ್ಳದಿರ್ಪ ಫಲಮೊಂಬುಂಟೇ? (೭-೫೧)

ತಂತಮ್ಮ ಮಾಡಿದುದಂ ತಾಮುಣವೇೞ್ಕುಂ (೩-೯)

ದಿನಪತಿಯುಂ ದಿನಮುಂ ಬಿಡದನುಬಂಧದಿನಗಲದಂತೆ ಪೋಲ್ .... ಪದಪಿಂದ ಮೊರ್ವರೊರ್ವರನಗಲರ್(೨-೩೩)

ಚುಟುಕುಗಳಲ್ಲಿ ಅಭಿವ್ಯಕ್ತಿಯಲ್ಲಿ ಹಾಸ್ಯ-ವಿಡಂಬನೆ ಇರುವಂತೆ ಸಾಮಾಜಿಕ ಚಿಂತನೆಯಿದೆ. ಜಾತಿ ಸ್ಮರಣೆಯಿಂದ ಜೈನ ಕಾವ್ಯದ ಪಾತ್ರಗಳಿಗೆ ವೈರಾಗ್ಯ ಉಂಟಾಗುತ್ತದೆ. ಈಗ ಇದು ಸುಳ್ಳಾಗಿ ಗಿಳಿಯಾಗಿದ್ದ ಪುಂಡರೀಕ ಜೀವನಕ್ಕೆ ಮಹಾಶ್ವೇತಯ ಬಗ್ಗೆ ಮೊದಲಿಗಿಂತ ಹೆಚ್ಚು ಅನುರಾಗ ಉಂಟಾಗುತ್ತದೆ. ಕಾಮ, ಅನುರಾಗ ದೊಡ್ಡ ಶಕ್ತಿ, ಅದರ ಲೆಕ್ಕವನ್ನು ತೀರಿಸದೆ ಜೀವಕ್ಕೆ ಮುಕ್ತಿಯಿಲ್ಲ.

ರನ್ನನ ಕಥನ ತಂತ್ರವೆಂದರೆ ಸಿಂಹಾವಲೋಕನ ಕ್ರಮ. ಎಲ್ಲ ಮುಗಿದುಹೋದ ಮೇಲೆ ಹಿಂದೆ ನೋಡುವ ಕ್ರಮ. ಕತೆ ಹಿಂದಿನದಾದರೂ ನೋಟ ಇಂದಿನದು ನೋಡುವ ಕ್ರಮ ನಡೆದ ಕ್ರಮವಿರಬೇಕೆಂಬ ನಿಯಮವಿಲ್ಲ. ರನ್ನನ ಕಾವ್ಯ ಗದಾಯುದ್ಧಕ್ಕಿಂತ ಸ್ವಲ್ಪ ಮೊದಲು ಪ್ರಾರಂಭವಾಗಿ ಗದಾಯುದ್ಧದಲ್ಲಿ ಅವಸಾನವಾಗುತ್ತದೆ. ಅಂದರೆ ಕತೆ ಇಂದಿನ ಕ್ಷಣದಿಂದ ಹಿಂದೆ ಹೋಗುವುದಿಲ್ಲ. ರನ್ನನ ಕಥನ ಕ್ರಮ ಪೂರ್ಣವಾಗಿ ಭಿನ್ನವಾದದ್ದು. ಅದು ಓದುಗರನ್ನು ಗತಕಾಲದ ಸಂಗತಿಗಳಲ್ಲಿ ತೊಡಗಿಸುವುದಿಲ್ಲ. ರನ್ನ ವರ್ಣನೆಯ ಮೂಲಕ ತನ್ನ ಉದ್ದೇಶವನ್ನು ನಿರ್ವಹಿಸುವುದರಿಂದ ಅರ್ಥ ಪ್ರತೀತಿ ಹೆಚ್ಚು ಗಹನವಾಗುತ್ತದೆ. ಮಧ್ಯಮಧ್ಯ ಅರ್ಥಪೂರ್ಣವಾದ ಚುಟುಕುಗಳನ್ನು ತರುತ್ತಾನೆ.

ಅಖಂಡಿತಮಭಿಮಾನಂ (೫-೫೩)

ಅತ್ತ ಪುಲಿ ಯಿತ್ತ ದರಿ (೯-೧೬)

ಅನಲಾನಿಲ ಸಂಯೋಗಮುರಿಪದಿರ್ಕುಮೆ ಪಗೆಯಂ? (೧-೬೬)

ಅಶುಭಸ್ಯ ಕಾಲಹರಣಂ (೬-೬ ವ)

(ಶುಭಸ್ಯ ಶೀಘ್ರಂ ಎಂಬುದಕ್ಕೆ ಎದುರು ಮಾತು)

ಆರಯೆ ನೃಪರಾರುಂ ವಾಕ್ಸಾರರ್, ಕರ್ತವ್ಯ ಸಾರರಲ್ಲರ್ (೨-೭)

ಆರಾಧ್ಯಂ ನ ಪ್ರಕೋಪಯೇತ್ (೩-೫೮ ವ)

ಉದಧಿಯನೆಯ್ದೆ, ದಿಗ್ಗಜಮನೆಯ್ದೆ, ಕುಲಾದ್ರಿಯನೆಯ್ದೆ, ನೀಳ್ದು ನಿಲ್ವುದು ಆಸಮಿತ್ರಗ್ರಿತ್ತ ಧನಮೇನದು ನಿಲ್ವುದೇ? (೧-೩೫)

ಉದಾರಂ ಸ್ತ್ರೀಯುತನಮತ್ಸರಂ ವಾಕ್ಶ್ರೀಯುತನಾದೊಡೆ ಕೃತಾರ್ಥರಾಗರೆ ಕವಿಗಳ್ ? (೧-೪೯)

ಏರ್ಪತ್ತರ್ ಏರ್ಪತ್ತರಂ ಪದುಳಂ ಮಾೞ್ಪುದು ಉಚಿತಂ

ಒಡಲೊಡಮೆಯೆಂಬಿವೆರಡುಂ ಕೆಡಲಿರ್ಪುವು ಕೆಡದ ಕಸವರಂ ಜಸಂ (೨-೪)

ಕರ್ಕಶತನುವಂತಃ ಶೂನ್ಯಮಕ್ಕು ಮುನ್ನತ ವಂಶಂ (೩-೫೮)

ಕಟ್ಬಾಳ್ ನೆರಂಬಾರ್ವನೇ? (೫-೪೬)

ಕಡುಗೂರಿತಕ್ಕುಮುಕ್ಕಿನೊಳೊಡಗೂಡಿದ ಪಚ್ಚೆ (೩-೬೫)

(ಸಹಜವಾಗಿ ಮಿಗುವಾಗಿರುವ ಕಬ್ಬಿಣಕ್ಕೆ ಉಕ್ಕಿನ ಸಂಗಡ ಬೆರೆತಾಗ ಎಲ್ಲೂ ಇಲ್ಲದ ಹರಿತ ಬರುತ್ತೆ. ಸ್ವಯಂಶೂರರು ಉಕ್ಕಿನ ಹಾಗೆ. ಅವರಲ್ಲಿ ಕೇವಲ ಹಂದೆಗಳಲ್ಲಿಯೂ ಶೌರ್ಯೋತ್ಪಾದನೆ ಮಾಡುವ ಅನನ್ಯ ಸಾಧಾರಣ ಮಹಿಮೆಯಿದೆ.)

ಕಪಿಗೆ ಚಪಲತೆ ಸಹಜಂ (೩-೪೧)

ಕಮ್ಮಱುಯೋಜನೆನಿಸಿದಂ ಬಿಲ್ಲೋಜಂ! (೨-೧೩)

ಕಯ್ಪೆ ಸೋರೆಯ ಕುಡಿಯೇಂ ಮಿಡಿಯೇಂ? (೩-೬೧)

ಕರವಾಳಂ ಮಸೆವಂದದೆ ಮರವಾಳಂ ಮಸೆಯೆ ಕೂರಿತಕ್ಕುಮೆ? (೨-೨೩)

ಕಲಿಗಂ ಸಂಕೆಯೆ? (೫-೪೬)

ಕುರುರಾಜಂ ತೊಡೆವೇನೆಗೆ ನರಳನೆ ವಿರೋಧಿಯಿಂದಾದ ಮಾನಹಾನಿಗೆ ನೊಂದಂ (೯-೧೯)

(ಹೋಲಿಸಿ : ಬಿದ್ದ ಪೆಟ್ಟಿಗಿಂತ ನಕ್ಕ ಪೆಟ್ಟು ಹೆಚ್ಚು.)

ಪಂಪನಿಗಿಂತ ರನ್ನನದು ವ್ಯತಿರಿಕ್ತವಾದ ಮಾರ್ಗವಾಗಿದೆ. ಪಂಪ ಹಿರಿದಾದ ಕತೆಯನ್ನು ಚಿಕ್ಕದಾಗಿಸಿ. ಅದರಲ್ಲಿಯೇ ಹಿರಿದಾದ ಅರ್ಥವನ್ನು ಪ್ರಕಟಿಸಲು ಪ್ರಯತ್ನಿಸಿದರೆ, ರನ್ನನು ಚಿಕ್ಕದಾಗಿರುವುದನ್ನು ವಿಸ್ತರಿಸುತ್ತಾನೆ. ರನ್ನನ ಕಾವ್ಯವಸ್ತು ಪಂಪನಲ್ಲಿ ಎರಡು ಅಶ್ವಾಸಗಳಲ್ಲಿ(೧೩ ಮತ್ತು ೧೪) ಅಡಕವಾಗಿದೆ. ಅದನ್ನು ರನ್ನ ಹತ್ತು ಅಶ್ವಾಸಗಳಲ್ಲಿ ವಿಸ್ತರಿಸಿ ಹೇಳುತ್ತಾನೆ.

ನಾಗಚಂದ್ರನು ತನ್ನ ಪಂಪರಾಮಾಯಣದಲ್ಲಿ ಚುಟುಕುಗಳನ್ನು ಅರ್ಥಪೂರ್ಣವಾಗಿ ಬಳಸಿದ್ದಾನೆ. ನಾಗಚಂದ್ರ ದೊಡ್ಡದಾದ ರಾಮನ ಕತೆಯನ್ನು ಸಂಕ್ಷೇಪಿಸಿ ಹೇಳಿದ್ದಾನೆ. ತನಗರಿಯದಂತೆ ಹೊಸ ಮಾರ್ಗ ತುಳಿದಿದ್ದಾನೆ. ಸೀತೆಯ ಸೌಂದರ್ಯ, ಸೀತಾಪಹರಣ ಮುಂತಾದವುಗಳಲ್ಲಿ ಚುಟುಕುಗಳು ಸುಂದರವಾಗಿ ಬಳಕೆಯಾಗಿವೆ.

ಅಧಿಕ ಭಾರಮೆಱಗಿಸದಾರಂ? (೨-೨೪)

ಅನುರಕ್ತೆ ಪ್ರಿಯನ ವಿರಹಮಂ ಸೈರಿಪಳೇ? (೭-೧೫)

ಅಪಕಾರಿಯು ಸಿರಿ ಖಳರನಲ್ಲದೇಂ ತಣಿಪುಗುಮೇ? (೭-೨೩)

ಅಟಿಗೆ ಮಾಱುವವೋಲ್ ಮಾಣಿಕಮಂ (೪-೫೦)

ಆರ್ಗೆ ಪುಟ್ಟದೊ ಸುತವ್ಯಾಮೋಹಕೌತುಹಳಂ ! (೩-೧೦೭)

ಅವುದು ಸುಖಮೆಂದೆಳಸುವನಾ ವಸ್ತುವೆ ದುಃಖಹೇತು (೯-೭೨)

ಆಶಾಶಕ್ತಿ ಸಾಮಾನ್ಯಮೇ! (೪-೪೭)

ಇನನತಿ ದೂರಮಿರಲ್ ಮೆ |

ಲ್ಲನೆ ಭೃಂಗಂ ಬಂದು ಸೋಕೆ ಮೊಗಮೀಯದೆ ಪ ||

ದ್ಮಿನಿ ಮುಗಿದಳ್ ಲಕ್ಷ್ಮೀಭಾ |
ಜನೆ ಗುಣವತಿ ಮಲಿನವೃತ್ತಿಯಂ ಸೈರಿಪಳೇ || (೭-೧೩)
ಒಲನಿಯಂತಿ ಪಿಡಿವರೆ ಕಸಮಂ (೧೧-೭)
ಓಪರೊಡಸಾವುದು ಸೈಪಿನೊಳಲ್ಲದಕ್ಕುಮೇ? (೧೪-೫೩)
ಔದುಂಬರ ತರುವಾರ್ಗಮಭೋಜ್ಯಂ ಕ್ಷುದ್ರ ಜಂತು ಜನ್ಮಾವಾಸಂ (೧೦-೬೧)
ಕಣ್ಬಡೆದ ಫಲಂ ಸುತನಂ ಕಾಣ್ಬುದೆ (೩-೧೨೧)
ಕಳಿವರಾರೋ ವಿಧಿವಿಳಸನಮಂ? (೧೦-೪೭)
ಕಾನಲಬಾನಲ ನೀರಂ ಮೀನೊಲ್ಗುಂ ರಾಜಹಂಸನೊಲ್ಗುಮೆ? (೧೩-೧೬೩)
ಗುರುವಚನಮಲಂಘನೀಯಂ (೯-೯೭)
ಚಿಂತಾಮಣಿಯಾದೊಡೆ ಲಾಲ್ಗುಮಲ್ತೆ, ಕಿಱುದೇಂ ಪಿರಿದೇಂ? (೯-೯೬)
ತಕ್ಕುದೆ ಪೊನ್ನಾಗದೆ ಪೊರ್ದೆ ಪರಷಮಂ ಲೋಹಂಗಳ್ ? (೩-೯)
ದಟ್ಟಡಿಯಿಡುವ ತನೂಭವನಂ ನಡೆನೋಡಲ್ಪಡೆದ ತಾಯ ಜನ್ಮಮೆ ಸಫಳಂ (೩-೧೧೪)
ಧನಕ್ಕೆ ಮಾಣಿಕ್ಯದೀಪಮೇನೆಱಗುಗುಮೇ ? (೧೧-೩೪)
ನೇವಾಳಮೆಂದು ಕೆಲಬರ್ ಪಾವಂ ಪಿಡಿವಂತೆ (೧೦-೧೨೧)
ಪಗೆಯ ಪಗೆ ಕೆಳೆಯಲ್ತೇ(೩-೭೭)
ಪಗೆಯ ಕೆಳೆ ಪಗೆಯಲ್ತೇ(೩-೭೭)
ಪರುಸಂ ತರ್ಪುದು ಪೊರ್ದೆ ಹೇಮಪದಮಂ ಲೋಹಕ್ಕೆ(೧೧-೯)

ಕತೆ ಹಳೆಯದಾದರೂ ಕಥಾಸಂವಿಧಾನ ನಿರ್ಮಾಣದಲ್ಲಿ, ಶೈಲಿ-ತಂತ್ರದಲ್ಲಿ ಕಾವ್ಯವು ಚುಟುಕುಗಳ ಮೂಲಕ ಸಹೃದಯರಿಗೆ ಅಪ್ಯಾಯಮಾನವಾಗಿದ್ದಾರೆ. ಪಂಚತಂತ್ರದ ಬಹುತೇಕ ಕತೆಗಳು ಪ್ರಾಣಿ ಕತೆಗಳು, ಆದರೆ ಅದರಲ್ಲಿ ಕೆಲವಾದರೂ ಮನುಷ್ಯನ ಕತೆಗಳಿವೆ. ಪ್ರಾಣಿಕತೆಗಳು ಕೂಡ ಮೂಲತಃ ಮನುಷ್ಯನ ಕತೆಗಳೇ, ಮನುಷ್ಯರು ಪ್ರಾಣಿಗಳಾದ್ದರಿಂದ ಅಲ್ಲಿ ಸ್ವಾತಂತ್ರ್ಯವಹಿಸಿ ಮನುಷ್ಯ ಜೀವನದ ಇತಿ-ಮಿತಿಗಳನ್ನು ತೋರಿಸಬಹುದಾಗಿದೆ. ದುರ್ಗಸಿಂಹನ ಚುಟುಕುಗಳ ಪ್ರಯೋಗ ಬಹಳ ಅರ್ಥಪೂರ್ಣ ವಾಗಿವೆ. ಅವುಗಳಲ್ಲಿ ಕೆಲವು ಹೀಗಿವೆ.

ಅಕಾಲಚರ್ಯಾಂ ವಿಷಮೇಷು ಗೋಷ್ಠೀಂ ಕುಮಿತ್ರಸೇವಾಂ
ನ ಕದಾಪಿ ಕುರ್ಯಾತ್
ಪಶ್ಯಾಂಡಜಂ ಪದ್ಮವನೇ ಪ್ರಸೂತಂ ಧನುರ್ವಿಮುಕ್ತೇನ
ಶರಣೇ ವಿದ್ಧಂ (೮೨)

(ಅಕಾಲದಲ್ಲಿ ಚರಿಸಲಾಗದು, ವಿಷಮರೊಡನೆ ಗೋಷ್ಠಿಯಂ ಮಾಡಲಾಗದು, ಕುಮಿತ್ರನ ಸಂಗಡ ಆಡಲಾಗದು : ಅದು ಹೇಗೆಂದೊಡೆ ಪದ್ಮವನದಲ್ಲಿ ಪುಟ್ಟಿದ ರಾಜಹಂಸೆಯಾಂದೆಯ ಕೆಳೆಗೊಂಡ ಕಾರಣದಿಂದೊಂದೆ ಬಾಣದಿಂದ ಮರಣಮನೆಯ್ದಿತ್ತು.

ಅಜ್ಞಾತಂ ಜೀವಿತಂ ಶೂನ್ಯಂ ದೇಶಶ್ಶೂನ್ಯೋ ಹ್ಯಬಾಂಧವಃ

ಅಪುತ್ರಸ್ಯ ಗೃಹಂ ಶೂನ್ಯಂ ಸರ್ವ ಶೂನ್ಯಾ ದರಿದ್ರತಾ (೨೨೩)

(ಅಱುವಿಲ್ಲದೊಡೆ ಜೀವಿತವೂ, ಬಂಧುಗಳಿಲ್ಲದ ದೇಶವೂ, ಮಕ್ಕಳಿಲ್ಲದ ಮನೆಯೂ ಬಡತನ ವಾಗಿಹವೂ ಪ್ರಯೋಜನವಿಲ್ಲವೆಂದಱುವುದು.)

ಅತ್ಯಾಚಾರಮನಾಚಾರಮತಿನಿಂದ್ಯಮತಿ ಸ್ತುತಿಃ

ಅತಿಶೌಚಮಶೌಚಂ ವಾ ಷಡ್ವಿಧಂ ಧೂರ್ತಲಕ್ಷಣಂ (೧೭೬)

ಅತಿಥಿರ್ಯಸ್ಯ ಭಗ್ನಾಶೋ ಗೃಹಾತ್ಪ್ರತಿನಿವರ್ತತೇ

ಸ ದತ್ವಾ ದುಷ್ಕೃತಂ ತಸ್ಯ ಪುಣ್ಯಮಾದಾಯ ಗಚ್ಛತಿ (೮೫)

(ಅವನಾನೋರ್ವನ ಮನೆಗೆ ಬಂದತಿಥಿ ಭಗ್ನಮನಸ್ಕನಾದೊಡೆ ತಾಂ ಮಾಡಿದ ಪಾಪಮಂ ಗೃಹಸ್ಥಂಗೆ ಕೊಟ್ಟು ಆ ಗೃಹಸ್ಥನುಪಾರ್ಜಿಸಿದ ಪುಣ್ಯಮನುಯ್ವಂ)

ಅರ್ಥಿತಾ ವಿಭವಸ್ತ್ಯಾಗಃ ಸ್ವಾತಂತ್ರ್ಯ ಮುಚಿತಜ್ಞತಾ

ಏತತ್ಪಂಚಗುಣೋಪೇತಂ ಆಶ್ರಯಂತೀಶ್ವರಂ ಬುಧಾಃ (೨೧೨)

(ಬೇಡುವರ ದೀನತರವಹ ದೃಷ್ಟಿಯರಸಿನ ಮುಖದಲ್ಲಿ ಬಿರ್ದುದಾದೊಡೆ ಮರಳಿಯದು ಆ ಅವಸ್ಥೆಯಲ್ಲಿ ಮತ್ತೊಬ್ಬನ ಮುಖಮಂ ನೋಡದು.)

ಅರ್ಥೀ ದೋಷಂ ನ ಪಶ್ಯತಿ (೧೨೩)

(ಪಿರಿದುಂ ಬಯಕೆಯನುಳ್ಳವಂ ಕೇಡಂ ನೋಡಂ)

ಅನಾಗತಂ ಯಃ ಕುರುತೇ ಸ ಶೋಭತೇ ಯೋ ನ ಕರೋತ್ಯ ನಾಗತಂ

ವನೇ ವಸನ್ನತ್ರ ಜರಾಮುಪಾಗತೋ ಬಿಲಸ್ಯ ವಾಚೋ ನ ಕದಾಚನ ಶ್ರುತಾಃ (೧೪)

(ಅವನೊರ್ಬ ಮೇಲಪ್ಪ ಕಜ್ಜವನಱುದು ಮಾಡದಿರ್ದಪವನನೊಪ್ಪಲಱಿಂಯೆಂ. ನಾನೀ ವನ ದುರ್ಗದೊಳಿರ್ದು ವಾರ್ಧಿಕವನೆಯ್ದಿದೆಂ, ಬಿಲದನುಡಿಯನೆಂದುಂ ಕೇಳ್ದುದಿಲ್ಲ.)

ಅನಾಥಂ ಲಿಂಗಮುದ್ದಿಷ್ಟಂ ನ ಮೋಕ್ಷಾಯ ವಿಧಿಯತೇ (೧೭೩)

(ಗುರುವಿಲ್ಲದಂಥ ಲಿಂಗ ಲಾಂಛನವು ಮೋಕ್ಷವ ಮಾಡದು)

ಅನಾರಂಭೋ ಮನುಷ್ಯಾಣಂ ಪ್ರಥಮಂ ಬುದ್ಧಿ ಲಕ್ಷಣಂ

ಅರಬ್ಧಸ್ಯಾಂತಗಮನಂ ದ್ವಿತೀಯ ಬುದ್ಧಿಲಕ್ಷಣಂ (೧೭೯)

(ಕೆಲಸವಂ ತೊಡಗದಿಹುದೆ ಮನುಷ್ಯರ ಬುದ್ಧಿಗೆ ಮೊದಲ ಕುಱುಹು; ಕೆಲಸವಂ ತೊಡಗಿದ ಬೞಿಕ ಅದಂ ಕೊನೆಮುಟ್ಟಿಸುವುದೇ ಎರಡನೆಯ ಕುಱುಹು.)

ಅನ್ಯಾಯವ್ಯಯಶೀಲಶ್ಚ ಹ್ಯನಾಥಕಲಹಪ್ರಿಯಃ
ಆತುರಸ್ಸರ್ವಭಕ್ಷೀ ಚ ನರಶ್ಶೀಘ್ರಂ ವಿನಶ್ಯತಿ (೨೧೯)

(ಆಯವಿಲ್ಲದೆ ಬೀಯವ ಮಾಡುವನುಂ, ಸಹಾಯವಿಲ್ಲದೆ ಕಲಹಪ್ರಿಯನಾಗಿಹವನುಂ, ಆತುರನಾಗಿ ಸರ್ವಮಂ ಭಕ್ಷಿಸುವನುಂ ಶೀಘ್ರವಾಗಿ ಕಿಡುವರ್.)

ಅನೇಕದೋಷದುಷ್ಟೋಽಪಿ ಕಾಯಃ ಕಸ್ಯ ನ ವಲ್ಲಭಃ
ಕುರ್ವನ್ನಪಿ ವ್ಯಲೀಕಾನಿ ಯಃ ಪ್ರಿಯಃ ಪ್ರಿಯ ಏವ ಸಃ (೬೧)

(ಅನೇಕ ದೋಷದಿಂ ದುಷ್ಟಮಪ್ಪುದಾದೊಡಂ ಶರೀರವಾರ್ಗೆ ಪ್ರಿಯವಲ್ಲ. ಅವಿವೇಕಿಗಳ್ ಶತ್ರು ಕಪಟದಿಂದ ಮಾಟ್ಟ ಹಿತಮಂ ಕಂಡು ಪ್ರಿಯಮೆಂದೇ ಬರೆವರ್.)

ಅಪಶ್ಯ ಲಕ್ಷ್ಮೀಹರಣಾರ್ಥ ವೈರತಾ
ಮಚಿಂತಾಯಿತ್ವಾ ಚ ತದದ್ರಿಮರ್ದನಂ
ದದೌ ನಿವಾಸಂ ಹರಯೇ ಮಹೋದಧಿ
ರ್ವಿಮತ್ಸರಾ ಧೀರಧಿಯಾಂ ಹಿ ವೃತ್ತಯಃ (೧೪೨)

(ಮಂದರಾಚಲದಿಂ ನೋಯೆ ಕಡೆದೊಡಂ ಅಲ್ಲಿ ಹುಟ್ಟಿದಂತಪ್ಪ ಲಕ್ಷ್ಮಿಯಂ ಕೊಂಡೊಡಂ ವಾರಿಧಿ ಹರಿಯಿರಲ್ಕೆಡೆಗೊಟ್ಟುದಲ್ಲದೆ ವೈರಮಂ ನೆನೆದುದಿಲ್ಲ. ಅದು ಕಾರಣಮಾಗಿ ಹಿರಿಯರ ನೆಗೞ್ತೆಗಳ ವೆಂದುಂ ದೋಷವನ್ನೆದುವುದಿಲ್ಲ.)

ಅಪ್ರಾಜ್ಞೇನ ಚ ಕಾತರೇಣ ಚ ಗುಣಸ್ಸ್ಯಾತ್ ಸಾನುರಾಗೇಣ ಕಃ
ಪ್ರಜ್ಞಾವಿಕ್ರಮ ಶಾಲಿನೋಽಪಿ ಹಿ ಭವೇತ್ ಕಿಂ ಭಕ್ತಿಹೀನಾತ್ಫಲಂ
ಅಧನಂ ಖಲು ಜೀವಧನಂ ಹೇಮಾರ್ಧಧನಂ ಮಹಾಧನಂ ಧಾನ್ಯಂ
ಅತಿಧನಮೇತತ್ಸುಂದರವಿದ್ಯಾ ಶೀಲಂ ತಪಶ್ಚ ಮಿತ್ರಂ ಚ (೨೧೩)

(ಜೀವಧನಂ ಧನವಲ್ಲ; ಸುವರ್ಣಮಯಾಭರಣಂಗಳರ್ಧ ಧನಂ; ಧಾನ್ಯಂ ಮಹಾಧನಂ; ಸುವಿದ್ಯೆ, ಸುಶೀಲಂ, ಮಿತ್ರತ್ವಮೆಂಬಿವೆಸರ್ವಧನಾಧಿಕಂಗಳ್.).

ಅಧಿಕೋನ್ನತ ಗಜನಿವಹಂ ಭೂಜಪ್ರತತಿಯನುಡಿವಂತೆ ಪುಲ್ಲನೇಸಂಡಿದಪುದೇ? (ಪುಟ.೪೭)
ಅನಕ್ಷತಾ ಚ ಪ್ರಿಯಪೂರ್ವನಾಶನಂ ವಿವಾದನಂ ದುಶ್ಚರಿತಾನು ಕೀರ್ತನಂ
ಕಥಾಪ್ರಸಂಗೋ ನ ಚ ನಾಮ ವಿಸ್ಮಯೋ ವಿರಕ್ತ ಭಾವಸ್ಯ ಜನಸ್ಯ ಲಕ್ಷಣಂ (೨೨೨)

(ನೋಡದೆಯಿರುಹವುಂ, ಪ್ರೀತಿಪೂರ್ವಕವಹಂತಹುದ ಕಿಡಿಸುವಹವು ವಿವಾದಮಂ ಮಾಡುಹವುಂ ನುಡಿಯದಿರುಹವುಂ ವಿಸ್ಮಯವಿಲ್ಲದಿರುಹವುಂ, ಇಂತಿಹವು ಸ್ನೇಹವಿಲ್ಲದ ಜನರ ಲಕ್ಷಣವೆಂದಱುವುದು.)

ಅನ್ಯದಾ ಭೂಷಣಂ ಪುಂಸಾ ಕ್ಷಂಆ ಲಜ್ಜೇವ ಯೋಷಿತಾಂ-
ಪರಾಕ್ರಮಃ ಪರಿಭವೇ ವೈಯಾತ್ಯಂ ಸುರತೇಷ್ವಿವ (೧೬೪)

(ಪುರುಷರ್ಗೆ ಉಟಿದ ವೇಳೆಯಲ್ಲಿ ಕ್ಷಮೆಯೇ ಭೂಷಣಂ, ಪರಿಭವವಾದಲ್ಲಿ ಪರಾಕ್ರಮವಿರಬೇಕು; ಸ್ತ್ರೀಯರ್ಗೆ ಊಱುದವೇಳೆಯಲ್ಲಿ ಲಜ್ಜೆಯೇ ಭೂಷಣಂ, ಸುರತದಲ್ಲಿ ದಿಟ್ಟತನವಿರಬೇಕು.)

ಅನಾಗತವತೀಂ ಚಿಂತಾಂ ಯೋ ಜರಃ ಕರ್ತುಮಿಚ್ಛತಿ
ಸತತಂ ಪಾಂಡುರಾಂಗಸ್ಸ್ಯಾತ್ ನಾಗಶರ್ಮಪಿತಾ ಯಥಾ (೧೪೫)

(ಅವನಾನೋರ್ವ ಮನುಷ್ಯನು ಮುಂದೆ ಬಹಂಥದನು ಚಿಂತಿಸಿ ಮಾಡಲುದ್ಯೋಗಿಸಿಹನು, ಅವನನುದಿನವು ಪಾಂಡುರಾಂಗನಹನು; ಅದೆಹೆಗೆಂದೊಡೆ-ನಾಗಶರ್ಮನ ತಂದೆಯಹಗೆ.)

ಅನಾಗತವಿಧಾತಾ ಚ ಪ್ರತ್ಯುತ್ಪನ್ನಮತಿಸ್ತಥಾ
ದ್ವಾವಿಮೌ ಸುಖಮೇಧೇತೇ ಯದ್ಭವಿಷ್ಯೋ ವಿನಶ್ಯತಿ (೧೧೮)

(ಮುಂದೆ ಭಹುದನಱಿವವನಂ ಬಂದುದರ್ಕೆ ತಕ್ಕುದರ್ಕೆ ತಕ್ಕುದಂ ನಿಶ್ಚೈಸಬಲ್ಲವನುಂ, ಈ ಸುಖಂಬಡುವರ್ ; ಬಂದುದಂ ಬರಲಿಯೆಂದಿರ್ದವಂ ಕಿಡುವಂ.)

ಅನಾಗತಾರ್ಥಮುತ್ಪೇಕ್ಷ್ಯ ಯಸ್ಯಾರಂಭೋ ವಿಜೃಂಭತೇ
ಲೋಕೇ ಹಾಸ್ಯಮವಾಪ್ನೋತಿ ಸೋಮಶರ್ಮಪಿತಾ ಯಥಾ (೧೪೬)

(ಮುಂದೆ ಹಂತದ ಕಾರ್ಯವನಪೇಕ್ಷಿಸಿ ಅವನಾನೋರ್ವನಾರಂಭವು ಹೆಚ್ಚುತಿರ್ದಹುದು, ಅದು ಲೋಕದಲ್ಲಿ ಹಾಸ್ಯಕ್ಕೊಳಗಹುದು, ಅದೆಂತೆಂದೊಡೆ ಸೋಮಶರ್ಮನ ತಂದೆಯಂತೆ)

ಪ್ರಜ್ಞಾವಿಕ್ರಮಭಕ್ತಯಃ ಸುಮುದಿತಾ ಯೇಷಾಂ ಗುಣಾಭೂತಯೇ
ತೇ ಬೃತ್ಯಾ ನೃಪತೇಃ ಕಳತ್ರಮಿತ್ರರೇ ಸಂಪತ್ತು ಚಾಪತ್ಸು ಚ (೧೭)

(ಬುದ್ಧಿಹೀನನುಂ ಕಾತರನುಮಾತಿರ್ಪವಂ ಸ್ನೇಹಿತನುಮಾದುಱುಂದಾಪ ಲೇಸುಂಟು? ಬುದ್ಧಿ ಪರಾಕ್ರಮಂಗಳಿಂದೊಳ್ಪುವೆತ್ತವನಾದೊಡಂ ಭಕ್ತಿಯಿಲ್ಲದವನೇತರ್ಕ ಬಾರ್ತೆಯಿಲ್ಲಂ. ಬುದ್ಧಿ ಪರಾಕ್ರಮ ಭಕ್ತಿಗಳ್ ಆರ್ಕೆಲಬಗೊಳವಾ ಭೃತ್ಯರರಸುಗಳ್ಗೆ ಪೆಂಡಿರ್ಮಕ್ಕಳೋಪಾದಿಯಲ್ಲಿ ಸಂಪತ್ತಾದೊಡಂ ವಿಪತ್ತಾದೊಡಂ ಬಿಡರ್.)

ಅಪ್ರಿಯಸ್ಯಾಪಿ ವಚಸಃ ಪರಿಣಾಮಾವಿರೋಧಿನಃ
ವಕ್ತಾ ಶ್ರೋತಾ ಚ ಯತ್ರಾಸ್ತಿ ರಮಂತೇ ತತ್ರ ಸಂಪದಃ (೬೪)

(ಅಪ್ರಿಯವಾದೊಡಂ ಮೇಲೆ ಹಿತಕರಮಪ್ಪ ನುಡಿಯಂ ನಡಿಯ ಬಲ್ಲವನುಂ, ನುಡಿದುದನಱುದು ಕೇಳಬಲ್ಲವನುಮೆಲ್ಲಿಯುಂಟು ಅಲ್ಲಿ ಸಂಪತ್ತುಮಪ್ಪುವು.)

ಅಭ್ಯಂತರಗತಾ ಬಾಹ್ಯಾ ಬಾಹ್ಯಾಶ್ಚಾಭ್ಯಂತರಂ ಗತಾಃ
ಯೈರ್ನರಾ ನಿಧನಂ ಯಾಂತಿ ಯಥಾ ರಾಜಾ ಕಚದ್ರುಮಃ (೫)

(ಅರಸುಗಳ್ ಒಳಗೆ ನಡೆವವರಂ ಹೊಱಗಿಕ್ಕಲಾರದು. ಹೊಱಗೆ ನಡೆವವರನೊಳಗಿಕ್ಕಲಾಗದು. ಅಹಗೆ ಮಾಡಿದವಂ ಕಿಡುವಂ. ಅದು ಎಹಗೆಂದೊಡೆ ಕಚದ್ರುಮನೆಂಬರಸಿನಹಗೆ.)

ಅಭ್ರಾಂತಶ್ಚನೃಪೋ ನಾಸ್ತಿ, ಶ್ರೋತ್ರಿಯೋ ನಾಸ್ತಿ ಬುದ್ಧಿ ಮಾನ್
ಅವಿದಗ್ಧಾಂಗನಾ ನಾಸ್ತಿ, ಕಿರಾಟೋ ನಾಸ್ತಿ ನಿಶ್ಚಿತಃ (೫೪)

(ಮರುಳನಲ್ಲದರಸಿಲ್ಲ; ಬುದ್ಧಿಯುಳ್ಳ ಛಾಂದಸರಿಲ್ಲ; ಜಾಣೆಯಲ್ಲದ ಸ್ತ್ರೀಯಿಲ್ಲ; ಹುಸಿಯದ ವ್ಯವಹಾರಿಯಿಲ್ಲ.)

ಅರಣ್ಯರುದಿತಂ ಕೃತಂ ಶವಶರೀರಮುದ್ವರ್ತಿತಂ
ಸ್ಥಲೇಬ್ಜಮವರೋಪಿತಂ ಬಧಿರಕರ್ಣಜಾಪಃ ಕೃತಃ
ಶ್ವಪುಚ್ಛವನಾಮಿತಂ ಸತತಮೂಷರೇ ವರ್ಷಿತಂ
ಧೃತೋನ್ಧ ಮುಖದರ್ಪಣೋಯದ ಬುಧೋ ಜನಸ್ಸೇವಿತಃ

(ಅಡವಿಯೊಳಟುಹವುಂ, ಹೆಣಕ್ಕೆ ಲೇಪನಂಗ್ಯ್ಯುದುಂ, ನೆಲದಲ್ಲಿ ತಾವರೆಯಂ ಬಿತ್ತುಹವುಂ, ಕಿವುಡಂಗೇಕಾಂತವಂ ಹೇಟುಹವುಂ, ನಾಯಬಾಲಮಂ ಕಾಸಿ ತಿರ್ದುಹವುಂ, ಸೌಳುಮಣ್ಣಿನಲ್ಲಿ ಮಟೆಬರುಹವುಂ, ಕುರುಡಂಗೆ ಕನ್ನಡಿಯಂ ತೋಱುಹವುಂ ಮೂರ್ಖನಂ ಬುದ್ಧಿವಂತನೋಲೈಸುವಹವುಂ ಇವರೋಪಾದಿ.)

ಅರಸರ್ ವಿಷಮಸ್ವಭಾವರ್ (ಪುಟ ೫೧)
ಅರಸುಗೆಯ್ವಾಗಂತಂತಪ್ಪನುಂ ಬಾಟತ್ತಿಯಾಗದನಿಲ್ಲಂ (ಪುಟ ೩೪)
ಅರಸುಮಾನೆಯುಂ ತಿರುಪುವರಿಚ್ಚೆ (ಲೋಕಗಾದೆ) (೧೫೪ ವ)
ಅಱಸುವ ಬಳ್ಳಿ ಕಾಲ್ತೊಡರ್ದುದು (ನಾಣ್ನುಡಿ) (೨೩೨ ವ)

ಪಂಚತಂತ್ರದಲ್ಲಿ ಕತೆ ಉಪಕತೆಗಳಿವೆ. ಅವೆಲ್ಲವೂ ಲೌಕಿಕ ಜೀವನದ ಆಗು ಹೋಗುಗಳಿಗೆ ಸಂಬಂಧಪಟ್ಟಿವೆ. ಅವನಲ್ಲಿ ಕಥನ ಮತ್ತು ವರ್ಣನೆಗಳು ಭಿನ್ನ ಶೈಲಿಯಲ್ಲಿ ವ್ಯಕ್ತವಾಗಿವೆ. ಅವನ ಚುಟುಕುಗಳು ಮಾಟಗಾರಿಕೆ ನಿಜವಾಗಿಯೂ ಅನಾದೃಶ್ಯವಾದದ್ದು. ಕವಿ ಬ್ರಹ್ಮಶಿವ ವಿಮರ್ಶಕರ ಕೈಯಲ್ಲಿ ಬಹುಚರ್ಚಿತವಾದ ಕವಿಯಾಗಿದ್ದಾನೆ. ಅವನ ಹೆಸರು, ಮತ, ವಂಶ, ಕಾಲ ಅವನಿಗೆ ಆಶ್ರಯ ಕೊಟ್ಟಿರುವ ರಾಜ ಅವನು ಉಪಯೋಗಿಸಿದ ಕಾವ್ಯಭಾಷೆ ಮತ್ತು ಅವನ ಕಾವ್ಯ ವಸ್ತುಗಳನ್ನು ಕುರಿತು ವಿದ್ವಾಂಸರು

ಚರ್ಚಿಸಿದ್ದಾರೆ. ಅವನ ಕಾವ್ಯ ಸಮಯಪರೀಕ್ಷೆ ವಿಡಂಬನಾತ್ಮಕ ಕಾವ್ಯವಾಗಿರುವುದರಿಂದ ಕವಿ ಮಧ್ಯ-ಮಧ್ಯ ಚುಟುಕುಗಳನ್ನು ಬಳಸಿದ್ದಾನೆ.

ಅಕ್ಕಿಗೊಟ್ಟು ಮಡಗೂಲನುಣ್ಬ ಮರುಳಂ ಪೋಲ್ಕುಂ (೧೪-೧೬೦)

ಅಜ್ಞಾನಿಯೆ ಪಡೆದಾವಿತ್ತಮಪಾತ್ರ ದಾನದಲ್ಲಿಗೆ ಯೋಗ್ಯಂ (೬-೮೦)

ಅತಿಮೋಹಂ ಗತಿಗೆಡಿಸುಗಮ್(೫-೮೨)

ಅನೇಕ ಸಾಧನ ಸಾಧ್ಯೋ ಧರ್ಮ (೧೧-೨೨)

ಅಮೃತಮಿರೆ ನಂಜನೆಂಜಲಿಸುವುದೇ? (೧೧-೧೫೫)

ಅಲೆಯೆಂಬತ್ತೆಯಿಲ್ಲಮಲೆಯೆಂಬಮಾವನಿಲ್ಲ(೧೫-೫೧)

ಅವನೀಶನಾಜ್ಞೆ, ಸಲ್ವಂತವನಿಗೆ ಪೆಱರಾಜ್ಞೆ ಸಲ್ಗುಮೆ? (೩-೧೩)

ಅವಳಿಲ್ಲ ಗಡವಳ ಮಕ್ಕಳೊಳವೇಂ ಪೇಳಿಂ (೧೦-೪)

ಅಹಿಯ ಮುಖದೊಳಮೃತಂ ಪೇಳ್ಸಂಭವಿಕುಮೆ? (೪-೮೪)

ಅಹಿಂಸಾ ಲಕ್ಷಣೋ ಧರ್ಮ (೩-೫)

ಅಳೆಗಾಡಿ ಬಳಮಂ ಕೆಡಿಪುವವೋಲ್ (೪-೨)

ಆದಿತ್ಯನನಂಗಯ್ಯೊಳ್ಮುಚ್ಚಲಾರ್ಗಮೇಂ ಬಂದಪುದೇ? (೨-೮೪)

ಆನೆ ಕಡುಗುಜ್ಜನಾದೊಡಮೇನನ್ಯ ಮೃಗಕ್ಕದೆಂತುಮುದ್ದಮೆ (೪-೩೬)

ಆನೆಗಳನುಡುವಂದದಿನೇನೋ ಕೋಳಿಗಳನೂಡಿದಪ್ಪರೇ? (೭-೬೨)

ಆನೆ ಗಂಡುವಡಿಯಱಿಸುವುದೇ? (೧-೮೧)

ಆಳ್ದನಿಲ್ಲಟಾಳಿನ ಮಾರ್ಗಂ (೧೪-೫)

(ಸುಬ್ರಹ್ಮಣ್ಯದ ಪಾರುಪತ್ಯಃ ಯಾರು ಏನು ಮಾಡಿದರೂ, ಹೇಗೆ ಮಾಡಿದರೂ ಅದೇ ಸರಿ.

ಉತ್ತಮ ದಾನದ ಸತ್ಫಲಮನಿತ್ತವಂಗರಿದುಂಟೇ? (೪-೬೭)

ಎಂತುಟೆ ಬೀಜಂ, ಭಾವಿಪೊಡಂತುಟೆ ಮೊಳೆ (೧೪-೧೩೧)

ಏನೊಂದಂ ಪ್ರಿಯದಿಂದಂ ದಾನಮನಿತ್ತಂಗಮಮಿತ ಸೌಖ್ಯಂ ಕಡೆಯೊಳ್ತಾ ನಕ್ಕುಂ (೪-೬೭)

ಕಡಲೆಗಳಂ ತಿಂಬ ಮೊಗ್ಗು ಕಲ್ಗಳೊಳುಂಟೇ? (೧೫-೫೬) (೧೩-೫೪)

ಕನಸಿನ ಭತ್ತಕ್ಕೆ ಗೋಣಿಯಾಂಪಂತಕ್ಕುಂ (೧೩-೫೫)

ಕವಡಿಕೆಯುಂ ಕಾಜುಇಂ ಸಲ್ಗುಮೆ ಹೊನ್ನಮೊಲೆಲ್ಲಿಯಾದೊಡಂ? (೩-೧೨)

ಕಳ್ಳನ ತಾಯಂತೆಮಱುಗುತಿರ್ಪುದೆ ಕಡೆಯೊಳ್ (೧೩-೬೪)

ಕಾಳ್ಕಿಚ್ಚಿಂಗೆ ಗಾಳಿ ನೆರವನೆ ಮೆಚ್ಚಿದ ತೆರಂ (೧೪-೧೨೧)

ಕಿಚ್ಚೆದ್ದಡೆ ಬಾವಿದೋಡುವವನಂ ಪೋಲ್ಕುಂ (೬-೪೩)

ಬ್ರಹ್ಮಶಿವನ ಬಗ್ಗೆ ವಿಚಾರ ಮಾಡಿದಾಗ ಚುಟುಕುಗಳ ಒಡಲಲ್ಲೆ ಆ ಕಾಲದ ಸಾಮಾಜಿಕ ಸಂಘರ್ಷದ ಸ್ವರೂಪ ಸ್ಪಷ್ಟವಾಗುತ್ತದೆ. ಕನ್ನಡದ ಸ್ವತಂತ್ರವಾದ ಅರ್ಥವಾಹಕತ್ವವನ್ನು ಪಡೆಯುವ ದಿಕ್ಕಿನಲ್ಲಿ ಅವನ ಚುಟುಕುಗಳಿಗೆ ಐತಿಹಾಸಿಕ ಮಹತ್ವವಿದೆ. ನಯಸೇನನ ಧರ್ಮಾಮೃತ ಅವನ ಹಿಂದಿನ ಜೈನ ಕಾವ್ಯಗಳಂತೆ ತೀರ್ಥಂಕರರ ಚರಿತ್ರೆ ಅಲ್ಲ ಅಥವಾ ಅದೊಂದು ಜೈನ ಪುರಾಣವೂ ಅಲ್ಲ. ಹಳೆಯ ಜೈನ ಕವಿಗಳು ತಮ್ಮ ಕಾವ್ಯಗಳನ್ನು ನಿರ್ಮಿಸುತ್ತಿದ್ದಾಗ ಬೇರೊಂದು ದಿಕ್ಕಿನಲ್ಲಿ ಧರ್ಮ ನಿರ್ಮಾಣದ ಕೆಲಸವೂ ನಡೆಯುತ್ತಿದ್ದಿರಬೇಕು. ತೀರ್ಥಂಕರರ ಚರಿತ್ರೆಯನ್ನು ಬರೆಯುವುದು ಕೂಡ ಧರ್ಮ ನಿರ್ಮಾಣದ ಒಂದು ಅಂಗವಾಗಿದ್ದಿತು. ನಯಸೇನನ ಧರ್ಮಾಮೃತದಲ್ಲಿ ಕತೆಗಳ ಸಂದರ್ಭ ವಿಶೇಷ ಪರಿಶೀಲನೆಗೆ ಯೋಗ್ಯವಾಗಿದೆ. ನಯಸೇನ ಧರ್ಮ ಪರೀಕ್ಷೆಯನ್ನು ಭಾಷೆಯ ಮೂಲಕವಾಗಿ ನಡೆಸುತ್ತಾನೆ.

ಉಡು ಕಣ್ಣಂ ಮುಚ್ಚಿರ್ದೆನ್ನೆಡೆಯಂ ಕೇಳಾರುಮಱಿಯಯಎಂಬೆಗ್ಗಿಂದಂ ಮಡಿವಂತೆ (೧೦-೨೮೭)

ಉಣ್ಬರ ಬಾಯೊಳ್ .... ಮಣ್ಣಂ ಪೊಯ್ದಿಂತು ಮಾಡಿದೈ (೯-೧೩೬)

ಉಪಕಾರಂಬುದು ಲಂಡ (ಲಟ್ಗೊದೆ) ೧೨-೧೦೯)

ಉಪದೇಶಂಗೊಟ್ಟರ್ ಋಣಂ ಗೊಟ್ಟರ್ (ನಾಣ್ನುಡಿ) (೬-೧೯೭)

ಉಪ್ಪಿಲ್ಲದೆ ಕೇಳೊಕ್ಕಳ

ತುಪ್ಪವನೆಱೆದುಣ್ಬೆನೆಂಬೊಡುಂಬುಣಿಸೇಂ ಸ್ವಾದಪ್ಪುದೆ? (೧-೫೦)

ಉರಗನ ವಿಷವೇಱೆದರುಂ ಸಿರಿಯುಳ್ಳರು ಮದ್ದುಗುಣಿಕೆಯಂ ತಿಂದವರುಂ

ಪಿರಿದುಂ ಪಿತ್ತಾಧಿಕರುಂ ಧರೆಯೊಳ್ ಮೆಯ್ಯಱಿಯರ್ (ನುಡಿ) (೪-೧೯೮)

ಉಂಡಱಿಯದರ್ಗುಡುದೆಲ್ಲಮಚ್ಚರಿ (೭-೨೨೯)

ಊರಾವುಗಳೋಡುವುದಂ ಕಂಡು ಕುರುಡಾವುಂ ಓಡಿತು (೧೧-೩೫)

ಎಚ್ಚಂಗಾಱದಂಬಿಂಗೆ.......ಮು ನಿವರ್ (ನಾಣ್ನುಡಿ) (೭-೧೧೯)

ಎಡೆಯನರಸಾದೊಡೆ ಕೊಡೆಯಕಾವು ಮೇಗಾದುದು (೨-೧೨೪)

ಎಣ್ಣೆ ನುಣ್ಪಂ ಮಾಡುವಂತೆ ಕಳ್ಳಿ ಮಾಡುಗುಮೆ? (೧೧-೧೮೮)

ಎತ್ತಿಕೊಂಡ ಕಳ್ಳಂ ಬಾಯಂ ಸುಟ್ಟೋಡಿದನ್ (೨-೯೫)

ಎನಿತು ತಾಳಮರನನೇಱುದೊಡಂ, ತಲೆಗೆ ಕಾಲ್ಕೆಳಗೆ (೬-೧೭೩)

ಎನಿತೊಳ್ಳಿತಾದೊಡಂ ಕಾಜಿನಮಣಿಗಳ್ ಪೊನ್ನತೊಡವನಿಟುಕೆಯ್ಗುಮೆ?(೮-೮೪)

ಎನಿಸುಜ್ಜಳಮಾದೊಡೆ ಚಂದ್ರನ ತೇಜಂ ರವಿಯ ತೇಜಮಂ ಗೆಲ್ಗುಮೆ? (೪-೧೮೬)

(ಪೆಣ್ಣೆನಿತೊಳ್ಳಿದಳಾದೊಡೆ ಪುರುಷನೊಳಾದ ಮಹಾಗುಣಗಳಂ ಪೋಲ್ತಪಳೇ? (೪-೧೮೬)

ಎಮ್ಮೆಯ ಪೆಸರ್ ಮಹಾದೇವಿ (೮-೧೭೬)

ಎರಕಕ್ಕೆ ಬಿಟ್ಟ ಕರುವಿನಂತೆ (೧-೧೬೨)

ಎಳಗಱು ಭಯಮಱಿಯದು (೧-೧೩೬)

(ಎಳಗರುಗಳಿಗೆ ಭಯವಿಲ್ಲದಂತೆ ಹೊಟ್ಟೆನೋವು ಬಂದೀತಲ್ಲಾಂತ. ತಮ್ಮ ಅಳವು ಅರಿಯದೆ ಮೇಯುತ್ತವೆಯಂತೆ. ಇದರಿಂದಾಗಿ "ಕರು ಹೊರೆ ತಿಂತು" ಎಂಬ ಗಾದೆಯೂ ಹುಟ್ಟಿದೆ).

ಹೀಗೆ, ಪ್ರಾಚೀನ ಕಾವ್ಯಗಳಲ್ಲಿ ಚುಟುಕುಗಳು ಧಾರಾಳವಾಗಿ ಬಳಕೆಯಾಗಿವೆ. ಅವುಗಳಿಗೆ ಅವುಗಳದ್ದೇ ಆದ ಸಾಮಾಜಿಕ ಆಯಾಮವಿದೆ. ಚುಟುಕುಗಳು ಕಥಾಹಂದರಕ್ಕೆ, ರಸಸ್ವಾದಕ್ಕೆ ಅವು ಪೂರಕವಾಗಿ ಕಾವ್ಯಾಭಿವ್ಯಕ್ತಿಗೆ ಕಾರಣವಾಗಿವೆ. ಒಟ್ಟಾರೆ ಚುಟುಕುಗಳು ಕಾವ್ಯಾಧ್ಯಯನಕ್ಕೆ ಸಹೃದಯ ವಾಚಕರನ್ನು ಸೂಜಿಗಲ್ಲಿನಂತೆ ಸೆಳೆಯುತ್ತವೆ.

ಅಧ್ಯಾಯ ೪

ನಡುಗನ್ನಡ ಸಾಹಿತ್ಯದಲ್ಲಿ ಚುಟುಕುಗಳು : ಸಾಮಾನ್ಯ ಸ್ವರೂಪ

೪

ನಡುಗನ್ನಡ ಸಾಹಿತ್ಯದಲ್ಲಿ ಚುಟುಕುಗಳು : ಸಾಮಾನ್ಯ ಸ್ವರೂಪ

ಮೊದಲಿಗೆ ಚುಟುಕು ಎಂದರೆ ಏನು ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದು ಅಗತ್ಯ. ಚುಟುಕು ಹೀಗೇ ಇರಬೇಕು ಎಂಬ ಹಠವನ್ನು ಹೊಂದದಿರುವುದೂ ಮುಖ್ಯ. ಯಾವುದೇ ಪೂರ್ವಾಗ್ರಹವಿಲ್ಲದೆ ತೆರೆದ ಮನಸ್ಸಿನೊಂದಿಗೆ ವಿವೇಚನೆ ನಡೆಸದಿದ್ದರೆ ಎಲ್ಲವೂ ವ್ಯರ್ಥವಾದೀತು. 'ಚುಟುಕು' ಎಂದರೆ ಚಿಕ್ಕದು ಎಂದಷ್ಟೇ ಅರ್ಥ. ಚಿಟಿಕೆಯಂತೆ ಅದು ಶಬ್ದ ಮಾಡಬಹುದು. ಚಿಟಿಕೆ, ಹೊಡೆಯಲು ಎರಡು ಬೆರಳುಗಳು ಇರಬೇಕಲ್ಲವೇ? ಯಾವುದೋ ಎರಡು ಬೆರಳುಗಳಿದ್ದರೆ ಆಗದು, ಅವು ಇದಿರು ಬದಿರಾಗಿರಬೇಕು. ಅವು ಘರ್ಷಿಸಿದಾಗ 'ಶಬ್ದ'ದ ಉತ್ಪತ್ತಿಯಾಗುತ್ತದೆ. 'ಶಬ್ದ' ಎಂದರೆ 'ಸದ್ದು' ಎಂದು ಮಾತ್ರವೇ ಅರ್ಥವಲ್ಲ. 'ಪದ' ಎಂದೂ ಆಗುತ್ತದೆ. ಅಲಂಕಾರವನ್ನೂ ಶಬ್ದವೆನ್ನುತ್ತಾರೆ. ಎಂದರೆ ಅನುಪ್ರಾಸ, ಯಮಕ ಮುಂತಾದ ಶಬ್ದಪ್ರಧಾನ ಅಲಂಕಾರಗಳು ಶಬ್ದಗಳೆನಿಸುತ್ತವೆ. ಲೋಕಾಭಿರಾಮವಾಗಿ ನಾವು ಯಾವುದೇ ಪದವನ್ನು ಬಳಸಿದರೂ ಅದರ ಹಿಂದೆ ಅಡಗಿರುವ ಅರ್ಥ ಎಷ್ಟು ಎಂಬುದರ ಅರಿವಾದಾಗ ಸೋಜಿಗವಾಗುತ್ತದೆ. ಚಿಟಿಕೆ ಚುಟುಕೇ ಆದರೂ ಅದರ ಭಾವಕೋಶ, ಅರ್ಥಕೋಶ ಬಹಳ ಹಿರಿಯದಾಗಿರಬಹುದು. ಯಾವುದೋ ವಿಷಯ ಹೊಳೆದಾಗ, ಚಮತ್ಕಾರವೆನಿಸಿದಾಗ ವಿಸ್ಮಯ ಮೂಡಿದಾಗ ನಾವು ಚಿಟಿಕೆ ಹೊಡೆದು ಅದನ್ನು ಅಭಿವ್ಯಕ್ತಿಸಲು ಯತ್ನಿಸುತ್ತೇವೆ. ಚಿಟಿಕೆಯೂ ಅರ್ಥವನ್ನು ತುಂಬಿಕೊಂಡು ನಮ್ಮ ಮುಂದೆ ನಿಲ್ಲುತ್ತದೆ. ಚಿಕ್ಕದು ಎನ್ನುವ ಚುಟುಕದಲ್ಲೂ ಅರ್ಥ. ಭಾವ, ವಿಚಾರ ಮಡುಗಟ್ಟಿ ನಿಲ್ಲಬಹುದು. ಚಾಟುವಿನಂತೆ ಅದು ಚಮತ್ಕಾರದಿಂದ ಕೂಡಿರಬಹುದು. ಸುಭಾಷಿತದಂತೆ ಒಳ್ಳೆಯ ಮಾತಾಗಿರಬಹುದು. ಮುಕ್ತಕದಂತೆ ಅದು ಅರ್ಥದೃಷ್ಟಿಯಿಂದ ಸ್ವಯಂಪೂರ್ಣವಾದ ಬಿಡಿ ಪದ್ಯವಾಗಿರಬಹುದು. ನಾಲ್ಕಾರು ಪಂಕ್ತಿಗಳಲ್ಲಿ ಸುಂದರವಾದ ಭಾವ ಪ್ರಪಂಚವೊಂದನ್ನು ಸೃಷ್ಟಿಸಬಲ್ಲ ಕವನರೂಪವೇ ಮುಕ್ತಕ ಎಂದು ವಿದ್ವಾಂಸರು ಹೇಳುವುದಾದರೆ, ಅದು ಕಾವ್ಯವಾಗುವುದಿಲ್ಲವೆಂದು ಯಾರೂ ತಳ್ಳಿ ಹಾಕುವುದು ಸಾಧ್ಯವಿಲ್ಲ, ಸಾಧುವೂ ಅಲ್ಲ. ಕುವೆಂಪು ಅವರ 'ಕರಡಿಕೆಯ' ರಚನೆಗಳು ಅಂಥವೇ. 'ಮಂತ್ರಾಕ್ಷತೆ'ಯ ಚುಟುಕುಗಳೂ ಚಿಕ್ಕವೇ. ಮಂತ್ರಾಕ್ಷತೆಯ ಮಹತ್ವವನ್ನು ಯಾರೂ ಅಲ್ಲಗಳೆಯಲಾರರು. ಚುಟುಕುಗಳನ್ನು ಮಂತ್ರಾಕ್ಷತೆಗಳೆಂದೇ ಕರೆದರೂ ತಪ್ಪಲ್ಲ. ಹಾಗೆನ್ನುವುದೂ

ಔಚಿತ್ಯಪೂರ್ಣವೇ. ತಮ್ಮ ಚುಟುಕುಗಳನ್ನು ಹನಿಗವನಗಳೆಂದು ಕೆಲವರು ಕರೆದುಕೊಳ್ಳುತ್ತಾರೆ. ರಾಜರತ್ನಂ ಅವರ ಪುಟಾಣಿ, ಪಾಶ್ಚಾತ್ಯಲೋಕದ ಎಪಿಗ್ರಂ ಅಸಂಬದ್ಧವೆಂದೂ, ಲೇವಡಿಯೆಂದೂ ಅಭಿವರ್ಣಿಸಲಾದ ಲಿಮರಿಕ್ಕು, ಹಿರಿಗವಿಗಳ ಕೃತಿಗಳಲ್ಲಿ ಸ್ವತಂತ್ರ ಹಾಗೂ ಪರಿಪೂರ್ಣವಾಗಿ ಎದ್ದು ಕಾಣುವ ಸಾಲುಗಳು ಎಲ್ಲವನ್ನೂ ನಾವು 'ಚುಟುಕು' ಸಾಹಿತ್ಯದ ಚೌಕಟ್ಟಿನೊಳಗೆ ಸೇರಿಸಬಹುದು.

ಒಟ್ಟಿನಲ್ಲಿ 'ಚುಟುಕು' ಎಂಬುದು ಚಿಕ್ಕದಾಗಿರಬೇಕು. ಅದರಲ್ಲಿ ಕಾವ್ಯವಿರಬಹುದು, ವ್ಯಂಗ್ಯವಿರಬಹುದು, ಹಾಸ್ಯ ತುಳುಕಬಹುದು. ಅದು ಬರೀ 'ಹುಚ್ಚಾಟವೇ' ಆಗಿರಬಹುದು. ಆಯಾ ರಚನಕಾರರ ಸಾಮರ್ಥ್ಯಕ್ಕೆ ತಕ್ಕಂತೆ ಸಾರ್ಥಕವಾಗಬಹುದು. ಮುಖ್ಯವಾಗಿ ಚುಟುಕು ಎಂಬುದು ರಚನೆಯ ಗಾತ್ರಕ್ಕೆ ಸಂಬಂಧಿಸಿದಂತೆ ಒಟ್ಟಾರೆ ನೀಡಬಹುದಾದ ಹೆಸರು. ಅದು ಚಿಕ್ಕದು ಎಂದರೆ ಎಷ್ಟು ಚಿಕ್ಕದು? ಇನ್ನೊಂದಕ್ಕೆ ಹೋಲಿಸಿದಾಗ ಅದಕ್ಕಿಂತ ಇದು ಚಿಕ್ಕದು ಎನಿಸಬಹುದು. ಎಷ್ಟು ಚಿಕ್ಕದಾಗಿರಬೇಕು ಎಂದೂ ನಿರುಪಾಧಿಕವಾಗಿ ಇದನ್ನು ನಿರೂಪಿಸುವುದು ಅಸಾಧ್ಯ. ಆರು ಸಾಲುಗಳ ಷಟ್ಪದಿಯೂ ಸ್ವತಂತ್ರ, ಸ್ವಯಂಪೂರ್ಣ ಎನಿಸಿದರೆ ಅದೊಂದು ಚುಟುಕು. ಐದು ಸಾಲುಗಳ ಪದ್ಯ ಷಟ್ಪದಿಗಿಂತ ಚಿಕ್ಕದು. ಅದು ಚುಟುಕು. ಎಷ್ಟು ಚುಟುಕು ಎಂಬುದು ಇಲ್ಲಿ ಮುಖ್ಯವಲ್ಲ. ಅದು ಸ್ವಯಂ ಪೂರ್ಣವೇ? ಎನ್ನುವುದನ್ನಷ್ಟೇ ಇಲ್ಲಿ ಪರಿಗಣಿಸಬೇಕು. ಚೌಪದಿ, ತ್ರಿಪದಿ, ದ್ವಿಪದಿ, ಕೊನೆಗೆ ಒಂದೇ ಸಾಲುಳ್ಳದ್ದು, ಒಂದೇ ಪದ-ಯಾವುದೂ ತನ್ನಷ್ಟಕ್ಕೆ ಪರಿಪೂರ್ಣ ಎನಿಸಿದರೆ ಸರಿ. ಒಂದು ವಿಚಾರವನ್ನು, ಒಂದು ಭಾವವನ್ನು, ಒಂದು ಚಿತ್ರವನ್ನು, ಒಂದು ಅನುಭವವನ್ನು ಕಟ್ಟಿಕೊಡುವ ಯಾವುದೇ ಪ್ರಯೋಗವನ್ನು, ರಚನೆಯನ್ನು 'ಚುಟುಕು' ಎಂದು ಕರೆಯಬಹುದು.

ಹಿಂದೆ ಯಾವಾಗಲೋ ಇದ್ದ, ಅವನ ಹಿಂದುಮುಂದು ಏನೂ ಗೊತ್ತಿಲ್ಲದ, ತಂದೆ ತಾಯಿ ಯಾರೆಂದು ಹೇಳಲಾಗದ, ಅವನವೆಂದು ಹೇಳಲಾದ ರಚನೆಗಳೆಲ್ಲ ಅವನವೇ ಹೌದೇ? ಎಂಬುದನ್ನೂ ನಿರ್ಧರಿಸುವುದು ಸಾಧ್ಯವಿಲ್ಲದ, 'ಸರ್ವಜ್ಞ' ಎಂಬುದು ಅವನ ಹೆಸರೇ ಅಥವಾ ಅವನಿಗೆ ಬೇರೆ ಹೆಸರಿತ್ತೆ ಎಂಬುದು ಕೂಡ ಗೊತ್ತಿಲ್ಲದ ಸರ್ವಜ್ಞನ ರಚನೆಗಳನ್ನು ವಚನಗಳೆಂದೇ ಕರೆಯುವುದು ರೂಢಿ. ವಚನವೆಂದರೆ ಆಡಿದ ಮಾತು. ಆದರೆ ಶಿವಶರಣರ ವಚನಗಳಂತೆ ಸರ್ವಜ್ಞನ ರಚನೆಗಳು ಗದ್ಯರೂಪಗಳಲ್ಲ. ಶರಣರ ವಚನಗಳನ್ನೂ ಶುದ್ಧಗದ್ಯವೆಂದು ಹೇಳಲಾಗುವುದಿಲ್ಲ. ಅವು ಪದ್ಯ ಗಂಧಿಯಾದ ಗದ್ಯರಚನೆಗಳು. ಸರ್ವಜ್ಞನ ವಚನವಾದರೋ, ಮೂರು ಸಾಲುಗಳ ಪದ್ಯ ರಚನೆಗಳೇ, ಅವು ತ್ರಿಪದಿಗಳು, ಅವು ಖಂಡಿತವಾಗಿಯೂ ಚುಟುಕುಗಳೇ.

ಚುಟುಕದ ವಸ್ತು ಯಾವುದೇ ಇರಲಿ, ಅಭಿವ್ಯಕ್ತಿಯ ವಿಧಾನ ಯಾವುದೇ ಇರಲಿ, ಸ್ವತಂತ್ರ್ಯವೆನಿಸಿದರೆ ಚುಟುಕು. ಇದರಲ್ಲಿ ಕಾವ್ಯಗುಣವೇ ಪ್ರಧಾನವಾಗಿರಬೇಕೆಂದು ಪರಿಗಣಿಸುವುದಾದರೆ, ಸರ್ವಜ್ಞನ ಅನೇಕ ರಚನೆಗಳಲ್ಲಿ ಇದು ಯಥೇಚ್ಛವಾಗುಂಟು. ಕಾವ್ಯವೆಂದರೆ ಏನು ಎಂಬುದನ್ನು ಕೆಲವೇ ಮಾತುಗಳಲ್ಲಿ

ವ್ಯಾಖ್ಯಿಸುವುದು ಸಾಧ್ಯವಾಗದು. ರಮಣೀಯವಾದ ಅರ್ಥವನ್ನು ಕೊಡುವ ಶಬ್ದಗಳ ಗುಂಪುಕಾವ್ಯ ಎಂದು ಸ್ಥೂಲವಾಗಿ ತಿಳಿಯುವುದಾದರೆ ಸರ್ವಜ್ಞ ಈ ವಿಚಾರದಲ್ಲಿ ಯಾರಿಗೂ ಹಿಂದೆ ಬಿದ್ದವನಲ್ಲ. ರೂಪಕ, ಯಮಕ, ಉಪಮಾ, ದೃಷ್ಟಾಂತ, ಶ್ಲೇಷ ಮುಂತಾದ ಅನೇಕ ಅಲಂಕಾರಗಳನ್ನು ಸರ್ವಜ್ಞನ ವಚನಗಳಲ್ಲೂ ನಾವು ಕಾಣಬಹುದು. ಕಾವ್ಯವನ್ನು ಪದಗಳ ಲೀಲೆ ಎಂದು ಅನೇಕರು ಭಾವಿಸಿದ್ದಾರೆ. ಬಗೆಬಗೆಯ ಬೆಡಗಿನ ಪದಗಳನ್ನು ವಿಧವಿಧವಾಗಿ ವಿನ್ಯಾಸಗೊಳಿಸಿ, ಆ ಪದಗುಂಫನಗಳಿಂದ ಬೇರೆಯದೇ ಆದ, ಮುಂದಾಗಿಯೇ ನಿರೀಕ್ಷಿಸಲಾಗದ, ಆದರೂ ಅಸಂಭಾವ್ಯವೆಂದು ಎನಿಸಿದ ರೀತಿಯಲ್ಲಿ ಹೊಸದೊಂದು ಭಾವವನ್ನೋ ಚಿತ್ರವನ್ನೋ ಕಟ್ಟಿಕೊಡುವಾತ ನಿಜವಾದ ಕವಿ. ಆ ಮೂಲಕ ಅವನು ಕಂಡ ಸತ್ಯವನ್ನು ಎತ್ತಿ ತೋರಿಸುತ್ತಾನೆ, ತೊಳಗಿಸುತ್ತಾನೆ. ಈ ನಿಟ್ಟಿನಿಂದ ನೋಡಿದಾಗ ಸರ್ವಜ್ಞನೊಬ್ಬ ವಿಶಿಷ್ಟ ಕವಿ. ಉದಾಹರಣೆಗೆ ಅವನು ದೇವರ ಸ್ವರೂಪವನ್ನು ವಿವರಿಸುವ ಪರಿಯನ್ನು ನೋಡಿ : 'ಆಗಿಲ್ಲ, ಹೋಗಿಲ್ಲ, ಮೇಗಿಲ್ಲ, ಕೆಳಗಿಲ್ಲ, ತಾಗಿಲ್ಲ, ತಪ್ಪುತಡೆಯಿಲ್ಲ.' ದೇವರು ಹೀಗಿದ್ದಾನಂತೆ ಅತ್ಯಂತ ಗಂಭೀರವಾದ, ಅಮೂರ್ತವಾದ ಪರಮಸತ್ಯವನ್ನು ಅವನು ಒಂದಾದರೂ ಕಠಿಣ ಶಬ್ದವನ್ನು ಬಳಸದೆ, ಸಂಸ್ಕೃತವನ್ನು ಎಳೆದು ತಾರದೆ, ಅತ್ಯಂತ ಸರಳವಾಗಿ ಹಾಗೂ ಅಷ್ಟೇ ಮಾರ್ಮಿಕವಾಗಿ ಅಭಿವ್ಯಕ್ತಿಸುತ್ತಾನೆ. ನೇರ, ಸರಳ, ಸ್ಪಷ್ಟ, ಸಂಕ್ಷಿಪ್ತ, ನಿಷ್ಕೃಷ್ಟ, ಚಿತ್ರಯುಕ್ತ ಹಾಗೂ ಸಶಕ್ತ ಭಾಷೆಯ ಬಳಕೆಯಲ್ಲಿ ಸರ್ವಜ್ಞನನ್ನು ಮೀರಿಸುವ ಇನ್ನೊಬ್ಬ ಕವಿ ಇಲ್ಲ. ಚುಟುಕು ಸಾಹಿತ್ಯಕ್ಕೆ ಈ ಗುಣಗಳೇ ಜೀವಾಳ. ಸರ್ವಜ್ಞನನ್ನು ಕೇಂದ್ರವಾಗಿಟ್ಟುಕೊಂಡು ನಡುಗನ್ನಡದ ಕೆಲವು ಪ್ರಾತಿನಿಧಿಕ ಕವಿಗಳು ಬಳಸಿದ ಚುಟುಕುಗಳ ಸ್ವರೂಪವನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಜೇಡರದಾಸಿಮಯ್ಯ

ದೇವರದಾಸಿಮಯ್ಯನ ವಚನಗಳು ೧೫೦ರವರೆಗೆ ಉಪಲಬ್ಧವಾಗಿ ಪ್ರಸಿದ್ಧವಾಗಿವೆ. ಅವುಗಳಲ್ಲಿ ಉತ್ಕಟವಾದ ವೀರಶೈವನಿಷ್ಠೆ, ನಿಷ್ಠುರವಾದ ಸ್ಪಷ್ಟವಾಕ್ಯತೆ, ಮಾರ್ಮಿಕವಾದ ಸಂಕ್ಷಿಪ್ತಶೈಲಿ, ಉಚಿತ ದೃಷ್ಟಾಂತಗಳ ಸಂಪತ್ತಿ ಈ ಗುಣಗಳು ಎದ್ದು ಕಾಣುತ್ತವೆ. ಬಸವಣ್ಣನ ಕಾಲ ವಚನಕಾರರಿಗೆ ಮುಂದೆ ಸ್ಫೂರ್ತಿಕೊಟ್ಟ ವಚನಪರಂಪರೆ ಯಾವ ರೀತಿಯಾಗಿತ್ತೆಂಬುದಕ್ಕೆ ಅವು ಮಾದರಿಯಾಗಿವೆ. ಶರಣರ ವಚನಗಳ ಮಹಿಮೆಯನ್ನು ಹೇಳುವಾಗ 'ನಿಮ್ಮ ಶರಣರ ಸೂಳ್ನುಡಿಯಂ ಒಂದರಗಳಿಗೆ ಇತ್ತಡೆ ನಿಮ್ಮನಿತ್ತೆ ಕಾಣಾ ರಾಮನಾಥ', 'ಕಡುದರ್ಪವೇರಿದ ಒಡಲೆಂಬ ಬಂಡಿಗೆ ಮೃಡಶರಣರ ನುಡಿಗಡಣವೇ ಕಡೆಗೀಲು ಕಾಣಾ ರಾಮನಾಥ' ಎಂಬ ಉತ್ಕಟವಾದ ನುಡಿಗಳಿವೆ. 'ಜ್ವರವಿಡಿದ ಬಾಯಿಗೆ ನೊರೆವಾಲು ಒಲಿವುದೇ?', 'ಎಳ್ಳು ಇಲ್ಲದ ಗಾಣದಲ್ಲಿ ಎಣ್ಣೆಯುಂಟೇ?' ಎಂಬ ಕಿರುನುಡಿಯ ಸಾದೃಶ್ಯಗಳಿವೆ. 'ಬರುಶಠಗನ ಭಕ್ತಿ' ದಿಟವೆಂದು ನಚ್ಚಲು ಬೇಡ, ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತ್ತು', 'ಮಾರಿಯ ಪೂಜಿಸಿ ಮಸಣಕ್ಕೆ ಹೋಗಿ ಗೋರಿಗೊಳಿಸಿ ಕುರಿಯ ಕೊರಳನೆ

ಕೊಯಿದುಂಬ ಕ್ರೂರಕರ್ಮಿಗಳನೆ ಶಿವಭಕ್ತರೆನ್ನಬಹುದೆ?' - ಇಂಥ ವಾಕ್ಯಗಳಲ್ಲಿ ಖಂಡಿತವಾದ ಜನಜೀವನ ವಿಮರ್ಶೆಯಿದೆ. 'ಹೂವಿನೊಳಗಣ ಕಂಪ ಹೊರಸೂಸಿ ಸುಳಿವ ಅನಿಲನಂತೆ, ಅಮೃತದೊಳಗಣ ರುಚಿಯ ನಾಲಗೆಯ ತುದಿಯಲ್ಲಿ ಅರಿವನ ಚೇತನದಂತೆ, ನಿಲವಿಲ್ಲದ ರೂಪಕಳೆಯಲ್ಲಿ ವೇಧಿಸುವವನ ಪರಿ ರಾಮನಾಥಾ' - ಇಂಥ ವಚನಗಳಲ್ಲಿ ಅನುಭಾವದ ಅನನ್ಯತೆಯಿದೆ. ಇವನ ಅನೇಕ ವಚನಗಳಲ್ಲಿ ಆಧ್ಯಾತ್ಮವು ಸಾಹಿತ್ಯ ಗುಣದಿಂದ ಕೂಡಿ ಅಭಿವ್ಯಕ್ತವಾಗಿದೆ. ಆದರೂ ವಿಡಂಬನೆಯ ಅತಿಕಟುತೆ, ಮಾತಿನ ಒರಟುತನ ಇವು ಆಗಾಗ ತಲೆಯಿಕ್ಕಿವೆ. ವಚನ ಗದ್ಯಕ್ಕೆ ಬೇಕಾದ ಸೂಕ್ಷ್ಮ ಲಯ-ನಯಗಳ ಕೊರತೆಯೂ ಇದೆ. ಈ ದಾರಿಯಲ್ಲಿ ಹೆಚ್ಚಿನ ಪರಿಣತಿಯನ್ನು ಮುಂದಿನ ವಚನಕರಾರರಲ್ಲಿ ಕಾಣಬಹುದು. 'ದೇವರ ದಾಸಿಮಯ್ಯನ ವಚನಗಳು ಸಾಹಿತ್ಯದೃಷ್ಟಿಯಿಂದ ಬಹು ಉತ್ತಮವಾದ ವರ್ಗಕ್ಕೆ ಸೇರತಕ್ಕುದಾಗಿವೆ. ಅವರ ವಚನಗಳಲ್ಲಿ ಕಂಡುಬರುವ ಕೆಲವು ಚುಟುಕುಗಳು ಇಂತಿವೆ.

ಉಂಡು ಉಪವಾಸಿಗಳು, ಬಳಸಿ ಬ್ರಹ್ಮಚಾರಿಗಳು (೧೩೩)
ಕಲ್ಲು ಮೊರಡಿಯೊಳಗೆ ಚೆಲುವೆಯಗ್ಘವಣಿಯುಂಟೆ (೨೮)
ಗೋರಿಕಲ್ಲುಗಳೊಳಗೆ ಚಿಂತಾಮಣಿಯನರಸುವರೆ? (೨೯)
ಟೆಕ್ಕೆಯೊಳಗೆ ಮಾಣಿಕ್ಯ ಉಂಟೇ? (೨೮)
ಮೂಗರು ಕಂಡ ಕನಸು (೨೦)
ಮಂಡೆಬೋಳಾದರೇನು ಹುಟ್ಟು ಬೋಳಾಗದನ್ನಕರ? (೧೫, ೫೪)
ರಾಮಟದಲ್ಲಿ ಮೃಗನಾಭಿಯುಂಟೆ? (೨೫)
ರಿತಿಕೆಯಲ್ಲಿ ಅಪರಂಜಿಯನರಸುವರೆ? (೨೯)
ಹಾವುಮೆಕ್ಕೆಯಲ್ಲಿ ದ್ರಾಕ್ಷಾಫಳವನರಸುವರೆ? (೨೯)
ಹುಲು ಮೊರಡಿಯೊಳಗೆ ಕಲ್ಪತರುವವರಸುವರೆ? (೨೯)

ಪ್ರಭುದೇವ

ಪ್ರಭುದೇವ ಇಲ್ಲವೆ ಅಲ್ಲಮಪ್ರಭು ಬಸವಣ್ಣನಿಗೆ ಹಿರಿಯನು ಮಾತ್ರವಲ್ಲ, ಈ ಕಾಲದ ಶರಣರಲ್ಲಿಯೇ ಶ್ರೇಷ್ಠವ್ಯಕ್ತಿಯಾಗಿದ್ದನು. ದಕ್ಷಿಣ ಕರ್ನಾಟಕದ ಬಳ್ಳಿಗಾವೆಯ ಬಳ್ಳಿಗೆ ಒಮ್ಮಿಂದೊಮ್ಮೆ ಅರಳಿದ ಹೂವಾಗಿ ವೈರಾಗ್ಯಜ್ಞಾನಗಳಲ್ಲಿ ಪರಿಣತಪ್ರಜ್ಞನಾಗಿ ಶಿವಾದ್ವೈತದ ಮೂರ್ತಿಯಾಗಿ ಅವನು ತಲೆದೋರಿದನು. ಅಂದಿನ ಸಾಧಕರ, ಸಿದ್ಧರ ಎಲ್ಲರ ಮೇಲೆ ತನ್ನ ಆಳವಾದ ಪ್ರಬಾವ ಬೀರಿದನು. ಮತಪಂಥಗಳ ಸ್ಥೂಲಸೂಕ್ಷ್ಮಬಲೆಗಳಿಗೆ ಅವನು ಒಳಗಾಗಲಿಲ್ಲ. ವೀರಶೈವ ಸಿದ್ದಾಂತದ ಸಾರವನ್ನೇ ತನ್ನ ಇರಿವಿನಲ್ಲಿರಿಸಿ, ಶರಣಮಾರ್ಗಕ್ಕೆ ಗುರುವಾದನು. ಅನುಭವಮಂಟಪದ ಅಧ್ಯಕ್ಷನಾದನು, ಶೂನ್ಯಸಿಂಹಾಸನದ ದೊರೆಯಾದನು. ಆದರೂ ಯಾವ ಕಟ್ಟಿಗೂ ಅವನು ಒಳಪಡಲಿಲ್ಲ. ಎಲ್ಲ ಮಾರ್ಗಗಳ, ಎಲ್ಲ ವ್ಯಕ್ತಿಗಳ ಗುಣಾಂಶವನ್ನು ಅವನು ಮೆಚ್ಚಿದನು, ಅವಗುಣಗಳನ್ನು ಕೆಡೆನುಡಿದನು. ವೀರಶೈವ ಸಹಿತವಾಗಿ ಎಲ್ಲ ಸಂಪ್ರದಾಯಗಳು ಅವನ ನಿಷ್ಠುರವಿಮರ್ಶೆಗೆ ಗುರಿಯಾದವು. ಆ ನಿಷ್ಠುರತೆ ಜ್ಞಾನಿಯು, ಸತ್ಯಪ್ರೇಮಿಯ ಶುದ್ಧಬುದ್ಧಿಯಿಂದ, ಸೂಕ್ಷ್ಮದೃಷ್ಟಿಯಿಂದ ಉಂಟಾದುದು. ಅಂತೇ ಅದಕ್ಕೆ ಎಲ್ಲರೂ ತಲೆಬಾಗುತ್ತಿದ್ದರು.

ಪ್ರಭುದೇವರ ವ್ಯಕ್ತಿತ್ವ ಮತ್ತು ವಚನರಚನೆ ಕನ್ನಡವಾಙ್ಮಯಕ್ಕಲ್ಲದೆ ಭಾರತೀಯ ಹಾಗೂ ಜಾಗತಿಕ ಸಾಹಿತ್ಯಕ್ಕೆ ಅಸಾಧಾರಣವಾದ ತೇಜಸ್ಸುಳ್ಳ ಕಾಣಿಕೆಯಾಗಿರುತ್ತವೆ.

ಅವನ ವಚನಗಳ ಬಹುಭಾಗವು ಅಧ್ಯಾತ್ಮಿಕಮಾರ್ಗಿಗಳಿಗೂ ಸುಲಭಗ್ರಾಹ್ಯವಲ್ಲ. ಅನುಭಾವದ ಆಳದಿಂದ, ಜ್ಞಾನದ ಶಿಖರದಿಂದ ಉಸುರಿದ ಆ ಮಾತು ಆಡಿದ ಮಾತಲ್ಲ. 'ಮಾತೆಂಬುದು ಜ್ಯೋತಿರ್ಲಿಂಗ' ಎಂಬುದನ್ನು ಅದರ ಸಾರವು ಸಾರ್ಥಕಪಡಿಸುತ್ತದೆ. ಆತ್ಮಜ್ಞಾನ-ಆನಂದಗಳು, ಮಾತಿಗೆ ನಿಲುಕದ ಅನುಭವ ವಿಷಯಗಳು ಎಂಬುದನ್ನು ಅರಿತೂ ಪ್ರಭುದೇವನು ಬೆಡಗಿನ ನುಡಿ, ಬೆಡಗಿನ ವಚನಗಳಲ್ಲಿ ಅನುಭಾವದ ನಿರಾಕಾರವನ್ನು ನಿಲುಕುವಷ್ಟು ಮಾತಿನಲ್ಲಿ ಸಾಕಾರಗೊಳಿಸಿದ್ದಾನೆ. ಅವನಿಗೇ ಸಾಧ್ಯವಾದ ಘನತೆಯದು. ''ನಿಮ್ಮ ನಿಲವ ಅನುಭವಿಸುಖಿ ಬಲ್ಲ' (೪-೨)(೧), 'ಅರಿಯಬಾರದ ಘನವನರಿದವರು ಅರಿಯದಂತಿರ್ಪದು ಗುಹೇಶ್ವರಾ' (೧೭೬-೫೨), 'ಘನವ ಮನಕಂಡು ಅದನೊಂದು ಮಾತಿಂಗೆ ತಂದು ನುಡಿದರೆ ಅದಕದೆ ಕಿರಿದು ನೋಡಾ' (೩೦೩-೫೧), 'ನಿರಾಳವೆಂಬ ಕೂಸಿಂಗೆ ಬೆಣ್ಣೆಯನಿಕ್ಕಿ ಹೆಸರಿಟ್ಟು ಕರೆದವರಾರೋ ಅಕಟಕಟ ಶಬ್ದ ಲಜ್ಜೆಯ ನೋಡಾ. ಗುಹೇಶ್ವರನರಿಯದ ಅನುಭವಿಗಳೆಲ್ಲರ ತರಕಟಗಾಡಿತ್ತು' ಅವನ ವಚನಗಳಲ್ಲಿ ಕಂಡುಬರುವ ಕೆಲವು ಚುಟುಕುಗಳು ಇಂತಿವೆ.

ಅನಾಚಾರಿ ಗುರುವಿಂಗೆ ಶಿಷ್ಯನು (೬೩೦)

ಅಭ್ಯಾಸಮಾಡುವ ಕೋಲಿಂಗೆ ಶರಣೆಂದರೆ ಮುಂದಣಬವರಕ್ಕಲಗಾಗಬಲ್ಲುದೇ (೮೩೮)

ಅಮೃತಕಲೆಯ ಸೂಡಿದವನಂಬಲಿಯನುಂಬನೇ? (೮೯೦)

ಅಮೃತ ಸಾಗರದೊಳಗಿದ್ದು ಆಕಳ ಚಿಂತೆಯೇಕೆ? (೧೦೩)

ಅಱಸುವ ಬಳ್ಳಿ ಕಾಲ ಸುತ್ತಿತು (೭೫೨)

ಅವಧಾನ ತಪ್ಪಿ, ಆಚಾರಗೆಟ್ಟು ನಡೆದು, ಶಿವಾಧೀನವೆಂದರೆ ಹೋಹುದೆ? (೧೦೧೯)

ಆಕಾಶವನಡರುಂವಂಗೆ ಅಟ್ಟಗೋಲ ಹಂಗೇಕೋ? ಸಮುದ್ರವ ದಾಟುವಂಗೆ ಹಱುಗೋಲ ಹಂಗೇಕೋ? (೮೩೯)

ಆಳಿನಾಳಿನ ಕೀಳಾಳು ಪಟ್ಟಕ್ಕೆ ಸಲ್ಲುವನೆ? (೮೫೩)

ಇಕ್ಷುದಂಡಕೆ ಕೀಳುಮೇಲಲ್ಲದೆ, ಸಕ್ಕರೆಯ ದಂಡಕೆ ಕೀಳುಮೇಲುಂಟೆ? (೧೨೧೯)

ಉಳ್ಳವರು ಹಗೆಯುವ ತೆಗೆವನ್ನಕ್ಕರ ಇಲ್ಲದವರ ಹರಣ ಹೋಯಿತ್ತು (೧೧೨೬)

ಉಳಿಮುಟ್ಟಿದ ಲಿಂಗವ ಮನಮುಟ್ಟ ಬಲ್ಲುದೆ? (೨೦೭)

ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ (೫೫೪)

ಊರಕ್ಕಿ ಊರೆಣ್ಣೆ ಉಣ್ಣು ಮಾರಿಕವ್ವ (೪೦೭)

ಎತ್ತಣ ಮಾಮರ, ಉತ್ತಣ ಕೋಗಿಲೆ?.....ಬೆಟ್ಟದ ನೆಲ್ಲಿಯಕಾಯಿ, ಸಮುದ್ರದೊಳಗಣ ಉಪ್ಪು ಎತ್ತಣಿಂದೆತ್ತ ಸಂಬಂಧ? (೫೯)

ಎಲ್ಲಾ ಅವನಿಯಲ್ಲಿ ಹೇಮವಿರ್ಪುದೆ? ಇಪ್ಪುದೊಂದು ಠಾವಿನಲ್ಲಿ (೧೧೭೩)

ಒತ್ತಿಹಣ್ಣಮಾಡಿದಡೆ ಅದೆತ್ತಣ ರುಚಿಯಪ್ಪುದೋ? (೬೪೬)

ಒಲುಮೆಯ ಕೂಟಕ್ಕೆ ಹಾಸಿನ ಹಂಗೇಕೆ? (೪೨೫)

ಒಣಗಣ ರಣರಂಗ, ಹೊಱಗಣ ಶೃಂಗಾರ (೩೧೬)

ಒಂದ ಮಾಡಹೋದಲ್ಲಿ ಮತ್ತೊಂದಾಯಿತ್ತು (೧೦೬೪) (೧೦೮೧)

ಓಡಿನೊಳುಂಟೆ ಕನ್ನಡಿಯ ನೋಟ? (೧೪೬)

ಅಂಧಕನ ಕೈಯ ಅಂಧಕ ಹಿಡಿದಂತೆ (೩೩೨)

ಕರ್ಪುರದ ಗಿರಿಯ ಉರಿಯು ಹಿಡಿದಡೆ ಇದ್ದಿಲುಂಟೆ? (೬೮೩)

ಕರುಳುಳ್ಳನಕ್ಕರ ಹಸಿವು ಮಾಣದು (೬೭೩)

ಕಳ್ಳಗಂಜಿ ಕಾಡಹೊಕ್ಕರೆ ಹುಲಿ ತಿಂಬುದ ಮಾಬುದೆ? ಹುಲಿಗಂಜಿ ಹುತ್ತವ ಹೊಕ್ಕಡೆ ಸರ್ಪ ತಿಂಬುದ ಮಾಬುದೆ? (೭೩)

ಹವಣಲ್ಲದ ಶಾಖೆಯ ಕಪಿ ಹಿಡಿಯಲೊಲ್ಲದು, ಗಮನವಿಲ್ಲದೆ ಪಿಕಶಿಶು ನುಡಿಯದು, ಪ್ರಭಾವಿಸಿದಲ್ಲದೆ ಉಲಿಯದು ಕುಕ್ಕುಟ (೭೦೩)

ಹಸಿದಡುಣಬಹುದೇ ನಸುಗುನ್ನಿ ತುಱುಚಿಯನು? (೩೧೫)

ಹೊನ್ನತೂಗಿದ ತ್ರಾಸುಕಟ್ಟಳೆ ಹೊನ್ನಿಂಗೆ ಸರಿಯಪ್ಪುದೆ? (೪೯೦)

ಬಸವಣ್ಣ

ಪ್ರಭುದೇವನು ಹಿರಿಯ ಜ್ಞಾನಿಯಾದರೆ ಬಸವೇಶ್ವರನು ಹಿರಿಯ ಭಕ್ತ. ಬೇರೆ ಬೇರೆಯಾಗಿ ಬೆಳೆದು ಎತ್ತರದಲ್ಲಿ ಬೆರೆತ ಮರಗಳಂತೆ ಅವರು ಕೂಡಿಕೊಂಡರು. ಬಸವೇಶ್ವರನು ಕ್ರಾಂತಿಕಾರಕವಾದ ಒಂದು ಮಾರ್ಗದ ಮತದ ಸಂಘಟನಕಾರನಾದನು. ಅವನ ಭಕ್ತಿ-ಕರ್ಮಗಳು ಸಂಘಟನೆಯ ಭರದಲ್ಲಿ ದೂಷಿತವಾಗಬಾರದೆಂದು ಪ್ರಭುದೇವನು ತನ್ನ ಜ್ಞಾನ ವಿರಕ್ತಿಗಳ ಒರೆಗಲ್ಲನ್ನು ಒದವಿಸಿದನು. ಪ್ರಭುದೇವನ ಜ್ಞಾನದೆತ್ತರವು ಲೋಕಜೀವನದಿಂದ ಅಲಿಪ್ತವಾಗಕೂಡದೆಂದು ಬಸವೇಶ್ವರನು ಅವನಿಗೆ ನಾಯಕಪದವಿಯನ್ನಿತ್ತನು. ಬಸವಣ್ಣನ ವ್ಯಕ್ತಿತ್ವ ಎಷ್ಟು ಹಿರಿಯದೋ ಅಷ್ಟು ಮಾನವೀಯ. ಅದರ ಸ್ಪಂದನವನ್ನೂ ಹೋರಾಟವನ್ನೂ ನಾವು ಅರ್ಥಮಾಡಿಕೊಂಡು ಅನುಭವಿಸಬಲ್ಲೆವು. ಅವನ ಆರ್ತಭಕ್ತಿ, ಕರ್ಮಜೀವನದ ತೊಡಕು, ಸಮಾಜದೂಷಣೆ ಎಲ್ಲವೂ ಒಂದು ಬೆಳೆಯುತ್ತಲಿರುವ, ಪ್ರತಿಕೂಲ ಪರಿಸ್ಥಿತಿಯೊಡನೆ ಹೋರುತ್ತ ಏರುತ್ತಲಿರುವ, ಮಹಾಜೀವನದ ಸಹಜರಮ್ಯವಾದ ಅಭಿವ್ಯಕ್ತಿ. ಈ ಸೂತ್ರವನ್ನು ಮನದಂದು ಅವನ ವಚನಗಳನ್ನು ಓದಿದರೆ ಅವನ ವಿಕಾಸಶೀಲವಾದ ಮಹಾವ್ಯಕ್ತಿತ್ವ, ಅದನ್ನು ಪರಿಪರಿಯಾಗಿ ಒಡಮೂಡಿಸಿದ ವಚನಸಂಪತ್ತಿ ಇವನ್ನು ಅರಿತುಕೊಳ್ಳಬಹುದು. ಎಲ್ಲ ವಚನಕಾರರಿಗಿಂತ ಹೆಚ್ಚಾಗಿ ಅವನಲ್ಲಿ ನಿಸ್ಸಂಕೋಚವಾದ ಅಂತರ್ನಿರೀಕ್ಷಣೆಯ ಪ್ರವೃತ್ತಿಯಿದೆ.

ಸಂಸಾರಹೇಯಸ್ಥಳದಲ್ಲಿಯ ಅನೇಕ ವಚನಗಳು ಇದಕ್ಕೆ ಸಾಕ್ಷಿ. ಇಲ್ಲಿ ಸಂಸಾರ ವಿರಕ್ತಿ ಮಾತ್ರವಲ್ಲ, ಅತ್ಯಂತವಾದ ಆತ್ಮದೂಷಣೆಯಿದ್ದಂತಿದೆ; 'ಬೆದಕದಿರು. ಬೆದಕಿದರೆ ಹುರುಳಿಲ್ಲ. ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯ. ವಿಚಾರಿಸಿದರೆ ಏನು ಹುರುಳಿಲ್ಲವಯ್ಯಾ' (೫-೨೨, ೨೩)... 'ಬೆಳೆವ ಭೂಮಿಯಲ್ಲೊಂದು ಪ್ರಳಯದ ಕಸಹುಟ್ಟಿ, ತಿಳಿಯಲೀಯದು, ಎಚ್ಚರಲೀಯದು' (೫-೪೪)... 'ಕೆಸರಿನಲ್ಲಿ ಬಿದ್ದ ಪಶುವಿನಂತೆ ಆನು ದೆಸೆದೆಸೆಗೆ ಬಾಯಬಿಡುತ್ತಿದ್ದೆನಯ್ಯ' ಇಂಥ ವಚನಗಳನ್ನು ನೋಡಿ 'ಅವರ ವಚನಗಳು ಬರೀ ನಟನೆಯಲ್ಲ, ಅವು ಅಂತರಂಗಸ್ಫುರಿತ ನೈಸರ್ಗಿಕ ಭಾವಗಳು ಅವರ ವಚನಗಳಲ್ಲಿ ಕಂಡುಬರುವ ಚಟುಕುಗಳು ಇಂತಿವೆ.

ಅರ್ಥರೇಖೆ ಇದ್ದಲ್ಲಿ ಫಲವೇನೋ ಆಯುಷ್ಯರೇಖೆ ಇಲ್ಲದನ್ನಕ್ಕ?(೧-೧೦೮)

'ಅಯ್ಯ' ಎಂದಡೆ ಸ್ವರ್ಗ : 'ಎಲವೋ' ಎಂದಡೆ ನರಕ!

ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರ ಲೇಸು ! (೨-೩೫೫)

ಅಜಿದರೆ ಶರಣ; ಮರತರೆ ಮಾನವ (೨-೮೬೦)

ಅಳೆಯುತ್ತ ಅಳೆಯುತ್ತ ಬಳಲುವರಲ್ಲದೆ ಕೊಳಗ ಬಳಲುವುದೆ? (೧-೧೧೩)

ಆಚಾರವೇ ಸ್ವರ್ಗ, ಅನಾಚಾರವೇ ನರಕ (೨-೨೪೯)

ಆಡಿದರೇನು, ಹಾಡಿದರೇನು, ಓದಿದರೇನು? ಆಡದೇ ನವಿಲು, ಹಾಡದೇ ತಂತಿ, ಓದದೇ ಗಿಳಿ? (೨-೨೦೭)

ಆನೆ ಅಂಕುಶಕ್ಕಲ್ಲದೆ ಅಂಜುವುದೇ? (೨-೨೫೨)

ಆನೆಯ ಮೇಲೆ ಹೋಹವನ ಶ್ವಾನ ಕಚ್ಚ ಬಲ್ಲುದೆ (೨-೭೫೨)

ಆನೆಯು ಆ ದಾರಿಯಲ್ಲಿ ಹೋಯಿತ್ತೆಂದಡೆ, ಆಡೂ ಆ ದಾರಿಯಲ್ಲಿ ಹೋತಿತ್ತೆನ್ನಬಹುದೇ? (೨-೩೨೮)

ಆಯುಷ್ಯ ತೀರಿದಲ್ಲದೆ ಮರಣವಿಲ್ಲ, ಭಾಷೆ ತೀರಿದಲ್ಲದೆ ದಾರಿದ್ರ್ಯವಿಲ್ಲ (೨-೭೮೯)

ಆರಿಗಾರು ಇಲ್ಲ, ಕೆಟ್ಟವಗೆ ಕಳೆಯಿಲ್ಲ (೧-೨೫)

ಆರು ಮುನಿದು ನಮ್ಮನೇನು ಮಾಡುವರು? ಊರು ಮುನಿದು ನಮ್ಮನೆಂತು ಮಾಡುವುದು? (೨-೭೫೨)

ಆವ ಹಾವಾದರೇನು ವಿಷವೊಂದೆ (೨-೧೯೯)

ಆಳ್ದನು ಬರಲು ಆಳು ಮಂಚದ ಮೇಲಿಪ್ಪುದು ಗುಣವೆ? (೨-೩೯೫)

ಇಟ್ಟಹಣ್ಣ ನರಿ ತಿಂದು ಸೃಷ್ಟಿ ತಿರುಗಿತೆಂಬಂತೆ (೨-೫೭೮)

ಇಜುಯದ ವೀರ; ಇಲ್ಲದ ಸೊಬಗುವ ಹೇಳುವದೇ ನಾಚಿಗೆ ! (೨-೩೦೫)

ಇರುಳು ಸತ್ತಿಗೆಯ ಹಿಡಿಸಿಕೊಂಡಂತೆ! (೨-೨೨೭)

ಇರುಳೆಂದೇನೋ ಕುರುಡಂಗೆ, ಹಗಲೆಂದೇನೋ ಕುರುಡಂಗೆ? (೨-೬೩೩)

ಇಲ್ಲವೆಯ ಮೇಲೆ ಕಂಚೊಡೆದಂತೆ (೨-೨೫೭)

ಇಹಲೋಕ ದುಃಖಿ, ಪರಲೋಕ ದೂರ

ಉಡುವಿನ ನಾಲಗೆಯಂತೆ ಎರಡಾದರೆ ಕೂಡಲ ಸಂಗಯ್ಯ ಮೆಚ್ಚುವನೆ? (೧-೧೦೨)

ಊಡದ ಆವಿಂಗೆ ಉಣ್ಣದ ಕಱುವ ಬಿಟ್ಟಂತೆ ! (೧-೧೦೯)

ಊರಮುಂದೆ ಹಾಲಹಳ್ಳ ಹರಿಯುತ್ತಿರಲಿ, ಓರೆಯಾವಿನ ಬೆನ್ನ ಹರಿಯಲೇಕಯ್ಯ?

ಊರ ಸೀಱಿಗೆ ಅಗಸ ತಡಬಡಿಹಡೆದಂತೆ (೨-೩೦೯)

ಎಡದ ಕೈಯಲಿ ನಿಗಳವನಿಕ್ಕಿ ಬಲದ ಕೈಯ ಕಡಿದುಕೊಂಡರೆ ನೋಯದಿಪ್ಪುದೆ?(೨-೪೦೫)

ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ (೨-೩೩೪)

ಎನಿಸು ಕಾಲ ಕಲ್ಲು ನೀರೊಳಗಿದ್ದರೇನು ನೆನೆದು ಮೃದುವಾಗಬಲ್ಲುದೆ? (೧-೯೯)

ಏತ ತಲೆವಾಗಿದರೇನು? ಗುರುಭಕ್ತನಾಗಬಲುದೆ? ಇಕ್ಕುಳ ಕೈಮುಗಿದರೇನು, ಭೃತ್ಯಾಚಾರಿ ಯಾಗಬಲ್ಲುದೇ? (೨-೧೨೫)

ಒಡೆಯರೊಡವೆಯ ಕೊಂಡರೆ ಕಳ್ಳಂಗಳಲಾಯಿತು (-೭೨೨)

ಒಲೆಯ ಮುಂದಿದ್ದು ಮಾಡದ ಕನಸ ಕಾಣ್ಬವರು (೨-೨೬೬)

ಬಳ್ಳಿಹ ಮೈಲಾರನವೊಳಗೆಲ್ಲ ಸಣಬು (೨-೨೮೦)

ಓಡುವಾತ ಲೆಂಕನಲ್ಲ, ಬೇಡುವಾತ ಭಕ್ತನಲ್ಲ (೨-೪೪೧)

ಅಂಧಕನ ಕೈಯಲ್ಲಿ ದರ್ಪಣವಿದ್ದು ಫಲವೇನು? (೧-೧೦೮)

ಅಂಬುಧಿಯೊಳಗೆ ಬಿದ್ದ ಆಲಿ ಕಲ್ಲಂತೆ (೨-೯೪೧)

ಕಣ್ಣಕಟ್ಟಿ ಕನ್ನಡಿಯ ತೋಱುವಂತೆ ! (೨-೧೮೫) (೨-೫೮೨)

ಕರ್ಪುರದ ಮರನ ಕಡಿದು ಕಳ್ಳಿಗೆ ಬೇಲಿಯನಿಕ್ಕುವರೆ? (೨-೫೯೫)

ಕಬ್ಬ ತಿಂದ ನರಿಯಂತೆ (೨-೨೭೩)

ಕಬ್ಬಿನ ತುದಿಯ ಮೆಲಿದಂತೆ (೨-೯೨೩)

ಕಬ್ಬುನದ ಕೋಡಗನ ಪರುಷ ಮುಟ್ಟಲು ಹೊನ್ನಾದರೇನು, ಮತ್ತೇನಾದರೇನು?(೧-೯೪)

ಕರಿಯು ಕನ್ನಡಿಯೊಳಗಡಗಿದಂತೆ (೨-೮೫೯) (೨-೯೦೩)

ಕರುಳ ಕಲೆ ಪ್ರಕಟಿತವುಂಟೇ? (೨-೮೨೫)

ಕಲ್ಲನಾಗರ ಕಂಡರೆ ಹಾಲನೆರೆ ಎಂಬರು, ದಿಟದ ನಾಗರ ಕಂಡರೆ ಕೊಲ್ಲೆಂಬರು!(೨-೧೯೪)

ಕಲಿಯ ಕೈಯ ಕೈದುವಿನಂತಿರಬೇಕು (೨-೭೬೩)

ಕಹಿ ಸೋರೆಯ ಕಾಯ ತಂದು, ವಿಭೂತಿಯ ತುಂಬಿದರೆ ಸಿಹಿಯಾಗದೇ ಮೂರು ದಿವಸಕ್ಕೆ (೧-೭೩)

ಕಾಣೆಯ ಲಾಭ ಕೋಟಿಯ ಲಾಭವ ಕೆಡಿಸಿದುದು (೨-೨೯೬)

ಕಾಮಧೇನು ನಿಮ್ಮ ಸಾರಿರಲು ಪರರ ಬೇಡಲಾಜೆ (೨-೨೬೧)

ಕಾಳ ಬೆಳದಿಂಗಳು ಸಿರಿ ಸ್ಥಿರವಲ್ಲ! (೨-೧೬೫)

ಕೀಳಿಂಗಲ್ಲದೆ ಹಯನ ಕಚೆವುದೇ? (೨-೩೪೯)

ಕುದುರನೇಸು ತೊಳೆದರೆಯೂ ಕೆಸಱುಮಾಣ್ಬುದೆ? (೨-೨೬೦)

ಕುದುರೆ-ಸತ್ತಿಗೆಯವರ ಕಂಡರೆ ಹೊರಳಿ ಬಿದ್ದು ಕಾಲ ಹಿಡಿವರು; ಬಡಭಕ್ತರು ಬಂದರೆ "ಎಡೆಯಿಲ್ಲ, ಅತ್ತಸನ್ನಿ" ಎಂಬರು! (೨-೪೧೩)

ಕುರಿವಿಂಡು ಕಬ್ಬಿನ ಉಲಿವ ತೋಂಟವ ಹೊಕ್ಕು ತೆರನನಱಯದೆ ತನಿರಸದ, ಹೊರಗಣೆಲೆಯನೆ ಮೇದುವು! (೨-೫೯೮)

ಕುರಿ ಸತ್ತು ಕಾವುದೆ ಹರಮುಳಿದವರ? (೨-೫೬೧)

(ಪಶುಬಲಿ ಪ್ರಯೋಜನವಿಲ್ಲ, ಬರಿಯ ಪತ್ರೆಯ ಪೂಜೆ ಸಾಕು, ಶಿವನೊಲುಮೆ ಮುಖ್ಯ, ಆತ ಮೆಚ್ಚುವುದು ಭಕ್ತಿ, ನಿಷ್ಠೆ!)

ಕುರುಡ ಕಣ್ಣ ಹಡೆದಂತೆ (೨-೩೭೫)

ಕೂಸುಳ್ಳಸೂಳೆ ಧನದಾಸೆಗೆ ಒತ್ತೆಯಕೊಂಡರೆ ಕೂಸಿಂಗಲ್ಲ, ಬುಜಗಂಗಲ್ಲ!(೧-೧೦೧)

ಕೆರೆ ಹಳ್ಳ ಬಾವಿಗಳು ಮೈದಗೆದರೆ ಗುಳ್ಳೆ ಗೊರಜೆ ಚಿಪ್ಪುಗಳು ಕಾಣಬಹುದು : ವಾರಿಧಿ ಮೈದೆಗೆದರೆ ರತ್ನಂಗಳು ಕಾಣಬಹುದು (೨-೮೬೧)

ಕೊಯಿದ ಮೂಗಿಂಗೆ ಕನ್ನಡಿಯ ತೋಱುವಂತೆ (೨-೩೦೪)

ಕೊಲ್ಲುವನೇ ಮಾದಿಗನು, ಹೊಲಸತಿಂಬುವನೇ ಹೊಲೆಯ (೨-೫೯೨)

ಕೋಣನ ಹೇಱುಂಗೆ ಕುನ್ನಿ ಬಸುಗುತ್ತ ಬಡೆವಂತೆ (೨-೬೬೩)

ಕೋಳದ ಮೇಲೆ ಸಂಕಲೆಯನಿಕ್ಕುವರೇ? (೨-೩೧೬)

ಗಗನವನಡರಿದ ಕಾಗೆಯಂತೆ (೨-೨೨-೨೭೩)

ಗರುಡಂಗೆ ಘಟಸರ್ಪವ ತೋಱುವಂತೆ! (೨-೩೧೧)

ಗಿಳಿಯೋದಿ ಫಲವೇನು? ಬೆಕ್ಕು ಬಹುದ ಹೇಳಲರಿಯದು (೨-೧೨೩)

ಗುರುಗಂಜಿ ಮಾಣಿಕಕ್ಕೆ ಸರಿಯಪ್ಪುದೆ? (೨-೬೩೮)

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ, ಅಂಬುಜಕ್ಕೆ ಭಾನುವಿನ ಉದಯದ ಚಿಂತೆ, ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ. (೨-೩೬೪)

ಚಂದನ ಗುಣವನರಸುವುದೇ ತರುಗಳಲ್ಲಿ? (೧-೬೭)

ಚಂದ್ರಂಗೆ ರಾಹು ಅಡ್ಡಬಂದಲ್ಲಿ, ಅಂಬುಧಿ ಬೊಬ್ಬಿಟ್ಟಿತೇ? ಅಂಬುಧಿಯ ಮುನಿ ಅಪೋಶನವ ಕೊಂಬಲ್ಲಿ ಚಂದ್ರಮನಡ್ಡಬಂದನೇ? (೧-೨೫)

ಜಗದ ನೆಂಟ ನೀನೇ ಅಯ್ಯ ಕೂಡಲ ಸಂಗಮದೇವ (೧-೨೫)

ಜಲವ ತಪ್ಪಿದ ಮತ್ಸ್ಯ ಬದುಕುವುದೇ ಸೂಜಿಗ (೨-೩೬೭)

ತಲಹಿಲ್ಲದ ಕೋಲು ಹೊಳ್ಳು ಹಾರುವುದಲ್ಲದೆ ಉಱು ತಾಗಬಲ್ಲುದೇ? (೨-೨೦೨)

ತಳಕ್ಕೆ ನೀರೆರೆದರೆ ಮೇಲೆ ಪಲ್ಲವಿಸಿತ್ತು.

ತಾಳಮರದ ಕೆಳಗೆ ಒಂದು ಹಾಲ ಹರವಿರ್ದೊಡೆ ಅದ ಹಾಲಹರವಿಯೆನ್ನರು, ಸುರೆಯ ಹರವಿ ಎಂಬರು (೧-೯೦)

ಸಿಂಹ ಮದಕರಿಯ ಮೇಲೆ ಹಾರುವದಲ್ಲದೆ, ಮದ ಮಹಿಷಿಯ ಮೇಲೆ ಹಾರುವುದೇ? (೭೧)

ಸಿಂಹದ ಮರಿಯ ಶಿಳ್ಳುನಾಯಿ ತಿಂಬಡೆ ಭಂಗವಿನ್ನಾರದೊ? (೭೪)

ಮಹಾದೇವಿಯಕ್ಕ

ಮಹಾದೇವಿಯಕ್ಕನು ವ್ಯಕ್ತಿವೈಶಿಷ್ಟ್ಯದಿಂದಲೂ ವಚನಮಹಿಮೆಯಿಂದಲೂ ಮೇಲಾದ ಶಿವಶರಣೆ. ನಮಗೆ ತಿಳಿದಮಟ್ಟಿಗೆ ಕನ್ನಡ ಸಾಹಿತ್ಯಪ್ರಪಂಚದಲ್ಲಿ ಅವಳೇ ಮೊದಲನೆಯ ಕವಯಿತ್ರಿ. ಕಂತಿ ದಂತಕಥೆಯ ನಿರ್ಮಿತಿ ಅಲ್ಲವೆಂದಾದರೂ ಅವಳದು ಚತುರಕವಿತೆ, ಅನುಭವಜನ್ಯವಾದ ಹೃದಯಗೀತವಲ್ಲ. ಆಧ್ಯಾತ್ಮ ಮತ್ತು ಗದ್ಯ ಕವಿತ್ವ ಇವುಗಳ ಸಂಮಿಲನಕ್ಕಾದರೂ ಅಕ್ಕಮಹಾದೇವಿ ಮೊದಲಗಿತ್ತಿ. ಅವಳ ಚರಿತ್ರೆ, ಕೃತಿಗಳಿಂದ ಆಧ್ಯಾತ್ಮಿಕ ಸಾಹಸ ಮತ್ತು ಸಿದ್ಧಿಯ ಅಧ್ಭುತರಮ್ಯತೆ ಕಣ್ಣು ಕಟ್ಟುತ್ತವೆ. ಸಾಂಪ್ರದಾಯಿಕ ಸಮಾಜದ ಸಂಕೋಲೆಗಳನ್ನು ಮುರಿದೊಗೆದು ಲಗ್ನಸಂಸ್ಥೆಯನ್ನು ಅತಿಗಳೆದು ಚನ್ನಮಲ್ಲಿಕಾರ್ಜುನನೆಂಬ ಲೋಕಪತಿಯನ್ನೇ ಪತಿಯಾಗಿ ವರಿಸಿ ಅವಳು ಮಾಡಿದ ಉಗ್ರಸಾಧನೆ, ಪಡೆದ ಸಿದ್ಧಿ ಆಶ್ಚರ್ಯಕರವಾದುವು. ಸತಿಪತಿಭಾವದಲ್ಲಿ ಅವಳು ಹೇಗೆ ಪ್ರಗತಿಹೊಂದುತ್ತಾ ಇವಕ್ಕೆ ಸಂಬಂಧಿಸಿದ ವಚನಗಳಿಂದ ತಿಳಿಯಬಹುದು. 'ತರಣಿಯ ಹುಳು' ತನ್ನ ಸ್ನೇಹದಲ್ಲಿ ಮನೆಯ ಮಾಡಿ ತನ್ನ ನೂಲು ತನ್ನ ಸುತ್ತಿ ಸಾವತೆರನಂತೆ, ಮನ ಬಂದುದ ಬಯಸಿ ಬೇವುತ್ತಿದ್ದೇನೆಯ್ಯ' (೨-೧, 'ಅಯ್ಯಾ ನೀ ಕೇಳೀದರೆ ಕೇಳು, ಕೇಳದಿರ್ದಡೆ ಮಾಣು, ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ' (೧೬-೧), 'ಕಳವಳದ ಮನವು ತಲೆಕೆಳಗಾದುದವ್ವಾ! ಸುಳಿದು ಬೀಸುವ ಗಾಳಿ ಉರಿಯಾಯಿತವ್ವ! ಬೆಳದಿಂಗಳು ಬಿಸಿಲಾಯಿತ್ತು ಕೆಳದಿ. ಹೊಳಲುಸುಂಕಿಗನಂತೆ ತೊಳಲುತ್ತಿಹೆನವ್ವಾ! (೪೦-೩), ಆಲಿಸಂಕುಳವೇ, ಮಾಮಮರವೇ, ಬೆಳುದಿಂಗಳೇ, ಕೋಗಿಲೆಯೇ, ನಿಮ್ಮ ನಿಮ್ಮನೆಲ್ಲರನು ಒಂದು ಬೇಡುವೆನು, ಎನ್ನೊಡೆಯ ಚನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೆ' (೪೧-೬), 'ಹರನೇ ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಸಿದ್ದೆ ನೋಡಾ' (೮-೫). ಅವಳ ವಚನಗಳ್ಲಲಿ ಕಂಡುಬರುವ ಕೆಲವು ಚುಟುಕುಗಳು ಇಂತಿವೆ.

ಅರಸಿ ತೊಳಲಿದರಿಲ್ಲ. ಬಯಸಿ ಹೊಕ್ಕರಿಲ್ಲ, ತಪಸ್ಸು ಮಾಡಿದರಿಲ್ಲ..... ಶಿವನೊಲಿದಲ್ಲದೆ ಕೈಗೂಡದು (೬೦)

ಆಪತ್ತಿಗೆ ಸಖಿಯರನಾನಾರುವನು ಕಾಣೆ (೧೫೨)

ಊರ ಸೀರೆಗೆ ಅಗಸ ತಡಬಡಗೊಂಬಂತೆ (೧೩)

ಎಮ್ಮೆಗೊಂದು ಚಿಂತೆ, ಸಮಗಾರಗೊಂದು ಚಿಂತೆ: ಧರ್ಮಿಗೊಂದು ಚಿಂತೆ ಕರ್ಮಿಗೊಂದು ಚಿಂತೆ

ಎಲ್ಲ ಎಲ್ಲವನರಿದು ಫಲವೇನಯ್ಯ, ತನ್ನ ತಾನರಿಯಬೇಕಲ್ಲದೆ (೧೫೯)

ಒಳಗಿನ ಗಂಡನವಾ ಹೊರಗಿನ ಮಿಂಡನವ್ವಾ. (೬೮)

ಕೂಡಿ ಕೂಡುವ ಸುಖಕ್ಕಿಂತ ಒಪ್ಪಚ್ಚಿ ಅಗಲಿ ಕೂಡುವ ಸುಖ ಲೇಸು (೧೪೭)

ಕೈಸಿರಿಯ ದಂಡವ ಕೊಳಬಹುದಲ್ಲದೆ ಮೈಸಿರಿಯ ದಂಡವ ಕೊಳಲುಂಟೆ?

ಗಿರಿಯಲ್ಲದೆ ಹುಲ್ಲು ಮೊರಡಿಯಲ್ಲಾಡುವುದೇ ನವಿಲು? ಕೊಳನಲ್ಲದೆ ಕಿರಿವಳ್ಳ ಕ್ಕೆಳಸುವುದೇ ಹಂಸ? ಮಾಮರ ತಳಿತಲ್ಲದೆ ಸ್ವರಗೈವುದೇ ಕೋಗಿಲೆ? ಪರಿಮಳವಿಲ್ಲದ ಪುಷ್ಪಕ್ಕೆಳಸುವುದೇ ಭ್ರಮರ? (೮೮)

ಚಂದನವ ಕಡಿದು ಕೊರೆದು ತೇದೊಡೆ ನೊಂದೆನೆಂದು ಕಂಪ ಬಿಟ್ಟಿತ್ತೇ? ತಂದು ಸುವರ್ಣವ ಕಡಿದೊರೆದೊಡೆ ಬೆಂದು ಕಳಂಕ ಹಿಡಿದಿತ್ತೆ? ಸಂದು ಸಂದು ಕಡಿದ ಕಬ್ಬನು ಗಾಣದಲಿಕ್ಕಿ ಬೆಂದು ಪಾಕಾಗುಳ್ಳ ಸಕ್ಕರೆಯಾಗಿ ನೊಂದೆನೆಂದು ಸವಿಯ ಬಿಟ್ಟಿತ್ತೇ? (೧೦೯)

ಚನ್ನಮಲ್ಲಿಕಾರ್ಜುನಯ್ಯ, ಕೊಲ್ಲು, ಕಾಯಿ, ನಿಮ್ಮ ಧರ್ಮ (೮)

ಜಾಲಗಾರನ ದುಃಖ ಜಗಕೆಲ್ಲ ನಗೆಗೆಡೆ (೫೧)

ತನ್ನಲ್ಲಿ ಅರಿವು ಸ್ವಯವಾಗಿರಲು, ಅನ್ಯರ ಕೇಳಲುಂಟೇ? (೧೫೯)

ನಾಯಿತಿಂದರೇನು? ನೀರ ಕುಡಿದರೇನು? (೧೬೬)

ಬಲ್ಲಿದನ ಹಗೆ ತೆಗೆವನ್ನ ಬರ ಬಡವನ ಹರಣ ಹೋದ ತೆರನಂತೆ (೧೭)

ಬಿಲ್ಲು ಬೆಳವಲಕಾಯಿ ಒಂದಾಗಿ ಹಿಡಿಯಲು ಬಾರದು

ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತು? (೪೯)

ಬೆರಳು ತಾಳ ಹಣ್ಣ ಹಿಸುಕಿದಡೆ ಮೆಲಲುಂಟೇ? (೨೫)

ಬಂಜೆ ಬೇನೆಯರಿಯಳು ಮಲತಾಯಿ ಮುದ್ದಬಲ್ಲಳೆ? ನೊಂದನೋವ ನೋಯದವರೆತ್ತ ಬಲ್ಲರು (೧೩೭)

ಮಣ್ಣ ಬಿಟ್ಟ ಬಳಿಕ ಈ ಕೆಯ್ಯಿಯನಾರುತ್ತರೇನು? (೧೬೬)

ಸಮುದ್ರದ ತಡಿಯಲ್ಲಿ ಮನೆ ಮಾಡಿ ನೊರೆ ತೆರೆಗಳಿಗಂಜಿದಡೆಂತು? (೪೯)

ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕೆ ನಾಚದಡೆಂತು? (೪೯)

ಹಣ್ಣ ಮೆದ್ದ ಬಳಿಕ ಆ ಮರವನಾರು ತರಿದರೇನು? (೧೬೬)

ಹಾಲ ಹಿಡಿದು ಬೆಣ್ಣೆಯನರಸಲುಂಟೇ? (೧೧೪)

ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲರೆ ಹಾವಿನ ಸಂಗವೇ ಲೇಸು (೧೨೫)

ಹುಸಿ ಎಂಬುದೇ ಹೊಲೆ (೫೦)

ಹೊಳ್ಳ ಬಿತ್ತಿ ಫಲವನರಸುವಂತೆ ! (೫೦)

ಹೆಣ್ಣ ಬಿಟ್ಟ ಬಳಿಕ ಆಕೆಯನಾರು ಕೂಡಿಕೊಂಡರೇನು? (೧೬೬)

ರುದ್ರಭಟ್ಟ

ನೇಮಿಯಂತೆ ವೀರಬಲ್ಲಾಳನ ಆಳಿಕೆಯಲ್ಲಿ ಆಗಿಹೋದ ಇನ್ನೊಬ್ಬ ಕವಿ ಎಂದರೆ ರುದ್ರಭಟ್ಟ. ನೇಮಿಯಿಂದ ವೀರಬಲ್ಲಾಳನ ಮಹಾಪ್ರಧಾನನಾದ ಪದ್ಮನಾಭನು ಜೈನಪುರಾಣವನ್ನು ಬರೆಸಿದನು. ಅವನ ಇನ್ನೊಬ್ಬ ಮಂತ್ರಿಯೂ ಪಂಡಿತನೂ ಆದ ಚಂದ್ರಮೌಳಿ ರುದ್ರನು ಬರೆದ ವಿಷ್ಣುಪುರಾಣಕಥೆಯನ್ನು ಕೊಂಡಾಡಿದನು. ಅದೇ 'ಜಗನ್ನಾಥವಿಜಯ'ವೆಂಬ ಗ್ರಂಥ. 'ರಸಕಳಿಕೆ' ಎಂಬ ಇನ್ನೊಂದು ರಸಶಾಸ್ತ್ರವನ್ನು ಕುರಿತ ಅವನ ಗ್ರಂಥ ದೊರೆತಿಲ್ಲ. ಜಗನ್ನಾಥ ವಿಜಯದಲ್ಲಿ 'ಕೃಷ್ಣಕಥೆ'ಯನ್ನು ಹೇಳೆಂದು ಬುಧರು ಹೇಳಲು 'ಕಾವ್ಯಸಮಾಧಿಯಿಂದ ಪರಂಜ್ಯೋತಿ ಮುಕುಂದನೆನ್ನ ಬಗೆಯೊಳ್ ನಿಲೆ ನಿರ್ಮಳತತ್ತ್ವಬೋಧಮುದ್ಯೋತಿಪುದೆಂಬುದಂ ಬಯಸಿ ಷೇಟಲೊಡರ್ಚಿದೆನೀ ಪ್ರಬಂಧಮಂ' (೧-೧೭) ಎಂದು ಕವಿ ಹೇಳಿದ್ದಾನೆ. ಇದರಿಂದ ಕೃಷ್ಣಚರಿತೆಯ ಬಿತ್ತರಣೆ, ತನ್ಮೂಲಕ ಹೊಳೆಯುವ 'ನಿರ್ಮಳತತ್ವಬೋಧ' ಎಂದರೆ ಭಕ್ತಿಮಾರ್ಗವಾಗಿ ಜ್ಞಾನಪ್ರಾಪ್ತಿ ಇದು ಗ್ರಂಥರಚನೆಯ ಉದ್ದೇಶವೆಂದು ತಿಳಿಯುತ್ತದೆ. ಜೊತೆಗೆ ಸಂಸ್ಕೃತ, ಕನ್ನಡ-ಪ್ರೌಢಕಾವ್ಯಗಳ ಪರಂಪರೆಯಲ್ಲಿ ತನ್ನ ಪಾಂಡಿತ್ಯ-ಪ್ರತಿಭೆಗಳ ಫಲವಾದ ಕೃತಿಯೊಂದನ್ನು ಸೇರಿಸಬೇಕೆಂಬ ಉತ್ಸಾಹವೂ ಇದೆ. ಕವಿ ಇಟ್ಟುಕೊಂಡ ಮಹೋದ್ದೇಶವು ಏಕತಾನವಾಗಿ ಅಲ್ಲದಿದ್ದರೂ ನೈಜವಾಗಿ ಸಫಲವಾಗಿದೆ : ಕಾವ್ಯಸಮಾಧಿಯಿಂದ ಕೃಷ್ಣಧ್ಯಾನ, ಅದರಿಂದ ತತ್ವಬೋಧ ಉಂಟಾಗಿರುವುದು ಕವಿವ್ಯಕ್ತಿ ಹಾಗೂ ಕೃತಿಯ ಗುಣಾತಿಶಯಕ್ಕೆ ಗುರುತಾಗಿದೆ. ಆದರೆ ಸಮಯಶರಣ ವರ್ಣನೆಗಳಿಂದಲೂ ಪ್ರೌಢಿಮೆ-ಪಾಂಡಿತ್ಯಗಳ ಪ್ರದರ್ಶನದಿಂದಲೂ ಸಮಾಧಿ ಭಂಗವಾಗಿರುವುದೂ ಉಂಟು. ಅಂತೇ, 'ಜಗನ್ನಾಥವಿಜಯ'ವು ಮಹಾಕೃತಿಯಾಗಿದೆ. ಅಲ್ಲಿ ಕಂಡುಬರುವ ಕೆಲವು ಚುಟುಕುಗಳು ಇಂತಿವೆ.

ಅರಿವೀರರೊಳಂ ಸ್ತ್ರೀಜವೈರಮೇಂ ಕೇವಲಮೇ? (೧-೨೧)
ಅಸ್ಥಿರಗುಣನಾಶ್ರಯದೊಳಾರುಮಿರಲರಿದಪರೇ? (೧೬-೩೧)
ಅಸುಹೃದ್ವಿಷಾಂಕುರಂ ಜನಿಯಿಸಲದನುಗುರೊಳ್‌ಚಿವುಂಟುವುದು
ಕೊಡಲಿಗೊಳಲ್ಪಸಮಲ್ಲದು ಬೆಳೆದೊಡೆ (೩-೨೨)
ಆನೆದಿಂಬಂಗಾಡಾವರಿದು? (೮-೯೫)
ಆಶಾಹತಿ ಮಾಡದೆ ತಥ್ಯದಲ್ಲಿ ಮಿಥ್ಯಾಭಯಮಂ? (೧೬-೩೨)
ಇರ್ದು ಕಾಣ್ಬ ಸಗ್ಗದಿಂ, ಕಟ್ಟಿಯಿಂ ಸತ್ತುಕಾಣ್ಬ ನರಕಮೇವುದು? (೪-೩೭ ವ)
ಊರಸೀರೆಗಗಸಂ ಬಡಿವೆತ್ತನ್ (ನಾಳ್ನುಡಿ) (೬-೭)
ಏಕಗ್ರಾಹಿಗೆ ಸುಖೋದಯಂ ಸಮನ್ಸುದೇ? (೪-೧೨)
ಕಡಲಂ ಪೀರ್ವಂಗಮರಿದೆ ಕುಡಿತೆಯ ಸಲಿಲಂ? (೬-೮೨)

ಕನಸಿಂದಂ ನೆರೆದವನಂ ಮನಸಿಂ ನೆರೆದಪ್ಪೆ (೧೭-೧೧೦)

ಕನಸಿನ ಭತ್ತಕ್ಕೆ ಗೋಣಿಯಾಂತವರೊಳರೆ? (೧೭-೧೧೨)

ಕಲ್ಪತರುವಿರ್ದ ವನಾಂತರದೊಳ್ತರುವ್ರಜಂ..... ಲೆಕ್ಕಮೇ? (೧೭-೨೫)

ಕಲ್ಪವೃಕ್ಷಮಿರೆ ಕಳ್ಳೀ ಮಹಾವೃಕ್ಷಂ ಗಡನಿತರಿಂದದು ಪಿರಿದೇ? (೧೭-೨೮)

ಕವಿತಾ ಪ್ರೌಢನೆ ಸೋಲ್ವವೋಲ್ ಕೃತಿಯೋಳಜ್ಞಂ ಸೋಲ್ವನೇ? (೧-೧೩)

ಕಾಂತೆಯರ ಪೆರ್ಮೊಲೆ ಸೋಂಕಿದೊಡಾವ ಮಾನವರ್ ಪುಳಕಿತರಾಗದಿರ್ಪರ್ ?

ಕೇವಣದೊಳ್ಕೀಲಿಸಲಲ್ಲದೆ ವಜ್ರವಂತದೇನಾಯುಧಮೇ? (೧೩-೮೫)

ಚಂದ್ರಕಾಂತವೊಸರ್ವಂತಿರೆ ಗೋರಿಕಲ್ಲೊಸರ್ಗುಮೆ ಬೆಳ್ದಿಂಗಳೊಳ್ ? (೧-೧೩)

ತುಡುಕಿದ ದೋಷಿಯನಲ್ಲದೆ ಪಿಡಿಯದು ಘುತಸರ್ಪ (೧-೧೨)

ತುಂಬಿ ಪೀರ್ವವೊಲೇಂ ಪೀರ್ದಪುದೇ ಕಡಂದುಱುತೆ ನವ್ಯಾಮೋದಮಂ ಪೋಗಳೊಳ್ ? (೧-೧೩)

ದಿಶಾಗಜಕ್ಕೆ ಕಳಭಂ ಕೈಯಿಕ್ಕಲೇನಾರ್ಕುಮೆ? (೯-೧೭)

ದೈವವಿಸೂತ್ರಮಂ ಪುರುಷಕಾರಂ ಮೀಱಲೇನಕ್ಕುಮೇ (೩-೧೯)

ನಡುನೀರೊಳ್ಪರಿಗೋಲನಿಂತು ಕುಯ್ಯುದೆ ವಿಧಿಯೇ ! (೬-೧೦೧)

ನವಚೂತಂ ತಳಿರ್ವಂದದೀಂ ತಿಳಿರ್ಗುಮೇ ಸ್ಥಾಣೂತ್ಕರಂ ಚೈತ್ರದೋಳ್ ? (೧-೧೩)

ನಾಗಾರಿಯನಕಟ ಗೃಧ್ರನೆಂದೇಱುಪುದೇ? (೧೩-೮೬)

ನಾನೃಷಿಃ ಕುರುತೇ ಕಾವ್ಯಂ (೧-೭)

ನಿರ್ಮಲರ ಸಂಗತಿ ಮಾಱುಮಪಾಯನಾಷಮಂ (೧೬-೨೯)

ಪತಿತರ್ ನಿರ್ಮಳರ ನಡುವೆ ಯೋಗ್ಯರೆ ಸುಱುಯಲ್ ? (೧೪-೧೧೧)

ಪ್ರಚಂಡ ಯಮದಂಡವದೇಂ ಮಾಣ್ಬುದೆ ಪಿಪೀಲಿಕಾವಧವಿಧಿಯಂ? (೨-೫೪)

ಪಾವಂ ಪಿಡಿದನಿತರೊಳೇಂ ಪಾವಟಿಗರ್ಸುಭಟರಪ್ಪರೇ? (೧೭-೪೪)

ಪಿತೃ, ಮಾತೃ, ಗುರು, ದ್ವಿಜ, ದೇವಪೂಜೆಯಿಂ ಕಾಲುಮಿದೆಯ್ದೆ ಸಲ್ಲದನ ಬಾಳ್ಕೆ ನಿರರ್ಥಕಮಲ್ತೆ ಲೋಕದೊಳ್ ! (೬-೯೩)

ಪ್ರಿಯಮಪ್ಪ ವಸ್ತುವಂ ನೀಂ ದೆಯೆಯಿಂ ಕುಡೆ ಪಡೆದಳಾವಳಾಕೆಯೆ ದಿಟದಿಂ ಪ್ರಿಯೆ (೧೨-೧೦೦)

ಪ್ರೀತಿಯೆ ದೂತಿಯಾಗಿ ತರೆ ಬಂದಂ ಕಾಂತನಾ ಕಾಂತೆಗಂ (೧೬-೧೨೦)

ಪೆಂಡಿರೊಳಂ ಭೀತಿರಸಂ ಮೋಹರಸಮನೊತ್ತರಿಸುಗುಮೇ? (೩-೨೫)

ಬಯಕೆಗೆ ಬಡವರಿಲ್ಲ (೧೧-೧೬)

ಬಳಯಿಸುವುದು ನೀತೆಯೆ ವಿರೋಧಿಯಂ ವ್ಯಾಧಿಯುಮಂ? (೩-೨೨)

ಬಾಲಾತಪನಿಂದಮಱಪ್ಪ ನಲವಬ್ಜನಿಗಪ್ಪುದೆ ಚಂದ್ರಕಾಂತಿಯಿಂ? (೧೨-೭೭)

ಬುದ್ಧಿ ಕಿಡುಗುಂ ಕೇಡೆಯ್ದುವಂದಾರೊಳಂ (೮-೭೫)

ಬೂದಿಯೆ ವಿಭೂತಿಯಾದಂತೆ..... (೧೭-೨೯)

ಬೂದಿಯೆಳ್ವೆಳ್ಪ ಹವಿವೊಲಕ್ಕಂ (೧೭-೨೪)

ಮಾನಸದೊಳಿರ್ದ ಹಂಸಂ ತಾನಿತರ ಸರೋಜಷಂಡಮಂ (೫-೬೨)

ಮಾನಿನಿಗೆ ಮಾನಭಂಗಂ ತಾನಿದು ಮರಣಕ್ಕೆಮಧಿಕಂ (೧೨-೯೭)

ಮಾಲತಿಗೆಱಗಿದ ತುಂಬಿ ನೆನೆಗುಮೇ ಮಿಕ್ಕಲರಂ? (೫-೯೧)

ಮಿಕ್ಕ ಮಂಡನಂ ಯುವತಿಜನಕ್ಕೆದೇವುದೊ ರತೋತ್ಸವ ಚಿಹ್ನಮೆ ದಿವ್ಯಮಂಡಾನಂ (೧೪-೧೧೦)

ಮೃಗರಾಜನಿರ್ದ ಕಾಂತಾರ ಕದಂಬದೊಳ್ಮೃಗಗಣಂ..... ಲೆಕ್ಕಮೇ? (೧೭-೨೫)

ಮೆಳೆಗಂಜದೊಡಂ ಪುಲಿಗಂಜುವಂತೆ (೭-೫)

ಮೇರು ಮಹಾದ್ರಿಯರ್ದೊಡೆಯೊಳದ್ರಿಕುಲಂ ಲೆಕ್ಕಮೇ? (೧೭-೨೫).

ಯಾಚನೆಯೊಳ್ ನೆಗೞ್ದಾರ್ಗೆ ತನು ಸಂಕೋಚಂ? (೧೭-೩೮)

ರುಕ್ಮಿಣಿಯುಂಗುಟದೊಳುಳ್ಳ ಸೊಬಗುಂಟೆ ಸತ್ಯಭಾಮೆಯ ನೊಸಲೊಳ್?(೧೨-೭೨)

ವನಿತೆಯ ಮೊಲೆ ಮುಟ್ಟಿ ಶೌಚಿಯಾವಂ ಜಗದೊಳ್ ? (೪-೧೧)

ವನಿತೆಯರನಾವನುಂ ನೋಡಿ ನೋಡಿಸಲ್ ಸೋಲ್ತು ಸೋಲಿಸಲ್ ನೆಱೆಯಂ (೧೧-೩೬)

ವಿಕೃತಿಯಂ ಮಧುಸಂಗತಿ ಮಾಡದಿರ್ಕುಮೇ? (೧೪-೨೩)

ವಿಭುಗಪರಿಮಿತಾಳಾಪಮಶ್ಲಾಘ್ಯಮಲ್ತೆ (೧-೬೭)

ವಿವೇಕಮುಂಟೆ ಮೋಹಾಕುಲರೊಳ್ ? (೬-೩೦)

ಸತ್ಯನಿಧಿಯ ಶೈಶಮಿಳಿದೇ? (೧೬-೧೩)

ಸತ್ತು ಕಾಣ್ಬ ಸಗ್ಗದಿಂದಿರ್ದು ಕಾಣ್ಬ ನರಕಂ ಲೇಸು (ನಾಣ್ನುಡಿ) (೪-೩೭ ವ)

ಸ್ವಯಂಪ್ರಭುವೆಂತಿರ್ದೊಡಮಿರ್ದತೆಱನೆ ಚೆಲ್ವಾಗಿರ್ಕುಂ (೪-೧೦೫)

ಸಿಡಿಲೆಂನೋಪಂಗೆ ಶಸ್ತ್ರಂ, ಮರದ ಗದೆ ಗಡಂ ನಿನ್ನ ಕಾಂತಂಗೆ (೧೩-೮೪)

ಸುರವಾರಣವಿರ್ದ ತಾಣದೊಳ್ ವಾರಣರಾಜಿ..... ಲೆಕಮೇ? (೧೭-೨೫)

ಹರಿಗಂ ಮಿತ್ತುವಿಗಮಿದಿರ್ಚಿ ಜೀವಿಪರೊಳರೇ? (೭-೧೦೦)

ಹಸ್ತಿ-ಮಶಕ, ಪರ್ವತ-ಪರಮಾಣು, ಸಮುದ್ರ-ಸೀಕರಾಂತರಂ (೧೭-೩೦)

ನೇಮಿಚಂದ್ರ

ವೀರಶೈವ ಸಾಹಿತ್ಯದ ಹೊಸ ಪ್ರವಾಹವು ಮೊದಲಿನ ಮಾರ್ಗಕಾವ್ಯದ ಪ್ರವಾಹವನ್ನು ತಡೆಯಲಿಲ್ಲ. ಒಡಗೂಡಿ ಮುಂದುವರಿಯಿತು ಎಂಬುದಕ್ಕೆ ಈ ಯುಗದ ಅನೇಕ ಕವಿಗಳು ಸಾಕ್ಷಿಯಾಗಿದ್ದಾರೆ. ಅದರಲ್ಲಿ ಹರಿಹರ-ರಾಘವಾಂಕರಿಗೆ ಸುಮಾರು ಸಮಕಾಲೀನರಾದ ನೇಮಿಚಂದ್ರ-ರುದ್ರಭಟ್ಟರು ಇವರಿಬ್ಬರು ಪ್ರಖ್ಯಾತರು.

ಈ ನಾಲ್ವರ ಕಾಲ ೧೨ನೆಯ ಶತಮಾನದ ಕೊನೆ, ೧೩ನೆಯ ಶತಮಾನದ ಮೊದಲು ಎಂಬುದು ನಿಶ್ಚಿತ, ನೇಮಿಚಂದ್ರ 'ಸಾರಸ್ವತಪಾರ'ನಾದ ಮಹಾಪಂಡಿತ, ಶೃಂಗಾರಪ್ರಿಯ, ತನ್ನ 'ಲೀಲಾವತಿ ಪ್ರಬಂಧ'ವನ್ನು ರಟ್ಟರಾಜ ಲಕ್ಷ್ಮಣದೇವನ ಆಶ್ರಯದಲ್ಲಿ, 'ನೇಮಿನಾಥ ಪುರಾಣ'ವನ್ನು ಹೊಯ್ಸಳ ವೀರಬಲ್ಲಾಳನ ಮಹಾಪ್ರಧಾನ ಪದ್ಮನಾಭನ ಪ್ರೇರಣೆಯಿಂದ ಅವನು ಬರೆದನು. 'ಲೀಲಾವತಿ'ಯೆ ಅವನ ಪ್ರಥಮ ಕೃತಿಯಾಗಿರಬೇಕು. ಇದು ೧೪ ಆಶ್ವಾಸಗಳಲ್ಲಿ ಶೃಂಗಾರರಸವೊಂದನ್ನೇ ನಿರೂಪಿಸಿದ ಚಂಪೂಕಾವ್ಯ. ಶೃಂಗಾರಮಂ ಕಾವ್ಯಬಂಧನದೊಳ್ ತಾಂ ಸೆಯೆಗೆಯ್ದ ಮೆಯ್ಮೆಯೊಳಿವಂ ಶೃಂಗಾರಕಾರಾಗೃಹಂ' (೧-೫೧) ಎಂದು ಕವಿ ತನ್ನ ಬಣ್ಣಿಸಿಕೊಂಡಿದ್ದಾನೆ. ಕನಸಿನಲ್ಲಿ ಬೇರೆ ಬೇರೆಯಾಗಿ ಒಬ್ಬೊಬ್ಬರನ್ನು ಕಂಡು ಒಲಿದ ನಲ್ಲನಲ್ಲೆಯರು ಕೂಡಿ ಅಗಲಿ ಮತ್ತೆ ಕೂಡಿದುದೇ 'ಲೀಲಾವತಿ'ಯ ಪ್ರಣಯರಮ್ಯ ಕಥೆ. ಭಾರತೀಯ ಕಥಾ ಪರಂಪರೆಯಲ್ಲಿದ್ದ ಈ ಕಥಾ ರೀತಿ ಸುಬಂಧವಿನ 'ವಾಸವ ದತ್ತೆ'ಯೆಂಬ ಸಂಸ್ಕೃತ ಗದ್ಯಕಾವ್ಯವಾಯಿತು. ಅದರಿಂದಲೇ ಸ್ಫೂರ್ತಿಗೊಂಡು ಇಲ್ಲಿ ಚಂಪೂಕಾವ್ಯವಾಗಿದೆ. ಕಥೆಯನ್ನು ನಿಮಿತ್ತ ಮಾಡಿ ವರ್ಣನೆಯ ಪ್ರಸ್ತ ಬೆಳೆಸುವ ವೈಖರಿ ಸಂಸ್ಕೃತ ಕವಿಗಳಿಂದ ವಿಶೇಷವಾಗಿ ಬಾಣ-ಸಂಬಂಧಗಳಿಂದ, ಕನ್ನಡ ಕವಿಗಳಿಗೆ ಬಂದುದು. ಬಹುಶಃ ಅದರ ಅತಿರೇಕ ಸಂಬಂಧವುದಿನ ಮೂಲಕ ನೇಮಿಚಂದ್ರನಲ್ಲಿ ವ್ಯಕ್ತವಾಗಿದೆ. ವರ್ಣನೆಗಳಲ್ಲಿ ಶ್ಲೇಷೋಪಮೆ, ವಿರೋಧಾಭಾಸ, ಶಬ್ದಚ್ಛಲ ಮುಂತಾದ ಬಗೆ, ಕಲ್ಪನೆಗಳ ಕೆಲಮಟ್ಟಿನ ಸಾಮ್ಯ ಇದನ್ನು ಕಣ್ಣಿಟ್ಟು ನೋಡಿದರೆ ನೇಮಿಗೆ ಸಂಬಂಧವೇ ಪ್ರೇರಕನೆಂಬುದು ಸ್ಪಷ್ಟವಾಗುತ್ತದೆ. ಆದರೂ 'ಲೀಲಾವತಿ' ಸಂಬಂಧ ಕೃತಿಯ ಅನುವಾದವಲ್ಲ, ಅನುಕರಣವಲ್ಲ. ಸ್ವತಂತ್ರ ಕಾವ್ಯಭಾವಗಳೂ ಕಲ್ಪನೆಗಳೂ ಇದರಲ್ಲಿ ಹೇರಳವಾಗಿವೆ. ಅವನ ಈ ಕೃತಿಯಲ್ಲಿಯ ಕೆಲವು ಚುಟುಕು ಗಳು ಇಂತಿವೆ.

ಅಗುಳದೆ ನಿಧಾನಂಗಂಡಂತೆ (೧೦-೪೮ ವ)

ಅತಿ ತರಳಂಗೆ ಕೈಸಾರ್ದ ಕಜ್ಜಮುಂ ಕೆಡುವುದಾವ ಕೌತುಕಂ? (೫-೬೦)

ಅಪುತ್ರಸ್ಯ ಗತಿರ್ನಾಸ್ತಿ

ಅತಿಸುಗುಣಂ ಚೋರಲಕ್ಷಣಂ (೧೪-೧೧೫ ವ)

ಅಬ್ಬೆಯಱಯದ ಕೋಣೆಯುಮಾತೂಣನಾಡದೆಡೆಗಳು ಮೊಳವೇ? (೧-೪೫)

ಅಲ್ಪ ಘನಮೆನಿಸಿದ ನೆರೆಯ ಸಿರಿಯ ಸೈರಿಸಲಾಱಂ (೩-೩೨)

ಅಹೋ ವಿಘ್ನಪರಂಪರಾ

ಆಪ್ತರ ಮಾತುಗಳಂ ನಂಬಿದವರ್ಗೆ ಸಂದೆಯಮುಂಟೇ? (೧೦-೩೮)

ಅವಗುಣಕ್ಕಮೀವಗುಣಮಗ್ಗಳಂ (೧-೫೯)

ಆ ಸ್ಮರನಾ ಪುಗಲಿತ್ತೊಡೆ ಮನಮುರಿವುದು ಮಂಗಂಗಳುರಿವುದುಂ ವಿಸ್ಮಯಮೇ? (೪-೫೦೦

ಇಂದ್ರಿಯ ವಿಸರಮುಮಂ, ಬಿಸರುಹ ಮುಖಿಯರುಮನಱುವೊಡಿದೆ ಸಿದ್ಧಾಂತಂ(೪-೫೪)

ಉದ್ಯಾನದೊಳೊಡನಿರವೆ ಕಾಗೆಯುಂ ಕೋಗಿಲೆಯುಂ? (೧-೨೬)

ಏರ್ದೆ ಕತ್ತರಿ ನಾಲಗೆ ಬೆಲ್ಲಂ (೧೨-೫೦)

ಏರ್ದೆಯಂ ಸೀಳ್ದೊಡಮೋದಕ್ಕರಮಿಲ್ಲ (೨-೧೨೪)

ಎರಡರ್ಕೆ ಬಿಟ್ಟ ಕಱುವೋಲೆ ಡೆಯಾಡಿದಳ್(೨-೧೨೪)

ಎಲೆ ಪಣ್ತುಬಿರ್ದ ಬಟ್ಟೆಯ ಮರನಂತೆ ಮೊಲೆ ಬಿರ್ದ ಬಟುಕೆ ಬೆಲೆವಣ್ದಿರ್(೨ ತಿವುಡೆ ೯)

ಎಂದುದನೆನುರಿರ್ಪರ್ ಗಿರಿಯಂದದಿ (೧-೨೫)

ಒಲವಿನ ಪರವಿರಿಯಂ(?) ಬಲ್ಲುನುಳ್ಳೊಡಾತನೆ ಬಲ್ಲಂ (೪-೫೧)

ಓಕುಳಿಯ ನೆವದೊಳಪ್ಪಿಕೊಂಡಳ್ (೧೩-೧೫೫)

ಕಡು ಸೊರ್ಕಿದವರ್ಗೆ ಲಜ್ಜೆಗಳೊಳವೆ? (೯-೫೨)

ಕಡೆಗಣಿಸಿದೊಡಂ ದರ್ಪಂಗಿಡಿಸಿದೊಡಂ ಕಳೆವುದರಿದು ಖಳನಂ ರಸೆಯೊಳ್ (೧-೩೮)

ಕಣ್ಣ ಬೇನೆಗಾಱದೆ ತಲೆಯಂ ತಿವಿಸಿಕೊಂಡರ್ (೧೪-೪೭ ವ)

ಕನಸಿನ ಭತ್ತಕ್ಕೆ ಗೋಣಿಯಾಂಪರೆ? (೪-೭೦)

ಕನಸಿನೊಳಂ ಗರ್ದಭ ದರ್ಶನಮಗಿವಿನಮಾರ್ಗೆ ಮಾಡದ ಶುಭೋದಯಮಂ? (೧-೩೪)

ದರಹಾಸಶ್ರೀಗೆ ಬೆಳ್ದಿಂಗಳ ಸಿರಿ ಸರಿಯಲ್ಲ...... (೪-೧೫೩)

ದುಗ್ಧಂ ವಿಷಮಾದೊಡೇನನೆಂದಪೆನ್? (೪-೧೩೭)

ದಂತಾ ದಂತಿ ನಖಾನಖೀಯೆನಿಪ್ಪಕಾಳೆಗಂ (೬-೭೪)

ನವ ರತ್ನಕ್ಕಬ್ಧಿ, ಚಿಂತಾಮಣಿಗೆ ಮೊರಡಿ, ಮುತ್ತಿಂಗೆ ಸಿಂಪಿಂದುವಿಂಗಂ ರವಿಗಂ, ಪೂರ್ವಾಶೆ, ಲಿಂಗಕ್ಕವನಿ, ಸುಧೆಗೆ ದುಗ್ಧಾಬ್ಧಿ, ಪದ್ಮಕ್ಕೆ ಪಂಕಂ (೪-೫೦)

ಪನ್ನಗಾಭರಣವೆನ್ನಂ ಬೇಡಲ್ವೇಳ್ಪದೆ, ಸುರುಚಿಯಿಂ, ಸಾಂಗೀಕಾರದಿಂ ಕಾಮದಿಂ, ಪ್ರೇಮದಿಂ, ನಿಷ್ಠೆಯಿಂ ನೆಟ್ಟನೆ ಕೊಟ್ಟೆಂ (೧೦-೨೬ ವ)

(ಗಿರಿರಾಜನು, ಪಾರ್ವತಿಯನ್ನು ಪರಮೇಶ್ವರನಿಗೆ ಧಾರೆಯೆರೆದು ಕೊಡುವ ಬಗ್ಗೆ ಆಪ್ತವಚನಗಳನ್ನು ನುಡಿದು ಸಪ್ತ ಋಷಿಗಳ ಸಂಗಡ ಆಡಿದ ಮಾತು)

ಪುದಿದಾಲಿಂಗನದೊಳಗಾ

ವುದನಾವುದು ಸೋಂಕಿತದೆ ಮುಖೋತ್ಸವಮದೆ ಕಾಮದಮದೆ ಮದನವಿಲಾಸಾ

ಸ್ಪದಮದೆ ಸರ್ವಾಂಗ 'ಹರ್ಷಮದೆ ಸಮಯೋಗಂ (೪-೧೩೬)

ಪುಸಿ ದಿಟಕ್ಕೆ ನಿಲ್ಸುದೆ? (೯-೧೧೭)

ಪೂವಂ ಪೂ ಸೋಂಕೆ ಕೊರಗದು (೫-೫೯ವ)

ಪೆಳವನ ಕಣ್ಗಳಂಧಕನ ಕಾಲ್ಗಳೀವಿಂತೊಡಗೂಡಿ ಗಾವುದಂ ತಳರ್ದೊಡೆ ಬಲ್ಲಿದಂ ನಡೆದಮಾಳ್ಕೆಯೆನಿಪ್ಪುದೆ? (೧-೨೪)

ಪಂಚೇಷವಿಂದಲ್ಲದೆ ಪಂಚಮುಖನ ತಪಂ ಸಂಚಲಿಸದು. (೬-೮೪ ವ)

ಪಂದಿ ಡುಱುಕೆಂದೊಡೆ ತಾಂ, ಡುಱುಕೆಂಬುದೇ ಮಹಾವನಕರಿಯಂ ವಿದಾರಿಸುವ ಸಿಂಹಂ?

(೧-೨೯)

ಬೇರಂ ಬಲ್ಲರ್ಗೆಲೆದೋಱಲೇಕೇ? (೫-೬೫)

ಮಳೆ ಮಾಣ್ದೊಡೆ ಹನಿ ಮಾಣದು (೯-೫೭)

ಮೇಘಾಗಮನಂ ಮಯೂರಂಗಸಹ್ಯಮೆ? (೧೦-೨೬ ವ)

ಮಂಜು ನೆಱೆಮಾಡ್ದೊಡೆ ಶೀತಂ ಮಾಣದು (೯-೬೭)

ರತ್ನಕ್ಕೆ ಕಾಂತಿಯೆರವೆ? (೧೦-೨೬ ವ)

ಮಂಜುವೆಱೆ ಮಾಣ್ದೊ ಶೀತಂ ಪೊಲ್ಲದೆ? (೯-೬೭)

ಶಿವನ ಕರುಣಮೆನಗಿದಿರ್ವರೆ ವಿಚಾರಮೆ, ಬರ್ದುಂಕಿದೆಂ ಬರ್ದುಂಕಿದೆಂ(೫-೪೯)

ಸಾತ್ವಿಕ ಶಿವಭಕ್ತಿಗಲ್ಲದ ಭವಂ ಸಮಂತು ಸಿಲ್ಕುರಿ ನಿಲ್ಕುಂ(೩೪-೪೯)

ಹಿತರೆನಗಿನ್ನಾರ್ ?....... ಹಿತರೆನ್ನ ನಿಶಿತ ಖಡ್ಗಮಂ ನಿಡುದೋಳುಂ (೬-೩೧)

ಹಿಮಕರ ಕಿರಣಾವಳಿಗಳ್ ಕುಮುದದ ಸೋಂಕಿಂದೆ ಕಂಪನಪ್ಪಿದುವು (೩-೯೫)

ಹರಿಹರ

ಶರಣಜೀವನ ಮತ್ತು ವಚನ ಸಾಹಿತ್ಯಗಳು ಒಂದು ಮಹಾಪೂರದಂತೆ ಬಂದು ಇಳಿದ ಮೇಲೆ ಅದರ ನೆನವಿನಿಂದ ಸ್ಫುರಣಹೊಂದಿ ಸಾಹಿತ್ಯ ನಿರ್ಮಾಣ ಮಾಡಿದವರಲ್ಲಿ ಹರಿಹರ, ರಾಘವಾಂಕ, ಪದ್ಮರಸ ಈ ಮೂವರು ಮುಖ್ಯರು. ಇವರಲ್ಲಿ ಹರಿಹರನು ಹಿರಿಯ ಭಕ್ತ ಕವಿ, ಮೇಲಾದ ಶಿವಕವಿ. ಇವನೆಲ್ಲ ಭಕ್ತಿಪೂರ್ಣವಾದ ಭಾವ ನಿರ್ಭರವಾದ ಸಮಗ್ರವ್ಯಕ್ತಿತ್ವವೊಂದು ಎದ್ದು ಕಾಣುತ್ತದೆ. ಪಾಂಡಿತ್ಯ-ಪ್ರತಿಭೆಗಳ ರೆಕ್ಕೆಗಳನ್ನು ಬಿರಿದು, ಭಕ್ತಹೃದಯವನ್ನು ತೊರೆದು, ದಣಿವಿಲ್ಲದೆ ಹಾಡುತ್ತ ಹಾರುವ ಹಕ್ಕಿಯಂತೆ ಇವನು ತೋರುತ್ತಾನೆ. ಈ ವ್ಯಕ್ತಿತ್ವದಲ್ಲಿ ಸಮಗ್ರತೆಯಿದೆ. ಸಮತೂಕವಿಲ್ಲ; ಉತ್ಸಾಹವಿದೆ, ನಿಗ್ರಹವಿಲ್ಲ. ಇದರಲ್ಲಿಯೆ ಇದರ ಸೊಗಸಿದೆ. ಇವನ ದೊರೆತ ಗ್ರಂಥಗಳೆಂದರೆ ಪಂಪಾಶತಕ, ರಕ್ಷಾಶತಕ, ಮುಡಿಗೆಯ ಅಷ್ಟಕ, ಗಿರಿಜಾಕಲ್ಯಾಣ ಮತ್ತು 'ಶಿವಗಣದ ರಗಳೆಗಳು'. ಇವುಗಳ ರಚನೆಯ ಕ್ರಮದ ಬಗ್ಗೆ ಚರ್ಚೆ ನಡೆದಿದೆ. ಬಹುಶಃ ಇಂದಿನ ಎಲ್ಲ ಅಭ್ಯಾಸಿಗಳು ಒಪ್ಪುವಂತೆ ಮೊದಲಿನ ನಾಲ್ಕು ಗ್ರಂಥಗಳು ಅದರಲ್ಲಿಯೂ 'ಗಿರಿಜಾಕಲ್ಯಾಣ'ವು ಹರಿಹರನ ಕಾವ್ಯ ನಿರ್ಮಾಣದ ಮೊದಲ ಹಂತದಲ್ಲಿ ಹುಟ್ಟಿದುವೆಂದೂ ಶಿವಶರಣರ ರಗಳೆಗಳು ಎರಡನೆಯ ಹಂತದಲ್ಲಿ ಹುಟ್ಟಿದವೆಂದೂ ಸ್ಥೂಲವಾಗಿ ಹೇಳಬಹುದು. ರಗಳೆಯಲ್ಲಿ ಕೆಲವು ಮೊದಲನೆಯ ಹಂತದಲ್ಲಿ ಹುಟ್ಟಿರಬಹುದು ಎಂಬುದನ್ನೂ ಇಲ್ಲಿ ಲಕ್ಷಿಸಬೇಕು. 'ರಗಳೆಯ ಕವಿ' ಎಂಬ ಪರಿಹಾಸದ ಬಿರುದು ಸಂಪ್ರದಾಯ ಮೂಢರಿಂದ ದೊರೆತದ್ದು ನಿಜವಿರಬಹುದು. ಆದರೆ ಅದರಿಂದ ಸೂಚಿತವಾದ ರಚನಾಕ್ರಮ ನಿಜವಲ್ಲ. ಅವನ ಬಸವಣ್ಣನ ರಗಳೆಯಲ್ಲಿ ಕಂಡುಬರುವ ಕೆಲವು ಚುಟುಕುಗಳು ಇಂತಿವೆ.

ಅಮೃತ ರಸದೊಳು ಕೈಪೆಯುಂಟೆ? (೧೦ನೆಯ ಸ್ಥಲ-೮೪)

ಅಮೃತವೇಕೆ ವಿಷವೇಕೆ? (೪ನೆಯ ಸ್ಥಲ-೩೯)

ಅಳೊಡನೆ ಸರಸವೇನ್ (೯ನೆಯ ಸ್ಥಲ-೫೨)

ಉದಧಿ ನದಿಯ ನೀರಂ ಸೀವುದೆ? (೮ನೆಯ ಸ್ಥಲ-೧೨೫)

ಒಡೆಯರೊಡವೆಯನೆಳಸೆ ಕೊಡದಿಪ್ಪುದುಂ ನಯವೆ? (೧೨ನೆಯ ಸ್ಥಲ-೨೦)

ಕಣ್ ನೋಡದೆ ಹುಣ್ಣ ನೋಡದೆ ಹೋಗೆಂಬರೆ? (೪ನೆಯ ಸ್ಥಲ-೩೦)

ಕಾಳ್ಕಿಚ್ಚಿನಿಂ ಬೇವಂಗೆ ತಂಪಿನ ಸೋನೆಯ ಮಳೆಯಾಗುತ್ತೆ ಮಾಣ್ಬರೆ? (೪ನೆಯ ಸ್ಥಲ-೩೨)

ಕಣ್ ಬಂದಂತೆ ಉಸಿರ್ ಬಂದಂತೆ (೨ನೆಯ ಸ್ಥಲ-೫೨)

ಕತ್ತಲೆಯ ಕೊರ್ಬು ಸೂರ್ಯನೆ ಮುಂದಣರುಣೋದಯದಿ ಪರಿಯಿತು (೮ನೆಯ ಸ್ಥಲ - ೧೧೧)

ಕಾಲಲೊದೆವರ್ ಬಡಿವರೊಡೆಯರಾಗಿರ್ದವರು (೧೩ನೆಯ ಸ್ಥಲ-೫೨)

ಕುಡುವವಂ ಸಂಗಂ ಬೇಡುವವಂ ಸಂಗಮದೇವಂ (೧೨ನೆಯ ಸ್ಥಲ-೫೭)

ಗಗನದಿಂದಿಳಿವಂಗಾರಮಾಗುತ್ತೆ ತಪ್ಪುವರೆ? (೪ನೆಯ ಸ್ಥಲ-೩೧)

ಜನನದ ಬಳಿವಿಡಿದೆಂತಕ್ಕೆ ಬಂದ ಜವನಂ ಶಿವಪೂಜೆಯಲ್ಲಿ ಸವೆಯವೇಳ್ಕುಂ (೨ನೆಯ ಸ್ಥಲ-೪೦)

ದೇವದೇವ, ನಿಮ್ಮಂ ಕಂಡವನಾವಂ ಲೋಕಕ್ಕೆ ಕಣ್ಣಾಗ? (೬ನೆಯ ಸ್ಥಲ-೧೧೦)

ದೇವಂ ಭಕ್ತರ್ ಕೊಟ್ಟಡೆ ಕೈಕೊಳ್ವಂ (೬ನೆಯ ಸ್ಥಲ-೮೩)

ನಡುಗಡಲೊಳಾಳುವಂಗೆ ತೆಪ್ಪವಾಗುತ್ತೆ ಪಿಂಗುವರೆ? (೪ನೆಯ ಸ್ಥಲ-೩೩)

ನೆನೆಯ ಮುಂದಿರ್ದಪೆಂ ಕರೆದೊಡೋ ಎಂದಪೆಂ (೫ನೆಯ ಸ್ಥಲ-೩೩)

ನಂಬಿದವರ ಗೋಣಂ ಕೊಯ್ವರೆ? (೪ನೆಯ ಸ್ಥಲ-೫೩)

ಬೆಳಗೇಕೆ ತಮವೇಕೆ? (೪ನೆಯ ಸ್ಥಲ-೩೬)

ಬೆಳುದಿಂಗಳೇಕೆ ಬಿಸುಪೇಕೆ? (೪ನೆಯ ಸ್ಥಲ-೩೫)

ಬಂಜೆ ಬೇನೆಯಱಿಯದವೊಲ್ (೯ನೆಯ ಸ್ಥಲ-೧೮೧)

ಭಾಸ್ಕರಂ ಕನ್ನಡಿಯ ಬೆಳಗಂ ಪಾರ್ವನೆ? (೮ನೆಯ ಸ್ಥಲ-೧೨೬)

ಮುಂದಱಿಯದೆ ಗೀತಮಂ ಪಾಡಿ ತೊಡಕಂ ತಂದುಕೊಂಡೆ (೧೨ನೆಯ ಸ್ಥಲ-೨೩)

(ಸಂಗಮೇಶ್ವರನು ಬಸವಣ್ಣನವರಿಗೆ ಹೇಳಿದ ಮಾತು. "ಬೇಡಿ ಬೇಡಿದ ಶರಣಂಗೆ ನೀಡಿದಿರ್ದಡೆ ತಲೆದಂಡ ಕೂಡಲಸಂಗ, ಅವಧಾರು" ಎಂಬ ಗೀತವನ್ನು ಬಸವಣ್ಣನವರು ಹಾಡಿದ್ದು "ಹಗ್ಗ ಕೊಟ್ಟು ಕೈಕಟ್ಟಿಸಿಕೊಂಡ ಹಾಗಾಯಿತು" ಎಂಬುದು ಸಂಗಮೇಶ್ವರನ ಅಭಿಪ್ರಾಯ. ಹಾಗೆ ಹೇಳಲು ಕಾರಣ

ಕಳಿಂಗದೇಶದ ಮಹದೇವ ಸೆಟ್ಟಿಯೆಂಬ ಭಕ್ತನೊಬ್ಬ ಬಸವಣ್ಣನವರನ್ನು ಕನಕರತ್ನ ರಾಶಿಗಳನ್ನು ಮನವಾರೆ ಬೇಡಲು ಹೊರಟಿದ್ದುದು. ಇದೆಲ್ಲ ಬಸವಣ್ಣನವರನ್ನು ಪರೀಕ್ಷಿಸಲು ಸಂಗಮೇಶ್ವರನ ಮಾಯೆ).

> ಲಿಂಗ ಪತಿ, ಶರಣ ಸತಿ (೧೨ನೆಯ ಸ್ಥಲ-೧೩೬)
>
> ಶರಣ ತತಿ ಹೋಹುದೇ ಎನ್ನ ಹರಣದ ಹೋಗು ಶರಣ ಬರವೇ ಎನ್ನ ಹರಣದ ಬರವಿಯಾಗು (೯ನೆಯ ಸ್ಥಲ-೧೮೩-೧೮೪)
>
> ಶರಣದ ತೊತ್ತೆನಗೆ ಬೇಜೆ ಗತಿಮತಿಯುಂಟೇ? (೯ನೆಯ ಸ್ಥಲ-೭)
>
> ಶಿಶುವನಿಱುವರೆ? ಪಶುವಂ ಕೊಲುವರೆ? (೪ನೆಯ ಸ್ಥಲ-೩೮)
>
> ಶಿವನ ಗಣಾಧೀಶರಱುವವರೊಳರೇ? (೯ನೆಯ ಸ್ಥಲ-ಕಂದಪದ್ಯ ೩)
>
> ಸೂರ್ಯನ ಮೈಯೊಳು ಕಳಂಕುಂಟೆ? (೧೦ನೆಯ ಸ್ಥಲ-೮೩)
>
> ಹೊದ್ದಿದರಂ ಹೋಗೆಂಬರೆ? ಸಾರ್ದರಂ ಸೈರಿಸೆಂಬರೆ? (೪ನೆಯ ಸ್ಥಲ-೩೭)

ರಾಘವಾಂಕ

ರಾಘವಾಂಕನ ಕಾವ್ಯಸಿದ್ಧಿಯ ಹೆಗ್ಗುರುತೆಂದರೆ 'ಹರಿಶ್ಚಂದ್ರಕಾವ್ಯ'. ಅವನ ಶಕ್ತಿವಿಶೇಷಗಳೆಲ್ಲ ಇದರಲ್ಲಿ ತನಿಗೊಂಡು ಮೇಳಗೊಂಡಿವೆ, ಮತೀಯ ಅಭಿನಿವೇಶಗಳೆಲ್ಲ ಸೌಂದರ್ಯಪ್ರಜ್ಞೆಯ ಮುಂದೆ ಹತಬಲವಾಗಿವೆ. 'ಈ ಕೃತಿಗೆ ಪ್ರತಿಯಿಲ್ಲ' (೧-೧೨), 'ತೊಡಗಿದೆನೀ ಮಹಾಕೃತಿಯ' (೧-೧೪) ಎಂಬ ಕವಿಯ ಸಾರಿಕೆ ಇದರಲ್ಲಿ ಸತ್ಯವಾಗಿದೆ. 'ಇದರೊಳಗೊಂದು ಕುಂದಿಲ್ಲ' ೯೧-೧೩) ಎಂದು ಮಾತ್ರ ಹೇಳಬಾರದು. 'ಪರರೊಡವೆಯಂ ಕೊಂಡು ಕೃತಿಯ ಪೇಳಿದ ಭಾಷೆ' (೧-೧೬), 'ಪೊಸಕಾವ್ಯಕನ್ಯಕೆ' (೧-೩೩) ಈ ಬಗೆಯ ಉಕ್ತಿಗಳಿಂದ ಇದರ ಸ್ವಂತಿಕೆಯೇನು, ಹೊಸತನವೆಲ್ಲಿ ಎಂಬ ಪ್ರಶ್ನೆಗಳೇಳುತ್ತವೆ. ಹರಿಶ್ಚಂದ್ರನ ಕಥೆ ವೇದಪುರಾಣಕಾವ್ಯಗಳಲ್ಲಿ ಸುಪ್ರಸಿದ್ಧವಾದುದು. 'ಈ ಕಥಾಬೀಕಥಾಬೀಜವೀ ಬೀಜಮಂ ಬಿತ್ತಿ ಬೆಳಸಿದಪೆನೀ ಕಾವ್ಯವೃಕ್ಷವಂ' (೧-೧೮) ಎಂದು ಅವನೇ ಹೇಳಿದಂತೆ ಪೂರ್ವಪರಂಪರೆಯಿಂದ ಕಥಾಬೀಜವನ್ನು ಎತ್ತಿತಂದು ತನ್ನ ಕಾವ್ಯ ವೃಕ್ಷವನ್ನು ಬೆಳೆಸಿದ್ದಾನೆ. ಪೂರ್ವಕಥೆಯ ಅಪೂರ್ವ ನಿರೂಪಣೆಯಲ್ಲಿ 'ಹರಿಶ್ಚಂದ್ರ ಕಾವ್ಯ'ದ ಹೊಸತನವಿರುತ್ತದೆ. ರಾಘವಾಂಕನಿಗಿಂತ ಹಿಂದಿನ ಆಕರಗಳೊಡನೆ ಇತರ ಸಂವಿಧಾನವನ್ನು ಹೋಲಿಸಿದರೆ ಭಾರತೀಯ ಸಾಹಿತ್ಯದಲ್ಲಿಯೇ ಕಾಣದೊರೆಯದ ನೂತನ ಸನ್ನಿವೇಶಸೃಷ್ಟಿ, ಕೃತಿಬಂಧ ಇಲ್ಲಿ ಇದೆ ಎಂಬುದು ಹೆಮ್ಮೆಯ ಸಂಗತಿ. ಹರಿಶ್ಚಂದ್ರಕತೆಯ ಮನವರಿಕೆಗೆ 'ಹರಿಶ್ಚಂದ್ರನನ್ನು' ವಿಶ್ವಾಮಿತ್ರನು ಅಷ್ಟುಮಟ್ಟಿಗೆ ಕಾಡಲು ಯಾಕೆ ಮನದಂದನು, ವಿಶ್ವಾಮಿತ್ರನಿಗೆ ಹರಿಶ್ಚಂದ್ರನು ರಾಜ್ಯವನ್ನು ಕೊಡುವ ಪ್ರಸಂಗವೇಕೆ ಬಂದಿತು, ತನ್ನನ್ನೂ ತನ್ನವರನ್ನೂ ಮಾರಿಕೊಂಡನೇಕೆ?' - ಈ ಪ್ರಶ್ನೆಗಳಿಗೆ ಸನ್ನಿವೇಶಗಳ ನವೀನ ನಿರೂಪೆಯಿಂದಾಗಿ ನವೀನ ಸನ್ನಿವೇಶಗಳ ನಿರ್ಮಾಣದಿಂದಾಗಲಿ

ರಾಘವಾಂಕನು ಇದಕ್ಕೆ ಉತ್ತರ ಕೊಟ್ಟಿದ್ದಾನೆ. ಕಲಾತಿಶಯವನ್ನು ಮೆರೆದಿದ್ದಾನೆ. ಮೊದಲನೆಯದಕ್ಕೆ ವಸಿಷ್ಠ-ವಿಶ್ವಾಮಿತ್ರರ ಸಂದರ್ಭ, ಎರಡನೆಯದಕ್ಕೆ ಹರಿಶ್ಚಂದ್ರ ಹೊಲತಿಯರ ಸಂದರ್ಭ ಉತ್ತಮ ಉದಾಹರಣೆಯಾಗಿವೆ. ಎಲ್ಲ ಕಡೆಗೆ ಅವನ ನಾಟ್ಯಪ್ರತಿಭೆ ಅದ್ಭುತರಮ್ಯವಾದ ಬೆಳಗಿದೆ. 'ಹರಿಶ್ಚಂದ್ರಕಾವ್ಯ' ಮೂಲ ಸತ್ವದಲ್ಲಿ ಒಂದು ಅತ್ಯಂತ ಪ್ರಭಾವಿಯಾದ ನಾಟಕವಾಗಿವೆ ಎಂಬುದು ತೀರ ದಿಟ. ರುದ್ರನಾಟಕವೆಂದು ಅದನ್ನು ಕೆಲವರು ಕರೆಯಬಹುದು. ಒಟ್ಟು ರೂಪದಲ್ಲಿ ನೋಡಿದರೆ ಅದು ರುದ್ರ ಅಂಶಗಳುಳ್ಳ ಭದ್ರನಾಟಕವೇ ಸರಿ. ವಸ್ತುರಚನೆ, ಪಾತ್ರಪೋಷಣೆ, ರಸ ನಿರೂಪಣೆ, ಸಂವಾದರಚನೆ, ವರ್ಣನೆ ಯಾವ ಮಗ್ಗುಲಿನಿಂದ ನೋಡಿದರೂ ಈ ಕೃತಿ ಘನತೆಯಲ್ಲಿ ಹೊರಹೊಮ್ಮಿಸುತ್ತದೆ. ಆ ಕೃತಿಗಳಲ್ಲಿ ಕಂಡುಬರುವ ಕೆಲವು ಚುಟುಕುಗಳು ಇಂತಿವೆ.

ಅಡವಿಯಂ ಮೊಗೆದು ಸುಡುವ ಅಗ್ನಿಗೆ ಅಪೋಶನದ ಗೊಡವೆಯೇವುದು?

ಅತಿ ದುಃಖಿಗುಂಟೇ ಬುದ್ಧಿ? (೧೩-೧)

ಅತಿ ಹುಸಿದನತಿ ಹೊಲೆಯ, ಹುಸಿಯದಿಹ ಹೊಲೆಯನುನ್ನತ ಯತಿವರಂ (೧೪-೧೦)

ಅಧಿಕ ಕಸ್ತೂರಿಯಂ ಕೊಡುವ ಮೃಗನಾಭಿ ತಾನಾವಲೇಸು? (೭-೧೭)

ಅನುನುಯದೊಳೆಲ್ಲಮಂ ಕೊಡಬಹುದು. ಬಿಡಬಹುದು (೭-೧೩)

ಅವನಿಪರಂ ಮರುಳರ್

ಇನಿದುಳ್ಳ ಮಧುವನೊಸೆದೀವ ನೊಳವಾವ ಲೇಸು? (೭-೧೭)

ಉತ್ತಮ ಗುಣಗಳಿರ್ದು ಆವ ಕುಂದಂ ಕಳೆಯಲಾರವು? (೧೦-೨೭)

ಉತ್ತಮರ ಮುಂದಾವ ಠಕ್ಕಿರಲಾಪುದು? (೧೦-೨೭)

ಉರಿಯ ನೊರಜು ಕಾಡುವ ತೆಱಂ (೬-೧೦)

ಏನುವನಱಿಯದ ಕಾಕು ದುರ್ಬೋಧಕಂ ಕವಿಯೆನಿಸೆ ಕುಂದೇ ಮಹಾಕವಿಗೆ? (೧-೨೪)

ಒಡಲಳಿದಡಂ ಸಾಲವಳಿಯದು (೮-೫೪)

ಓಡಬಾರದಿರಬಾರದು......ಸಾಯಬಾರದು ಬದುಕಬಾರದು (೧೧-೬)

ಓವಿದ ಹುಣ್ಣ ಕಾಗೆ ಕದುಕಿತ್ತು (೧೨-೫೨)

ಅಂಗಳವನು ಬೋಹರಿಪರಾರ್ ? (೧-೨೨)

ಕತ್ತುರಿಯ ಸುಟ್ಟರಳ ಕುಱುಕಲನು ಗೆಯ್ವರೆ? (೮-೭೬)

ಕವಿದು ಹೆಗ್ಗಡಲುಕ್ಕಿ ಜಗವ ಮೊಗೆವಡೆ ಮೆಳೆಗಳಡ್ಡ ಬಹವೆ? (೨-೩೧)

ಕವಿಯಧಿಕನಿರ್ದೊಡೇಂ ಕೇಳ್ವರಿಲ್ಲದೊಡೆ? (೧-೨೫)

ಕಾಲಗುಣವೋ..... ಕರ್ಮಫಲವೋ? (೧೧-೧೯)

ಕಾವ್ಯಮಂ ನಡೆಸುವಾತಂ ರಸಾವೇಶ ಮಱಹಾಲಸ್ಯವೆಡೆಗೊಳಲು ತಪ್ಪುಗಲ್ಲದೆ ಕಾವ್ಯ

ಕರ್ತೃ ತನ್ನವನೆ? (೧-೨೩)

ಕೀಲಿಂಗೆ ದೇಗುಲವ ನಳಿವ ದರ್ಪ (೩-೧೦)

ಕುಡಿದೌಷಧಂ ಬಾಹ್ಯೆ ನಿಗ್ರಹಂ ಮಾಡಿ ತಾಳ್ದೊಡಲಿಂಗೆ ಸುಖವನೀವಂತೆ (೧೪-೩)

ಕುಲವ ನಾಲಗೆಯಱುಹಿತು (ನಾಣ್ನುಡಿ) (೨-೩೨)

ಕೊಡದ ಮುನ್ನೆನ್ನೊಡವೆ, ಕೊಟ್ಟಬಳಿಕೆನಗೆಲ್ಲಿ ಎನ್ನೊಡವೆ? (೮-೬೬)

ಕೊಡಬಾರದೊಡವೆಯಂ ಕೊಡವದರಿದ್ರೈಸೆ, ಕೊಡುವೊಡವೆಗಳನಾರಾದೊಡಂ ಕೊಡರೇ? (೭-೧೧)

ಕೊಡವಾಲ ಕೆಡಿಸುವೊಡಾಮ್ಲವೆನಿತಾಗಬೇಕು? (೭-೨೨)

ಕೋಣವೆರಡುಂ ಹೋರೆ ಗಿಡುವಿಂಗೆ ಮಿತ್ತು (ಗಾದೆ) (೧-೧೨; ೩-೧)

ಕೋಪದಿಂ ಸತ್ತು ಮದೆಯಹರೆ? (೮-೭೬)

ಕೋಳಿ ಕೋಳಿಯನು ಬಯಸುವವಲ್ಲದೇನೊಲಿದು ರಾಜಹಂಸೆಯ ನೋಳ್ಪದೆ? (೪-೪೪)

ಕಂಗುರುಡನೇಗೈದುವಂ ಕಾಣದೊಡೆ ಮುಕುರ ಕೆಡುವುದೇ? (೧-೨೭)

ಕೆಡವನು ಮುಟ್ಟಿದಡೆ ಬೇವಂತೆ ಕೇಳ್ದಡಂ ವಾಸಿಸಿದಡಾಂ ಬೆಂದವೇ? (೭-೨)

ಗುಡ್ಡಿ ಹಸು ಬಿಡೆ ಕಱೆದ ಹಾಲು ಕಹಿಯಪ್ಪುದೇ? (೧-೨೧)

ಗುರು ತುಷ್ಟಿ, ಶಿವ ತುಷ್ಟಿ (೬-೪೬)

ಜಲವನುಳಿದಬುಜಕಾ ತರಣಿ ಮುನಿವ (೧೧-೯)

ಜಲಶಯನ ವಿಷ್ಣು ಹರಿಯೆನಿಸಿದೊಡೆ ಭೇಕನುಂ ನೀರೊಳಗೆ ಹರಿಯೆನಿಸಿ ಕೊಂಡಡದಕೊಂದನೇ ಚಕ್ರಧನು? (೧-೨೪)

ಅಧಮರ ಬೋಧೆಯಿಂದಾರ ಲೇಸು ಬೀಸರವಾಗದು? (೨-೭)

ಅಮೃತ ಫಲಮಂ ಕಲ್ಪತರುವನದೊಳಱಸುವಂತೆ (೨-೨೮)

ಅಮೃತವನುಣಲು ರುಚಿ ಮೂಡಿದಂದ (೭-೫೨)

ಅಱುವತ್ತು ತುಂಬಿದೊಡೆ ಮಱುಮಾತು ಬೇಡ (೧-೪೫)

ಅವಿದ್ಯರಿಪುಬಲಕ್ಕೆ ಬೆಂಗೊಡದವಂ ಕಲಿ (೪-೩೩)

ಅವ್ವೆಗತ್ತನ್ನಳಂಕಂಡ ಶಿಶುವ ಪೋಲ್ತು (೨-೫೬)

ಆಲಿಯಂಜನವನೊಳಕೊಂಡಿರ್ಪುದೆ? (೯-೪೨)

ಉಸಿರು ಪರಿಮಳವಾಗೆ ಬೆಲೆಗೊಂಬ ಹೂವೇಕೆ? (೩-೧೨)

ಒಡಲಿಲ್ಲದುಸುರುಂಟೆ? (೮-೬)

ಕಣ್ಣಱಿಯದಿರ್ದೊಡಂ ಕರುಳಱಿಯವೇ? (೨-೨೫)

ಕನ್ನಡಿಗೆ ಕನ್ನಡಿದೋಱುದಂತೆ (೩-೧೪)

ಕೀಸೆ ನೆಳಲು ಹೊರೆ ಬಿಡುವುದೇ? (೬-೪)

ಕೆಡುವೊಡವೆಯಂ ಕೊಡೆ, ಕಂಡು ಕೆಡದ ಧರ್ಮವ ಕೊಡುವೆನೇ? (೮-೬)

ಕೊಡೆಯೆ ಬಯಲಾಸಱುವುದೇ? (೬-೪)

ಕೋಪಗಿಚ್ಚನೊತ್ತರಿಸುವಂ ಕಲಿ (೪-೩೩)

ಗಾಳಿಯಂ ಹುಡಿ ಹಿಡಿವುದೇ? (೯-೪೨)

ಗುರುದೈವ ಶರಧಿಕರಿಗಳನು ಬಲುಹಿಂ ನಿಲಿಸಬಹುದೇ? (೯-೧೫)

ಜೀವರಂ ದೇವರಂ ಹೋಲಿಸುವರೇ? (೯-೪)

ತರಣಿ ಮೂಡಲು ತಿಮಿರವೇ? (೮-೩೫)

ತರಣಿಯೊಲಗಕೆ ಸೊಡರಂ ಪಿಡಿವ ತೊಡಕೇಕೆ? (೧-೪)

ತರುಬಲ್ಲುದೇ ತನ್ನ ಫಲ ರುಚಿಯನು? (೩-೨೬)

ತಳಿರೆತ್ತ ಬಿಸಿಲೆತ್ತ, ಹಂಸಶಿಶುವೆತ್ತ ಕಲುಮೊರಡಿಯೆತ್ತ? (೨-೨೭)

ತಾನುಂಡು ತನ್ನ ಗುಡ್ಡಂಗೆ ಹಾಳೆಯನಾಂತ (೮-೧೬)

ತೆಗೆ ಪಟ್ಟಗಿಟ್ಟಿಸುವ ಜೋಯಿಸನೋ ಭೋಪಾಳಿಗನೊ ಹಾರುವನೊ ಬಹುಮಂತ್ರ

ಜನ್ನ

ಆದಿಪಂಪನಂತೆ ಸರ್ವಕಷವಾದ ಮತ್ತು ಪ್ರಫುಲ್ಲವಾದ ವ್ಯಕ್ತಿತ್ವವುಳ್ಳವನು ಈ ಯುಗದ ಜನ್ನನು. ಸುಮನೋಬಾಣನು ಇವರ ತಂದೆ, ೨ನೆಯ ನಾಗವರ್ಮನು ಉಪಾಧ್ಯಾಯನು, ಮಲ್ಲಿಕಾರ್ಜುನ ಭಾವ, ಕೇಶಿರಾಜ ಸೋದರಳಿಯ ಇಂಥ ಬಾಂಧವ್ಯದ ಪರಿಸರದಲ್ಲಿ ಬೆಳೆದು ಹೊಯ್ಸಳನರಸಿಂಹನೋಲಗದಲ್ಲಿ 'ನಿಂದಿರೆ ದಂಡಾಧೀಶಂ, ಕುಳ್ಳಿರೆ ಮಂತ್ರಿ, ತೊಡಂಕಿ ಕವಿ' (೧-೫೬ ಅ.ಪು) ಆಗಿ 'ನಾಲ್ಪಿಭುಜನಾರ್ಧನದೇವ' ಎಂದು ಬಿರುದಾಂತ ಸವ್ಯಸಾಚಿ; 'ಮನ್ನಿಸಿ ಬಲ್ಲಾಳಂ ಕುಡೆ | ಜನ್ನಂ ಕವಿಚಕ್ರವರ್ತಿವೆಸರಂ ಪಡೆದಂ' (೧-೨೧ ಯ.ಚ.) ಎಂಬಲ್ಲಿ ಹೇಳಿದಂತೆ ವೀರಬಲ್ಲಾಳನಿಂದ ಕವಿಚಕ್ರವರ್ತಿ ಎಂಬ ಹೆಸರನ್ನು ಪಡೆದವನು. 'ತಾನಿತ್ತ ಕೆಯ್ಯಲ್ಲದೆ ಒಡ್ಡಿದ ಕೆಯ್ಯಲ್ಲದ ಪೆಂಪು' (೧೪-೮೦ ಅ.ಪು) ಎಂದೂ ಹೇಳಿದ್ದಾನೆ. ಇದಕ್ಕನುಗುಣವಾಗಿ ಜೈನ ಮಂದಿರಗಳನ್ನು ಅವನು ಕಟ್ಟಿಸಿದ್ದಾನೆ. ಈ ಆತ್ಮನಿವೇದನದಲ್ಲಿ ಅತಿಶಯೋಕ್ತಿಯ ಅಂಶವಿರಬಹುದಾದರೂ ಒಟ್ಟಿನಲ್ಲಿ ಜನ್ನನದು ತುಂಬುಬಾಳು, ವಿವಿಧ ಶಕ್ತಿಗಳಿಂದ ಸಮೃದ್ಧವಾದ ತೃಪ್ತಜೀವನವೆಂದು ಊಹಿಸಲು ಅಡ್ಡಿಯಿಲ್ಲ.

'ಯಶೋಧರ ಚರಿತೆ' ಸು.೩೧೦ ಪದ್ಯಗಳನ್ನು ನಾಲ್ಕು ಅವತಾರಗಳಲ್ಲಿ ಹಂಚಿಕೊಂಡ ಸಣ್ಣಗಾತ್ರದ ಕಾವ್ಯ. ಪ್ರತಿಯವತಾರದ ಕೊನೆಯ ಕೆಲವು ವೃತ್ತಗಳನ್ನುಳಿದು ಸು.೩೦೦ ಕಂದಪದ್ಯಗಳಿವೆ. ಈ ಕಾವ್ಯದ ಪಡಿಯಚ್ಚು ಕನ್ನಡಕ್ಕೆ ಹೊಸದು, ಆ ಕೃತಿಯ ಕೆಲವು ಚುಟುಕುಗಳೇ ಇಂತಿವೆ.

ಅಱುನೀರ ಮೀಂಬೊಲ್ (೩-೬)

ಅಶ್ವಮಹಿಷ ನ್ಯಾಯ (೩-೬೭)

ಆರಱುವರಯ್ಯ ವಿಧಿ ವಿಳಸನಂ? (೩-೨೭)

ಒಲವಾದೊಡೆ ರೂಪಿನ ಕೋಟಲೆ ಏವುದೋ(೨-೪೩)

ಒಂದಡಸಿದೊಡೇಟಡಸಿತು (ನುಡಿ) (೩-೧೨)

ಕಣ್ಣಱುಯದೊಡಂ ಕರುಳಱುಯದೆ? (೩-೪೪)

ಕರಿ, ಕರಿಗಲ್ಲದಿಱುಂಪೆಗೆ ಪರಿವುದೇ? (೨-೫೪)

ಕರಿದಾದೊಡೆ ಕತ್ತುರಿಯಂ, ಕುರುಡಾದೊಡೆ ಮಲಯಜಂಗಳಂ ಕೊಂಕಿದೊಡೇಂ ಸ್ಮರಚಾಪಮನಿಟುಕೆಯ್ವರೆ? (೨-೪೨)

ಕಲ್ಲೊಳ್ , ಪೊನ್ , ಪಾಲೊಳ್ ಘೃತಮಿಲ್ಲೆನವೇಡ (೪-೨೭)

ಕಾರ್ಯಮಾಗೆ, ಕಾರಣದಿಂದಂ ಫಲಮೇನ್ ? (೨-೪೩)

ಕಾವರೆ ಕಣೆಗೊಳ್ವೊಡಬ್ಬೆ, ಬಾರಿಪರೊಳರೇ (೩-೧೭)

ಕಿವಿಸವಿ ದನಿ; ಕಣ್ಸವಿ ರೂಪ (೨-೫೨)

ಕಿಂ ಮಿತ್ರಂ ಯನ್ನಿವರ್ತಯತಿ ಪಾಪಾತ್ (೪-೪೫)

ಕುರುಡಂಗೆ ತೋಱಿದೊಡಿಲ್ಲಪ್ಪುದೆ ವಸ್ತು? (೪-೨೭)

ಕೈಪೆ ಸೊರೆಯ ಕುಡಿ! (೨-೫೫)

ಕೋಟಲೆಗೆ ಕೋಡು ಮೂಡಿದ ತೆಱಂ (೩-೬೪)

ಕೋಣನ ಪೋರ್ಕುಳಿ ಗಿಡುವಿಗೆ ಮಿತ್ತು (೩-೬೮)

ಕಂಬಂದಪ್ಪಿದ ಕರಿ (೨-೬)

ಗಗನಂ ಗಗನಾಕಾರಂ (೧-೧೩)

ಗುರುವಚನಮಲಂಘನೀಯಂ (೩-೧೯)

ಚತುರಂಗಬಲ ಸಮೇತಂ ಪ್ರತಿಪಕ್ಷಂ ಶೂರನಾದೊಡೇನಂ ಮಾಡಂ? (೪-೩೪)

ಚಿತ್ರಮಪಾತ್ರೇ ರಮತೇ ನಾರೀ (೨-೩೪)

(ಲಕ್ಷ್ಮೀ ಲಕ್ಷ್ಮಣ ಹೀನೇಚ, ಕುಲಹೀನೇ ಸರಸ್ವತಿ !

ಅಪಾತ್ರೆ ರಮತೇ ನಾರಿ ಗಿರೌ ವರ್ಷತಿ ವಾಸವಃ !! ಬೃಹತ್ಕಥಾಮಂಜರಿ)

ತನ್ನಂತಿರೆ ಬಗೆವುದು ಪೆಱರಂ (೪-೩೫)

ತಿಳಿಯಲರಿದು ಪೆಂಡಿರ ಕೃತಕಂ (೩-೩೩)

ತುಪ್ಪೇಱುದ ದರ್ಪಣದೊಳ್ ಪಜ್ಜಳಿಸಲಾರ್ಪುದೇ ಪ್ರತಿಬಿಂಬ? (೧-೬೬)

ದಯಾಮೂಲಂ ಧರ್ಮ

ಕುಮಾರವ್ಯಾಸ

ಕುಮಾರವ್ಯಾಸನು ಕನ್ನಡಕ್ಕೆ ತಲೆಮಣಿಯಾದ ಕವಿಗಳಲ್ಲಿ ಒಬ್ಬನು. ಅವನ ಚರಿತ್ರೆ ಬಹುಶಃ ಕಣ್ಮರೆಯಾಗಿದ್ದರೂ ಅವನ ಕೃತಿ ನಮ್ಮ ಕಣ್ಣು ಮುಂದಿದೆ. ಅದೇ ಹತ್ತು ಪರ್ವಗಳಲ್ಲಿರುವ 'ಕನ್ನಡ ಭಾರತ' ಇಲ್ಲವೆ 'ಗದುಗಿನ ಭಾರತ'. ಹತ್ತು ಪರ್ವಗಳ ಈ ಒಂದು ಕೃತಿ ಹತ್ತು ದಿಕ್ಕುಗಳಲ್ಲಿ ಹರಡಿದ ವಿಶ್ವದಂತೆ ವಿಶಾಲವಾಗಿದೆ. ಮಹಾಭಾರತದ ಹದಿನೆಂಟು ಪರ್ವಗಳಲ್ಲಿ ಹತ್ತು ಪರ್ವಗಳನ್ನು ಮಾತ್ರ ಒಳಗೊಂಡ ಈ ಹೊತ್ತಗೆ ಅಪೂರ್ಣವೆಂದು ತೋರಬಹುದು. ಪೂರ್ಣಗೊಳಿಸುವುದಾಗದೆ ಕವಿ ಕಾಲವಾದನೆಂದು ಕೆಲವರ ತಿಳುವಳಿಕೆಯಿದೆ. ಮುಂದೆ ತಿಮ್ಮಣ್ಣ ಕವಿ ಕೃಷ್ಣದೇವರಾಯನ ಇಚ್ಛೆಯಂತೆ ಉಳಿದ ಪರ್ವಗಳನ್ನು ರಚಿಸಿ ಗ್ರಂಥ ಪೂರ್ತಿ ಮಾಡಿದನೆಂದು ತಿಳಿದಿದೆ. ಆದರೆ ಗದಾಪರ್ವದ ಕೊನೆಗೆ ತನ್ನ ಗ್ರಂಥವನ್ನು ಮುಗಿಸುವುದೇ ಕುಮಾರವ್ಯಾಸನ ಉದ್ದೇಶವಾಗಿರಬೇಕೆಂದು ಕೊನೆಯ ಪದ್ಯಗಳಿಂದ ಸೂಚಿತವಾಗುತ್ತದೆ. ಇಲ್ಲವಾದರೆ ಮುಕ್ತಾಯದಲ್ಲಿರಬೇಕಾದ ಗ್ರಂಥಸ್ತುತಿ - ಫಲ ಶ್ರುತಿಗಳಿಗೆ ಅರ್ಥವಿಲ್ಲದೆ ಹೋಗಬಹುದು.

ಸಮಗ್ರಭಾರತವನ್ನು ಆದಿಪಂಪನ ತರುವಾಯ ನಿರೂಪಿಸಿದವನೆಂದರೆ ಕುಮಾರವ್ಯಾಸನು. ಇಲ್ಲಿ ಸಮಗ್ರ ಭಾರತ ಎಂದರೆ ವ್ಯಾಸಭಾರತದಲ್ಲಿದ್ದುದೆಲ್ಲ ಎಂದಲ್ಲ. ಕಥಾನಕ ದೃಷ್ಟಿಯಿಂದ, ಪ್ರಮುಖವಾದದ್ದು. ಆದಿಯಿಂದ ಗದಾರ್ಪವದ ಅಂತ್ಯದವರೆಗೆ ಇದರ ಹರವಿದೆ. ಕುಮಾರವ್ಯಾಸನು ಈ ಭಾರತ ಕಥೆಯನ್ನು ಹೇಳಿದ ಬಗೆಯೇನು, ಅದರ ಸವಿಯೇನು ಎಂಬುದನ್ನು ಅರಿಯಬೇಕು 'ಪಂಪನ ಬಗೆಗೆ ಹೋಲಿಸಿ ನೋಡಬೇಕು. ಪೀಠಿಕಾ ಪದ್ಯಗಳಲ್ಲಿ 'ಕೃತಿಯು ಸತ್ಕರ್ಣಾಟಕದ ಭಾರತಕೆ ಮಂಜುಳ-ಮಂಜರಿಯು ಮಹಾಕೃತಿಗೆ ನಾಯಕನಾದ ಗದುಗಿನ ವೀರನಾರಾಯಣ' (೧-೧೩), 'ತಿಳಿಯ ಹೇಳುವೆ ಕೃಷ್ಣ ಕಥೆಯನು' (೧-೨೫) ಎಂದು ಹೇಳಿರುವುದಲ್ಲದೆ 'ಕುಮಾರವ್ಯಾಸಭಾರತ', 'ಭಾರತ ಕಥೆ'ಯೆಂದೂ ಕವಿ ಇದನ್ನು ಕರೆದಿದ್ದಾನೆ. ಅವನ ಕೃತಿಗಳಲ್ಲಿ ಅಭಿವ್ಯಕ್ತವಾದ ಕೆಲವು ಚುಟುಕುಗಳನ್ನು ಗಮನಿಸಬಹುದು.

> ಅಗಡು ಮಕ್ಕಳ ತಾಯ್ಗೆ ತಪ್ಪದು ಬೆಗಡು ಬೇಗೆ (ಗ.ಪ, ೧೧-೪೭)
>
> ಅಟ್ಟಿ ತಿಂಬ ಮಹಾಂತಕಂಗೌತಣವ ಹೇಳ್ವಂತೆ (ದ್ರೋ.ಪ.೧೮-೧೮)
>
> ಅಡವಿಗೆ ಬಾಳೆ ಹೆಮ್ಮರನಾಯ್ತು ಗಡ! (ಗ.ಪ. ೨-೩೭)
>
> ಅಡಸಿ ಗಿರಿಗಳ ನುಂಗುವನ ಬಾಯ್ ಹಿಡಿಯದಿಹುದೇ ಹಣ್ಣು ಹಂಪಲ (ದ್ರೋ.ಹ.೧೭-೪೦)
>
> ಅಡಸಿದಾಪತ್ತಿನಲಿ ಧೈರ್ಯವ ಹಿಡುವುದೇ ಸುಪ್ರೌಢಿ (ದ್ರೋ.ಪ.೭-೨೩)
>
> ಅನ್ಯರನು ಮನಗಾಂಬರಲ್ಲದೆ ತನ್ನ ತಾ ಮನಗಾಂಬರೇ? (ವಿ.ಪ. ೬-೨೯)
>
> ಅಪಕಾರಿ ಜನದಲಿ ನೆನೆವುದುಪಕಾರವನು, ಗುಣಹೀನನಲಿ ಗುಣವನು ತೋರುವುದು

ಗರುವರಿಗೆ ತೊಡಿಗೆಯಿದು (ಅ.ಪ.೨೦-೧೩)

ಅರಗಿನರಸನ ಬಾಗಿಲಲಿ ದಳ್ಳುರಿಗೆ ತಡವೇ? (ದ್ರೋ.ಪ.೫-೪೧)

ಅರಸ ನೆಗಳ್ದುದೆ ಮಂತ್ರ (ವಿ.ಪ.೪-೨೧)

(ಸುಶರ್ಮ ಹೇಳಿದ ಮಾತು)

ಅರಳ ಹೊಸ ಸಂಪಗೆಯ ಮಧುವನು ಮರಿಗೆ ತಹವೇ ತುಂಬಿಗಳು (ಕ.ಪ.೨೦-೩೯)

ಅರಳಿಚದ ಮಧುಮಾಸ ಮಾಣಲಿ ವರುಷ ಋತುವೇ ಸಾಕು (ಕ.ಪ.೧೬-೩೨)

ಅರಳಿದಂಬುಜದೆಸಳಿನಲಿ ಕಡದುರುವ ಕಂಡಡೆ ಕೊಡುವುದೆ ಮಧುಕರನ ಲಾಯದೊಳ್? (ಕ.ಪ.೯-೨೫)

ಅರಿಯನೇನುವನೆಂದು ಸಲಹಲು ಮರೆವಳೇ ಬಾಲಕನ ತಾಯ್ (ಭೀ.ಪ.೭-೧೯)

ಅರಿಯೆನೇ ಗಾಂಗೇಯನನು, ತಾನರಿಯದವನೇ ದ್ರೋಣ, ಕುಲದಲಿ ಕೊರತೆಯೆನಿಸುವ ಕರ್ಣನೆಂಬವನೆನಗೆ ಸಮಬಲನೆ? (ವಿ.ಪ.೫-೨೩)

(ಉತ್ತರನ ಪೌರುಷ)

ಅವನಿಪಾಲರು ಕಂಗಳಿಂದವೆ! ಕಿವಿಗೆ ಕರವೊಳ್ಳಿದರು ಕಂಡುದ ! ನವರು ನಂಬರು ಕೊಡೆಯರ ನುಡಿಗೇಳ್ದು ನಂಬುವರು (ದ್ರೋ.ಪ.೧೮-೨)

ಅಹಿತರೇ ಜನಿಸಿದಡೆ ಸುತರೆನಬಹುದೆ? (ಗ.ಪ.೧೧-೧೨)

ಅಹಿ ಮಂಜರನ ಮರುಕವ ಕೊಂಬುದೇ? (ಕ.ಪ.೨೫-೨೭)

ಅಳವಿಗಳುಕುವುದಾಳುತನದಗ್ಗಳಿಕೆಯೇ? (ದ್ರೋ.ಪ.೨-೪೯)

ಅಳಿದವರಿಗಳುವುದು ಸಲ್ಲದು. (ಗ.ಪ.೧೧-೪೯)

ಆಳಿವ ವೊಡಲಿದು ಅವನಿಸಾಗರವಳಿಯಲುಳಿವುದು ಕೀರ್ತಿ (ಉ.ಪ.೬-೪)

ಅಳುಪಿದರೆ ಮಧುಕರನ ಮರಿ ಬೊಬ್ಬುಲಿಯ ವನದೊಳಗೇನಹುದು? (ಸ.ಪ.೧೩-೧೪)

ಆಡಿದೊಡೆ ಹಾವಿಂಗೆ ಹದ್ದಿನ ಕೊಡೆ ಮರುಕವೇ (ಅ.ಪ.೧೯-೩೧)

ಆಪತ್ತೆಸಗಿದಾಗಳೆ ಹಗೆಯ ಹೆಲುವುದು ವಸುಮತೀಶರ ನೀತಿ (ಕ.ಪ.೨೬-೧೯)

ಆಯ ಛಲವಾಚಂದ್ರತಾರಕ ಕಾಯವಧ್ರುವ (ಸ.ಪ.೧೨-೫೩)

ಆಯುಷ್ಯವುಳ್ಳರೆ! ಹರಿಹರ ಬ್ರಹ್ಮಾದಿಗಳು ಸಂ! ಹರಿಸಲರಿಯರು ಬರಿದೆ ದೈನ್ಯಂಬಡುವುದೀ ಲೋಕ (ಆ.ಪ.೬-೧೨)

ಆರ್ ಅಹಿಮುಖ ಚುಂಬಿಸುವರೋ? (ಕ.ಪ.೨೩-೩೨)

ಆರನಾದರು ಜಾತಿ ಧರ್ಮದ ಸೇರುವೆಗಳೇ ಹೇಳುವುವು? (ಆ.ಪ, ೧೬-೨೪)

ಆಲವಟ್ಟದ ಫಾಳಿಯಲಿ ಮೇಘಾಳಿ ಮುರಿವುದೇ? (ದ್ರೊ.ಪ.೧-೨೯)

ಆಲಕಲುಗಳ ಕಡಿವಡುಕಿನ ಚೀಲಣದ ಹಂಗೇಕೆ? (ದ್ರೋ.ಪ.೧೦-೩೧)

ಆಲಿಕಲುಗಳು ಸಿಡಿಲ ಮರಿಗಳ ಮೇಲುವಾಯ್ದುವು ಗಡ! (ಕ.ಪ.೧೧-೨೬)

ಅವ ಪರಿಯಲಿ ಮರೆವೆನ್ನೆ ಮಾದ್ರಿ ಕುಮಾರಕರು? (ಆ.ಪ.೨೩-೪೯)

(ಧರ್ಮರಾಯನು ಯಕ್ಷನ ಕೊನೆಯ ಪ್ರಶ್ನೆಗೆ ಕೊಟ್ಟ ಉತ್ತರ)

ಆವ ಶರವಿದ್ದೇಗುವುದು ಮೈಗಾವನಸುರಾಂತಕನಲ್ಲೆ (ದ್ರೋ.ಪ.೧೯-೪೯)

ಆವುದೀ ಲೋಕಕ್ಕೆ ಹಿತವದನೋವಿ ನಡೆವ ಜನಕ್ಕೆ ನಿಂದೆಯದಾವುವು? (ಉ.ಪ.೩-೩೬)

ಸರ್ವಜ್ಞ

ಸರ್ವಜ್ಞ ಒಂದರ್ಥದಲ್ಲಿ ನಡುಗನ್ನಡ ಸಾಹಿತ್ಯದಲ್ಲಿ ಚುಟುಕುಗಳನ್ನು ವ್ಯಾಪಕವಾಗಿ ಬಳಸಿದ ಕವಿ. ಚುಟುಕು ಸಾಹಿತ್ಯದ ಚಕ್ರವರ್ತಿ. ಅವನ ಚುಟುಕುಗಳನ್ನು ಅವಲೋಕಿಸಿ ನಂತರ ನಡುಗನ್ನಡ ಕವಿಗಳ ಚುಟುಕುಗಳನ್ನು ಗಮನಿಸಲಾಗಿದೆ. ಅವನ ವಚನಗಳು ಚುಟುಕು ಮತ್ತು ಹನಿಗವನಕ್ಕೆ ಅತ್ಯುತ್ತಮ ನಿದರ್ಶನಗಳು. ಅವುಗಳ ಇಣುಕು ನೋಟ ಇಲ್ಲಿದೆ.

ಶರೀರಕ್ಕೆ ರೋಗಗಳಿರುವಂತೆಯೇ ಸಮಾಜಕ್ಕೂ ರೋಗರುಜಿನಗಳುಂಟು. ಇವು ಕಾಲದೇಶಾತೀತವಾದವು. ಇವುಗಳನ್ನು ನಿವಾರಿಸಿ, ಸಮಾಜವನ್ನು ಉದ್ಧರಿಸಲು ಆಗಾಗ ಮಹಾಪುರುಷರು ಪ್ರಯತ್ನಿಸಿದ್ದಾರೆ. ಅವರ ಪಂಕ್ತಿಯಲ್ಲಿ ಸರ್ವಜ್ಞನಿಗೊಂದು ಸ್ಥಾನವಿದೆ. ಕನ್ನಡ ಹರಿದಾಸರ ಕೀರ್ತನೆಗಳೂ ಈ ಉದ್ದೇಶಕ್ಕಾಗಿಯೆ ರಚಿತವಾದುವೆಂಬುದನ್ನು ಗಮನಿಸಬಹುದು. ಸರ್ವಜ್ಞನ ಪದ್ಯಗಳನ್ನೂ ಇವುಗಳ ಸಾಲಿಗೆ ಸೇರಿಸಬಹುದು. ಅವನ ವಚನಗಳ ಗಾರುಡಿ ಯಾರನ್ನಾದರೂ ಮರುಳುಮಾಡುವಂತಹುದು. ಸಮಾಜವೆಂಬ ಕನ್ನಡಿಯನ್ನು ಮಸುಕುಗೊಳಿಸುವ ಕೊಳೆಯನ್ನು ಹೋಗಲಾಡಿಸಿ ಅದನ್ನು ಪರಿಶುಭ್ರವನ್ನಾಗಿ ಮಾಡಲು ಕಾವ್ಯದ ಮೂಲಕ ಶ್ರಮಿಸಿದ ಮಹಾನುಭಾವ ಸರ್ವಜ್ಞ.

ದೇಹದ ವ್ಯಾಧಿಯನ್ನು ಗುಣಪಡಿಸಲು ಎರಡು ಮಾರ್ಗಗಳಿವೆ. ಔಷಧಿಯನ್ನು ಕೊಡುವುದೊಂದು; ಶಸ್ತ್ರಚಿಕಿತ್ಸೆ ಮಾಡುವುದು ಮತ್ತೊಂದು. ಸಮಾಜದ ವ್ಯಾಧಿಗಳಿಗೂ ಹೀಗೆಯೆ. ನಯವಾದ ಮಾತುಗಳಿಂದ ಜನರ ಲೋಪದೋಷಗಳನ್ನು ತಿದ್ದಿ ಧರ್ಮನೀತಿಗಳನ್ನು ಬೋಧಿಸುವುದೊಂದು ಮಾರ್ಗವಾದರೆ, ನಿರ್ದಾಕ್ಷಿಣ್ಯವಾಗಿ ಖಂಡನೆಯ ಖಡ್ಗವನ್ನು ಬೀಸಿ, ಕಟುನುಡಿಗಳಿಂದ ದೋಷಗಳನ್ನು ಎತ್ತಿ ತೋರುವುದು ಮತ್ತೊಂದು ಮಾರ್ಗ. ಬಸವಣ್ಣ, ಅಕ್ಕಮಹಾದೇವಿ ಮೊದಲಾದವರದು ಮೊದಲನೆಯ ಮಾರ್ಗ. ಅವರ ವಚನಗಳಲ್ಲಿ ಮಾಧುರ್ಯ. ನಯಗಳನ್ನು ಕಾಣಬಹುದೇ ಹೊರತು ಬಿರುನುಡಿಗಳನ್ನು ಕಾಣುವುದು ವಿರಳ. ಆದರೆ ಸರ್ವಜ್ಞ, ಅಂಬಿಗರ ಚೌಡಯ್ಯ ಇವರದು ಎರಡನೆಯ ಹಾದಿ ಇವರ ಉಕ್ತಿಗಳಲ್ಲಿ ನಯವಿನಯಗಳಿಲ್ಲ. ಕೊರಂಬುಗಳಂತೆ, ಚಾಟಿಯೇಟುಗಳಂತೆ ಇರುತ್ತವೆ, ಇವರ ಮಾತುಗಳು.

ಸರ್ವಜ್ಞನದು ಶಸ್ತ್ರಚಿಕಿತ್ಸೆಯ ವಿಧಾನ : ತೀಕ್ಷ್ಣ ವಿಡಂಬನವೇ ಇವನ ಹೊಲಬು. ಜನರ ಲೋಪದೋಷಗಳನ್ನು ನಿಸ್ಸಂಕೋಚವಾಗಿ, ನಿಭರ್ಯವಾಗಿ, ಉಗ್ರವಾಗಿ ಟೀಕಿಸುತ್ತಾನೆ ಸರ್ವಜ್ಞ, ಈತನಲ್ಲಿ ಯಾವ ಮುಚ್ಚುಮರೆಯೂ ಇಲ್ಲ; ಮನಸ್ಸಿಗೆ ಬಂದ ಭಾವನೆಯನ್ನು ನೇರವಾಗಿ ಹೇಳಿಬಿಡುತ್ತಾನೆ.

ಕರದಿ ಕಪ್ಪುರವುಂಟು ಹಿರಿದೊಂದು ನಾಡುಂಟು
ಹರನೆಂಬ ದೈವ ನಮಗುಂಟು! ಶಿರಿವರಿಂ
ಸಿರಿವಂತರಾರು ಸರ್ವಜ್ಞ

ಎಂದುಕೊಂಡು, ಯಾರಿಗೂ ಅಂಜದೆ, ಯಾರ ಹಂಗಿಗೂ ಒಳಗಾಗದೆ 'ಹಿಂಡನಗಲಿದ ಗಜದಂತೆ' ನಾಡನ್ನೆಲ್ಲ ಸುತ್ತಿದವನು ಸರ್ವಜ್ಞ. ಈತನ ವಚನಗಳು ಕಹಿಮಾತ್ರೆಗಳಿದ್ದಂತೆ : ಅದರಕ್ಕೆ ಕಹಿಯಾದರೂ ಉದರಕ್ಕೆ ಸಿಹಿ. ಕೆಲವು ವೇಳೆ ಅವನ ವಚನಗಳಲ್ಲಿ ನಗುವನ್ನು ಪ್ರೇರಿಸುವ ಹಾಸ್ಯದ ಮೆರಗು ಇದ್ದರೂ, ನಗೆಗಿಂತ ವಿಡಂಬನದ ಹೊಗೆಯೇ ಹೆಚ್ಚು. ಅದು ಅವನ ಮೆಚ್ಚಿನ ಆಯುಧ, ಪರಿಣಾಮಕಾರಿಯಾದ ಆಯುಧವೂ ಹೌದು.

ಸರ್ವಜ್ಞ, ಜನಸಾಮಾನ್ಯರ ಕವಿ. ಪಂಡಿತವರ್ಯರ ಪ್ರಶಂಸೆಯನ್ನು ಆಶಿಸಿ ಅವನು ಕಾವ್ಯ ಬರೆದಿಲ್ಲ; ಪಾಮರರ ಉದ್ಧಾರವೇ ಅವನ ಗುರಿಯಾದ್ದರಿಂದ ಸುಲಭ ಭಾಷೆಯಲ್ಲಿ ಕಾವ್ಯರಚನೆ ಮಾಡಿದ್ದಾನೆ. ಸಾಮಾನ್ಯರಿಗೆ ಅರ್ಥವಾಗದ ವರ್ಣನೆಯಾಗಲಿ, ಉಪಮೆಯಾಗಲಿ, ತತ್ತ್ವವಾಗಲಿ ಯಾವುದೂ ಅವನ ಕೃತಿಗಳಲ್ಲಿಲ್ಲ. ಎಲ್ಲರೂ ಬಲ್ಲ ವಸ್ತುಗಳನ್ನೇ ಅವನು ಉಪಮೆಗಳಾಗಿ ಬಳಸಿಕೊಂಡಿದ್ದಾನೆ.

ಪ್ರೌಢಕಾವ್ಯಗಳಲ್ಲಿ ಕಂಡುಬರುವ ವಿವಿಧ ಅಲಂಕಾರ, ಶ್ಲೇಷ ಮುಂತಾದವುಗಳ ಅರಣ್ಯವನ್ನು ನಿರ್ಮಿಸಿದೆ. ಸರಳ ಉಪಮಾಲಂಕಾರವೊಂದರಲ್ಲೆ ಆತ ತೃಪ್ತಿ ಪಟ್ಟುಕೊಂಡಿದ್ದಾನೆ. ಸರಳವಾದರೂ ಸುಂದರವಾದ ಶೈಲಿಯಲ್ಲಿ ಪಾಮರರಿಗೆ ಪ್ರಿಯವಾದ ಮೋಹಕವಾದ ತ್ರಿಪದಿಯ ಛಂದಸ್ಸಿನಲ್ಲಿ ತನ್ನ ವಚನಗಳನ್ನು ಸೃಷ್ಟಿಸಿದ್ದಾನೆ. ಹಿಂದೊಮ್ಮೆ ಉನ್ನತ ಸ್ಥಿತಿಯಲ್ಲಿದ್ದು ಈಗ ನಶಿಸಿ ಹೋಗುತ್ತಿರುವ ಜನಪದ ಗೀತೆಗಳೂ ಈ ತ್ರಿಪದಿಯ ಛಂದಸ್ಸಿನಲ್ಲೇ ಇದೆ ಎಂಬುದನ್ನಿಲ್ಲಿ ಗಮನಿಸಬಹುದು. ಆತನ ನುಡಿಗಳು ಗಾದೆಗಳಂತೆ ಸ್ವಾರಸ್ಯವಾಗಿರುವುದು ಮಾತ್ರವಲ್ಲದೆ ಅನುಭವದ ಆಳದಿಂದ ಹೊರಹೊಮ್ಮಿರುವುದರಿಂದ ಹೃದಯವನ್ನು ಮುಟ್ಟುತ್ತವೆ.

ಸರ್ವಜ್ಞನ ಕಾಲ, ಮತಗಳನ್ನು ಕುರಿತ ಚರ್ಚೆ ಅಪ್ರಕೃತ, ಗೌಣ. ಅವನು ಸಾರಿರುವ ಸಂದೇಶ, ಅವನ ವಾಣಿಯಿಂದ ನಾವು ಪಡೆಯಬಹುದಾದ ಮಾರ್ಗದರ್ಶನ, ಇಂದಿನ ಸಮಾಜದ ಬೇನೆಗಳಿಗೆ ಅವನಿಂದ ದೊರಕಬಹುದಾದ ಪರಿಹಾರ ಇವು ನಮಗೆ ಬೇಕಾಗಿವೆ. ಸರ್ವಜ್ಞನ ಕಾಲದಲ್ಲಿ ಸಮಾಜದಲ್ಲಿದ್ದ ಹುಳುಕುಗಳು ಇಂದೂ ಇವೆ; ಹೆಚ್ಚಿನ ಪ್ರಮಾಣದಲ್ಲಿಯೇ ಇವೆ. ಎಂದ ಮೇಲೆ ಸರ್ವಜ್ಞನ ಉಪದೇಶದ ಕಡೆಗೆ ಗಮನಹರಿಸಿ, ಅವನಿಂದ ಪಡೆಯಬಹುದಾದಷ್ಟು ಬೆಳಕನ್ನು ಪಡೆದುಕೊಂಡು ಬಾಳನ್ನು ಹಸನು ಮಾಡಿಕೊಳ್ಳಬೇಕಾದುದು ಅತ್ಯಗತ್ಯವಾಗಿದೆ. ಅನೀತಿ ಎಲ್ಲ ಕ್ಷೇತ್ರಗಳಲ್ಲೂ ತಾಂಡವವಾಡುತ್ತಿರುವಾಗ ಭೋಗವೇ ಬಾಳಿನ ಪರಮ ಗುರಿಯೆನ್ನುವಷ್ಟರ ಮಟ್ಟಿಗೆ ಧರ್ಮಗ್ಲಾನಿಯಾಗಿರುವಾಗ, ಜಾತಿಮತದ ಹೆಸರಿನಲ್ಲಿ ಜನತೆಯ ದೃಷ್ಟಿ ತೀರ ಸಂಕುಚಿತವಾಗಿರುವಾಗ, ಸಮಾಜದ ವಾತಾವರಣವೇ ಕಲುಷಿತವಾಗಿರುವಾಗ

ಸರ್ವಜ್ಞನಿಂದ ಕಲಿಯಬೇಕಾದ ಪಾಠ ಬಹಳವಿದೆ. ಸರ್ವಜ್ಞನ ಕಟುವಿಮರ್ಶೆಗೆ ತುತ್ತಾಗದ, ವಚನಗಳ ವ್ಯಾಪ್ತಿಗೆ ಒಳಪಡದ ವಿಷಯವಿಲ್ಲ. ದೇವರು, ಗುರು, ಜ್ಞಾನಿ, ಕಮರ, ಸಜ್ಜನ ದುರ್ಜನ, ಸಂಪರ್ಕ ತ್ಯಾಗ, ಸ್ತ್ರೀಯರ ನಡತೆ, ರಾಜನೀತಿ, ಪುರುಷಾರ್ಥಗಳು -ಹೀಗೆ ಎಲ್ಲ ವಿಚಾರಗಳ ಮೇಲೂ ಆತ ದೃಷ್ಟಿಹರಿಸಿ, ಕಣ್ಣಿಗೆ ಬಿದ್ದ ದೋಷಗಳನ್ನು ವಿಡಂಬನದ ಕೊರಸಿನಿಂದ ಪ್ರಹರಿಸಿದ್ದಾನೆ. ಸರ್ವಶಕ್ತನಾದ ದೇವನ ಮಹಿಮೆಯನ್ನು, ಸೃಷ್ಟಿವೈಚಿತ್ರ್ಯಗಳನ್ನು ನಿರ್ಮಿಸಿದ ಅವನ ಕೌಶಲ್ಯವನ್ನು ಕುರಿತು ಸರ್ವಜ್ಞ ಹೇಳುತ್ತಾನೆ.

ಚಿತ್ರವನು ನವಿಲಿನೊಳು ವಿಚಿತ್ರವನು ಗಗನದೊಳು
ಪತ್ರಪುಷ್ಪಗಳ ವಿವಿಧ ವರ್ಣಗಳಿಂದ! ದೇವರನ್ನು
ಚಿತ್ರಿಸಿದರಾರು ಸರ್ವಜ್ಞ

ದೇವರಲ್ಲಿ ನಂಬಿಕೆಯಿಲ್ಲದ ನಾಸ್ತಿಕರಿಗೆ ಈ ವಚನ ಸವಾಲು ಹಾಕಿದಂತಿದೆ. ಇಂತಹ ವಿಶಾಲ ದೃಷ್ಟಿಯಿಂದ ದೇವರನ್ನು ಕುರಿತು ಆಲೋಚಿಸಿದರೆ, ಜಾತಿಮತದ ಹೆಸರಿನಲ್ಲಿ ಕೆರಳುವ ದ್ವೇಷಾಸೂಯೆಗಳೇ ಇರುವುದಿಲ್ಲ; ದೇವರೊಬ್ಬನೇ ಎಂಬ ತತ್ವ ಮನವರಿಕೆಯಾಗುತ್ತದೆ.

ದೇವಕೃಪೆ ದೊರಕಬೇಕಾದರೆ, ಗುರುಕೃಪೆ ಮೊದಲು ದೊರಕಬೇಕು. ಈ ಗುರು ಹೀಗೆಯೇ ಇರಬೇಕೆಂಬ ನಿಯಮವಿಲ್ಲ. ಸತ್ಯವನ್ನರಿತ ಮಹಾತ್ಮನಾಗಿದ್ದರೆ ಅಷ್ಟೇ ಅರ್ಹತೆ ಅವನಿಗೆ ಸಾಕು.

ಊರಿಗೆ ದಾರಿಯನು ಯಾರು ತೋರಿದೊಡೇನು
ಸಾರಾಯದಾ ನಿಜವ ತೊರುವ! ಗುರುವು
ಯಾರಾದೊಡೆನು ಸರ್ವಜ್ಞ

ಶಿಷ್ಯನು ಅರ್ಹನಾಗಿದ್ದು, ಸದ್ಗುರುವಿನ ಅನುಗ್ರಹವೂ ಲಭಿಸಿದರೆ ಅಜ್ಞಾನ ನಾಶವಾಗುತ್ತದೆ.

ಗುರುಪಾದಸೇವೆ ತಾ ದೊರೆಕೊಂಡಿತಾದಡೆ
ಹಿರಿದಪ್ಪ ಪಾಪ ಪರಿವುದು! ಕರ್ಪೂರದ
ಗಿರಿಯು ಬೆಂದಂತೆ ಸರ್ವಜ್ಞ.

ಭಗವಂತ ಸರ್ವಾಂತರ್ಯಾಮಿ; ಅವನು ಎಲ್ಲ ವಸ್ತುಗಳಲ್ಲಿರುವಂತೆ ಎಲ್ಲರಲ್ಲೂ ವಾಸಿಸುತ್ತಾನೆ.

ಸಣ್ಣನೆಯ ಮಳಲೊಳಗೆ ನುಣ್ಣನೆಯ ಶಿಲೆಯೊಳಗೆ
ಬಣ್ಣಿಸಿ ಬರೆದ ಪಟದೊಳಗೆ! ಇರುವಾತ
ತನ್ನೊಳಗೆ ಇರನೆ ಸರ್ವಜ್ಞ

ತನ್ನಲ್ಲಿಯೇ ದೇವರಿದ್ದಾನೆಂಬುದನ್ನರಿತುಕೊಂಡು, ಪರಿಶುದ್ಧ ಮನಸ್ಸಿನಿಂದ ಅಕುಟಿಲ ಭಕ್ತಿಯಿಂದ ಪರಮಾತ್ಮನ ಅನುಗ್ರಹ ಸಂಪಾದಿಸಬೇಕು. ಹಾಗಲ್ಲದೆ, ಗುಡಿಗೆ ಹೋಗಿ ಕೇವಲ ಬಾಹ್ಯಾಚಾರಗಳಿಂದ ಅವನ್ನೊಲಿಸಿಕೊಳ್ಳುವುದು ಸಾಧ್ಯವಿಲ್ಲ.

ಚಿತ್ತವಿಲ್ಲದೆಗುಡಿಯ ಸುತ್ತಿದಡೆ ಫಲವೇನು
ಎತ್ತು ಗಾಣವನ್ನು ಹೊತ್ತು ತಾ! ನಿತ್ಯದಿ
ಸುತ್ತಿ ಬಂದಂತೆ ಸರ್ವಜ್ಞ.

ಮನೋಮಂದಿರದಲ್ಲಿ ದೇವರನ್ನು ಆರಾಧಿಸಬೇಕು. ತತ್ವವನ್ನರಿಯದೆ, ಸಾತ್ವಿಕತೆಯಿಲ್ಲದೆ ಬರಿಯ ಬಾಹ್ಯಚರಣೆಗಳಿಂದ ಯಾವ ಫಲವೂ ಸಿದ್ಧಿಸದು.

ಎಣಿಸುತಿರ್ಪುದು ಬೆರಳು, ಗುಣಿಸುತಿರ್ಪುದು ಜಿಹ್ವೆ
ಮನ ಹೋಗಿ ಹಾಲ ನೆನೆದರೆ! ಹಾಳೂರ
ಶುನಕನಂತಕ್ಕು ಸರ್ವಜ್ಞ.

ಸತ್ಯವನ್ನು ತಿಳಿದು ಜ್ಞಾನಿಯಾದವನಿಗೆ ಯಾವ ನೇಮ, ಆಚಾರಗಳೂ ಅನವಶ್ಯಕ; ಅಂತಹ ನಿಜವಾದ ಜ್ಞಾನಿಯ ಲಕ್ಷಣವೇನೆಂದರೆ ಅವನು ತಾನು ಜ್ಞಾನಿಯೆಂದು ಪ್ರಕಟಿಸುವುದಿಲ್ಲ.

ತನ್ನ ನೋಡಲಿ ಎಂದು ಕನ್ನಡಿಯು ತೆರೆಯುವುದೆ
ತನ್ನ ಜ್ಞಾನವುದಿಸಿದ! ಮಹಾತ್ಮನು
ಕನ್ನಡಿಯಂತೆ ಸರ್ವಜ್ಞ.

ಪಾರಮಾರ್ಥಿಕ ಸಿದ್ಧಿ ಲಭಿಸಬೇಕಾದರೆ ಅರಿಷಡ್ವರ್ಗಗಳನ್ನು ವರ್ಜಿಸಬೇಕು; ಸದಾಚಾರ ನಿರತನಾಗಬೇಕು ಕೋಪದ ಅಪಾಯವಿದು.

ಕೋಪವೆಂಬುದು ಕೇಳೀ ಪಾವನ ನೆಲೆಗಟ್ಟು
ಕೋಪದೊಳು ನೇಣು ಹರಿದಂತೆ! ನರಕದಿ
ಪಾಪಿ ತಾನಿಳಿವ ಸರ್ವಜ್ಞ.

ಅರಿಷಡ್ವರ್ಗಗಳನ್ನು ಜಯಿಸಿ ಸಂಯಮಿಯಾಗುವುದೇ ವೇದಶಾಸ್ತ್ರಗಳನ್ನೋದುವುದರ ಉದ್ದೇಶ. ಹಾಗೆ ಸಂಯಮವನ್ನು ಗಳಿಸದಿದ್ದರೆ ವೇದಾಧ್ಯಯನದಿಂದ, ಹುಸಿ ವಿರಕ್ತಿಯಿಂದ ಏನೇನೂ ಪ್ರಯೋಜನವಿಲ್ಲ.

ಕಾದ ಬೂದಿಯಪೂಸಿ ತೋದ ಕಾವಿಯ ಹೊದ್ದು
ಹೋದಾತ ಯೋಗಿ ಎನಬೇಡ! ಇಂದ್ರಿಯವ
ಕಾದಾತ ಯೋಗಿ ಸರ್ವಜ್ಞ

ಮಾನವನು ತನ್ನನ್ನು ಆಳುವ ಶಕ್ತಿಯೊಂದರ ಮಹತ್ವವನ್ನು ಅರಿತು, ಅಹಂಕಾರ ಪಡದಿರಬೇಕು. ದುರಹಂಕಾರದಿಂದ ಕೆಟ್ಟವರ ಉದಾಹರಣೆಗಳು ಪುರಾಣಕತೆಗಳಲ್ಲಿ ಸಿಕ್ಕುತ್ತವೆ.

ಪುಡಿಯಾದವನಂಗಜನು ಹಿಡಿವಡೆದ ಹನುಮಂತ
ಪೊಡವಿಗೀಶ್ವರನು ತಿರಿದುಂಡನುಳಿದವರ
ಸಡಗರವೇನು ಸರ್ವಜ್ಞ.

ವಿಧಿಯ ಮುಂದೆ ನಾವು ಅಸಹಾಯಕರು; ಆದ್ದರಿಂದ ವಿಧಿವಿಲಸನಕ್ಕೆ ತಲೆಬಾಗಿ ನಡೆಯುವುದೇ ಲೇಸು.

ಸರ್ವಜ್ಞನು ಗುಣವು ಎಲ್ಲಿದ್ದರೂ ಗೌರವಿಸುತ್ತಾನೆ. ದೋಷವನ್ನು ಮಾತ್ರ ದ್ವೇಷಿಸುತ್ತಾನೆ. ಪರಮತೀಯರ ಗುಣಗಳನ್ನು ಪ್ರಶಂಸಿಸುತ್ತಾನೆ. ಅವರ ದುರ್ನಡತೆಯನ್ನು ಮಾತ್ರ ನಿಂದಿಸುತ್ತಾನೆ.

ಮಾತನರಿದಾ ಸಂತನ ರೀತಿಯರಿದಾ ಸತಿಯು
ನೀತಿಯನ್ನರಿದ ವಿಪ್ರನು ಜಗದೊಳು
ಜ್ಯೋತಿ ಇದ್ದಂತೆ ಸರ್ವಜ್ಞ.

ಪ್ರಾಣಹಿಂಸೆ ಮಾಡುವುದನ್ನು ಸರ್ವಜ್ಞ ತೀವ್ರವಾಗಿ ವಿರೋಧಿಸುತ್ತಾನೆ.

ಸತ್ತುದನು ತಿಂಬಾತ ಎತ್ತಣದ ಹೊಲೆಯನು
ಒತ್ತಿ ಜೀವವನು ಕೊರೆಕೊರೆದು ತಿಂಬಾತ
ನುತ್ತುಮದ ಹೊಲೆಯ ಸರ್ವಜ್ಞ.

ಅಹಿಂಸೆಗೆ ಮುಖ್ಯ ಸ್ಥಾನವನ್ನಿತ್ತಿರುವ ಜೈನ ಧರ್ಮದಲ್ಲಿ ಸರ್ವಜ್ಞನಿಗೆ ಗೌರವ ಭಾವನೆ ಇದೆ.

ಕೊಲುವ ಧರ್ಮವನೊಯ್ದು ಒಲೆಯೊಳಗೆ ಇಕ್ಕು ಆ
ಕೊಲಲಾಗದೆಂಬ ಜೈನನ ಮತವೆನ್ನ
ತಲೆಯ ಮೇಲಿರಲಿ ಸರ್ವಜ್ಞ.

ಜಾತಿ ಭೇದಗಳು ಮಾನವನಿರ್ಮಿತ; ದೇವರು ಅವುಗಳನ್ನು ನೋಡುವುದಿಲ್ಲ. ಅವನು ಗಮನಿಸುವುದು ಭಕ್ತಿಯನ್ನು. ದೇವರ ಪ್ರೀತಿಗೆ ಪಾತ್ರರಾದವರೆಲ್ಲ ಜಾತಿವಂತರು. "ಜಾತಿಹೀನನ ಮನೆಯ ಜ್ಯೋತಿ ತಾ ಹೀನವೆ?" ಎಂದು ಪ್ರಶ್ನಿಸಿದ ಸರ್ವಜ್ಞ ದೇವರಲ್ಲಿ ಕುಲಭೇದವಿಲ್ಲವೆಂದು ಸಾರಿದ್ದಾನೆ.

ಸತ್ಪುರುಷರ ಸಹವಾಸ ಸುಖದಾಯಕ; ಮನುಷ್ಯ ಸುಸಂಸ್ಕೃತನಾಗಲು ಅದು ಸಹಕಾರಿ. ಸಜ್ಜನ ಸಹವಾಸಕ್ಕಿಂತ ಪವಿತ್ರವಾದುದು ಬೇರೊಂದಿಲ್ಲ;

ಸತ್ಯರಾ ನುಡಿ ತೀರ್ಥ ನಿತ್ಯರಾ ನಡೆ ತೀರ್ಥ
ಉತ್ತಮರ ಸಂಗವದು ತೀರ್ಥ ಹರಿವ ನೀ
ರೆತ್ತಣದು ತೀರ್ಥ ಸರ್ವಜ್ಞ.

ಆದರೆ ದುಷ್ಟರ ಸಂಗ ಕೆಡುಕಿಗೆ ಹೇತುವಾಗುತ್ತದೆ. ಆದ ಪ್ರಯುಕ್ತ ಅದು ಎಂದೆಂದಿಗೂ ತ್ಯಾಜ್ಯ. ದುರ್ಜನರೊಡನೆ ಆದಷ್ಟು ಎಚ್ಚರಿಕೆಯಿಂದ ವರ್ತಿಸಬೇಕು.

ದಂತಪಂಕ್ತಿಯ ನಡುವೆ ಎಂತಿರ್ಪುದದು ಜಿಹ್ವೆ
ಅಂತು ದುರ್ಜನರ ಬಳಸಿನಲಿ! ಸಜ್ಜನನು
ನಿಂತಿರ್ದ ನೋಡು ಸರ್ವಜ್ಞ.

ಧರ್ಮದಲ್ಲಿ ದಾನಕ್ಕೆ ಬಹುಮುಖ್ಯ ಸ್ಥಾನವಿದೆ. ಎಲ್ಲರೂ ದಾನಿಗಳಾಗಿ ಪರೋಪಕಾರಿಗಳಾಗಿ ಬಾಳಬೇಕು; ದಾನಶೀಲನಾದವನು ದೇವನಿಗೆ ಸಮಾನ.

ಈವಂಗೆ ದೇವಂಗೆ ಅವುದಂತರವಯ್ಯ
ದೇವನು ಜಗಕೆ ಕೊಡುವನು! ಕೈಯಾರೆ
ಈವನೆ ದೇವ ಸರ್ವಜ್ಞ.

ಅಪಾತ್ರನಿಗೆ ದಾನ ಕೊಡಬಾರದು 'ಆಗ ಬಾ, ಈಗ ಬಾ, ಹೋಗಿ ಬಾ' ಎನ್ನದೆ ದಾನ ಕೊಡಬೇಕು. ಅಲ್ಲದೆ ಕೊಟ್ಟ ದಾನ ಮನಃಪೂರ್ವಕವಾಗಿರಬೇಕು; ಕೊಟ್ಟೆನೆಂಬ ಹೆಮ್ಮೆಯಾಗಲಿ, ವಿಷಾದವಾಗಲಿ ಇರಬಾರದು.

ತ್ಯಾಗ ಬುದ್ಧಿಯಿಲ್ಲದ ಜಿಪುಣನಿಗೆ ಯಾವ ಪುಣ್ಯವೂ ಲಭಿಸದು; ಅವನ ಜನ್ಮ ಉಣ್ಣೆಯ ಜನ್ಮಕ್ಕಿಂತ ಕೀಳು. ಆತ ಬದುಕಿದ್ದರೂ ಸತ್ತಂತೆಯೇ ಸರಿ.

ಉಣ್ಣೆ ಕೆಚ್ಚಲೊಳಿರ್ದು ಉಣ್ಣದದು ನೊರೆವಾಲ
ಪುಣ್ಯದ ಮಾಡಿ ಉಣಲೊಲ್ಲದವನಿರವು
ಉಣ್ಣೆಯಿಂ ಕಷ್ಟ ಸರ್ವಜ್ಞ.

ಸರ್ವಜ್ಞ ತನ್ನ ವಚನಗಳಲ್ಲಿ ಹೆಣ್ಣಿನ ಸ್ಥಾನಮಾನವನ್ನು ಕುರಿತು ಸಾಕಷ್ಟು ಚರ್ಚಿಸಿದ್ದಾನೆ. ಸ್ತ್ರೀಯರ ಸ್ವಭಾವ, ನಡೆನುಡಿ, ಸಂಸಾರದಲ್ಲಿ ಅವರ ಪಾತ್ರ ಎಲ್ಲವನ್ನೂ ಕುರಿತು ಪದ್ಯಗಳನ್ನು ಕಟ್ಟಿದ್ದಾನೆ. ಆತನ ದೃಷ್ಟಿಯಲ್ಲಿ "ಹೆಣ್ಣಿನಿಂದಲೇ ಇಹವು, ಹೆಣ್ಣಿನಿಂದಲೇ ಪರವು, ಹೆಣ್ಣಿನಿಂದಲೆ ಸಕಲ ಸಂಪದವು. ಹೆಣ್ಣಿಲ್ಲದ ಬಾಳು ಬರಡು.

ಸುಣ್ಣವಿಲ್ಲದ ವೀಳ್ಯ, ಬಣ್ಣವಿಲ್ಲದ ಮದುವೆ
ಹೆಣ್ಣಿಲ್ಲದವನ ಸಂಸಾರ ಮಳಲೊಳಗೆ
ಎಣ್ಣೆ ಹೊಯ್ದಂತೆ ಸರ್ವಜ್ಞ.

ಹೆಣ್ಣಿಗೆ ಮರುಳಾಗದವರಾರು? ಅವರು ಅಸಾಮಾನ್ಯರೇ ಸರಿ.

ಹರಿಯ ಉರವನು ಮೆಟ್ಟಿ ಹರನ ಶಿರವನು ಹತ್ತಿ
ಸರಸಿಜೋದ್ಭವನ ಮೊಗಗಳಿಸಿ ಮೀರಿದಾ
ಹಿರಿಯರಿನ್ನಾರು ಸರ್ವಜ್ಞ.

ಪತಿಗೆ ಅನುಕೂಲೆಯಾದ ಸತಿಯಿದ್ದರೆ ಅವರ ದಾಂಪತ್ಯಜೀವನ ಸುಖಮಯವಾಗುತ್ತದೆ. ಆಗ ಸ್ವರ್ಗವೂ ಬೇಡ.

ಬೆಚ್ಚನಾ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ
ಇಚ್ಛೆಯನರಿವ ಸತಿಯಾಗಿ ಸ್ವರ್ಗಕ್ಕೆ
ಕಿಚ್ಚು ಹಚ್ಚೆಂದ ಸರ್ವಜ್ಞ.

ಸ್ತ್ರೀ ಇಂತಿಲ್ಲದೆ, ಚಂಡಿಯಾಗಿ ಪತಿಗೆ ಪ್ರತಿಕೂಲೆಯಾದರೆ ಜೀವನದಲ್ಲಿ ವಿರಸವುಂಟಾಗಿ ಯಾವ ಆನಂದವೂ ಇಲ್ಲವಾಗುತ್ತದೆ.

ಚುಚ್ಚುವಾ ಕೆರದಿಂದ ಕಚ್ಚುವಾ ಶುನಿ ಲೇಸು
ನಿಚ್ಚಲು ಉಲಿವ ಸತಿಯಿಂದ! ಉಲಿದಿರ್ದ
ಕಿಚ್ಚು ತಾ ಲೇಸು ಸರ್ವಜ್ಞ.

ಸ್ವಭಾವತಃ ಹೆಣ್ಣಿನ ಮನಸ್ಸು ಚಂಚಲ; ಆದ್ದರಿಂದಲೇ ಹೆಣ್ಣನ್ನು "ನಂಬಿಯೂ ನಂಬದಿರಬೇಕು."

ಆಲಕ್ಕೆ ಹೂವಿಲ್ಲ ಶೀಲಕ್ಕೆ ಸರಿಯಿಲ್ಲ
ನಾಲಗೆಗೆ ಒಂದು ಎಲುಬಿಲ್ಲ ಧೃಢ ಮನಸು
ಬಾಲೆಯರಿಗಿಲ್ಲ ಸರ್ವಜ್ಞ.

ಸ್ತ್ರೀಯರ ಬಗ್ಗೆ ತನ್ನ ಅಭಿಪ್ರಾಯಗಳನ್ನೆಲ್ಲ ಸರ್ವಜ್ಞ ಹೀಗೆ ಕ್ರೋಢೀಕರಿಸಿದ್ದಾನೆ.

ನಾರಿ ಪರರುಪಕಾರಿ ನಾರಿ ಸ್ವರ್ಗಕೆ ದಾರಿ
ನಾರಿ ಸಕಲರಿಗೆ ಹಿತಕಾರಿ! ಮುನಿದರೆ
ನಾರಿಯೇ ಮಾರಿ ಸರ್ವಜ್ಞ.

ಮನುಷ್ಯ ಸುಶೀಲನಾಗಿರಬೇಕು; ಇಂದ್ರಿಯ ಚಾಪಲ್ಯಕ್ಕೆ ಬಲಿಯಾಗಬಾರದು; ಇಂದ್ರಿಯ ಚಾಪಲ್ಯವೇ ನಾಶಕ್ಕೆ ಹೆದ್ದಾರಿ.

ಕಣ್ಣು ನಾಲಗೆ ಮನವು ತನ್ನದೆಂದೆನಬೇಡ
ಅನ್ಯರು ಕೊಂದರೆನಬೇಡ ಇವು ಮೂರು
ತನ್ನ ಕೊಲ್ಲುವವು ಸರ್ವಜ್ಞ.

'ಕಾಯಕವೇ ಕೈಲಾಸ' ಎಂಬ ಬಸವಣ್ಣನವರ ದಿವ್ಯ ತತ್ತ್ವವನ್ನು ಸರ್ವಜ್ಞನೂ ಪ್ರತಿಪಾದಿಸಿದ್ದಾನೆ. ಅದರ ಪ್ರಯೋಜನವನ್ನು ಒತ್ತಿ ಹೇಳಿದ್ದಾನೆ.

ಅಲಸಿಕೆಯಲಿರುವಂಗೆ ಕಲಸಲಂಬಲಿಯಿಲ್ಲ
ಕೆಲಸಕ್ಕೆ ಆಲಸದಿರುವಂಗೆ ಬೇರಿಂದ
ಹಲಸು ಕಾತಂತೆ ಸರ್ವಜ್ಞ.

ಕಂಡದ್ದನ್ನು ಹೇಳಿದರೆ ಜನರಿಗೆ ಕೆಂಡದಂತಹ ಕೋಪ ಸಹಜ. ಆದ್ದರಿಂದ ಸತ್ಯವಂತರಾದವರಿಗೆ ತೊಂದರೆ ತಪ್ಪಿದ್ದಲ್ಲ.

ಕಂಡುದನು ಆಡೆ ಭೂಮಂಡಲವು ಮುನಿಯುವುದು.
ಕೊಂಡಾಡುತಿಚ್ಛೆ ನುಡಿದರೆ! ಜಗವೆಲ್ಲ
ಮುಂಡಾಡುತಿಹುದು ಸರ್ವಜ್ಞ.

ಆದರೆ ಸತ್ಯಶೀಲರಾದವರಿಗೆ ಬೆಲೆಯಿಲ್ಲದಿಲ್ಲ. ಎಂದಿದ್ದರೂ ಅವರು ಪೂಜ್ಯರೆ; ಅವರು ಶಿವನಿಗೆ ಪ್ರಿಯರು.

ಸತ್ಯರಿಗೆ ಧರೆಯೆಲ್ಲ ಮುಸ್ತಕದಿ ಎರಗುವುದು
ಹೆತ್ತ ತಾಯ್ಮಗನ ಕರೆವಂತೆ! ಶಿವನವರ
ನೆತ್ತಕೊಂಬುವನು ಸರ್ವಜ್ಞ.

ಸಜ್ಜನನು ಮೂರ್ಖರ, ನೀಚರ ತೆಗಳಿಕೆಯ ಮಾತುಗಳಿಗೆ ಬೆಲೆಕೊಡಬಾರದು. ಅವರು ಹೀಯಾಳಿಸಿದರೆ ಮೌನದಿಂದಿರಬೇಕು; ಇಲ್ಲವಾದರೆ ಮಾನಹಾನಿ.

ಆನೆ ಬೀದಿಲಿ ಬರಲು ಶ್ವಾನ ತಾ ಬೊಗುಳುವುದು
ಶ್ವಾನನಂತಾನೆ ಬಗುಳಿದರೆ ಆನೆಯ
ಮಾನವೇ ಹಾನಿ ಸರ್ವಜ್ಞ

ಮಾತನಾಡುವುದೂ ಒಂದು ಕಲೆ; ಆಡುವ ಮಾತಿನಲಿ ರಸಿಕತೆ ಇರಬೇಕು. "ನಕ್ಕು ನಗಿಸುವಾ ಕಲೆ ಲೇಸು."

ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ
ರಸಿಕನಲ್ಲದವನ ಬರಿಮಾತು ಕಿವಿಯೋಳ್ ಕೂ
ರ್ದಸಿಯು ಬಡಿದಂತೆ ಸರ್ವಜ್ಞ.

ಗುರುಹಿರಿಯರಲ್ಲಿ ಭಕ್ತಿ ಗೌರವಗಳಿದ್ದರೆ ಮನುಷ್ಯ ದೈವಾನುಗ್ರಹಕ್ಕೆ ಪಾತ್ರನಾಗುತ್ತಾನೆ; ಶ್ರೇಯಸ್ಸು ಪಡೆಯುತ್ತಾನೆ.

ಗುರುಗಳಿಗೆ ಹಿರಿಯರಿಗೆ ಶಿರಬಾಗಿ ಎರಗಿದರೆ
ನರಸುರರೊಲಿದು ಸಿರಿ ಸುರಿದು ಕೈಲಾಸ
ಕರತಲಾಮಲಕ ಸರ್ವಜ್ಞ.

ಸರ್ವಜ್ಞ ತನ್ನ ಕಾವ್ಯದಲ್ಲಿ ಅರ್ಥವಾಗದೆ, ಜಟಿಲವಾದ ಆಧ್ಯಾತ್ಮಿಕ ಪ್ರಶ್ನೆಗಳನ್ನು ಕೆಣಕಿಲ್ಲ. ಯಾವುದೇ ವಾದವಿವಾದಗಳ ಗೊಡವೆಗೆ ಹೋಗಿಲ್ಲ. ಎಲ್ಲರೂ ಐಹಿಕ ಜೀವನದ ಬಂಧನದಿಂದ ಮುಕ್ತರಾಗಿ, ಸನ್ಯಾಸಿಗಳಾಗಬೇಕೆಂದು ಅವನು ಬೋಧಿಸಿಲ್ಲ. ಅವನ ಚುಟುಕುಗಳು ಅರ್ಥಪೂರ್ಣವಾಗಿವೆ.

ಪುರಂದರದಾಸ

`ದಾಸಶ್ರೇಷ್ಠ' ಎಂದು ಹೊಗಳಿಸಿಕೊಂಡ ಪುರಂದರದಾಸನು ಹಿರಿಯ ಭಕ್ತ. ಹಿರಿಯ ಹಾಡುಗಾರ. ಸಿರಿತನದ ಮಡಿಲಲ್ಲಿ ಬೆಳೆದು ಯಾವುದೋ ಒಂದು ಪ್ರಸಂಗದಲ್ಲಿ ಎಲ್ಲವನ್ನೂ ತ್ಯಾಗಮಾಡಿ ಅವನು ಸ್ವೇಚ್ಛೆಯಿಂದ ತಿರುಕನಾದನು. ಹೆಂಡಿರುಮಕ್ಕಳೊಡನೆ ವಿಜಯನಗರಕ್ಕೆ ಬಂದು ವ್ಯಾಸರಾಯನಿಂದ ಮಂತ್ರೋಪದೇಶಪಡೆದು ದಾಸನಾದನು. ಅವನ ಮುಂದಿನ ಜೀವನವೆಲ್ಲ ಹರಿಸಮರ್ಪಿತವಾಯಿತು. ಅವನ ವಿಷಯವಾಗಿ ಪ್ರಚಲಿತವಾಗಿದ್ದ ದಂತಕಥೆ, ಕೀರ್ತನೆಗಳ ಮಥಿತಾರ್ಥವು ಇದೇ ಆಗಿದೆ. ಅವನೇ ಬರೆದ ಹಾಡುಗಳಿಂದಲೂ ಇದಕ್ಕೆ ಪುಷ್ಟಿದೊರೆಯುತ್ತದೆ. ಅವನು ಭಾರತವೆಲ್ಲ ಸಂಚರಿಸಿ ತೀರ್ಥಯಾತ್ರೆ ಮಾಡಿರಬೇಕು; ಎಲ್ಲ ತರದ, ಮತಪಂಥದ ಜನರೊಡನೆ ನಿಕಟ ಸಂಬಂಧವನ್ನು ಬೆಳೆಸು ಸೂಕ್ಷ್ಮವಾಗಿ ಲೋಕಜೀವನ ನಿರೀಕ್ಷಣೆಯನ್ನು ಮಾಡಿರಬೇಕು. ತನ್ನ ಭಕ್ತಿಸ್ಥಾಯಿಗೆ ವಿವಿಧ ಸನ್ನಿವೇಶಗಳಿಂದ ಸಹಜಸ್ಫೂರ್ತಿಯನ್ನು ಪಡೆದು ಹಾಡು ಕಟ್ಟಿರಬೇಕು. ನಕ್ಕುನಗಿಸುವ ವಿಡಂಬಿಕ ಹಾಸ್ಯದಲ್ಲಿ ಮೇಲುಗೈಯಾಗಿರಬೇಕು ಎಂಬುದನ್ನು ಅರಿತರೆ ಅವನ ವ್ಯಕ್ತಿತ್ವದ ಕೆಲವಂಗಗಳ ದರ್ಶನವಾಗುತ್ತದೆ.

ವಿಷಯಾನುಗುಣವಾಗಿ ನಾಮಮಹಿಮೆ, ಹರಿಗುರುಗಳ ಸ್ಮರಣೆ-ಸ್ತುತಿ, ಅಂತರಂಗನಿವೇದನೆ, ಕೃಷ್ಣಲೀಲೆ, ಸಮಾಜವಿಮರ್ಶೆ, ಸಮಾಜಬೋಧನೆ ಹೀಗೆ ಸ್ಥೂಲವಾಗಿ ವರ್ಗೀಕರಿಸಬಹುದು. ಅವರ ಕೀರ್ತನೆಗಳಲ್ಲಿ ಕಂಡುಬರುವ ಕೆಲವು ಚುಟುಕುಗಳನ್ನು ಗಮನಿಸಬಹುದು.

> ಅಜ್ಞಾನಿಗಳ ಕೂಡ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡ ಜಗಳವೇ ಲೇಸು (೪-೨೧)
>
> ಅಟ್ಟಮೇಲೆ ಒಲೆಯು ಉರಿವಂತೆ...... ಕೆಟ್ಟಮೇಲೆ ಅರಿವು ಬಂದಿತು (೧-೨೬)
>
> ಅಡಿಕೆ ಹೋಳಿಗೆ ಹೋದ ಮಾನ ಆನೆ ಕೊಟ್ಟರೂ ಬಾರದೊ (೪-೧೫೩)
>
> ಅನ್ನಪಾನದ ಸವಿಯ ಕೊನೆನಾಲಿಗೆಗರಿವಂತೆ ಅಣಿಮಾಡಿ ಕೊಡುವಂಥ ಕರ ಬಲ್ಲುದೆ? (೪-೮೬)
>
> ಅರಸು ಮುಟ್ಟಲು ದಾಸಿ ರಂಭೆ.... ಪರಶು ಮುಟ್ಟಲು ಲೋಹ ಹೊನ್ನು (೩-೧೪೮)
>
> ಅರಿತು ಆಚಾರವನು ನಡೆಸದಾತನೆ ಹೊಲೆಯಅಲ್ಲದ ಕರ್ಮವ ಆಚರಿಸಿದವ ಕೆಟ್ಟ, ಲಲ್ಲೆ ಮಾತಿನ ಸತಿಯ ನಂಬಿದವ ಕೆಟ್ಟ, ಬಲ್ಲವರೊಳಗೆ ವಿರೋಧಿಸುವವ ಕೆಟ್ಟ (ಉಗಾಭೋಗ-೩)
>
> ಅಳಲಿಸಿ ಪರರನು ಗಳಿಸಿ ತಂದರ್ಥವು ಉಳಿಯದು ಎಚ್ಚರಿಕೆ (೨-೪೫)
>
> ಅಳಿವುದು ಕಾಯವು, ಉಳಿವುದೊಂದೇ ಕೀರ್ತಿ (೨-೪೫)
>
> ಆದದ್ದೆಲ್ಲಾ ಒಳಿತೇ ಆಯಿತು (೧-೯೫)
>
> ಆನೆಗೆ ನಿತ್ಯ ಮೂರುಮಣ ಆಹಾರ ಕೊಡುವ (೧-೫೬)

(ಇರುವೆ ಎಂಬತ್ತು ಕೋಟಿ ಜೀವನರಾಶಿಗೂ, ದೇವರು ಯಾವ ಯಾವುದಕ್ಕೆ ಎಷ್ಟೆಷ್ಟು ಆಹಾರ ಬೇಕೋ ಅಷ್ಟಷ್ಟು ಅಳೆಯುತ್ತಾನೆ. ಆನೆಯದು ದೊಡ್ಡ ಹೊಟ್ಟೆ ಎಂದು ಅದನ್ನು ಬಿಡುವುದಿಲ್ಲ)

ಆನೆ ಮೇಲೆ ಪೋಪನ ಶ್ವಾನ ಮುಟ್ಟಬಲ್ಲುದೇ? (ಉಗಾಭೋಗ-೭೧)

ಆರೇನು ಮಾಡುವರು, ಆರಿಂದಲೇನಹುದು, ಪೂರ್ವಜನ್ಮದ ಕರ್ಮವಿಧಿ ಬೆನ್ನಬಿಡದು (೨-೬೦)

ಆರೇನು ಮಾಡುವರು ತಾ ಪಾಪಿಯಾದರೆ? (೧-೭೮)

ಆರೇನು ಮಾಡುವರು ....ಹೊಲ ಬೇಲಿ ಮೆದ್ದರೆ, ಮೊಲವೆದ್ದು ಇರಿದರೆ... ಕಲಸಿಟ್ಟ ಅವಲಕ್ಕಿ ಕಲಪರಟಿ ನುಂಗಿದರೆ? (೩-೨೧೩)

ಆವಾವ ಕಾಲಕ್ಕೆ ದೇವನಿಚ್ಛೆಯಿಂದ ಆವಾವುದು ಬರೆ ಸುಖವೆ ಎನ್ನು (೪-೧೪೧)

ಆಳಿಲ್ಲದವನಿಗೆ ಅರಸುತನವ್ಯಾತಕ್ಕೆ? (ಉಗಾಭೋಗ-೬೧)

ಇಕ್ಕಲಾರದ ಕೈ ಎಂಜಲು (೧-೧೩೧)

ಇಕ್ಷುದಂಡ ಕೈಯೊಳಿರೆ ಇಂಧನವ ಮೆಲಲ್ಯಾಕೆ, ಅಕ್ಷಯ ಪಾತ್ರೆ ಇರಲು ಹಸಿದು ಇರಲ್ಯಾಕೆ? (೪-೪೧)

ಇರಬೇಕು ಇರದಿರಬೇಕು, ಸಂಸಾರದಿ; .....ಮಿಥಿಲಾ ಪಟ್ಟಣವು ದಹಿಸಿತೆಂಬುದ ಕೇಳಿ ಮಿಥಿಲೇಶ 'ಮಮ ಕಿಂಚಿನ್ನದಹ್ಯತೇ?' ಎಂದಂತೆ. (೪-೪೫)

ಇಷ್ಟಿಷ್ಟು ಬೆಣ್ಣೆಯ ಕೊಟ್ಟೇನೊ ರಂಗಯ್ಯ (೨-೧೧೦)

ಇಷ್ಟು ದೊರಕಿದರೆ ಮತ್ತಿಷ್ಟು ಬೇಕೆಂಬಾಸೆ, ಅಷ್ಟು ದೊರಕಿದರು ಮತ್ತಷ್ಟರಾಸೆ (೨-೧೫೧)

ಇಂಥ ಸಲ್ಲದ ನಾಣ್ಯವ ಮಾಡುವರೇ? (೩-೧೨೪)

ಇಂದಿನ ಹಮ್ಮು ನಾಳೆಗೆ ಇಲ್ಲ (೨-೮೧)

ಈಗ ಮಾಡುವ ಧರ್ಮ ನಾಳೆ ಎಂದೆನಬೇಡ (೨-೧೮೦)

ಈಸಬೇಕು, ಇದ್ದು ಜೈಸಬೇಕು (೧-೧೨)

ಊರಬಿಟ್ಟು ಬೇರೂರಿಗೆ ಹೋದರೆ ಪ್ರಾರಬ್ಧವು ಬೇರಾದೀತೆ? (೧-೧೫೭)

ಊರು ಮಾಡಿದ ಕೊಳಗ, ತಾಯಿ ಮಾಡಿದ ಹೊಟ್ಟೆ (೫-೧೧೮)

ಊರೆಲ್ಲ ನೆಂಟರು ಉಣಬಡಿಸುವರ ಕಾಣೆ (೧-೭೮)

ಉಂಬುಡುವುದಕ್ಕಿರದ ಅರಸನೋಲಗಕ್ಕಿಂತ ತುಂಬಿದೂರೊಳಗೆ ತಿರಿದುಂಬುವುದೆ ಲೇಸು (೪-೨೧)

ಎಣಿಸಿಕೊಂಡೇಳ್ಳಂಜಿಯ ನೂತರೆ ಮಣಿಯದ ಸಾಲವು ತೀರೀತೆ(೧-೧೫೭)

ಎಲ್ಲಿರುವನೋ ರಂಗನೆಂಬ ಸಂಶಯಬೇಡ .....ನೆನೆದವರ ಮನದಲ್ಲೇ ಇಹ (೨-೧೨೨)

ಎಳೆನರಿಯು ಒಂಟೆಯ ತುಟಿಗೆ ಜೋತಂತೆ... (೫-೬೪)

ಒಲ್ಲೆನೆ ವೈದಿಕ ಗಂಡನ (೨-೧೮೫)

ಒಂಟಿಯಾಗಿ ಪೋಗುವಾಗ ಸಂಗಡ ಒಬ್ಬರ ಕಾಣೆ (೩-೨)

ಒಂದು ಮೊಲಕೆ ಆರು ಹುಲಿ ಬಂದಡರುವಂತೆ

ಕತ್ತಲೆ ಬೆಳೆದಿಂಗಳ ಸಂಸಾರ!

ಕತ್ತೆ ಬಲ್ಲುದೆ ಹೊತ್ತವಸ್ತ್ರುದಾ ಭೋಗವನು? (೧-೧೨೫)

(ಕತ್ತೆ ಬಲ್ಲುದೆ ಕಸ್ತೂರಿಯ ಪರಿಮಳವ? ಎಂದೂ ಉಂಟು)

ಕನ್ನಡಿಯೊಳಗಿನ ಗಂಟು ಕಂಡು, ಕಳ್ಳ ಕನ್ನವಿಕ್ಕಲವನ ವಶವಹುದೆ? (೨-೧೧೯)

ಕಬ್ಬು ಡೊಂಕು ಆದರೆ ಸಿಹಿ ಡೊಂಕೆ? (೩-೧೩೯)

ಕಯ್ಯಿಗೆ ಬಂದಪತಂಜಿ ಕಬ್ಬಿಣವಾಯಿತು. (೪-೧೨೪)

ಕಲ್ಲಾಗಿ ಇರಬೇಕು ಕಠಿಣ ಭವತೊರೆಯೊಳಗೆ, ಬಿಲ್ಲಾಗಿ ಇರಬೇಕು ಬಲ್ಲವರೊಳಗೆ (೧-೩೨)

ಕನಕದಾಸ

ಪುರಂದರದಾಸನಿಗೆ ಸಮತೂಕದವನೂ ಸ್ವತಂತ್ರ ಕಾಂತಿಯುಳ್ಳವನೂ ಆಗಿ ಕನಕದಾಸನು ಅದೇ ಕಾಲದಲ್ಲಿ ಜೀವಿಸಿದನು. ಉಪಲಬ್ಧಸಾಮಗ್ರಿಯನ್ನು ಕಣ್ಣಿಟ್ಟು ನೋಡಲಾಗಿ, ಅವನು ಬಾಡವೆಂಬ ಹಳ್ಳಿಯಲ್ಲಿ ಕುರುಬರ ಕುಲದಲ್ಲಿ ಹುಟ್ಟಿ ಬೆಳೆದು ದಂಡನಾಯಕನಾದನೆಂದೂ ಯಾವುದೋ ಯುದ್ಧಕಾಲದಲ್ಲಿ ಸಂಸಾರದ ಬಗ್ಗೆ ಉಪರತಿಹುಟ್ಟಿ ಭಕ್ತನಾದನೆಂದೂ ತೋರುತ್ತದೆ. ಕಾಗಿನೆಲೆಯಲ್ಲಿ ಆದಿಕೇಶವನ ಗುಡಿಯನ್ನು ಕಟ್ಟಿಸಿ ಅವನನ್ನೇ ತನ್ನ ಆರಾಧ್ಯದೈವತ್ವವಾಗಿ ಮಾಡಿಕೊಂಡನು. ಪುರಂದರದಾಸನು ಸರ್ವಸ್ವ ತ್ಯಾಗಮಾಡಿ ವಿಜಯನಗರಕ್ಕೆ ಬಂದಂತೆ ಕನಕದಾಸನೂ ಬಂದು ಬಡತನದ ವ್ರತವನ್ನು ಕೈಕೊಂಡು ವ್ಯಾಸರಾಯನ ಅಚ್ಚುಮೆಚ್ಚಿನ ಶಿಷ್ಯನಾದನು, ಮಾಧ್ವಪರಂಪರೆಯ ಭಕ್ತನಾದನು. ಕನಕದಾಸನು ಬೆಳೆದಂತೆ ಎಲ್ಲಾ ಮೇಲಾದ ಸಂಸ್ಕಾರಗಳಿಗೆ ಒಳಗಾಗಿ ಭಾಗವತ ಧರ್ಮದೃಷ್ಟಿಯನ್ನು ಸ್ಥಿರಪಡಿಸಿಕೊಂಡನು. ನಮ್ಮ ದೃಷ್ಟಿಯಲ್ಲಿ ಅವನು ಯಾವೊಂದು ಮತದ ಪಡಿಯಚ್ಚಿನಲ್ಲಿ ಮಾತ್ರ ಬೆಳೆಯದೆ ಎಲ್ಲ ಮತದ ಸಾರಗ್ರಾಹಿಯಾದ ಪರಮಭಕ್ತನಾಗಿದ್ದನು. ಹೀಗಿದ್ದರೂ ರಾಮಾನುಜಮತವು ಮನೆತನದ ಸಂಪ್ರದಾಯದ ಮೂಲಕವೂ ಆಮೇಲಿನ ಸಂಪರ್ಕಗಳ ಮೂಲಕವೂ ಗಾಢಸಂಸ್ಕಾರಗಳನ್ನು ಉಂಟು ಮಾಡಿರಬಹುದು. ಆ ಮೇಲಿನ ಇನ್ನೊಂದು ಪ್ರಬಲ ಸಂಸ್ಕಾರವೆಂದರೆ ಮಾಧ್ವಮತದ್ದು.

ಕನಕದಾಸನು ಕೀರ್ತನೆಗಳನ್ನಲ್ಲದೆ ಈ ಯುಗದ ವರ್ಣಕಪರಂಪರೆಗನುಸರಿಸಿ ಹಲವು ಷಟ್ಪದಿಸಾಂಗತ್ಯ ಕಾವ್ಯಗಳನ್ನು ರಚಿಸಿದನು. ಅವೆಂದರೆ 'ಹರಿಭಕ್ತಿಸಾರ', 'ರಾಮಧಾನ್ಯ ಚರಿತ್ರೆ', 'ನಳಚರಿತ್ರೆ', 'ಮೋಹನ ತರಂಗಿಣಿ', ಅವರ ಕೀರ್ತನೆಗಳಲ್ಲಿ ಕಂಡುಬರುವ ಕೆಲವು ಚುಟುಕುಗಳು ಇಂತಿವೆ.

ಅಡವಿಯೊಳಗಾಡುವ ಮೃಗಪಕ್ಷಿಗಳಿಗೆಲ್ಲ ! ಅಡಿಗಡಿಗೆ ಆಹಾರವಿತ್ತವರು ಯಾರೋ !!

ಪಡೆದ ಜನನಿಯ ತೆರದೆ ಸ್ವಾಮಿ ಹೊಣೆಗೇಡಾಗಿ ! ಬಿಡದೆ ರಕ್ಷಿಪನಿದಕೆ ಸಂದೇಹ ಬೇಡ (೪-೨)

ಅಡಿಸತ್ತ ಮಡಕೆಗೆ ಜೋಡಿಸಿ ಒಲೆಗುಂಡು ಹೂಡಬಾರದು, ಬಹು ಬಡತನ ಬಂದಾಗ ನೆಂಟರ ಬಾಗಿಲ ಸೇರಬಾರದು (೨೯-೨)

ಅರವಿಂದ ಇಲ್ಲದಿಹ ಕೊಳವು ತಾ ಕಂಗೊಳವು

ಅರಿತು ಶಾಸ್ತ್ರವಾಚರಿಸುವ ಯೋಗ್ಯಗೆ ಗುರು ಉಪದೇಶವು ತಪ್ಪೀತೆ? (೧೮)

ಅಷ್ಟೈಶ್ವರ್ಯವು ಮೃಷ್ಟಾನ್ನವಿರುತಿರೆ! ಬಿಟ್ಟಿ ಕೂಳನು ತಿನಲ್ಯಾಕಯ್ಯ? (೧೮-೧)

ಆಸೆ ಕೊಟ್ಟು ನಿರಾಸೆ ಮಾಡಿದ ಫಲ ಮೋಸವ ಮಾಡದೆ ಬಿಟ್ಟೀತೆ? (೧೮)

ಆಳಿದೊಡೆಯಂಗೆರಡು ಬಗೆಯುವಾತಗೆ ಒಳ್ಳೆ ಮಾಳಿಗೆಯ ಮನೆ, ತುರುವು, ಧನ ಧಾನ್ಯವು! (೧೨)

(ಕಲಿಯುಗದ ಮಹಾತ್ಮೆ)

ಉತ್ತಮ ಪತಿವ್ರತೆಯು ಪತಿನೀನೆ ಗತಿಯೆನಲು !

ಮುತ್ತೈದೆಗುಡುವುದಕೆ ವಸ್ತ್ರವಿಲ್ಲ !!

ಮತ್ತೆ ವ್ಯಭಿಚಾರಿಣಿಗೆ ತೊಡಿಗೆ ಬಂಗಾರಗಳು !

ವರ್ತನೆಯಿದೇನಯ್ಯ ಕಲಿಯುಗದ ಮಹಿಮೆ (೧೨)

ಎಲ್ಲಾರು ಮಾಡುವುದು ಹೊಟ್ಟೆಗಾಗಿ-ಗೇಣು ಬಟ್ಟೆಗಾಗಿ - ತುತ್ತು ಹಿಟ್ಟಿಗಾಗಿ (೨೭)

ಅಂಗಜ ವಿಷಯಗಳನು ತೊರೆದಾತನಿಗೆ ಅಂಗನೆಯರ ಸುಖ ಸೊಗಸೀತೆ? (೧೮)

ಅಂತರವರಿಯದಾ ವೇಶಿ ಹೇಸಿ

ಅಂತಸ್ಥವಿಲ್ಲದ ಪ್ರಧಾನಿ ಮದ್ಯಪಾನಿ

ಕದ್ದು ಒಡಲ ಪೊರೆಯುವನ ಮನೆಯೊಳಗಿದ್ದಧೋಗದೆ ಉಳಿದೀತೆ? (೧೮)

ಕನಕನ ಮುಂಡಿಗೆ!

ಕಮಲನಾಭನ ಕಗುಣ ಕವಚನವು ಸವೆದರಾರೇಗುವರು?

ಕರುಣಾಮೃತದಾಭರಣವ ಧರಿಸಿದ ಶರಣಗೆ ಸಿರಿಯು ತಪ್ಪೀತೇ? (೧೮)

ಕಲ್ಲೊಳಗೆ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ ! ಅಲ್ಲಲ್ಲಿಗಾಹಾರವಿತ್ತವರು ಯಾರೋ !!

ಬಲ್ಲಿದನು ಕಾಗಿನೆಲೆಯಾದಿಕೇಶವರಾಯ ! ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ (೪-೩)

ಕಷ್ಟಪಟ್ಟರು ಇಲ್ಲ, ಕಳವಳೀಸಿದರಿಲ್ಲ! ಭ್ರಷ್ಟಮನ ನಿನ್ನ ಹಣೆ ಬರಹದಷ್ಟಲ್ಲದೆ (೨೦)

ಕಸ್ತೂರಿ ತಿಲಕವನೊತ್ತಿ ಫಣೆಯೊಳಿಡೆ ಅರ್ಥಿಯ ತೊರದೆ ಇದ್ದೀತೆ? (೧೦)

ಕ್ಷೀರದೊಳದ್ದು, ನೀರೊಳಗದ್ದು ಗೋವಿಂದ (೧೩) ೨ನೇ ಭಾಗ.

ಕುಲ ಕುಲ ಕುಲವೆನ್ನುತಿಹರು ! ಕುಲವ್ಯಾವುದು ನಿತ್ಯಸುಖವುಳ್ಳ ಜನರಿಗೆ? (೧೦)

ಕಂಡು ಕರೆಯುದ ನಂಟ.... (೧೪)

ಜಪವ ಮಾಡಿದರೇನು ತಪವ ಮಾಡಿದರೇನು! ಕಪಟಗುಣ ವಿಪರೀತ ಕಲುಷವಿದ್ದವರು (೧೩)

ಜ್ಞಾನಭಕ್ತಿಕೊಟ್ಟು ನಿನ್ನ ಧ್ಯಾನದಲ್ಲಿ ಇಟ್ಟು ಎನ್ನ ! ಹೀನ ಬುದ್ಧಿ ಬಿಡಿಸೋ ಮುನ್ನ ಶ್ರೀಜನಾರ್ಧನ (೨೮-೨೧)

ಜ್ಞಾನವಿಲ್ಲದೆ ನೂರು ಕಾಲ ಬದುಕಲ್ಯಾತಕೆ? (೮-೧)

ಜೀಣನ ವಶದೊಳು ನಾನಾ ದ್ರವ್ಯವಿರೆ ದಾನ ಧರ್ಮಕೆ ಮನಸಾದೀತೆ? (೧೮)

ತತ್ವದರ್ಥ ವಿಚಿತ್ರದಿ ಬೋಧಿಸೆ ಕತ್ತೆಯ ಚಿತ್ತಕೆ ಹತ್ತೀತೆ? (೧೮)

ತಲ್ಲಣಿಸದಿರು ಕಂಡ್ಯ ತಾಳು ಮನವೆ ! ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ (೪)

ತಾನು ಉಣ್ಣದೆ ಪರರಿಗಿಕ್ಕದ ಧನವಿದ್ಯಾತಕೆ? (೫-೧) ೨ನೆಯ ಭಾಗ

ತಾಯಿ ತಂದೆಯರೆ ನೋಯಿಸಿದವನಿಗೆ ಮಾಯದ ಮರಣವು ತಪ್ಪೀತೆ? (೧೮)

ತೀರ್ಥವನು ಪಿಡಿವರೆಲ್ಲ ತಿರುನಾಮಧಾರಿಗಳೇ, ಜನ್ಮ ಸಾರ್ಥಕವಿಲ್ಲದವರೆಲ್ಲ ಭಗವಂತರೇ?

ದಾನಧರ್ಮವ ಮಾಡಿ ಸುಖಿಯಾಗು ಮನವೇ, ಹೀನ ವೃತ್ತಿಯಲಿ ನೀ ಕೆಡಬೇಡ ಮನವೇ (೨೬)

ದಂತಿ ಇಲ್ಲದ ಅರಸು ಮುರಿದ ಕಾಲಿನ ಗೊರಸು (೧೪)

ದಂಡಿಗಂಜುವ ಭಂಟ ಒಡಕು ಹರಿವಿಯ ಕಂಠ (೧೪)

ಧರೆಯ ಭೋಗವನು ನೋಡಿ! ಹರಿಯ ಮರೆದು ಕೆಡಲಿಬೇಡ! ಧರೆಯ ಭೋಗ ಕನಸಿನಂತೆ ಕೇಳು ಮಾನವ (೧೦) ೨ನೆಯ ಭಾಗ

ನ್ಯಾಯವ ಬಿಟ್ಟನ್ಯಾಯವ ಪೇಳುವ ನಾಯಿಗೆ ನರಕವು ತಪ್ಪೀತೆ? (೧೮)

ನಾಯ ಬಾಯ ಅರಿವೆಯಂತೆ (೪) ೨ನೆಯ ಭಾಗ

ನೀತಿಯರಿತು ನಡೆಯದಿರುವ ಭಂಟನ್ಯಾತಕೆ (೮-೨) ೨ನೆಯ ಭಾಗ

ನೆಟ್ಟನೆ ದಾರಿಯು ಬಟ್ಟೆಯೊಳಿರುತಿರೆ ! ಬೆಟ್ಟವ ಬಳಸಲಿನ್ಯಾಕಯ್ಯ? (೧೮-೧)

ಪರುಷದ ಪಾಳೆಗಳಿರುತಿರೆ ಬೀದಿ! ಜರಿಗಲ್ಲ ತೊಳೆಯಲಿನ್ಯಾಕಯ್ಯ !! ಹರಿವಾಣ

ದೊಳಗಮೃತಾನ್ನವು ಇರುತಿರೆ ! ತಿರುಪೆ ಕೂಳನು ತಿನ್ನಲ್ಯಾಕಯ್ಯ (೧೮-೨)

ಪಾಪಿಗಳಿದ್ದಲ್ಲಿ ರೂಪುಳ್ಳ ವಸ್ತುವ ತೋರಬಾರದು, ಬಹು ಕೋಪಿಗಳಿದ್ದಲ್ಲಿ

ಅನುಭವಗೋಷ್ಠಿಯ ಆಡಬಾರದು (೨೯-೧)

ರತ್ನಾಕರವರ್ಣಿ

ರತ್ನಾಕರವರ್ಣಿ ಈ ಯುಗದ ಹಿರಿಯ ಕವಿಗಳಲ್ಲಿ ಒಬ್ಬನು, ಕನ್ನಡ ಸಾಹಿತ್ಯದ ಐಶ್ವರ್ಯವನ್ನು ಹೆಚ್ಚಿಸಿದ ತೀರ ಸ್ವಲ್ಪ ಮಹಾಕವಿಗಳಲ್ಲಿಯೂ ಒಬ್ಬನು. ೧೬ ನೆಯ ಶತಮಾನದ ಮಧ್ಯಭಾಗದಲ್ಲಿ ವಿಜಯನಗರಸಾಮ್ರಾಜ್ಯವು ತನ್ನ ವೈಭವ ಶಿಖರವನ್ನು ಮುಟ್ಟಿ ಇಳಿತರಕ್ಕೆ ಹತ್ತಿರ ಬಂದಾಗ ಇವನು ಪಶ್ಚಿಮ ಕರಾವಳಿಯ ಮೂಡಬಿದಿರೆಯಲ್ಲಿ ಹುಟ್ಟಿಬೆಳೆದನು. ಕಾರ್ಕಳ ಮೂಡಬಿದಿರೆಯ ಆ ಪ್ರಾಂತವು ಜೈನಧರ್ಮದ ಜೀವಂತ ಕೇಂದ್ರಗಳಲ್ಲಿ ಒಂದಾಗಿತ್ತು. ಕ್ಷತ್ರಿಯ ವಂಶಜನಾಗಿ ಹುಟ್ಟಿ ಅಂಥ ಕೇಂದ್ರದ ವಿದ್ಯಾಮಯವಾತಾವರಣದಲ್ಲಿ ಅವನು ಬೇಗಬೇಗನೆ 'ಕಾವ್ಯಾಲಂಕಾರಶಾಸ್ತ್ರದೊಳನಿಪುಣನಾದನು'.

ರತ್ನಾಕರನು ಸಂಪ್ರದಾಯುಬದ್ಧನಾದ ಜೈನನಲ್ಲವೆಂಬುದನ್ನು ಅವನ ವಿಷಯವಾಗಿ ಪ್ರಚಲಿತಕಥೆಗಳಿಂದ ಗ್ರಂಥಸ್ಥ ಪ್ರಮಾಣಗಳಿಂದ ಊಹಿಸಬಹುದು. ಅವನ ಜೀವನದ ವಿವರಗಳು ಏನೇ ಇರಲಿ, ಅವನು ಶೃಂಗಾರ ಪ್ರಿಯನೂ ಸ್ವತಂತ್ರ ಪ್ರಜ್ಞೆಯುಳ್ಳವನೂ ಆಗಿದ್ದನೆಂದೂ ಅವನ ಜೀವನವೂ ವಿಚಿತ್ರ ಘಟನೆಗಳಿಂದ ಕೂಡಿ ಅದ್ಭುತ ರಮ್ಯವಾಗಿತ್ತೆಂದೂ ತಿಳಿಯಲು ಆಸ್ಪದವಿದೆ. ರತ್ನಾಕರನ ಕೃತಿಗಳೆಂದರೆ

'ತ್ರಿಲೋಕಶತಕ, ಅಪರಾಜಿತೇಶ್ವರಶತಕ, ಹಾಡುಗಳು ಮತ್ತು ಭರತೇಶವೈಭವ', 'ರತ್ನಾಕರಾಧೀಶ್ವರಶತಕ'ವೂ ಇವನದೇ ಆಗಿರಬಹುದು. 'ತ್ರಿಲೋಕ ಶತಕ'ದಲ್ಲಿ ನೂರರ ಮೇಲೆ ಕಂದಪಂದ್ಯಗಳಿವೆ. ಇದರಲ್ಲಿ ಜೈನಮತಾನುಸಾರವಾಗಿ ಪ್ರಪಂಚ ಸ್ಥಿತಿ ಇಲ್ಲವೆ ಸೃಷ್ಟಿಶಾಸ್ತ್ರವನ್ನು ಹೇಳಲಾಗಿದೆ. ಸಾಮಾನ್ಯವಾಗಿ ಶೃಂಗಾರ, ಶಕ್ತಿ, ಜ್ಞಾನ, ವೈರಾಗ್ಯ, ನೀತಿ ಈ ವಿಷಯಗಳು ಶತಕಗಳಲ್ಲಿರುತ್ತವೆ. 'ಅಪರಾಜಿತೇಶ್ವರ ಶತಕ'ದಲ್ಲಿಯೂ ಅಷ್ಟೇ ಪದ್ಯಗಳಿದ್ದು ಅದರಲ್ಲಿ ನೀತಿ, ವೈರಾಗ್ಯ, ಆತ್ಮವಿಚಾರಗಳು ಅಡಕವಾಗಿವೆ. ಇದರಲ್ಲಿಯ ಕೆಲವು ಪದ್ಯಗಳು ತುಂಬ ಚೆನ್ನಾಗಿವೆ. 'ತನ್ಮಯನಾಗುತೆ ತಾನೆ ತನ್ನೊಳೋಲಾಡುವ ಯೋಗಿಯೇ ಅಮೃತಭಾಗಿಯಲಾ' ಈ ಮುಂತಾದ ಭಾವಗಳಲ್ಲಿ ರತ್ನಾಕರನ ಆತ್ಮಾನುಭವವೇ ವರ್ಣಿತವಾದಂತಿದೆ. ಅವರ ಕೃತಿಗಳಲ್ಲಿ ಕಂಡುಬರುವ ಕೆಲವು ಚುಟುಕುಗಳು ಇಂತಿವೆ.

ಅರ್ಕನೊತ್ತಿನೊಳಿರ್ದು ದೀಪವೇತಕೆ? (ಮೋಕ್ಷಮಾರ್ತ ಸಂಧಿ-೧೨೯)

ಅಚ್ಚ ಮೋಹಿಗಳ ನೋಯಿಪ ಸುಖ ಮರುಕ (ಮದನಸನ್ನಾಹ ಸಂಧಿ - ೫೬)

ಅಡಿಗೆರಗಿಸಿಕೊಂಬ ತೇಜವೊಂದಲ್ಲದೆ ಒಡವೆಯಾಸೆಯೆ ಚಕ್ರಧರಗೆ? (ಆದಿರಾಜೋದಯ ಸಂಧಿ-೮೪)

ಅತಿ ಮಥನಿಸಿದರೆ ಶ್ರೀಗಂಧದೊಳು ಕಿಚ್ಚು ಪ್ರತಿಫಲಿಸುವುದಲ್ತೆ(ತಾಂಡವವಿನಯ ಸಂಧಿ- ೮೬)

ಅತಿರತಿ ಸಲ್ಲದು (ಅರಗಿಳಿಯಾಳಾಪ ಸಂಧಿ-೨೧)

ಅಧಿಕರೊಳೇಕಪವುದು? (ಪುತ್ರವೈವಾಹ ಸಂಧಿ-೩೫)

ಅಪಕೀರ್ತಿ ಮಾಡಿದರಳಲಬೇಕಲ್ಲದೆ ಉಪಾರ್ಥಕಿದಕೇಕೆ ನೋವು?(ಕುಮಾರವಿಯೋಗ ಸಂಧಿ-೬೨)

ಅಪ್ಪಾಜಿ ಕೊಟ್ಟ ತೇಜದೊಳೆನ್ನ ಸೋದರರೊಪ್ಪದೊಳಿರಲೆಂಬನಣ್ಣಾ !!

ಕಪ್ಪವ ತೆರಲೆರಗಲಿಯೆಂಬಣ್ಣನೆ ತಪ್ಪಲ್ಲ ಲೇಸಣ್ಣನೆಂದಾ !! (ಸಂಧಾನಬಂಗ ಸಂಧಿ-೪೩)

ಅರಸ ಕಟ್ಟಿದರಾಟವಿಲ್ಲ (ಮೋಕ್ಷಮಾರ್ಗ ಸಂಧಿ -೧೭)

ಅರಸಿನ ಹಾವುಗೆ ಗದ್ದುಗೆ ಬಂಟಗೆ ವರವಲ್ಲ (ಕವಾಟವಿಸ್ಫೋಟನ ಸಂದಿ-೫೩)

ಅರಸು ಪಿಡಿಯೆ ತೃಣ ಪರ್ವತವಹುದು (ಧರಣಿಯಂ ಮಾತಂ) (ತೀರ್ಥೇಶಪೂಜಾ ಸಂಧಿ-೮)

ಅರಸು ಬಿಟ್ಟಲ್ಲಿ ಪಟ್ಟಣ (ನುಡಿ) (ಪೂರ್ಣಸಾಗರ ದರ್ಶನ ಸಂಧಿ-೫೦)

ಅರುವೆಯ ಬಿಟ್ಟರೆ ತಪಸಿಯೆ, ಹರೆ ಬಿಟ್ಟರರೆ ಗೋಲೆ ವಿಷಹೋಯ್ತೆ ಫಣೆಗೆ? (ಶ್ರೇಣ್ಯಾರೋಹ ಸಂಧಿ-೧೯)

ಅರೆಗೊಡ ತುಳುಕುವುದಲ್ಲದೆ ತುಂಬಿದ ಸಿರಿಗೊಡ ಬಿದಿರ್ವುದೆ? (ಬ್ರಾಹ್ಮಣನಾಮ ಸಂಧಿ-೭೭)

ಅವರ ಪೂರ್ವಪ್ರಾಪ್ತಿಯವರ ಕೊಂಡೊಯ್ದುದು (ಚಿತಜ ನಿರ್ವೇಗ ಸಂಧಿ-೫೪)

ಅಳುವರ ನಗಿಸಿದರು (ಕುಮಾರ ವಿಯೋಗ ಸಂಧಿ-೧೦೨)

ಆನೆ ಕುದುರೆ ಮೊದಲಾದ ಸಂಗ್ರಹದೋರಿ ಜಗವನಂಜಿಸಿದಾ! (ಕಟಕವಿನೋಧ ಸಂಧಿ-೮೩)

ಆನೆ ಕೇಸರಿಗಾಡಿನಂತಿಹುದಾಡಿಗೆ ಬಾನದಷ್ಟುದ್ದವಾಗಿಹುದು (ಕವಟಾವಿಸ್ಫೋಟನ ಸಂಧಿ-೧೦)

ಆನೆಯ ರಂಚಿಕೆ ಕಳಭಕಹುದೆ? (ಭರತೇಶನಿರ್ವೇಗ ಸಂಧಿ-೪೩)

ಆಯವ ತಡೆದರೆ, ಬೀಯವುಳ್ಳವನ ವಿಡಾಯ ತಾನೆ ಬರಿದಹುದು (ತತ್ತ್ವಾರ್ಥ ಸಂಧಿ - ೬೯)

ಆರು ಖಂಡವ ಗೆಲ್ದರೇನಾಯ್ತು, ಕರ್ಮದ ಮೂರು ಖಂಡವ ಗೆಲದೆ?
(ಭರತೇಶನಿರ್ವೇಗ ಸಂಧಿ-೩೭)

ಅವನಲ್ಲಿಯೂ ರತಿ ಸೊಗಸು, ಸೋದರದತ್ತೆ ಮಾವನ ಸಂಬಂಧವಾದ
ಭಾವಜರ್ಥಿಗಳಾಟ ಸೊಗಸಿನಲ್ಲಿಯು ಸೊಗಸಾ ವಿಲಾಸಕೆ ಸರಿಯುಂಟೆ
(ಸ್ತ್ರೀರತ್ನಸಂಭೋಗ ಸಂಧಿ-೧೭೮)

ಇಟ್ಟೆಡೆ ಬಂದಾಗ ಧೈರ್ಯ ಶೋಕಾನಲ ! ತಟ್ಟದಾಗರಿವಿರಬೇಕು !!
ಬಿಟ್ಟುವರೊಳು ಹೇಯ ತೊಟ್ಟುದರೊಳು ಧೃಢ ಹುಟ್ಟಬೇಕಧಿಕನಾದವಗೆ !!
(ಕುಮಾರವಿಯೋಗ ಸಂಧಿ-೨೨)

ಇಡು ಕತ್ತಲೆಯ ಮೊತ್ತ ರವಿಗಲ್ಪ (ಕವಾಟ ವಿಸ್ಫೋಟನ ಸಂಧಿ-೬೪)

ಇದಿರ ಶಕ್ತಿಯ ತನ್ನ ಶಕ್ತಿಯ ಯೋಚಿಸಿ ಕದನವ ಮಾಳ್ಪುದು ಜಾಣ್ಮೆ
(ರಾಯಸದಂಬೆಚ್ಚ ಸಂಧಿ-೬೪)

ಇಲ್ಲದ ಬಡವಗೆ ಬಲುರಾಜ್ಯ ಬಂದಂತೆ ! (ನಗರೀ ಪ್ರವೇಶ ಸಂಧಿ-೯)

ಇಲ್ಲದವನಿಗೊಂದು ನೋವಾದರೆಡಹಿದ ಕಲ್ಲೆಂದು ನೋಡದು ಲೋಕಾ !
ಬಲ್ಲಿದನೊಂದು ಕನಸಕಂಡರದಕೆ ನಾಡೆಲ್ಲ ಬಂದುಪಚರಿಸಿದುದು !!
(ಶೋಡಶ ಸ್ವಪ್ನ ಸಂಧಿ-೬೮)

ಉಗುರಿಂದ ಹೋಹುದಕೇಕೆ ಕೊಡಲಿ? (ರಾಯಸದಂಬೆಚ್ಚ ಸಂಧಿ-೧೭)

ಉಣಲರಿಯದ ಜಿನಪ್ರತಿಮೆಯ ಪೂಜೆಯಿಂದುಣಿಸುವುದುಪಚಾರ ಭಕ್ತಿ!!
ಉಣಬಲ್ಲ ಮುನೆಯೆಂಬಜಿನಗನ್ನವೀವ ಸಂದಣೆ ಮುಖ್ಯ ಭಕ್ತಿ
(ಮುನಿಭುಕ್ತಿ ಸಂಧಿ-೪೯)

ಉತ್ತುಂಗ ಸಂಪದದರ್ತಿ, ಮಹಾತ್ಮರ ವೃತ್ತಿ ವಿಸ್ಮಯವಲ್ತೆ ಜಗಕೆ? (ಜನನೀವಿಯೋಗ ಸಂಧಿ-೫೫)

ಉಂಡುವ ತೇಗುವ (ಕವಿವಾಕ್ಯ ಸಂಧಿ-೯೬)

ಉಂಡುಪವಾಸಿ, ಬಳಸಿ ಬ್ರಹ್ಮಚಾರಿ (ಮನ್ನಡೆ ಸಂಧಿ-೧೧೧)

ಊರ್ಗೆ ಪಯಣವೆಂದರಾರ್ಗಾಗದಧಿಕ ಸಂತೋಷಾ? (ಜಿನದರ್ಶನ ಸಂಧಿ-೫೭)

ಊರ ನೋಡುವೆನೆಂದು ಹೊರಗೇರಿಗೈತಂದು, 'ಊರೆಂತುಟಹುದೋ?' ಎಂಬಂತೆ (ಸಮವಸರಣ ಸಂಧಿ-೧೨)

ಊರಿಗೆಯ್ದಿದ ಮಾರಿ ಬೀರಸೆಟ್ಟಿಯ ಹೊಯ್ದು ದಾರಿಕಾರರ (ಗಾದೆ)
(ಸಂಧಾನಭಂಗ ಸಂಧಿ-೯೪)

ಎಡೆಮುಳ್ಳನೆಳೆಯ ಬೇಡ (ಮದನ ಸನ್ನಾಹಸಂಧಿ-೪೮)

(ಬಂಧುಗಳಲ್ಲಿ ದಾಕ್ಷಿಣ್ಯವಿರಬೇಕು. ಹೋಗಿಬರುವ ಬಳಿ ಬಟ್ಟೆ ನಿಷ್ಕಂಟಕವಾಗಿರಬೇಕು)

ಎಮ್ಮ ಕಾಲ್ಗಳಿಗೆರಗಿ ಕಾಡಿದರೆಂತುತು? (ಸ್ವಯಂವರ ಸಂಧಿ-೨೮)

ಮುದ್ದಣ್ಣ

೧೯ನೆಯ ಶತಮಾನದ ಕೊನೆಕೊನೆಗೆ ಉದಯವಾಗಿ ೨೦ನೆಯ ಶತಮಾನದ ಮೊದಲಲ್ಲಿ ಅಸ್ತನಾದ ಮುದ್ದಣನು ಹಳೆಯ ಮತ್ತು ಹೊಸ ಸಾಹಿತ್ಯಗಳ ಸಂಧಿಸಮಯದ ಸಂಕೇತವಾದನು. ಸೂರ್ಯಾಸ್ತದ ಹೊತ್ತಿಗೆ ಬೆಳ್ಳಗೆ ಹೊಳೆದ ಬೆಳ್ಳಿ ಸಂಜೆಯಾದೊಡನೆ ಕೆಲಕಾಲ ತಳತಳಿಸಿ ಮುಳುಗಿದಂತೆ ಅವನ ಅಲ್ಪಜೀವನವಾಯಿತು. ನಂದಳಿಕೆ ಲಕ್ಷ್ಮೀನಾರಾಯಣ ಮತ್ತು ಮುದ್ದಣರು ಇಬ್ಬರೂ ಬೇರೆಯೊ ಒಂದೆಯೊ ಎಂಬ ಭೇದಾಭೇದ ಚರ್ಚೆ ಹಿಂದೆ ನಡೆದ ಭೇದವು ಕವಿಮಾಯೆಯಿಂದ ಕಲ್ಪಿತವಾದದ್ದೆಂದು ತಿಳಿದು ಅಭೇದ ಸಿದ್ಧಾಂತವು ಈಗ ಸ್ಥಾಪಿತವಾಗಿದೆ ! ಅದೀಗ ಗತಕಾಲದ ವಾದವಾಯಿತು. ಮುದ್ದಣನು ತನ್ನ ಮೂವತ್ತೊಂದು ವರ್ಷಗಳ ಅಲ್ಪಾಯುಷ್ಯದಲ್ಲಿ ಹತ್ತಿಪ್ಪತ್ತು ರೂಪಾಯಿ ಸಂಬಳದ ವ್ಯಾಯಾಮ ಶಿಕ್ಷಕನಾಗಿ ಕನ್ನಡ ವ್ಯಾಸಂಗಪರಿಣತಿಯನ್ನು ಪಡೆಯುವ ಸಾಹಸ ಮಾಡಿದ್ದಲ್ಲದೆ 'ರತ್ನಾವತೀಕಲ್ಯಾಣ, ಕುಮಾರವಿಜಯ' ಎಂಬ ಯಕ್ಷಗಾನಪ್ರಸಂಗಗಳನ್ನೂ 'ಅದ್ಭುತರಾಮಾಯಣ, ಶ್ರೀ ರಾಮಪಟ್ಟಾಭಿಷೇಕ, ರಾಮಾಶ್ವಮೇಧ' ಎಂಬ ಕಾವ್ಯಗಳನ್ನೂ ರಚಿಸಿ ಕನ್ನಡ ನುಡಿಯ ಕಣಜಕ್ಕೆ ನೀಡಿದನು. ಅವನ ಕೃತಿಗಳಲ್ಲಿ ಕಂಡುಬರುವ ಕೆಲವು ಚುಟುಕುಗಳು ಇಂತಿವೆ.

ಅಗಲ್ದ ಮಡದಿಯಂ ರಘುಜನಂತಿರೆ ಕೊಂಡಾಳೆಂ ಬಾಱುಂ(೫-ಪುಟ, ೨೪; ೧೯ನೆಯ ಸಾಲು)

ಇರುಳ್ ಕಂಡ ಬಾವಿಯೊಳ್ ಪಗಲೊಳ್ ಬೀಳ್ದಂತೆ (೧೫-ಪುಟ, ೧೩೨; ೨೭-೨೮ನೆಯ ಸಾಲು)

ಉಗುರಿಂ ಚಿವುಡಲ್ತವೊಂದು ಕಜ್ಜಕ್ಕೆ ಕೊಡಲಿಯೊಂದು ನೆರಮಂ ಪಾರ್ವರೆ?

(೮-ಪುಟ ೫೮; ೨೨-೨೩ನೆಯ ಸಾಲು)

ಉರಿವ ಕಣ್ಣೊಳ್ ಸುಣ್ಣಮನಿಟ್ಟಂತೆ (೧೪-ಪುಟ ೧೩೦; ೧೩ನೆಯ ಸಾಲು)

ಊರೊಳ್ ಮಾರಿಯೆಂದು ಮನೆವೋಱುಯಂ ಮಾಱುಗುಡುವರೇ !

(೬-ಪುಟ ೩೫, ೨೮-೨೯ನೆಯ ಸಾಲು)

ಎಣ್ಣೆ ಸೀಗೆ ! (೧೩-ಪುಟ ೧೧೧; ೧೧ನೆಯ ಸಾಲು)

ಎನಿತ್ತೆಸಿರಿಯಿರ್ದೊಡಂ ಮಕ್ಕಳಿಲ್ಲದನ ಬಾಟ್ಕೆಯದೊಂದು ಬಾಟ್ಕೆಯೆ?

ನಿಡುಮರನಂತಿರ್ದೊಡದೊಂದಿರವೆ? (೪-ಪುಟ ೧೭; ೨೧-೧೧ನೆಯ ಸಾಲು)

ಎಳವರೆಯದೊಳ್ ನಲ್ಗೂಸಂ ಪೆತ್ತು ಬಾಲಕೇಳಿಯಂ ಕಣ್ದಣಿಯೆ ಕಂಡು

ಸಂಸಾರದ ಸಾರಮಿದೆನಂತೆ ಸಂತಸ ಬಡುವ ಪೆಣ್ಗಳೆ ಧನ್ಯೆಯರಲ್ತೆ!

"ಬಂದಳಿವಳ್ ! ಬಂಜೆ ! ಕಂದನಂ ಪಿಡಿಯಲ್ಕೀಯದಿರ್ ! ಕಣ್ ಕೊಂಕುಗುಂ;

ನುಡಿಯಿಸಲೆಡೆಗುಡದಿರ್ ! ನುಡಿಯೊಗ್ಗುಗುಂ" ಎಂಬ ನಾಡ ಪೆಣ್ಗಳ

ಬಿಱುನುಡಿಗೆ ತಡೆದುಂ ಬಾಟ್ಕೆ ವಂಧ್ಯೆಯರೆ ಜೀವನ್ಮೃತೆಯರೆ ವಲಂ

(೪-ಪು೧ ೧೮; ೧೦ ರಿಂದ ೧೬ನೆಯ ಸಾಲಿನವರೆಗೆ)

ಎಂತುಂ ಕುಲಕ್ಕೆ ಪೆಱಿಳಪ್ಪ ಮಗಳೊಳೇಂ ಮಱುಕಂ!

(೯-ಪುಟ ೬೮, ೯-೧೦ನೆಯ ಸಾಲು)

ಕತ್ತಿದ ಕಡಿಯೊಳುಪ್ಪಂ ಲೆಪ್ಪಿಸಿದಂತುಂ ! (೧೪-ಪುಟ ೧೩೦; ೧೩ನೆಯ ಸಾಲು)

"ಕನ್ನಡಂ ಕತ್ತುರಿ"ಯಲ್ತೆ (೧-ಪುಟ ೬, ೧೩ನೆಯ ಸಾಲು)

ಕಮ್ಮಲರ್ ಮಗಮಗಿಸದೇಂ ಪೋಕುಂ ! (೧೬-ಪುಟ ೧೬೪; ೨೦ನೆಯ ಸಾಲು)

ಕಾಡ ಬೀೞಂ ತಂದು ಊರ ಮರನೊತ್ತಿಗಿಡುವರುಂಟು, ನೋಡೆ ನಾಡೆಳೆ

ವಳ್ಳಿಯಂ ಸಮಂತು ಕಾಡ ಕರ್ಮರನೊಳ್ ಪತ್ತುಗುಡುವರೊಳರೇ !

(೯-ಪುಟ ೬೮, ೨,೩,೪ನೆಯ ಸಾಲು)

ಹೀಗೆ, ಚುಟುಕುಗಳು ಚಿಕ್ಕದಾಗಿದ್ದು, ನಡುಗನ್ನಡ ಕವಿಗಳಲ್ಲಿ ವ್ಯಾಪಕವಾಗಿ ಬಳಕೆಯಾಗಿದೆ. ಕವಿ-ಕಾವ್ಯದ ಅಭಿವ್ಯಕ್ತಿಗೆ ತುಂಬ ನೆರವಾಗಿದೆ. ಕವಿಗಳ ಭಾಷೆ, ಶೈಲಿ, ಅಲಂಕಾರ ಪ್ರಸ್ಥಾನ, ಹಾಸ್ಯ, ವಿಡಂಬನೆ ಇವೆಲ್ಲವುಗಳಿಗೆ ಚುಟುಕುಗಳು ತುಂಬ ಸಹಾಯಕವಾಗಿವೆ. ನಡುಗನ್ನಡ ಕಾವ್ಯಗಳಲ್ಲಿ ಬಳಕೆಯಾದ ಚುಟುಕುಗಳು ಅವುಗಳದ್ದೇ ಆದ ಕಾವ್ಯ ತಂತ್ರದಿಂದ ಕೂಡಿವೆ. ಅವು ಕಾವ್ಯದ ಗುಣವೇ ಆಗಿರುವುದರಿಂದ ಕವಿಗಳ ಕಾವ್ಯ ಶಕ್ತಿಗೆ ಪ್ರೇರಣೆ ಒದಗಿಸಿವೆ. ಈ ಅಧ್ಯಾಯದಲ್ಲಿ ಅವುಗಳನ್ನು ಸಂಕಲಿಸಿ, ವ್ಯಾಖ್ಯಾನಿಸುವ ಪ್ರಯತ್ನ ಮಾಡಲಾಗಿದೆ. ಅವುಗಳ ಮುಂದಿನ ಅಧ್ಯಯನಕ್ಕೆ (ವಿಶ್ಲೇಷಣೆ, ಹೊಸ ಸಾಧ್ಯತೆ ಇತ್ಯಾದಿ) ಈ ಅಧ್ಯಾಯ ಪ್ರೇರಣೆ ಕೊಡುತ್ತದೆಂದು ಭಾವಿಸಲಾಗಿದೆ.

ಅಧ್ಯಾಯ ೫

ಆಧುನಿಕ ಚುಟುಕು ಸಾಹಿತ್ಯ : ವೈವಿಧ್ಯತೆ ಮತ್ತು ಸ್ವರೂಪ

೧. ವ್ಯಕ್ತಿ ಚಿತ್ರಣ

೨. ವ್ಯಂಗ್ಯ, ವಿಡಂಬನೆ, ಹಾಸ್ಯ

೩. ಜೀವನ ದರ್ಶನ

೪. ಮಹಿಳಾ ದೃಷ್ಟಿಕೋನ

೫. ರಾಜಕೀಯ ವಿಡಂಬನೆ

೨೫

ಆಧುನಿಕ ಚುಟುಕು ಸಾಹಿತ್ಯ : ವೈವಿಧ್ಯತೆ ಮತ್ತು ಸ್ವರೂಪ

ಚುಟುಕುಗಳು ಆಧುನಿಕ ಸಾಹಿತ್ಯ ಪ್ರಕಾರದಲ್ಲಿ ಒಂದು ಮಹತ್ವದ ಪ್ರಕಾರವಾಗಿ ಪ್ರಚಾರ ಪಡೆದಿವೆ. ಕಿರಿಯದರಲ್ಲಿ ಹಿರಿದರ್ಥವನ್ನು ಸ್ವಾರಸ್ಯವಾಗಿ ಹೇಳುತ್ತವೆ. ಕನ್ನಡಿಯಲ್ಲಿ ಆನೆಯನ್ನು, ಬಿಂದುವಿನಲ್ಲಿ ಸಿಂಧುವನ್ನು ಹಿಡಿದಿಡುವ ಕಲಾತ್ಮಕತೆ ಚುಟಕು ಸಾಹಿತ್ಯಕ್ಕೆ ಇದೆ. ಎಸ್.ವಿ.ರಂಗಣ್ಣನವರು ಚುಟುಕು ಸಾಹಿತ್ಯವನ್ನು ಕುರಿತು "ಕುಳ್ಳಾದರೂ ರೂಪವತಿ ಹೆಣ್ಣಿನ ಹಾಗೆ" ಎಂದಿದ್ದಾರೆ.

ಚುಟುಕುಗಳಿಂದ ಕವಿಯು ಬದುಕಿದ ಕಾಲದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ಸ್ಥಿತಿಗತಿಗಳು ತಿಳಿಯುತ್ತವೆ. ಇವು ಒಂದೊಂದು ರಸದ ಗುಳಿಗೆಗಳಂತೆ ಇರುವುದರಿಂದ ಓದುಗರಿಗೆ ಆನಂದವನ್ನುಂಟು ಮಾಡುತ್ತವೆ. ದೀರ್ಘ ಕಾವ್ಯಗಳನ್ನು, ಗಂಭೀರ ಪದ್ಯಗಳನ್ನು ಓದಿ ಬೇಸರವಾದಾಗ ಇವುಗಳನ್ನು ಉಪ್ಪಿನ ಕಾಯಿಯಂತೆ ಚಪ್ಪರಿಸಬಹುದು. ಚುಟುಕುಗಳು ನಗಲಾರದವರನ್ನು ನಗಿಸುತ್ತವೆ. ಆಧುನಿಕ ಸಾಹಿತ್ಯದಲ್ಲಿ ಕವಿಗಳು ಚುಟುಕುಗಳನ್ನು ವ್ಯಾಪಕವಾಗಿ ಮತ್ತು ವೈವಿಧ್ಯಪೂರ್ಣವಾಗಿ ಬಳಸಿದ್ದಾರೆ.

ಚುಟುಕು ಎಂದರೆ ಸಣ್ಣದು, ಚಿಕ್ಕದು, ಇಲ್ಲಿ ಸಾಲುಗಳಿಗೆ ಮಹತ್ವವಿಲ್ಲ. ಗುಣಪ್ರಧಾನವಾದ ಆಶಯಕ್ಕೆ ಹೆಚ್ಚಿನ ಮಹತ್ವವಿದೆ. ಚುಟುಕುಗಳಿಗೆ ಪ್ರಮುಖವಾದದ್ದು ಶಬ್ದಗಳ ಸಂಖ್ಯೆಯಲ್ಲ, ಅವುಗಳಲ್ಲಿ ಅಡಗಿರುವ ಧ್ವನಿ ಶಕ್ತಿ, ಪ್ರತಿಭಾ ಜನ್ಯವಾದ ಚುಟುಕಿನಲ್ಲಿ ಒಂದೊಂದು ಮಾತು ಪ್ರತೀಯಮಾನವಾಗಿರುವುದು ಸಾಧ್ಯ. ಸರಸ್ವತಿಯ ಆಲಯದಲ್ಲಿ ಚುಟುಕು ಒಂದು ಚಿಕ್ಕ ಪ್ರಣತಿ. ನೆನಪಿನಂಗಳದಲ್ಲಿ ಸದಾ ಸುತ್ತಿ ಸುಳಿಯದೆ ಆವಿಯಾಗಿ ಇಂಗಿ ಹೋಗುವ ಮತ್ತು ಮೇಲೆ ತೇಲಿ ಹೋಗುವ ಕ್ಷಣಿಕಾನುಭವಗಳನ್ನು ಹಿಡಿದಿಡುವ ಸಾಧನವೇ ಚುಟುಕು. ಈ ನಿಟ್ಟಿನಲ್ಲಿ ದೀರ್ಘಕಾವ್ಯ ರಚಿಸುವ ವ್ಯವಧಾನ ಇಲ್ಲದಾಗಿ ಚುಟುಕು ಕಾವ್ಯದಿಂದ ಸಮಾಜವನ್ನು ಜಾಗ್ರತಿಗೊಳಿಸುವ ಸಂದರ್ಭ ಬಂದೊದಗಿದೆ. ಚುಟುಕು ಸಾಹಿತ್ಯದ ಮುಂದಿರುವ ಸವಾಲೆಂದರೆ ಅನಂತವನ್ನು ಅಂಗೈಯಲ್ಲಿ ಹಿಡಿದಿಡುವ ಸಾಹಸ, ಸಾಹಿತ್ಯ ಸಾಗರದ ಹೃದಯಾಳದಲ್ಲಿ ಗರ್ಭೀಕರಿಸಿಕೊಂಡಿರುವ ಮುತ್ತು ರತ್ನಗಳನ್ನು ಹೆಕ್ಕಿ ಕೊಡುವ ಕೆಲಸವಿದೆ.

ಹೊಸಗನ್ನಡದ ಚುಟುಕು ಸಾಹಿತ್ಯದ ಆರಂಭಕಾಲದಲ್ಲಿ ಜಿ.ಪಿ.ರಾಜರತ್ನಂ ರವರು 'ನೂರು ಪುಟಾಣಿಗಳು' ಎಂಬ ಚುಟುಕು ಸಂಕಲನವನ್ನು ಹೊರತಂದು ಈ ಸಾಹಿತ್ಯಕ್ಕೆ ದಾರಿದೀಪವಾಗಿದ್ದಾರೆ.

ನಂತರ ವಿ.ಜಿ.ಭಟ್ ರವರು ಚುಟುಕು ಎಂದು ಹೆಸರಿಸಿದರು. ಅನಂತರದಲ್ಲಿ ದಿನಕರ ದೇಸಾಯಿ, ಅಕ್ಬರ್ ಅಲಿ, ತೋಪಖಾನೆ ಚುಟುಕು ಪ್ರಕಾರವನ್ನು ಚುರುಕುಗೊಳಿಸಿದ್ದು ಕಂಡುಬರುತ್ತದೆ. ೧೯೬೦ರ ದಶಕದಲ್ಲಿ ಸ್ವಲ್ಪ ಸ್ಥಗಿತಗೊಂಡಿದ್ದ ಚುಟುಕು ಸಾಹಿತ್ಯ ಪುನಃ ೧೯೮೦ರ ದಶಕದಲ್ಲಿ ಚೇತರಿಸಿಕೊಂಡು ಚುಟುಕು ಸಾಹಿತ್ಯದ ಮೇರು ಪರ್ವತವನ್ನೇ ಸೃಷ್ಟಿಸಿತು. ಇದೊಂದು ಚಳುವಳಿಯ ಸ್ವರೂಪವನ್ನೇ ಪಡೆಯಿತು. ನವ್ಯದ ಸಂಕೀರ್ಣತೆ ಮತ್ತು ಉಪೇಕ್ಷೆ, ಬಂಡಾಯದ ಪೆಟ್ಟು, ದಲಿತರ ಸಿಟ್ಟು ಇವುಗಳಿಂದ ಗೊಂದಲಕ್ಕೊಳಗಾದವರು ಅನಿವಾರ್ಯವಾಗಿ ಚುಟುಕುಗಳತ್ತ ವಾಲಿದರು. ಕವಿ ತನಗೆ ತೋಚಿದ್ದನ್ನೆಲ್ಲ ಬರವಣಿಗೆಯ ರೂಪದಲ್ಲಿ ಗಂಡು-ಹೆಣ್ಣು, ಪ್ರೀತಿ-ಪ್ರೇಮ, ಗಂಡ-ಹೆಂಡತಿ, ಸುಖ-ದುಃಖ, ನೋವು-ನಲಿವು, ಮಳೆ-ಬೆಳೆ, ಸೂರ್ಯ ಚಂದ್ರ, ನಕ್ಷತ್ರ, ಆಕಾಶ ಭೂಮಿ, ಜ್ಞಾನ-ಅಜ್ಞಾನ, ಕಾವ್ಯ ವಿಮರ್ಶೆ, ಪ್ರಕೃತಿ ಪರಿಸರ ಹೀಗೆ ಅನೇಕ ವಿಚಾರಗಳನ್ನು ಪ್ರತಿಭಾ ಪಂಡಿತನಾದ ಚುಟುಕು ಕವಿ ಆಯ್ಕೆ ಮಾಡಿಕೊಂಡು ಈ ಪರಂಪರೆಯನ್ನು ಬೆಳೆಸಿದರು.

'ನೂರು ಪುಟಾಣಿ' ಆ ಸಂದರ್ಭದಲ್ಲಿ ಮಹತ್ವದ ಕೃತಿ, ಅದೊಂದು ಮೈಲುಗಲ್ಲು ಲಿಮಿರಿಕ್ ರೀತಿಯಲ್ಲಿ ಹೋಲುವ ಪದ್ಯಗಳನ್ನು ಬರೆದ ರಾಜರತ್ನಂರವರು ಚುಟುಕುಗಳೆಂದು ಕರೆದರು. ಇಲ್ಲಿ ಮಾತು ಮಿತವಾಗಿದ್ದು ಶೈಲಿ ಮೊನಚಾಗಿದೆ. ವಿಡಂಬನೆ ಮತ್ತು ಹಾಸ್ಯಕ್ಕೆ ಹೆಸರಾದ ಇವರು ಅನೇಕ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ.

ಇದರಲ್ಲಿ 'ತಗಣೆಯ ಕಾಟ' ಎನ್ನುವ ಚುಟುಕು ಹಾಸ್ಯ ಮಿಶ್ರಿತವಾಗಿದೆ. ತಗಣೆ ದೇವಾನು ದೇವತೆಗಳನ್ನು ಬಿಟ್ಟಿಲ್ಲವಂತೆ ಅಂತಹ ಆಧುನಿಕ ಚುಟುಕೊಂದು ಇಲ್ಲಿದೆ.

ಕಮಲೆ ಮಲಗುವಳು ಕಮಲದಲ್ಲಿ
ಹರ ಮಲಗುವನು ಹಿಮಾಲಯದಲ್ಲಿ
ಹರಿ ಮಲಗುವನು ಹಾಲ್ಗಡಲಲ್ಲಿ
ಏಕೆ, ತಗಣೆಯ ಶಂಕೆಯಲ್ಲಿ !

ಹೀಗೆ ಹಾಸ್ಯ ಪೂರಿತ ಈ ಚುಟುಕಿನಲ್ಲಿ ಪ್ರಾಸವು ಸ್ಪಷ್ಟವಾಗಿ ಕಂಡುಬರುತ್ತದೆ. ರಾಜರತ್ನಂ ಅವರ ಸ್ತ್ರೀಪರ ಕಾಳಜಿಗೆ, ಲೇಖನಿಯ ತೀಕ್ಷ್ಣತೆಗೆ ಇದೊಂದು ಒಳ್ಳೆಯ ನಿದರ್ಶನವಾಗಿದೆ. ಹೆಣ್ಣು ಅಡುಗೆ ಮನೆಗೆ ಸೀಮಿತ ಎನ್ನುವುದನ್ನು ತೋರಿಸುವ ಈ ಚುಟುಕುವಿನಲ್ಲಿ

ಹೊರಗೆ ಹೊರಟಿತು ಗಂಡು, ಸಿನಿಮಾ ಹೋಟೆಲ್ಲ ಬಿಲ್ಲು
ಮೂರುವರೆ ರೂಪಾಯಿ ಮೂವರೇ ಜನಕೆ!
ಮನೆಯಲುಳಿಯಿತು ಹೆಣ್ಣು; ಅದಕೆ ಬೀಸುವ ಕಲ್ಲು
ತಪ್ಪಿದರೆ ಒಲೆ, ಮುಸುರೆ, ಮೊರ, ಹಾರೆ, ಒನಕೆ!

ರಾಜರತ್ನಂರವರಂತೆ ಚುಟುಕುಗಳನ್ನು ವೈಶಿಷ್ಟ್ಯಪೂರ್ಣವಾಗಿ ರಚಿಸಿದ ಕವಿ ವಿ.ಜಿ.ಭಟ್ ೧೯೫೧ರಲ್ಲಿ ಪ್ರಕಟಗೊಂಡ ಇವರ 'ತುಂಟನ ಪದಗಳು' ಸಂಕಲನವು ಚುಟುಕದ ಕವನಗಳೊಟ್ಟಿಗೆ ಮತ್ತಷ್ಟು ಸ್ವತಂತ್ರ ರಚನೆಗಳನ್ನೊಳಗೊಂಡ, ಚುಚ್ಚುತ್ತ, ಕಚ್ಚುತ್ತ, ಕಚಗುಳಿಯಿಡುತ್ತ ಬಹುಕಾಲ ನೆನಪಿನಲ್ಲಿ ಉಳಿಯು ವಂತಾಗಿದೆ. ಇವರ ಚುಟುಕುಗಳು ಪ್ರಧಾನವಾಗಿ ವಿಡಂಬನಾತ್ಮವಾಗಿರುವಂಥವು ಅಲ್ಲದೆ ತೀರ ಹರಿತವಾಗಿರುವಂತಹವು.

ಕಡಲು ಉಪ್ಪಾಗಿರುವುದಕ್ಕೆ ವಿ.ಜಿ.ಭಟ್ಟರು ಕಾರಣ ಕೊಡುತ್ತಾರೆ. ಸ್ತ್ರೀಯ ಕಣ್ಣೀರ ಬದುಕಿಗೆ ತಣ್ಣಗೆ ಉರಿಯುತ್ತಾರೆ.

ಶೇಷಶಾಯಿಯ ಕಾಲನೊತ್ತುತ
ಬಳಲಿ ಲಕ್ಷ್ಮಿಯು ಅತ್ತಳು ! ಹಾಲಿನಾ
ಕಡಲನ್ನು ಕಹಿ ಕಹಿ ಉಪ್ಪು ಮಾಡಿಯೇ ಬಿಟ್ಟಳು !!

ವಿ.ಜಿ.ಭಟ್ಟರು ಮಂತ್ರಿಗಳ ಕಂಡರಿಸುವಲ್ಲಿ ಚಾಣಾಕ್ಷತನ ತೋರಿದ್ದಾರೆ.

ಕಳ್ಳರ ಎಡಕು-ಬಲಕು ಇರುವರು!
ಪೋಲೀಸರು ನೋಡು!
ಮಂತ್ರಿ-ಗಿಂತ್ರಿಗಳು ಇಳಿದಲ್ಲೆಲ್ಲ ಪೋಲೀಸರ ಬೀಡು!

ಹೀಗೆ ಹಲವಾರು ರಚನೆಗಳಿಂದ ವಿ.ಜಿ.ಭಟ್ ಚುಟುಕು ಪ್ರಕಾರಕ್ಕೆ ಮಹಾ ಪ್ರಾಣ ಒದಗಿಸಿದ ಇವರಲ್ಲಿ ಕಟಕಿ, ವಿಡಂಬನೆ, ಹಾಸ್ಯ, ಮೊನಚು, ಘಾಟು, ಖಾರ, ಚೊಗರು ಎಲ್ಲ ತುಂಬಿಕೊಟ್ಟವರಲ್ಲಿ ಭಟ್ಟರೆ, ಅಗ್ರಗಣ್ಯರು.

ಚುಟುಕುಗಳನ್ನು ಮಹಾ ಕವಿ ಕುವೆಂಪುರವರು ಲಘುವಾಗಿ ಕಂಡವರಲ್ಲ ಎಂಬುದನ್ನು ನಮ್ಮಲ್ಲಿ ಅನೇಕರು ಇನ್ನು ಗ್ರಹಿಸಿದಂತಿಲ್ಲ. ಕುವೆಂಪುರವರ 'ಮಂತ್ರಾಕ್ಷತೆ' ಚುಟುಕು ಸಂಕಲನಕ್ಕೆ ಕಿಡಿಕವನಗಳು ಎಂದು ಕರೆದಿದ್ದಾರೆ ಎನ್ನುವುದನ್ನು ನೋಡಿದರೆ ಚುಟುಕುಗಳ ಪ್ರಮುಖ ಗುಣವೇ ಕಿಡಿಕಾರುವುದು, ಕಿಡಿಯಷ್ಟೇ ಪ್ರಮಾಣದಲ್ಲಿ ಬಿಸಿಮುಟ್ಟಿಸುವುದು. ಕುವೆಂಪುರವರ ಅಭಿಪ್ರಾಯದಂತೆ "ಒಂದೊಂದು ಕವನವೂ ಒಂದೊಂದು ಕಿಡಿ, ಒಂದೊಂದು ಮಂತ್ರ! ಪ್ರತಿಯೊಂದು ಅಕ್ಷತವಾದದ್ದು. ಉದ್ಧಾರಕ್ಕೆ ಪೂರಕವಾದದ್ದು, ಆದುದರಿಂದಲೇ ಇಡೀ ಸಂಕಲನವೂ ಮಂತ್ರಾಕ್ಷತೆ" ಎಂದು ಚುಟುಕು ಸಾಹಿತ್ಯವನ್ನು ಅತ್ಯುನ್ನತ ಶಿಖರಕ್ಕೆ ಒಯ್ದಿದ್ದಾರೆ.

ಚುಟುಕು ಸಾಹಿತ್ಯ ಇಂದು ಸಮುದ್ರದಷ್ಟು ಆಳವಾದುದರಿಂದ ನನ್ನ ಅಧ್ಯಯನಕ್ಕೆ ಬೇಕಾದ ರೀತಿಯಲ್ಲಿ ಕೆಲವು ವಿಷಯಗಳನ್ನು ಮಾತ್ರ ಬಳಸಿಕೊಳ್ಳಲಾಗಿದೆ. ಚುಟುಕುಗಳಲ್ಲಿ ನಿರೂಪಿತವಾಗಿರುವ ವ್ಯಕ್ತಿ ಚಿತ್ರಣ, ರಾಜಕೀಯ, ವಿಡಂಬನೆ, ಹಾಸ್ಯ ಹಾಗೂ ಧಾರ್ಮಿಕ ವಿಚಾರ ಧಾರೆಗಳು ಜನರಿಗೆ

ಬೋಧಪ್ರದವಾಗಿದೆ. ಆಧುನಿಕ ಚುಟುಕುಗಳನ್ನು ಅವುಗಳ ಸ್ವರೂಪಕ್ಕೆ ತಕ್ಕಂತೆ ೧. ವ್ಯಕ್ತಿ ಚಿತ್ರಣ ೨. ವ್ಯಂಗ ವಿಡಂಬನೆ, ಹಾಸ್ಯ ೩. ಜೀವನ ದರ್ಶನ ೪. ಮಹಿಳಾ ದೃಷ್ಟಿಕೋನ ೫. ರಾಜಕೀಯ ವಿಡಂಬನೆಗಳೆಂದು ವಿಂಗಡಿಸಬಹುದು.

೧. ವ್ಯಕ್ತಿ ಚಿತ್ರಣ

ಆಧುನಿಕ ಚುಟುಕು ಸಾಹಿತ್ಯದಲ್ಲಿ ವ್ಯಕ್ತಿ ಚಿತ್ರಣಕ್ಕೆ ಮಹತ್ವದ ಸ್ಥಾನವಿದೆ. ಮಹಾನ್ ಚಿಂತಕರು ತತ್ವಜ್ಞಾನಿಗಳು ದಾರ್ಶನಿಕರು, ಸಮಾಜ ಚಿಂತಕರ ಜೀವನ ಮತ್ತು ಸಾಧನೆಗಳು ಈ ವಾಸ್ತವ ಜಗತ್ತಿಗೆ ತಿಳಿಸುವ ರೀತಿಯಲ್ಲಿ ಚಿತ್ರಿಸಿದ್ದಾರೆ. ಅವರಿದ್ದ ಕಾಲದಲ್ಲಿ ನ್ಯಾಯ, ನೀತಿ, ಧರ್ಮ ಇಂದು ಮೂಲೆ ಗುಂಪಾಗಿರುವುದು ಅಥವಾ ಅವರ ಆದರ್ಶಗಳು ಇಂದಿನ ಪೀಳಿಗೆಗೆ ಅವಶ್ಯ ಎಂದು ತಿಳಿಸುವ ಚುಟುಕುಗಳೂ ಇವೆ. ವ್ಯಂಗ್ಯವಾಗಿ ರಾಜಕಾರಣಿಗಳನ್ನು ಸಮಾಜ ಘಾತುಕರನ್ನು ಚಿತ್ರಿಸಿದ್ದಾರೆ. ರಾಜಕಾರಣಿಗಳು ಜನಸೇವಕರಾಗದೆ, ಜನನಾಯಕರಾಗಿದ್ದಾರೆ. ಇಂತಹ ವ್ಯಕ್ತಿಗಳನ್ನು ಗೇಲಿ ಮಾಡುವ ಮೂಲಕ ವ್ಯಕ್ತಿ ಚಿತ್ರಣ ನೀಡಿದ್ದಾರೆ.

ಚುಟುಕು ಕವಿಗಳು ವ್ಯಕ್ತಿಗಳನ್ನು ತೌಲನಿಕವಾಗಿ ಪ್ರತಿಮೆ- ರೂಪಕಗಳ ಮೂಲಕ ನೋಡುತ್ತಾರೆ. ಅಂತಹ ಒಂದು ಚುಟುಕು ಎಚ್.ಎ.ಭಿಕ್ಷಾವರ್ತಿ ಮಠ ಅವರದ್ದು.

ಸನ್ಯಾಸಿ ಬದುಕು
ಖಾಲಿ ದೋಸೆ
ಸಂಸಾರಿ ಬದುಕು
ಮಸಲಾ ದೋಸೆ
ಇವರಿಬ್ಬರ ಬದುಕು ಬರೀ
ತೂತಿನ ದೋಸೆ

ಇಲ್ಲಿ ಸನ್ಯಾಸಿಗಳಿಗೆ ವಿರಕ್ತಿ ಭಾವನೆ ಇರಬೇಕು. ಆದರೆ ಆಸೆ, ಕಾಮ, ಕ್ರೋಧ, ಮೋಹ, ಮದ, ಮತ್ಸರಗಳನ್ನು ಹೊಂದಿದ ಕೆಲವು ಸನ್ಯಾಸಿಗಳು ಸ್ವೇಚ್ಛಾಚಾರಿಗಳೂ, ದುರಾಚಾರಿಗಳು ಆದ ಅನೇಕ ರಾಜಕಾರಣಿಗಳು ಇವರು ನಡೆದದ್ದೇ ದಾರಿ. ಖಾದಿ ಮತ್ತು ಕಾವಿಧಾರಿಗಳು ಹೆಣ್ಣಿನ ಹಗರಣದಲ್ಲಿ ಸಿಲುಕಿದ್ದನ್ನು ನಾವು ಸಾಕಷ್ಟು ಕಂಡಿದ್ದೇವೆ. ಹಾಗಾಗಿ ಇವರಿಬ್ಬರ ಬದುಕು ಬರೀ ತೂತಿನ ದೋಸೆ. ಹೀಗೆ ವ್ಯಕ್ತಿಗಳ ಜೀವನ ಚಿತ್ರಣವನ್ನು ಹಾಸ್ಯ ಹಾಗೂ ವ್ಯಂಗ್ಯಗಳ ಮೂಲಕ ಬಿಂಬಿಸಲಾಗಿದೆ.

'ಚುಟುಕು ಬ್ರಹ್ಮ' ಎನಿಸಿಕೊಂಡಿರುವ ದಿನಕರ ದೇಸಾಯಿಯವರು ಶಿವರಾಮ ಕಾರಂತರನ್ನು ಕುರಿತು ಅರ್ಥಪೂರ್ಣವಾಗಿ ತಮ್ಮ ಒಂದು ಚುಟುಕಿನಲ್ಲಿ ಹೀಗೆ ಹೇಳಿದ್ದಾರೆ.

ಕಾದಂಬರಿಯ ಕುಡಿದು ಕಟ್ಟಿದನು ಗೆಜ್ಜೆ
ಕೋತಂಬರಿಯ ಹಿಡಿದು ಹಾಕಿದನು ಹೆಜ್ಜೆ
ಈ ರೀತಿ ಕಳೆದರೂ ಅರ್ಧ ಶತಮಾನ
ನಮ್ಮೊಳಗೆ ಮೂಡಿಲ್ಲ ದಮಡಿ ಅಭಿಮಾನ

ಈ ಚುಟುಕದಲ್ಲಿ ಕಾರಂತರ ಕಾದಂಬರಿಯ ಸ್ವರೂಪ, ಯಕ್ಷಗಾನದ ತಾಳಮದ್ದಳೆ, ಜೊತೆ ಜೊತೆಗೆ ಈ ನಾಡಿನ ಬಗ್ಗೆ ಇರುವ ಅಭಿಮಾನ ಸ್ವಾಗತಾರ್ಹವಾಗಿದೆ. ಅವರಿಗೆ ಇದ್ದ ಅಭಿಮಾನ ನಮ್ಮ ಜನರಿಗೆ ಕಾಸಿನಷ್ಟು ಇಲ್ಲವೆಂದು ಚುಟಕುಕಾರರು ಮರುಕಪಟ್ಟಿದ್ದಾರೆ. ಅದರಂತೆ ಶ್ರೀರಂಗರನ್ನು ಕುರಿತು,

ಜಹಗೀರ ಬಿಟ್ಟು ಕಲಿನಾನೇ ಶ್ರೀರಂಗ
ನನ್ನ ಅಂಗಳದೊಳಗೆ ನರನೆಂಬ ಮಂಗ
ಈ ಮಂಗನಿಗೆ ಹಾಕಿ ತರತರದ ವೇಷ
ಕಸರತ್ತು ಕಲಿಸಿದರೆ ನಮಗೆ ಸಂತೋಷ

ಈ ಚುಟುಕುವಿನಲ್ಲಿ ದೇಸಾಯಿಯವರು ಶ್ರೀರಂಗರ ನಾಟಕದ ಹಲವು ಆಯಾಮಗಳನ್ನು ಅರ್ಥಪೂರ್ಣವಾಗಿ ರೇಖಿಸಿದ್ದಾರೆ. ಏಕೀಕರಣಕ್ಕೆ ಶ್ರಮಿಸಿದ ಮುದವೀಡು ಕೃಷ್ಣರಾಯರನ್ನು ಕುರಿತ ಚುಟಕು ಹೀಗಿದೆ.

ನನ್ನ ಪರಿಚಯವುಂಟೇ? ನಾನೆ ಮುದವೀಡು
ಹಳಿ ತಪ್ಪಿ ಜಾರಿತ್ತು ಕನ್ನಡದ ಬೇರು
ಎತ್ತಿ ನಿಲ್ಲಿಸದೆ ಎನ್ನ ನಾವೆಲ್ಲ ಕೂಡಿ
ಮತ್ತು ಮುಗ್ಗರಿಸಿ ಬಿದ್ದಿವೆ ರೈಲುಗಾಡಿ

ಒಂದು ಸಾಂಸ್ಕೃತಿಕ ಸಂದರ್ಭದಲ್ಲಿ ಮುದವೀಡು ಕೃಷ್ಣರಾಯರದು ಮಹತ್ವದ ಹೆಸರು. ಕರ್ನಾಟಕದ ಏಕೀಕರಣಕ್ಕಾಗಿ ಅವರು ದುಡಿದ ರೀತಿ ಮುಂದಿನವರು ಆ ಪರಂಪರೆಯನ್ನು ಮುಂದುವರಿಸಲಿಲ್ಲ ಎಂಬ ವಿಷಾದದ ಛಾಯೆ ಈ ಚುಟುಕುನಲ್ಲಿದೆ. ಶಾಂತವೇರಿ ಗೋಪಾಲಗೌಡರರದು ಸಮತಾವಾದಿ ಸಮಾಜದಲ್ಲಿ ದೊಡ್ಡ ಹೆಸರು. ಅವರನ್ನು ಕುರಿತು ದೇಸಾಯಿಯವರ ಚುಟುಕು ಅರ್ಥಪೂರ್ಣವಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಗೋಪಾಲಗೌಡ
ಕಾಂಗ್ರೆಸನ್ನು ಹುರಿ ಹುರಿದು ಮಾಡಿದನು ಚಿವುಡಾ
ಪ್ರತಿಯೊಂದು ಜಿಲ್ಲೆಯಲಿ ಹೀಗಾದ ವಿನಃ
ಕುಸದ ಬೀಳದು ಕಾಳ ಸಂತೆಗಳ ಭವನ

ಈ ಚುಟುಕದಲ್ಲಿ ಗೋಪಾಲಗೌಡರ ವ್ಯಕ್ತಿತ್ವ ಅವರ ಭೂ ಹೋರಾಟವನ್ನು ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ. ಅದರಂತೆ ಬೇಂದ್ರೆಯವರ ಕವಿತೆಯನ್ನು ಕುರಿತು ಬರೆದ ಚುಟುಕು ಅರ್ಥಪೂರ್ಣವಾಗಿದೆ.

ಅಂಬಿಕಾತನಯ ದತ್ತರ ಕವಿತೆಯನ್ನು
ಓದಿದರೆ ಯಾವಾಗಲೂ ನಮಗೆ ಅಣ್ಣ
ಹೃದಯದಲಿ ಉರಿದೊಡೆ ಅನುಭವದ ಕೆಂಡ
ಒಂದೊಂದು ಅಗಳಿಗೂ ಒಂದೊಂದು ಬ್ರಹ್ಮಾಂಡ

ಜಾನಪದ ಮಟ್ಟುಗಳನ್ನು ಬಳಸಿಕೊಂಡ ಬೇಂದ್ರೆಯವರ ಕವಿತೆಗಳು ಹೃದಯಕ್ಕೆ ತಂಪನ್ನು, ಕಿವಿಗೆ ಇಂಪನ್ನು ತರುತ್ತದೆ. ಒಟ್ಟು ಅವರ ಕವಿತೆಗಳ ಸಾರಸಂಗ್ರಹವನ್ನೇ ಅದ್ಭುತವಾಗಿ ಚಿತ್ರಿಸಿದ್ದಾರೆ. ಇದರಂತೆ ದೇಸಾಯಿಯವರು 'ಗಾಂಧೀಜಿ', 'ಬ್ಲೇಕ್ ' ಕವಿ ಕುಮಾರವ್ಯಾಸ, ಪಂಪ ಇವರನ್ನು ಕುರಿತು ತುಂಬಾ ಸ್ವಾರಸ್ಯವಾಗಿ ಚಿತ್ರಿಸಿದ್ದಾರೆ.

ಚೌಪದಿಯ ರಚನೆಗೆ ಪ್ರೇರಣೆಯಾದ ಸರ್ವಜ್ಞರನ್ನು ದಿನಕರರು ಚೌಪದಿಯ ಮೂಲಕವೇ ಸ್ಮರಿಸುವ ಚುಟುಕು ಸುಂದರವಾಗಿದೆ.

"ಸರ್ವಜ್ಞ ಕವಿ ನೀ ಮೂಡಿಸಿದ ತ್ರಿಪದಿ
ನನ್ನ ಚೌಪದಿಗಳಿಗೆ ತೋರಿಸಿತು ಹಾದಿ
ನಿನ್ನ ಮಾತಿನ ಸೊಗಸು ಬರಲಿಲ್ಲ ನನಗೆ
ನೀನೊಬ್ಬನೆ ಸಾರ್ವಭೌಮ ಇದುವರೆಗೆ

ಇಂತಹ ವಿನಮ್ರತೆ ನಿಷ್ಪಕ್ಷಪಾತ ಗುಣ ಎಷ್ಟು ಜನ ಕವಿಗಳಿಗಿದೆ? ಇವರ ಚುಟುಕುಗಳು ಓದುಗರ ಮನಸ್ಸನ್ನು ತಟ್ಟುತ್ತವೆ.

ದೇಸಾಯಿಯವರಂತೆ ಎಚ್.ಎಸ್.ಕೆ ಅವರು ಮಹತ್ವದ ಚುಟುಕುಕಾರರು. ಅಭಿಮನ್ಯುವನ್ನು ಕುರಿತು ಬರೆದ ಚುಟುಕು ತುಂಬ ಮನೋಹರವಾಗಿದೆ.

ನಾನೊಬ್ಬ ಅಭಿಮನ್ಯು
ತಾಯಿಯ ಒಡಲಿನಿಂದ
ನೆಲದ ಮಡಿಲೊಳಗೆ
ಬಂದು ಬಿದ್ದಿದ್ದೇನೆ
ಏಳು ಸುತ್ತಿನ ಕೋಟೆ ನೇದುಕೊಂಡಿದ್ದೇನೆ
ರೇಷ್ಮೆಯ ಹುಳುವಿನ ಹಾಗೆ

ಎಚ್.ಎಸ್.ಕೆ. ಅವರು ಅಭಿಮನ್ಯುವಿನ ಸಿದ್ಧಿ ಸಾಹಸವನ್ನು ನಾಲ್ಕು ಸಾಲುಗಳಲ್ಲಿ ಅದ್ಭುತವಾಗಿ ಚಿತ್ರಿಸಿದ್ದಾರೆ. ಅಭಿಮನ್ಯು ಏಕಾಂಗಿಯಾಗಿ ಕೌರವರನ್ನು ಹತ್ತಿಕ್ಕಿದ್ದು ಏಳುಸುತ್ತಿನ ಚಕ್ರವ್ಯೂಹವನ್ನು ದಾಟಿದ್ದು ಕವಿಯು ರೇಷ್ಮೆ ಹುಳುವಿಗೆ ಹೋಲಿಸಿದ್ದಾರೆ. ಇದು ಆ ಬಾಲಕನ ಶೌರ್ಯವನ್ನು

ತೋರಿಸುತ್ತದೆ. ಎಚ್.ಎಸ್.ಕೆ ಅವರ ಮೂರು ಜನ ಆಚಾರ್ಯತ್ರಯರ ಬಗ್ಗೆಯೂ ಚುಟುಕು ಬರೆದಿದ್ದಾರೆ.

ಶಂಕರಾಚಾರ್ಯ ರಾಮಾನುಜಾಚಾರ್ಯ ಮಧ್ವಾಚಾರ್ಯ
ಈ ಮೂವರು ಆಚಾರ್ಯರು ಅಂದಿನ ಆ ದಿನದಿ,
ಭ್ರಷ್ಟಾಚಾರ್ಯ ಹಿಂಸಾಚಾರ್ಯ ಅತ್ಯಾಚಾರ
ಇವರೆ ಆಚಾರ್ಯರು ಇಂದು

ಎಚ್.ಎಸ್.ಕೆಯವರು ಅಂದಿನ ಸಾಮಾಜಿಕ ಮತ್ತು ಧಾರ್ಮಿಕ ವಿದ್ಯಮಾನದಲ್ಲಿ ಹೆಸರು ಮಾಡಿದ ಆ ಮೂವರು ಆಚಾರ್ಯರನ್ನು, ಆಚಾರ್ಯರ ಮಹತ್ವನ್ನು ಮೊದಲಿನ ಎರಡು ಸಾಲಿನಲ್ಲಿ ಹೇಳಿ ನಂತರದ ಸಾಲುಗಳಲ್ಲಿ ಇಂದಿನ ವಿಕೃತ ಸಮಾಜವನ್ನು ವ್ಯಂಗ್ಯವಾಡಿದ್ದಾರೆ. ನಮಗೆ ದೊರಕುವ ಚುಟುಕುಗಳ ಆಧಾರದ ಮೇಲೆ ಹೊಸಗನ್ನಡ ಚುಟುಕು ಸಾಹಿತ್ಯದ ಕೃಷಿಯನ್ನು ಮೊಟ್ಟ ಮೊದಲಿಗೆ ಮಾಡಿದ ಕೀರ್ತಿ ಜಿ.ಪಿ.ರಾಜರತ್ನಂ ಅವರಿಗೆ ಸಲ್ಲುತ್ತದೆ. ಅವರು ೧೯೪೦ರಲ್ಲಿ ತಮ್ಮ ಮುಕ್ತ ಸಂಕಲನವಾದ 'ನೂರು ಪುಟಾಣಿ'ಯನ್ನು ಪ್ರಕಟಿಸಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಈ ಪ್ರಕಾರ ಬೆಳೆಯಲು ಅಂಕುರಾರ್ಪಣ ಮಾಡಿದರು. ಈ ಕೃತಿಯೊಂದು ಮಹತ್ವದ ಮೈಲುಗಲ್ಲು. ಅವರು ಇಂಗ್ಲಿಷಿನ ಲಿಮೆರಿಕ್ ಎನ್ನುವ ಪದ್ಯಗಳನ್ನು ಹೋಲುವಂತಹ ಹನಿಗವನಗಳನ್ನು ಬರೆದು ಅವನ್ನು "ಚುಟುಕ"ಗಳೆಂದು ಕರೆದರು. ಅನಂತರ ಪುಟಾಣಿಗಳೆಂದು ಕರೆದು "ನೂರು ಪುಟಾಣಿ" ಎಂಬ ಸಂಕಲನವನ್ನು ಪ್ರಕಟಿಸಿದರು. ಇದರಲ್ಲಿ ಅನೇಕ ಸಂಸ್ಕೃತ ಸುಭಾಷಿತಗಳ ಅನುವಾದಗಳಿವೆ.

ಕರ್ನಾಟಕದ ಜನರ ಗುಣ, ಅವರ ಅತಿಯಾದ ಔದಾರ್ಯ, ಅದರಿಂದಾಗುವ ಕೇಡನ್ನು ಒಂದು ಚುಟುಕದಲ್ಲಿ ಮಾರ್ಮಿಕವಾಗಿ ಹೇಳಿದ್ದಾರೆ. ಇದು ಅವರ ಸ್ವಂತ ರಚನೆ.

ಜನರು ಕರ್ನಾಟಕದವರು ಬಲು
ಘನರು; ದಾನದ ದೃಢ ಪದ್ಮಾಸನರು;
ಪರಿಹಿತಕಾಗಿ ಜೀವನತೇದ ವಾಮನರು
ವಿನಯದಿಂದ್ಯೆತರಲಿ, ಮೇಣ್ ಕಡು
ಮುನಿಸನಿಂದಲೆ ಬರಲಿ ಕರದೊಳ
ಮನೆಯ ಸರ್ವಸ್ವವನ್ನು ಸುರಿವರು ಕರ್ಣನಾಟಕರು

ರಾಜರತ್ನಂ ಅವರು ನಾಡು, ನುಡಿ, ನಾಡಿಗರು ಇವರ ಬಗ್ಗೆ ಆರು ಸಾಲಿನ ಚುಟುಕುದಲ್ಲಿ ಅರ್ಥಪೂರ್ಣವಾಗಿ ಹೇಳಿದ್ದಾರೆ. ಸ.ಪ.ಕೃಷ್ಣಕುಮಾರ ಅವರದು ಚುಟುಕು ಸಾಹಿತ್ಯದಲ್ಲಿ ಮಹತ್ವದ ಹೆಸರು. ಹೆಣ್ಣಿನ ಬಗ್ಗೆ ಅವರು ಬರೆದ ಚುಟುಕು ಅರ್ಥಪೂರ್ಣವಾಗಿದೆ.

ಈಕೆ ಒಮ್ಮೊಮ್ಮೆ ಅಪರ್ಣೆ;
ಉಳಿದಂತೆ ಋತುಪರ್ಣೆ;
ಅನ್ನಪೂರ್ಣೆ
ಒಟ್ಟಿನಲ್ಲಿ ಅಣ್ಣದಂತೆ
ನಿತ್ಯ ನೂತನೆ;

ಹೆಣ್ಣು ಸಂಸಾರದ ಕಣ್ಣು. ಈಕೆ ಸಂಸಾರದ ಜೊತೆಗೆ ಅರ್ಪಣ ಗೊಂಡಿರುತ್ತಾಳೆ. ಅವಳು ಭೂಮಿಯಂತೆ ನಿತ್ಯ ನೂತನವೂ ಹೌದು ಎಂದು ಹೆಣ್ಣಿನ ಸ್ವಭಾವವನ್ನು ಹೇಳಿದ್ದಾರೆ. ಅದರಂತೆ ಸಿ.ಪಿಕೆ. ಅವರು ಗಾಂಧೀಜಿ ಅವರನ್ನು ಗಂಧಕ್ಕೆ ಹೋಲಿಸಿ ಸೊಗಸಾದ ಚುಟುಕನ್ನು ರಚಿಸಿದ್ದಾರೆ.

ರಾಜಧಾನಿಯ
ಮಹಾತ್ಮಗಾಂಧಿ
ರಸ್ತೆಯ ಸುಗಂಧಿ
ಯರ ಬಗೆಗೆ
ಬರೆದಿದ್ದಾರೆ ಅನೇಕರು ಸರಿ
ಆದರೆ ಉಳಿದೆಡೆಯ
ಮಾನಿನಿಯರೇನು ಮತ್ಸ್ಯ
ಗಂಧಿಯರೇ?

ಗಾಂಧೀಜಿಯವರ ವ್ಯಕ್ತಿತ್ವವೆಂದರೆ ಶ್ರೀಗಂಧದಂತೆ ತಾನು ತೇದುಕೊಂಡರೂ ಇತರರಿಗೆ ಸುವಾಸನೆಯನ್ನು ಕೊಡುವಂತದದ್ದು. ಆ ಭಾವನೆ ಈ ಚುಟುಕುದಲ್ಲಿ ವ್ಯಕ್ತವಾಗಿದೆ. ತೀ.ನಂ.ಶ್ರೀಯವರು ಬಹುದೊಡ್ಡ ವಿದ್ವಾಂಸರಾದಂತೆ ಉತ್ತಮ ಚುಟುಕುಕಾರರು ಹೌದು. ಅವರ ಕಾವ್ಯ ಶಕ್ತಿಯ ಒಂದು ಮುಖ ಅವರ ಚುಟುಕುಗಳಲ್ಲಿ ಪ್ರತಿಬಿಂಬಿತವಾಗಿದೆ. ಒಬ್ಬ ಶ್ರೇಷ್ಠ ವ್ಯಕ್ತಿಯನ್ನು ಕುರಿತು ಅವರ ಒಂದು ಚುಟುಕು ಹೀಗಿದೆ.

ಓ ಓ ಕೋಗಿಲೆ ಮೌನವ ಬಿಟ್ಟು
ಪಂಚಮಗಲಿ ತುಸು ರಾಗವನೆತ್ತು
ಇರದಿರೆ ನಿನ್ನದಾರರಿಯುವರೈ
ಕಾಗೆವಿಂಡು ಕವಿದೀ ಮಾವಿನಲಿ

ಇದರಲ್ಲಿ ಒಬ್ಬ ಒಳ್ಳೆಯ ಕವಿಗೆ ಒಂದು ಒಳ್ಳೆಯ ಕಿವಿ ಮಾತು ಹೇಳಲ್ಪಟ್ಟಿದೆ. ಒಳ್ಳೆಯ ಕವಿಯಾದವನು ಎಲೆಯ ಮರೆಯ ಕಾಯಿಯಂತಿರಬಾರದು, ಅವನು ದನಿಯೆತ್ತಿ ಹಾಡಬೇಕು, ಯಾರೂ ಅವನನ್ನು ಗುರಿತಿಸಲು ಇಚ್ಛಿಸದಿರುವಾಗ ಅವನು ತನ್ನನ್ನು ತಾನೇ ಪ್ರಪಂಚಕ್ಕೆ ಪರಿಚಯಿಸಿಕೊಳ್ಳಬೇಕು.

ಇಲ್ಲವಾದರೆ ಕುಕವಿಗಳು ತುಂಬಿರುವ ಈ ಜಗದಲ್ಲಿ ಅವನು ಬಾಳಲಾರ ಎಂಬ ಧ್ವನಿಯಿದೆ. ದೇ.ಜವರೇಗೌಡರು ಉತ್ತಮ ಗದ್ಯ ಬರಹಗಾರರಾದಂತೆ ಉತ್ತಮ ಚುಟುಕುಗಳನ್ನು ರಚಿಸಿದ್ದಾರೆ. ತಮಗೆ ವಿದ್ಯೆಯನ್ನು ಕಲಿಸಿದ ವಿದ್ಯಾ ಗುರುಗಳಾದ ಕುವೆಂಪು ಅವರನ್ನು ಕುರಿತು ಅವರು ಬರೆದ ಚುಟುಕುಗಳು ಅರ್ಥಪೂರ್ಣವಾಗಿದೆ.

ಏಸು ಮಹಮದ ಬುದ್ಧ ಬಸವೇಶ ಚೈತನ್ಯ
ಮಾಸದಿಹ ಹೆಸರಾಂತ ರಾಮಕೃಷ್ಣ ಗುರು ಯತಿ
ಭಾಸುರರ ಕಾಂಚಿನಲ್ಲಿ ಕುವೆಂಪು ಗುರುವಿನಲಿ
ಏಸು ಧನ್ಯನೋ ನಾನು ಮರೆಯ ಮಗಳೆ

ಇನ್ನೊಂದರಲ್ಲಿ ಗುರುವಿನ ಮಹತ್ವವನ್ನು ಕುರಿತಾಗಿ

ಮನುಜ ಮತ ವಿಶ್ವಪಥ ಸರ್ವೋದಯ ಸಮಂತು
ವಿನುತವರ ಪೂರ್ಣ ದೃಷ್ಟಿಯುವಂತೆ ಸಮನ್ವಯ
ಮನು ಕ್ರಮದಿನವು ಪಂಚಮಂತ್ರಂ ದಿಟಂ
ಮನು ಕುಲಕೆ ತಾರಕಂ ಕೇಳು ಮಗಳೆ

ಜವರೇಗೌಡರು ಕುವೆಂಪುರವರ ವ್ಯಕ್ತಿತ್ವವನ್ನು ಅರ್ಥಪೂರ್ಣವಾಗಿ ರೇಖಿಸಿದ್ದಾರೆ. ಅವರ ಚುಟುಕುಗಳಲ್ಲಿ ಕಲ್ಪನೆ ಗರಿಗೆದರಿದೆ ನಿರೂಪನಾಕ್ರಮ ಮಧುರವಾಗಿದೆ. ದೇ.ಜ.ಗೌ.ರವರು ಮಹಾತ್ಮರ ಹೆಸರನ್ನು ಇಂದಿನ ಪೀಳಿಗೆಗೆ ಕರೆದು ಅವಮಾನಗೊಳಿಸುತ್ತಿದ್ದಾರೆ. ಅವರ ಹೆಸರನ್ನು ಕರೆದಾಕ್ಷಣ ಅಂದಿನ ಪುಣ್ಯಾತ್ಮರಾಗಲು ಸಾಧ್ಯವಿಲ್ಲ. ಅಂದಿನ ವ್ಯಕ್ತಿಗಳೇ ಬೇರೆ. ಇಂದಿನವರೇ ಬೇರೆ ಎನ್ನುವುದನ್ನ ವಿಡಂಬನಾತ್ಮಕವಾಗಿ ತಿಳಿಸಿದ್ದಾರೆ.

ಹರಿಹರರ ಹೆಸರು ಹೊತ್ತವರೆಲ್ಲ ಸುರರಲ್ಲ
ಸರಿ ಸಮನೆ ಗಾಂಧೀಜಿಯವರ ಹೆಸರು ಪಡೆದವರು
ಬರಿನಟರು ರಾಕ್ಷಸರು ಹುಸಿಹೆಸರು ಮರುಳಾಗ
ದಿರು ನಂಬದಿರು ರೆತವರವರು ಮಗಳೆ

ಗಾಂಧೀಜಿ ಎಂದು ನಾಮ ಹೊತ್ತವರೆಲ್ಲ ದೇಶಕ್ಕೆ ಒಳ್ಳೆಯದನ್ನು ಮಾಡುತ್ತಾರೆಂದು ನಂಬಿದರೆ ಮೂರ್ಖತನವಾದೀತು. ಅಂದು ಸತ್ಯ ಹೇಳಿದ ಗಾಂಧೀ ಇಂದು ಸುಳ್ಳಿನ ಸಂತೆಯವರೇ ಜಾಸ್ತಿ ಇದ್ದಾರೆ ಎಂದು ವ್ಯಂಗ್ಯವಾಡಿದ್ದಾರೆ. ವ್ಯಕ್ತಿಗಳ ಚಿತ್ರಣವನ್ನು ಕವಿಗಳು ನೀಡುವಾಗ ಎಂಥೆಂಥವರು ಈ ಸಮಾಜದಲ್ಲಿರುವರು ಎನ್ನುವುದನ್ನು ಸ್ಪಷ್ಟಪಡಿಸುವುದಲ್ಲದೆ ಸ್ವದೇಶಿ ಉಡುಪುಗಳಿಗೆ ಮಹತ್ವ ಕೊಟ್ಟವರು ಗಾಂಧೀಜಿ. ಖಾದಿಗೆ ಅಂದು ಇದ್ದ ಬೆಲೆ ಇಂದು ಖಾದಿ ಎಂದರೆ ಕೆಂಡವಾಗುವರು. ಖಾದಿ ತೊಟ್ಟ ಹಾದಿ ಬಿಟ್ಟ ಎನ್ನುವಂತಾಗಿದೆ ಎನ್ನುವುದನ್ನು ಈ ಚುಟುಕುವಿನಲ್ಲಿ ಅರ್ಥೈಸಿಕೊಳ್ಳಬಹುದು.

ನಂಬದಿರುವ ಖಾದಿಯನು ಗಾಂಧಿಯನು ನೆನೆನೆದು
ನಂಬದಿರು ಕಾವಿಯನು ವಿವೇಕರನು ನೆನೆದು
ನಂಬದಿರು ಆರ್ಚಕರನು ಪರಮಹಂಸರ ನೆನೆದು
ನಂಬು ನಿನ್ನನೆ ಮುಕ್ತಿಯದುವೆ ಮಗಳೆ

ಅಂದು ಪರಮಹಂಸರು ತ್ಯಾಗ, ವೈರಾಗ್ಯ ಇಂದಿನವರಿಗೆಲ್ಲಿ ಬರಬೇಕು. ಅಂತವರ ಹೆಸರೇಳಿಕೊಂಡು ಬದುಕುವ ವ್ಯಕ್ತಿಗಳನ್ನು ಕುರಿತು ವ್ಯಂಗ್ಯವಾಡಿದ್ದಾರೆ.

ಹೆಚ್. ಡುಂಡಿರಾಜ್ ಅವರದು ಆಧುನಿಕ ಚುಟುಕು ಸಾಹಿತ್ಯದಲ್ಲಿ ಎದ್ದು ಕಾಣುವ ಹೆಸರು, ಶ್ರೀಯುತರು ಹಲವಾರು ವ್ಯಕ್ತಿ ಚಿತ್ರಣಗಳನ್ನು ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ. ಚುಟುಕು ಸಾಹಿತ್ಯಕ್ಕೆ ಮೆರಗು ಕೊಟ್ಟ ಅದ್ವಿತೀಯರಾದ ದಿನಕರ, ಬಿಳಿಗಿರಿ, ವಿ.ಜಿ.ಭಟ್ಟರನ್ನು ಕುರಿತಾಗಿ ಬರೆದ ಚುಟುಕವಿನಲ್ಲಿ

ಚುಟುಕು ನೀರನ ಗುಳ್ಳೆಯಲ್ಲ
ಕಡಲಿನಾಳಕೆ ಮುಳುಗಿರಿ
ಅಲ್ಲಿ ಸಿಗುವುದು ಮುತ್ತು
ದಿನಕರ, ವಿ.ಜಿ.ಭಟ್ಟ, ಬಿಳಿಗಿರಿ

ಚುಟುಕು ಸಾಹಿತ್ಯಕ್ಕೆ ಅಗ್ರಗಣ್ಯರಾದವರನ್ನು ಈ ರೀತಿ ಹೇಳಿದರೆ ನಮ್ಮ ರಾಜ್ಯದ ಮಾಜಿ ಮುಖ್ಯಮಂತ್ರಿಯವರನ್ನು ಹಾಸ್ಯಮಯವಾಗಿ ವರ್ಣಿಸಿದ ರೀತಿ ಇಲ್ಲಿದೆ.

ಪಟೇಲರಿಗೆ
ಪಾಠ ಕಲಿಸಿದ
ಚನ್ನಗಿರಿ
ಇನ್ನಾದರೂ
ಮನೆಯಲ್ಲಿ
ಮಜ್ಜಿಗೆ ಕುಡಿಯುತ್ತಾ
ಚೆನ್ನಾಗಿರಿ

ಪಟೇಲರು ಚುನಾವಣೆಯಲ್ಲಿ ಚನ್ನಗಿರಿ ಕ್ಷೇತ್ರದಿಂದ ಸೋತಾಗ ಈ ಚುಟುಕು ರೂಪುಗೊಂಡಿದೆ. ಚನ್ನಗಿರಿ ಚನ್ನಾಗಿರಿ ಈ ಪ್ರಾಣಿಗಳು ಸಹಿತ ವಿದ್ವಾಂಸರ ಗಮನ ಸೆಳೆಯುತ್ತವೆ. ಅದರಂತೆ ಕಾರಂತ, ಕಾರಂತ-೬೦ ಕುರಿತು ಚುಟುಕುಗಳು ಅಷ್ಟೇ ಮಾರ್ಮಿಕವಾಗಿವೆ.

ಗೆಜ್ಜೆ ಕಂಡರೆ ಈಗಲೂ
ಥಕಥೈ ಕುಣಿಯುವ

ಕಾರಂತರು
ತರು ಅಲ್ಲ ಲತೆ
ಇವರಿಗೆ ತೊಂಬತ್ತೆ
ಅಲ್ಲ ಅಲ್ಲ
ಇಪ್ಪತ್ತೆ ಒಪುತ್ತೆ

ಕಾರಂತರು ಯಾವಾಗಲೂ ಕ್ರಿಯಾಶೀಲರು ೬೦ರ ಇಳಿವಯಸ್ಸಿನಲ್ಲಿಯೂ ಗೆಜ್ಜೆ ಕಟ್ಟಿ ಕುಣಿಯುತ್ತಿದ್ದಾಗ ಇವರು ಇಪ್ಪತ್ತು ವಯಸ್ಸಿನ ಇಳಿವಯಸ್ಸಿನವರ ಹಾಗೆ ಕಾಣುತ್ತಾರೆಂದು ಹೇಳಿರುವುದು ಸೂಕ್ತವಾಗಿದೆ. ೬೦ರ ಅಂಚಿನಲ್ಲಿನ ಕಾರಂತರ ಸ್ವಭಾವವನ್ನು ಚುಟುಕುದಲ್ಲಿ ಹೀಗೆ ಅಭಿವ್ಯಕ್ತಿಸಿದ್ದಾರೆ.

ನಡೆ ನುಡಿ ನೇರ
ಎಂದಿನಂತೆ ಖಾರ
ತೊಂಬತ್ತರಲ್ಲೂ
ಬತ್ತದ ಸಾರ
ಕಾರಂತರದ್ದು
ನಮಗೋ?
ನಲವತ್ತರಲ್ಲಿ
ಎಲ್ಲವೂ ರದ್ದು!

ಕಾರಂತರು ನಿಷ್ಠುರವಾದಿ ಸಮಾಜ ಮುಖಿ ಚಿಂತನೆಯುಳ್ಳವರು. ನಮಗೆ ಯಾವುದೂ ಇಲ್ಲ ಅವಕಾಶವಾದಿಗಳು ಎಂಬ ವ್ಯಂಗ್ಯ ಇಲ್ಲಿ ವ್ಯಕ್ತವಾಗಿದೆ. ಡುಂಡಿರಾಜ್ ಅವರು ಗೋಕಾಕರ ಬಗ್ಗೆ ಅಭಿಮಾನ ಪೂರಕವಾಗಿ ಬರೆದ ಚುಟುಕು ಹೀಗಿದೆ.

ಇಷ್ಟು ದಿನ ಹೇಳುತ್ತಿದ್ದೆನು
ಮಾಸ್ತಿ ಕನ್ನಡದ ಆಸ್ತಿ
ಇನ್ನು ಮುಂದೆ ಸೇರಿಸಬಹುದು
ಗೋಕಾಕ
ಕನ್ನಡದ ಪೀಕಾಕ

ಇಲ್ಲಿ ಗೋಕಾಕ ವ್ಯಕ್ತಿಯು ಆದರಣೀಯವಾಗಿ, ಹಾಸ್ಯಮಯವಾಗಿ ರೂಪುಗೊಂಡಂತೆ ಅವರ ಅಂತರ ರಾಷ್ಟ್ರೀಯ ತಿಳುವಳಿಕೆಯೂ ಸೂಕ್ಷ್ಮವಾಗಿ ಹೇಳಲ್ಪಟ್ಟಿದೆ. ಅದರಂತೆ ಗಾಂಧಿವಾದ ''ಸುಬ್ರಾಯ ಚೊಕ್ಕಾಡಿ'', ''ಕೈ'', ''ದ್ರಾವಿಡ್'' ಇವರ ಬಗೆಯೂ ತುಸು ಅರ್ಥಪೂರ್ಣ ಚುಟುಕುಗಳನ್ನು ಡುಂಡಿರಾಜರು ರಚಿಸಿದ್ದಾರೆ. ಚುಟುಕು ರಚನೆಯಲ್ಲಿ ಸಿದ್ಧ ಹಸ್ತರಾಗಿ ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯನ್ನು

ಡುಂಡಿರಾಜರು ನೀಡಿದ್ದಾರೆ. ಎಂ. ಅಕಬರ್ ಅಲಿ ಅವರ ಅನುಭವದ ಸಾರವನ್ನು ಅವರ ಚುಟಕುಗಳಲ್ಲಿ ತುಂಬಿದ್ದಾರೆ. ಕೆಲವೊಂದನ್ನು ಗಮನಿಸಬಹುದು. ಮಗುವಿನ ನಗುವನ್ನು ಕುರಿತು ಬರೆಯುತ್ತ.

ಮುದ್ದು ಮಗುವಿನ ಮೊಗದಿ
ಬಿಂಬಿಸುವ ದಗೆಯು
ಏಸು ಮೂರ್ತಿಯ ಎದುರು
ಮೊಂಬತ್ತಿಯ ಬಗೆಯು

ಮಗುವಿನ ಮುದ್ದು ನಗುವನ್ನು ಏಸು ಮೂರ್ತಿಯ ಎದುರು ನಿಲ್ಲಿಸಿದ ಮೇಣದ ಬತ್ತಿಗೆ ಹೋಲಿಸಿದ್ದು ಅರ್ಥ ಪೂರ್ಣವಾಗಿದೆ. ಗಾಂಧಿಯನ್ನು ಒಂದು ಪ್ರತಿಮೆಯಾಗಿ ಹೋಲಿಸಿ ಬರೆದ ಚುಟುಕುಗಳು ಹೀಗಿವೆ.

೧. ಸೊಳ್ಳೆಯ ಕೊಲ್ಲದೆ ಸುಮ್ಮನೇಕೆ ಇದೆ
ನಮ್ಮನಗರ ಸಭೆ? ಎ.ಸಿ.ಬೆಪ್ಪ
ಕೊಳಕವೆಂದದ್ಯೆ ನಗರ ಪಿತಾಮಹ
ಗಾಂಧಿವಾದಿಯಾಗಿಹನಪ್ಪ

೨. ಗಾಂಧಿಯನ್ನು ಅನುಸರಿಸಿ ಬಿಳಿಯ ಬಟ್ಟೆಯಧರಿಸಿ
ಸರಳತೆಯ ಸಾಕಾರ ಮೂರ್ತಿಯಾದ
ಇರುವ ಬಂಗ್ಲೆಗೆ ಕುಟೀರವೆಂದು ಹೆಸರನ್ನಿಟ್ಟು
ತನ್ನ ಗಾಂಧೀ ಭಕ್ತಿಯನ್ನು ಮೆರೆಸಿದ

ಡೋಂಗಿವಾದಿಗಳು ಲಂಪಟರು ಗಾಂಧಿ ಹೆಸರನ್ನು ಬಳಸಿಕೊಂಡು ಸೋಗು ಹಾಕುತ್ತಾರೆ. ತಮ್ಮ ಭವ್ಯ ಬಂಗ್ಲೆಗೆ ಕುಟೀರ ಎಂಬ ಹೆಸರನ್ನಿಟ್ಟು ಗಾಂಧಿ ಭಕ್ತಿಯನ್ನು ತೋರಿಸುತ್ತಾರೆ. ಇಂತಹವರ ವಿರುದ್ಧ ಅಕಬರ ಅಲಿ ಅವರು ಹಾಸ್ಯ ಮಾಡಿದ್ದಾರೆ. ಅದರಂತೆ ಬುದ್ಧನ ಬಗ್ಗೆ ಬರೆಯುತ್ತ.

ಜಗವೆಲ್ಲ ಮಲಗಿರಲು
ಇವನೊಬ್ಬ ಎದ್ದ
ಲೈಟರಿದ ಕಾರೇರಿ
ಕಾಡಿನೆಡೆ ನೆಡೆದ
ತಪಗೈದು ಕಪ್ಪು ಹಣ
ಸಾಮ್ರಾಜ್ಯ ಗೆದ್ದ

ಗೌತಮ ಬುದ್ಧನ ಜೀವನ ದರ್ಶನವನ್ನು ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ. ಕವಿಯು ತನ್ನ ಜೀವಮಾನವನ್ನು ಸಮುದ್ರಯಾನಕ್ಕೆ ಹೋಲಿಸಿ ವ್ಯಕ್ತಿಯ ಸಮಾಜೀಕರಣವನ್ನು ಬಹು ಸುಂದರವಾಗಿ

ಹೋಲಿಸಿದ್ದಾನೆ. ಮಹಿಳಾ ಚುಟುಕು ಗಾರ್ತಿಯರಲ್ಲಿ ಬಿ.ಟಿ ಲಲಿತಾ ನಾಯಕರು ತುಂಬ ಮುಖ್ಯರಾಗಿದ್ದಾರೆ. ಅವರು ವ್ಯಕ್ತಿ ಚಿತ್ರಣದ ಚುಟುಕುಗಳು ಹಾಸ್ಯ ವಿಡಂಬನೆಯಿಂದ ಕೂಡಿದೆ. ಅವುಗಳಲ್ಲಿ ಕೆಲವು ಹೀಗಿವೆ.

೧. ನಕಲಿ ಗಾಂಧಿಗಳ ಸಂತೆಯಲ್ಲಿ
ಅಸಲಿ ಗಾಂದಿಯು ಗಾಯಬ್
ಹುಡುಕಾಡಲೇ ಬೇಕು
ಬರಲಿ ಅಕ್ಟೋಬರ್

೨ ಗಾಂಧಿ ನಾಡಿನಲ್ಲಿ ಭೂಮಿ ಕಂಪಿಸಿತು ಏಕೆಂದರೆ
ಗೋಡ್ಸೆ ಬಂದಂತೆ ಅದಕೆ
ಕನಸು ಬಿತ್ತು

ತುಂಬ ಅರ್ಥಗರ್ಭಿತ ಚುಟುಕುಗಳು ಇಂದಿನ ಡಾಂಭಿಕ ಜಗತ್ತಿನಲ್ಲಿ ಅಸಲಿ ಗಾಂಧಿಗಳು ಬದಲಿಗೆ ನಕಲಿತನದ ನಕಲಿ ಗಾಂಧಿಗಳೇ ಹೆಚ್ಚು ಅಂತಹವರ ಟೊಳ್ಳುತನದ ವಿರುದ್ಧ ಲೇಖಕಿಯರು ಎಚ್ಚರ ನೀಡಿದ್ದಾರೆ.

ಕನ್ನಡ ಚುಟುಕು ಸಾಹಿತ್ಯದಲ್ಲಿ ಬಿ.ಆರ್ .ಲಕ್ಷ್ಮಣರಾವ್ ಅವರದು ಇನ್ನೊಂದು ದೊಡ್ಡ ಹೆಸರು ಕೌಟುಂಬಿಕ ವಲಯದ ಫಲವಾರು ವ್ಯಕ್ತಿ ಚಿತ್ರಣಗಳನ್ನು ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ. ವ್ಯಕ್ತಿಗಳ ಲಾಭದ ಬೆಡಗನ್ನು ಚಿತ್ರಿಸಿರುವ ರೀತಿ ಇನ್ನೊಂದು ವಲಯ. ಅವುಗಳಲ್ಲಿ ಕೆಲವನ್ನು ಹೀಗೆ ಕಲೆ ಹಾಕಬಹುದು.

"ಗುಟ್ಟು"

೧. ಕಪಿಲ್ ದೇವನ ಜುಟ್ಟು
ಗೊತ್ತೇ ಅದರ ಗುಟ್ಟು?
ಜುಟ್ಟಿನ ಕೂದಲು ಬಿಟ್ಟು
ಅವನು ಗಳಿಸಿದ ವಿಕಟ್ಟು

"ಏಕಲವ್ಯ"

೨. ನಮ್ಮ ಹುಡುಗ ಏಕಲವ್ಯ
ಟಿ.ವಿ. ಅವನ ದ್ರೋಣ
ಗುರುವಿಗಾಗಿ ಹೆಬ್ಬೆಟ್ಟೇನು?
ಕೊಡಲು ಸಿದ್ಧ ಪ್ರಾಣ

"ಏಕೆ"

೩. ಮೌನಿಯಲ್ಲಿ ಸಲೀಸಲ್ಲ

ಮೋನಿಕಾ ಸೇಲೀಸ್

ಏಕೆ ನಿನಗೆ ಈ ಹೆಸರು?

ಹೇಳುವೆಯಾ ಪ್ಲೀಸ್ ?

ಮನುಷ್ಯನ ಮನಸ್ಸು ಎಂದರೇನು? ಎಂಬುದರ ಬಗ್ಗೆ ಕವಿ ಈ ಚುಟುಕುಗಳಲ್ಲಿ ವಿಶ್ಲೇಷಣೆ ಮಾಡಿದ್ದಾನೆ. ಅದಕ್ಕೆ ಬೆಲೆ ಎಂಬುದೇ ಇಲ್ಲ. ನಿಶ್ಚಲತೆ ಇಲ್ಲ. ಬಹುಶಃ ಅದರಷ್ಟು ಚಂಚಲವಾದುದು ಮತ್ತೊಂದಿಲ್ಲ. ಹಾಗೆಯೇ ಈ ಪ್ರಾಪಂಚಿಕ ಸುಖದ ಚಿಂತೆಯೆಂಬ ಹಾವಸೆ ನಮ್ಮ ಮನಸ್ಸನ್ನು ಮುಸಕಿರುತ್ತದೆ. ಅದನ್ನು ಸರಿಸಿದರೆ ನೀರಿನಲ್ಲಿ ಹಾವಸೆಯನ್ನು ಸರಿಸಿದಾಗ ಸೂರ್ಯ ಕಾಣುವಂತೆ ನಮಗೆ ನಿಜವಾದ ಸುಖದ ಅನುಭವವಾಗುತ್ತದೆ. ಕನ್ನಡ ಚುಟುಕು ಸಾಹಿತ್ಯದಲ್ಲಿ ಚಂದ್ರಶೇಖರ ಪಾಟೀಲರದು (ಚಂಪಾ) ಇನ್ನೊಂದು ದೊಡ್ಡ ಹೆಸರು. ಹಾಸ್ಯ ವಿಡಂಬನೆಯ ಮೂಲಕ ಸಮಕಾಲೀನ ಸಮಾಜದ ವ್ಯಕ್ತಿಗಳನ್ನು ವಿಡಂಬಿಸುವ ಬಗೆ ಮನೋಜ್ಞವಾಗಿದೆ. ಅವರ ಕೆಲವು ವ್ಯಕ್ತಿ ಚಿತ್ರಣದ ಚುಟುಕುಗಳು ಹೀಗಿವೆ.

೧. "ಸೀತಾಯಣ"

ಹೋಗೋ ಮುಂಚೆ ಲಕ್ಷ್ಮಣ

ಗೆರಿ ಹೊಡೆದ

ಆ ಮ್ಯಾಲೆ ಬಂದ ರಾವಣ

ಲೈನ್ ಹೊಡೆದ

೨. "ವ್ಯಾಕರಣ"

ಅಪ್ಪ : ಮಗನೇ ಕರ್ತೃ ಅಂದರೆ ಏನು?

ಮಗ : ಅಪ್ಪಾ ನೀನೇ ನನ್ನ ಕರ್ತೃ

ಅಪ್ಪ : ಮಗನೇ ಕರ್ಮ ಅಂದರೆ ಏನು?

ಮಗ : ಅಪ್ಪಾ, ನಾನೇ ನಿನ್ನ ಕರ್ಮ

ಮಾಜಿ ಎನ್ನುವ ನಾನು

ಪ್ರಜಾಪ್ರಭುತ್ವದಲ್ಲಿ ಮಂತ್ರಿಯೊ ಮಹಾದೇವ

ಬಂಧು ಬಳಗಕ್ಕೆಲ್ಲ ಕಾಮಧೇನು

ಸರಕಾರಿ ವೆಚ್ಚದಲ್ಲಿ ನಾಡಿನಲ್ಲಿ ಸಂಚಾರ

ಹೊಟ್ಟೆಗೊ ಪುಕ್ಕಟೆಯ ಹಾಲುಜೇನು

ಮಂತ್ರಿ ಪಟ್ಟದ ಮುಂದೆ ಇಂದ್ರನೂ ಜಕ್ಕಿಸಿದ
ಸುಲಭದಲ್ಲಿ ಸಿಗುವವೇ ಕೀರ್ತಿ ತವಕ?
ಒಂದೆ ದಿನವಾದರೂ ಮಂತ್ರಿಯಾದರೆ ಸಾಕು
ಮಾಜಿ ಎನ್ನುವ ನಾನು ಕೊನೆತನಕ

ಚಂಪಾ ಅವರ ವ್ಯಕ್ತಿ ಚಿತ್ರಣದ ಚುಟುಕುಗಳು ಹಾಸ್ಯ, ವಿಡಂಬನೆಯಿಂದ ಕೂಡಿವೆ. ಮೊನಚಾದ ಕಟಕಿ ಮಾತು ಅವರ ಶೈಲಿಯ ಹೆಗ್ಗುರುತಾಗಿದೆ. ಮಾಜಿ ಮಂತ್ರಿ, ವ್ಯಾಕರಣ ಇಂತಹ ಚುಟುಕುಗಳಲ್ಲಿ ಹರಿದಲ್ಲೆಲ್ಲ ಅಂಟಿಕೊಂಡ ಕೊಳೆಯನ್ನು ತೊಳೆಯುತ್ತಾ ಹೋಗುವುದೇ ಅವರ ಮುಖ್ಯ ಗುರಿ. ಹೊಸಗನ್ನಡ ಚುಟುಕುಗಳಿಗೆ ಅತ್ಯಂತ ಪ್ರಚಾರವನ್ನೊದಗಿಸಿದ ಶ್ರೇಯಸ್ಸು ಚಂಪಾ ಅವರದು. ಅವರ ವ್ಯಂಗ್ಯ ನುಡಿಗಳಲ್ಲಿ ಸೂಕ್ಷ್ಮತೆಯಿದೆ. ಚುರ್ ಎನ್ನುವ ಚಾಟಿಯೇಟಿನ ಶಕ್ತಿಯೂ ಇದೆ. ಇತ್ತೀಚಿನ ಚುಟುಕು ರಚನಾಕಾರರಲ್ಲಿ ಎಚ್.ಎ.ಭಿಕ್ಷಾವರ್ತಿಮಠರು ಪ್ರಮುಖರು. ಸಮಕಾಲೀನ ವಿದ್ಯಮಾನಗಳನ್ನು ತಮ್ಮ ಚುಟುಕುಗಳಲ್ಲಿ ಸೆರೆ ಹಿಡಿದಿದ್ದಾರೆ.

೧. "ಅಂದು ಇಂದು"

ಅಂದು
ಬುದ್ಧ ಬಂದ
ಬಸವ ಬಂದ
ಗಾಂಧಿ ಬಂದ
ಎಂದೆಂದಿಗೂ
ಅವರ ಬದುಕು
ಶ್ರೀಗಂಧ
ಇಂದು ಅವರು
ಮಾತು ಮಾತಿಗೂ
ಭಾಷಣಕರು ಮೆಲ್ಲುವ
ಮಾಣಿಕಚಂದ

ಗಾಂಧೀಜಿ ಕಾಲದಲ್ಲಿ ದೇವರೆಲ್ಲ ಒಂದೆ. ಬೇರೆ ಬೇರೆ ಅಲ್ಲ ಎಂದು ಸಾಧಿಸಿ ತೋರಿಸಿದ ಗಾಂಧೀಜಿಗೆ ಬೇರೆ ಮಾತಿಲ್ಲ ಎನ್ನುವವರೂ ಇಂದು ಇದ್ದಾರೆ ಎನ್ನುವ ವಾದ ಚುಟುಕುವಿನಲ್ಲಿ

"ವಾದ"
ಈಶ್ವರ ಅಲ್ಲಾ
ಒಂದೇ ಎಲ್ಲಾ

ಎಂದು ಸಾಧಿಸಿ

ತೋರಿಸಿದ ಮಹಾತ್ಮಗಾಂಧಿ

ಬೇರೆ ಬೇರೆ ಮಾತಿಲ್ಲ

ಎಂದು ವಾದಿಸುತ್ತಾರೆ.

ಇಂದಿನ ವಾದಿ

ಭಾರತ ದೇಶಕ್ಕೆ ಓಲಂಪಿಕ್ಸ್ ನಲ್ಲಿ ಪದಕಗಳು ಬರುವುದೇ ವಿರಳ ಅಂತೂ ಇಂತೂ ಕಂಚಿನ ಪದಕಗೆದ್ದು ಭಾರತದ ಗೌರವ ಕಾಪಾಡಿದ ಕರ್ಣ ಮಲ್ಲೇಶ್ವರಿ ಕುರಿತು

"ಮಲ್ಲೇಶ್ವರಿ"

ಮಲ್ಲೇಶ್ವರಿ ಹುಡುಗಿ

ಮಾಡಿದಳು ಗಂಡು ಕೆಲಸ

ಓಲಂಪಿಕ್ ೨೦೦೦ದಲ್ಲಿ

ಕಂಚಿನ ಪದಕ ಗೆದ್ದು

ಭಾರ ಎತ್ತುವ ಸ್ಪರ್ಧೆಯಲ್ಲಿ

ಭಾರತದ ಮಾನ ಉಳಿಸಿದಳು.

ಭಾರ ಎತ್ತುವ ಸ್ಪರ್ಧೆಯಲ್ಲಿ ಭಾರತದ ಮಾನ ಉಳಿಸಿದಳು ಎನ್ನುವಲ್ಲಿ ಲೇಖಕರಿಗೆ ದೇಶಾಭಿಮಾನದ ಜೊತೆ ಕ್ರೀಡಾಪಟುವಿಗೆ ಅಭಿಮಾನದ ಮಹಾಪೂರ ಹರಿಸಿದ್ದಾರೆ.

ಕವಿ ಗುಂಡಪ್ಪನವರ ಮೇಲಿನ ಪ್ರೀತಿಯಿಂದ ಹೇಳಿದ ಚುಟುಕು ಭಾರತೀಯರ ಬದುಕಿನ ಚಿತ್ರಣವೂ ಇದರಲ್ಲಿದೆ.

"ಗುಂಡಿ"

ಕವಿ ಗುಂಡಪ್ಪ ಹೇಳಿದರು

ಬದುಕು ಜಟಕಾ ಬಂಡಿ,

ಭಾರತೀಯರ ಬದುಕಿನ ಬಂಡಿಯ

ದಾರಿಯ ತುಂಬಾ ಗುಂಡಿ

ಹದಗೆಟ್ಟ ರಸ್ತೆಗಳ ಚಿತ್ರಣವನ್ನು ಗುಂಡಪ್ಪನವರ ಕಾವ್ಯದ ಮೂಲಕ ವಿಡಂಬಿಸಿದ್ದಾರೆ. ಭಿಕ್ಷಾವರ್ತಿ ಮಠರು ಇಂದಿನ ಸಾಮಾಜಿಕ ಬದುಕನ್ನು ಕುರಿತು ಉತ್ತಮವಾದ ಚುಟುಕುಗಳನ್ನು ರಚಿಸಿದ್ದಾರೆ. "ಅಂದು-ಇಂದು", "ವಾದ" ಅರ್ಥಗರ್ಭಿತ ವಕ್ರತುಂಡೋಕ್ತಿಯಾಗಿದೆ. ಮಲ್ಲೇಶ್ವರಿ ಹಾಗೂ ಡಿವಿಜಿಯವರ ಮೇಲಿನ ಅಭಿಮಾನದ ಚುಟುಕುಗಳು ಅರ್ಥಗರ್ಭಿತವಾಗಿವೆ. ರಾಜಕೀಯ ಮತ್ತು ಸಾಮಾಜಿಕ, ಅನ್ಯಾಯ, ಭ್ರಷ್ಟಾಚಾರಗಳ ಮೇಲೆ ರಚಿಸಿದ ಅವರ ಚುಟುಕುಗಳು ತುಂಬಾ ಮೌಲಿಕವಾಗಿವೆ. ಹೀಗೆ ಹೊಸಗನ್ನಡ

ಚುಟುಕುಗಳು ವ್ಯಕ್ತಿಗಳನ್ನು ಸೊಗಸಾಗಿ ಚಿತ್ರಿಸಿವೆ. ಇದರಂತೆ ಬಿ.ಎಸ್.ನಟರಾಜ್, ಎಸ್.ವಿ.ಪರಮೇಶ್ವರ ಭಟ್ಟ, ವಿ.ಜಿ.ಭಟ್ಟ, ವಿಗನಾ, ಚುಟುಕುಗಳು ಈ ಕಕ್ಷೆಗೆ ಸೇರುತ್ತವೆ. ಇವರೆಲ್ಲರ ವ್ಯಕ್ತಿ ಚಿತ್ರಣದ ಚುಟುಕುಗಳಲ್ಲಿ ಹಾಸ್ಯ ವಿಡಂಬನೆ, ರಾಜಕೀಯ ಹಾಗೂ ಸಾಮಾಜಿಕ ವಿಡಂಬನೆ ತುಂಬಾ ಸೊಗಸಾಗಿ ಚಿತ್ರಿತವಾಗಿದೆ.

೨. ವ್ಯಂಗ್ಯ, ವಿಡಂಬನೆ, ಹಾಸ್ಯ

ಹನಿಗವನ, ಚುಟುಕು, ಮುಕ್ತಕ ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಈ ಕಿರುಗವನಗಳೂ ಇಂದು ಅತ್ಯಂತ ಜನಪ್ರಿಯವಾಗಿವೆ. ಪ್ರೀತಿ, ಪ್ರೇಮ, ನೀತಿ-ನಿಯಮ, ರಾಜಕೀಯ, ಸಾಮಾಜಿಕ ಬದುಕಿನ ಮತ್ತೆಲ್ಲ ಮುಖಗಳನ್ನು ಎತ್ತಿ ತೋರುವ ಚುಟುಕ ಸಾಹಿತ್ಯ ಹಾಸ್ಯ ವಿಡಂಬನೆಗಳಿಗೆ ಇಂಬುಕೊಟ್ಟಷ್ಟು ಮಿಕ್ಕಿದ್ದಕ್ಕೆ ಕೊಟ್ಟಿಲ್ಲ ಎನಿಸುತ್ತದೆ. 'ವಿಡಂಬನೆ' ಎಂದರೆ ಚುಟುಕು, 'ಚುಟುಕ' ಎಂದರೆ ವಿಡಂಬನೆ ಎನ್ನುವಷ್ಟು ಗಟ್ಟಿ ನಂಟು ಇದಕ್ಕಿದೆ. ಹಾಸ್ಯ ನವರಸಗಳಲ್ಲಿ ಒಂದು. ಇಂದು ಹಾಸ್ಯ ದ್ವಂದ್ವಾರ್ಥ ಹಾಗೂ ಅಶ್ಲೀಲವಾಗಿ ಬಳಕೆಯಾಗುತ್ತಿದೆ. ಹಾಸ್ಯ ಎಂದಾಕ್ಷಣ ನಗುವುದು ಎಂದು ತಿಳಿದ ನಾವು ಹಾಸ್ಯವನ್ನು ಮೆಚ್ಚುತ್ತೇವೆ. ಜೊತೆಯಲ್ಲಿ ಹಾಸ್ಯಾಸ್ಪದರಾಗುತ್ತಿದ್ದೇವೆ. ಪ್ರಹಸನ, ವ್ಯಂಗ್ಯ, ಕಟಕಿ, ವಿಡಂಬನೆಗಳಲ್ಲೂ ನವಿರಾದ ಹಾಸ್ಯ ಹೇಗಿರುತ್ತದೆ ಎಂಬುದನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇಂತಹ ಹಾಸ್ಯಗಳು ಸಮಾಜದ ಮೇಲೆ ಬೀರುವ ಪರಿಣಾಮಗಳು ಬಹುಮುಖ್ಯ. ಡಾ.ವಿ.ಕೃ.ಗೋಕಾಕರ ಅಭಿಪ್ರಾಯದಂತೆ ಚುಟುಕು ಒಂದು ಲಘುಗೀತೆ; ಪ್ರಾಸದ ಮೊನೆ, ಮಾತಿನಹದನ, ಛಂದಸ್ಸಿನ ಬಿಗುವು, ನಿರೂಪಣೆಯ ಮಿತವ್ಯಯ. ಈ ಕಾವ್ಯ ಪ್ರಕಾರದ ಮುಖ್ಯ ಸಾಧನ ಸಾಮಗ್ರಿ, ಹಾಸ್ಯ ವಿಡಂಬನೆ, ಸೌಂದರ್ಯಾನುಭವ ಇವೆಲ್ಲವು ಚುಟುಕು ಸಾಹಿತ್ಯದಲ್ಲಿ ಕಾಣಬಹುದು ಎಂದಿರುವುದು ಬಹಳ ಸೂಕ್ತವಾಗಿದೆ.

ಕೆಲವೇ ಕೆಲವು ಗಟ್ಟಿ ಪದಗಳ, ಪುಟ್ಟ ಸಾಲುಗಳಲ್ಲಿ ದಟ್ಟ ಭಾವದೊಂದಿಗೆ ವಿಡಂಬಿಸುವ ಚಮತ್ಕಾರಕ್ಕೆ ಪುಟಗಟ್ಟಲೆ ಬರೆದ ಸಾಹಿತ್ಯ ಸಾಟಿಯಾಗಲಾರದು ಇದರ ಸ್ವಾದವೇ ಬೇರೆ ಅದರ ಅನುಭವವೇ ಬೇರೆ ಹಾಸ್ಯ ಸಾಹಿತ್ಯದ ರುಚಿ ನಿಧಾನವಾಗಿ ಸವಿಯುವ ಮೃಷ್ಟಾನ್ನ ಭೋಜನವಾದರೆ ನಾಲಿಗೆಯಲ್ಲಿ ಛುಳ್ಳೆಂದು ಲಾಲಾರಸ ಉಕ್ಕಿಸಿ ಭೋಜನದ ಸವಿ ಹೆಚ್ಚಿಸುವ ಉಪ್ಪಿನಕಾಯಿಯ ಹಾಗೆ ಚುಟುಕು. ಆಧುನಿಕ ಚುಟುಕುಗಳಂತೂ ಸಕ್ಕರೆಯ ಹೊರಮೈಯಿರುವ ಕಹಿಗುಳಿಗೆಗಳು. ಇವುಗಳಲ್ಲಿ ಸಾಮಾಜಿಕ ಪ್ರಜ್ಞೆ ಇದೆ. ಸಂವೇದನೆ ಇದೆ. ಹಾಸ್ಯ-ವಿಡಂಬನೆಗಳೂ ಇವೆ. ಅಲ್ಲದೆ ಶೃಂಗಾರ ರಸದ ಅಭಿವ್ಯಕ್ತಿಗೂ ಪ್ರಧಾನ ಮಾಧ್ಯಮವಾಗಿದೆ. ಚುಟುಕುಗಳಲ್ಲಿ ಹಾಸ್ಯ ವಿಡಂಬನೆಗಳು ಸಾಮಾಜಿಕ, ರಾಜಕೀಯ ಇಲ್ಲವೇ ಆರ್ಥಿಕ ಅಂಶಗಳಿರಬಹುದು. ಅವು ಯಾವ ಬಗೆಯ ಚುಟುಕುಗಳೇ ಆಗಿರಲಿ ಅವು ಸುಲಭ ಗ್ರಾಹ್ಯವಾಗಿದ್ದು ಸಾಮಾನ್ಯ ಮನುಷ್ಯನಿಗೆ ನಿಲುಕುವಂತಿರುವುದರಿಂದಲೇ ಅವು ತುಂಬಾ ಜನಪ್ರಿಯವಾಗಿವೆ. ಆಧುನಿಕ ಚುಟುಕುಕಾರರಲ್ಲಿ ಚುಟುಕು ಬ್ರಹ್ಮರೆಂದೇ ಖ್ಯಾತರಾದ ದಿನಕರ

ದೇಸಾಯಿಯವರು, ಎಂ.ಅಕಬರ ಅಲಿ, ಕುವೆಂಪು, ಎಸ್.ವಿ.ರಂಗಣ್ಣ, ಡುಂಡಿರಾಜ್, ಎಚ್.ಎ.ಭಿಕ್ಷಾವರ್ತಿ ಮಠ ಇನ್ನೂ ಅನೇಕ ಚುಟುಕು ಕವಿಗಳು ಹಾಸ್ಯ-ವಿಡಂಬನೆಗಳ ಮೂಲಕ ಸಾಮಾಜಿಕ ಜಾಗೃತಿ ಮೂಡಿಸುವಲ್ಲಿ ಅವರ ಚುಟುಕುಗಳ ಪ್ರಭಾವ ಕುರಿತು ವಿಶ್ಲೇಷಿಸಲಾಗಿದೆ.

ದಿನಕರ ದೇಸಾಯಿಯವರ 'ಹಾಸಿಗೆ ಇದ್ದಷ್ಟು ಕಾಲುಚಾಚು' ಎಂಬಂತೆ ತಮ್ಮ ಆದಾಯಕ್ಕೆ ತಕ್ಕಂತೆ ಖರ್ಚನ್ನು ಮಾಡಬೇಕು. ಇರುವುದರಲ್ಲೇ ತೃಪ್ತಿ ಕಂಡರೆ ಸಮಸ್ಯೆಗಳೇ ಕಡಿಮೆ ಎಂದು ತಿಳಿಸಿದ್ದು ಅವರ 'ತಿನ್ನೋಣ ಗೆಣಸು' ಎಂಬ ಚುಟುಕದಲ್ಲಿ

ಅಕ್ಕಿಯೇತಕೆ ಮಗಳೆ? ತಿನ್ನೋಣ ಗೆಣಸು
ಸಾಲದಿದ್ದರೆ ಗೆಣಸು ಉಂಟು ಕರಿ ಮೆಣಸು
ಈ ರೀತಿ ಬಿಡಿಸಿದರೆ ಅನ್ನದ ಸಮಸ್ಯೆ
ಬೆಳದಿಂಗಳಾಗಿ ಹೊಳೆಯುವುದು ಅಮವಾಸ್ಯೆ

ಮಾತೆಂಬುದು ಜ್ಯೋತಿರ್ಲಿಂಗ ಎನ್ನುವಂತೆ ನಾವು ಆಡುವ ಮಾತು ಹೇಗಿರಬೇಕೆಂಬುದನ್ನು ತಿಳಿಸುವ ಒಂದು ಚುಟುಕು ಹೀಗಿದೆ.

ಅತ್ಯಂತ ಕಡಿಮೆಯಾಗಿರಬೇಕು ಮಾತು
ಕಾಗದಕ್ಕೆ ಬೀಳಬಾರದು ಯಾವ ತೂತು
ತುಸು ಮಾತಿನೊಳಗಿರಲಿ ಕಸುವಿನಂಬಾರಿ
ಬರವಣಿಗೆ ಕೆಳಗೆ ಬೀಳುವುದಿಲ್ಲ ಜಾರಿ

ಮಾತು ಮಿತವಾಗಿರಬೇಕು, ಮೃದುವಾಗಿರಬೇಕು, ಮಾತು ಬಲ್ಲವನಿಗೆ ಜಗಳವಿಲ್ಲ, ಮಾತೇ ಮುತ್ತು; ಮಾತೇ ಮೃತ್ಯು ಎಂಬುದನ್ನು ಈ ಚುಟುಕ ಸೂಚಿಸುತ್ತದೆ. ಸಾಹಿತ್ಯ ಎಲ್ಲರಿಗಲ್ಲ. ಆದರೂ ಕೆಲವರು ಸೃಜಿಸಿದ ಸಾಹಿತ್ಯ ಅನನ್ಯ. ನಾವು ಸೃಷ್ಟಿಸಿರುವ ಸಾಹಿತ್ಯ ಹೀಗರಬೇಕಂತೆ;

ಅನುಭವದ ಜೊತೆಗಿರಲಿ ಶಬ್ದ ಲಾಲಿತ್ಯ
ತನ್ನಾರೆ ತಾನೆ ಮಿಂಚುವುದು ಸಾಹಿತ್ಯ
ಅನುಭವದ ಹೊರಗೆ ಬರೆದರೆ ಶಬ್ದಜಾಲ
ಬೆಳೆಬರದೆ ಕಾಗದದ ತುಂಬ ಬರಗಾಲ

ಹೀಗೆ ದೇಸಾಯಿಯವರ ಚುಟುಕುಗಳ ಬೆಲೆ ದೊಡ್ಡದು. ಹಾಸ್ಯ ವಿಡಂಬನೆಯನ್ನು ಅವರು ತುಂಬ ಸಫಲವಾದ ಸಾಧನವನ್ನಾಗಿ ಬಳಸಿಕೊಂಡಿದ್ದಾರೆ. ದಿನಕರ ದೇಸಾಯಿಯವರಲ್ಲಿ ಚುಟುಕವೋ? ಚುಟುಕುವಿನಲ್ಲಿ ದಿನಕರರೋ? ಎಂಬ ಭ್ರಾಂತಿಯನ್ನು ಅವರ ಬೃಹತ್ ಚುಟುಕು ಪ್ರಪಂಚ ಹುಟ್ಟಿಸುತ್ತದೆ. ಅವರ ಚುಟುಕುಗಳಲ್ಲಿ ಕಲ್ಪನಾ ವಿಲಾಸ, ಮಾತಿನ ಬೆಡಗು, ಭಾವದ ಬಂಧುರತೆ ಪ್ರಾಸದ ಕಟ್ಟು ಅಸಾಧಾರಣವಾಗಿ

ಹೊಸೆದು ಕೊಂಡಿರುತ್ತದೆ. ಆಡು ಮಾತಿನ ಬಳಕೆ ಅವರ ಚುಟುಕುಗಳ ವೈಶಿಷ್ಟ್ಯ. ನಗೆ ವಿಡಂಬನೆಗಳೇ ಅವರಿಗೆ ಅಸ್ತ್ರ, ಮಾನವನ ನವಿರಾದ ಭಾವನೆಗಳಿಗೆ ಪ್ರತಿಭೆಯ ಬೀಸಿಗೆ, ಕಲ್ಪನೆಯ ಕಡಲಿಗೆ, ಉಪಮೆ-ಪ್ರತಿಮೆಗಳ ಈ ರಚನೆಗಳು ತಮ್ಮನ್ನು ತೆರೆದುಕೊಳ್ಳಲಿಲ್ಲ ಎಂದು ಕೂಡ ಟೀಕಿಸುವುದುಂಟು. ನಮ್ಮ ಚುಟುಕುಗಳು ಎಷ್ಟು ಜನಪ್ರಿಯತೆಗಳಿಸಿದ್ದುವೆಂಬುದನ್ನು ಅವರು ಅರಿತಿದ್ದರೋ ಇಲ್ಲವೋ ಅವರ ಚುಟುಕುಗಳಂತೂ ಕನ್ನಡ ಸಾಹಿತ್ಯಕ್ಕೆ ಹಿರಿಯ ಕಾಣಿಕೆ.

ಕುವೆಂಪು ಅವರ ಚುಟುಕುಗಳಲ್ಲಿ ಹಾಸ್ಯ ಮತ್ತು ವಿಡಂಬನೆ ಕಡಿಮೆಯೆಂದೇ ಹೇಳಬೇಕು. ಅವರ ವಿಡಂಬನೆಗೆ ಒಂದು ಉದಾಹರಣೆ ಕೊಡಬಹುದು. ನಮ್ಮ ಇಂದಿನ ಕಾಲೇಜುಗಳು ರಜಾದಲ್ಲಿಯೇ ತಮ್ಮ ಹೆಚ್ಚಿನ ಕಾಲವನ್ನು ತಳ್ಳುತ್ತಿರುತ್ತವೆ. ನಾವು ಕೊಡುವ ಫೀಜಿಗೆ ರಿಯಾಯಿತಿ ಇರುವುದಿಲ್ಲ. ವಿದ್ಯಾರ್ಥಿಗಳು ಇಡೀ ವರ್ಷದ ಫೀಜನ್ನು ಕೊಟ್ಟರೂ ತರಗತಿಗಳು ಪ್ರಾರಂಭವಾಗುವುದು ಅರ್ಧ ವರ್ಷ ಕಳೆದ ಮೇಲೆಯೇ ತರಗತಿಗಳು ಪ್ರಾರಂಭವಾದರೂ ರಜಾ ದಿನಗಳೇ ಹೆಚ್ಚು. ಅದನ್ನು ತಮ್ಮ ಒಂದು ಚುಟುಕುವಿನಲ್ಲಿ ಹೀಗೆ ವಿಡಂಬಿಸಿದ್ದಾರೆ.

ಹರಿಯುತ್ತದೆ ತೆರಪಿಲ್ಲದೆ ಕಂಬಿಯಂದದಲಿ
ನಾವ್ ತೆರುವ ಫೀಜು
ರಜದ ರೈಲಿನ ಮೇಲೆ ಮಿಂಚಿನ ಮರ್ಝಾ ಮಾಡುತಿದೆ
ನಮ್ಮ ಕಾಲೇಜು

ಕವಿಯ ದೃಷ್ಟಿಯಲ್ಲಿ "ನವ್ಯ ಕವಿತೆ" ಎಂಬುದು ಕೊಳೆತ ಚರಂಡಿ ಅದರಿಂದ ಹೊರಡುವುದು ದುರ್ನಾತವಲ್ಲದೆ ಬೇರಲ್ಲ ಉಳಿದುದಾದರೋ ಮಲ್ಲಿಗೆಯ ಹೊದರು ಅದರಿಂದ ಹೊರಡುವುದು ಸುಗಂಧ. ಇಂತಹ ಮಲ್ಲಿಗೆ ಇರುವಾಗ ಅಂತಹ ಚರಂಡಿಯನ್ನೇಕೆ ನೆನೆಯಬೇಕು? ಎನ್ನುತ್ತಾರೆ.

ಆ ಚರಂಡಿಯ ನೆನೆಯುವುದೇತಕೇ
ಮಲ್ಲಿಗೆಯ ಹೊದರೆಡೆಯೆ ನಿಂತು!
ಅಲ್ಲಿ ದುರ್ನಾತವಿರೆ ಇದನೂ
ಅದನೆ ಗೈದರೆ ಏನು ಬಂತು?

ವಿದ್ವಾಂಸರು ಎನಿಸಿಕೊಂಡವರೂ ಇಂಗ್ಲೀಷಿನ ಮೋಹದ ಬಲೆಗೆ ಸಿಕ್ಕಿ ಅದಕ್ಕೆ ಪ್ರಾಧಾನ್ಯವನ್ನು ಕೊಡುತ್ತಿರುವುದನ್ನು ಹೀಗೆ ವಿಡಂಬಿಸಿದ್ದಾರೆ.

ಬೇಡ ಬೇಡ ಬೇಡ
ಮಕ್ಕಳ ಕೊಲೆ ಬೇಡ
ತುಸು ಯೋಚಿಸೋ ಹೇ ವಿದ್ವನ್ಮೂಢ

ತಪ್ಪಿಸೋ ಈ ಇಂಗ್ಲೀಷಿನ ಕೇಡ |
ಓ ಯಾಲಾದರೂ ಬನ್ನಿ!
ಎಲ್ಲಿಂದಾದರೂ ಬನ್ನಿ!
ಏನಾದರೂ ಮಾಡಿ
ಹೆಣ ಹೊರೆಯ ಇಂಗ್ಲೀಷಿನಿಂದೆಮ್ಮ ಪಾರು ಮಾಡಿ

ಎಂದು ಮೊರೆಯಿಟ್ಟಿದ್ದಾರೆ.

ಎಂ.ಅಕಬರ ಅಲಿ ಅವರ ಹಾಸ್ಯ ವಿಡಂಬನೆ ಮಿಶ್ರಿತ ಚುಟುಕುಗಳು ಹಲವು ಇವೆ. ಅಕಬರ ಅಲಿ ಅವರ ಚುಟುಕು ರಚನೆಗಳಲ್ಲಿ ಸಾಮಾಜಿಕ ರಾಜಕೀಯ, ಶೈಕ್ಷಣಿಕವೇ ಮೊದಲಾದ ಕ್ಷೇತ್ರಗಳಲ್ಲಿನ ವೈಲಕ್ಷಣಗಳ ಕುರಿತು ವಿಡಂಬಿಸಿದ್ದು, ಚುಟುಕುಗಳ ಸಾಧ್ಯತೆಯ ಮೇಲೆ ಮತ್ತಷ್ಟು ಪ್ರಖರವಾಗಿ ಚೆಲ್ಲಿದ ಬೆಳಕಾಗಿದೆ ಎನ್ನಬಹುದು. ಮುಸ್ಲಿಂ ಸಮಾಜದಿಂದ ಬಂದವರಾಗಿ ಅಲ್ಲಿನ ಪರಿಸ್ಥಿತಿಯ ಬಗ್ಗೆ ಇಲ್ಲಿ ಪ್ರತಿಕ್ರಿಯಿಸಿದ್ದಾರೆಯೇ ಎಂಬುದೂ ಸೂಕ್ಷ್ಮ ಪ್ರಶ್ನೆಯಾಗಿದೆ. ಅನೇಕ ಬಾರಿ ಸ್ವಂತದ್ದನ್ನು ಸಮರ್ಥಿಸಿಕೊಳ್ಳುವ ಇಲ್ಲವೆ ಸ್ವಂತದ್ದರ ಬಗ್ಗೆ ತಟಸ್ಥವಾಗಿದ್ದು ಇತರರನ್ನು ಮಾತ್ರ ಅಣಕಿಸುವ ಕೆದಕುವ ರೀತಿಯಲ್ಲಿ ಹೆಚ್ಚಿನವರು ತೊಡಗಿಕೊಂಡಿರುವ ವಿಕೃತಿಗಳನ್ನು ನಾವೀಗೀಗ ಹೆಚ್ಚು ಹೆಚ್ಚಾಗಿ ಕಾಣುತ್ತಿದ್ದೇವಷ್ಟೇ. ಆದರೆ ಅಕಬರ್ ಅಲಿಯವರಿಗೆ ಒಟ್ಟು ಮನುಕುಲದ ಬಗ್ಗೆ ಕಾಳಜಿ ತೀವ್ರವಾಗಿರುವುದರಿಂದ ಸ್ವ ಜಾತಿ ವಿಜಾತಿಗಳೆಂಬ ಬೇಧ ಕಾಡುವುದಿಲ್ಲ ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಅಕಬರ್ ಅಲಿಯವರ ಕೆಲವು ಚುಟುಕುಗಳತ್ತ ಗಮನ ಹರಿಸಿದಾಗ

೧. ನಮ್ಮ ಊರಿನ ಮುಲ್ಲಾ
ಮೊಹರಮ್‌ದಲ್ಲೆಲ್ಲ
ಮಂತ್ರವೆಂದು ಗೊಣಗಿ
ಏನೋ ಗೊಣಗಿ
ಗಿಟ್ಟಿಸುವನು ಬೆಲ್ಲಾ

ಈ ಚುಟುಕುವಿನಲ್ಲಿ ಹೊಟ್ಟೆ ಹೊರೆದುಕೊಳ್ಳಲು ಜನರು ಹಾಕುವ ವೇಷ ಭೂಷಣದ ಬಗ್ಗೆ ಹಾಸ್ಯ ವ್ಯಂಗ್ಯರೂಪದಲ್ಲಿ ವ್ಯಕ್ತಪಡಿಸಿದ್ದಾರೆ. ಬದುಕಿನ ಬವಣೆಗಳನ್ನು ತೀರಿಸಿಕೊಳ್ಳಲು ನೌಕರಿಯಿದ್ದರೂ ಸಾಲದು. ತುಟ್ಟಿಭತ್ಯ ಸಿಕ್ಕಿದೆ ಎಂದುಕೊಳ್ಳುವ ಮಾರನೇದಿನವೇ ಏರುವ ಪೇಟೆ ಧಾರಣೆಯನ್ನು ಸೊಗಸಾಗಿ ಚಿತ್ರಿಸಿದ್ದಾರೆ.

೧. ಬಾಳ-ಬದುಕಿನ ನೊಗವನೆಳೆದು ಒದ್ದಾಡುವಗೆ
ತುಟ್ಟಿಭತ್ಯೆಯ ಸುದ್ದಿ ಸುಖ ತಂದಿತು

ಎಂದೆನ್ನುವಷ್ಟರಲ್ಲಿ ಪೇಟೆಧಾರಣೆ ಹೆಚ್ಚಿ
ಕುತ್ತಿಗೆಗೆ ಉರುಲಾಗಿ ಕೊಲಬಂದಿತು

೨. ಸಕಲ ಬಯಕೆಗಳನು
ಫಲಿಸಿಕೊಳ್ಳಲು ನೀನು
ಮಂತ್ರಿ ಅಳಿಯ
ಆಗೋ ಗೆಳೆಯ
ಅದುವೇ ಕಾಮಧೇನು

೩. ಮಾತು ಎತ್ತಿದರೆ ಮತ-ಸಂಸ್ಕೃತ
ರಕ್ಷಕ ತಾನನ್ನುವ ಮುಠ್ಠಾಳ;
ಹೊರಗೆ ಬಸಪ್ಪ ಒಳಗೆ ವಿಷಪ್ಪ
ಜಾತಿಗಳಲ್ಲಿ ಹಚ್ಚುವ ಜಗಳ

೪. ನೆಗಡಿ ಬಂದಂತಾಗಿ ನಾಸೀಪುಡಿಯ ಮೂಗಿ
ಗೇರಿಸುತ ಜೋರಾಗಿ ಅಜ್ಜ ಸೀತ!
ಅದರ ರಭಸಕ್ಕೆ, ಹೊರ ಸಿಡಿದುಬಿತ್ತು ಸಿಂ
ಬಳ ಗೊನ್ನಿ, ಕೃತಕ ಹಲ್ಲುಗಳ ಸಹಿತ!

ಈ ಚುಟುಕುಗಳಲ್ಲಿ ಮುಖ್ಯ ವಿಷಯವೆಂದರೆ ರಾಜಕೀಯ ವಿಡಂಬನೆ, ಸಾಮಾಜಿಕ ಟೀಕೆ ಮತ್ತು ಹಾಸ್ಯ. ಅಕಬರ ಅಲಿ ಅವರವೂ ಈ ರೀತಿ ಚುಟುಕುಗಳಾದರೆ ತೋಫಖಾನೆ ಶ್ರೀನಿವಾಸರ ಚುಟುಕುಗಳಲ್ಲಿ ವಿನೋದ ವಿಡಂಬನೆಗಳೆರಡೂ ಜೊತೆ ಜೊತೆಯಾಗಿ ಮೂಡಿವೆ.

೧. ನಮ್ಮ ಕ್ಲಾಸ್ ಮಾಸ್ತರು
ಹೇಳಿಕೇಳಿ ಸುಸ್ತರು
ಲಂಭಕರ್ಣ
ಕುಂಭಕರ್ಣ
ಇವರೇ ಅವರ ದೋಸ್ತರು!

೨. ಪುಸ್ತಕ ತೆರೆದರೆ ಆಕಳಿಕೆ
ಬರುವುದು ಭರದಲಿ ತೂಕಡಿಕೆ
ಓದಿಗೆ ನಿದ್ದೆಗೆ
ಜಿದ್ದೇ ಬದ್ದಿದೆ
ಶಂಕರ ಸಾಕೆಲೆ ಈ ಕಲಿಕೆ!

೩. ಭಟ್ಟರು ಭಂಟರು ಊಟದಲಿ
ತುಂಟರು ಬಲು ಜಗಳಾಟದಲಿ
ಹೆಂಡಿರು ಹಟದಲಿ
ಹುಡುಗರು ಚಟದಲಿ
ಮಂತ್ರಿಗಳೋ ಕಂತ್ರಾಟದಲಿ

ತೋಫಖಾನೆಯವರ ಈ ಚುಟುಕುಗಳಲ್ಲಿ ಸಾಮಾಜಿಕ ವಿಮರ್ಶೆ ಹಾಸ್ಯಮಯವಾಗಿ ಮೂಡಿಬಂದಿದೆ. ಹೆಣ್ಣೊಬ್ಬಳು ಕಛೇರಿ ಕೆಲಸಕ್ಕೆ ಬಂದರೆ ಆ ಕಛೇರಿ ಕೆಲಸಗಳು ಹೇಗೆ ಹಾಳಾಗುವವು ಉಳಿದವರು ಅವಳಿಗೆ ಹೇಗೆ ದಾಸರಾಗುವರು ಎಂಬುದನ್ನು ವಿಡಂಬನಾತ್ಮಕವಾಗಿ ಈ ಒಂದು ಚುಟುಕುದಲ್ಲಿ ಮೂಡಿಬಂದಿದೆ.

ಕಳ್ಳಿಕೊಂಬೆಯ ಹಾಗೆ ಬಂದಳೊಬ್ಬಳು ರಂಭೆ
ಆಫೀಸಿಗೇ ಅಲಂಕಾರವಾಗಿ;
ಇದ್ದು ಬಿದ್ದಂಥ ನೊರಜುಗಳೆಲ್ಲಾ ಅದಕಂಟಿ
ಬಿದ್ದಲ್ಲೆ ಬಿದ್ದಿಹವು ಸುಸ್ತು ಆಗಿ

ಕಳ್ಳಿಕೊಂಬೆ ನೊರಜುಗಳ ಹೋಲಿಕೆ 'ಕಳ್ಳಿ' ಪದದಲ್ಲಿಯ ಶ್ಲೇಷೆ ಅತ್ಯಂತ ಅರ್ಥಪೂರ್ಣವಾಗಿದೆ. ತೋಫಖಾನೆಯವರಂತೆ 'ಎಸ್.ವಿ.ರಂಗಣ್ಣ' ಅವರು ಕನ್ನಡ ಸಾಹಿತ್ಯಕ್ಕೆ ಚುಟುಕುಗಳನ್ನು ಒದಗಿಸಿದ ಇನ್ನೊಬ್ಬ ಮಹನೀಯರು. ಅವರ 'ರಂಗಭಿನ್ನಪ' ವಚನ ಸಂಕಲನದಲ್ಲಿ ಹಲವಾರು ಚುಟುಕುಗಳಿವೆ. ಒಂದು ಚುಟುಕು ಹೀಗಿದೆ.

"ಕಬ್ಬವಿದು ಹೊಸದು
ಇದರೊಳಗಿನಿತಿಲ್ಲ ರಸವು!"
ಎಂದು ಕನಲುವರಯ್ಯ ಕೆಲರು
ಹೊಸ ಅಕ್ಕಿ ಹೊಟ್ಟೆ ನೋವು
ಹೊಸ ಕಾವ್ಯ ತಲೆಶೂಲೆ!
ಬಾಧೆ ತಾಳೆವು ನಾವು!"
ಎಂದು ಚೀರುವರಯ್ಯ ಕೆಲವರು
ಕಬ್ಬು ಇಂದಿನದೆಂದು ಸಿಗಿದು ಅಗಿದಲ್ಲಿ
ಸವಿಯು ಎಂದಿನದಲ್ತೆ?
ಬಾಣಸಿಗ ಭೀಮಣ್ಣ ಬೇಸಿದರೆ
ಹೊಸನೆಲ್ಲಿಗೇನಯ್ಯ ಊನ?
ಸಮದರ್ಶಿ ನೀ ಬುದ್ಧಿ ಕಲಿಸು ರಂಗಯ್ಯ

ಹೊಸತು ಯಾವುದೇ ಆಗಲಿ, ಅದು ಪೇಟೆಗೆ ಬಂದಾಗ ಮೊದಮೊದಲು ಜನರು ಅದನ್ನು ಒಪ್ಪಿಕೊಳ್ಳುವುದು ಕಡಿಮೆಯೋ ಅದರ ಬಗ್ಗೆ ಅಸಡ್ಡೆ ಅನಾದರಗಳೇ ಹೆಚ್ಚು. ಹಾಗೆಯೇ ಹೊಸ ಕಾವ್ಯದ ವಿಚಾರ ಕೂಡ. ಇದು 'ಹೊಸಕಾವ್ಯ' ಇದರಲ್ಲಿ ರಸವೇ ಇಲ್ಲ, ಧ್ವನಿಯೇ ಕಾಣಿಸದು' ಮುಂತಾಗಿ ಮೂಗು ಮುರಿಯುತ್ತಾರೆ. ಆದರೆ ರಂಗಣ್ಣನವರ ಪ್ರಕಾರ ಆ ಬಗೆಯ ಮನೋಭಾವ ಸಲ್ಲದು. ಕಾವ್ಯ ಹೊಸದಾದರೇನು? ಹಳೆಯದಾದರೇನು? ಒಟ್ಟಿನಲ್ಲಿ ಕಾವ್ಯ ಸತ್ವವಿದ್ದರೆ ಸರಿ. ಕಬ್ಬು ಹೊಸದಾಗಿರಲಿ, ಹಳೆಯದಾಗಿರಲಿ, ಅದರ ಸಿಹಿ ಒಂದೇ ಅಲ್ಲವೇ? ಅದನ್ನು ಚೆನ್ನಾಗಿ ಸಿಗಿದು, ಅಗಿದು ರಸವನ್ನು ಹೀರಿದರೆ ತಾನಾಗಿಯೇ ಅದರ ಸವಿ ತಿಳಿಯುತ್ತದೆ. ಹಾಗೆಯೇ ಹೊಸ ಕಾವ್ಯವೂ. ಇನ್ನೊಂದು ಬಹು ಉತ್ತಮ ಚುಟುಕುವಿದೆ. ಅದು ಹಾಸ್ಯದ ಮಹತ್ವವನ್ನು ಜೀವನದಲ್ಲಿ ಅದರ ಅಗತ್ಯವನ್ನು ಕುರಿತು ಹೇಳುತ್ತದೆ.

ದುಃಖ ರಾಕ್ಷಸ, ಸುಖ ಅಪ್ಸರಸೆ!
ಅವರಿಬ್ಬರ ತನುಜ ಹಾಸ್ಯ
ಅವನಿಂದ, ಕೇಳುರಂಗ, ತಂದೆಯ ಉಗ್ರತೆಗೆ
ಕ್ಷೀಣತೆ; ತಾಯಿಗೆ ಕಾಂತಿವೃದ್ಧಿ
ಅವನಿಂದ ಇನ್ನೊಂದಾಗುವುದು ನೋಡುರಂಗ!
ತಂದೆಯ ಸಾಮರ್ಥ್ಯ ಸಹಿಷ್ಣುತೆಗೆ ತಿರುಗುವುದು
ತಾಯಿಯ ಚಾಂಚಲ್ಯ ಗಾಂಭೀರ್ಯಕ್ಕೆ

ಜೀವನದಲ್ಲಿ ಹಾಸ್ಯ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವದರಿಂದ ದುಃಖ ಶಮನವಾಗುತ್ತದೆ. ಸುಖ ಹೆಚ್ಚುತ್ತದೆ. ಸಿಪಿಕೆ ಹಲವಾರು ಹಾಸ್ಯಮಯ ಚುಟುಕುಗಳನ್ನು ರಚಿಸಿದ್ದಾರೆ. 'ಅವರ ಅಂತರತಮ' ವಿಶಿಷ್ಟ ಕೃತಿ. ಅಲ್ಲಿ ಹಲವಾರು ಚುಟುಕುಗಳು ಹಾಸ್ಯಭರಿತವಾಗಿವೆ. ಗಾಂಧಿ ಜಯಂತಿಯಂದು ಮಾತ್ರ ಮಾಂಸ ವನ್ನು ತಿನ್ನದೆ ಉಳಿದಂತೆ ಬೇಕಾದರೆ ಮನುಷ್ಯರನ್ನೇ ತಿನ್ನುವಂಥ ಬೂಟಾಟಿಕೆಯ ಜನರನ್ನು ಕುರಿತು ಒಂದು ಕಟಕಿ ಹೀಗಿದೆ....

ಗಾಂಧಿ ಜಯಂತಿಯಂದು ಮಾಂಸ ತಿನ್ನಬಹುದೇ ಎಂಬ
ಪ್ರಶ್ನೆಯೊಮ್ಮೆ ಮನಸ್ಸಿಗೆ ಬಂತು; ಮರುಕ್ಷಣದಲ್ಲೆ
ಮನಸ್ಸು ಹೇಳಿತು ; ಅಯ್ಯೋ ಹುಚ್ಚ! ಗಾಂಧಿಯನ್ನೇ
ತಿಂದಿದ್ದೇವೆ ಇನ್ನು ಮಾಂಸದಲ್ಲೇನಿದೆ?

ನಿಷ್ಕ್ರಿಯ ಹಾಗೂ ನಿರ್ಲಿಪ್ತ ಸರಕಾರವನ್ನು ಕುರಿತು ಒಂದು ವಿಡಂಬನೆ

ಸರಕಾರವೊಂದು ಹೆಬ್ಬಾವು; ಸುಮ್ಮನೆ ಮಲಗಿರುತ್ತದೆ.
ದೀರ್ಘಕಾಲ ಮೇಲೆ ಹತ್ತಿ ಓಡಾಡಿದರೂ ಎಚ್ಚರವಿಲ್ಲ

ಆದರೆ ಎಂದೋ ಒಮ್ಮೆ ಎಚ್ಚರಗೊಳ್ಳುತ್ತದೆ.
ಗಬಕ್ಕನೆ ನುಂಗಿ ಹಾಕುತ್ತದೆ ಹತ್ತಿರ ಸಿಕ್ಕಿದವರನ್ನು

ದೊಡ್ಡವರು ಏನು ಮಾಡಿದರೂ ಎಲ್ಲವೂ ಸರಿ. ಅಂತಹ ದೊಡ್ಡವರಲ್ಲಿರುವ ಸಣ್ಣತನವನ್ನು ಟೀಕಿಸುವ ಚುಟುಕು ಹೀಗಿದೆ.

ಮಾಡುವುದು ಅನಾಚಾರ ಮನೆ ಮುಂದೆ ಬೃಂದಾವನ
ಎಂಬ ಗಾದೆಯನ್ನೊಮ್ಮೆ ಉದಾಹರಿಸಿದಳು ನನ್ನ ಮಡದಿ
ಅನಾಚಾರಕ್ಕೂ ಬೃಂದಾವನಕ್ಕೂ ವಿರಸವುಂಟೇ
ಬೃಂದಾವನ ವಿಹಾರಿ? ನೀನೇ ಮೇಲ್ಪಂಕ್ತಿ;

ಮಹಾಜನ ಹೋದದೆ ಹಾದಿ ಎಂದು ವ್ಯಕ್ತಿತ್ವ ಕುರಿತಾಗಿ ಹಾಸ್ಯದ ಮೂಲಕ ವಿಡಂಬಿಸಿದ್ದಾರಲ್ಲದೆ ಎರಡು ರಾಜ್ಯದ ಪ್ರಜೆಗಳನ್ನು ನಾವು; ಒಳಗೊಂದು ಹೊರಗೊಂದು ನಮ್ಮ ಅಪ್ರಾಮಾನಿಕತೆಯನ್ನು ಹೇಳಿಕೊಳ್ಳಲು ಲಜ್ಜೆಯಾಗಬೇಕು, ಕೈ ಹಿಡಿದ ಹೆಂಡತಿಯ ಎದೆಯ ಮೇಲೊರಗಿರುವಾಗಲೂ ಪರಸತಿಯನ್ನು ನೆನೆಯುವ ಖುಲ್ಲರು ನಾವು.

ಈ ಚುಟುಕು ಸಂಕಲನದಲ್ಲಿ ಕೆಲವು ಉತ್ತಮ ಹಾಸ್ಯದಿಂದ ಕೂಡಿದ ಚುಟುಕುಗಳಿವೆ. ಅಂತವುಗಳಿಗೆ ಒಂದೆರಡು ಉದಾಹರಣೆ.

೧. ಕನ್ನಡಿಯಲ್ಲಿ ನೆರೆಗಂಡು ಸಂಸಾರ ತ್ಯಾಗ ಮಾಡಿದವರ
ಕತೆಗಳನ್ನೋದಿದ್ದೇವೆ, ನೆರೆ ಬಂದುವು
ತ್ಯಾಗ ಮಾಡಬೇಕೆಂದಿದ್ದೇನೆ ಕನ್ನಡಿಯನ್ನು

೨. ಒಂದು ಹೊಸ ಒಗಟು; ಮಳೆಯುಂಟು ಬೆಳೆಯಿಲ್ಲ
ಉತ್ತರ; ಕುಟುಂಬ ಯೋಜನೆ

೩. ಹಗಲು ಕಂಡ ಬಾವಿಗೆ ಇರುಳು ಬೀಳುವ ಸ್ವಭಾವ ನಮ್ಮದು ಇಲ್ಲವಾದರೆ ಹಲವು ಬೇಡವೆನಿಸುವ ಸಂಸಾರ ಇರುಳುಬೇಕು ಎನಿಸುತ್ತಿತ್ತೇಕೆ?

೪. ತಾನು ಏನನ್ನು ಸದಾ ನೆನೆಯುತ್ತಾನೋ ಅದೇ ಆಗುತ್ತಾನಂತೆ
ಮನುಷ್ಯ; ಭ್ರಮರ - ಕೀಟನ್ಯಾಯ ವಿದ್ಯೆಯಲ್ಲ, ನನಗೆ ಹೆದರಿಕೆ;
ನಾವೆಲ್ಲ ಕಾಲಕ್ರಮದಲ್ಲಿ ಯೋನಿಗಳಾಗಿ ಬಿಡುತ್ತೇವೆಯೋ ಏನೋ ಎಂದು

೫. ಸಂಸಾರದ ಹೊರಗಿರುವವರಿಗೆ ಒಳಗೆ ಹೋಗುವ ಬಯಕೆ!
ಒಳಗಿರುವವರಿಗೆ ಹೊರಗೆ ಬರುವ ತವಕ ಒಳಹೋಗು
ವುದು ಸುಲಭ ಹೊರಗೆ ಬರುವುದು ಕಠಿಣ! ಇದು ಕಣಿ

೬. ಗಂಡ ಹೆಂಡಿರ ಜಗಳಕ್ಕೆ ಮನ್ಮಥನ ಕೋರ್ಟಿನಲ್ಲೇ ತೀರ್ಪು
ತೀರ್ಪೇನು ಬಂತು ರಾಜಿ

೭. ತುಂಡುಲಂಗ ತೊಟ್ಟವರಿಗೆ
ಬರುತ್ತದಂತೆ ಸಂಧಿವಾತ!
ಕಂಡವರಿಗೆ ಆಗುತ್ತದೆಯೆ
ಹೃದಯಾಘಾತ!

ಹಾಸ್ಯ ಮತ್ತು ವಿಡಂಬನೆಯಿಂದ ಈ ಚುಟುಕುಗಳು ವಿಶೇಷವಾಗಿವೆ ಇಂತಹ ಚುಟುಕುಗಳಿಗೆ ವಿವರಣೆ ಅಗತ್ಯವಿಲ್ಲ. ಅಷ್ಟು ಸರಳವಾಗಿವೆ ಮತ್ತು ಸುಲಭವಾಗಿವೆ; ಅರ್ಥ ಗ್ರಾಹ್ಯವಾಗಿವೆ.

'ಗುಂಡ್ಮಿ ಚಂದ್ರಶೇಖರ ಐತಾಳ: ಅವರ 'ಗುಂಡುಸೂಜಿ' ಇದರಲ್ಲಿ ೧೫೦ ಚುಟುಕುಗಳಿವೆ. ಇವುಗಳಲ್ಲಿ ಹಾಸ್ಯ ವಿಡಂಬನೆಯೇ ಅಧಿಕ. ಇವು ಒಂದು ರೀತಿಯ ಲಘು ಚುಟುಕುಗಳು. ಇದರಿಂದ ಕೆಲವು ಉದಾಹರಣೆಗಳನ್ನು ನೋಡೋಣ. ಗಂಡಸಿಗಿಂತ ಹೆಣ್ಣಿನಲ್ಲಿ ಆಕರ್ಷಣೆ ಹೆಚ್ಚಾಗಿರುವುದು ಸ್ವಾಭಾವಿಕ. ಗಂಡಸು ಸಭೆಗೆ ಬಂದಾಗ ತಿರುಗಿ ನೋಡದ ಜನ ಭಾಮಿನಿಯರು ಬಳುಕುತ್ತಾ ಬಂದಾಗ ಎದ್ದೆದ್ದು ಕೊರಳುದ್ದ ಮಾಡಿ ನೋಡುತ್ತಾರೆ.

ಗಂಡಸರು ಸಭೆಗೆ ಬಂದರೆ ಯಾರೂ ನೋಡರು;
ಬಳಕುತ್ತ ಭಾಮಿನಿ ಬರಲು
ಎಲ್ಲರ ಕೊರಳುದ್ದವಾಗುವುದು ಕಣ್ಣುಗಳು
ಕೀಳಲಾರದೆ ಬಳಲುವವು.

ಇಂಥಲ್ಲಿ ಹಾಸ್ಯವಿದೆ. ವ್ಯಂಗ್ಯವಿದೆ. ಪ್ರಾಧ್ಯಾಪಕರಿಗೆ ಮರೆವು ಜಾಸ್ತಿ ಎಂಬುದನ್ನು ಕೆಲವು ಚುಟುಕುಗಳಲ್ಲಿ ಸುಂದರವಾಗಿ ನಿರೂಪಿಸಲಾಗಿದೆ. ಒಂದು ಉದಾಹರಣೆ.

ಇಬ್ಬರು ಪ್ರೊಫೆಸರರು ಇನ್ನೊಬ್ಬ ಪ್ರೊಫೆಸರರ
ಬೀಳ್ಕೊಡಲು ಹೋಗಿದ್ದರಂತೆ
ಮಾತಾಡಿ ಕತೆಯಾಡಿ ಅವರ ಬದಲಿಗೆ ಇವರು
ರೈಲತ್ತಿ ಹೊರಟ್ಹೋದರಂತೆ!

ಕರಿಯ ಬಣ್ಣದವರನು ಗೇಲಿ ಮಾಡುವ ಒಂದು ಚುಟುಕು ಹೀಗಿದೆ.

ಕರಿಯನೊಡನೊಬ್ಬ ತುಂಟನು ಬಂದು ಕೇಳಿದನು;
ಸ್ನಾನ ಮಾಡಿದ ನೀರ ಸ್ವಲ್ಪ ಕೊಡಿರೆಂದು;
ಅವನು ತಬ್ಬಿಬ್ಬಾಗಿ ಏಕೆಂದು ಕೇಳಿದನು!
'ಇಂಕು' ಮಾಡಲಿಕೆಯಂದು ತುಂಟ ಹೇಳಿದನು!

ಅಲ್ಲಲ್ಲಿ ಉತ್ತಮ ಕಾವ್ಯ ಬಿಂದೂಗಳೂ ಕಾಣಸಿಗುತ್ತವೆ.

ಕೆರೆ ತುಂಬಿ ಇದ್ದರೆ ತಿರುವಿದ ಹಾಗೆಲ್ಲ
ನಲ್ಲಿಯಲ್ಲಿ ನೀರು ಬಂದೀತು
ಕೆರೆಯೇ ಬರಿದಿದ್ದರೆಷ್ಟು ತಿರುವಿದರೇನು
ನಲ್ಲಿ ಕಣ್ಣೀರು ಸುರಿಸೀತು!

ಇಲ್ಲಿ ಕೆರೆ ತುಂಬಿವರೆ ನಲ್ಲಿಯಲ್ಲಿ ನೀರು ಬರುವುದೆಂಬುದು ವಾಚ್ಯವಷ್ಟೆ. ಆದರೆ ಇದರ ಧ್ವನಿ ಅಪಾರವಾದದ್ದು. ಎನ್ .ಪ್ರಹ್ಲಾದರಾಯರು ಇನ್ನೊಬ್ಬ ಮಹತ್ವದ ಚುಟುಕು ಕವಿಗಳು. ಅವರ 'ಅಮಲಿನ ವಚನಗಳು' ಒಳ್ಳೆಯ ಸಂಕಲನ. ಈ ವಚನಗಳಲ್ಲಿ ತಿಳಿಹಾಸ್ಯಕ್ಕೆ ಒಂದೆರಡು ಉದಾಹರಣೆಗಳು ಶಿಷ್ಯನಿಗೆ ತಾನು ಗುರುವನ್ನು ಮೀರಿಸಿದವನು ಎಂಬ ಹೆಮ್ಮೆ ಅವನಿಗೆ ಯಾವುದರಲ್ಲಿ? ಇದಕ್ಕೆ ಉತ್ತರವನ್ನು ಅವನೇ ಹೇಳುತ್ತಾನೆ.

ಪ್ರಭು, ನಾನು ಗುರುವ ಮೀರಿಸಿದ ಶಿಷ್ಯ
ನೀ ಕುಡಿದೆ ಮಾತ್ರ
ನಾ ಕುಡಿದೆ ತಿಂದೆ !

'ಕುಡಿಯುವ' ಕ್ರಮವನ್ನು ಗುರುವಿಗೆ ಶಿಷ್ಯ ಹೀಗೆ ಹೇಳುತ್ತಾರೆ.

ಬೆರೆಸದೆ ನಿದಾನಿಸದೆ ಏಕಾಪೋಶನವಾಗಿ
ವಿಷಯವನೆಲ್ಲವ ನೀ ಕುಡಿದುದು ಸರಿಯಲ್ಲ ಪ್ರಭು
ತಲೆಯ ಗಂಗೆಯ ಬೆರಸಿ ಹನಿಹನಿಯಾಗಿ
ನೀನದನು ನನ್ನಂತೆ ಕುಡಿಯಬೇಕಿತ್ತು
ಇದು ನಿನ್ನ ಭಕ್ತನ ನಮ್ರ ಭಿನ್ನಪ

ಸಿದ್ದಯ್ಯ ಪುರಾಣಿಕರ 'ವಚನೋದ್ಯಾನ'ದಲ್ಲಿ ಕೆಲವು ಉತ್ತಮ ಚುಟುಕುಗಳಿವೆ. ಸರಕಾರಿ ಅಧಿಕಾರಿಗಳ ಲಂಚಗುಳಿತನವನ್ನು ವಿಡಂಬಿಸುವ ಒಂದು ಚುಟುಕು ಹೀಗಿದೆ.

ಸರಕಾರ ದರೋಡೆಕಾರನಾದಾಗ
ನೌಕಾರರು ನರಭಕ್ಷಕರಾಗದಿರುವರೇನಯ್ಯ?
ಸಚಿವರೇ ಸುಲಿಗೆಗಾರರಾದಾಗ
ಆಪ್ತ ಸಹಾಯಕರು ಡಕಾಯಿತರಾಗರೇನಯ್ಯ?
ಪೋಷಕರೇ ಶೋಷಕರಾದಾಗ
ಆಶ್ರಿತರು ಜೀವನ್ಮೃತರಾಗರೇನಯ್ಯ!
ಸ್ವತಂತ್ರ ಧೀರ ಸಿದ್ದೇಶ್ವರಾ

ಸಮಾಜವೇ ಸಮಾಜವಾದಾಗ
ವ್ಯಕ್ತಿ ಪಶುವಾದರೆ ಆಶ್ಚರ್ಯವೇನಯ್ಯ

ಎಂ.ರಾಮಕೃಷ್ಣ ಅವರ 'ಬಿಸಿಲು-ಮಳೆ' ಕೂಡಾ ಒಳ್ಳೆಯ ಮುಕ್ತಕ ಸಂಕಲನ. ಅದರಲ್ಲಿ ಹಲವು ಹಾಸ್ಯ ಮಿಶ್ರಿತ ಚುಟುಕುಗಳಿವೆ. ಗಳಗೆಗೊಂದು ವೇಷತೊಟ್ಟು ಸ್ವಾರ್ಥ ಸಾಧಿಸಿಕೊಳ್ಳುವ ರಾಜಕೀಯ ವ್ಯಕ್ತಿಗಳನ್ನು ಗೇಲಿ ಮಾಡುವ ರೀತಿ-

ಮನೆಯ ಒಳಹೊರಗೊಂದು ಜಾತ್ರೆಗಿನ್ನೊಂದು
ಹೊಗಳು ಭಟ್ಟರಿಗೊಂದು ದ್ವೇಷಿಗಳಿಗೊಂದು
ಗಂಟೆಗಳಿಗೊಂದಂದು ಮುಖವಾಡ ತೊಟ್ಟು
ಗೋಸುಂಬೆ ಅಡಗಿತ್ತು ನಾಚಿ ಕಂಗೆಟ್ಟು

ಅವರ ನಟನೆಯನ್ನು ಗೋಸುಂಬೆಗೆ ಹೋಲಿಸಿರುವುದು ಅರ್ಥಪೂರ್ಣವಾಗಿದೆ. ಅವರ ಇನ್ನೊಂದು ವಿಡಂಬನಾತ್ಮಕ ಚುಟುಕು ಹೀಗಿದೆ.

ಅರಮನೆಗೆ ಇರುವಂತೆ ಕಿರುಗುಪ್ತ ದ್ವಾರ
ಇರಲಿ ನಿನ್ನಯ ಮನೆಗೆ ಒಂದಂಥ ದ್ವಾರ
ಜಂಜಾಟ ಬಂದು ಕತ್ತಲೆಯ ಕವಿದಾಗ
ಬಂದು ಬಿಡು ಹೊರ ಜಗಕೆ ತಡೆಯದೆಯೆ ಬೇಗ

ಮನುಷ್ಯನ ಮನಸ್ಸು ಯಾವತ್ತು ಜಂಜಾಟದ ಗೂಡು. ನೆಮ್ಮದಿಯಿಂದಿರುವುದು ಕಡಿಮೆ. ಇಲ್ಲಿ ಕವಿ ಹೇಳುತ್ತಾರೆ ಹೀಗೆ; ಮನಸ್ಸಿನ ಜಂಜಾಟ ಅತಿ ಆದಾಗ ಅದರಿಂದ ಪಾರಾಗಲು ಮನಸ್ಸು ನೆಮ್ಮದಿ ಹೊಂದಲು ದೂರ ಹೋಗಿಬಿಡು ಎಂದು. 'ಚದುರಂಗ'ರು ಇನ್ನೊಬ್ಬ ಮಹತ್ವದ ಚುಟುಕು ಕವಿಗಳು ಅವರ ಕೆಲವು ಹಾಸ್ಯಭರಿತ ಚುಟುಕುಗಳು ಇಂತಿವೆ.

೧. ಹೆಬ್ಬಾವು
ಇನ್ನೇನು ಹಿಡಿಯಿತು
ಎನ್ನುವಷ್ಟರಲ್ಲಿ
ಗೋಸುಂಬೆ
ಬಣ್ಣ ಬದಲಿಸಿ
ಪಾರಾಯಿತು

೨. ಕನ್ನಡ ಕನ್ನಡ
ಒದರುವ
ನಾಲಿಗೆ

ಮಕ್ಕಳು ಮಾತ್ರ
ಇಂಗ್ಲೀಷ್ ಶಾಲೆಗೆ

ಮನುಷ್ಯ ಜೀವನದ ವಾಸ್ತವ ಸಂಗತಿಗಳನ್ನು ಸರಳವಾದ ಶೈಲಿಯಲ್ಲಿ ಚದುರಂಗರು ರೇಖಿಸಿದ್ದಾರೆ. ಅವರಂತೆ ಎಚ್ಚೆಸ್ಕೆ ಅವರ ''ಸಾಹಿತ್ಯ ಪಲ್ಲವ'' ಮಹತ್ವದ ಹಾಸ್ಯ ಚುಟುಕುಗಳ ಸಂಕಲನ. ಅವರ ಕೆಲವು ಚುಟುಕುಗಳು ಹೀಗಿವೆ.

೧. ದಿನಾ ಈಜಿದರೆ ಮೈಕರಗುತ್ತೆ
ಅಂತ ಹೇಳ್ಬೇಡಿ ಡಾಕ್ಟ್ರೆ
ಸದಾ ಈಜಾಡುವ ತಿಮಿಂಗಲಕ್ಕೆ
ಆ ಪಾಟಿ ಬೊಜ್ಜೇಕೆ

೨. ಎಂಥಾ ಡಾಕ್ಟರ್ ಬೇಕು
ಬಿಡುವಿರದ ಡಾಕ್ಟರ ಬಳಿ
ಹೋಗುವುದೇ ಲೇಸು
ಇಲ್ಲದ ಖಾಯಿಲೆ ಇದೆಯೆಂದು
ಆತ ಹೇಳವುದಿಲ್ಲ
ಅದೇ ಸಲೀಸು

ವೈದ್ಯರ ಸುತ್ತ ಹಬ್ಬಿರುವ ಇಂತಹ ಚುಟುಕುಗಳು ಕಿರಿಯದರಲ್ಲಿ ಹಿರಿದರ್ಥವನ್ನು ಸ್ವಾರಸ್ಯಕರವಾಗಿ ಹೇಳುತ್ತವೆ. ಚುಟುಕುಗಳಿಂದ ಕವಿಯು ಬದುಕಿದ ಕಾಲದ ರಾಜಕೀಯ ಸಾಂಸ್ಕೃತಿಕ ಸ್ಥಿತಿಗಳು ತಿಳಿಯುತ್ತವೆ. ಇವು ಒಂದೊಂದು ರಸದ ಗುಳಿಗೆಗಳಂತಿರುವುದರಿಂದ ಓದುಗರಿಗೆ ಆನಂದವನ್ನುಂಟು ಮಾಡುತ್ತವೆ. ಇಂತಹ ಚುಟುಕುಗಳು ಹಾಸ್ಯಭರಿತವಾದರೂ ಜನರಿಗೆ ಬೋಧಪ್ರದವಾಗಿವೆ. ಇವುಗಳಿಂದ ಪ್ರಭಾವಿತರಾದ ಅನೇಕ ದುರ್ಮಾರ್ಗಿಗಳು ಸನ್ಮಾರ್ಗಿಗಳಾಗಿರುವ ನಿದರ್ಶನಗಳುಂಟು. ಅವುಗಳ ವಿವೇಕವಾಣಿಯ ಪ್ರಭಾವದಿಂದಾಗಿ ಅನೇಕ ಅನಾಹುತಗಳು ತಪ್ಪಿವೆ. ಬಹುದಿನಗಳಿಂದ ಅಕ್ಕನ ಮಗಳನ್ನು ನೋಡುತ್ತಿದ್ದವನು ಒಮ್ಮೆ ಇದ್ದಕ್ಕಿದ್ದಂತೆ ಅವಳನ್ನು ನೋಡುತ್ತಾನೆ. ಈಗ ಅವಳು ಮೊದಲಿನಂತಿಲ್ಲ. ದೊಡ್ಡವಳಾಗಿದ್ದಾಳೆ. ಮೈಕೈ ತುಂಬಿಕೊಂಡಿದ್ದಾಳೆ. ಅಂಗಾಂಗಗಳು ಬೆಳೆದು ಸರ್ವಾಂಗ ಸುಂದರಳಾಗಿದ್ದಾಳೆ. ಅದನ್ನು ಚಿತ್ರಿಸುವ ಒಂದು ಜನಪದ ಚುಟುಕು ಹೀಗಿದೆ.

ಅಕ್ಕಯ್ಯನ ಮಗಳು ಚಿಕ್ಕೋಳು ಎಂತಿದ್ದೆ
ಚಿತ್ತಾರಿ ಕಾಣೆ ಬಿಲುಪತ್ರೆ ನಿನ ಮಗಳು
ಮುತ್ತಿನ ಚೆಂಡು ಅನಿಸ್ಯಾಳು

ಇನ್ನೊಂದು ಹೊಸಗನ್ನಡ ಚುಟುಕು ಹೀಗಿದೆ.

ಮನೆಯಲ್ಲೂ ನೆರೆಯಲ್ಲು ಹಾಲಿಲ್ಲವೆಂದರೂ
ಗಂಡ ಒದರಿದ, ಬೇಕೇ ಬೇಕು ಕಾಫೀ
ಎಂತೆಂತೊ ಮಾಡಿದಳು ಕಾಫಿಯದು ಮಗು ಅತ್ತು
'ಹಾಲಿಲ್ಲ' ಎಂದಿತು ಮೊಲೆಯ ಸೀಪಿ

ಇಲ್ಲಿ ಕರುಳು ಕಿವುಚುವಂಥ ವಿಡಂಬನೆ ತುಂಬಿದ್ದು ಓದುಗರ ಮನಸ್ಸನ್ನು ತಟ್ಟುತ್ತದೆ. ಶಿವರಾತ್ರಿಯ ದಿವಸ ಜನರ ಸ್ವಭಾವವನ್ನು ಚಿತ್ರಿಸುವ ಒಂದು ಚುಟುಕು ಅರ್ಥಪೂರ್ಣವಾಗಿದೆ.

ಶಿವನ ಪೂಜಿಸಲೆಂದೇ ಊರಿಗೆ ಬಂದು ಶಿವರಾತ್ರಿ
ಕುಡಿದು ಮಜಾ ಮಾಡಲಿಕ್ಕಾಯ್ತು ಹಲವರಿಗೆ ಈ ರಾತ್ರಿ!
ಕಾಸಿಲ್ಲದೆಯೇ ತೀರ್ಥವನು ಕೊಡುತ್ತಿದ್ದರೂ ಕರೆ ಕರೆದು
ಹೆಂಡದಂಗಡಿ ಮುಂದಿತ್ತು ಕ್ಯೂ ನೋಟು ಹಿಡಿದು

ಶಿವರಾತ್ರಿಯ ಜಾಗರಣೆ ನೆಪ ಮಾತ್ರಕ್ಕೆ. ಕೆಲವರು ಅಂದಿನ ರಾತ್ರಿಯನ್ನು ಕುಡಿತದಲ್ಲಿಯೇ ಕಳೆಯುವರು. ಶೃಂಗಾರ ಚಿತ್ರಣದ ಒಂದು ಚುಟುಕು ಇದರಲ್ಲಿ ಕೊಡಗಿನ ಹೆಣ್ಣನ್ನೂ, ಕೊಡಗಿನ ಕಿತ್ತಳೆ ಹಣ್ಣನ್ನು ಬಹು ಸ್ವಾರಸ್ಯ ಪೂರ್ಣವಾಗಿ ವರ್ಣಿಸಲಾಗಿದೆ.

ಕೊಡಗಿನ ಹೆಣ್ಣನ್ನು ಏನೆಂದು ವರ್ಣಿಸಲಿ
ಒಂದೊಂದು ಕೊಡಗಿನ ಕಿತ್ತಳೆ ಹಣ್ಣು!
ಕೊಡಗಿನ ಕಿತ್ತಳೆಯನೇನಂದು ವರ್ಣಿಸಲಿ
ಒಂದೊಂದು ಕೊಡಗಿನ ಹೆಣ್ಣು !

ಇವಕ್ಕೆ ಬೇರೆ ಹೋಲಿಕೆಗಳೇ ಇಲ್ಲ. ಹೋಲಿಸಬೇಕೆಂದರೆ ಕೊಡಗಿನ ಹೆಣ್ಣಿಗೆ ಕೊಡಗಿನ ಕಿತ್ತಳೆ ಹಣ್ಣು ಮತ್ತು ಕೊಡಗಿನ ಕಿತ್ತಳೆ ಹಣ್ಣಿಗೆ ಕೊಡಗಿನ ಹೆಣ್ಣೇ ಹೋಲಿಕೆ. ದೇಜಗೌ ಅವರ ಚುಟುಕುಗಳಲ್ಲಿ ವ್ಯಂಗ್ಯವಿದೆ

೧. ಪಂಡಿತರು ಕೊರೆಯುವರು ಮಂತ್ರಿಗಳು ಕೊಬ್ಬುವರು
ದಂಡುಂಡು ಬಲಿಯುವುದು ವಿಜ್ಞಾನಿ ಶೋಧಿಪನು
ಹಿಂಡು ಸನ್ಯಾಸಿಗಳು ಹೊಟ್ಟೆ ಹೊರೆಯುವರು
ದಂಡ ದೃಢ ರೈತರಿರೆ ಕೇಳು ಮಗಳೆ

೨. ಕಾನೂನು ಸೃಷ್ಟಿಸಿರುವ ಶಾಸಕರು ಮಂತ್ರಿಗಳು
ಕಾನೂನು ವಿವರಿಸುವ ನಿತರಿಪ ವಕೀಲ
ಮೇಣ್ಕಾನದು ತಜ್ಞರಹ ಮೂರ್ತಿಗಳು ತಸ್ಕರರು
ಮುನ್ನೀರ ಕುಡಿವ ವಿಕ್ರಮರು ಮಗಳೆ

ಈ ಚುಟುಕುಗಳು ಮುಖ್ಯವಾಗಿ ಪುರುಷಾರ್ಥ ಪ್ರತಿಪಾದನೆಯನ್ನು ಮಾಡುವವು ಕವಿ ಮನಸ್ಸಿನ ನೂರೆಂಟು ಭಾವನೆಗಳು ಅನಿಸಿಕೆಗಳು ರಾಗ-ವಿರಾಗಗಳನ್ನು ಸಾರುವವು. ಸಾಮಾಜಿಕ ಮತ್ತು ರಾಜಕೀಯ ವಿಡಂಬನೆ ಕೂಡ ಇಲ್ಲುಂಟು. ಇಂಥಲ್ಲೆಲ್ಲ ಓದುಗರು ಕಾಣುವುದು ಭಕ್ತ ಹೃದಯದ ಆರ್ತ ಮೊರೆ ವ್ಯಕ್ತಗೊಂಡಿರುವುದು ಇಂತಹ ಚುಟುಕುಗಳು ಕನ್ನಡ ಚುಟುಕು ಸಾಹಿತ್ಯದಲ್ಲಿ ವಿಶೇಷವಾಗಿವೆ.

ಹೆಚ್.ಡುಂಡಿರಾಜ್ ತುಂಬ ಮಹತ್ವದ ಚುಟುಕು ರಚನಾಕಾರರು. ಅವರ ಚುಟುಕುಗಳಲ್ಲಿ ಹಾಸ್ಯ ವಿಡಂಬನೆ ಕಾರಂಜಿಯಂತೆ ಪುಟಿದಿದೆ. ಅವರ ಚುಟುಕಗಳಲ್ಲಿ ನೋಡಿದಾಗ

೧. ಬಿಸಿರಕ್ತದ
ಉತ್ಸಾಹದಲ್ಲಿ
ಲವ್ ಲವ್ ಲವ್
ವಯಸ್ಸಾದಂತೆ
ಕೋಪ ಹೆಚ್ಚಾಗಿ
ಬೌ ಬೌ ಬೌ!

೨. ಹುಲ್ಲು
ಕೇವಲ
ಪಶುಗಳ ಆಹಾರ
ಅಲ್ಲ
ಎಂಬುದಕ್ಕೆ ಸಾಕ್ಷಿ ಬಿಹಾರ

೩. ಬಡವರಿಗೆ ಸದಾ
ಹೊಟ್ಟೆ ಹೊರೆವ
ಚಿಂತೆ
ಶ್ರೀಮಂತರಿಗೆ
ಹೊಟ್ಟೆ
ಹೊರುವ ಚಿಂತೆ

೪. ಇವಳು ಅಕಸ್ಮಾತ್ ಸಿಕ್ಕಳು
ನನ್ನನ್ನು ನೋಡಿ ನಕ್ಕಳು
ನಮಗೀಗ ಎರಡು ಮಕ್ಕಳು

೫ ಕಚೇರಿಯಲ್ಲಿ
ಅಯ್ಯಾ ಎಂದರೆ

ಬಡ್ತಿಗೆ ಮಾರ್ಗ

ಎಲವೋ ಎಂದರೆ

ವರ್ಗ.

ಡುಂಡಿರಾಜರವರು ಸಮಕಾಲೀನ ಘಟನೆಗಳನ್ನು ಆಯ್ಕೆ ಮಾಡಿಕೊಂಡು ಅರ್ಥಪೂರ್ಣ ಚುಟುಕುಗಳನ್ನು ರಚಿಸಿದ್ದಾರೆ. ಅವರ ಚುಟುಕುಗಳಿಗೆ ವಿವರಣೆ ಬೇಕಿಲ್ಲ. ಅಷ್ಟು ಸರಳವಾಗಿವೆ. ಸುಲಭವಾಗಿವೆ.

ಎಚ್.ಎ.ಭಿಕ್ಷಾವರ್ತಿಮಠರು ಕನ್ನಡ ಸಾಹಿತ್ಯಕ್ಕೆ ಚುಟುಕು ಸಂಕಲನಗಳನ್ನು ನೀಡಿದ್ದಾರೆ. ಅವರ ಚುಟುಕುಗಳಲ್ಲಿ ಪ್ರೀತಿ ಮೋಹಕ ಶೈಲಿಯ ವಿಡಂಬನೆ ಹಾಗೂ ಹಾಸ್ಯಗಳ ಲೇಪನಗಳಿವೆ. ಇದರಲ್ಲಿ ವಿನೋದ ವಿಡಂಬನೆ ಮತ್ತು ಜೀವನೋತ್ಸವಗಳ ಸಂಗವವೇ ಇದೆ. ಇವರ "ಮಿಂಚುಗೊಂಚಲು" ಸಂಕಲನದಲ್ಲಿನ ಹಾಸ್ಯಮಯ ಚುಟುಕುಗಳು ಹೀಗಿವೆ.

೧. ಅಂದು ಕಾಡುಗಳು

ತಪೋನಿಧಿಗಳ ತಾಣ

ಇಂದು ಕಳ್ಳಕಾಕರ

ಅಡಗುದಾಣ

೨. ಅವರವರ ಭಾಷೆಯಲ್ಲಿ

ಅವರವರ ವೇಷದಲ್ಲಿ

ಅವರವರಿಗೆಲ್ಲಾ ಈ ದೇಶದಲ್ಲಿ

ಅವರವರ ತೆರನಾಗಿ ಸಿಗುವ

ಲಂಚದೇವ

೩. ವಾಹನಕ್ಕೆ ವಾಹನ

ಡಿಕ್ಕಿ ಹೊಡೆದರೆ

ಪ್ರಾಣಕ್ಕೆ ಅಪಾಯ

ಕಣ್ಣಿಗೆ ಕಣ್ಣು

ಹೊಡೆದರೆ

ಪ್ರಣಯಕ್ಕೆ ಅಡಿಪಾಯ

ಎಚ್.ಎ.ಭಿಕ್ಷಾವರ್ತಿ ಮಠರವರ ಈ ಚುಟುಕುಗಳಲ್ಲಿ ಹಾಸ್ಯದ ಜೊತೆಯಾಗಿ ಗಂಭೀರ ಚಿಂತನೆ ಕಂಡುಬರುತ್ತದೆ. ಅವರ ಇನ್ನೊಂದು ಕವನ ಸಂಕಲನ 'ಹೂಬಾಣ' ಮಹತ್ವಪೂರ್ಣ ಚುಟುಕು ಸಂಕಲನ

ಇವರ ಚುಟುಕುಗಳೆಂದರೆ ಸದಾ ಬಾಯಲ್ಲಿ ಇಟ್ಟುಕೊಂಡು ಸವಿಯಬೇಕೆನ್ನಿಸುವ ಶುಂಠಿ ಪೆಪ್ಪರಮೆಂಟಿನಂತೆ ವ್ಯಂಗ್ಯ, ವಿಡಂಬನೆ, ಹಾಸ್ಯ, ಎಚ್ಚರಿಕೆ, ಅನುಭವಗಳಿಂದ ಕೂಡಿದ ಚುಟುಕುಗಳು ಇಲ್ಲಿವೆ.

ಅವರ 'ಹೂಬಾಣ' ಚುಟುಕು ಸಂಕಲನದಲ್ಲಿ ಹಾಸ್ಯಮಿಶ್ರಿತ ವಿಡಂಬನಾತ್ಮಕ ಚುಟುಕುಗಳನ್ನು ರಚಿಸಿದ್ದಾರೆ.

೧. ಒಂಟಿ ಇದ್ದಾಗ
ಹುಡುಕೋ
ಚಳುವಳಿ
ಜಂಟಿ ಆದಾಗ
ಅಪ್ಪಿಕೊ ಚಳುವಳಿ

೨. ನಮ್ಮ ನಾಡುಚಂದ
ನಮ್ಮ ನುಡಿ ಚಂದ
ಎಂದು ಹಾಡಿ ಹೊಗಳುವ
ಯುವಕರ ಬಾಯಿತುಂಬ
ಮಾಣಿಕ್ ಚಂದ

೩. ಎದೆಯ ದನಿಗೆ ಮಾತ್ರ
ಓ ಅನ್ನುವ ನಮ್ಮ
ಈಶ್ವರ ಅಲ್ಲ
ಮೈಕಾಸುರರ ಕಿರುಚಾಟಕೆ
ಕಿವುಡಾದನಲ್ಲ.

೪. ಇಂದು ಗಾಂಧೀಜಿ
ಎದುರಿಸಿದರೆ ಪಂಚಾಯಿತಿ
ಚುನಾವಣೆ
ಠೇವಣಿ ಕಳೆದುಕೊಳ್ಳುತ್ತಾನೆ
ದೇವರಾಣೆ

ಹೀಗೆ ಚುಟುಕುಗಳು ಹಾಸ್ಯಮಿಶ್ರಿತ ಗಂಭೀರ ವಿಡಂಬನಾತ್ಮಕ ಧೋರಣೆ ಈ ಕಾವ್ಯಗಳಲ್ಲಿ ಒಡಮೂಡಿದೆ. ಅಲ್ಲದೆ ಪ್ರಾಸಭರಿತವಾದ ಅನೇಕ ಚುಟುಕುಗಳು ಹಾಸ್ಯಪೂರ್ಣವಾಗಿವೆ, ಸಾಮಾಜಿಕ ವಿಡಂಬನೆ ಅಡಕವಾಗಿವೆ.

ಬಿ.ಟಿ.ಲಲತಾನಾಯ್ಕರು ಮಹತ್ವದ ಕವಯತ್ರಿ - ಅವರ ಚುಟುಕುಗಳಲ್ಲಿ ವಿಡಂಬನೆ ಹೀಗಿದೆ.

೧. ವಿದ್ಯೆಯನ್ನು ಕೊಡಲಿಲ್ಲ,
ಹೆಬ್ಬೆಟ್ಟನ್ನು ಬಿಡಲಿಲ್ಲ
ನಾಡಿನ ನ್ಯಾಯ
ಇದೇ ಏನೋ ದ್ರೋಣಾ
ಎಂದು ಕೇಳಿತು
ಕಾಡುವಾಸಿ ಕೋಣ.

೨. ಆಂಗ್ಲರೇನೋ ತೊಲಗಿದರು
ಚಳುವಳಿಗೆ ತಲೆಬಾಗಿ
ಬಟ್, ಡಿಯರ್, ಡಾರ್ಲಿಂಗ್
ಮಮ್ಮಿ, ಡ್ಯಾಡಿಗಳು
ಇಲ್ಲೇ ಉಳಿದುವಲ್ಲಾ
ಖಾಯಂ ಆಗಿ!

ಆಂಗ್ಲರು ಹೋದರೂ ಅವರ ಭಾಷೆ ನಮ್ಮನ್ನು ಆವರಿಸಿದೆ. ನಮ್ಮ ದೇಶಿ ಸಂಸ್ಕೃತಿಯನ್ನು ಬಹುರಾಷ್ಟ್ರೀಯ ಕಂಪನಿಗಳು ನಾಶ ಮಾಡುತ್ತಿವೆ ಎಂಬ ಭಾವ ಇಲ್ಲಿ ಅಂತರ್ಗತವಾಗಿದೆ.

ಬಿ.ಆರ್.ಲಕ್ಷ್ಮಣ್‌ರಾವ್ ಅವರು ಚುಟುಕು ಸಾಹಿತ್ಯದಲ್ಲಿ ತಮ್ಮದೇ ಆದ ಶೈಲಿಯನ್ನು ಬಳಸಿದ್ದು, ಅವರ ಸೊಗಸಾದ ಚುಟುಕುಗಳ ಛಾಪು ಇಲ್ಲಿದೆ.

೧. ನಾನು ಅವಳಿಗೆ
ನನ್ನ ಹೃದಯ ಕೊಟ್ಟೆ
ಅವಳು
ಕೈಕೊಟ್ಟಳು

೨. ಏನಪ್ಪ ಮಹಾಭಾರತದ
ನೀತಿ?
ರಾಜ ಕುರುಡನಾದರೆ
ಎಲ್ಲಾ ಫಜೀತಿ

ಪುಟ್ಟ ಪುಟ್ಟ ವಾಕ್ಯಗಳಿಂದ ಕೂಡಿದ ಈ ಚುಟುಕುಗಳಲ್ಲಿ ಹಾಸ್ಯ ವಿಡಂಬನೆಯು ವ್ಯಕ್ತವಾಗಿದೆ. ಚುಟುಕು ರಚನಾಕಾರರಲ್ಲಿ ಚಂಪಾ ಅವರದು ಬಹುದೊಡ್ಡ ಹೆಸರು.

೧. ಅಲ್ಲಿ
ಆಕಾಶದಲ್ಲಿ
ಒಂಟಿ ಚಿಕ್ಕೆ
ಇಲ್ಲಿ
ಮರುಭೂಮಿಯಲ್ಲಿ
ಚಿಕ್ಕ ಒಂಟೆ

೨. ಅವನೊಬ್ಬ
ಪಾಪ, ಏಕಾಂಗ
ಅವನಿಗೆ ಇಬ್ಬರು ಅ-
ರ್ಧಾಂಗಿಗಳು
ಹೀಗಾಗಿ ಅವನಿಗೆ
ಸ್ವಂತ ಅಂಗಿಯೇ
ಇಲ್ಲ.... ಪಾಪ!

೩. "ಪ್ರೀತಿಸಿದವಳೇ ಕೈಕೊಡುತ್ತಾಳೆ
ಯಾರನ್ನು ನಂಬೋಣ?"
"ಕೈ ಎಂಬುದು
ಮೈ ಎಂಬುದರ
ಭಾಗವೇ ಅಲ್ಲವೇ?"
ಇದು ಅನುಭವಿಗಳ ಅಂಬೋಣ

೪. ತುರುಬು ಕಟ್ಟಿದರೆ ಭೂದೇವಿ
ಜಡೆ ಹೆಣದಾಗ ನಾಗರ-ಹೊಳೆ
ಕೂದಲು ಬಿಚ್ಚಿದಳೋ - ಕಪ್ಪು ಆಕಾಶ

ಚಂಪಾ ಅವರ ಚುಟುಕುಗಳು ನೇರ ಮತ್ತು ಸ್ಪಷ್ಟ, ಬದುಕಿನ ವಿವಿಧ ಆಯಾಮಗಳನ್ನು ತುಂಬಾ ವಿಡಂಬನಾತ್ಮಕವಾಗಿ ರೇಖಿಸುವ ಕಲೆ ಅವರಿಗೆ ಕರಗತವಾಗಿದೆ. ಒಟ್ಟಾರೆ ಹಾಸ್ಯ ಚುಟುಕುಗಳನ್ನು ಬರೆಯುವ ಕವಿಗಳಿಗೆ ಲೆಕ್ಕವಿಲ್ಲ. ಅಲ್ಲಲ್ಲಿ ಹಾಸ್ಯ ವಿಡಂಬನೆ ಮಾತ್ರ ಇರುವುದಿಲ್ಲ. ಬದುಕಿನ ಬಗೆಗೆ ಗಾಢವಾದ ಚಿಂತನೆಯೂ ಇರುತ್ತದೆ. "ಸಮರಸವೇ ಜೀವನ" ಎಂದ ಹಾಗೆ ದಾಂಪತ್ಯ ಜೀವನ ಸಮರಸದಿಂದ ಕೂಡಿರಬೇಕಾದರೆ ಆ ಜೀವನದಲ್ಲಿ ವಿರಸ-ಸರಸಗಳು ಇರಲೇಬೇಕು. ಆಗ ಬದುಕು ಅರ್ಥಪೂರ್ಣವಾಗುತ್ತದೆ. ಒಟ್ಟಾರೆಯಾಗಿ ಚುಟುಕುಗಳು ಅಂತರಂಗದ ಅಭಿವ್ಯಕ್ತಿಯಾಗಬೇಕು. ಬಾಹ್ಯದ ನುಡಿಯಾಗಬಾರದು.

೩. ಜೀವನ ದರ್ಶನ

ಜೀವನ ದರ್ಶನ ಎಂದರೆ ಬದುಕು, ಬದುಕಿನ ರೀತಿ ಇವುಗಳನ್ನು ನೋಡುವುದು, ದರ್ಶಿಸುವುದು, ತೋರಿಸುವುದು ಎಂದರ್ಥ. ಕವಿಯು ತನ್ನ ಕಾವ್ಯ ಶಕ್ತಿಯಿಂದ ತಿಳಿಯುವುದು ಅಥವಾ ಅರಿಯುವುದು. ಅಂದರೆ ಕವಿ ಆದವನು ಯೋಗಿಯಂತೆ ಒಳಗಣ್ಣಿನಿಂದ ನೋಡಿ ತನ್ನ ವಿಚಾರಶೀಲ ಬುದ್ಧಿಶಕ್ತಿಯನ್ನು ಬಳಸುವುದು ಕವಿಗಳಾದವರು ಜೀವನದ ಆಳ ಅಗಲಗಳನ್ನು ತಮ್ಮ ಅನುಭವಕ್ಕೆ ಬಂದ ವಿಚಾರವನ್ನು ಸಾಹಿತ್ಯದ ಮೂಲಕ ವ್ಯಕ್ತಪಡಿಸುವುದೇ ಜೀವನ ದರ್ಶನ.

ಹೊಸಗನ್ನಡ ಸಾಹಿತ್ಯದಲ್ಲಿ ಅನೇಕ ಚುಟುಕು ಕವಿಗಳು ತಮ್ಮ ಮನಸ್ಸಿಗೆ ಬಂದ ಹಿತಕರವೆನಿಸಿದ ವಿಚಾರವನ್ನು ಕೆಲವೇ ಕೆಲವು ಸಾಲುಗಳ ಮೂಲಕ ಅನುಭವಾಮೃತವನ್ನು ಉಣಬಡಿಸಿದ್ದಾರೆ. ಡಿ.ವಿ.ಜಿಯವರು ಹೇಳುವಂತೆ "ಬ್ರಹ್ಮಾಂಡ ರಂಗಸ್ಥಳದಲ್ಲಿ ನಮ್ಮದೊಂದು ಪುಟ್ಟ ನಾಟಕ ಬಹಳ ವಿಸ್ತಾರವಾದುದನ್ನು ತುಂಬಾ ಸಂಕ್ಷಿಪ್ತವಾಗಿ ಹೇಳುವುದೇ ಸಾಹಿತ್ಯದ ಮೂಲ ಉದ್ದೇಶ" ಎನ್ನುವುದನ್ನು ನೋಡಿದಾಗ ಜೀವನಾನ್ವೇಷಣೆಗೆ ಇಳಿಯುಬೇಕಾದರೆ ದೀರ್ಘ ಸಾಹಿತ್ಯವೇ ಬೇಕಾಗಿಲ್ಲ, ಚುಟುಕಾದರೂ ಸಾಕು. ಸಮರ್ಥನಾದ ಕವಿಯ ಕೈಯಲ್ಲಿ ಚುಟುಕು ಮಹತ್ವವನ್ನು ಪಡೆಯುತ್ತದೆ. ಅವನು ಪ್ರತಿಭಾವಂತನಾದರೆ ಅವನಿಂದ ಸೃಜನಗೊಂಡ ಚುಟುಕಗಳು ವಿಶೇಷಾರ್ಥಗಳಿಂದ ನವೋನವಭಾವಗಳಿಂದ ಜೀವ ತುಂಬಿಕೊಳ್ಳುತ್ತವೆ.

"ಸಾಹಿತ್ಯವೆಂದರೆ ಕಾವ್ಯತ್ಮಕವಾಗಿ ಹೇಳುವುದು" ಎಂದಿದ್ದಾರೆ. ರಂ.ಶ್ರೀ.ಮುಗಳಿಯವರು ಕಾವ್ಯಾತ್ಮಕವಾಗಿ ಹೇಳುವಾಗ ಮಾನವ ತಾನು ಹೇಳುವ ಚುಟುಕು ಅಥವಾ ಕಾವ್ಯದಲ್ಲಿ ತನ್ನ ಮನಸ್ಸಿಗೆ ಹೊಳೆದ ಅಥವಾ ತೋಚಿದ, ತನಗೆ ಇದೇ ಸರಿ ಎಂದು ಕಂಡುಬಂದ ಹಾಗೂ ತನ್ನ ಅನುಭವಕ್ಕೆ ಹತ್ತಿರವಾದದ್ದನ್ನು ಕಾವ್ಯದ ಮೂಲಕ ವ್ಯಕ್ತಪಡಿಸುತ್ತಾನೆ. ಅನುಭವಗಳನ್ನು ಕಲಾತ್ಮಕವಾಗಿ, ಕಾವ್ಯಮಯವಾಗಿ ಪ್ರತಿಮೆಗಳ ಮೂಲಕವೋ, ಸಂಕೇತಗಳ ಮೂಲಕವೋ ವ್ಯಕ್ತಪಡಿಸಿದಾಗ ಅದು ಜೀವನ ದರ್ಶನವಾಗುತ್ತದೆ. ಮುಖ್ಯವಾಗಿ ಚುಟುಕು ಕವಿಗಳು ಪ್ರತಿಭಾವಂತರಾಗಿರಬೇಕು. ಒಳಗಣ್ಣು ಹೊಂದಿದವರಾಗಿರಬೇಕು. ಅರ್ಥಾತ್ ದರ್ಶನ ಶಕ್ತಿ ಹೊಂದಿದವರಾಗಿರಬೇಕು ಹಾಗೂ ಭಾಷೆಯಲ್ಲಿ ಪ್ರಭುತ್ವಗಳಿಸಿದವರಾಗಿರಬೇಕು. ಹಿತ-ಮಿತ ಹಾಗೂ ಉಚಿತ ಶಬ್ದಗಳನ್ನು ಅಪೂರ್ವ ಚಿತ್ರವನ್ನು ಕಟ್ಟಿಕೊಡುವ ಮಾಂತ್ರಿಕನಾಗಿರಬೇಕು.

ಚುಟುಕು ಸಾಹಿತ್ಯದಲ್ಲಿ ಜೀವನ ತುಂಬಾ ಸಂಕೀರ್ಣವಾದ್ದರಿಂದ ದರ್ಶನವೂ ಸಂಕೀರ್ಣವಾಗುತ್ತಿದೆ. ಆದರೆ ಕವಿಯ ಕೆಲಸ ಇಲ್ಲಿ ಛಾಯಾಗ್ರಾಹಕನಂತೆ ಸೆರೆ ಹಿಡಿಯುವ ಕೆಲಸ ಅಷ್ಟೆ. ನಡುಗನ್ನಡ ಸಾಹಿತ್ಯದಲ್ಲಿ ಚುಟುಕು ಕವಿಯೆಂದೇ ಬಿಂಬಿತವಾಗಿರುವ ಸರ್ವಜ್ಞನ ತ್ರಿಪದಿಯಲ್ಲಿ ಜೀವನ ದರ್ಶನ ಕಾಣಬಹುದು.

ಕಲ್ಲರಳಿ ಹೂವಾಗಿ ಎಲ್ಲರಿಗೆ ಬೇಕಾಗಿ
ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ
ಬಲ್ಲವರು ಹೇಳಿ ಸರ್ವಜ್ಞ

ಎಂದು ಸುಣ್ಣದ ಕಲ್ಲಿನ ಮಹತ್ವವನ್ನು ಸರ್ವಜ್ಞ ಹೇಳಿದ್ದಾನೆ. ಆದರೆ ಎಂ. ಅಕಬರ್ ಅಲಿ ಅವರ ವಿಚಾರದಂತೆ ಹೇಳಬೇಕೆಂದರೆ ಅಂತರಗಂಗೆಯಂತೆ ಮತ್ತು ಇಲ್ಲಿ ಜೀವನ ತಳೆದು ಹರಿದಾಡುತ್ತಿರುವ ಬೇರೊಂದು ಅರ್ಥವೂ ಇದೆ. ಜಗತ್ತಿಗಾಗಿ, ಜನ ಕಲ್ಯಾಣಕ್ಕಾಗಿ, ಸುಟ್ಟು ಸುಣ್ಣವಾಗುವ ಕರ್ಮಯೋಗಿಯ ತ್ಯಾಗಶೀಲ ಚಿಂತನೆ ಇಲ್ಲಿ ವ್ಯಂಜಿತವಾಗಿದೆ. ಕಲ್ಲಿನಂತಹ ಎದೆ ಬದುಕಿನ ಕಷ್ಟ ಕಾರ್ಪಣ್ಯಗಳಿಂದಾಗಿಯೋ, ಶಿವಭಕ್ತಿ ಶಿವಕೃಪೆಯಿಂದಾಗಿಯೋ? ಕರಗಿ ಆರ್ದ್ರವಾಗಿ, ಅರಳಿ ಹೂವಾಗಿ ಘಮ ಘಮಿಸಿ ಎಲ್ಲರ ಪ್ರೀತಿಗೂ ಪಾತ್ರವಾಗಿ ದೇವರ ಸೇವೆಗೂ ಸಂದು ದೇವಸ್ಥಾನದ ಶಿಖರಕ್ಕೆ ಬೆಳಕಾಗಿ ಬಾಳನ್ನು ಕೃತಾರ್ಥಗೊಳಿಸಬೇಕೆಂಬ ಆಶಯ ಇಲ್ಲಿದೆ. ಅಲಿಯವರ ಚುಟುಕುಗಳನ್ನು ಗಮನಿಸಿದಾಗ

"ಚುಕ್ಕಿ ಮೀನ ಬುಟ್ಟಿ ಹೊತ್ತು
ಮೈಯನೆಲ್ಲ ಬಳುಕಿಸಿ
ಬಂದಳಿದೊ ಇರುಳ ಹೆಣ್ಣು
ಚಂದ್ರಕಣ್ಣ ಮಿಟುಕಿಸಿ"

ಇರುಳೆಂದರೆ ಮೂಗುಮುರಿಯುವವರಿಗೆ ಈ ಕತ್ತಲ ಬಗೆಯೂ ರಮ್ಯ. ಚುಟುಕು ಇರುಳನ್ನು ಸಹ್ಯವಾಗಿಸಬಹುದು. ಅಸಹನೀಯವಾಗಿರುವ ಬದುಕನ್ನು ಸಹನೀಯವಾಗಿಸುವ ಸಾಹಿತ್ಯದ ಬಹುದೊಡ್ಡ ಶಕ್ತಿ ಈ ಮೇಲಿನ ಚುಟುಕಿನಲ್ಲಿ ಸಾಕಾರಗೊಂಡಿದೆ. ಆಕಾಶದಲ್ಲಿ ಮೋಡದ ಸೊಬಗನ್ನು ಕವಿ ಅಲಿಯವರು ಕಣ್ತುಂಬ ಸೂರೆಗೊಂಡಿದ್ದಾರೆ. ಅಂತಹದೊಂದು ಚುಟುಕು ಇಲ್ಲಿದೆ.

ಮೋಡವೆಂಬ ಕನ್ಯೆ
ಮಾಡಿಕಣ್ಣ ಸನ್ನೆ
ಕಣ್ಣೆದುರು
ಕುಣಿದು ಬೀರು-
ತಿಹಳು ಮಾಯಯನ್ನೆ

ಆಕಾಶದಲ್ಲಿನ ಸೌಂದರ್ಯ ಅಲಿಯವರ ಕಣ್ಣಿಗೆ ಅತ್ಯದ್ಭುತ. ಅಲ್ಲಿಯ ಹುಣ್ಣಿಮೆಯ ಪೂರ್ಣಚಂದ್ರ, ನಕ್ಷತ್ರ ಕವಿಯ ಮನಸ್ಸಿಗೆ ಮುದ ನೀಡಿವೆ. ತುಂಬುದಿಂಗಳನ್ನು ಬಗೆದುಂಬಿ ಎದೆತುಂಬಿ ಬಣ್ಣಿಸುತ್ತಾರೆ. ಕವಿ ಕಾಣ್ಕೆಯನ್ನು ಧಾರೆಯೆರೆಯುತ್ತಾರೆ.

ಅಂಬೆಗಾಲಲಿ ನಡೆದು ತುಂಬುದಿಂಗಳ ಬಂದ
ಮೂಡಣದ ಹೊಸ್ತಿಲವ ದಾಟಿ ಹೊರಗೆ

ಕಲ್ಲು ಸಕ್ಕರೆ ಹರಳ ಕರಕರಗಿ ಜೊಲ್ಲಾಗಿ
ಚೆನ್ನಾಗಿ ಸುರಿದಿತ್ತು ಸುತ್ತು ಧರೆಗೆ !

ಹುಣ್ಣಿಮೆಯ ಚಂದಿರನ ಅಹ್ಲಾದವನ್ನು ಸವಿಯುತ್ತಾ ಓದುಗರ ಚಿಂತನಾ ಕ್ರಮವನ್ನು ಹೆಚ್ಚಿಸುತ್ತವೆ. ಚೌಪದಿಗಳಲ್ಲೂ ಇವರ 'ಚುಟುಕು' ಛಂದಸ್ಸಿನ ಸಾಮಾನ್ಯ ನಿಯಮಗಳನ್ನು ಮೀರಿ ಕವಿ ಪ್ರತಿಭೆಗೆ ಗಡಿಯಿಲ್ಲ; ಮಡಿಯಿಲ್ಲ ಎಂಬುದನ್ನು ಸಾಬೀತು ಮಾಡುತ್ತಾರೆ. ಹುಣ್ಣಿಮೆ ಚಂದ್ರ ಎಂಬ ರಚನೆಯಲ್ಲೂ ರೂಪಕವು ವಿಜೃಂಭಿಸುತ್ತಟೆ. ಹುಣ್ಣಿಮೆಯ ಚಂದಿರನಂತೆ ಕಣ್ಸೆಳೆಯುತ್ತದೆ. ಮೈಮನ ಪುಳಕವಾಗುತ್ತದೆ.

ನಭದಾಂಗಣದಲ್ಲಿ ಚೆಲ್ಲಿದರಾರೋ!
ರಾಣಿಯ ಕಾಲದ ರೂಪಾಯಿ
ತಡವರಿಸುತ್ತಿವೆ ಕೊಳ್ಳಲಿಕೆಂದು
ಚಿಕ್ಕೆಯ ಮಕ್ಕಳು ಬಡಪಾಯಿ!!

ಇಂಥ ಚುಟುಕುಗಳು ಕವಿತೆಯಲ್ಲದೇ ಇನ್ನೇನಾಗುತ್ತವೆ? ಇಂಥವು ಬಾಳದೇ ಇನ್ನೆಂಥದೋ ಬಾಳಿಕೊಳ್ಳುತ್ತವೆ? ಅಲ್ಲಿಯವರು ಕೇವಲ ಅಲಂಕಾರಗಳಲ್ಲೇ ಮುಳುಗಿ ಹೋದ ಕವಿ ಎಂದು ಭಾವಿಸಿದರೆ ತಪ್ಪಾಗುತ್ತದೆ. ಅವರ ಚುಟುಕುಗಳನ್ನು ಹೇಗೆಲ್ಲ ದುಡಿಸಿಕೊಳ್ಳಬಹುದು ಎಂಬಲ್ಲಿ ಪ್ರಯೋಗ ನಡೆಸಿದವರು. ಚುಟುಕುಗಳ ಶಕ್ತಿಯನ್ನು ಹೊಣೆಗಾರಿಕೆಯನ್ನು ಅವರು ನನ್ನ ಚುಟುಕು ಎಂಬುದರಲ್ಲಿ ಪರಿಣಾಮಕಾರಿಯಾಗಿ ಅಡಕಗೊಳಿಸಿದ್ದಾರೆ.

ನಮ್ಮ ನಾವೇ ನೋಡಿಕೊಳುವ ಕನ್ನಡಿ ಹರಳು
ಇಲ್ಲ ಸಲ್ಲದಕೆಸೆದ ಕಲ್ಲು ಹರಳು
ಅಥವಾ ಕುದಿಮನದಲ್ಲಿ ಕದ್ದು ಹೊರಕ್ಕೆ ತಂದ
ಚಿಂತಾಮಣಿಯು ಕಡೆದ ವಜ್ರ ಹರಳು

ಇಂಥಹ ಚುಟುಕು ಹನಿಗವನಗಳನ್ನು ಅಕಬರಅಲಿಯವರು ಅಧಿಕ ಸಂಖ್ಯೆಯಲ್ಲಿ ನೀಡಿದ್ದಾರೆ.

ಹೊಸಗನ್ನಡದ ಚುಟುಕು ಸಾಹಿತ್ಯ ರಚನೆಗಳಲ್ಲಿ ಡಿವಿಜಿಯವರು ಒಂದು ಅಮೂಲ್ಯ ಕೊಡುಗೆ ನೀಡಿದ್ದಾರೆ. ಇವರ ಮಂಕುತಿಮ್ಮನ ಕಗ್ಗದ ಬಹುಪಾಲು ಚುಟುಕುಗಳಲ್ಲಿ ಜೀವನ, ನಿಸರ್ಗ, ರಾಜಕಾರಣ, ದೈವಲೀಲೆ, ಬದುಕಿನ ವಿಷಮತೆ, ಸೌಂದರ್ಯ ದರ್ಶನ ಹೀಗೆ ತಮ್ಮ ಜೀವನದ ಅನುಭವಗಳನ್ನು ಅವಲೋಕನ ಮಾಡಿದ್ದಾರೆ. ಹೊಸ ಮತ್ತು ಹಳೆಯ ತತ್ವಗಳಡಿ ಚುಟುಕು ಅವಲೋಕಿಸಿದಾಗ

ಹೊಸ ಚಿಗುರು ಹಳೆಬೇರು ಕೂಡಿರಲು ಮರಸೊಬಗು
ಹೊಸಯುಕ್ತಿ ಹಳೆತತ್ವದೊಡಗೂಡೆ ಧರ್ಮ
ಋಷಿ ವಾಕ್ಯದೊಡನೆ ವಿಜ್ಞಾನ ಕಲೆ ಮೇಳೈಸಿ
ಜಸವು ಜನಜೀವನಕೆ ಮಂಕುತಿಮ್ಮ

ಇಂದಿನ ಜ್ಞಾನಕ್ಕೆ ಅಂದಿನ ಅನುಭವಗಳು ಸಾಮ್ಯದಿಂದ ಕೂಡಿದರೆ ಬದುಕು ಸುಂದರ, ಹಳೆತತ್ವ ಹೊಸಜ್ಞಾನ ಸೇರಿದರೆ ಸತ್ವವೇ ಬೇರೆ.

ಡಿವಿಜಿಯವರ ಜೀವನದಲ್ಲಿ ಏನೇ ಕಷ್ಟಗಳು ಬಂದರೂ ಸೈರಿಸಿಕೊಳ್ಳಬೇಕು. ಕಷ್ಟಗಳು ಮನುಷ್ಯನಿಗಲ್ಲದೆ ಮರಕ್ಕೆ ಬರುತ್ತವೆಯೋ? ಅಂತಹ ಕಷ್ಟದಲ್ಲಿ ಬೇರೆಯವರಿಗೆ ಸಿಹಿಯಾಗಿರಬೇಕು ಎನ್ನುವ ನಿಲುವು ಅವರದು.

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ

ಜೀವನ ಕಷ್ಟಗಳ ಸಂತೆಯಾಗಿದ್ದರೂ ಇತರರಿಗೆ ಸವಿಯಾಗಿರು ಎಂದಿದ್ದಾರೆ. ದೇವರ ಮೇಲಿನ ನಮ್ಮ ಭಕ್ತಿಯನ್ನು ಡಿವಿಜಿಯವರು ಸಿಂಬಳದ ನೊಣಕ್ಕೆ ಹೋಲಿಸಿ ಲೇವಡಿ ಮಾಡಿದ್ದಾರೆ.

ನಂಬದಿದ್ದನು ತಂದೆ ನಂಬಿದನು
ಪ್ರಹ್ಲಾದ ಕಂಬದಿಂ ಬಿಂಬದಿಂ ಮುಕ್ತಿವರಿಗಾಯ್ತು
ನಂಬಿಯೂ ನಂಬದಿಹ
ಸಿಂಬಳದ ನೊಣ ನೀನು ಮಂಕುತಿಮ್ಮ

ನಮ್ಮ ಭಕ್ತಿ ಇದೇ ರೀತಿ, ಸಿಂಬಳದ ನೊಣ ಆಸೆಯಿಂದಾಗಿ ಸಿಂಬಳಕ್ಕೆ ಬಂದು ಬಿದ್ದಾಗಿದೆ. ಹಾರಲಾಗುತ್ತಿಲ್ಲ ರೆಕ್ಕೆ ಒದ್ದೆಯಾಗಿದೆ. ಹಾಗೆಂದು ಅಲ್ಲಿ ಇರುವಂತೆಯೂ ಇಲ್ಲ. ನಮ್ಮ ಅನುಮಾನದ ಮನಸ್ಸಿಗೆ ಸಿಂಬಳದ ನೊಣದಂತೆ ದರ್ಶತ್ವ ಪಡೆದಿದೆ.

ಜೀವನದ ಕೊಳೆ ಕಲ್ಮಶಗಳನ್ನು ತೊಳೆಯಬಲ್ಲ ತೀರ್ಥವೆಂದರೆ ಚುಟುಕುಗಳು ರಾಷ್ಟ್ರಕವಿ ಕುವೆಂಪುರವರು ಹೇಳುವಂತೆ "ಕವಿತೆಗೆ ಪ್ರತಿಭಾ ಕಲ್ಪನೆ ಬೇಕೇ ಬೇಕು. ಭಾವನೆ ಅದರ ಆತ್ಮ ಶಬ್ದಗಳೇ ಅದರ ದೇಹ ಅದು ಆತ್ಮವು ತನಗೆ ತಾನೇ ಆಡಿಕೊಳ್ಳುವ ಮಾತು, ಕವಿತೆ ಏಕಾಂತ ಧ್ಯಾನದಿಂದ ಹೊರಸೂಸುವ ಗಾನ" ಎಂದಿರುವುದನ್ನು ನೋಡಿದರೆ ಚುಟುಕು ಕಾವ್ಯಕ್ಕೆ ಎಂತಹ ಅಗಾಧಶಕ್ತಿ ಇದೆ ಎಂದು ತಿಳಿದುಬರುತ್ತದೆ.

ಕುವೆಂಪುರವರು ಮಂತ್ರಾಕ್ಷತೆ ಎಂದು ಕರೆದ ಈ ಚುಟುಕುಗಳಲ್ಲಿ ಜೀವನದ ಅನುಭವದ ಮುತ್ತುಗಳಿವೆ.

ಕಡಲಲೆ ದಡವನು ಬಡಿಯುವ ತೆರದಲಿ
ಯೌವನ ಎದೆಯನು ಬಡಿಯುತಿದೆ

ಬಿರುಗಾಳಿಯ ಕಡೆಗೋಲಿನ ಭರದಲಿ
ಬೇಟವು ಬಗೆಯನು ಕಡೆಯುತಿದೆ.

ಅಲ್ಲದೆ,

ಓ ದೇವರೇ, ನೀನಿದ್ದರೆ
ನನ್ನಾತ್ಮವದಿದ್ದರೆ
ಸಂರಕ್ಷಿಸು ಬಲವಿದ್ದರೆ
ಪ್ರಾರ್ಥನೆಯಿದು ನಿನಗೆ
ಸಂದೇಹವೆ ಆರಾಧನೆ
ಮೇಣ್ ಸಾಧನೆ ನನಗೆ

ಇನ್ನು ನಿಸರ್ಗದತ್ತವಾದ ತದಿಗೆ ಚಂದಿರನನ್ನು ಕುರಿತು

ಏನು ಸುಂದರ ಈ ತದಿಗೆ ಚಂದಿರ
ಆಕಾಶವೇ ತಾನಾಗಿದೆ ಆನಂದ ಮಂದಿರ

ಎಂದು ಸುಂದರ ಬದುಕನ್ನು ನೀಡಿದ್ದಾರೆ. ಇಡೀ ಬದುಕನ್ನೇ ಅಲ್ಲಾಡಿಸುವ ಯೌವನದ ಭರಾಟೆ ಹಾಗೂ ಜ್ಞಾನಾರ್ಜನೆಗಾಗಲಿ, ಆತ್ಮ ಸಾಧನೆಗಾಗಲಿ ಸಂದೇಹವೇ ಮೂಲವೆಂಬ ಭಾವನೆ ಕುವೆಂಪು ಅವರ ತಾರುಣ್ಯ ಜೀವನವನ್ನಾಕ್ರಮಿಸಿಕೊಂಡಿದ್ದೇವೆಂಬುದು ಈ ಚುಟುಕುಗಳಲ್ಲಿ ವ್ಯಕ್ತವಾಗುತ್ತದೆ. ಇವು ಇಡೀ ಮನುಕುಲದ ಬದುಕಿನಲ್ಲಿ ಸಹಜವಾಗಿ ಕಾಣಬಹುದಾದ ಚಾಳಿಗಳು ತಾನೆ.

ಕನ್ನಡ ಸಾಹಿತ್ಯದಲ್ಲಿ ಚೌಪದಿಯ ಒಂದು ಭವ್ಯ ಪರಂಪರೆಯನ್ನು ಸಮಗ್ರವಾಗಿ ದುಡಿಸಿಕೊಂಡು ಅದರಲ್ಲಿ ಸಫಲರಾದವರು ದಿನಕರ ದೇಸಾಯಿಯವರು. ಇವರ ಚೌಪದಿಗಳಲ್ಲಿ ವೈವಿಧ್ಯವಿದೆ ಹೊಸತನವಿದೆ. ಬದುಕಿನ ಸಮಗ್ರ ಮುಖದ ನೋಟವಿದೆ. ತಮ್ಮ ಸುತ್ತಲಿನ ಜೀವನವನ್ನು ದಿನಕರರು ತೆರೆದ ಕಣ್ಣುಗಳಿಂದ ನೋಡುತ್ತಾರೆ. ಇವರದು ಪ್ರತಿಭೆಯ ಬೀಸು, ವಿಶಾಲ ಅನುಭವ, ಅಪಾರ ಸಾಹಿತ್ಯಾಭ್ಯಾಸ ಅವರು ಬಾಳಿನಲ್ಲಿ ಮಾಡಿದ ನಾನಾ ಪ್ರಯೋಗಗಳನ್ನು, ಸ್ಥಾಪಿಸಿದ ನಗೆ, ಅನುಭವಿಸಿದ ಸೋಲು ಕಂಡ ಕನಸುಗಳ ಅಭಿವ್ಯಕ್ತಿಯನ್ನೇ ಅವರ ಚುಟುಕುಗಳಲ್ಲಿ ಕಾಣಬಹುದು.

ಜೀವನವೇ ಕನಸೆಂದು ತಿಳಿದೊಡನೆ ಕವಿಯು
ಮಣ್ಣು ಹಾಸಿಗೆಯಾಗಿ ಮಲಗಿತ್ತು ಭುವಿಯು
ನರಜನ್ಮ ನೀರ್ಗುಳೆಯೆಂದು ತಿಳಿದಾಗ
ಕಡಲತೊರೆಗಳು ಜಿಗಿದು ಹಾಕಿದವು ಲಾಗ

ಈ ಜೀವನವೇ ಕ್ಷಣಿಕವಾದದ್ದು, ಇದನ್ನು ನಂಬಿ ಕೂಡುವಂತಿಲ್ಲ ದಾಸರು ತಮ್ಮ ಕೀರ್ತನೆಗಳಲ್ಲಿ ಇದೇ ರೀತಿ ಸಾರಿದ್ದಾರೆ. ''ಯಾರಿಗೆ ಯಾರುಂಟು ಎರವಿನ ಸಂಸಾರ, ನೀರ ಮೇಲಣ ಗುಳ್ಳೆ ನಿಜವಲ್ಲೋ ಹರಿ'' ಎಂದಿದ್ದಾರೆ.

ದಾರಿನೂರಾರು ಮುಟ್ಟುವ ಜಾಗವೊಂದು
ನಡೆಯುವರು ಜೊತೆಗೆ ಗೆಳೆಯರು ಬಂಧು
ಕೊನೆಯ ಹೆಜ್ಜೆಯ ಹಾಕಿ ಕೈ ಮುಗಿದಾಗ
ಹಿಂಬಾಲಿಸುವ ಕಾರ್ಯ ಯಾರಿಂದ ಆಗ

ಬದುಕು ಜಟಕಾಬಂಡಿ ನಮ್ಮ ಜೀವನಕ್ಕೆ ನೂರಾರು ದಾರಿಗಳಿದ್ದರೂ ಕೊನೆಗೆ ಮುಟ್ಟುವ ದಾರಿ ಮಾತ್ರ ಒಂದೇ. ಕೇವಲ ಬಾಹ್ಯ ಜೀವನಕ್ಕೋಸ್ಕರ ಬಡಿದಾಡುವ ಜೀವನ ನಮ್ಮದಾಗಿದೆ.

ಅನೇಕ ಜನ ವೇದಾಂತಿಗಳು, ದಾರ್ಶನಿಕರು, ಧರ್ಮದರ್ಶಿಗಳು ಆತ್ಮವನ್ನು ಕುರಿತಾಗಿ ಏನೆಲ್ಲ ಹೇಳಿದ್ದಾರೆ. ಆದರೆ ದಿನಕರರು ಕೇವಲ ನಾಲ್ಕು ಸಾಲುಗಳಲ್ಲಿ ಆತ್ಮದ ವಿಚಾರ ಕುರಿತು ಬರೆದ ಒಂದು ಚುಟುಕು ಇಲ್ಲಿದೆ.

ಮಾನವನ ಆತ್ಮವೆಂದರೆ ಒಂದು ಗ್ಲಾಸು
ಸ್ವರ್ಗವೇರಲು ಅದಕೆ ಬರೀ ಒಂದು ತಾಸು
ಹೀಗೆಂದು ಭರವಸೆಯ ನೀಡೆ ವಿಜ್ಞಾನಿ
ಚಿಂತೆಯಿಲ್ಲದೆ ಪ್ರಾಣ ನೀಗಿದನು ಜ್ಞಾನಿ!

ದಿನಕರರು ಚೌಪದಿಗಳಲ್ಲಿ ಪ್ರಾಸಕ್ಕೆ ಹೆಚ್ಚಿನ ಒತ್ತು ನೀಡಿದ್ದಾರೆ. ಅಷ್ಟೇ ಅರ್ಥಪೂರ್ಣವಾದ ಚುಟುಕುಗಳು ಅವರದ್ದಾಗಿವೆ. ಇವರ ಚುಟುಕುಗಳು ಸಂಶೋಧನ ಅಧ್ಯಯನಕ್ಕೊಂದು ಮಾದರಿಯಾಗಿವೆ.

ಹೊಸಗನ್ನಡ ಗದ್ಯ ಸಾಹಿತ್ಯದಲ್ಲಿ ಅಗ್ರಸ್ಥಾನದಲ್ಲಿರುವ ದೇಜಗೌ ಚುಟುಕು ಸಾಹಿತ್ಯದಲ್ಲಿ ಕೃಷಿ ಮಾಡಿದ್ದು ಒಂದು ಸೋಜಿಗವೇ ಸರಿ. ಚುಟುಕು ಸಾಹಿತ್ಯ ಯಾರನ್ನೂ ಬಿಡದೆ ಎಲ್ಲ ದಿಗ್ಗಜರನ್ನೂ ಆಕರ್ಷಿಸಿದೆ. ದೇಜಗೌರವರ ಚುಟುಕುಗಳಲ್ಲಿ ಸಂಸಾರದ ಅಸಾರತೆ ಬದುಕಿನ ಬವಣೆ ದೈವತ್ವದ ಸ್ವರೂಪ, ಸ್ವಾನುಭವಗಳ ಕಂಪು ಕಂಡುಬರುತ್ತವೆ.

ಯಾವುದೇ ಜೀವಿಯು ಏಕಾಂಗಿಯಾಗಿರಲು ಸಾಧ್ಯವಿಲ್ಲ. ಸಾಧುವೂ ಅಲ್ಲ ಸಮರಸದ ಬದುಕು ಸುಖಮಯ ಬದುಕು, ಅವಿನಾಭಾವ, ಅವಿಭಕ್ತ, ಅನ್ಯೋನ್ಯತೆ ಸಾರುವ ಚುಟುಕುಗಳಲ್ಲಿ ಜಾತಿ ಜಾತಿಗಳ ಮಧ್ಯೆ ಕಿತ್ತಾಟವಾಗುವ ಈ ಕಾಲದಲ್ಲಿ ಸಮರಸದ ಬದುಕು ಸಾಗಿಸಿದರೆ ಸುಖ-ಶಾಂತಿ ದೊರೆಯುವುದು ಎಂದು ಸಾರುವ ಈ ಚುಟುಕುವಿನಲ್ಲಿ

ಹಲವು ಬಣ್ಣಗಳ ಹೂ ಗುಂಪು ಗುಂಪಾಗಿರಲು
ಬಲು ಚಂದ ಉದ್ಯಾನವಲ್ಲದಿರೆ ಸೊಗಸಿಲ್ಲ
ಹಲವು ಧರ್ಮಗಳು ಸಮರಸದಿ ಸಂಗಮಿಸಲಾ
ವಲಯದಲ್ಲಿ ಸುಖ-ಶಾಂತಿಯುಂಟು ಮಗಳೆ.

ಬಿಡಿ ಮಲ್ಲಿಗೆಗಿಂತ ಕಟ್ಟಿದ ಮಾಲೆಗೆ ಬೆಲೆ ಎನ್ನುವಂತೆ ಹಲವು ಬಣ್ಣದ ಹೂಗಳು ಉದ್ಯಾನವನದಲ್ಲಿದ್ದರೆ ಅದರ ಸೊಬಗೇ ಬೇರೆ. ನಮ್ಮ ದೇಶ ಜಾತ್ಯಾತೀತ ರಾಷ್ಟ್ರ. ಅನೇಕ ಧರ್ಮಗಳ ಸಂಗಮ ಹಲವು ಧರ್ಮದವರು ಒಂದಾಗಿ ನಡೆದರೆ ದೇಶದಭಿವೃದ್ಧಿ ಸಾಧ್ಯ ಎಂದು ಒಕ್ಕಟ್ಟಿನ ನುಡಿಯನ್ನು ತಮ್ಮ ಜೀವನಾನ್ವೇಷಣೆಯನ್ನು ಮೇಲಿನ ಚುಟುಕುವಿನ ಮೂಲಕ ತಿಳಿಸಿದ್ದಾರೆ.

ಮನುಷ್ಯನಿಗೆ ನೆಮ್ಮದಿಯಿಂದಿರಲು ಊಟ, ವಸತಿ, ಬಟ್ಟೆ ಇವು ಬಹಳ ಪ್ರಾಮುಖ್ಯ. ಅಶಾಶ್ವತ ಐಶ್ವರ್ಯಕ್ಕಿಂತ ಶಾಶ್ವತ ಜ್ಞಾನದೀವಿಗೆ ಮುಖ್ಯ ಎನ್ನುವ ಈ ಚುಟುಕುವಿನಲ್ಲಿ

ಆಸರೆಗೆ ಚಿಕ್ಕ ಮನೆ ಹಸಿದ ಹೊಟ್ಟೆಗೆ ಹಿಟ್ಟು
ಕೂಸೊಂದು ಮಡದಿಯೆಡೆ ಸನಿಹದಲಿ ಪುಸ್ತಕಂ
ಬೇಸರಿಕೆ ಕಳೆಯೆ ಕೋಕಿಲವಾಣಿ ಸಂಗೀತ
ಈಸಿರಲು ಸಗ್ಗ ಬೇಡೆನಗೆ ಕೇಳು ಮಗಳೆ

ಮನುಷ್ಯನಿಗೆ ಆಸೆ ಇರಬೇಕು. ಆದರೆ ದುರಾಸೆಯಲ್ಲ. ಅವನಿಗೆ ಜ್ಞಾನದ ಹಸಿವು ಅವಶ್ಯ. ಪ್ರಕೃತಿಯ ಸೊಬಗನ್ನು ಮೊದಲು ಸವಿದವರಾರು ಎನ್ನುವ ಸೋಜಿಗದ ಚುಟುಕನ್ನು ನೋಡಿದಾಗ

ತುಪ್ಪವನು ಮುಮ್ಮೊದಲು ಮಾಡಿ ಸವಿದವರಾರು?
ಚಿಪ್ಪಿನೊಳಗಣ ಮುತ್ತ ಕಂಡು ಹಿಡಿದವರಾರು?
ತೆಪ್ಪವನು ಕಟ್ಟಿ ನೀರ್ಮೇಲೆ ತೇಲ್ವವರಾರು?
ನಿಪ್ಪೊಸತು ಸೋಜಿಗವು ಕೇಳು ಮಗಳೆ

೧೨ನೇ ಶತಮಾನದಲ್ಲಿ ದೇವರ ದಾಸೀಮಯ್ಯ ಕೂಡ ಮರದೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ.... ನೀಬೆರಸಿದ ಬೇಧಕ್ಕೆ ನಾ ಬೆರಗಾದೆನಯ್ಯ ಎಂದು ತಿಳಿಸಿದ್ದು ನೋಡಿದರೆ ಇದರ ರುಚಿ ಮೊದಲು ಸವಿದವರಾರು ಎಂದು ಆಶ್ಚರ್ಯದ ಜೊತೆ ಪ್ರಶ್ನೆ ಮಾಡಿಕೊಂಡಿದ್ದಾರೆ. ಇಂತಹ ಅನೇಕ ಚುಟುಕುಗಳು ಜೀವನ ದರ್ಶನದ ಹಿನ್ನೆಲೆಯಾಗಿ ಓದಿಸಿಕೊಂಡು ಹೋಗುತ್ತವೆ.

ಚುಟುಕು ಸಾಹಿತ್ಯದಲ್ಲಿ ಇನ್ನೋರ್ವ ಅಗ್ರಗಣ್ಯ ಕವಿ ಡುಂಡಿರಾಜ್ ಚುಟುಕು ಚಕ್ರವರ್ತಿ ಎಂದೇ ಖ್ಯಾತರಾದ ಇವರ ಬರವಣಿಗೆಯಲ್ಲಿ ಆಡುನುಡಿಯ ಸೊಗಸನ್ನು, ಸೊಗಡನ್ನು ಮನಸಾರೆ ಸವಿಯಬಹುದು. ಇವರ ಚುಟುಕುಗಳು ಓದುಗರಿಗೆ ಒಳ್ಳೆಯ ಮಾತ್ರೆಗಳಾಗಿ ಬಿಂಬಿತವಾಗಿವೆ. ಮನುಷ್ಯ ಹುಟ್ಟಿದವನು ಸಾಯಲೇಬೇಕು ಎನ್ನುವುದನ್ನು "ಹುಟ್ಟು-ಸಾವು" ಚುಟುಕುವಿನಲ್ಲಿ

ಹುಟ್ಟಿದ ತಕ್ಷಣ
ಮಗುವಿಗೆ
ಅಳಬೇಕು

ಅನಿಸುತ್ತದೆ

ಏಕೆಂದರೆ

ಹುಟ್ಟಿನ ಒಟ್ಟಿಗೆ

ಸಾವು ಜನಿಸುತ್ತದೆ

ಈ ಚುಟುಕನ್ನು ವಿಮರ್ಶಿಸುತ್ತಾ ಹೋದಾಗ ಮನುಷ್ಯ ಅನೇಕ ರೋಗಗಳ ತಾಣವೂ ಆದರೂ ಮಗುವಿನ ಅಳುವಿನ ಪ್ರತೀಕದೊಂದಿಗೆ ಜೀವನದ ಅನುಭವ ತಿಳಿಯುತ್ತದೆ.

ಸಂಸಾರವೆಂಬುದು ೬೩ ಆಗಿರಬೇಕೇ ವಿನ ೩೬ ಆಗಬಾರದು ಗಂಡ ಹೆಂಡತಿ ಅನ್ಯೋನ್ಯವಾಗಿದ್ದರೆ ಸಂಸಾರ ಸಸಾರ, ಇಲ್ಲದಿರೆ ನಿಸ್ಸಾರ. ಗಂಡು ಹೆಣ್ಣು ಕೋಪಿಸಿಕೊಂಡರೆ ಆಗುವ ಅನಾಹುತವನ್ನು ಕುರಿತ ಬಹು ಅರ್ಥಪೂರ್ಣವಾದ ಚುಟುಕು

ಗಂಡ ಹೆಂಡತಿ

ಖುಷಿಯಾಗಿದ್ದರೆ

ಸೊಗಸಾದ ಜೀವನ

ಮುನಿಸಿಕೊಂಡರೆ

ಸೊಗವಿಲ್ಲ

ಸಾದಾ ಜೀವನ

ಗಂಡ ಹೆಂಡಿರ ಜಗಳ ಗಂಧ ತೀಡಿದಂಗ ಇರಬೇಕು. ವಿರಸ ಹೆಚ್ಚಾಗಬಾರದು ಸಮರಸವೇ ಜೀವನ ಎಂದರಿತಿರಬೇಕು.

ಮುತ್ತಿಗಿಂತ ಹೊತ್ತು ಉತ್ತಮ. ಸಿಕ್ಕ ಸಮಯವನ್ನು ಹಾಳು ಮಾಡದೆ ಸಮಾಜ ಮುಖಿಯಾಗಿರಬೇಕು ಎಂದು ತಿಳಿಸಿದ ಈ ಚುಟುಕು ನೋಡಿದಾಗ

ಬಳಸದೇ ಎಲ್ಲವನ್ನು

ಉಳಿಸಲು ಯತ್ನಿಸುವನು

ಮನುಷ್ಯ

ಬಳಸದಿದ್ದರೂ

ಖರ್ಚಾಗುವುದು

ಆಯುಷ್ಯ

ಡುಂಡಿರಾಜ್ ಜೀವನದ ಅನುಭಾವಗಳನ್ನು ಇಂದಿನ ಸಹೃದಯ ಓದುಗರಿಗೆ ಉಣಬಡಿಸಿದ್ದಾರೆ. ಇವರ ಅನೇಕ ಚುಟುಕುಗಳು ಇಂದಿನ ವಿಮರ್ಶೆಗೆ ಒಳಪಡಿಸಿದಾಗ ಇದರಲ್ಲಿ ಶಬ್ದ ಅರ್ಥ ಚಮತ್ಕಾರಿಕವಾಗಿ ಮೂಡಿಬಂದಿದೆ.

ಡುಂಡಿರಾಜ್‌ರಂತೆ ಎಚ್.ಎ.ಭಿಕ್ಷಾವರ್ತಿಮಠ ಇವರು ಚುಟುಕು ರಚನೆಯಲ್ಲಿ ತಮದೇ ಆದ ಛಾಪು ಮೂಡಿಸಿದ್ದಾರೆ. ಇವರ ರಚನೆಗಳಲ್ಲಿ ಜೀವನದ ಅವಲೋಕನವಿದೆ. ಅವರ "ಮಿಂಚುಗೊಂಚಲು", "ಹೂಬಾಣ" ಎನ್ನುವ ಚುಟುಕು ಸಂಕಲನಗಳನ್ನು ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ. ಇಲ್ಲಿ ಕಂಡುಬರುವುದು ಸಂಕ್ಷಿಪ್ತತೆ, ಸರಳತೆ, ಅನುಭವದ ಸಾಂದ್ರತೆ ಹೆಚ್ಚು ಕಂಡುಬರುತ್ತವೆ. ಬದುಕನ್ನು ಹಿಡಿಹಿಡಿಯಾಗಿ ನೋಡುವುದು, ಬದುಕಿನಲ್ಲಿ ಬೆರಗು ನೋಡುವುದೇ ಇವರ ಬರವಣಗೆಯ ಪ್ರಮುಖ ಉದ್ದೇಶ. ಜೀವನದಲ್ಲಿ ಬರೀ ಸುಖವಿದ್ದರೆ ಸಾಲದು. ಕಷ್ಟಗಳು ಇರಬೇಕು. ಇವರ ಚುಟುಕುಗಳನ್ನು ವೀಕ್ಷಿಸಿದಾಗ

ಏರು ಇಳುವು ಇದ್ದರೆ
ಸಂಗೀತ ಮಧುರ
ಏಳು ಬೀಳು ಇದ್ದರೆ
ಬದುಕು ಬಲು ಸುಂದರ

ಸುಖ-ದುಃಖ, ನೋವು-ನಲಿವು ಬದುಕಿನ ಅವಿಭಾಜ್ಯ ಅಂಗಗಳು. ಅವುಗಳಿಲ್ಲದ ಜೀವನ ಬರಡು. ಮಾನವನಿಗೆ ಅಂತ್ಯ ಇದೆ- ಅದೇ ಶಾಶ್ವತ ಬದುಕು ಎಂದಿದ್ದಾರೆ.

ಕೊನೆ ಇಲ್ಲದ ಈ
ಜೀವನ ವಾಕ್ಯದ
ತುಂಬ ಕಾಮ, ಕಾಮ, ಕಾಮ
ಮರಣವೊಂದೇ
ಪೂರ್ಣ ವಿರಾಮ.

ಅಲ್ಪವಿರಾಮದ ಬುದುಕು ಅಪೂರ್ಣ ಎಂದು ಸಾರಿದ ಇವರ ಇನ್ನೂ ಅನೇಕ ಚುಟುಕಗಳನ್ನು ನೋಡಬಹುದು.

ಹಸಿರಿದ್ದಾಗ ಬೆಳೆಯುವುದು
ನೇರವಾಗಿ ಮೇಲೆ ಮೇಲಕೆ
ಹಣ್ಣಾದಾಗ ಮೆಲ್ಲ, ಮೆಲ್ಲನೇ
ತಲೆ ಬಾಗುವುದು ನೆಲಕೆ

ಹಣ್ಣೆಲೆ ಉದುರುವಾಗ ಹಸಿರೆಲೆ ನಗುತ್ತಿತ್ತಂತೆ ಎನ್ನುವ ಗಾದ ಮಾತಿನಂತೆ ಅದೊಂದು ದಿನ ಹಣ್ಣಾಗಲೇ ಬೇಕಲ್ಲ. ಆದರೆ ಸುಮ್ಮನೇ ವಯಸ್ಸಾದರೆ ಸಾಲದು. ಪಕ್ವತೆ ಪಡೆಯಬೇಕಾಗುತ್ತದೆ. ಜೀವನ ದರ್ಶನವನ್ನು ಕುರಿತಾಗಿ ಇನ್ನೂ ಕೆಲವು ಚುಟುಕುಗಳು ಇಂತಿವೆ.

"ಬರ"

ಮಳೆಗೆ ಬಾರದೆ ಇದ್ದರೆ
ಭೂಮಿಗೆ ಬರ
ಪ್ರೀತಿ ಇಲ್ಲದಿದ್ದರೆ
ಬದುಕೇ ಬರ

"ಬಲ್ಲವನು"

ಊಟ ಬಲ್ಲವನಿಗೆ
ರೋಗವಿಲಲ
ಮಾತು ಬಲ್ಲವನಿಗೆ
ಜಗಳವಿಲ್ಲ.
ನೋಟ ಬಲ್ಲವನಿಗೆ
ಸುಂದರವೇ ಎಲ್ಲ
ಪ್ರೀತಿಸಬಲ್ಲವನಿಗೆ
ಬದುಕೆಲ್ಲ ಬೆಲ್ಲ

"ನೆರಳು"

ನಿತ್ಯವು ಬೆಳಕಿನಲ್ಲಿಯೇ
ನಡೆಯುತ್ತಿದ್ದರು ನಾನು
ಹತ್ತಾರು ಬಾರಿ ನನ್ನ
ನೆರಳನ್ನೇ ನಾನು
ಎಡವಿ ಬೀಳುವೆನು

ಇವರ ಚುಟುಕುಗಳು ಬಹುತೇಕವಾಗಿ ಜೀವನದ ಸಾಮಾನ್ಯ ಸಂಗತಿಗಳನ್ನು ಸುತ್ತುವರೆದಿದ್ದರೂ ಅವು ಕೋಲ್ಮಿಂಚಿನಂತೆ ಮಿಂಚಿ ಓದುಗರ ಮುಖಗಳ ಮೇಲೆ ನಗೆಯ ಬೆಳಕನ್ನು ಚೆಲ್ಲುತ್ತವೆ. ಗಂಭೀರವಾದ ಚಿಂತನೆಗೆ ಪ್ರೇರೇಪಣೆ ನೀಡುತ್ತವೆ.

ಕನ್ನಡದ ಪ್ರಬುದ್ಧ ಲೇಖಕಿ ಕವಯಿತ್ರಿ ಬಿ.ಟಿ.ಲಲಿತಾನಾಯ್ಕರು ಕನ್ನಡ ಚುಟುಕು ಸಾಹಿತ್ಯಕ್ಕೆ ಅನುಪಮ ಕೊಡುಗೆ ನೀಡಿದ್ದಾರೆ. ಇವರು ಮೂಲತಃ ರಾಜಕಾರಣಿಯಾಗಿ ಬಿಡುವಿನ ವೇಳೆಯಲ್ಲಿ ಅತ್ಯುತ್ತಮ ಚುಟುಕುಗಳನ್ನು ರಚಿಸಿದ್ದಾರೆ. ಅವರ ಚುಟುಕುಗಳಲ್ಲಿ ಜೀವಂತಿಕೆ ಇದೆ ಹೊಸತನವಿದೆ. ವ್ಯಂಗ್ಯ ವಿಡಂಬನೆಗಳು ಅನುಭವದ ನುಡಿಗಳಿವೆ. ಬಂದೂಕಿನ ಗೋಲಿಯಲ್ಲಿ ತುಂಬಿದ ಸಿಡಿಮದ್ದಿನಂತೆ ಅದು ಅಗಾಧ ಶಕ್ತಿಯಿಂದ ಕೂಡಿದ್ದು ಥಟ್ಟನೆ ಸಿಡಿದಾಗ ವಿಚಾರದ ಕಿಡಿಗಳನ್ನೇ ಸುರಿಸುವಂತೆ ಅವರ ಚುಟುಕುಗಳಿವೆ.

ಲಲಿತಾನಾಯ್ಕರು ಬಹುತೇಕ ಚುಟುಕುಗಳು ಪ್ರಕೃತಿಯಲ್ಲಿರುವ ಸೂರ್ಯನನ್ನು ಕುರಿತಾಗಿ ಚಿತ್ರಿಸಿದ್ದಾರೆ. ಇವರು ಬಂಡಾಯದ ಹಿನ್ನೆಲೆಯಲ್ಲಿ ಪ್ರತಿಭಟನೆಯ ಸಂಕೇತವಾಗಿ ಸೂರ್ಯನನ್ನು ಆಯ್ದುಕೊಂಡಿದ್ದಾರೆ.

"ತೋರಿಬಿಡು"

ನಡು ಮಧ್ಯಾಹ್ನದಲ್ಲಿ
ನೆರಳು ಅಗದಿ ಚೋಟುದ್ದ
ಸಂಜೆ ಮುಂಜಾನೆಯಲಿ
ಭಾರಿ ಉದ್ದುದ್ದ
ಎಂಥಾ ಹುಡುಕಾಟವಿದು ಸೂರ್ಯ
ಬಿಚ್ಚಿ ತೋರಿಬಿಡು ಸತ್ಯ.

ಸೂರ್ಯ ಹತ್ತಿರವಿದ್ದರೆ ನಿಲ್ಲಿಸಿ ಸತ್ಯವನ್ನು ಬಾಯ್ಬಿಟ್ಟು ಹೇಳು ಎಂದು ಕೇಳುವಂತಿದೆ ಈ ಚುಟುಕು. ಇನ್ನೊಂದು ಚುಟುಕು ಸೂರ್ಯನನ್ನು ಕುರಿತು

"ಶರಣಾಗತಿ"

ಎಲೆ ಎಲೆ ಸೇರಿ
ರಕ್ಷಣಾ ಪಡೆಕಟ್ಟಿ
ಉರಿವ ಝುಳಕ್ಕೆ ಸವಾಲೊಡ್ಡಿ
ನಿಂತಮರಕ್ಕೆ
ಸೂರ್ಯ ಶರಣಾಗತಿ

"ಮತ್ಸರ"

ಎಷ್ಟು ಮತ್ಸರ ಈ ಸೂರ್ಯನಿಗೆ
ಮುಗಿಲೊಡನೆ ಸರಸವಾಡಿ
ಮೊಳಕೆಯೊಡೆದಿಳೆಯ ಮೇಲೆ
ಸುಡುಕೆಂಡ ಸುರಿಸುತ್ತಿದ್ದಾನಲ್ಲಾ

ಇಲ್ಲಿ ಸೂರ್ಯನ ಪ್ರಖರತೆ ಕುರಿತು ತಿಳಿಸಿದ್ದಾರೆ. ಪ್ರತಿಕ್ಷಣದಲ್ಲಿ ಸೂರ್ಯನನ್ನು ಬರವಣಿಗೆಯಲ್ಲಿ ಹಿಡಿದಿಡುವ ಚಾಣಾಕ್ಷತನ ಈ ಕವಯತ್ರಿಗಿದೆ.

ಚುಟುಕುಗಳು ಬರೀ ಮನೋರಂಜನೆಗಾಗಿ ಅಲ್ಲ. ಅವು ಸಮಾಜದ ಜಾಗೃತಿಗಾಗಿ ಎಲ್ಲೋ ಹಾಳೆಯಲ್ಲಿ ಗೀಚಿದರೆ ಸಾಲದು. ಅದರಲ್ಲಿ ಅನುಭವದ ಸಾರವಿರಬೇಕು. ಅವು ಚಿಂತನೆಗೆ ಪ್ರಚೋದನೆ ಕೊಡಬೇಕು. ಇತ್ತೀಚೆಗೆ ಲಘುಧಾಟಿಯ ಹಾಸ್ಯದ ಲೇವಡಿಯ ಚುಟುಕುಗಳೇ ಹೆಚ್ಚಾಗಿ ಪ್ರಕಟವಾಗುವ

ಪ್ರವಾಹದ ವಿರುದ್ಧ ಗಂಭೀರ ಯೋಚನೆಗೆ ಹಚ್ಚುವ ಎಚ್ಚೆಸ್ಕೆ ಚುಟುಕುಗಳು ಚುಟುಕು ಪರಂಪರೆಗೆ ಹೊಸ ಆಯಾಮ ಕೊಟ್ಟಿವೆ.

ಬಿ.ಟಿ.ಲಲಿತಾನಾಯ್ಕರವರು ಸೂರ್ಯನನ್ನು ಕುರಿತಾಗಿ ಚಿತ್ರಿಸಿದ ಚುಟುಕುಗಳಲ್ಲಿ ಪ್ರತಿಭಟನೆಯ ಶಕ್ತಿ ಇದ್ದರೆ ಎಚ್ಚೆಸ್ಕೆಯವರ ಚುಟುಕುವಿನಲ್ಲಿ ಸೂರ್ಯಚಂದ್ರರ ಪ್ರಖರತೆ ಶಾಂತತೆ ಕುರಿತು ರಚಿಸಿದ್ದಾರೆ.

ಬಳಲಿದ್ದಾನೆ ಸೂರ್ಯ ಹಗಲೆಲ್ಲ ಸುತ್ತಾಡಿ
ಈಗ ಜಳಕದ ಸಮಯ ಮೈಯೆಲ್ಲ ರಾಡಿ
ಬಣ್ಣ ಬಣ್ಣದ ಬೆರಳ ನೀಳ ತೋಳನೆ ಚಾಚಿ
ಅಪ್ಪಿಕೊಳ್ಳುತ್ತಾನೆ ಚಂದ್ರನ್ನ ಬಾಚಿ
ನೀಲಿಗಟ್ಟಿದ ಬಾನ ತುಂಬೆಲ್ಲ ತಿಳಿ ಬೆಳಕು
ಉರಿಯ ಒಡ್ಡೋಲಗದ ಕೊನೆಗೆ ತಣ್ಣನೆ ಚಮಕು

ಕವಿಯಾದವನಿಗೆ ಸ್ವವಿಮರ್ಶೆ ಇರಬೇಕು. ಅಂತಹ ಸಂದರ್ಭದಲ್ಲಿ ಮಾತ್ರ ಉತ್ತಮ ಕವಿತೆ ಹೊರ ಹೊಮ್ಮಲು ಸಾಧ್ಯ. ಎಚ್ಚೆಸ್ಕೆ ತಮ್ಮ ಜೀವನ ಮತ್ತು ಸಾಹಿತ್ಯವನ್ನು ಕುರಿತು ವಿಮರ್ಶೆ ಮಾಡಿಕೊಂಡ ಚುಟುಕು ಇಲ್ಲಿದೆ.

ನಾನೊಬ್ಬ ಅಂಕಣಕಾರ
ಹುಟ್ಟುತ್ತಲೇ ಸಾಯುವಂಥ ಲೇಖನಗಳ ಬರಹಗಾರ
ನನಗಿಲ್ಲವೇ ಇಲ್ಲವಂತೆ ಸಾಹಿತ್ಯದ ಅಧಿಕಾರ.
ನಿಜಸ್ವಾಮಿ ನನಗಿಲ್ಲ ಖಂಡಿತಾ ಆ ಬಡಿವಾರ
ಎದೆ ತುಂಬಿ ತಂದಿರುವೆ ತುಂಬೆ ಹೂಗಳ ಹಾರ,

ಇವರು ಮೂಲತಃ ಅಂಕಣ ಬರಹಗಾರರಾಗಿದ್ದವರು. ತಮ್ಮಷ್ಟಕ್ಕೆ ತಾವೇ ತಮ್ಮನ್ನು ವಿಮರ್ಶಿಸಿ ಕೊಳ್ಳುತ್ತಾರೆ. ಆದರೂ ಚುಟುಕು ಸಾಹಿತ್ಯಕ್ಕೆ ಬಹುದೊಡ್ಡ ಕೊಡಗೆಯನ್ನು ನೀಡಿ ''ತುಂಬೆ ಹೂ' ಎನ್ನುವ ಚುಟುಕು ಸಂಕಲನ ಉತ್ತಮವಾದ ಕೃತಿಯಾಗಿದೆ. ಸಂಸಾರದಲ್ಲಿ ಬಂಧಿಯಾದವನ ಬದುಕು ತುಂಬಾ ಕಷ್ಟಕರ ಎಂದರಿತ ಎಚ್ಚೆಸ್ಕೆಯವರು

ಮದುವೆಯೊಂದು ಚಕ್ರವ್ಯೂಹ
ಒಳಹೋಗುವುದು ಬಲುಸುಲಭ
ಹೊರಬರುವುದು ಅಸಾಧ್ಯ
ಒಳಗಿರುವುದು ದುಸ್ಸಾಧ್ಯ

ಬದುಕು ಚಿಂತೆಗಳ ಕಂತೆ ಮೊದಲು ಬೇಕು ಬೇಕು ಆಮೇಲೆ ಸಾಕು ಸಾಕು ಎನ್ನುತ್ತದೆ.

ಸಿಪಿಕೆ ಅವರು ಚುಟುಕುಗಳ ರಚನೆಯಲ್ಲಿ ತೊಡಗಿದಾಗಿನಿಂದ ಸಂಪೂರ್ಣ ಚುಟುಕು ಕವಿಗಳೆನಿಸಿದ್ದಾರೆ. ಇವರ ಚುಟುಕುಗಳಲ್ಲಿ ಜೀವನಾನ್ವೇಷಣೆಯ ಭರಾಟೆ ಹೆಚ್ಚಾಗಿ ಕಂಡುಬರುತ್ತದೆ. ಅವರೇ ಹೇಳಿಕೊಳ್ಳುವಂತೆ ಬದುಕಿನ ಸಮಗ್ರತೆಯನ್ನು, ಸಂಕೀರ್ಣತೆಯನ್ನು ಕಲಾತ್ಮಕತೆಯಿಂದ ಚುಟುಕುಗಳಲ್ಲಿ ಹಿಡಿದಿಡುವುದೇ ಇವರ ಚುಟುಕುಗಳ ಗುರಿ. ಇವರ ಎಲ್ಲಾ ಚುಟುಕು ರಚನೆಗಳ ಅಂತ್ಯದಲ್ಲಿ ಉದ್ಗಾರವಾಚಕವಿರುತ್ತದೆ. ಜಾತಿಯ ಬೆನ್ನತ್ತಿ ಹೋದವರ ಬದುಕು ಯಾತನಾಮಯ ಎನ್ನುವ ಚುಟುಕು ಇಲ್ಲಿದೆ.

ಧರ್ಮ
ಮುಖ್ಯವಾದವರಿಗೆ
ಬದುಕು ಟ್ರಾಜಿಡಿ
ಕಾಮ ಮುಖ್ಯವಾದವರಿಗೆ
ಕಾಮಿ-ಡಿ

ಇಂದು ಧರ್ಮದ ಬೆನ್ನತ್ತಿ ಹೋದವರ ಬದುಕು ಯಾತನಾಮಯ ಮಾನವಧರ್ಮಕ್ಕೆ ಜಯವಾಗಲಿ ಎಂದು ಸಾರಬೇಕಾದುದು ಅವಶ್ಯ-ಕಾಮದ ಹಿಂಬಾಲಕರ ಬದುಕು ಕಾಮಿಡಿಯಾಗಿ ಹೋಗುತ್ತದೆ. ಇತ್ತೀಚೆಗೆ ಹೆಣ್ಣನ್ನು ಹಿಂಬಾಲಿಸಿದ ಅನೇಕ ಸ್ವಾಮಿಗಳು, ರಾಜಕಾರಣಿಗಳ ಸ್ಥಿತಿ ತುಂಬಾ ಶೋಚನೀಯವಾಗಿದೆ. ಅಂತಹವರ ಚಿತ್ರಣವನ್ನು ಬಿಡಿಸುವ ಚುಟುಕು ಇದಾಗಿದೆ.

ವರ್ಷಕ್ಕೆ ೩೬೫ ದಿನಗಳೂ ಭೂಮಿ ತಿರುಗುತ್ತಲೇ ಇರುತ್ತದೆ ಅದೇ ರೀತಿ ನಮ್ಮ ಆಯುಷ್ಯವೂ ಕ್ಷೀಣಿಸುತ್ತಾ ಸಾಗಿದೆ ಎನ್ನುವುದನ್ನು

ಸುತ್ತುತ್ತಿದೆ ಈ ಪೃಥ್ವಿ
ನಿರಂತರ ಗಾಣದೆತ್ತಾಗಿ
ಅರೆಯುತ್ತ ನಮ್ಮ
ಆಯುಷ್ಯವನ್ನು!

ಕಾಲ ಚಕ್ರಕ್ಕೆ ಯಾರ ಮುಲಾಜೂ ಇಲ್ಲ. ಅದು ತನ್ನ ಕೆಲಸವನ್ನು ನಿರಂತರವಾಗಿ ಮಾಡುತ್ತಲೇ ಇರುತ್ತದೆ. ಮನುಷ್ಯ ಸ್ವಾರ್ಥಿಯಾಗಬಾರದು. ಉಪಕಾರ ಜೀವನವಿಲ್ಲದಿರೆ ಬದುಕು ವಿಚಿತ್ರವಾಗುತ್ತದೆ ಎನ್ನುವುದಕ್ಕೆ ಇಲ್ಲೊಂದು ಚುಟುಕು.

೧. ನಾವು ಸುಖದಲ್ಲಿ
ಸ್ವಾರ್ಥಿಗಳಾಗುವಂತೆ
ದುಃಖದಲ್ಲಿ ಆಗುತ್ತೇವೆ
ಎನ್ನುವುದು ಬದುಕಿನ
ಒಂದು ವಿಚಿತ್ರ!

೨. ಬಹಳ ಸಂದರ್ಭಗಳಲ್ಲಿ
ಕೇಳುವುದು ಬೇಡ
ಏಕಿವನು ಸತ್ತ?
ಮತ್ತೇನು ಮಾಡುತ್ತಾನೆ
ಬದುಕಾದರೆ
ಸಮಸ್ಯೆಗಳ ಹುತ್ತ.

ಅನೇಕ ಅನುಭವದ ಅವಲೋಕನಗಳು ಇವರ ಸಾಹಿತ್ಯದಲ್ಲಿ ಕಂಡುಬರುತ್ತವೆ. ಓದಿಗೆ ಹೆಚ್ಚು ಅವಕಾಶ ನೀಡುತ್ತವೆ.

ಚುಟುಕು ಸಾಹಿತ್ಯದಲ್ಲಿ ಇನ್ನೋರ್ವ ಹಿರಿಯ ಕವಿ ನಾಡೋಜ ಚನ್ನವೀರ ಕಣವಿ. ಇವರ ಚುಟುಕುಗಳಲ್ಲಿ ಆದರ್ಶದ ಪ್ರೇಮ, ನಿಸರ್ಗ ಸೌಂದರ್ಯದ ಬಗ್ಗೆ ಆವೇಶ, ರಾಷ್ಟ್ರಭಕ್ತಿ, ಉದಾತ್ತ ಒಲವು ಕಂಡುಬರುತ್ತವೆ. ಸದಾ ನಿಸರ್ಗದ ನಡುವೆ ಇವರು ಅದರಿಂದ ನಿರಂತರ ಚೈತನ್ಯವನ್ನು ಪಡೆಯುವ ಕವಿ ಅದರ ವ್ಯಾಪಾರಗಳಲ್ಲಿ ಲೀನವಾಗಿರುತ್ತಾನೆ. ಅದರ ಸೌಂದರ್ಯ ಆಸ್ವಾದನೆಯಿಂದ ಅವರ ಶರೀರದ ಕಣಕಣಗಳಲ್ಲಿ ಹೊಸ ಶಕ್ತಿ ಸಂಚಾರವಾಗುತ್ತದೆ. ಅವರ ಚುಟುಕುಗಳನ್ನು ವೀಕ್ಷಿಸಿದಾಗ

ತಳಿರನುಟ್ಟಿದೆ ಹೂವ ತೊಟ್ಟಿದೆ
ಮಾವು ಹೊರಟಿದೆ ಎತ್ತರಿ?
ಕಾಮ ಬಿಸಿಲಲಿ ನಡೆದು ಬರುವನು
ಅದಕೆ ಹಿಡಿದಿದೆ ಛತ್ತರಿ

ತಳಿರನುಟ್ಟು ಹೂವ ತೊಟ್ಟ ಮಾವಿನಮರ ಬಿಸಿಲಲ್ಲಿ ನಡೆದು ಬರುವ ಕಾಮನಿಗೆ ಛತ್ರಿ ಹಿಡಿಯುವ ಕಲ್ಪನೆ ನೂತನವೂ ಹೌದು. ಸುಂದರವೂ ಹೌದು. ವಸಂತೋತ್ಸವದಲ್ಲಿ ಈ ವರ್ಣನೆ ವಿನೂತನವಾಗಿದೆ.

'ಕೊಂಬೆಯಲಿ ಕವಿತೆ'ಯನ್ನು ಕಂಡ ಈ ಕವಿ ಸಹಜ ಕವಿಯೆಂದು ಯಾರಿಗಾದರೂ ಹರ್ಷವಾಗದಿರದು. ಮಾತ್ರೆಗಣಗಳ ಜೊತೆಗೆ ಗುದ್ದಾಡಿ ಪದ್ಯ ಬರೆದು ಮುಗಿಸಿದ ಕವಿ ಕೋಣೆಯ ಹೊರಗೆ ಹಣಕಿದಾಗ

ಗಿಡದ ಕೊಂಬೆಯಲಿ ಹೊರಹೊಮ್ಮಿತ್ತು
ಚಿಗುರು-ಪೂಗಳ ಕವಿತೆ ಸಾಲುಸಾಲು

ಕವಿ ಪ್ರತಿಭೆಯ ಮಹಿಮೆಯನ್ನರಿಯಲು, ಅಳೆಯಲು ಈ ಎರಡು ಸಾಲುಗಳೇ ಸಾಕು. ಅವರು ತಮ್ಮ ಇನ್ನೊಂದು ಚುಟುಕದಲ್ಲಿ ಪ್ರಕೃತಿಯ ನಿತ್ಯೋಪಾಸನೆ ತಮ್ಮ ಪಾಲಿಗಿರಲಿ ಎಂದವರು.

೧. ನನ್ನೆದೆಯ ಗೂಡಿನೊಳಗಾವುದೋ ಹಕ್ಕಿಯಲಿ
ಚಿಲಿಪಿಲಿಸುತಿಹುದಾವ ನಿಮಿಷದಲ್ಲು;
ಜಗದಿ ಮೊರೆ-ಕರೆಗಳಿಗೆ ಚೆಲುವು ಚಿನ್ನಾಟಕ್ಕೆ
ದನಿಗೂಡಿ ಹಾಡುತಿದೆ ಕನಸಿನಲ್ಲು!

೨. "ಜೀವನ ಮಂದಿರ"
ಎಲುವಿನ ಹಂದರ ಜೀವನ ಮಂದಿರ
ಅದುರಿ ಮುದುರಿ ಕುಪ್ಪರಿಸುತಿದೆ
ನಾಡಿಯು ಸತ್ತಿಹ ನೆತ್ತರು ಬತ್ತಿಹ
ತೊಗಲು ದೇಹವಪ್ಪಳಿಸುತಿದೆ

ಈ ದೇಹ ಎಲುವಿನ ಹಂದರ ಅದರಲ್ಲಿ ನೂರಾರು ದೇವರ ಕಲ್ಪನೆಗಳನ್ನು ಕಾಣಬಹುದು. ಒಳಗಡೆ ಮಾಂಸ-ಹೊರಗೆ ಚರ್ಮದ ಹೊದಿಕೆಯಿಂದ ಸುತ್ತಿದೆ. ಇದರಿಂದ ಜೀವ ಹೋದರೆ ಏನಿಲ್ಲ.

ಜೀವನವೆಂಬುದು ಒಂದು ಆದ್ಯಂತ ರಹಿತ ಆಯಾಮವುಳ್ಳದ್ದು. ವಿಶ್ವರೂಪಿ, ಅನಂತಮುಖಿ; ವೈವಿಧ್ಯಮಯ, ನಿರ್ದಿಗಂತವಾದದ್ದು ಅದೊಂದು ಮೇರೆಯಿಲ್ಲದ ಮಹಾಸಾಗರ. ಲಕ್ಷಾಂತರ ವರ್ಷಗಳಿಂದ ಮಾನವ ಸಮುದಾಯ ತಮತಮಗೆ ಶಕ್ಯವಿದ್ದಷ್ಟು ವಿಚಾರಾನುಭವಗಳ ಮುತ್ತು ರತ್ನಗಳನ್ನು ಸೂರೆಗೊಳ್ಳುತ್ತಾರೆ. ಎಷ್ಟು ಸೂರೆಗೊಂಡರೂ ಅವು ಅಕ್ಷಯವಾಗುತ್ತವೆ.

ಇನ್ನೋರ್ವ ಚುಟುಕು ಕವಿ ಜರಗನಹಳ್ಳಿ ಶಿವಶಂಕರ ಬಹುದೊಡ್ಡ ಹೆಸರು ಪಡೆದವರು. ಇವರು ಬದುಕನ್ನು ಸುಂದರವಾಗಿ ಇಷ್ಟಪಟ್ಟವರು. ಸ್ವತಃ ಹಸನ್ಮುಖಿಯಾಗಿ ಚುಟುಕು ಸಾಹಿತ್ಯ ಪ್ರೀತಿಸಿದವರು. ಇವರ ಚುಟುಕು ಸಂಕಲನ ಝುರಿ. ಇದರ ಹೆಸರಿನಂತೆ ಮಂಜುಳ ನಿನಾದವನ್ನುಂಟು ಮಾಡುವ ಚಿಕ್ಕ ಕವಿತೆಗಳ ಆಗರ ಈ ಕೃತಿ.

ಬದುಕಿನ ಕ್ಷಣಿಕತೆ, ವೈವಿಧ್ಯ, ವಿಸ್ಮಯ, ಪ್ರಕೃತಿಯಲ್ಲಾಗುವ ಪರಿವರ್ತನೆಗಳು, ಸಾಮಾಜಿಕ ಕಳಕಳಿ ಇವರ ಚುಟುಕುಗಳಲ್ಲಿ ಕಂಡುಬರುವ ಚಿತ್ರಣಗಳು. ಒಂದು ಮರ ನೂರಾರು ವರ್ಷ ಕೆಲಸಕ್ಕೆ ಬರಲಿದೆ. ಮನುಜ ಯಾತಕೆ ಬರುವನು ಎಂದು ತಿಳಿಸುವ ಚುಟುಕದಲ್ಲಿ

ಹತ್ತಾರು ವರುಷ
ನೆರಳಾಗಿ ನಿಂತ ಮರ
ತೊಲೆಯಾಗಿ ಉಳಿಯಿತು
ನೂರಾರು ವರುಷ
ನೂರು ವರುಷ

ಆಳಿದ ಅರಸ

ಹೆಣವಾಗಿ ಉಳಿಯಲಿಲ್ಲ

ಮೂರು ದಿವಸ

ಬಸವಣ್ಣನವರ ವಚನದಲ್ಲಿ ಮೊಲಕ್ಕಿಂತ ಕರಕಷ್ಟ ನರನ ಜೀವನ ಹಾಗು ನೀನಾರಿಗಾದೆಯೋ ಎಲೆ ಮಾನವ ಎಂದಂತಿದೆ ಈ ಚುಟುಕು. ಮನುಷ್ಯ ಯಾರಿಗೂ ಉಪಕಾರವಾಗದ ಭಾರದ ಜೀವಿಯಾಗಿದ್ದಾನೆ. ಕಾಣುವುದರಿಂದ ಜಿಗಿದು ಕಾಣದೇ ಇರುವುದನ್ನು ತೋರಿಸುವ ಗುಣ ಅದನ್ನು 'ಕಾಣದ ಕೈ' ಎನ್ನುವ ಕವಿತೆಯಲ್ಲಿ ಕಾಣಬಹುದು.

ಕಾಣದ ಕೈಯೊಂದು

ಕಾಯುತಿದೆ ನಮ್ಮನ್ನು

ಅದಕ್ಕು ಇವೆ ನಮ್ಮಂತೆ

ಐದು ಬೆರಳುಗಳು

ಅವು ಪಂಚಭೂತಗಳು

ಇಂಥ ಕಡೆ ಐದು ಬೆರಳಿಗೂ ಪಂಚಭೂತಗಳಿಗೂ ಈ ಕವಿ ಜೋಡಿಸುವ ಸಂಬಂಧವನ್ನು ಕಲ್ಪನೆ ಅಥವಾ ಪ್ರತಿಭೆ ಎಂದು ಹೇಳಬಹುದಾಗಿದೆ.

ಹೀಗೆ ಅನೇಕ ಕವಿಗಳು ಸತ್ವಪೂರ್ಣ, ಅರ್ಥಪೂರ್ಣ ಅನುಷ್ಠಾನಪೂರ್ಣ ಚುಟುಕುಗಳನ್ನು ರಚಿಸಿದವರು ಅಸಂಖ್ಯಾತ. ಆದರೆ ನನ್ನ ಅಧ್ಯಯನ ಸೀಮಿತಗೊಳಿಸಿದಾಗ ಕೆಲವಾರು ಹಿರಿಯ ಲೇಖಕರ ಚುಟುಕುಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕಾಯ್ತು. ಚುಟುಕುಗಳ ಸಂಖ್ಯೆ ವಿಪರೀತವಿದ್ದರೂ ಕೆಲವು ಪ್ರಬುದ್ಧವಾದ ಚುಟುಕುಗಳನ್ನು ಆರಿಸಿ ಅಧ್ಯಯನಕ್ಕೊಳಪಡಿಸಿದ್ದೇವೆ.

ದಿನಕರ ದೇಸಾಯಿಯವರು ಗಮಗಮಿಸುವ ಹೃದಯಿಗಳು ಮತ್ತು ಗಟ್ಟಿ ಕಾಳುಗಳು ಹುಟ್ಟಿಕೊಳ್ಳಲಿ ಎಂದು ಅವರ ಚುಟುಕನ್ನು ನೋಡಿದಾಗ

ಭೂಮಿ ಮಿದುವಾದಾಗ ಹುಟ್ಟುವುದು ಕಾಳ

ಗಟ್ಟಿಯಾದರೆ ನೆಲವು ಬೆಳೆಯಲ್ಲ ಹಾಳು

ಮನಸು ಮಿದುವಾದಾಗ ಗೌತಮನ ಉದಯ

ಹೂವಾಗಿ ಗಮಗಮಿಸಬೇಕು ಈ ಹೃದಯ

೪. ಮಹಿಳಾ ದೃಷ್ಟಿಕೋನ

ಚುಟುಕುಗಳನ್ನು ಕನ್ನಡಕ್ಕೆ ಹೇರಳವಾಗಿ ಒದಗಿಸಿದ ಇನ್ನೊಂದು ಸಾಹಿತ್ಯ ಪ್ರಕಾರವೆಂದರೆ ಮಹಿಳಾ ಸಾಹಿತ್ಯ. ಈ ಸಾಹಿತ್ಯವೂ ಅಪೂರ್ವವಾದ, ಅಮೂಲ್ಯವಾದ ಚುಟುಕುಗಳನ್ನು ಒದಗಿಸಿದೆ. ಈ

ಚುಟುಕುಗಳು ಬೇರೆ ಬೇರೆ ಛಂದೋಬಂಧಗಳಲ್ಲಿ ರಚಿತವಾಗಿರುವುದಾದರೂ ತ್ರಿಪದಿಯಲ್ಲಿ ರಚಿತವಾಗಿರುವುದೇ ಅಧಿಕ. ಜಾನಪದ ಮುಕ್ತಕಗಳಾಗಲಿ, ಸರ್ವಜ್ಞನ ತ್ರಿಪದಿಗಳಾಗಲಿ ಅರ್ಥಪೂರ್ಣವಾಗಿ ಈ ಸಾಹಿತ್ಯಕ್ಕೆ ಮೆರುಗು ನೀಡಿದೆ. ಸಾಕಷ್ಟು ವರ್ಷಗಳ ಇತಿಹಾಸವನ್ನು ಪಡೆದ ಕನ್ನಡ ಸಾಹಿತ್ಯ ಅನೇಕ ಮಜಲುಗಳನ್ನು ಹೊಂದಿದೆ. ಸಾಮಾಜಿಕ ಬದಲಾವಣೆಯನ್ನು ಅನುಸರಿಸಿ ಕಾವ್ಯಲೋಕದಲ್ಲೂ ಬದಲಾವಣೆಗಳೂ ನಡೆದಿವೆ. ಅದರಂತೆ ಚುಟುಕು ಸಾಹಿತ್ಯದಲ್ಲಿ ಹೆಣ್ಣನ್ನು ಕುರಿತು ರಚನೆಯಾದ ಸಾಹಿತ್ಯವನ್ನು ಗುರುತಿಸುತ್ತಾ ಬೇರೆ ಬೇರೆ ಘಟ್ಟಗಳಲ್ಲಿ ಹೆಣ್ಣನ್ನು ಕುರಿತು ಹುಟ್ಟಿಕೊಂಡ ಆಲೋಚನೆಗಳನ್ನು ಅಭಿಪ್ರಾಯಗಳನ್ನು ಚಾರಿತ್ರಿಕ ನೆಲೆಯಿಂದ ಅಧ್ಯಯನ ಮಾಡುವುದು ಒಂದು ಸಾಂಸ್ಕೃತಿಕ ಶೋಧನೆ. ಹೆಣ್ಣನ್ನು ಆಯಾ ಕಾಲಕ್ಕೆ ತಕ್ಕ ಹಾಗೆ ವರ್ಣಿಸುತ್ತಾ ಹೋಗುವುದು ಒಂದು ಕಡೆಯಾದರೂ ಹೆಣ್ಣನ್ನು ವಿಭಿನ್ನ ದೃಷ್ಟಿಕೋನದಲ್ಲಿ ಕಾಣುವುದು ಮತ್ತೊಂದು ಕಡೆ.

ಕನ್ನಡ ಜನಪದ ಕಾವ್ಯ ಹೆಣ್ಣಿನ ಬದುಕಿನ ವಿವಿಧ ಮಜಲುಗಳನ್ನು ಪರಿಚಯಿಸಿದರೂ ಸಮಗ್ರ ನೋಟವನ್ನು ನಮಗೆ ಕಾಣಿಸಲಾರದು. ಹೆಣ್ಣು ಮತ್ತು ಅವಳನ್ನು ಕುರಿತ ಟೀಕೆ ಇವೆರಡನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ಮಾಡಿದಾಗ ಜನಪದ ಲೋಕದ ಹೆಣ್ಣು, ಸಮಾಜ ಅವಳು ಯಾವ ರೀತಿ ಇರಬೇಕೆಂದು ಬಯಸಿದೆಯೋ ಅದೇ ರೀತಿ ನಡೆದು ಮತ್ತು ನುಡಿದಿರುವುದು ಕಂಡುಬರುತ್ತದೆ. ಜಾನಪದೀಯರು ರಚಿಸಿರುವ ತ್ರಿಪದಿಗಳು ಅರ್ಥಮುಕ್ತವಾಗಿ, 'ಧ್ವನಿ ಪ್ರಚುರ'ವಾಗಿ ನಿಲ್ಲುತ್ತವೆ. ತ್ರಿಪದಿಯ ಹೆಚ್ಚು ಪಾಲು ಮುಕ್ತಕಗಳು ಈ ರೀತಿಯವೇ ಆಗಿವೆ. ಇವು ಸರಳವಾಗಿವೆ. ಮನೋಹರವಾಗಿವೆ. ಪಾಂಡಿತ್ಯದ ಭಾರದಿಂದ ಕುಗ್ಗುತ್ತಿಲ್ಲ. ಇವು ಜನ್ಮ ತಾಳಿದಂದಿನಿಂದ ಇಂದಿನ ತನಕ ಮಹಿಳೆಯರ ಬಾಯಿಂದ ಬಾಯಿಗೆ ಹರಿದು ಬರುವಾಗ ತಮ್ಮ ಪೆಡಸನ್ನು, ಗಡಸನ್ನು ಕಳೆದುಕೊಂಡು ಅಳಿದುಳಿದು ಬಂದ ತಿರುಳುಗಳಾಗಿವೆ. ದೇಶದ ಸಮಷ್ಟಿ ಪ್ರಜ್ಞೆ ಮಹಾವ್ಯಕ್ತಿಯೊಬ್ಬನನ್ನು ಸೃಷ್ಟಿಸಿ, ಆತನಲ್ಲಿ ಮೂರ್ತಗೊಂಡ ಸಿಂಧುರೂಪದಿ ಮಹಾಕಾವ್ಯವಾಗಿ ಹೊರಹೊಮ್ಮುವಂತೆ, ತನ್ನ ದೈನಂದಿನ ಸಾಮಾನ್ಯ ಭೂಮಿಕೆಯ ಸಹಸ್ರಾರು ಹೃದಯಗಳ ಅನುಭವವಾಗಿ ಸಹಸ್ರಾರು ಕಂಠಗಳ ಮೂಲಕ ಬಿಂದು ರೂಪದಲ್ಲಿಯೂ ಚಿಮ್ಮುತ್ತದೆ. ಸತ್ಯಸಾಧನೆ, ಸೌಂದರ್ಯದ ಅನುಭೂತಿ ಇವು ಸತತ ಕಾವ್ಯಾಭ್ಯಾಸದ, ಶಸ್ತ್ರಪ್ರಭುತ್ವದ ಒಂದು ಪಾತ್ರದಲ್ಲಿ ಹರಿದು ಮಹಾಘಟನೆಗಳ ಸುತ್ತ ಹೆಣೆದುಕೊಂಡು ಒಂದು ಮೇರುಕೃತಿಯಾಗುತ್ತದೆ. ಕಡಲಾಗಿ ತೆರೆಗಳೇಳುವ ಮೂಲಶಕ್ತಿ ಕಾರಂಜಿಯಾಗಿ ಚಿಮ್ಮಿ ನಲಿಯುವಂತೆ ಸಮಷ್ಟಿಯ ಸತ್ಯ ಸೌಂದರ್ಯಾನುಭೂತಿಗಳು, ಹಾಗೆಯೇ ಸಂಸಾರಿಕ ಜೀವನದ ದೈನಂದಿನ ಅನುಭವಗಳು ನುಡಿಯ ಪರಿಪೂರ್ಣತೆಯನ್ನು ಮುಟ್ಟಿಯೋ, ಮುಟ್ಟದೆಯೋ ಇರಬಹುದಾದ ಲಾಲಾಸಿದ್ಧಿಯ ಎಲ್ಲ ಹೊಳಹುಗಳನ್ನು ಮಿಂಚಿಸಿಯೋ, ಮಿಂಚಿಸಿಲ್ಲದೆಯೋ ಇರಬಹುದಾದ ಅಸಂಖ್ಯಾತ ಚುಟುಕುಗಳ ರೂಪದಲ್ಲಿ ಸಾಮಾನ್ಯ ಜನರ ನಡುವೆ ಕಾವ್ಯ ರೂಪವನ್ನು ತಳೆದು ಉಳಿದವೆ. ಇದನ್ನೇ ಜಾನಪದ ಸಾಹಿತ್ಯವೆಂದು ಕರೆಯುತ್ತಾರೆ.

ಜನಪದ ಕಾವ್ಯದ ಹೆಣ್ಣಿನ ಜೀವನದ ಚೌಕಟ್ಟು ತುಂಬಾ ವಿಶಾಲವಾದುದರಲ್ಲಿ ಮನ-ಮನೆಯೊಳಗಿನ ಸಂಬಂಧಗಳು - ಇವುಗಳನ್ನು ಕುರಿತು ಆಲೋಚನೆಗಳೇ ಬಹುಪಾಲು ಹಾಡುಗಳ ವಸ್ತು, ಮಹಿಳೆಯರನ್ನು ಕುರಿತು ಚುಟುಕುಗಳ ವಿಷಯ ವೈವಿಧ್ಯಮಯವಾದುದು. ಅವು ಹಳ್ಳಿಯ ಬಾಳಿನ ವಿಶ್ವಕೋಶಗಳು. ಅವುಗಳಲ್ಲಿ ಜನ ಸಾಮಾನ್ಯರ ಜೀವನದ ವಿವಿಧ ಮುಖಗಳು ಪ್ರಾಮಾಣಿಕವಾಗಿ ಬಿಂಬಿತವಾಗಿವೆ. ಅವುಗಳನ್ನು ಕುರಿತು ಹಾಡಿರುವ ವಿಷಯಗಳು ಅಪಾರವಾದರೂ ಅವುಗಳಿಗೆ ತೀರ ಹತ್ತಿರದ ವಿಷಯಗಳು ದೇವರು, ತಾಯಿ-ಮಗಳು, ತಂದೆ-ಮಗ, ಅತ್ತೆ-ಸೊಸೆ, ಮಾವ, ಅಣ್ಣ-ತಂಗಿ, ಅಕ್ಕ-ತಮ್ಮ; ನಿತ್ಯ ಕಾಣುವ ಪ್ರಕೃತಿ, ನೆಲ-ಹೊಲ, ಬೆಳದಿಂಗಳು ಸೂರ್ಯ-ಚಂದ್ರ, ಮಗ, ವಿಧವೆ, ಬಂಜೆ ಇವೇ ಆಗಿವೆ. ಅವುಗಳಲ್ಲಿ ವರ್ಣನೆಯಿದೆ, ರಸ ಚಿತ್ರಣವಿದೆ. ಹಾಸ್ಯವಿದೆ. ವಿಡಂಬನೆ ಇದೆ. ಶೃಂಗಾರ ವಿಹಾರಗಳಿವೆ. ಪ್ರೀತಿ ವಾತ್ಸಾಲ್ಯವಿದೆ. ಭಕ್ತಿಯಿದೆ, ನೀತಿ ನಿರೂಪಣೆಯಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಬೆಳಿಗ್ಗೆ ಹಾಸಿಗೆಯಿಂದ ಏಳುವುದರಿಂದ ಹಿಡಿದು ರಾತ್ರಿ ಮಲಗುವವರೆಗೆ, ಹುಟ್ಟಿದಂದಿನಿಂದ ಹಿಡಿದು ಸಾಯುವವರೆಗೆ ಮನುಷ್ಯ ಎದುರಿಸುವ ಎಲ್ಲ ಸಮಸ್ಯೆಗಳನ್ನೂ ಸರ್ವವ್ಯಾಪ್ತಿಯಾದ ಜನಪದ ಸಾಹಿತ್ಯ ಚರ್ಚಿಸುತ್ತದೆ. ಜನಪದೀಯರಲ್ಲಿ ಹೆಣ್ಣು ಯಾವಾಗಲೂ ಒಂಟಿಯಲ್ಲ. ಆಕೆಗೆ ಸುತ್ತ ಮುತ್ತಲಿನವರ ಆಸರೆ ಅದಕ್ಕಿಂತ ಅಣ್ಣ ತಮ್ಮರ ಆಸರೆ ಬಹಳ ಮುಖ್ಯವೆಂದು ತುಂಬ ಸೊಗಸಾಗಿ ಹಾಡಿದ ರೀತಿ ಈ ಚುಟುಕುವಿನಲ್ಲಿದೆ.

> ಹೆಣ್ಣಿನ ಜನುಮಕ ಅಣ್ಣ ತಮ್ಮರು ಬೇಕು
> ಬೆನ್ನ ತಟ್ಟುವರು ಸಭೆಯೊಳಗ! ಸಾವಿರ
> ಹೊನ್ನ ಕಟ್ಟುವರು ಉಡಿಯೊಳಗ ||

ಹೆಣ್ಣಿಗೆ ಅಣ್ಣತಮ್ಮಂದಿರ ಸಹಾಯ ಶಾಶ್ವತ ಎಂದು ನಂಬಿರುವ ಹೆಣ್ಣು ತವರು ಮನೆಗೆ ಶುಭಕೋರುವಲ್ಲಿ ಮರೆಯಲಾರಳು, ಜನ್ಮಕೊಟ್ಟ ತಾಯಿ, ತನ್ನ ತವರನ್ನು ಕುರಿತಾಗಿ

> ಹಾಲುಂಡ ತವರೀಗೆ ಏನೆಂದು ಹಾಡಲಿ
> ಹೊಳೆದಂಡೇಲಿರುವ ಕರಕೀಯ! ಕುಡಿಹಾಂಗ
> ಹಬ್ಬಲಿ ಅವರ ರಸಬಳ್ಳಿ

ಎನ್ನುವ ಈ ಚುಟುಕು ನೋಡಿದಾಗ ಎಂಥವರಿಗೂ ಮುಜುಗರ ಎನಿಸುತ್ತದೆ. ಸ್ವಾರ್ಥಪರ ಈ ಸಮಾಜದಲ್ಲಿ ನಿಸ್ವಾರ್ಥವಾಗಿ ಬದುಕುವ ಜನಪದ ಸ್ತ್ರೀ ಸಮಾಜಕ್ಕೆ ಎಂಥ ಕೊಡುಗೆ ನೀಡಿದ್ದಾಳೆ ಎನ್ನುವ ಈ ಚುಟುಕು ಆಧುನಿಕರಿಗೆ ಆದರ್ಶ ಪ್ರಾಯವಾಗಿದೆ.

ಹೆಣ್ಣು ಈ ಸಮಾಜದ ಕಣ್ಣು ಎನ್ನುವ ಕವಿಗಳು ಹೆಣ್ಣನ್ನು ಎಷ್ಟು ಬಣ್ಣಿಸಿದರೂ ಸಾಲದು. ಕಾವ್ಯ ಕನ್ನಿಕೆಗೆ ಅಲಂಕಾರಗಳನ್ನು ತೊಡಿಸಿ ಕವಿಗಳು ಆನಂದಪಟ್ಟಿದ್ದಾರೆ. ರೂಪಕಗಳಿಂದ ರೂಪಿಸಿದ್ದಾರೆ.

ಉಪಮೆಗಳಿಂದ ಹೋಲಿಸಿದ್ದಾರೆ. ಉತ್ಪ್ರೇಕ್ಷೆ ಮಾಡಿ ತೃಪ್ತರಾಗಿದ್ದಾರೆ. "ಹೆಣ್ಣು ಜಯ, ಜಾನಿ ಮತ್ತು ಪತ್ನಿ ಎಂದು ಮೂರು ರೀತಿಯಲ್ಲಿ ಹೆಂಡತಿಯಾಗಿರುತ್ತಾಳೆ ಎಂದು ಋಗ್ವೇದದಲ್ಲಿ ಸೂಚಿಸಲಾಗಿದೆ. ಜಯ ಎಂದರೆ ಗಂಡನ ಪ್ರೀತಿಗೊಳಿಸುವವಳು. ಜಾನಿ ಎಂದರೆ ಮಕ್ಕಳ ತಾಯಿ, ಪತ್ನಿ ಎಂದರೆ ಬಲಿ ಆಚರಣೆಗಳಲ್ಲಿ ಭಾಗಿಯಾದವಳು. ಈ ಮೂರು ಶಬ್ದಗಳು ಋಗ್ವೇದದಲ್ಲಿ ಜೊತೆ ಜೊತೆಯಾಗಿ ಉಲ್ಲೇಖಗೊಂಡರೂ ಅಂದಿನಿಂದ ಇಂದಿನವರೆಗೆ ಹೆಣ್ಣು ಭೋಗದ ವಸ್ತುವಾಗಿ ಕಂಡುಬರುತ್ತಾಳೆ. ಹೆಣ್ಣನ್ನು ಎಲ್ಲಿ ಗೌರವಿಸುತ್ತಾರೆ, ಅಲ್ಲಿ ದೇವತೆಗಳು ವಾಸಿಸುತ್ತಾರೆ ಎಂದಿದ್ದರೂ ಕೆಲವು ಕಾಲದಲ್ಲಿ ಹೆಣ್ಣು ಹುಟ್ಟಿದರೇ ಅಪಶಕುನ ಎನ್ನುವ ಕಾಲವಿತ್ತು. ಆದರೆ ಹೆಣ್ಣಿಗೆ ಹೆಣ್ಣೇ ಹಿತೈಸಿಯಾಗಿ ಕಾಣಬೇಕಾದ ಪರಿಸ್ಥಿತಿ ಇದೆ. ಆದರೆ ಜಾನಪದ ಕಾವ್ಯದಲ್ಲಿ ಹೆಣ್ಣಿನ ಸ್ಥಾನ ದೊಡ್ಡದಿದ್ದರೂ ಹೆಣ್ಣು ಹುಟ್ಟಿದರೆ ಬೇಸರದ ಸ್ಥಿತಿ ಉದ್ಭವವಾಗುತ್ತಿತ್ತಂತೆ ಎಂದು ಹೇಳಿಕೊಳ್ಳುವ ಸ್ತ್ರೀಪರ ಚಿಂತನೆ ಇಲ್ಲಿದೆ.

ಹೆಣ್ಣು ಹುಟ್ಯಾದಂತ ಹೇಳಿ ಕುಳಿವಲಿ ಬೇಡ
ಹೆಣ್ಣೆಂದರ ಅವರು ಹೆದರ್‍ಯಾರ
ಹೆಣ್ಣಲ್ಲ ನಮಗ ರವಿಚಿನ್ನ

ಹೀಗೆ ಮಹಿಳೆ ಎಂದರೆ ವಕ್ರ ದೃಷ್ಟಿಯಲ್ಲಿ ಕಾಣುವ ಕಾಲ ಅಂದು ಉದ್ಭವವಾಗಿತ್ತು. ಇಂತಹ ಮುಕ್ತಕಗಳ ಸಂಖ್ಯ ಸಾವಿರಾರು. ಈಗ ದೊರೆತಿರುವವೇ ಇಷ್ಟು ಇರುವಾಗ ಕಾಲಗರ್ಭದಲ್ಲಿ ಅಡಗಿ ಹೋಗಿರುವವು ಅದೆಷ್ಟೋ? ಸದ್ಯ ಲಭ್ಯವಿರುವವುಗಳಲ್ಲಿಯೇ ಕೆಲವನ್ನು ಮಾತ್ರ ಆಯ್ದು ಅವುಗಳ ಸ್ವಾರಸ್ಯವನ್ನು ವಿವರಿಸಬಹುದು.

ಮಹಿಳಾ ಮುಕ್ತಕಗಳು ಸೃಷ್ಟಿಯಾದದ್ದು ಹೆಚ್ಚು ಹೆಂಗಸರಿಂದ ಅಂತೆಯೇ ಅವರನ್ನು ಕುರಿತ ಮುಕ್ತಕಗಳು ಹೆಚ್ಚಾಗಿವೆ. ಅವಳ ನಾನಾ ಮುಖಗಳು ಚಿತ್ರಿತವಾಗಿವೆ. ಅಂದರೆ ತಾಯಿಯಾಗಿ ಗರತಿಯಾಗಿ ಪ್ರಿಯತಮೆಯಾಗಿ, ವೇಶ್ಯೆಯಾಗಿ, ಸೌಮ್ಯತೆಯ ಸಾಕಾರ ಮೂರ್ತಿಯಾಗಿ, ಸೊಸೆಯಾಗಿ, ಅತ್ತೆಯಾಗಿ, ವಾರಗಿತ್ತಿಯಾಗಿ, ಅಕ್ಕನಾಗಿ, ತಂಗಿಯಾಗಿ, ವಿಧವೆಯಾಗಿ, ಬಂಜೆಯಾಗಿ ಹೀಗೆ ನಾನಾ ಬಗೆಯಾಗಿ ಅವಳನ್ನು ಕುರಿತ ಮುಕ್ತಕಗಳನ್ನು ಕುರಿತು ವಿವೇಚಿಸುವ ಮೊದಲು ತೌರನ್ನು ಕುರಿತಾಗಿ ಚಿತ್ರಿಸಿರುವ ಚುಟುಕುಗಳು ಹಲವಾರು. ತಾಯಿ ಬೇರೆಯಲ್ಲ. ತೌರು ಬೇರೆಯಲ್ಲ. ತಾನು ಹುಟ್ಟಿ ಬೆಳೆದ ತೌರಿನ ಬಗ್ಗೆ ಎಲ್ಲಿಲ್ಲದ ವ್ಯಾಮೋಹ ಅದಕ್ಕಾಗಿಯೇ ತೌರಿನ ವ್ಯಾಮೋಹವನ್ನು ಕುರಿತಾಗಿ ಮುತ್ತೈದೆಯ ಸಂಕೇತ ಮಲ್ಲಿಗೆ ಕುರಿತಾಗಿರುವ ಈ ಮುಕ್ತಕದಲ್ಲಿ

ಒಬ್ಬಳಿರುವ ಮನೆಗೆ ಹಬ್ಬದಿರು ಮಲ್ಲಿಗೆ
ಒಬ್ಬಳೇ ಕುಯ್ದು ಮುಡಿಲಾರೆ ! ಮಲ್ಲಿಗೆ
ಹಬ್ಬೋಗು ನನ್ನ ತೌರೀಗೆ!

ಎಂದು ಆಶಿಸುತ್ತಾಳೆ. ತಾಯಿ, ಅಕ್ಕ, ತಂಗಿಯರನ್ನು ನೆನೆನೆನೆದು ಹಂಬಲಿಸುತ್ತದೆ ಹೆಣ್ಣಿನ ಮನಸ್ಸು ತವರಿನ ಕಡೆ ಓಡುತ್ತದೆ. ಗಂಡನ ಮನೆಯಲ್ಲಿ ಬೆಳೆದ ಮಲ್ಲಿಗೆಯನ್ನು ಒಬ್ಬಳೇ ಮುಡಿಯಲಾರದೇ ಹೆಚ್ಚು ಜನರು ಮುಡಿಯುವ ತನ್ನ ತವರಿಗೆ ಹೋಗಿ ಹಬ್ಬಿ ಹೂ ಬಿಡು ಎಂದು ಬೇಡಿಕೊಳ್ಳುತ್ತಾಳೆ. ಹಾಗೆಯೇ ತನ್ನ ತೌರಿನ ಬಗೆಗಿರುವ ಹೆಣ್ಣಿನ ಮಧುರವಾದ ಪ್ರೀತಿ ಅಭಿಮಾನ ಎಂಥಹುದು ಎಂಬುದನ್ನು ಇನ್ನೊಂದು ಮುಕ್ತಕ ವರ್ಣಿಸುತ್ತದೆ. ತನ್ನ ತೌರಿಗೆ ಹೋಗುವುದೆಂದರೆ ಹೆಣ್ಣಿಗೆ ಎಲ್ಲಿಲ್ಲದ ಆನಂದ

ತೌರೂರ ದಾರಿಯಲ್ಲಿ ಕಲ್ಲಿಲ್ಲ ಮುಳ್ಳಿಲ್ಲ
ಸಾಸಿವೆಯಷ್ಟು ಮರಳಿಲ್ಲ! ಬಾನಲಿ
ಬಿಸಿಲಿನ ಬೇಗೆ ಸುಡಲಿಲ್ಲ

ಹೆಣ್ಣಿಗೆ ತೌರನ್ನು ಕಾಣುವ ಹಂಬಲದಲ್ಲಿ ಮಧುರವಾದ ನಿರೀಕ್ಷೆಯಲ್ಲಿ ನಿಡುಪಯಣದ ಬೇಗೆ ಬವಣೆಗಳೆಲ್ಲ ಅನುಭವಕ್ಕೆ ಬರಲಿಲ್ಲ ಎಲ್ಲ ಕಷ್ಟ ಸಂಕಟಗಳನ್ನು ಮರೆಯಿಸುವಷ್ಟು ದೊಡ್ಡದಾಗಿತ್ತು ತೌರನ್ನು ನೋಡುತ್ತೇನೆಂಬ ಸಂತೋಷ. ಇವು ತೌರಿನ ಬಗೆಗಿನ ಚಿತ್ರಗಳಾದರೆ ಇನ್ನು ತಾಯಿಯ ಬಗೆಗಿನ ಕೆಲವು ಮುಕ್ತಕಗಳನ್ನು ಗಮನಿಸಿದಾಗ ಪ್ರಪಂಚದಲ್ಲಿ ತಾಯಿಯಂಥ ವಸ್ತು ಮತ್ತೊಂದಿಲ್ಲ. ಅದು ಕಳೆದುಹೋದರೆ ಮತ್ತು ಸಿಗಲಾರದು. ಅದನ್ನೇ ಚಿತ್ರಿಸುವ ಒಂದು ಮುಕ್ತಕ

ಯಾರಿದ್ದೀರಿ ನನ್ನ ತಾಯವ್ವನ್ಹೋಲೋರ
ಸಾವಿರ ಕೊಳ್ಳಿ ಒಲಿಯಾಗ ಇದ್ದರೆ
ಜ್ಯೋತಿ ನಿನ್ನಾರು ಹೋಲಾರು.

ಒಲೆಯೊಂದರಲ್ಲಿ ಸಾವಿರಾರು ಕೊಳ್ಳಿಗಳು ಉರಿಯುತ್ತಿದ್ದರೂ ಅವು ಜ್ಯೋತಿಯನ್ನು ಹೋಲಲಾರವು. ಹಾಗೆಯೇ ಪ್ರಪಂಚದಲ್ಲಿ ಬೇರೆ ಯಾರಿದ್ದರೂ ತಾಯಿಯನ್ನು ಹೋಲಲಾರರು. ಅವಳು ಪವಿತ್ರಳು, ನಂದಾದೀಪದಂತೆ, ಗಂಡನಿರಬಹುದು, ಆದರೆ ಗಂಡನ ಪ್ರೀತಿ ತಾನೆ ತಾಯ ಪ್ರೀತಿಗೆ ಸಮನಾದೀತೆ? ಅವನು ಪ್ರೀತಿಸುತ್ತಾನೆ. ಸ್ವಾರ್ಥಕ್ಕಾಗಿ, ಸ್ವಸುಖಕ್ಕಾಗಿ ಆದರೆ ತಂದೆ ಪ್ರೀತಿಸಬಲ್ಲ, ಆದರೆ ಮುನಿಯಲೂ ಬಲ್ಲ ತಾಯ ಪ್ರೀತಿಯೋ ನಿಷ್ಕಲ್ಮಷ ಅವ್ಯಾಜ. ತಂದೆಗಿಂತಲೂ ಮಿಗಿಲಾದ ತಾಯಿ ಗಂಗೆಯಂತೆ ಪವಿತ್ರಳು. ಅತ್ತೆಯ ಮನೆಯಲ್ಲಿರುವ ಮಗಳು ತನ್ನ ತಂದೆ ತಾಯಿಯರನ್ನು ನೆನೆದ ಕೂಡಲೇ ಅವಳ ಎಲ್ಲ ಕಷ್ಟಗಳೂ ಮಾಯವಾಗುತ್ತವಂತೆ;

ತಂದೀಯ ನೆನೆದರೆ ತಂಗಳ ಬಿಸಿಯಾಯ್ತು
ಗಂಗಾದೇವಿ ನನ್ನ ಹಡೆದವ್ವ ನೆನೆದರೆ
ಮಾಸಿದ ತಲೆಯು ಮಡಿಯಾಯ್ತು,

ಅತ್ತೆಯ ಮನೆಯಲ್ಲಿರುವ ಮಗಳಿಗೆ ತಂದೆಯ ನೆನಪೇ ತಂಗಳು ಬಿಸಿಯಾದಂತೆ ಚೇತೋಹಾರಿ, ತಾಯಿಯನ್ನು ನೆನೆದರೆ ಮಾಸಿದ ಮನಸ್ಸು - ಜಿಗುಪ್ಸೆಗೊಂಡ ಮನಸ್ಸು-ಶುದ್ಧವಾಗುತ್ತದೆ ಎಂಬಲ್ಲಿ ತಾಯಿಯ ಪಾವಿತ್ರ್ಯ ಎಂತಹದು ಎಂಬುದು ವ್ಯಕ್ತವಾಗುತ್ತದೆ.

ತಾಯ ದರ್ಶನ ಕಾಶೀದರ್ಶನಕ್ಕಿಂತಲೂ ಮಿಗಿಲಾದುದು. ಪಾಪ ಪರಿಹಾರಕ್ಕಾಗಿ ಪುಣ್ಯ ಸಂಪಾದನೆಗಾಗಿ ಕಾಶಿಗೆ ಹೋಗಬೇಕಾದುದಿಲ್ಲ. ಅವೆಲ್ಲಕ್ಕಿಂತ ಪವಿತ್ರಳಾದ ತಾಯಿಯ ದರ್ಶನವೇ ಕಾಶೀದರ್ಶನದ ಫಲವನ್ನು ನೀಡುತ್ತದೆ.

ಕಾಶೀಗೆ ಹೋಗಲಿಕೆ ಏಸೊಂದು ದಿನ ಬೇಕು
ತಾಸೊತ್ತಿನ ಹಾದಿ ತವರೂರು ಮನೆಯಲ್ಲಿ
ಕಾಶಿ ಕುಂತಾಳೆ ಹಡೆದವ್ವ

ಅದೇಕೆ ಅಷ್ಟು ಶ್ರಮವಹಿಸಿ ಅಷ್ಟು ದೂರದ ಪ್ರಯಾಣ ಮಾಡಿ ಕಾಶಿಗೆ ಹೋಗಬೇಕು, ಅದಕ್ಕಿಂತಲೂ ಪವಿತ್ರಳಾದ ತಾಯಿ ಬಳಿಯಲ್ಲಿರುವಾಗ? ಎಂದು ಪ್ರಶ್ನಿಸುತ್ತಾಳೆ ಹೆಣ್ಣು ಮಗಳು. ಇದೇ ಭಾವವನ್ನು ಸೂಸುವ ಇನ್ನೊಂದು ಮುಕ್ತಕ.

ತಾಯವ್ವನೆಂಬೋಳು ದೇವಲೋಕದ ಮನಸು
ಕಾಲು ಸೋಕಿದರೆ ಕರ್ಮಾವು ತಾಯಮ್ಮ
ಅದು ಕಾಶಿಗ್ಹೋದರು ಕಳಿಯಾದು.

ಅತ್ತೆಯ ಮನೆಯಲ್ಲಿ ಸುಖವಿಲ್ಲದ ಹೆಣ್ಣಿಗೆ ತಾಯಿಯ ನೆನಪು ಆಗಾಗ ಆಗುತ್ತದೆ. ಅವಳು ತೋರಿಸುತ್ತಿದ್ದ ಪ್ರೀತಿ, ಮಾಡುತ್ತಿದ್ದ ಲಾಲನೆ ಪಾಲನೆಯೆಲ್ಲವೂ ನೆನಪಾಗಿ ತೌರಿನ ಸುಖವನ್ನೂ ಈಗಿನ ದುಃಖವನ್ನೂ ತೂಗಿ ನೋಡುತ್ತಾಳೆ.

ನೊರೆಹಾಲು ಕುಡಿಸಿದ್ದಿ ಸಕ್ರೀಯ ತಿನಿಸಿದ್ದಿ
ಬೆಳುದಿಂಗಳೀಗು ಸೆರಗ ಮರಿಮಾಡಿದ್ದಿ
ಈಗೆಂಥ ದುಃಖ ಹಡೆದವ್ವ

'ಬೆಳದಿಂಗಳೀಗು ಸೆರಗ ಮರಿಮಾಡಿದ್ದಿ' ಎನ್ನುವಲ್ಲಿ ಮಗಳೂ ತಾಯಿಯಿಂದ ಪಡೆದಿದ್ದ ರಕ್ಷಣೆ ಮತ್ತು ಸುಖದ ಪರಾಕಾಷ್ಠೆಯೂ ಅತ್ತೆಯ ಮನೆಯ ಸಂಕಟದ ಉಗ್ರತೆಯೂ ಹೃದ್ಗತವಾಗುತ್ತದೆ.

ಇನ್ನು ಸಂಸಾರಸಂಹಿತೆಗೆ ಸಂಬಂಧಿಸಿದ ಕೆಲವು ಮುಕ್ತಕಗಳನ್ನು ನೋಡಬಹುದು. "ಗಂಡ-ಹೆಂಡತಿ, ತಂದೆ-ಮಗ, ತಾಯಿ-ಮಗಳು, ಅತ್ತೆ-ಸೊಸೆ ಇವೇ ಮೊದಲಾದ ಬಂಧವ್ಯಗಳ ಒಕ್ಕೂಟವೇ ಸಂಸಾರ. ಹತ್ತಾರು ವರ್ಷ ಸಾಕಿ ಸಲಹಿದ ಮಗಳನ್ನು ಗಂಡನ ಮನೆಗೆ ಕಳುಹಿಸಿಕೊಡುವುದೆಂದರೆ ತಂದೆ ತಾಯಿಯರಿಗೆ ಹಿಡಿಸಲಾಗದ ದುಃಖ, ಆಗ ತಾಯಿಯಾದವಳಿಗೆ ಹೆಣ್ಣನ್ನು ಹಡೆಯುವುದೇ ಬೇಡ

ಎನ್ನಿಸಿದರೆ, ತಂದೆಗೂ ಅಷ್ಟೇ ದುಃಖವಾಗುತ್ತದೆ. ಅವನು ತನ್ನ ದುಃಖವನ್ನು ಮೌನವಾಗಿ ಸೂಚಿಸುತ್ತಾನೆ. ಮಗಳ ದುಃಖ ಮತ್ತೂ ಹೆಚ್ಚಾಗಬಾರದೆಂದು ಸೆಲ್ಲೆಯ ಮರೆಯಲ್ಲಿಯೇ ಅಳುತ್ತಾನೆ. ಅಂತಹ ಸೂಕ್ಷ್ಮವನ್ನು ಚಿತ್ರಿಸಿರುವ ಒಂದು ಸುಂದರ ಮುಕ್ತಕ ಹೀಗಿದೆ.

ಹೆಣ್ಣು ಮಕ್ಕಳ ಕಳುಹಿ ಕಣ್ಣೀಗಿ ನೀರ ತಂದು
ಸಣ್ಣಸೆಲ್ಲೆದಲಿ ಮುಸುಗ್ಹಾಕಿ ಹಡೆದಪ್ಪ
ಹೆಣ್ಣು ಸಾಕೆಂದ ಜನುಮಾಕ

ಎಲ್ಲ ಹೆಣ್ಣುಗಳಿಗೂ ಗಂಡನ ಮನೆ ಹಿತವಾಗಿರುವುದಿಲ್ಲ. ಕೆಲವರಿಗೆ ಅದು ಗಂಡುಗಾರಿಕೆಯ ಮುಳ್ಳಾಗಬಹುದು. ಆಗ ಅವರಿಗೆ ಅಲ್ಲಿ ಸ್ವಾತಂತ್ರ್ಯವಿರುವುದಿಲ್ಲ. ಹೆಣ್ಣು ಎಷ್ಟೇ ಎಚ್ಚರಿಕೆಯಿಂದ ನಡೆದುಕೊಂಡರೂ ಅವಳಲ್ಲಿ ತಪ್ಪನ್ನು ಕಾಣುವವರಿರುತ್ತಾರೆ. ಅದನ್ನು ಎದುರಿಸಿ ನಿಲ್ಲಬಲ್ಲ ಎದೆಗಾರಿಕೆ ಎಲ್ಲೋ ಕೆಲವರಿಗಿರುತ್ತಬೆ. ಆದರೆ, ಇನ್ನು ಕೆಲವರು ನಿಸ್ಸಹಾಯಕರಾಗಿ ತಮ್ಮ ಬಳಗಕ್ಕೆ ಮೊರೆ ಹೋಗುತ್ತಾರೆ. ಅವರಿಗೆ ಧೈರ್ಯ ತುಂಬಿ, ಅವರ ಪರ ವಹಿಸುವರೆಂದರೆ ಅವರ ಅಣ್ಣತಮ್ಮಂದಿರು ಮಾತ್ರ. ಅದಕ್ಕಾಗಿ ಹೆಣ್ಣಿಗೆ ಅಣ್ಣತಮ್ಮಂದಿರಿರಬೇಕು.

ಹೆಣ್ಣಿನ ಜನುಮಕ ಅಣ್ಣ ತಮ್ಮರು ಬೇಕು
ಬೆನ್ನು ತಟ್ಟುವರು ಸಭೆಯೊಳಗೆ ಸಾವೀರ
ಹೊನ್ನ ಕಟ್ಟುವರು ಉಡಿಯೊಳಗ.

ತಂದೆ ತಾಯಿಯರು ಇಲ್ಲದಾಗ ತನ್ನನ್ನು ಕರೆಸಿ ಕಳಿಸುವವರು ಯಾರು? ಅಣ್ಣ ತಮ್ಮಂದಿರು. ಅಂತಹವರೆ ಇಲ್ಲದೆ ಹೋದರೆ ಹೆಣ್ಣು ಅನಾಥಳಾಗುತ್ತಾಳೆ. ಇದ್ದರೆ, ತನಗೂ ಹುಲಿಯಂತಹ ಅಣ್ಣ ತಮ್ಮರಿರುವುದಾಗಿ ಹೇಳಿಕೊಂಡು ಹೆಮ್ಮೆಪಟ್ಟುಕೊಳ್ಳಬಹುದು. ಧೈರ್ಯ ತಂದುಕೊಳ್ಳಬಹುದು. ಸಮಯ ಬಂದರೆ ಆರ್ಥಿಕ ಸಹಾಯವನ್ನೂ ಅವರಿಂದ ಪಡೆಯಬಹುದು.

ಈ ಮುಕ್ತಕಗಳಲ್ಲಿ ಅಕ್ಕ-ತಮ್ಮ, ಅಣ್ಣ-ತಂಗಿಯರ ಪ್ರೀತಿ ವಿಶೇಷವಾಗಿ ವ್ಯಕ್ತವಾಗಿದೆ. ಅದು ಇಲ್ಲಿ ಹಾಲು-ಜೇನಿನ ಝುರಿಯಾಗಿ ಹರಿದಿದೆ. ಯಾವ ಅಕ್ಕನಿಗೇ ಆಗಲಿ ತಮ್ಮನ ಮೇಲೆ ಅತಿಯಾದ ಪ್ರೀತಿ, ಅಕ್ಕರೆ ಇರುತ್ತದೆ. ಅವನು ಸಮಾಜದಲ್ಲಿ ಎಲ್ಲರಿಗಿಂತ ಮೇಲಾಗಿ ಬಾಳಬೇಕೆಂಬ ಹಂಬಲ ಅವಳದು. ಹಾಗಾಗಿ ಅವಸಲ್ಲಿ ಗುಣವಿಲ್ಲದಿದ್ದರೂ ಗುಣವಿರುವಂತೆ ಚೆಲುವಿಲ್ಲದಿದ್ದರೂ ಚೆಲುವಿರುವಂತೆ ವರ್ಣಿಸುವುದು ಅವಳ ಸ್ವಭಾವ. ಅಂತಹ ಚಿತ್ರಗಳನ್ನೊಳಗೊಂಡ ಮುಕ್ತಕಗಳಲ್ಲಿ ಕೆಲವು.

ಸರದಾರ ಬರುವಾಗ ಸುರಿದಾವ ಮಲ್ಲೀಗಿ
ದೊರೆ ನನ್ನ ತಮ್ಮ ಬರುವಾಗ ಯಾಲಕ್ಕಿ
ಗೊನೆ ಬಾಗಿ ಹಾಲ ಸುರಿದಾವ.

ಅವನು ಬರುವ ರೀತಿಯನ್ನು ಹೀಗೆ ವರ್ಣಿಸಿದ್ದಾಳೆ. ಅಕ್ಕನಿಗೆ ಕರುಳುಬಳ್ಳಿಯ ಪ್ರೀತಿಯ ಜೊತೆಗೆ ಇಲ್ಲಿ ಸ್ವಾರ್ಥವೂ ಇದೆ. ಮುಂದೆ ತನ್ನ ತಮ್ಮನೇ ತನ್ನ ಅಳಿಯನೂ ಆಗಬಹುದು. ಹೀಗಾಗಿ ಅವನನ್ನು ಆಗಾಗ ನೋಡಬೇಕೆಂದು ಬಯಕೆಯಾಗುತ್ತದೆ. ಅಲ್ಲದೆ ಅವನು ಬಂದಾನು, ತೌರಿನ ವಿಷಯ ತಿಳಿಸಿಯಾನು, ಅಲ್ಲದೆ ತಮ್ಮನೂ ತೌರಿಗೆ ಕರೆದುಕೊಂಡು ಹೋಗಿಯಾನು ಅಥವಾ ತನ್ನ ಅಳಿಯನಾಗುವ ಬಗ್ಗೆ ಅವನ ಅಭಿಪ್ರಾಯ ತಿಳಿಸಿಯಾನು ಎಂಬ ಹಂಬಲದಿಂದ ಅವನ ಬರುವಿಕೆಯನ್ನೇ ಎದುರು ನೋಡುತ್ತಿರುತ್ತಾಳೆ. ಅವಳು ಅಂತಹ ನಿರೀಕ್ಷೆಯಲ್ಲಿಯೇ ಅವಳು ಬಡವಾಗಿ ಬಿಟ್ಟಳಂತೆ. ಇಂತಹ ಭಾವವನ್ನು ವ್ಯಕ್ತಪಡಿಸುವ ಇನ್ನೊಂದು ಮುಕ್ತಕ ಹೀಗಿದೆ.

> ತಾವರಿಯ ಗಿಡ ಹುಟ್ಟಿ ದೇವರಿಗಿ ನೆರಳಾಗಿ
> ನಾ ಹುಟ್ಟಿ ಮನಿಗೆ ಎರವಾದೆ ನನ ತಮ್ಮ
> ದಾರೀಯ ನೋಡಿ ಬಡವಾದೆ

ತಂಗಿಯಾದವಳಿಗೂ ಅಣ್ಣನ ಮೇಲೆ ಅಪಾರ ಪ್ರೀತಿ ಇರುತ್ತದೆ. ಒಂದು ಮುಕ್ತಕದಲ್ಲಿ ಈ ಪ್ರೀತಿಯ ಜೊತೆಗೆ ಅಣ್ಣನ ರಸಿಕತೆ, ಅವನಿಗೆ ಹೂವಿನ ಮೇಲಿರುವ ಆಸೆ -ಇವು ತುಂಬ ಸೊಗಸಾಗಿ ಚಿತ್ರಿತವಾಗಿವೆ.

> ತೋಟಕ್ಕೆ ಹೋದಣ್ಣ ಊಟಕ್ಕೆ ಬರಲಿಲ್ಲ
> ತೋಟದ ಹೂವ ತಲೆ ತುಂಬ ಇಟಗೊಂಡು
> ಊಟದ್ಹಂಬಲ ಮರೆತಾನ

ಊಟವನ್ನೂ ಮರೆಸುವಂತಹ ಸೌಂದರ್ಯ ಆ ಹೂವಿನಲ್ಲಿತ್ತು ಎನ್ನುವುದಕ್ಕಿಂತ ಆ ಚೆಲುವನ್ನು ಕಾಣುವ ಗುಣ ಅವನಲ್ಲಿತ್ತು ಎನ್ನಬಹುದು. ತಾಯಿ ಅಥವಾ ತಂಗಿ ಬಡಿಸುವ ಊಟವನ್ನೂ ಮರೆತು ಅವನು ಹೂ ಮುಡಿದು ತೋಟದಲ್ಲಿಯೇ ಉಳಿಯಬೇಕಾದರೆ ಅವನ ರಸಿಕತೆ ಎಂತಹದು ಎಂಬುದು ತಿಳಿಯುತ್ತದೆ.

ಇನ್ನು ದಾಂಪತ್ಯಕ್ಕೆ ಸಂಬಂಧಿಸಿದ ಬಹು ಸ್ವಾರಸ್ಯಪೂರ್ಣವಾದ ಮುಕ್ತಕಗಳು ಜನಪದ ಗೀತಿಗಳಲ್ಲಿ ವಿಶೇಷವಾಗಿ ದೊರೆಯುತ್ತವೆ. ಅವನ್ನು ರೀತಿ ರಸ ಅಲಂಕಾರ ಧ್ವನಿವರ್ಣನೆ ದರ್ಶನ ಜೀವನಮೌಲ್ಯ ಹೀಗೆ ಯಾವ ದೃಷ್ಟಿಯಿಂದ ಒರೆಹಚ್ಚಿ ನೋಡಿದರೂ ಅವು ಉತ್ತಮವೆನ್ನಿಸುತ್ತವೆ. ಈ ಮುಕ್ತಕಗಳು ಜನಪದ ದಾಂಪತ್ಯ ಜೀವನದ ಪಡಿಗನ್ನಡಿಗಳಾಗಿವೆ. ಹೆಣ್ಣಿಗೆ ತೌರಿನ ಹಂಬಲ ವಿಶೇಷವಾದುದು, ಆದರೆ ಗಂಡನ ಪ್ರೀತಿ ಒಮ್ಮೊಮ್ಮೆ ತೌರನ್ನೂ ಮರೆಸುತ್ತದೆ. ಅಂತಹ ಪ್ರೀತಿಯನ್ನು ಚಿತ್ರಿಸುವ ಒಂದು ಮುಕ್ತಕ ಹೀಗಿದೆ.

ಹಚ್ಚಡದ ಪದರಾಗ ಅಚ್ಚಮಲ್ಲಿಗೆ ಹೂವ
ಬಿಚ್ಚಿ ನನ ಮೇಲೆ ಒಗೆವಂಥ ರಾಯರನ
ಬಿಟ್ಯಾಂಗ ಬರಲೆ ಹಡೆದವ್ವ

ತೌರಿಗೆ ಹೋಗಲು ಬಯಕೆಯಾದರೂ ಮನಸ್ಸು ಗಂಡನನ್ನೂ ಬಿಟ್ಟು ಹೋಗಲು ಹೊಯ್ದಾಡುತ್ತದೆ. ಏಕೆಂದರೆ ಗಂಡನ ಪ್ರೀತಿ ಅಂತಹದು. ಅವನು ನಿತ್ಯವೂ ಮನೆಗೆ ಬರುವಾಗ ಹಚ್ಚಡದಲ್ಲಿ ಅಚ್ಚಮಲ್ಲಿಗೆ ಹೂಗಳನ್ನು ತಂದು ಅದನ್ನು ಹೆಂಡತಿಗೆ ಮುಡಿಯಲು ಕೊಡುತ್ತಾನೆ. ಇಷ್ಟೊಂದು ಪ್ರೀತಿಸುವಾಗ ಅವನನ್ನು ಒಂಟಿಯಾಗಿ ಬಿಟ್ಟು ಹೋಗುವುದಾದರೂ ಹೇಗೆ? ಎಂದು ಕರೆಯಲು ಬಂದ ತಾಯಿಯನ್ನೇ ಪ್ರಶ್ನಿಸುತ್ತಾಳೆ. ಒಟ್ಟಿನಲ್ಲಿ ತೌರನ್ನು ಮರೆಸುವಂತಹ ಗಂಡನ ಪ್ರೀತಿಯನ್ನು ಗಳಿಸಿದ ಗರತಿಯಾಗಿ ಮನಸ್ಸಿನ ಆಳ ಈ ಮುಕ್ತಕದಲ್ಲಿ ಚಿತ್ರಿತವಾಗಿದೆ.

ದಾಂಪತ್ಯದಲ್ಲಿ ಸರಸ ವಿರಸಗಳು ಸರ್ವೇಸಾಮಾನ್ಯ. ಸರಸವೇ ಹೆಚ್ಚಾಗಿರಬಹುದುದಾದರೂ ಕೆಲವೊಮ್ಮೆ ವಿರಸಗಳೂ ಉಂಟಾಗುತ್ತವೆ. ತನ್ನ ತೌರಿಗೆ ಹೋಗಲು ಹೆಣ್ಣೊಂದು ಹಟಹಿಡಿದಾಗ ಗಂಡ ಆದಷ್ಟೂ ಸಮಾಧಾನದಲ್ಲಿ ಬೇಡವೆಂದು ಹೇಳುತ್ತಾನೆ. ಆದರೆ ಅವಳು ಇನ್ನೂ ಹೆಚ್ಚು ಹಟ ಮಾಡುತ್ತಾಳೆ. ಆಗ ಸಿಟ್ಟುಗೊಂಡ ಗಂಡ ಹೆಂಡತಿಯನ್ನು ಬಡಿದುಬಿಡುತ್ತಾನೆ. ಸ್ವಲ್ಪ ಹೊತ್ತು ಕಳೆದ ಮೇಲೆ ಅವರ ಕೋಪ ಇಳಿಯುತ್ತದೆ. ಆಗ ಒಳಗೆ ಹೋಗುತ್ತಾನೆ. ತನ್ನ ಏಟಿನಿಂದ ಮಾನಸಿಕವಾಗಿ, ದೈಹಿಕವಾಗಿ ಪೆಟ್ಟು ತಿಂದ ಹೆಂಡತಿ ಒಳಗೆ ಹಾಸಿಗೆಯಲ್ಲಿ ಮಲಗಿರುವುದನ್ನು ಕಾಣುತ್ತಾನೆ. ಅವನ ಮನಸ್ಸು ಮರುಗುತ್ತದೆ. ಆಗ ಅವಳಿಗೆ ಏನೇನೋ ಸಮಾಧಾನದ ಮಾತುಗಳನ್ನಾಡುತ್ತಾನೆ. ಅದರಿಂದಲೂ ಅವಳ ದುಃಖ ಕಡಿಮೆಯಾಗದಿರಲು ಅವಳ ಕಾಲನ್ನು ಹಿಡಿದು ಕೇಳುತ್ತಾನೆ, ತಾನು ಹೆಚ್ಚೋ, ಅವಳ ತೌರು ಹೆಚ್ಚೋ ಎಂದು.

ಮಡದೀಯ ಬಡಿದಾನ ಮನದಾಗ ಮರುಗ್ಯಾನ
ಒಳಗ್ಹೋಗಿ ಕಾಲ ಹಿಡಿಯೂತ ಕೇಳ್ಯಾನ
ನಾ ಹೆಚ್ಚೊ ನಿನ್ನ ತವರೇಚ್ಚೊ

ಸಾಮಾನ್ಯವಾಗಿ ಹಳ್ಳಿಗರು ಶೀಘ್ರಕೋಪಿಗಳು. ಆ ಕೋಪದ ಭರದಲ್ಲಿ ಕೈತಪ್ಪಿ ಹೊಡೆದುಬಿಡುತ್ತಾರೆ. ಆ ಕೋಪ ಇಳಿದಾಗ ಅಷ್ಟೇ ಪಶ್ಚಾತ್ತಾಪಪಡುತ್ತಾರೆ. ಅವರ ಆ ಗುಣ ಈ ಮುಕ್ತಕದಲ್ಲಿ ಬಹು ನೈಜವಾಗಿ ಚಿತ್ರಿತವಾಗಿದೆ. ಒಬ್ಬ ಗಂಡಸು ತನ್ನ ತಾಯಿಯೊಂದಿಗೆ ತನ್ನ ಹೆಂಡತಿಯ ಬಗ್ಗೆ ಆಡುವ ಪ್ರಶಂಸೆಯ ಮಾತು ಒಂದು ಮುಕ್ತಕದಲ್ಲಿ ಬಹು ಚೆನ್ನಾಗಿ ವ್ಯಕ್ತವಾಗಿದೆ.

ಅಡಿಗೆಯ ಮನೆಯಾಗ ಮಡದಿಯ ಸುಳಿವಿಲ್ಲ
ಅಡಿಗೆ ಬಾಯಿಗೆ ರುಚಿಯಿಲ್ಲ ಹಡೆದವ್ವ
ಮಡದಿ ತವರಿಗೆ ಹೋಗ್ಯಾಳು.

ಹೊಸದಾಗಿ ಮದುವೆಯಾದ ದಂಪತಿಗಳು ಕೆಲವು ಕಾಲ ಎಲ್ಲರನ್ನೂ ಎಲ್ಲವನ್ನೂ ಮರೆತು ತಮ್ಮ ಲೋಕದಲ್ಲಿಯೇ ವಿಹರಿಸುವುದು ಸಾಮಾನ್ಯ. ಹಾಗಿರುವಾಗ ಒಬ್ಬರನ್ನೊಬ್ಬರು ಅಗಲುವ ಪ್ರಸಂಗ ಬಂದಾಗ ಅವರಿಗಾಗುವ ನೋವು ಅಷ್ಟಿಷ್ಟಲ್ಲ. ಅಂತಹದೇ ಒಂದು ಸಂದರ್ಭದ ಚಿತ್ರಣವಿದೆ, ಮೇಲಿನ ಮುಕ್ತಕದಲ್ಲಿ. ಹೆಂಡತಿಯನ್ನು ತೌರಿಗೆ ಕಳಿಸಿರುವ ಗಂಡನಿಗೆ ಈಗ ಏನೂ ಬೇಡವಾಗಿದೆ; ಯಾವುದೂ ರುಚಿಸದಾಗಿದೆ. ಅಡುಗೆಯ ಮನೆಯಲ್ಲಿ ಹೆಂಡತಿಯ ಯಾವ ಸುಳಿವೂ ಇಲ್ಲ, ಕೈಬಳೆಗಳ ಸದ್ದಿಲ್ಲ; ಮೋಡಿಯ ಮಾತಿಲ್ಲ; ಅವಳ ಅಡುಗೆಯ ರುಚಿಗೆ ಮಾರುಹೋಗಿದ್ದ ಅವನಿಗೆ ಈತ ತಾಯಿಯ ಅಡುಗೆಯೂ ರುಚಿಸದಾಗಿದೆ. ಹಾಗಾಗಿ ಬಹುಶಃ ಅವನು ತಾಯಿ ಬಡಿಸಿದ ಊಟವನ್ನು ನಿರಾಕರಿಸಿದ್ದಾನೆ, ಅಥವಾ ನಿತ್ಯದಂತೆ ಊಟ ಮಾಡಿಲ್ಲ. ಆಗ ಅನುಮಾನ ಬಂದ ತಾಯಿ ಕಾರಣವನ್ನು ಕೇಳಿದ್ದಾಳೆ. ಆಗ ಅವನು ನೇರವಾಗಿ ಹೇಳಿಯೇಬಿಡುತ್ತಾನೆ. ಅಡುಗೆಯ ಮನೆಯಲ್ಲಿ ಮಡದಿ ಇಲ್ಲದಿರುವುದೇ, ಅದು ಅವಳ ಕೈಅಡಿಗೆ ಅಲ್ಲದಿರುವುದೇ ತನ್ನ ಅರುಚಿಗೆ ಕಾರಣವೆಂದು.

'ಸಮರಸವೇ ಜೀವನ' ಎಂದ ಹಾಗೆ ದಾಂಪತ್ಯಜೀವನ ಸಮರಸದಿಂದ ಕೂಡಿರಬೇಕಾದರೆ ಆ ಜೀವನದಲ್ಲಿ ವಿರಸ ಸರಸಗಳು ಇರಲೇಬೇಕು. ವಿರಸಜೀವನವು ಸಾಮರಸ್ಯ ಹೊಂದಲು ಉತ್ತೇಜಕವಾಗುತ್ತದೆ. ಆದರೆ ಅಂತಹ ವಿರಸ ಅತಿಯಾಗಬಾರದು. ಅದು ಸುಖದಾಂಪತ್ಯಕ್ಕೆ ಗಂಡಾಂತರಕಾರಿ. ಹಾಗೆಯೇ ಅತಿಯಾದ ಸರಸವೂ ಒಳ್ಳೆಯದಲ್ಲ. ಎರಡಕ್ಕೂ ಮಿತಿಯಿರಬೇಕು. ಆಗಲೇ ಆ ಜೀವನ ಸೊಗಸು. ಆದರೂ ದಾಂಪತ್ಯ ಜೀವನದಲ್ಲಿ ವಿರಸವಿದ್ದರೇ ಚೆನ್ನವೆಂಬುದನ್ನು ಜಾನಪದರ ಅನುಭವ. ಇಲ್ಲವಾದರೆ ಜಗಳವಿಲ್ಲದ ದಾಂಪತ್ಯ ಹಳಸುವುದೆಂಬುದು ಅವರ ಭಾವನೆ. ಅದನ್ನೇ ಸಾರುವ ಒಂದು ಮುಕ್ತಕ ಹೀಗಿದೆ.

> ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ
> ನಿಂಗಕ ನೀರು ಎರೆದ್ಹಾಂಗ ಹಿರಿಹೊಳೆಯ
> ಗಂಗವ್ವ ಸಾಗಿ ಹರದ್ಹಾಂಗ

ಗಂಧವನ್ನು ತೀಡಿದಷ್ಟೂ ಕಂಪು ಹೆಚ್ಚಾಗುತ್ತದೆ. ಹಾಗೆಯೇ ಗಂಡ ಹೆಂಡಿರಲ್ಲಿ ಜಗಳ ಹೆಚ್ಚಾದಷ್ಟೂ ಅವರು ಹತ್ತಿರವಾಗುತ್ತಾರೆ. ದಾಂಪತ್ಯ ಜೀವನ ಸಂತೋಷಮಯವಾಗಿರುತ್ತದೆ. ಒಟ್ಟಿನಲ್ಲಿ 'ಸಂಸಾರವೆಂದರೆ ಬರಿಯ ದೈಹಿಕ ಮಿಲನವಲ್ಲ; ಅದೊಂದು ರೀತಿಯ ಪೂಜೆ; ಕಲಹಗಳಿಂದ, ವಿರಸ ವಿರಹಗಳಿಂದ ದಾಂಪತ್ಯದ ಬೆಸುಗೆ ಮತ್ತೂ ಗಾಢವಾಗುತ್ತದೆ ಮತ್ತು ದೈವಿಕವಾಗುತ್ತದೆ'' ಎನ್ನುವುದು ಈ ಪದ್ಯದ ಅಂತರಾರ್ಥವಾಗಿದೆ.

ಸಮರಸ ದಾಂಪತ್ಯವನ್ನು ಚಿತ್ರಿಸುವ ಇನ್ನೊಂದು ಮುಕ್ತಕ.

> ಹಾಸೀಗಿ ಹಾಸೆಂದ ಮಲ್ಲೀಗಿ ಮುಡಿಯೆಂದ
> ಬ್ಯಾಸತ್ತರ ಮಡದಿ ಮಲಗೆಂದ ನನ ರಾಯ
> ತನ ನೋಡಿ ತೌರ ಮರೆಯೆಂದ.

ಹೆಣ್ಣು ಒಂಟಿಯಾಗಿರುವಾಗ ಈ ರೀತಿ ತನ್ನ ಗಂಡನ ಮಾತುಗಳನ್ನೆಲ್ಲ ಜ್ಞಾಪಿಸಿಕೊಳ್ಳುತ್ತಾಳೆ. ಅಲ್ಲದೆ, ತನ್ನ ತಾಯಿ ಅಥವಾ ಗೆಳತಿಯರು "ನಿನ್ನ ಗಂಡ ಹೇಗೆ?" ಎಂದು ಹೇಳಿದಾಗ ಅವಳು ತನ್ನ ಗಂಡ ತನ್ನನ್ನು ನೋಡಿಕೊಳ್ಳುತ್ತಿರುವ ರೀತಿಯನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾಳೆ, ತನ್ನ ತೌರನ್ನು ಬಿಟ್ಟು ಗಂಡನು ಅವಳ ದುಃಖ ಶಮನಮಾಡಲು ಅವಳೊಡನೆ ಆಡಿದ ನಲ್ನುಡಿಗಳು ಈ ಮುಕ್ತಕದಲ್ಲಿ ಬಿತ್ತರಗೊಂಡಿವೆ.

ಹೆಣ್ಣಿನ ಅತ್ಯಂತ ತೀವ್ರ ಬಯಕೆಗಳಲ್ಲೊಂದು ಮಕ್ಕಳದು. ಮಕ್ಕಳಿಲ್ಲದಿದ್ದರೆ ಅವಳ ಬಾಳು ಬಾಳಲ್ಲ; ಅದು ವ್ಯರ್ಥ. ಅವಳಿಗೆ ಸಮಾಜದಲ್ಲಿ ಗೌರವವಿಲ್ಲ. ಅವಳನ್ನು 'ಬಂಜೆ' ಎಂದು ಹೀಯಾಳಿಸುತ್ತಾರೆ; ಮನೆಯಲ್ಲಿಯೂ ಸುಖವಿಲ್ಲ. ತನ್ನ ದುಃಖವನ್ನು ಯಾರಲ್ಲಿಯೂ ಹೇಳಿಕೊಳ್ಳಲಾರಳು. ಹಾಗಾಗಿ ಅವಳು ಹೀಗೆ ಮೊರೆಯಿಡುತ್ತಾಳೆ.

ಕಂದನ ಕೊಡು ಶಿವನೆ ಬಂಧನಬಿಡಲಾರೆ
ಹಂಗೀನ ಬಾನ ಉಣಲಾರೆ ಮರ್ತ್ಯದಾಗ
ಬಂಜೆಂಬ ಶಬುದ ಹೊರಲಾರೆ.

ಇನ್ನೊಂದು ಮುಕ್ತಕ ಬಂಜೆಯ ಧಾರುಣ ಬಾಳನ್ನು ಮನಕರಗುವಂತೆ ಚಿತ್ರಿಸುತ್ತದೆ.

ಬಾಲಕರಿಲ್ಲದ ಬಾಲಿದ್ಯಾತರ ಜನ್ಮ
ಬಾಡೀಗಿ ಎತ್ತು ದುಡಿದ್ಹಂಗ ಬಾಳೆಲೆಯ
ಹಾಸ್ಯುಂಡು ಬೀಸಿ ಒಗೆದಂಗ.
ಬಂಗಾರ ಬಳೆಯಿಟ್ಟು ಬೈಬ್ಯಾಡ ಬಡವರನ
ಬಂಗಾರ ನಿನಗೆ ಸ್ಥಿರವಲ್ಲ ಮದ್ಯಾನದ
ಹೊತ್ತು ಹೊರಳೂದು ತಡವಲ್ಲ.

ಸಿರಿಯು ಸ್ಥಿರವಲ್ಲ. ಅದು ಮಧ್ಯಾಹ್ನದ ಬಿಸಿಲು ಇದ್ದ ಹಾಗೆ, ಕ್ಷಣಿಕ. ಬೇಗ ಜಾರಿಬಿಡುತ್ತದೆ. ಆದ್ದರಿಂದ ಸಿರಿಬಂದ ಕಾಲದಲ್ಲಿ ಬಡವರನ್ನು ಕಡೆಗಣಿಸಬಾರದೆಂದು ಇದರ ಮತಿತಾರ್ಥ.

ಅತ್ತೆಯ ಮನೆಯನ್ನು ಸೇರಿದ ಹೆಣ್ಣಿಗೆ ಜವಾಬ್ದಾರಿಗಳು ಹೆಚ್ಚು. ಅವಳು ಕೆಲವು ಅಂಕೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ತನ್ನ ಇಚ್ಛೆಯಂತೆ ನಡೆಯುವಂತಿಲ್ಲ. ಹಾಗೆ ಮಾಡಿದರೆ ಅವರು ಗರತಿಯೆನ್ನಿಸಿಕೊಂಡು ಬಾಳಲು ಸಾಧ್ಯವಿಲ್ಲ. ಸಂಸಾರವನ್ನು ಹಾಳುಮಾಡಿಕೊಳ್ಳುತ್ತಾಳೆ. ಅವಳು ಅತ್ತೆ, ಮಾವ, ಪತಿಗೆ ಅಂಜಿ ನಡೆಯುವಂತೆ ಸುತ್ತಲ ನೆರೆಹೊಯವರಿಗೂ ಅಂಜಿ ನಡೆಯಬೇಕು ಏಕೆಂದರೆ ಕೊಟ್ಟ ಮನೆಗೂ ತಂದ ಮನೆಗೂ ಕೀರ್ತಿಯನ್ನು ತರಬೇಕಾದವಳು ಅವಳು. ಇಂತಹ ನೀತಿಯನ್ನೊಳಗೊಂಡ ಒಂದು ಮುಕ್ತಕ.

ಅತ್ತೆ ಮಾವಗಂಜಿ ಸುತ್ತೇಳು ನೆರೆಗಂಜಿ
ಮತ್ತೆ ನಲ್ಲನ ದನಿಗಂಜಿ ನಡೆದರೆ
ಎಂಥ ಉತ್ತಮರ ಮಗಳೆಂದ

ಅಲ್ಲದೆ, ಅವಳು ತನ್ನ ಹಿತದೃಷ್ಟಿಯಿಂದ ಅತ್ತೆ ಮನೆಯವರು ಹತ್ತೆಂಟು ಬೈದರೂ ತಿರುಗಿ ಬೈಯಬಾರದು. ಅತ್ತೆಯೇ 'ಇವಳೆಂತ ಉತ್ತಮರ ಮಗಳಪ್ಪ' ಎನ್ನುವಂತೆ ನಡೆದುಕೊಳ್ಳಬೇಕು. ತೌರವರಿಗೆ ಒಂದಿಷ್ಟೂ ಕೆಟ್ಟ ಹೆಸರು ಬರದಂತೆ ಎಚ್ಚರಿಕೆಯಿಂದರಬೇಕು.

ಅತ್ತೀಯ ಮನಿಯಗ ಮುತ್ತಾಗಿ ಇರಬೇಕು
ಹೊತ್ತು ನೀಡಿದರೆ ಉಣಬೇಕು ತವರವರ
ಉತ್ತಮರ ಹೆಸರು ತರಬೇಕು

ಮನುಷ್ಯನ ಒಳ್ಳೆಯ ಬಾಳಿಗೆ ತಳಹದಿಯಾದ ನೀತಿಯನ್ನು ಸಾರುವ ಮುಕ್ತಕಗಳು ಕನ್ನಡ ಸಾಹಿತ್ಯ ಇತರ ಪ್ರಕಾರಗಳಲ್ಲಿರುವಂತೆಯೇ ಈ ಜನಪದ ಮುಕ್ತಕಗಳಲ್ಲಿಯೂ ವಿಶೇಷವಾಗಿ ಕಂಡುಬರುತ್ತವೆ. ಈ ನೀತಿ ಇಂಥವರಿಗೇ, ಇಂಥ ವಿಷಯದ ಬಗೆಗೆ ಎಂದು ಸೀಮಿತವಾಗಿಲ್ಲ. ಹೆಂಡತಿಗೆ ಹೆಚ್ಚು ಸಲಿಗೆ ಕೊಟ್ಟ ತಮ್ಮನಿಗೆ ಅಕ್ಕ ಹೇಳುವ ಉಪದೇಶ ಹೀಗಿದೆ.

ಅಂಜೂರಹಣ್ಣೆಂದು ತಂದು ತೂರಲಿಬ್ಯಾಡ
ಹೆಂಡರಿಗೆ ಸಲಿಗೆ ಕೊಡಬ್ಯಾಡ ನನ ತಮ್ಮ
ಮುಂದೆ ನಿನ ಮಾತು ನಡಿಯಾವು.

ಹೆಂಡತಿ ಎಷ್ಟೇ ಒಳ್ಳೆಯವಳಾಗಿದ್ದರೂ ಅವಳಿಗೆ ಹೆಚ್ಚಿನ ಸಲಿಗೆ ಕೊಡಬಾರದು. ಎಲ್ಲ ಹೆಂಗಸರೂ ಒಂದೇ ಸಮನಿರುವುದಿಲ್ಲ. ತಮ್ಮ ಸಲಿಗೆಯನ್ನು, ನಮ್ಮ ಒಳ್ಳೆಯ ಗುಣಗಳನ್ನು ದುರುಪಯೋಗಪಡಿಸಿಕೊಳ್ಳ ಬಹುದು; ನಮ್ಮ ಮಾತನ್ನೇ ಕೇಳದೇ ಹೋಗಬಹುದು. ಆದ್ದರಿಂದ ಮೊದಲಿನಿಂದ ಅವಳನ್ನು ಅಂಕೆಯಲ್ಲಿಟ್ಟಿರು ಎಂದು ತಮ್ಮನಿಗೆ ಅಕ್ಕ ಬುದ್ಧಿ ಹೇಳುತ್ತಿದ್ದಳು.

ಮಾನವ ಹುಟ್ಟಿದ ಮೇಲೆ ನಾಲ್ಕು ಜನರಿಗೆ ಉಪಕಾರಿಯಾಗಿ, ಬೇಕಾದವನಾಗಿರಬೇಕು. ಇಲ್ಲವಾದರೆ ಅವನು ಮನುಷ್ಯನಾಗಿ ಹುಟ್ಟಿ ಏನು ಪ್ರಯೋಜನ? ಅವನಿಗೂ ಪ್ರಾಣಿಗಳಿಗೂ ಏನು ವ್ಯತ್ಯಾಸ? 'ಶರಣರ ಗುಣವನ್ನು ಮರಣದಲ್ಲಿ ಕಾಣು' ಎಂದ ಹಾಗೆ. ನಾಲ್ಕು ಜನರಿಗೆ ಬೇಕಾಗಿ ಬಾಳಿದವನು ಸತ್ತಾಗ ಊರೆಲ್ಲ ಅವನಿಗಾಗಿ ದುಃಖಿಸುತ್ತದೆ.

ಲೋಕದಾಗಿರುತನಕ ಬೇಕಾಗಿ ಇರಬೇಕ
ಸಾಕಾಗಿ ಶಿವನ ಸದರೀಗಿ ಹೋಗುವಾಗ
ಎಲ್ಲಾರು ಬರತಾರ ಕಳಿಸಾಕ

ಸೂಳೆಯ ಸಹವಾಸವನ್ನು ಜನಪದರು ಬಹಳವಾಗಿ ಖಂಡಿಸುತ್ತಾರೆ. ಆ ಸಹವಾಸಕ್ಕೆ ಹೋಗಲೇಬಾರದೆಂದು ಅವರ ಉಪದೇಶ, ಏಕೆಂದರೆ, ಸೂಳೆಗೆ ಹೋದವನು ಯಾವನೂ ಉದ್ಧಾರವಾಗಿಲ್ಲ. ಅವನು ಕಾಡುನಾಯಿಗೂ ಕಪಿಗೂ ಕಡೆಯಾಗುತ್ತಾನೆ. ಹುಚ್ಚನಾಗುತ್ತಾನೆ, ಬಿಕಾರಿಯಾಗುತ್ತಾನೆ. ಕೊನೆಗೆ ಸೂಳೆಯ ಕಾಲಿನ ಕೆರದಂತಾಗಿ ಅವಳ ಸೇವಕನಾಗಿಬಿಡುತ್ತಾನೆ. ಆದ್ದರಿಂದ ಆ ಸಹವಾಸವೇ ಬೇಡ ಎಂದು ಬೋಧಿಸುತ್ತದೆ ಒಂದು ಮುಕ್ತಕ.

ಸೂಳೆಗೆ ಹೋದವನು ಏನಾದ ಎಂತಾದ
ಕಾಡುನಾಯಾದ ಕಪಿಯಾದ ಆ ಮುರವ
ಸೂಳೆಕಾಲೀಗೆ ಕೆರವಾದ.

'ಗುಣ ನೋಡಿ ಹೆಣ್ಣು ಕೊಡು' ಎಂದು ಹಿರಿಯರು ಹೇಳುವ ಹಾಗೆ, ಹೆಣ್ಣನ್ನು ಕೊಡುವ ಮೊದಲು ಗಂಡಿನ ಗುಣ ನೋಡಬೇಕು. ಹಾಗೆಯೇ ಹೆಣ್ಣನ್ನು ತರುವಾಗಲೂ ಅವಳ ಗುಣ ನೋಡಬೇಕು. ಇಲ್ಲವಾದರೆ ಹದನೋಡಿ ಬಿತ್ತದ ಬೆಳೆಯಂತೆ ಗರಿನೋಡಿ ಕಡಿಯದ ಕಬ್ಬಿನಂತೆ ಮೋಸಹೋಗಬೇಕಾಗುತ್ತದೆ. ಅಂಥವನ ಜೀವನ ಹಾಳಾಗುತ್ತದೆ ಎಂಬ ನೀತಿಯನ್ನು ಸಾರುತ್ತದೆ ಒಂದು ಮುಕ್ತಕ.

ಹದನೋಡಿ ಹರಗಣ್ಣ ಹಸಿ ನೋಡಿ ಬಿತ್ತಣ್ಣ
ಗರಿ ನೋಡಿ ಕಬ್ಬು ಕಡಿಯಣ್ಣ ಹೆಣ್ಣೀನ
ಗುಣ ನೋಡಿ ಸೆರಗ ಹಿಡಿಯಣ್ಣ.

ವಯಸ್ಸಾದ ಗಂಡಿಗೆ ಸಣ್ಣ ವಯಸ್ಸಿನ ಹೆಣ್ಣುಗಳನ್ನು ಮದುವೆ ಮಾಡುತ್ತಿದ್ದುದು ಸಾಮಾನ್ಯ ಇಂಥದೊಂದು ಮದುವೆಯಲ್ಲಿ ಹೆಣ್ಣು ಅಳಲು ತೋಡಿಕೊಂಡಿದ್ದಾಳೆ.

ಇಷ್ಟು ಸಡಗರ ಸೋಯ್ದು ಕುಡಿಗೋಲಿ ಕ್ಯಾಕಾಲಿ
ಅಷ್ಟು ಸಂಪತ್ತೊಯ್ದು ಸುಡುಗಾಡಿಗಿಕ್ಕಲಿ
ಗಂಡಂತ್ರವಾದೀತು ಬಾಲಿಯ ಈ ಜನರು
ಎದೆ ಬಿಚ್ಚಿ ಯಾರಿಗ್ಹೇಳಲಿ ದೇವ
ಕೊಟ್ಟಾರ ಮುದುಕಗ

ಎಂದು ತನ್ನ ವಿರಹ ವೇದನೆಯನ್ನು ಮೌನವಾಗಿ ಪ್ರತಿಭಟಿಸುವ ಹೆಣ್ಣಿನ ತುಮುಲ ಈ ಒಂದು ಚುಟುಕುವಿನಲ್ಲಿ ಮೂಡಿಬಂದಿದೆ. ಅಲ್ಲದೆ ಹೆಣ್ಣು ಮದುವೆಯಾಗಲು ಅಂತಸ್ತು ಬೇಕಾಗಿಲ್ಲ. ಆಂತರಿಕ ಸೌಂದರ್ಯ ಬಹಳ ಮುಖ್ಯ. ಶ್ರೀಮಂತರ ಮಗಳ ಮೈಮಾಟ ಚಂದ, ಬಡವರ ಮನೆಯ ಹೆಣ್ಣಿನ ಜೀವನ ಆನಂದ ಎನ್ನುವ ಬಡತನದ ಬೇಗೆಯಲ್ಲಿದ್ದವರ ಮಗಳು ಮಾಡುವ ಕೆಲಸವನ್ನು ಕುರಿತಾಗಿ ಹಾಗಲಕಾಯಿಗೆ ಪ್ರತೀಕವಾಗಿ ಹೋಲಿಸಿಕೊಂಡ ಚುಟುಕದಲ್ಲಿ

ಹಾಗಲ ಹೆಣ್ಣೀಗೆ ಹನ್ನೊಂದು ಸಾಂಬಾರ
ಉಂಡು ನೋಡಣ್ಣ ರುಚಿ ಸವಿ ಬಡವರ ! ಮಗಳ
ತಂದು ನೋಡಣ್ಣ ಬದುಕೀಗೆ

ಜನಪದೀಯರು ರಚಿಸಬೇಕೆಂದು ಉದ್ದೇಶಿಸಿದವಲ್ಲ. ಈ ಎಲ್ಲ ಕಾವ್ಯಗಳು ಅವರು ಬದುಕಿನ ದಿನ ನಿತ್ಯ ಘಟಿಸುವ ಘಟನೆಗಳು ಬಡವರ ಮನೆಯ ಮಗಳು ಹೇಳಿದಂತೆ ಮನೆಗೆಲಸ ಮಾಡುತ್ತಾಳೆ. ಹಾಗಲಕಾಯಿ ಸರ್ವರೋಗಗಳಿಗೆ ಮದ್ದು. ಹೆಣ್ಣನ್ನು ಪ್ರತಿಮೆಯಾಗಿ ಹೋಲಿಸಿರುವುದು. ಜಾನಪದ ಕವಯಿತ್ರಿಯ ಜಾಣ್ಮೆ ಹೇಳಲಸದಳ.

ಹೆಣ್ಣು ಸಮಾಜದ ಕಣ್ಣು ಎಂದು ಹಾಡಿಹೊಗಳಿ. ಅವಳನ್ನು ಮೂಲೆಗುಂಪಾಗಿ ಮಾಡಿದ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣನ್ನು ನಿಕೃಷ್ಟವಾಗಿ ಕಂಡ ರೀತಿಯನ್ನು ಹಾಗೂ ಹೆಣ್ಣಾಗಿ ಹುಟ್ಟಿದ ತನ್ನತನಕ್ಕೆ ಹಿಡಿಶಾಪ ಹಾಕುವ ಒಂದು ಪರಿ ಇಲ್ಲಿದೆ.

ಹೆಣ್ಣಾಗಿ ಹುಟ್ಟೋದಕ್ಕಿಂತ ಮಣ್ಣಾಗಿ ಹುಟ್ಟಿದರೆ
ಮಣ್ಣಿನ್ಮೇಲೊಂದು ಮರವಾಗಿ ! ಹುಟ್ಟಿದರೆ
ಪುಣ್ಯವಂತರಿಗೆ ನೆರಳಾಗಿ

ಎನ್ನುವ ಈ ಬಯಕೆ ಆಕೆಯ ಹಿಂದಿನ ನೋವಿನ ಆಳ ಎಷ್ಟೆಂಬುದು, ಬದುಕೇ ಬೇಡವೆಂಬ ನಿಲುವಿನ ಹಿಂದಿನ ಹತಾಶೆಯನ್ನು ಗಮನಿಸಿ ಅವಳ ಸ್ಥಿತಿಯನ್ನು ಊಹಿಸಿಕೊಳ್ಳಬಹುದು. ಹೆಣ್ಣಿನ ಜನ್ಮ ಇಲ್ಲಿಗೇ ಮುಕ್ತಾಯವಾಗಬೇಕು ಎಂದು ಹೇಳುವ ಈ ಹಾಡಿನಲ್ಲಿ

ಹೆಣ್ಣಿನ ಕಾಯವ ಮಣ್ಣು ಮಾಡಲಿಬೇಕು
ಸುಣ್ಣದಲ್ಹಾಗ ಸುಡಬೇಕ ಈ ಜಲುಮ
ಮಣ್ಣು ಮಾಡಿ ಮರ್ತ್ಯ ಗೆದಿಬೇಕು.

ಸಾಯುವುದರಿಂದಲೇ ಈ ಭೂಮಿಯ ಕಷ್ಟಗಳಿಂದ ತನಗೆ ಬಿಡುಗಡೆ ಎಂಬ ತೀರ್ಮಾನಕ್ಕೆ ಹೆಣ್ಣೊಬ್ಬಳು ಬಂದಿದ್ದಾಳೆ. ಗಂಡುಳ್ಳ ಗರತಿಯ ಸಹವಾಸಕ್ಕೆ ಬಿದ್ದಿರುವ ಅಣ್ಣನಿಗೆ ತಂಗಿ ಹೇಳುವ ಹಿತವಚನ ಈ ಕಾವ್ಯದಲ್ಲಿ ವ್ಯಕ್ತವಾಗಿದೆ.

ಗಂಡುಳ್ಳ ಗರತಿ ಸಂಗ ಬೇಡ ಅಣ್ಣಯ್ಯ
ಎಂದಿದ್ದರವಳ ಗುಣಬೇರೆ ಅಡಕೆಯ
ಹೊಂಬಾಳ ಬೇರೆ ಸುಳಿಬೇರೆ

ವಿವಾಹಿತ ಸ್ತ್ರೀಯರ ಗುಣ ವಿಶ್ವಾಸಾರ್ಹವಲ್ಲ. ಅವರ ಪ್ರೇಮ ಅಷ್ಟೇ ನಿಷ್ಠಾಪೂರ್ವಕವಾಗಿ ತೋರಿದರು ಅದು ಅಪಾಯಕಾರಿ. ಏಕೆಂದರೆ ಮದುವೆಯಾದ ಗಂಡನಿಗೆ ಕೈಕೊಟ್ಟ ಆ ಹೆಣ್ಣು

ಮತ್ತೊಬ್ಬನಿಗೆ ನಿಷ್ಠಳಾಗಿರುತ್ತಾಳೆಂದರೆ ನಂಬುವುದೆಂತು? ನಾಳೆ ಇವನಿಗೆ ಕೈ ಕೊಟ್ಟು ಇನ್ನೊಬ್ಬನನ್ನು ಬಲೆಗೆ ಹಾಕಿಕೊಳ್ಳಬಹುದು. ಅವಳು ವೇಶ್ಯೆಯಂತೆ ಚಪಲೆ, ಚಂಚಲೆ, ಅವಳ ಸಂಗಬೇಡ ಎಂಬುದು ತಂಗಿಯ ಹಿತವಾದ "ಎಂದಿದ್ದರವಳ ಗುಣಬೇರೆ" ಎಂಬುದನ್ನು ಇನ್ನೂ ಒಂದು ಬಗೆಯಲ್ಲಿ ಅರ್ಥವಿಸಬಹುದು. ಅವಳು ತನ್ನ ತಪ್ಪಿಗಾಗಿ ಪಶ್ಚಾತ್ತಾಪ ಪಟ್ಟು ನಾಳೆ ಮತ್ತೆ ತನ್ನ ಪತಿಗೆ ಅಂಟಿಕೊಳ್ಳಬಹುದು. ಆಗ ಅವಳನ್ನು ನಂಬಿದ ಇವನ ಗತಿಯೇನು? ಅವಳಿಂದೇನು ಅಪಾಯವೋ? ಬೇಕಾದರೆ ಮದುವೆಯಾಗದ ಹುಡುಗಿಯೊಬ್ಬಳನ್ನು ಪ್ರೀತಿಸು, ಮದುವೆಯಾಗು, ಸುಖವಾಗಿರು ಎಂಬುದು ಅವಳ ಮಾತಿನ ಧೋರಣೆ. 'ಅಡಕೆಯ ಹೊಂಬಾಳೆ ಬೇರೆ ಸುಳಿಬೇರೆ' ಎಂಬ ಮಾತಂತೂ ಬಹಳ ಅರ್ಥವತ್ತಾದುದು. ಹೊಂಬಾಳೆ ನೋಟಕ್ಕೆ ಬಹಳ ಸುಂದರ. ಆದರೆ ಅದು ಸುಳಿಯಲ್ಲ 'ಸುಳಿ' ಇಲ್ಲಿ ಸಂತಾನಕ್ಕೆ ಸಂಕೇತವಾಗಿದೆ. ಕ್ಷಣಿಕ ಸುಖಕರವಾದ ಗುಪ್ತ ಪ್ರಣಯಬೇಡ. ಸಂತಾನಕಾರಕವಾದ ವಂಶಕಾರಕವಾದ ಧರ್ಮಬದ್ದ ವಿವಾಹ ಬೇಕು ಎಂಬುದು ಇಲ್ಲಿ ಗಮ್ಯವಾಗುವ ಮನೋಜ್ಞವಾದ ವ್ಯಂಗ್ಯಾರ್ಥವಾಗಿದೆ.

೧೨ನೇ ಶತಮಾನದಲ್ಲಿ ಸಾಮಾಜಿಕ ಧಾರ್ಮಿಕ ಕ್ರಾಂತಿಯ ಪರಿಣಾಮವಾಗಿ ಸಾಹಿತ್ಯ ಕ್ಷೇತ್ರದಲ್ಲಿಯೂ ಕೂಡಾ ಮಹತ್ವದ ಪರಿವರ್ತನೆ ಆಯಿತು. ಅಕ್ಕ ಮಹಾದೇವಿಯಂತಹ ವಚನಕಾರ್ತಿಯರು ವೈಚಾರಿಕ ಮನೋಭಾವನೆಯನ್ನು ಮೈಗೂಡಿಸಿಕೊಂಡು ಬೆಳೆದರು. ಹೆಣ್ಣು ಎಂದರೆ ಒಂದು ಸೂತಕ ಎನ್ನುವ ಭಾವನೆಯನ್ನು ಕುರಿತಾಗಿ ಶರಣೆ ಅಕ್ಕಮಹಾದೇವಿ ಯಾವುದು ಸೂತಕ ಎಂದು ಹೇಳಿದ ಈ ಚಿಕ್ಕ ಕಾವ್ಯದಲ್ಲಿ

ಹೆಣ್ಣು ಹೆಣ್ಣಾದೊಡೆ ಗಂಡಿನ ಸೂತಕ
ಗಂಡು ಗಂಡಾದೊಡೆ ಹೆಣ್ಣಿನ ಸೂತಕ
ತನುವಿನ ಸೂತಕಕ್ಕೆ ನೆಲೆ ಉಂಟೆ ಅಯ್ಯಾ !
ಮೊದಲಿಲ್ಲದ ಸೂತಕಕ್ಕೆ ಮರುಳಾಯಿತು ಜಗವೆಲ್ಲ
ಗುರುವಿಂಗೆ ಜಗವೆಲ್ಲಾ ಹೆಣ್ಣು ನೋಡಾ !

ಹೆಣ್ಣಿಗೆ ಗಂಡಿನ ಸೂತಕವಿದೆ. ಗಂಡಿಗೆ ಹೆಣ್ಣಿನ ಸೂತಕವಿದೆ. ಸಂಬಂಧದಿಂದಾಗ ದೋಷ ಉಂಟಾಗುವುದು. ಮನದ ಮೈಲಿಗೆ ಕಳೆದ ನಂತರದಲ್ಲಿ ಶರೀರದ ದೋಷವೆಲ್ಲಿರುವುದು? ಹುಟ್ಟಿದ ಮೊದಲು ಇಲ್ಲದ ಸೂತಕ ದೋಷವನ್ನು ಅನುಭವಿಸಿ ಜನ ಮರುಳಾಗಿದ್ದಾರೆ. ಎನ್ನ ಮಲ್ಲಿಕಾರ್ಜುನನಿಗೆ ಜಗವೇ ತಾಯಿ ಎಂಬ ಭಾವ ಅಡಗಿದೆ.

ಹದಿನೇಳನೇ ಶತಮಾನದಲ್ಲಿ ಹೆಣ್ಣಿನ ಸ್ಥಾನಮಾನಕ್ಕೆ ಮಹತ್ತರವಾದ ಸ್ಥಾನ ನೀಡುವಲ್ಲಿ ಯಶಸ್ವಿಯಾದ ಸಂಚಿ ಹೊನ್ನಮ್ಮನಂತಹ ಕವಯಿತ್ರಿಯರು ತಮ್ಮ ಕವನಗಳಲ್ಲಿ ಹೆಣ್ಣಿನ ಆದರ್ಶ ಎತ್ತಿ ಹಿಡಿದಿದ್ದಾರೆ.

ಪೆಣ್ಣಲ್ಲವೇ ತಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೇ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು

ಹೀಗೆ ಈ ನಾಡಿನಲ್ಲಿ ಹೆಣ್ಣಿಗಿರುವ ಅಸಡ್ಡೆಯನ್ನು ಸಾಂಗತ್ಯ ಎನ್ನುವ ಕಾವ್ಯ ಪ್ರಕಾರದಲ್ಲಿ ಚುಟುಕಾಗಿ ಪ್ರತಿಭಟಿಸಿದ್ದಾರೆ ಹೊನ್ನಮ್ಮ. ಹೆಣ್ಣು ಇಂದು ಎಲ್ಲ ಕ್ಷೇತ್ರಗಳಲ್ಲಿ ಅರ್ಹಳು ಎಂದು ಸಾಬೀತು ಪಡಿಸಿದ್ದಾಳೆ. ವರದಕ್ಷಿಣೆ ಪದ್ಧತಿ ವೇದ ಕಾಲದಲ್ಲಿ ಸಾಮಾನ್ಯ ರೂಢಿಯಾಗಿದ್ದಿತು. ಹೆಂಡತಿಯಾಗುವವಳು ಎಷ್ಟು ವರದಕ್ಷಿಣೆ ತರುತ್ತಿದ್ದಳೋ ಅಷ್ಟೇ ಅವಳ ಬೆಲೆ ಹೆಚ್ಚುತ್ತಿತ್ತು ಎಂಬ ಸೂಚನೆ. ಹೆಣ್ಣು ಹಂಚಿಕೊಳ್ಳುವ ವಸ್ತು ಎಂಬ ಭಾವವೂ ವೇದಗಳಲ್ಲಿ ವ್ಯಕ್ತವಾಗಿದೆ. ಮಹಿಳೆಯ ಬುದ್ಧಿಯನ್ನು ಆಳಲು ಸಾಧ್ಯವಿಲ್ಲ. ಹೆಣ್ಣಿನ ಪ್ರೇಮ ಯಾವಾಗಲೂ ಚಂಚಲ. ಹೆಣ್ಣಿನ ಹೃದಯ ಕಿರುಬನ ಹೃದಯದಂತಹುದು ಮುಂತಾದ ಮಾತುಗಳೂ ಇವೆ.

ಸರ್ವಜ್ಞನ ತ್ರಿಪದಿಗಳಲ್ಲಿ ಹೆಣ್ಣಿನ ವರ್ಣನೆಗೇನೊ ಕಡೆಮೆಯಿಲ್ಲ ಹೆಣ್ಣು ಮನವರಿತು ನಡೆಯಬೇಕು. ಅಂತಾದರೆ ಆ ಮನೆಯ ಸರ್ವಸ್ವವನ್ನು ಕುರಿತಾಗಿ

ಬೆಚ್ಚನೆಯ ಮನೆಯಿರಲು ವೆಚ್ಚಕ್ಕೆ ಹೊನ್ನಾಗಿ
ಇಚ್ಛೆಯನರಿವ ಸತಿಯಿರಲು ಸ್ವರ್ಗಕ್ಕೆ
ಕಿಚ್ಚು ಹಚ್ಚೆಂದ ಸರ್ವಜ್ಞ

ಸರ್ವಜ್ಞ ಒಂದರ್ಥದಲ್ಲಿ ಕನ್ನಡದ ಮೊಟ್ಟ ಮೊದಲ ಚುಟುಕು ಕವಿ. ಅವನ ತ್ರಿಪದಿಗಳು ಚುಟುಕು ಸಾಹಿತ್ಯಕ್ಕೆ ಅತ್ಯುತ್ತಮ ನಿದರ್ಶನಗಳು. ಹಾಗಾಗಿ ತನ್ನ ವಚನಗಳಲ್ಲಿ ಹೆಣ್ಣಿನ ಸ್ಥಾನಮಾನವನ್ನು ಕುರಿತಾಗಿ ಸಾಕಷ್ಟು ಚರ್ಚಿಸಿದ್ದಾನೆ. ಸ್ತ್ರೀಯರ ಸ್ವಭಾವ, ನಡೆನುಡಿ, ಸಂಸಾರದಲ್ಲಿ ಅವರ ಪಾತ್ರ ಎಲ್ಲವನ್ನು ಕುರಿತು ತ್ರಿಪದಿ ರಚಿಸಿದ್ದಾನೆ. ಆತನ ದೃಷ್ಟಿಯಲ್ಲಿ

ಹೆಣ್ಣಿನಿಂದಲೇ ಇಹವು, ಹೆಣ್ಣಿನಿಂದಲೇ ಪರವು
ಹೆಣ್ಣಿನಿಂದಲೆ ಸಕಲ ಸಂಪದವು
ಹೆಣ್ಣಿಲ್ಲದ ಬಾಳು ಬರಡು

ಹೆಣ್ಣು ಬಾಳಿನ ಕಣ್ಣು ಎಂದರಿತ ಸರ್ವಜ್ಞ ಕವಿಯು.

ಸುಣ್ಣವಿಲ್ಲದ ವೀಳ್ಯ, ಬಣ್ಣವಿಲ್ಲದ ಮದುವೆ
ಹೆಣ್ಣಿಲ್ಲದವನ ಸಂಸಾರ ಮಳಲೊಳಗೆ
ಎಣ್ಣೆ ಹೊಯ್ದಂತೆ ಸರ್ವಜ್ಞ

ಈ ಒಂದು ತ್ರಿಪದಿಯಲ್ಲಿ ಹೆಣ್ಣು ಸಮಾಜಕ್ಕೆ ಎಷ್ಟು ಅನಿವಾರ್ಯ ಎನ್ನುವುದನ್ನು ಚಿಕ್ಕದಾದ ಈ ಪದ್ಯದಲ್ಲಿ ವಿಶಾಲವಾಗಿ ತೋರಿಸಿಕೊಟ್ಟಿದ್ದಾರೆ. ಆದರೂ ಹೆಣ್ಣಿನ ಜೀವನವನ್ನು ಕುರಿತಾಗಿ ಇನ್ನೊಂದು ತ್ರಿಪದಿಯಲ್ಲಿ ಸ್ವಭಾವತಃ ಹೆಣ್ಣಿನ ಮನಸ್ಸು ಚಂಚಲ; ಆದ್ದರಿಂದಲೇ ಅವಳನ್ನು ನಂಬಿಯೂ ನಂಬದಂತಿರಬೇಕು ಎಂದು ಹೀಗೆ ಹೇಳಿದ್ದಾರೆ.

ಆಲಕ್ಕೆ ಹೂವಿಲ್ಲ ಶೀಲಕ್ಕೆ ಸರಿಯಿಲ್ಲ
ನಾಲಗೆಗೆ ಒಂದು ಎಲುಬಿಲ್ಲ ದೃಢಮನಸು
ಬಾಲೆಯರಿಗಿಲ್ಲ ಸರ್ವಜ್ಞ!

ಸ್ತ್ರೀಯರ ಬಗ್ಗೆ ತನ್ನ ಅಭಿಪ್ರಾಯಗಳನ್ನೆಲ್ಲ ಸರ್ವಜ್ಞ ಹೀಗೆ ಕ್ರೋಢೀಕರಿಸಿದ್ದಾನೆ.

ನಾರಿ ಪರಉಪಕಾರಿ, ನಾರಿ ಸ್ವರ್ಗಕ್ಕೆ ದಾರಿ
ನಾರಿ ಸಕಲರಿಗೆ ಹಿತಕಾರಿ ಮುನಿದರೆ
ನಾರಿಯೇ ಮಾರಿ ಸರ್ವಜ್ಞ.

ಹೆಣ್ಣು ಒಲಿದರೆ ನಾರಿ, ಮುನಿದರೆ ಮಾರಿ ಎನ್ನುವಂತೆ ಅರ್ಥಪೂರ್ಣವಾದ ಚುಟುಕು ಇದಾಗಿದೆ. ಸರ್ವಜ್ಞ ತನ್ನ ಕಾವ್ಯದಲ್ಲಿ ಅರ್ಥವಾಗದ ಜಟಿಲವಾದ ಆಧ್ಯಾತ್ಮಿಕ ಪ್ರಶ್ನೆಗಳನ್ನು ಕೆಣಕಿಲ್ಲ. ಯಾವುದೇ ವಾದವಿವಾದದ ಗೊಡವೆಗೆ ಹೋಗಿಲ್ಲ, ಆದರೂ ವಿಶಿಷ್ಟವಾಗಿ ತ್ರಿಪದಿಗಳನ್ನು ರಚಿಸಿದ್ದಾನೆ.

ಇನ್ನು ಹೊಸಗನ್ನಡ ಸಾಹಿತ್ಯದಲ್ಲಿ ಅನೇಕ ಕವಿಗಳು ಸತ್ವಪೂರ್ಣ, ಅರ್ಥಪೂರ್ಣ, ಅನುಷ್ಠಾನ ಪೂರ್ಣ ಚುಟುಕುಗಳನ್ನು ರಚಿಸಿದ್ದಾರೆ. ಅದರಲ್ಲೂ ಚುಟುಕುಗಳಲ್ಲಿ ಮಹಿಳೆಯರ ಪ್ರಸ್ತಾಪವಿದ್ದೇ ಇದೆ. ಹಾಸ್ಯ, ವ್ಯಂಗ್ಯ, ವಿಡಂಬನೆ, ಜೀವನ ದರ್ಶನ, ರಾಜಕೀಯಕ್ಕಿಂತ ಮಹಿಳಾ ದೃಷ್ಟಿಕೋನವಿರುವ ಹನಿಗವನ ಗಳ ಸಂಖ್ಯೆಯೇ ಜಾಸ್ತಿ ಇರಬಹುದು. ಮಹಿಳೆಯರನ್ನು ಅಂತರ್ ದೃಷ್ಟಿಯಿಂದ ಕಂಡರಿಸುವ ಪ್ರಯತ್ನ ಗಳು ನಡೆದಿವೆ ಎಂಬುವುದನ್ನು ಇಲ್ಲಿ ವಿಶ್ಲೇಷಿಸಬೇಕಿದೆ.

ಮಹಾಕವಿ ಕುವೆಂಪು ಅವರು ಚುಟುಕುಗಳನ್ನು ಬರೆದದ್ದು ಅದರಲ್ಲೂ ಪ್ರೇಯಸಿಯನ್ನು ಕುರಿತಾಗಿ, ಪ್ರಿಯನು ಪ್ರೇಯಸಿಗೆ ಎಂಬುದರಲ್ಲಿ ಪ್ರಿಯತಮೆಯನ್ನು ಅವರು ಹಾಲು, ಹೂವು, ಜೇನು ಯಾವುದಕ್ಕೆ ಹೋಲಿಸಲು ಒಡಂಬಡುವುದಿಲ್ಲ. ಏಕೆಂದರೆ ಹೋಲಿಸಲು ತಕ್ಕುದಾದುದು ಇನ್ನೊಂದಿಲ್ಲವಂತೆ. ಅವರದೇ ಆದ ಈ ಚುಟುಕುವಿನಲ್ಲಿ

ಹಾಲು, ಹೂವು, ಜೇನು ಎಲ್ಲ ಸೇರಿಯಾದೆ ನೀನು
ಹಾಲಿಗಿಂತ ಕೆನ್ನೆ ಸವಿ, ಹೂವಿಗಿಂತ ಕಣ್ಣೆ ಸವಿ
ಜೇನಿಗಿಂತ ಮತ್ತೆ ಸವಿಹಾಲು ಸವಿಜೇನು ಸವಿ
ಹಾಲು ಜೇನುಗಳನೂ ಮೀರಿ ನೀನೆ ನನಗೆ ಹೆಚ್ಚು ಸವಿ

'ನಾಕ-ನರಕ' ಎಂಬುದು ಇನ್ನೊಂದು ಚುಟುಕು. ಸ್ವರ್ಗ ನರಕಗಳ ಪ್ರೇಯಸಿ ಸಂತೋಷವಾಗಿದ್ದರೆ ಅದೇ ಸ್ವರ್ಗ ಎಂದರಿತ ಕವಿಗಳು ಕಿರಿಕಿರಿ ಪ್ರೇಯಸಿಯಿಂದ ಸುಖ, ಶಾಂತಿ, ಪ್ರಗತಿ ಎಲ್ಲ ನಾಸ್ತಿ.

ಅವಳು ನಾಕ, ಅವಳು ನರಕ
ನಾಕ ಜೊತೆಯೊಳಿದ್ದರೆ
ನರಕ ದೂರ ಹೋದರೆ

ಹೀಗೆ ಚುಟುಕಾಗಿ ಸಂಸಾರ ಚಿತ್ರಣವನ್ನು ನೀಡಿದ್ದಾರೆ ಕುವೆಂಪುರವರು. ಆಧುನಿಕ ಚುಟುಕುಗಳಲ್ಲಿ ಹೆಣ್ಣನ್ನು ಪ್ರತಿಮೆಯಾಗಿ ಬಳಸಿರುವುದು. ಹೆಣ್ಣನ್ನು ವಿವಿಧ ಅರ್ಥಗಳಿಗೆ ಬಳಸುವುದು ಹೆಚ್ಚಾಗಿದೆ. ಆದರೆ ಕೆಲವು ಕವಿಗಳು ಮಾತ್ರ ಹೆಣ್ಣಿಗೆ ಸ್ಥಾನಮಾನ ಕಲ್ಪಿಸಿ ಸಾಹಿತ್ಯ ಸೃಷ್ಟಿಸಿದ್ದಾರೆ. ಕವಯಿತ್ರಿ ಬಿ.ಎನ್. ತೇಜಸ್ವಿನಿದೇವಿ ಅರಸ್‌ರವರ ಚುಟುಕುವಿನಲ್ಲಿ

ಹೆಂಡತಿ ಬಂದು
ಊಟಕ್ಕೆ ಕರೆದಾರೆ
ಊಟ್ಯಾರಿಗೆ ಬೇಕ ಅಂದಾನ
ಈಚಲ ಗಿಡದವ್ವ
ಹೆಂಡ ಐತಂದರಾ
ಹಂಡೇಲಿ ತುಂಬಿಡು ಎಂದಾನ

ಇಲ್ಲಿ ಪುರುಷನ ದೌರ್ಬಾಗ್ಯ ಹೆಂಡ, ಸಾರಾಯಿ ಇವುಗಳನ್ನು ಖಡಾಖಂಡಿತವಾಗಿ ತಿರಸ್ಕರಿಸುವವಳು ಹೆಣ್ಣು. ಕೆಟ್ಟ ಚಟಕ್ಕೆ ಬಲಿಯಾದವರ ಬದುಕನ್ನು ತಮ್ಮ ಕಾವ್ಯದ ಮೂಲಕ ಹೊರ ಹೊಮ್ಮಿಸಿದ್ದಾರೆ. ಅರಸ್‌ರವರು "ವರವ ಕೊಡು ತಾಯಿ ಕುಡುಕನಲ್ಲದ ಗಂಡನನ್ನು" ಎಂದು ಚುಟುಕಾಗಿಯೇ ಬೇಡುತ್ತಾಳೆ. ಪುರುಷನ ದೌರ್ಬಲ್ಯ ಒಂದು ಕಡೆ ಆದರೆ ಸ್ತ್ರೀ ಆಸೆಗಳ ದೌರ್ಬಲ್ಯವನ್ನು ಡಾ.ಬಿ.ವಿ.ಪೂಜಾರ ಇವರ ಚುಟುಕದಲ್ಲಿ

ಎಲ್ಲವನ್ನು
ತಂದುಕೊಟ್ಟಾಗ ನಲ್ಲೆ
ಗಲ್ಲಕ್ಕೆ ಮುತ್ತು ಕೊಡುತ್ತಾಳೆ
ಇಲ್ಲವಾದರೆ ಗಲ್ಲಿಗೆ ಹಾಕುತ್ತಾಳೆ

ಬೇಕುಬೇಡಗಳನ್ನು ಪೂರೈಸಿಕೊಳ್ಳುವ ಪರಿ ಈ ಕಾವ್ಯದಲ್ಲಿ ಒಡಮೂಡಿದೆ.

ಚುಟುಕು ಸಾಹಿತ್ಯಕ್ಕೆ ಹೊಸಗನ್ನಡದಲ್ಲಿ ದಾರಿ ತೋರಿಸಿದವರು ಜಿ.ಪಿ.ರಾಜರತ್ನಂರವರು ಹೆಣ್ಣು ಸ್ವಾತಂತ್ರ್ಯಕ್ಕೆ ಮುಕ್ತವಾಗಿಲ್ಲ. ಅವಳಿಗೆ ಬಿಡುಗಡೆಯಿಲ್ಲ. ಆಕೆಗೆ ಮನೆಯೇ ಬಂಧನ. ಜೈಲಾಗಿ

ಪರಿಣಮಿಸಿದೆ ಎಂಬುದು ಅವರ ಕೊರಗು. ಅದಕ್ಕೆ ಆಕೆಯೂ ಹೊಣೆಗಾರಳೇ ಎಂಬುದೂ ಧ್ವನಿ ಸೂಕ್ಷ್ಮವೇ. ರತ್ನಂ ಅವರ ಸ್ತ್ರೀಪರ ಕಾಳಜಿಗೆ ಒಳ್ಳೆಯ ನಿದರ್ಶನವಾಗಿದೆ. ಈ ಚುಟುಕು

ಹೊರಗೆ ಹೊರಟಿತು ಗಂಡು, ಸಿನಿಮಾ ಹೋಟೆಲ್ಲು ಬಿಲ್ಲು
ಮೂರುವರೆ ರೂಪಾಯಿ ಮೂವರೆ ಜನಕೆ
ಮನೆಯಲುಳಿಯಿತು ಹೆಣ್ಣು
ಆದರೆ ಬೀಸುವ ಕಲ್ಲು
ತಪ್ಪಿದರೆ ಒಲೆ, ಮಸುರೆ, ಮೊರ, ಹಾರೆ ಒನಕೆ

ಪರಸ್ತ್ರೀಗೆ ಮರುಳಾದರೆ ಅವನ ಸ್ಥಿತಿ ಏನಾದೀತು? ಪರಸ್ತ್ರೀಯರನ್ನು ಹುಡುಕುವ ಸಂಭ್ರಮದಲ್ಲಿ ಆತನ ಹೆಂಡತಿ ಮತ್ತೊಬ್ಬನ ತೋಳ್ತೆಕ್ಕೆಗೆ ಆತುಕೊಳ್ಳಬಹುದು ಎಂಬ ಕಟುಸತ್ಯವನ್ನು ನಗೆಯ ಚಾಟಿಯಿಂದಲೇ ರಾಜರತ್ನಂ ಬಡಿದೆಬ್ಬಿಸಿದ ಚುಟುಕುವಿನಲ್ಲಿ

ಕಂಡೋರ್ ಹೆಣ್ಣೇನ್ ಹುಡುಕೋರ್ಗಿರೊ
ನರಕತಿನ್ನಿ ಠಕ್ಕರ್ !
ಇಲ್ದೋಳ್ಗ್ ಅಲಿಯೋ ಸಂಭ್ರಮದಲ್ಲಿ
ಇರೋಳ್ ಕೊಟ್ಟಾಳ್ ಬಸ್ಕರ್ ।

ಈ ರೀತಿ ರಾಜರತ್ನಂರವರ ಚುಟುಕುಗಳು ಹಾಸ್ಯದ ಮೂಲಕ ವ್ಯಂಗ್ಯ, ವಿಡಂಬನೆ ಮಾಡುವುದರಲ್ಲಿ ಸಿದ್ಧಹಸ್ತರು.

ಗಂಡು ಹೆಣ್ಣುಗಳ ಸಂಬಂಧ, ವೇಶ್ಯೆಯ ಮೈಮಾಟ, ಬೀದಿಸೂಳೆಯ ದುರಂತ ಮುಂತಾದವು ನಮ್ಮ ಸಂಸ್ಕೃತಿಯನ್ನು ನಿರ್ಧರಿಸುವ ಸಾಮಾಜಿಕ ಅಂಶಗಳು. ಸಮಾಜದ ಸಾಮಾನ್ಯರನ್ನು, ನಿಕೃಷ್ಟರನ್ನು ಚುಟುಕು ಗಮನಿಸಿದುದು ಗಮನಾರ್ಹ. ಸೂಳೆಯ ಮೈ ಪಾರದರ್ಶಕ ಬಟ್ಟೆ ಧರಿಸಿದ ಕಾಮನ ಸಂತೆ ಎಂದು ದಿನಕರ ದೇಸಾಯಿಯವರು ಚಿತ್ರಿಸಿದ ಈ ಚುಟುಕುವನ್ನು ನೋಡಿದಾಗ

ತೆಳು ತೆಳು ಕುಪ್ಪಸ
ಅಭ್ರಕದಂತೆ
ಒಳದೋರುವ ಮೈ
ಕಾಮನ ಸಂತೆ

ಇನ್ನೊಬ್ಬರ ಸಂತೋಷಕ್ಕಾಗಿ ತನ್ನ ಮೈ ತೇಯ್ದು ಅದರಿಂದುಂಟಾದ ನೋವನ್ನು ಸಹಿಸಿಕೊಂಡು ಕೃತ್ರಿಮ ನಗೆ ಸೂಸುವ ಬೀದಿ ಸೂಳೆಯ ದಾರುಣ ಜೀವನ ಚಿತ್ರವೊಂದನು ಈ ಚುಟುಕು ನೀಡುತ್ತದೆ.

ಇವರಿಗೊಂದೇ ಕಣ್ಣು, ಹೆಣ್ಣಿನಲಿ ಹುಚ್ಚು
ನನಗೆ ಮೈಯಲಿ ಬೇನೆ ಹೊರಗೆ ಬಲು ಮೆಚ್ಚು

ಹಗಲಿರುಳು ನೋಯುವುದು ಮೈ ಬೆನ್ನು ಮೂಳೆ
ಬಡತನದ ಸೂಳೆ ನಾ ಕಡೆತನ ಹಾಳೆ

ಇಲ್ಲಿ ಕೊನೆಯ ಸಾಲಿನಲ್ಲಿ ಕಾವ್ಯದ ಧ್ವನಿ ಇದೆ. ಇಲ್ಲಿಯ ಸೂಳೆ ಶ್ರೀಮಂತಳಲ್ಲ ಬಡವಿ. ಇವಳಿಗೆ ಭದ್ರತೆ ಎಂಬುದೇ ಇಲ್ಲ. ಇವಳನ್ನು ಹಾಳೆಗೆ ಪ್ರತೀಕವಾಗಿ ಹೋಲಿಸಿಕೊಂಡ ಕವಿಗಳು ವ್ಯಂಗ್ಯವಾಗಿ ಚಿತ್ರಿಸಿದ್ದಾರೆ. ಹಾಳೆಯಲ್ಲಿ ಗೀಚುವಂತೆ ಎಲ್ಲರೂ ಈ ಹೆಣ್ಣನ್ನು ಅನುಭವಿಸುವವರೇ. ಆ ಅರಿವು ಈ ಸೂಳೆಗಿದೆಯಾದರೂ ಮಾಡುವುದೇನು? ಸೂಳೆ ಗರತಿಯಾಗಬಲ್ಲಳೇ? ಗರಿತಿಯಾದರೂ ನಮ್ಮ ಜನ ಒಪ್ಪೀತೇ. ನಮ್ಮ ಸಮಾಜ ಸಂಸ್ಕೃತಿಯನ್ನು ಸೂಳೆಗಿರುವ ಸ್ಥಾನ ಇದು ಎಂದು ತೋರಿಸಿಕೊಟ್ಟಿದ್ದಾರೆ.

ದಿನಕರರು ಹೆಣ್ಣಿನ ಸ್ಥಾನಮಾನವನ್ನು ಅನೇಕ ದೃಷ್ಟಿಯಿಂದ ನೋಡಿದ್ದಾರೆ. ಹೆಣ್ಣನ್ನು ಪೂಜ್ಯ ಭಾವನೆಯಿಂದ ಕಾಣುವ ದೇಸಾಯಿಯವರು ತಾಯಿಗೆ ಎಲ್ಲಿಲ್ಲದ ಸ್ಥಾನ ನೀಡಿದ್ದಾರೆ. "ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ" ಎನ್ನುವ ಗಾದೆಯಂತೆ ಮಾತೃ ಮಮತೆಯನ್ನು 'ತಾಯಿ' ಎನ್ನುವ ಕವನದಲ್ಲಿ ತಾಯಿಯ ಉದಾತ್ತ ಸ್ವಭಾವಗಳ ಚಿತ್ರಣವನ್ನು ನೀಡುತ್ತಾ ತಾಯಿಯ ಬಗ್ಗೆ ಇರುವ ಅಭಿಮಾನವನ್ನು ಈ ಚುಟುಕದಲ್ಲಿ ವ್ಯಕ್ತಪಡಿಸಿದ್ದಾರೆ.

ಕೈಯಲ್ಲಿ ಹಗ್ಗವು ಬಾಯಲಿ ಹಾಡು
ಹೃದಯವು ಮಮತೆಯ ಸಮತೆಯ ಬೀಡು
ತಾಯಿಯು ದೇವರಿಗಿಂತಲೂ ಮೇಲು
ದೇವರ ಮೊಲೆಯಲಿ ದೊರೆವುದೆ ಹಾಲು?
ಯಾವಳ ಹಿಡಿಯಲಿ ತೊಟ್ಟಿಲ ದಾರ
ಆಕೆಯ ಉಡಿಯಲಿ ಜಗದೋದ್ಧಾರ

ತಾಯಿಯ ಸ್ಥಾನ ಅತ್ಯಂತ ಹಿರಿಮೆಯದು, ದೇವರಿಗಿಂತಲೂ ಮೇಲು ಎಂಬುದನ್ನು ಕವಿ ತಿಳಿಸಿದ್ದಾರೆ. ಕಣ್ಣಿಗೆ ಕಾಣುವ ದೇವರು ತಾಯಿ ಎಂದಿರುವ ಲೇಖಕರು ತಾಯಿಯ ಮೊಲೆಯಲ್ಲಿ ಹಾಲುಂಟು ಆದರೆ ದೇವರಲ್ಲಿ ಇದು ಉಂಟೇ? ಎಂದು ಪ್ರಶ್ನಿಸಿರುವುದು ಶ್ರೀ ಸಾಮಾನ್ಯನಿಗೂ ಅರ್ಥವಾಗುವ ಪರಿ ಮೇಲಿನ ಚುಟುಕುವಿನಲ್ಲಿ ಒಡ ಮೂಡಿದೆ.

ಬಿ.ಆರ್.ಲಕ್ಷ್ಮಣ್ ರಾವ್‌ರವರು ಹೆಂಡತಿಯಾದವಳಿಗೆ ಖರ್ಚಿನ ಹೊರೆ ತಿಳಿದಿರಬೇಕು. ಎಮ್ಮೆ ನೀರಾಗ ಬಿಡಬಾರದು. ಹೆಂಡತೀನಾ ಪ್ಯಾಟ್ಯಾಗ ಕಳುಹಿಸಬಾರದು. ಎಂದಂತೆ ಹೆಣ್ಣು ಮನೆಯಿಂದ ಹೊರ ನಡೆದರೆ ಏನಾಗುವುದೆಂದು ತಿಳಿಸುವ ಚುಟುಕಿದು.

ಹೆಂಡತಿಯೊಬ್ಬಳು ಮನೆಯೊಳಗಿದ್ದರೆ
ನಾನು ಒಬ್ಬ ಸಿಪಾಯಿ

ಮನೆಯಿಂದಾಕೆ ಹೊರಗಡೆ ಬಂದರೆ
ಖಾಲಿ ಎಲ್ಲ ರೂಪಾಯಿ

ಕೆಲವರಿಗೆ ಹೆಂಡತಿ ಎಂದರೆ ಭಯ ಅಮ್ಮಾವ್ರಗಂಡನಾಗಿ ಇರಬಹುದು. ಮನೆಯಿಂದ ಹೊರಗಡೆ ಹೊರಟರೆ ಇರುವುದೆಲ್ಲ ಖಾಲಿ ಎಂದ ಲಕ್ಷ್ಮಣ್ ರಾವ್ ರವರು ಪ್ರಿಯತಮೆಯನ್ನು ಒಲಿಸಿಕೊಳ್ಳಲು ಏನೆಲ್ಲ ಸಾಧನೆ ಮಾಡಬೇಕು ಪ್ರೇಯಸಿಗಳಿಬ್ಬರು ಪರಸ್ಪರ ಅರ್ಥ ಮಾಡಿಕೊಳ್ಳದಿದ್ದರೆ ಆಗುವ ಅನಾಹುತವನ್ನು ಕುರಿತು

ಮುತ್ತು ಬೇಡ ಪ್ಲೀಸ್ ಎಂದಳು
ಅವ ಮುದ್ದಿಸಲಿಲ್ಲ
ಅಪ್ಪು ಬೇಡ ಪ್ಲೀಸ್ ಎಂದಳು
ಅವ ಅಪ್ಪಿಕೊಳ್ಳಲಿಲ್ಲ
ನಿರಾಸೆಯಿಂದ ಎದ್ದು ಹೋದಳು
ಅವನಿಗೆ ಅರ್ಥವಾಗಲೇ ಇಲ್ಲ

ಹೀಗೆ ಪ್ರೇಯಸಿ ಪ್ರಿಯತಮನಿಗೆ ಬಿಡಿಸಿ ಹೇಳಬೇಕಾದ ಸನ್ನಿವೇಶ ಎದುರಾದಾಗ ಪ್ರಿಯಕರನಿಗೆ ಕಷ್ಟವಾಗುತ್ತದೆ. ಇಂತಹ ಅನೇಕ ಚುಟುಕುಗಳು ಪ್ರೀತಿ. ಪ್ರೇಮವನ್ನು ಕುರಿತಾಗಿ ರಚನೆಯಾಗಿವೆ. ಲಕ್ಷ್ಮಣರಾವ್ ರವರ 'ವಾರೆಂಟ್' ಈ ಚುಟುಕುವಿನಲ್ಲಿ ಚೆಲುವೆಯರನ್ನು ಮಾದಕ ವಸ್ತುವಿನ ಸಾಲಿಗೆ ಸೇರಿಸಲಾಗಿದೆ. ಇಲ್ಲಿ ರಸಿಕತೆಯ ಕೈವಾಡವಿದೆ. ಜೊತೆಗೆ ಚೆಲುವೆಯರ ಕುರಿತ ಭೀತಿಯ ಅಭಿವ್ಯಕ್ತಿಯೂ ಇದಾಗಿದೆ. ಅರ್ಥಾತ್ ಗಂಡಸರ ದೌರ್ಬಲ್ಯವನ್ನು ಇದು ಛೇಡಿಸಿದ್ದೇ ಆಗಿದೆ.

ಚೆಲುವೆ : ಮಾದಕ ವಸ್ತುಗಳ ನಿಷೇಧದ
ಕಾಯಿದೆ ಪ್ರಕಾರ ಈ ಕೂಡಲೇ
ನಿನ್ನನ್ನು ಬಂಧಿಸಬೇಕಾಗಿದೆ.

ವರದಕ್ಷಿಣೆಯ ವಿಚಾರವಾಗಿ ಗಂಡನ ಮನೆಯ ರೀತಿಯ ಖಂಡಿಸುವ ಚುಟುಕು 'ಕನ್ನಡಿ' ಎನ್ನುವಲ್ಲಿ ದ್ರಾಕ್ಷಾಯಿಣಿ ಎಸ್ ಕೊಡ್ಲಿ ಇವರು ವರ್ಣಿಸಿದ ರೀತಿ ಇದು

ವರದಕ್ಷಿಣೆ ಎಲ್ಲವನ್ನು ಕೊಡಿ
ಆದರೆ
ನನ್ನ ಮುಖ ನೋಡಲು ಕನ್ನಡಿ
ಮಾತ್ರ ಕೊಡಬೇಡಿ

ಎಂದು ಹೆಣ್ಣಿನ ದೀನಸ್ಥಿತಿ ಕಾವ್ಯದಲ್ಲಿ ಒಡಮೂಡಿದೆ. ಏಕೆಂದರೆ ವರದಕ್ಷಿಣೆ ಹೆಚ್ಚಾಗಿ ಕಂತಿನಲ್ಲಿ ಕೊಡುತ್ತಾರೆ. 'ಕನ್ನಡಿ' ಎನ್ನುವುದು ಹೆಣ್ಣಿನ ಕೊರಗುವಿಕೆಯ ಸಂಕೇತವಾಗಿ ಪ್ರತಿಬಿಂಬಿತವಾಗಿದೆ. ಇಂತಹ ಅನೇಕ ಚುಟುಕುಗಳು ಹೆಣ್ಣಿನ ಒಳತೋಟಿಯನ್ನು ಕುರಿತಾಗಿ ಚಿತ್ರಿಸುತ್ತವೆ.

ಎಚ್.ಡುಂಡಿರಾಜ್‌ರವರ ಚುಟುಕುಗಳಲ್ಲಿ ಹೆಣ್ಣಿನ ಮೂಲಕ ಸಾಮಾಜಿಕ ಕಳಕಳಿ ಹಾಗೂ ಹಾಸ್ಯ ಪ್ರಜ್ಞೆ ಮೈಗೂಡಿಸಿಕೊಂಡ ಇವರ ಕಾವ್ಯಗಳು ಬಹುತೇಕ ಮನಮುಟ್ಟುತ್ತವೆ. ''ದಕ್ಷಿಣೆ'' ಎನ್ನುವ ಇವರ ಚುಟುಕು ಸಾಮಾಜಿಕ ಪ್ರಜ್ಞೆಯ ಕಾಳಜಿಯ ಶಕ್ತಿ ಸ್ವರೂಪದ್ದಾಗಿದೆ. ಬಡತನದಿಂದಾಗಿ ವಿವಾಹವಂಚಿತರಾದವರಿಗೆ ಆಶಾಕಿರಣವಾಗಬೇಕಾದ ಅವಿವಾಹಿತ ಯುವಕರು ಮರೀಚಿಕೆ ಆಗುತ್ತಿರುವ ವೈಪರೀತ್ಯವನ್ನು ಇಲ್ಲಿ ಹಂಗಿಸಲಾಗಿದೆ.

ಅನಾಹುತವಾಗಿದೆ.
ಹರೆಯದ ಹೆಣ್ಣುಗಳು ಎದೆ ಧಗ ಧಗ ಉರಿಯುತ್ತಿದೆ
ಆದರೆ ಅಗ್ನಿ ಶಾಮಕದಳ 'ದಕ್ಷಿಣೆ' ಕೇಳುತ್ತಿದೆಯಲ್ಲ.

'ವ್ಯತ್ಯಾಸ' ಚುಟುಕದಲ್ಲಿ ವಿಧವೆಯ ಮದುವೆಗೆ ಇನ್ನು ಅವಕಾಶ ಇಲ್ಲದಿರುವ ಬಗ್ಗೆ ತಲ್ಲಣಗೊಳ್ಳುತ್ತಾರೆ ಮತ್ತು ಹೆಂಡತಿ ಸತ್ತರೆ ಮರುವಿವಾಹವಾಗುವ ಗಂಡಸಿನ ನಿರ್ಲಜ್ಜ ಹೆಜ್ಜೆಗೆ ವ್ಯಧಿಸುತ್ತಾರೆ.

ಬಸ್ ಮೇಲೆ ಹೋದರೆ ಪ್ರಯಾಣ ಆಗುತ್ತೆ
ಬಸ್ ನಮ್ಮ ಮೇಲೆ ಹೋದರೆ ಪ್ರಾಣ ಹೋಗುತ್ತೆ
ಹೆಂಗಸರು ಗಂಡ ಸತ್ರೆ ವಿಧವೆ ಆಗ್ತಾರೆ
ಗಂಡಸರು ಹೆಂಡ್ತಿ ಸತ್ತರೆ ಮದುವೆ ಆಗ್ತಾರೆ

ಈ ವಿಪರ್ಯಾಸವನ್ನು ಗಡುಸಾಗಿ ವಿಡಂಬಿಸಿದವರು ಡುಂಡಿರಾಜ್. ಈ ಸಮಾಜದಲ್ಲಿ ಹೆಣ್ಣಿಗೊಂದು ನ್ಯಾಯ, ಗಂಡಿಗೊಂದು ನ್ಯಾಯ ಎನ್ನುವುದನ್ನು ಇಲ್ಲಿ ತೋರಿಸಿಕೊಟ್ಟಿದ್ದಾರೆ.

ಸಾಹಿತಿಗಳಾದವರಿಗೆ ಪ್ರಶಸ್ತಿ ಸನ್ಮಾನಗಳೇ ಸಾಧನೆಗಳ ಪ್ರತೀಕ. ಆದರೆ ಅವರ ಅರ್ಧಾಂಗಿಗಳಿಗೆ ಇರಬೇಕಲ್ಲ. 'ಯಾರಿಗೆ ಬೇಕು ನಿಮ್ಮ ಕವಿತಾ' ಬೃಹತ್ತಾದುದನ್ನು ಬರೆದರೆ ಸನ್ಮಾನಕ್ಕಿಂತ ಮನೆ ಸಿಗಬಹುದು ಎನ್ನುವ ಆಶಾಭಾವನೆ ಕವಿಯ ಹೆಂಡತಿಗೆ ಇರುವ ಚುಟುಕೊಂದು ನೋಡಿದಾಗ

ಗುಡುಗಿದಳು ನನ್ನಾಕೆ ನಿನ್ನೆ
ನಿಮ್ಮ ಸಾಧನೆ ದೊಡ್ಡ ಸೊನ್ನೆ
ಇನ್ನಾದರೂ ಬರೆಯಿರಿ
ವಿಮರ್ಶೆ ಕಾದಂಬರಿ
ಸಿಕ್ಕೀತು ಬೆಂಗಳೂರಲ್ಲಿ ಮನೆ!

ಇಷ್ಟು ಆಸೆಗಳಿರುವ ಹೆಣ್ಣಿಗೆ ಮದುವೆಗೆ ಮುನ್ನ ಅವಳನ್ನು ಹಾಡಿ ಹೊಗಳುವ ಕವಿಗಳಿಗೆ ನಂತರದಲ್ಲಿನ ಜೀವನ ನೋಡಿದಾಗ

ಮದುವೆಯಾದ
ಹೊಸದರಲ್ಲಿ
ಮುದ್ದಿನ ಮಡದಿ
ದಿನಗಳೆದಂತೆ
ದೀಪಾವಳಿ ಸಿಡಿ
ಮದ್ದಿನ ಮಡದಿ|

ಗಂಡನ ಸ್ವರೂಪಕ್ಕೆ ದೀಪಾವಳಿ ಸಿಡಿಮದ್ದಿನಂತೆ ಸಿಡುಕುವ ಸ್ವಭಾವಕ್ಕೂ ಮುಂಚಿನ ರೀತಿಗೂ ವ್ಯತ್ಯಾಸವಿದ್ದುದನ್ನು ಸಮರ್ಥಿಸಿಕೊಂಡಿದ್ದಾರೆ.

ಇನ್ನೊಂದರಲ್ಲಿ

ಮರುಳಾಗಿದ್ದೆ ಅಂದು
ಇವಳ ನೀಳ ನಾಸಿಕಕಂಡು
ಹಾಡಿ ಹೊಗಳಿದ್ದೆ ಆಹಾ
ಸಂಪಿಗೆಗಿಂತ ಸುಂದರ
ಅನ್ನಿಸುತ್ತಿದೆ ಇಂದು
ಎಂಥಾ ದರಿದ್ರ ಮೂಗು!
ಕೇಳುತ್ತಿದ್ದಾಳೆ
"ಕುಡಿದು ಬಂದಿರಾ?"

ವರದಕ್ಷಿಣೆ

ಯಾಕೆ ಬೇಕು?
ಸಾಕು ಹುಡುಗಿಯೊಬ್ಬಳೆ
ಇರಲಿ ಕೊರಳ
ತುಂಬಾ ಸರ
ಕೈತುಂಬಾ ಬಳೆ!

ಹೀಗೆ ಹೆಣ್ಣನ್ನು ವರ್ಣನೆ ಮಾಡಿದ ಡುಂಡಿರಾಜ್ ರು ಅನೇಕ ಚುಟುಕುಗಳಲ್ಲಿ ವಿಡಂಬನೆ, ವಿಶ್ಲೇಷಣೆ, ಹಾಸ್ಯ, ವ್ಯಂಗ್ಯ, ವ್ಯಕ್ತಿಚಿತ್ರಣಗಳಲ್ಲಿ ಸೃಜನಶೀಲತೆ ಕಂಡುಬರುತ್ತವೆ. ಜರಗನಹಳ್ಳಿ

ಶಿವಶಂಕರವರು ಹೆಣ್ಣಿನ ಮನೋಧರ್ಮವನ್ನು ಕುರಿತಾಗಿ ಸೊಗಸಾಗಿ ಚಿತ್ರಿಸಿದ್ದಾರೆ. ತನ್ನ ಆರ್ಥಿಕತೆಯನ್ನು ಕುರಿತು ಹೆಂಡತಿಗೆ

"ಪ್ರಿಯೆ
ಹೊಸ ಸೀರೆ
ಕೊಡಿಸಿಲ್ಲವೆಂದು
ಸುರಿಸುವೆಯೇಕೆ
ಕಂಬನಿಯನ್ನು
ಇದೋ ನೋಡು ನನ್ನನೂ
ಹರಿದ ಬನಿಯನ್ನು"

ಹರಿದ ಬನಿಯನ್ನು ನೋಡಿಯಾದರೂ ಸುಮ್ಮನಿರಬೇಕಲ್ಲ ಸ್ತ್ರೀಯರು. ಹೆಣ್ಣುಮಕ್ಕಳಿಗೆ ವಸ್ತ್ರ ಮತ್ತು ಒಡವೆಗಳ ವ್ಯಾಮೋಹಕ್ಕೆ ಮಿತಿಯೇ ಇಲ್ಲ ಎನ್ನುವುದು ವ್ಯಕ್ತವಾಗುತ್ತದೆ. ಇವರ ಇನ್ನೊಂದು ಕವಿತೆಯಲ್ಲಿ ಹೆಣ್ಣಿನ ವಿಕಾಸವನ್ನು ಬಲು ವ್ಯಂಗ್ಯವಾಗಿ ಚಿತ್ರಿಸುವ ಈ ಚುಟುಕು ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಮಹಿಳಾ ದೃಷ್ಟಿಕೋನ ಕುರಿತಾಗಿ ಬರೆದ ಚುಟುಕಿದು.

ರಾಮನಿಗೆ ಹೆಣ್ಣಾದವಳು
ರಾವಣನಿಗೆ ಹುಣ್ಣಾದವಳು
ಭೀಮನಿಗೆ ಮುದ್ದಾದವಳು
ಕೀಚಕನಿಗೆ ಗುದ್ದಾದಳು
ಒಲಿದರೆ ನಾರಿಯಾದವಳು
ಮುನಿದರೆ ಮಾರಿಯಾದಳು
ಸತ್ಯವಾನನ ಸಾವು ಗೆದ್ದವಳು
ಸಹಗಮನದಲ್ಲಿ ಬೆಂದಳು
ವರದಕ್ಷಿಣೆ ಕೊಟ್ಟುಕೊಂಡವಳು
ಕೆರೊಸಿನ್, ಕೆರೆಬಾವಿಗೆ ಮೊರೆ ಹೋದಳು

ಅಂದು ಪತಿಗೋಸ್ಕರ ಹೋರಾಟ ಮಾಡಿದ ನಾರಿ ಮಣಿಯರು ಇಂದು ಬದುಕಿಗೋಸ್ಕರ ಹುಡುಕಾಡುವಂತಾಗಿದೆ. ಕೊನೆಗೆ ಸಾವೇ ಗತಿ ಎಂದು ಬಿಂಬಿಸುವಂತಾಗಿದೆ.

ಮಹಿಳೆಯರಿಗೆ ಒಡವೆ ಎಂದರೆ ಪಂಚಪ್ರಾಣ. ಹಾಗಾಗಿ ಅವರು ಎಲ್ಲದರಲ್ಲೂ ಚಿನ್ನದ ಪದಕಗಳಿಸುತ್ತಾರೆ ಎಂದು ಎಚ್.ಎ.ಭಿಕ್ಷಾವರ್ತಿಮಠರು ಅಭಿಪ್ರಾಯಪಟ್ಟದ್ದು ಹೀಗಿದೆ.

ಹುಡುಗರಿಗೆ ಬಂಗಾರದ ಪದಕ
ಸಿಗುವುದೇ ಕಷ್ಟ,
ಹುಡುಗಿಯರಿಗೇಕಿಷ್ಟು ಸುಲಭ
ಕಾರಣ ಹುಡುಗಿಯರಿಗೆ
ಬಂಗಾರವೆಂದರೆ ಇಷ್ಟ!

ಇನ್ನೊಂದರಲ್ಲಿ ಚಿನ್ನದ ಆಸೆಯ ಕುರಿತಾಗಿ

ಮೊದ ಮೊದಲು
ಗಂಡನ ಕೊರಳ ತುಂಬಾ
ಹೆಂಡತಿ ಹಾಕುತ್ತಾಳೆ
ತನ್ನ ತೋಳ ಹಾರ
ನಂತರ ಕೇಳುತ್ತಾಳೆ
ಎಂದು ತರುತ್ತೀರಿ
ಚಿನ್ನದ ಸರ.

ಹೆಣ್ಣಿಗೆ ಎಷ್ಟೇ ಆಸೆಗಳಿದ್ದರೂ ಸಂಸಾರ ಕಣ್ಣು ಎಂದು ಭಾವಿಸುವವರಿಗೇನೂ ಕಡಿಮೆ ಇಲ್ಲ. ಹೆಣ್ಣು ತಾಳ್ಮೆಯ ಸಂಕೇತ ಎನ್ನುವುದು ಸಂಸಾರದ ಹಿನ್ನೆಲೆಯಲ್ಲಿ ನೋಡಿದ ರೀತಿ ಇಲ್ಲಿದೆ-

ಸಂಸಾರ ಸಮಾರಂಭದಲ್ಲಿ
ಗಂಡನದು ಅತಿಥಿ ಭಾಷಣ
ಹೆಂಡತಿಯದು
ಅಧ್ಯಕ್ಷ ಭಾಷಣ

ಈ ಸಮಾಜದಲ್ಲಿ ತಾಯಿಗಿರುವ ಸ್ಥಾನ ಮತ್ತೊಂದಕ್ಕಿಲ್ಲ, ಅಂತೆಯೇ ಜನಪದೀಯರು 'ತಾಯಿಯಿದ್ರೆ ತೌರು ಹೆಚ್ಚು' ಎಂದು ಹೇಳಿದ್ದಾರೆ. ಇಲ್ಲಿ ಕವಿಗಳು ತಾಯಿ ಎನ್ನುವ ಪದ ಎಷ್ಟು ಸುಮಧುರ, ಸುಂದರ ಅದಕ್ಕಾಗಿಯೇ ಮಾತೃ ವಾತ್ಸಲ್ಯವನ್ನು ಕುರಿತು ತಾಯಿ ಎನ್ನುವ ಚುಟುಕುವಿನಲ್ಲಿ ವೀಕ್ಷಿಸಿದಾಗ

ಎಷ್ಟೋಂದು ಎತ್ತರ
ಎಷ್ಟೋಂದು ಸುಂದರ
ಆ ಹೆಮ್ಮರ | ಎಂದು
ಎಲ್ಲರೂ ಹೊಗಳುವರು
ನೋವು ನಲಿವುಗಳ ನುಂಗಿ

ಹೊತ್ತುನಿಂತ ತಾಯಿ ಬೇರನು
ಯಾರೂ ನೋಡರು.

ಹೀಗೆ ಹೆಣ್ಣನ್ನು ಪ್ರೇಯಸಿಯಾಗಿ, ಹೆಂಡತಿಯಾಗಿ, ತಾಯಿಯಾಗಿ, ಬೇರೆ ಏನೆಲ್ಲ ಸ್ಥಾನಗಳಲ್ಲಿ ಕಂಡರಿಸಿದವರು ಚುಟುಕು ಕವಿಗಳು.

ಚುಟುಕು ಕವಿಯತ್ರಿಯರ ಸಾಲಿನಲ್ಲಿ ವಿಜಯಾ ದಬ್ಬೆಯವರು ಮಹಿಳಾ ಲೋಕವನ್ನು ಕುರಿತಾಗಿ ಅನೇಕ ಚುಟುಕುಗಳನ್ನು ರಚಿಸಿದ್ದು ಭೂಮಿಗೆ ಹೋಲಿಸಿಕೊಂಡು ಬರೆದ ಈ ಕವನದಲ್ಲಿ ಮಹಿಳೆ ಎಂದರೆ 'ಮಹಾ ಇಳೆ' ಎಂದು ಭ್ರಮಿಸುವ ಜನ ಅದರಿಂದ ಹೊರ ಬರಬೇಕು. ಕೆಲವು ಅನಿವಾರ್ಯ ಕಾರಣಗಳಿಂದಾಗಿ ಆಕೆ ಮಿತಿ ಮೀರಿ ಸಹನೆ ತೋರಿದಲ್ಲಿ ಅದರ ದುರುಪಯೋಗ ಪಡೆಯಬಾರದು ಎಂಬುದನ್ನು ಕವಿಯತ್ರಿ ತಮ್ಮ ಈ ಚುಟುಕಿನ ಮೂಲಕ ಒತ್ತಿ ಹೇಳಿದ್ದಾರೆ.

ಏಳಲಾರದ ಭೂಮಿಯನು
ಬೇಕಾದಾಗ ಬೇಕಾದವರು
ತುಳಿದು ನಡೆಯಬಹುದು
ಅದರರ್ಥ
ಪೃಥ್ವಿ ಅವರ ಕಾಲುಗಳನ್ನು
ಚುಂಬಿಸಿದಳೆಂದಲ್ಲ

ಇವರ ಇನ್ನೊಂದು ಚುಟುಕು 'ಅನ್ನಪೂರ್ಣೆ'ಯಲ್ಲಿ ಪ್ರತಿಯೊಂದು ಶಬ್ದವೂ ಎದೆಯನ್ನು ಕುದಿಸುವಂತಿದೆ, ಬೇಯಿಸುವಂತಿದೆ, 'ಅನ್ನಪೂರ್ಣೆ' ಎಂಬಲ್ಲಿನ ವ್ಯಂಗ್ಯವೇ ಚೂಪಾಗಿದೆ.

ಕುದಿಯುತ್ತಾಳೆ ಅನ್ನದ ಜೊತೆಗೆ
ಬೇಯುತ್ತಾಳೆ ಬೇಯಿಸುತ್ತಲೇ
ಹೆಚ್ಚಿಕೊಳ್ಳುತ್ತಾಳೆ ಹೆಚ್ಚುತ್ತಲೇ
ಖಾಲಿಯಾಗುತ್ತಾಳೆ ಖಾಲಿ ಪಾತ್ರೆ ಜೊತೆಗೆ
ಮಸಿಯಾಗುತ್ತಾಳೆ ಮಸಿಯ ಜೊತೆಗೆ
ಬೂದಿಯಾಗುತ್ತಾಳೆ ಬೂದಿಯ ಜೊತೆಗೆ
ನಮ್ಮ ಅನ್ನಪೂರ್ಣೆ

ತಾನು ಸಾಗುತ್ತಿರುವ ದಾರಿಯಲ್ಲಿ ನಿಂತು ಹಿಂದಿರುಗಿ ನೋಡಿದ್ದಾಳೆ ಮಹಿಳೆ. ತನ್ನ ಬೆನ್ನಹಿಂದೆ ಹಲವು ಹುನ್ನಾರಗಳು ನಡೆದಿವೆ. ತನ್ನ ಕಣ್ಣೀರು ಒರೆಸಲು ತಾನೇ ಮುಂದಾಗಬೇಕೆಂಬ ಅರಿವು ಮೂಡಿರಲೂ ಸಾಕು. ಮುಳುಗುವ ಸೂರ್ಯನನ್ನು ಯಾರೂ ತಡೆಯಲಾರರು. ಸಾವಿನಿಂದ ಯಾರೂ

ಪಾರುಮಾಡಲಾರರು, ಧರ್ಮಗಳು ಮಾತ್ರ ತಿಳಿಸಿ ಹೇಳಬಲ್ಲವು, ನೊಂದವರ ನೋವಿಗೆ ಕಣ್ಣೀರು ಸುರಿಸಿ ಸ್ಪಂದಿಸಬಲ್ಲವು ಅದಕ್ಕಿಂತ ಹೆಚ್ಚಿನದೇನನ್ನೂ ಮಾಡಲಾರವು. ಮನುಷ್ಯನ ಹೃದಯದಲ್ಲಿ ಕರುಣೆಯ ಸೆಲೆ ಇದ್ದರೆ ಸಾವಿಲ್ಲದ ಮನೆಯಲ್ಲಿ ಸಾಸಿವೆಕಾಳು ತರಿಸುವ ಮೂಲಕ ಅರಿವು ಮೂಡಿಸಿ ಶೋಕ ಶಮನಗೊಳಿಸಲು ಪ್ರಯತ್ನಿಸುತ್ತಾನೆ. ಅದೇ ಬುದ್ಧ ಅದೇ ಧರ್ಮ. ಅಂತಹ ಚುಟುಕೊಂದು ವೈದೇಹಿಯವರ ರಚನೆಯಲ್ಲಿ ಕಂಡಾಗ

ಅಸ್ತಮಾನದ ಹೊತ್ತು ಮಗು ಸತ್ತು
ಕದ ಕದವ ತಟ್ಟಿ ಸಾಸಿವೆ ಕೇಳಿದಾಗ
ಎಚ್ಚೆತ್ತ ಬುದ್ಧ ಅತ್ತ

ವೈದೇಹಿ ಬರೆದಿರುವ 'ಮಳೆ' ಕವನದಲ್ಲಿ ಕೂಡಿಕೊಂಡಿರುವುದೇನು? ಸಹನಶೀಲೆಯ ದುರಂತ ಬಾಳು, ಕರ್ಮಗೇಡಿಯೊಬ್ಬನ ವಿಧವೆ ಪತ್ನಿಯ ಗೋಳು ಈ ಚುಟುಕುವಿನಲ್ಲಿ ಮೂಡಿದೆ.

ಸಹನೆ ಕುಸುಮಕ್ಕ
ಸತ್ತ ಗಂಡನ ಕರ್ಮಕಾಂಡವ ನೆನೆ ನೆನೆದು
ಕಾಳಿ ಕನಲಾಗಿ ಕಂಬನಿಯೊಡೆದಂತೆ
ಸುರಿಯುತಿದೆ! ಮಳೆ !!

ಹೆಣ್ಣು ಕೌಟುಂಬಿಕ ವ್ಯವಸ್ಥೆಯಲ್ಲಿ ಸಂಬಂಧಗಳನ್ನು ಉಳಿಸಿಕೊಂಡು ಬೆಳೆಸಿಕೊಂಡು ಅಲ್ಲಿಯೇ ಸಂತೃಪ್ತಿ ಕಾಣುವ ಅಂತಃಕರಣ ಅವಳಲ್ಲಿದ್ದರೂ ಕೂಡ ಕೆಲವೊಮ್ಮೆ ತನ್ನ ಬದುಕಿನ ಯಾಂತ್ರಿಕತೆಯ ಬಗ್ಗೆ ಒಳಗೊಳಗೆ ಸಿಡಿಯುವ ಪರಿಯನ್ನು ವೈದೇಹಿಯವರ 'ಅಮ್ಮನ ಗೋಣಗಾಟ' ಎಂಬ ಚುಟುಕುವಿನಲ್ಲಿ ಬಿಂಬಿತವಾಗಿದೆ.

ಅಮ್ಮನ ಗೋಣಗಾಟ
ಎಣ್ಣೆ ಕತಕತವೆಂದರೆ
ಛಟ್ಟನೆ ಛಟ ಛಟವೆಂದು ಎದುರುತ್ತರವಿದು
ಪಟ ಪಟ ಹೊಟ್ಟೆ ಪ್ರತಿಭಟಿಸುವ
ತಾನಿದ್ದೇನೆನ್ನುವ ನನ್ನ ಕಾಲದ
ಸಾಸಿವೆ ಎಲ್ಲಿ ಈಗಿನದೆಲ್ಲಿ?

ಹೆಣ್ಣಿನ ಜಗತ್ತಿನ ಸೂಕ್ಷ್ಮತೆ, ವಿಷಾದತೆ, ಭಾವ ತೀವ್ರತೆ ಇತ್ಯಾದಿಗಳು ಸೀಮಿತವಾದ ಚೌಕಟ್ಟನ್ನು ದಾಟಿ ವೈಚಾರಿಕ ಚಿಂತನೆಗಳ ವಿಭಿನ್ನ ರೂಪವನ್ನು ಇಂದಿನ ಕವಿಯತ್ರಿಯರ ಚುಟುಕುಗಳಲ್ಲಿ ಕಾಣಬಹುದು. ವೈದೇಹಿಯವರು ಸೂರ್ಯನನ್ನು ಪ್ರತೀಕವಾಗಿಟ್ಟುಕೊಂಡು ಬರೆದ ಈ ಕವನದಲ್ಲಿ ಸೂರ್ಯನೇ ಆಗಿರಲಿ

ಗಂಡನೇ ಆಗಿರಲಿ ಇಬ್ಬರೂ ಒಂದೇ ಜಾತಿ ಹಗಲೆಲ್ಲ ಉರಿಯುತ್ತ ಬೇಯಿಸುವುದೇ ಇವರಿಗೆ ಪ್ರೀತಿ. ಇವರಿಗೆ ಮದ್ದು ಸಂಜೆ. ಸಂಜೆಯ ನಂತರ ತಮಗೆ ಶರಣಾಗಬೇಕು ಅಲ್ಲಿಯವರೆಗೂ ತಾಳಿಕೊಂಡಿರಬೇಕು. ಇದು ಹೆಂಡಂದಿರ ಆತ್ಮ ವಿಶ್ವಾಸ.

ಮಧ್ಯಾಹ್ನದ ಹೊತ್ತು
ಕಾರಣವಿಲ್ಲದೆ ಆತ
ಉರಿಯುತ್ತಿದ್ದ
ತುಟಿಯೊಡೆಯದೆ
ಕಾದಳು ಅವಳು
ಸಂಜೆಗಾಗಿ

ಹೆಣ್ಣಿನ ಸಹನೆ ವಿರಹಗಳ ಮುಖಗಳನ್ನು ವಿಡಂಬನೆಯ ಮೂಲಕ ಶ್ರೀಮತಿ ಲತಾಗುತ್ತಿಯವರು ಪ್ರತಿಬಿಂಬಿಸಿದ ಚುಟುಕು ಇಲ್ಲಿದೆ.

ಮತ್ತೆ ಬರುವುದು ಬೇಡ
ಸೀತೆಯನ್ನು ಕಾಡಿಗಟ್ಟಿ
ಊರ್ಮಿಳೆಯ ಅಳಲು ಬಿಟ್ಟು
ರಾಮ ಲಕ್ಷ್ಮಣರು ಹುಟ್ಟಿ
ರಾಮಾಯಣ ಮಾಡುವ ಕಾಲ

ಪೌರಾಣಿಕ ಪಾತ್ರಗಳ ಮೂಲಕ ಚುಟುಕಾಗಿ ಹೇಳಿದ ಮಾತು ಮತ್ತು ಹಳೆ ಪುರಾಣ ಬೇಡ ಎಂದಿದ್ದಾರೆ. ಆದರೆ ಶ್ರೀಮತಿ ಕೃಷ್ಣಾಸುತೆಯವರು ಯೌವನಕ್ಕೆ ಬಂದ ಹೆಣ್ಣುಮಕ್ಕಳು ತಾವು ನಡೆಯುವ ಹಾದಿಯಲ್ಲಿ ಸದಾ ಎಚ್ಚರಿಕೆಯಿಂದ ನಡೆಯಬೇಕು. ಕೊಂಚ ಎಡವಿದರೆ ಸಾಕು ಹೆಣ್ಣು ಮಕ್ಕಳ ಬದುಕು ಶೋಚನೀಯ ಎಂಬ ಕಳಕಳಿಯನ್ನು 'ಅಹಲ್ಯೆ' ಎನ್ನುವ ಚುಟುಕುವಿನಲ್ಲಿ

ಅಹಲ್ಯೆ
ಮೋಹಕತೆಯ
ಮತ್ತಿನಲ್ಲಿ
ಜಾರಿದಳು
ಕಲ್ಲಾದಳು

ಹೆಣ್ಣಿನ ಜೀವನ ತುಂಬಾ ಕಷ್ಟಸಾಧ್ಯವಾದುದು ಎಚ್ಚರಿಕೆಯಿಂದ ಸಾಗಿದರೆ ಅಪಾಯವಿಲ್ಲ ಎಂದು ಸಾರಿದ್ದಾರೆ ಕವಯಿತ್ರಿ ಕೃಷ್ಣಾಸತೆ.

ವಿ.ಜಿ.ಭಟ್ಟರ ಚುಟುಕುಗಳ ವಿಶೇಷವಾಗಿ ವಿಡಂಬನಾತ್ಮಕವಾಗಿ ಹರಿತವಾಗಿವೆ. ಕಡಲು ಉಪ್ಪಾದುದಕ್ಕೆ ವಿ.ಜಿ.ಭಟ್ಟರು ಕಾರಣ ಕೊಡುತ್ತಾರೆ.

ಶೇಷಶಾಹಿಯ ಕಾಲನೊತ್ತುತ
ಬಳಲಿ ಲಕ್ಷ್ಮಿಯು ಅತ್ತಳು
ಹಾಲಿನಾ ಕಡಲನು ಕಹಿಕಹಿ ಉಪ್ಪು
ಮಾಡಿಯೇ ಬಿಟ್ಟಳು

ಡಾ.ಸಿ.ಪಿ.ಕೆ.ಯವರು ಹೆಂಗಳೆಯರನ್ನು ಒಟ್ಟೊಟ್ಟಿಗೆ ಛಂದಸ್ಸಿನ ಪ್ರಕಾರಗಳನ್ನು ತಲುಪಿಸುವ ರೀತಿ ಮಾರ್ಮಿಕವಾಗಿದೆ. ಮುಖ್ಯವಾಗಿ ಕವಿತೆ ಹೆಂಗಳೆಯರ ಸ್ವಭಾವಗಳನ್ನು ಅನಾವರಣಗೊಳಿಸುತ್ತದೆ. ಅಥವಾ ಹೀಗೂ ಹೇಳಬಹುದು. ಗಂಡಸರ ವರ್ತನೆಗೆ ತಕ್ಕಂತೆ ಹೆಂಗಸರು ಒದಗುವುದಾಗಿದೆ ಎನ್ನುವುದನ್ನು ನೋಡಿದಾಗ

ಭಾಮಿನಿಯೊಡನೆ ಬದುಕು
ಕೆಲವರ ಪಾಲಿಗೆ ಸಾಂಗತ್ಯವಾದರೆ
ಮತ್ತೆ ಕೆಲವರ ಪಾಲಿಗೆ ರಗಳೆ

ವಿ.ಗ.ನಾ. ಇವರ ದೃಷ್ಟಿಯಲ್ಲಿ ಸ್ತ್ರೀಯರನ್ನು ವೀಕ್ಷಿಸಿದಾಗ ಹೆಣ್ಣಿನ ಮೇಲೆಯೇ ಎಲ್ಲ ನಿಂತಿದೆಯೇ ಹಾಗಾದರೆ ಸ್ವಂತಿಕೆ ಎಲ್ಲಿ ಎಂದು ಪ್ರಶ್ನಿಸುತ್ತಾರೆ.

ಹಿಡಿದ | ವರ ಕೈ
ಗುಣದಿಂದ ನಿನ್ನ ಮೇಲಣ
ಆ | ದರ ಹೆಚ್ಚು ಕಡಿಮೆ
ಆಗುವುದು ಬರೆಯೆ
ಆದರೆ ಅಡಕೆಯೇ ! ನೀನು ! ಏನು

ಮತ್ತೊಂದು ಕವನದಲ್ಲಿ ಅವರು ಇದೇ ರೀತಿಯ ಆಶಯವನ್ನು ವ್ಯಕ್ತಪಡಿಸುತ್ತಾರೆ. ಆಡಿಸುವವರ ಕೈಗೆ ಸಿಕ್ಕಿ ಹಾಕಿಕೊಂಡಿದ್ದು ಮೊದಲ ಪ್ರಮಾದವಾದರೆ ಆನಂತರದಲ್ಲೂ ಅವರಾಡಿಸಿದಂತೆಯೇ ಆಡುತ್ತಾ ಆಡುತ್ತಾ ಸೋತು ಹೋಗುವುದು ಎರಡನೆಯ ಅಪರಾಧವಾಗುತ್ತದೆ. ಇನ್ನಾದರೂ ಜಾಗೃತರಾಗುವಂತೆ ಅವರು ಕವನದ ಮೂಲಕ ಕರೆ ನೀಡುತ್ತಾರೆ.

ಅಲ್ಲವೆ; ಆಡಿಸುವವರ
ಮಜಕ್ಕೆ ನೀನೇಕೆ
ಬುಗುರಿ ಆಗಿ ಒಡ್ಡಿಕೊಂಡು ಗರಗರನೆ ತಿರುಗಿ
ತಲೆ! ಸುತ್ತಿ ಬೀಳಬೇಕು

ಇನ್ನೊಂದರಲ್ಲಿ ತಾನು ಹಂಬಲಿಸಿದಂಥ ವರನನ್ನು ಆರಿಸುವ ಕನ್ಯೆಯ ಬಗ್ಗೆ ಕವಿ ಅನುಕಂಪ ತೋರುವುದಿಲ್ಲ. ಪಳಗಿದವರನ್ನು ಆರಿಸಿ ವರಿಸುವುದರಲ್ಲಿ ಏನುಂಟು ಹೆಗ್ಗಳಿಕೆ! ಅದು ವಧುವಿನ ಸೋಲೇ. ತನಗಿಂತ ಮೇಲಾದವನನ್ನು ಆಯ್ಕೆ ಮಾಡುವುದರ ಹಿಂದೆ ಅಡಗಿಕೊಂಡಿರುವುದು ನೈಜಾನುಭವವೇ | ತನ್ನನ್ನೇ ಹಾರೈಸಿಕೊಂಡ ಯುವಕನೊಬ್ಬನನ್ನು ಮೆಚ್ಚಿ ವಿವಾಹವಾಗಿ ತನ್ನ ಅನುಭವದ ಅಧ್ಯಯನದ ಬಲದಲ್ಲಿ ಆತನನ್ನು ಸಮರ್ಥವಾಗಿ ಸಮಗ್ರವಾಗಿ ಸಿದ್ಧಗೊಳಿಸುವುದೇ ನಿಜವಾದ ಸಾಧನೆ, ಸಾಹಸ.

ನುರಿತು ಆಡಿಸುವಂಥ|
ವನ ಕಾದುಕೊಂಡಿರುವ
ನಿನ್ನನ್ನೇ ಕಾದು |
ಕೂತಿರುವವರಲಿ
ಒಬ್ಬನನು ನೀನೆ ಏಕೆ?
ಆರಿಸಿ ಪಳಗಿಸಬಾರದು

ಡಾ. ಕಮಲಾಹಂಪನಾ ಸೊಗಸಾದ ಚುಟುಕುಗಳನ್ನು ರಚಿಸುವಲ್ಲಿ ಸಿದ್ಧಹಸ್ತರು ಮನೆಯ ಮುಂದೆ ಗೃಹಿಣಿಯರು ಹಾಕುವ ರಂಗುರಂಗಿನ ರಂಗೋಲಿ ಹಾಗೆ ಇವರ ಚುಟುಕು. ಸರಳ, ಸೌಮ್ಯ, ತಂಪು ಇವುಗಳ ಸಮ್ಮಿಶ್ರಣ. ಇವರ ವೈಶಿಷ್ಟ. 'ಕೆಂಪು ಗುಲಾಬಿಯ ಕೆಂಪಿನ ಹುಡುಗಿಗೆ ಆದ ಪರಿಣಾಮವನ್ನು ಅತ್ಯಂತ ಸೂಚ್ಯವಾಗಿ ಹೇಳಿದ್ದಾರೆ.

"ಕೆಂಪುರೋಜಾ ಬಯಸುತ್ತಿದ್ದ
ಈ ಹುಡುಗಿ
ಕೆಂಪು ಕೆಂಪಾಗಿದ್ದ ಆ ಬೆಡಗಿ
ಕೆಂಪು ದೀಪದ ಕೆಳಗೆ ನಿಂತಳಲ್ಲೇ
ಹುದಿಗಿ!!

ಹೆಂಡತಿಯ ಗುಂಗಿನಲ್ಲಿ ಮುಳುಗಿರುವ ಗಂಡ ದಿಂಬಿಗೆ ಮುತ್ತಿಕ್ಕುವ ಪರಿಯನ್ನು ಶಶಿಕಲಾ ವೀರಯ್ಯಸ್ವಾಮಿ ತಮ್ಮ ಚುಟುಕುಗಳಲ್ಲಿ ವ್ಯಕ್ತಪಡಿಸಿದ್ದಾರೆ. ಚಾಳೀಸಿಲ್ಲದ ಗಂಡ ದಿಂಬೇ ಹೆಂಡತಿಯೆಂದು ಮುತ್ತಿಡುವುದನ್ನು ನಾಟಕೀಯವಾಗಿ ವಿಡಂಬಿಸಿದ್ದಾರೆ.

"ಆರ್ಯ ಪುತ್ರಾ"
"ಏನು ಪ್ರಾಣೇಶ್ವರಿ?"
ನೀನೀಗ ಮುದ್ದಿಡ್ತಾ ಇರೋದು
ದಿಂಬಿನ ಅಂಚಿಗೆ"

ಆಗ ತಡಬಡಿಸಿಕೊಂಡ ಆರ್ಯಪುತ್ರ ತನ್ನ ಪ್ರಾಣೇಶ್ವರಿಯನ್ನು ಕೇಳುತ್ತಾನಂತೆ ಹೌದಾ! ಹಾಗಾದರೆ ನನ್ನ ಚಾಳೀಸೆಲ್ಲಿ ಎಂದು. ಇಂದು ಅನೇಕ ದಿನಪತ್ರಿಕೆಗಳಲ್ಲಿ ಕಣ್ಣಾಡಿಸಿದಾಗ ನಮಗೆ ಗೋಚರವಾಗುವುದು ವರದಕ್ಷಿಣೆಗೆ ಬಲಿಯಾದ ಸನ್ನಿವೇಶ. ಈ ಸಮಾಜದಲ್ಲಿ ಹೆಣ್ಣನ್ನು ವರದಕ್ಷಿಣೆಗೆ ಪೀಡಿಸಿ ವಿವಾಹವಾದ ಕೆಲವೇ ದಿನಗಳಲ್ಲಿ ಸೊಸೆಯನ್ನು ಸುಟ್ಟು ಹಾಕಿದ ಗಂಡನ ಮನೆಯವರು ಜೊತೆಗೆ ತನ್ನ ಪತಿಯೂ ಸೇರಿ ಹಿಂಸೆ ನೀಡಿದ ರೀತಿಯನ್ನು ಶಶಿಕಲಾ ವೀರಯ್ಯಸ್ವಾಮಿ ವ್ಯಕ್ತಪಡಿಸಿರುವ ದೃಷ್ಟಿ ಇಲ್ಲಿದೆ.

"ಅವ್ವಾ ಅವ್ವಾ ಗೆಣಸ
ಕುಳ್ಳಾಗ ಹಾಕಿ ಕುದಸ
ಕರೀಸಿರಿ ಉಡಸ
ಗಂಡನ ಮನೀಗಿ ಕಳಸ" ಅಂತ
ಕುಣಕೊಂತ ಅತ್ತಿ ಮನಿಗಿ ಹೋದ ಹುಡುಗಿನ್ನ
ಹೊತ್ತು ಮುಳುಗೂದರಾಗ
ಗೆಣಸು ಸುಟ್ಟಂಗ ಸುಟ್ಟು ಬಿಟ್ರು"

ಹೆಣ್ಣನ್ನು ಸುಟ್ಟು ಹಾಕುವಲ್ಲಿ ಈ ಸಮಾಜ ಯಶಸ್ವಿಯಾಗಿದೆ. ಶಶಿಕಲರವರು ತಮ್ಮ ಈ ಚುಟುಕದಲ್ಲಿ ಪ್ರಾಸಗಳನ್ನು ಜೋಡಿಸುವ ಪರಿ ಅತ್ಯಂತ ಶ್ರೇಷ್ಠವಾಗಿದೆ. ಹೆಣ್ಣಿನ ತಾಳ್ಮೆಯ ದೌರ್ಬಲ್ಯವನ್ನು ಗಂಡು ಲಾಭವಾಗಿ ಗಿಟ್ಟಿಸಿಕೊಳ್ಳುವುದನ್ನು ವಿಡಂಬನಾತ್ಮಕವಾಗಿ ವಿವರಿಸಿದ್ದಾರೆ.

ಹೀಗೆ ಹೆಚ್ಚಿನ ಅಸ್ತಿತ್ವಕ್ಕೆ ಯಾವುದೇ ಬಣ್ಣ ಹಚ್ಚದೇ ತ್ಯಾಗ ಸಹನೆ ಮುಂತಾದ ರೀತಿಯ ಭಾರ ಹೊರಿಸದೇ ಅವಳ ವ್ಯಕ್ತಿತ್ವವನ್ನು ಗೌರವಿಸುವಂತಹ ಕಳಕಳಿ ಚುಟುಕು ಸಾಹಿತ್ಯದಲ್ಲಿ ಸೃಷ್ಟಿಯಾಗಿವೆ. ಹೆಣ್ಣಿನ ಸಮಸ್ಯೆಗಳಿಗೆ ತಮ್ಮ ಚುಟುಕುವಿನ ಮೂಲಕ ಉತ್ತರ ನೀಡುವ ಸಾಮರ್ಥ್ಯವನ್ನು ಬೆಳೆಸಿಕೊಂಡಿದ್ದಾರೆ ಎಂಬುದರಲ್ಲಿ ಸಂಶಯವಿಲ್ಲ.

ಒಟ್ಟಿನಲ್ಲಿ ಚುಟುಕು ಸಾಹಿತ್ಯ ರಚನೆಯಾಗಿರುವ ಪ್ರಾಚೀನ ಪರಂಪರೆಯಾದ ಜಾನಪದ ಕಾವ್ಯಗಳು, ಸರ್ವಜ್ಞನ ತ್ರಿಪದಿಗಳು ಹೊಸಗನ್ನಡ ಚುಟುಕುಗಳಲ್ಲಿ ಮಹಿಳೆಯರನ್ನು ವಿವಿಧ ರೀತಿಯಲ್ಲಿ ಕಂಡರಿಸಿದ್ದಾರೆ. ಜಾನಪದ ಮಹಿಳಾ ಚುಟುಕುಗಳ ಸಂಖ್ಯೆಯಲ್ಲೆಂತೋ; ಗುಣದಲ್ಲಿಯೂ ಹಿರಿದು ಅವು ಮೂರೇ ಮೂರು ಸಾಲುಗಳ ಚಿಕ್ಕ ಪದ್ಯಗಳಾದರೂ ಪರಿಣಾಮದಲ್ಲಿ ದೊಡ್ಡವು. ಕೆಲವೊಮ್ಮೆ ಒಂದು ಕಾವ್ಯ ಬೀರಬಹುದಾದ ಪರಿಣಾಮವನ್ನು ಒಂದು ಚುಟುಕು ಬೀರುತ್ತದೆ. ಇದು ಕಾವ್ಯದ ಧ್ಯೇಯವಾದ ಆನಂದವನ್ನು ನೀಡುತ್ತವೆ. ಅತ್ಯಂತ ಪ್ರಾಮಾಣಿಕವಾಗಿ ಜನಮನೋಧರ್ಮವನ್ನು ಸಾಂಸ್ಕೃತಿಕ ಮೌಲ್ಯಗಳನ್ನು ಪ್ರತಿಬಿಂಬಿಸುತ್ತವೆ. ಹೀಗಾಗಿ ಜನಪದ ಮುಕ್ತಕಗಳಾಗಲಿ, ಹೊಸಗನ್ನಡ ಚುಟುಕುಗಳಾಗಲಿ ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಗಳಾಗಿವೆ.

೫. ರಾಜಕೀಯ ವಿಡಂಬನೆ

ಚುಟುಕು ಸಾಹಿತ್ಯ ಸಾಮಾಜಿಕ ಚಿಂತನೆಯ ನೆಲೆಯಲ್ಲಿ ಹಾಗೂ ಸಾಮಾಜಿಕ ಚೌಕಟ್ಟಿನಲ್ಲಿ ಸೃಷ್ಟಿಗೊಂಡಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಸಾಹಿತ್ಯ ಒಂದು ಕಾಲದ ಸಾಮಾಜಿಕ ಘಟ್ಟದಲ್ಲಿ ಸಂಭವಿಸುತ್ತದೆ. ಕವಿ ಆ ಸಮಾಜದ ಒಂದು ಅವಿಭಾಜ್ಯ ಅಂಗವಾಗಿರುವುದರಿಂದ ಆತ ತನ್ನ ಸಮಕಾಲೀನ ಸಮಾಜದ ಬಗ್ಗೆ ಹೆಚ್ಚಿನ ವಿಚಾರವನ್ನು ಇಟ್ಟುಕೊಂಡಿರಬೇಕಾಗುತ್ತದೆ. ಆತ ಸಾಮಾಜಿಕ ಮಾಧ್ಯಮವಾದ ಭಾಷೆಯನ್ನು ಸೋಲಾಗದ ರೀತಿಯಲ್ಲಿ ಬಳಸಬೇಕಾಗುತ್ತದೆ. "ಆಡು ಮುಟ್ಟದ ಗಿಡವಿಲ್ಲ ಚುಟುಕು ಸಾಹಿತ್ಯ ನಿರೂಪಿಸಲಾಗದ ವಿಷಯಗಳೇ ಇಲ್ಲವೆನ್ನಬಹುದು". ಇಂದಿನ ಕಾವ್ಯ ಪ್ರಪಂಚದಲ್ಲಿ ಈ ಚುಟುಕು ಚುಟುಕಿನ ಬೆಡಗಿಯ ಲಾವಣ್ಯಕ್ಕೆ ಮನಸೋಲದವರೇ ಇಲ್ಲ. ಮನುಷ್ಯನ ಜೀವನ ಸದಾ ಗತಿಶೀಲ ವೇಗವಾಗಿ ಓಡುತ್ತಿರುತ್ತದೆ. ಹೀಗೆ ಬದುಕಿನ ಹೆಜ್ಜೆಗಳನ್ನು ಭರದಿಂದ ಇಡುವಾಗ ವಿವೇಚನೆ, ವಿಶ್ಲೇಷಣೆ, ಮುನ್ನೋಟ ಇರಬೇಕಾದುದು ಅತಿ ಅವಶ್ಯ. ಜೀವನದ ಪ್ರತಿಬಿಂಬವೇ ಸಾಹಿತ್ಯ. ವ್ಯಕ್ತಿಗತ ಬಿಂಕವನ್ನು, ಸಾಮಾಜಿಕ ಕೊಂಕನ್ನು, ಲೋಕದ ಡೊಂಕನ್ನು ತಿದ್ದುವಲ್ಲಿ ವಿಡಂಬನೆಯ ಪಾತ್ರ ಅಗ್ರಗಣ್ಯ. ವ್ಯಂಗ್ಯ, ವಿಡಂಬನೆ, ವಿನೋದ, ಕಟಕಿ, ಲೇವಡಿ ಹಾಸ್ಯಗಳು ಒಂದು ರೀತಿಯ ರಾಸಾಯನಿಕ ದ್ರವ್ಯಗಳು. ಕೊಳೆ ಯನ್ನು ನಾಶಪಡಿಸಿ ಬೆಳೆಯನ್ನು ರಕ್ಷಿಸುವಲ್ಲಿ ಇವುಗಳ ಪಾತ್ರ ಮಹತ್ತರ. ಒಂದು ರೀತಿಯಲ್ಲಿ ಚುಟುಕುಗಳು ಕಳೆಯನ್ನು ಕಿತ್ತೆಸೆದು ಹೊಸ ಬೆಳೆಗೆ ದಾರಿ ಮಾಡಿಕೊಡಬಲ್ಲವು. "ಈ ಚುಟುಕುಗಳಲ್ಲಿ ಕಂಡುಬರುವ ವಿಡಂಬನೆ ಒಂದು ರೀತಿ ವ್ಯಕ್ತಿತ್ವದ ವಿಮರ್ಶೆ. ಮಾನವ ಸ್ವಭಾವದ ಬಹಿರಂಗ ವಿಚಾರಣೆ" ಎಂಬ ಅ.ರಾ.ಮಿತ್ರರ ಮಾತುಗಳಲ್ಲಿ ಅರ್ಥವಿದೆ. ದೋಷಗಳನ್ನು ದೂಷಿಸುವ, ದ್ವೇಷಿಸುವ ಹಾಗೆ ಸದ್ಗುಣಗಳನ್ನು ಪೋಷಿಸುವ, ಪ್ರಶಂಸಿಸುವ ಸದ್ಭಾವವೇ ವಿಡಂಬನೆ.

ಚುಟುಕಿಗಿರುವ ಚುರುಕು, ಚುಟುಕಗಳಲ್ಲಿ ಅಡಗಿರುವ ವಸ್ತುವಿನ ಸ್ವಾರಸ್ಯ. ಚಿಟಕೆ ಹೊಡೆಯು ವುದರೊಳಗೆ ಆಸ್ವಾದಿಸಿ ಚಪ್ಪರಿಸಬಲ್ಲ ಅದರ ರುಚಿಯನ್ನು ಯಾರೂ ಅಲ್ಲಗಳೆಯಲಾರರು. ಯಾವುದಕ್ಕೂ ಸಮಯದ ಅಭಾವ ಹೊಂದಿರುವ ನಮಗೆ ಚುಟುಕು ನೀಡುವ ಮಧುರ ಅನುಭವವನ್ನು ಬೇರೇನು ನೀಡೀತು? ರಾಜಕೀಯ ಬದುಕಿನ ಅನೇಕ ಮುಖಗಳನ್ನು ಎತ್ತಿತೋರುವ ಚುಟುಕು ಸಾಹಿತ್ಯ ಹಾಸ್ಯ ವಿಡಂಬನೆಗಳಿಗೆ ಇಂಬುಕೊಟ್ಟಷ್ಟು ಮಿಕ್ಕಿದ್ದಕ್ಕೆ ಕೊಟ್ಟಿಲ್ಲ ಎನಿಸುತ್ತದೆ. ವಿಡಂಬನೆ ಎಂದರೆ ಚುಟುಕು, ಚುಟುಕು ಎಂದರೆ ವಿಡಂಬನೆ ಎನ್ನುವಂತಾಗಿದೆ. ಅದೂ ರಾಜಕೀಯ ವಿಡಂಬನೆಗೆ ವಿಶೇಷ ಮಹತ್ವವಿದೆ.

ಕೆಲವೇ ಕೆಲವು ಗಟ್ಟಿ ಪದಗಳ, ಪುಟ್ಟ ಸಾಲುಗಳಲ್ಲಿ ದಟ್ಟ ಭಾವದೊಂದಿಗೆ ವಿಡಂಬಿಸುವ ಚಮತ್ಕಾರಕ್ಕೆ ಪುಟಗಟ್ಟಲೆ ಬರೆದ ಸಾಹಿತ್ಯ ಸಾಟಿಯಾಗಲಾರದು. ಇದರ ಸ್ವಾದವೇ ಬೇರೆ ಅದರ ಅನುಭವವೇ ಬೇರೆ.

ಡಾ.ಸಿ.ವೀರಣ್ಣನವರು "ಕಾವ್ಯ ಬದುಕಿನ ಶೋಧನೆ. ಆ ಬದುಕು ಸಮಾಜದಲ್ಲಿದೆ. ಸಮಾಜ ರಾಜಕೀಯಕ್ಕೆ ಅಧೀನವಾದುದು. ಬಂಡವಾಳಶಾಹಿ ಸಮಾಜದಲ್ಲಿ ರಾಜಕೀಯ ಸರ್ವಾಂತರ್ಯಾಮಿ. ಯಾವ ವಲಯವನ್ನು ಒಳಹೊಕ್ಕು ನೋಡಿದರೂ ಅದರ ಕಾಲಿನಿಂದ ತಲೆಯವರೆಗೂ ರಾಜಕೀಯವಿಲ್ಲದೆ ಇಲ್ಲ. ಕವಿ ರಾಜಕೀಯದಿಂದ ತಪ್ಪಿಸಿಕೊಳ್ಳುವುದು ಎಂದರೆ ಸಮಾಜದಿಂದ ತಪ್ಪಿಸಿಕೊಳ್ಳುವುದು ಅರ್ಥಾತ್ ವಾಸ್ತವದಿಂದ ತಪ್ಪಿಸಿಕೊಳ್ಳುವುದು ಎಂದೇ ಅರ್ಥ" ಎಂದಿದ್ದಾರೆ. ಇವರ ಮಾತನ್ನು ನೋಡುವುದಾದರೆ ದಿಕ್ಕೆಟ್ಟ ಸಮಾಜದಲ್ಲಿ ಕಂಗೆಟ್ಟ ರಾಜಕೀಯ ಬದುಕನ್ನು ವಿಡಂಬಿಸುವುದು ಕವಿಗಳ ಆದ್ಯ ಕರ್ತವ್ಯ. ಇಂದಿನ ದಿನಮಾನದಲ್ಲಂತೂ ಪ್ರಾಮಾಣಿಕ ರಾಜಕೀಯ ಕಾಣುವುದು ದುಸ್ತರವಾದುದು. ಇಂತಹವರ ಚರಿತ್ರೆ ಪುಟಗಟ್ಟಲೆ ಹೊಲಸುಗೆಟ್ಟ ರಾಜಕೀಯಕ್ಕೆ ಚುಟುಕುವಿನ ಚುರುಕು ಮುಟ್ಟಿಸುವಲ್ಲಿ ಕವಿಗಳ ಪಾತ್ರ ಮಹತ್ತರ. ಅಂತಹವರ ಸಾಲಿನಲ್ಲಿ ದಿನಕರ ದೇಸಾಯಿಯವರು ರಾಜಕೀಯ ವಿಡಂಬನೆ ಮಾಡುವಲ್ಲಿ ಅಗ್ರಗಣ್ಯರು. ಅಂತೆಯೇ ಡುಂಡಿರಾಜ್, ಎಚ್.ಎ.ಭಿಕ್ಷಾವರ್ತಿಮಠ, ಅಕಬರ ಅಲಿ, ಬಿ.ಟಿ.ಲಲಿತಾನಾಯ್ಕ, ಶಿವಶಂಕರ್, ಕಣವಿ, ಬಿ.ಆರ್.ಲಕ್ಷ್ಮಣ್ ರಾವ್ ಚದುರಂಗರು ಹೀಗೆ ಅನೇಕ ಕವಿಗಳು ರಾಜಕೀಯ ವಿಡಂಬನೆ ಮಾಡಿದ್ದಾರೆ. ಆದರೆ ನನ್ನ ವ್ಯಾಪ್ತಿಗೆ ಸಂಬಂಧಿಸಿದಂತೆ ಕೆಲವು ಕವಿಗಳನ್ನು ಮಾತ್ರ ಇಲ್ಲಿ ಅಧ್ಯಯನಕ್ಕೊಳಪಡಿಸಿದ್ದೇನೆ. ದಿನಕರ ದೇಸಾಯಿಯವರು ಚುಟುಕು ಸಾಹಿತ್ಯದಲ್ಲಿ ಅಗ್ರಗಣ್ಯರು. ರಾಜಕೀಯ ವಿಷಯವನ್ನು ಕುರಿತಾಗಿ ಬೇರೆ ಕವಿಗಳಿಗಿಂತ ಪ್ರಬುದ್ಧವಾಗಿ ರಚಿಸಿದವರು. ಇವರು ರಾಜಕಾರಣದ ಚಕ್ರವ್ಯೂಹವನ್ನು ಪ್ರವೇಶಿಸಿ ಅದರ ಇಂಗಿತವನ್ನು ಅರಿತು, ಅರ್ಥಮಾಡಿಕೊಂಡು ಚುಟುಕು ರಚಿಸಿದ್ದಾರೆ. ರಾಜಕೀಯ ಪ್ರಜ್ಞೆ ದಿನಕರ ದೇಸಾಯಿಯವರ ಪ್ರಮುಖ ಆಶಯವಾಗಿರುವುದನ್ನು ಕಾಣಬಹುದಾಗಿದೆ. ಅವರಿಗೆ ಕಾವ್ಯ ಮುಖವೂ ಇದೆ. ರಾಜಮುಖವೂ ಇದೆ. ರಾಜತ್ವ ಮತ್ತು ಕವಿತ್ವ ಎರಡೂ ಗುಣಗಳಲ್ಲಿ ಸದ್ಗುಣಿಗಳಾಗಿ ಬಾಳಿದ್ದಾರೆ.

ಸಾಮಾಜಿಕ ಬದುಕಿನಲ್ಲಿ ಗೆಲುವಿಗಿಂತ ಸೋಲೇ ಹೆಚ್ಚಾಗಿದ್ದರೆ, ಸಾಧನೆಗಿಂತ ವೈಫಲ್ಯವೇ ಹೆಚ್ಚಾಗಿದ್ದರೆ, ಕವಿ ನಿಷ್ಠುರನಾಗಬೇಕಾಗುತ್ತದೆ. ಯಾವುದೇ ತಪ್ಪಿನ ಅಂಶವನ್ನು ಬೆರಳು ಮಾಡಿ ತೋರಿಸಬೇಕಾಗುತ್ತದೆ. ದೇಶದ ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಜೀವನದಲ್ಲಿ ತಲೆ ಎತ್ತಿರುವ ಅಪಮೌಲ್ಯವನ್ನು ಸಾಮಾಜಿಕ ಎಚ್ಚರವುಳ್ಳ ಕವಿ ಕಂಡಾಗ ಸಿಟ್ಟಿಗೇಳುವುದು ಸಹಜ ಸಮಾಜವಾದಿ ಧೋರಣೆಯೊಂದಿಗೆ ರಾಜಕೀಯವನ್ನು ಪ್ರವೇಶಿಸಿದ ದಿನಕರರು ಸ್ವತಂತ್ರ ಭಾರತದ ರಾಜಕೀಯವನ್ನು, ಭ್ರಷ್ಟ ರಾಜಕಾರಣಿಗಳನ್ನು ಹತ್ತಿರದಿಂದ ಕಂಡವರು. ಜವಾಹರಲಾಲ್ ನೆಹರೂ, ಇಂದಿರಾಗಾಂಧಿ, ಅವಧಿಯ ರಾಜಕೀಯದ ವಿವಿಧ ಮಜಲುಗಳನ್ನು ಕಂಡು ಅನುಭವಿಸಿದವರು. ಹಾಗಾಗಿ ಅವರ ಭಾಷೆಗೆ ವಾಸ್ತವಿಕತೆಯ ಘಾಟು ಇದೆ. ಮೊನಚಿದೆ.

ದಿನಕರರ ಹೆಚ್ಚಿನ ಸಂಖ್ಯೆಯ ಚೌಪದಿಗಳು ರಚಿತವಾದದ್ದು ಪ್ರಜಾರಾಜ್ಯದ ಕನಸುಗಳೆಲ್ಲಾ ನನಸಾಗಬೇಕಿದ್ದ ಕಾಲದಲ್ಲಿ. ಆರ್ಥಿಕ, ಸಾಮಾಜಿಕ, ರಾಜಕೀಯ ನ್ಯಾಯಕ್ಕಾಗಿ ಹಾತೊರೆಯುತ್ತಿದ್ದ

ಕಾಲದಲ್ಲಿ, ಸರ್ವಜ್ಞ, ಡಿ.ವಿ.ಜಿ ಮತ್ತು ವಿಲಿಯಂ ಬ್ಲೇಕ್ ರಿಂದ ಪ್ರಭಾವಿತರಾದ ದಿನಕರರ ಚುಟುಕುಗಳ ಮೂಲದ್ರವ್ಯ ಸಾಮಾಜಿಕ, ರಾಜಕೀಯ ಪ್ರಜ್ಞೆ, ವಿಡಂಬನೆ ಧಾಟಿ. ನಮ್ಮ ದಿನನಿತ್ಯದ ನಡವಳಿಕೆಯಲ್ಲಿ ವಿಡಂಬನೆ ಇದೆ. ಒಬ್ಬ ವ್ಯಕ್ತಿಯನ್ನೋ ಒಂದು ಘಟನೆಯನ್ನೋ ಒಂದು ನಡವಳಿಕೆಯನ್ನೋ, ಒಂದು ಸಮೂಹದ ಆಗು-ಹೋಗುಗಳನ್ನೋ ಚೇಷ್ಟೆಗಾಗಿ, ರಂಜನೆಗಾಗಿ ತಿವಿಯುತ್ತಾ ಛೇಡಿಸುತ್ತಿರುವುದನ್ನು ಕಾಣುತ್ತೇವೆ. ಆದರೆ ದಿನಕರರು "ಸರ್ವಜ್ಞನ ವಿಡಂಬನೆಯಾಗಲಿ ಶೈಲಿಯಾಗಲಿ ನನಗೆ ಸಾಧ್ಯವಿಲ್ಲ ಎಂದು ಹೇಳಿಕೊಂಡು ತಮ್ಮದೇ ಆದ ವಿಡಂಬನಾ ಶೈಲಿಯನ್ನು ರೂಪಿಸಿಕೊಂಡಿದ್ದಾರೆ. ಅವರದೇ ಆದ ಈ ಚುಟುಕುವಿನಲ್ಲಿ.

ಅಲಲೇ ಕೇಳೋ ಮಗನೆ, ಪೌರುಷದ ಸುದ್ದಿ
ಎಷ್ಟು ಮಂದಿಗೆ ಉಂಟು ಈ ತರದ ಬುದ್ದಿ
ಹತ್ತು ವರುಷದ ಹಿಂದೆ ಇತ್ತು ಲಂಗೋಟಿ
ಈ ಹೊತ್ತು ನೋಡಿದರೆ ಬರೀ ಹತ್ತು ಕೋಟಿ

ಇಂದು ರಾಜಕೀಯ ಕ್ಷೇತ್ರಕ್ಕೆ ಕಾಲಿರಿಸಿದರೆ ಸಾಕು ಶ್ರೀಮಂತಿಕೆ ತಮ್ಮ ಮನೆಯ ಬಾಗಿಲತ್ತ ಸುಳಿಯುತ್ತದೆ. ಅಲ್ಲದೆ ಏನೂ ಇಲ್ಲದವ ರಾಜಕಾರಣಿಯಾಗಿ ಬೃಹತ್ ಶ್ರೀಮಂತನಾಗಿ ಮೆರೆಯುತ್ತಿರುವುದನ್ನು ವಿಡಂಬಿಸಿದ್ದಾರೆ. ಈ ಚುಟುಕುವಿನಲ್ಲಿ ಪ್ರಾಸವನ್ನು ಮರೆಯದೇ ಅರ್ಥಪೂರ್ಣವಾಗಿ ರಚಿಸಿದ್ದಾರೆ. ಇದನ್ನು ಗಮನಿಸಿದಾಗ ಪುಟಗಟ್ಟಲೇ ರಾಜಕಾರಣಿಗಳ ಕತೆ ಬರೆಯುವುದನ್ನು ಕೇವಲ ನಾಲ್ಕು ಸಾಲಿನಲ್ಲಿ ಸಾಧಿಸಿ ತೋರಿಸಿದ್ದಾರೆ.

ಇವರು ಬಿಳಿಟೋಪಿ ಧರಿಸುವುದೇಕೆ ಅಣ್ಣ?
ಕರ್‍ರಗಲ್ಲವೇ ತಲೆಯ ಕೂದಲಿನ ಬಣ್ಣ
ಬಿಳಿಯಿಂದ ಕಪ್ಪೆಲ್ಲವೂ ಮುಚ್ಚಿ ಹೋಗಿ
ಬೆಳಗುವುದು ಅಮವಾಸ್ಯೆಯ ಬೆಳದಿಂಗಳಾಗಿ

ಭ್ರಷ್ಟಾಚಾರವನ್ನು ಬಿಚ್ಚಿ ತೋರುವ ಇಂಥ ಚೌಪದಿಗಿಂತ ಸಮರ್ಥವಾಗಿ ಬರೆಯಲು ಸಾಧ್ಯವೇ?

ರಾಜಕಾರಣಿಗಳು ಪಕ್ಷಾಂತರ ಮಾಡುವ ಪ್ರವೃತ್ತಿ, ಇಂದು ನಿನ್ನೆಯದಲ್ಲ ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯವರೆಗೂ ಇದ್ದದ್ದೆ. ರಾಜಕೀಯದಲ್ಲಿ ಪ್ರಾಮಾಣಿಕ ನಿಷ್ಠೆಯಿಂದ ಸೇವೆ ಸಲ್ಲಿಸಿದ ದಿನಕರರಿಗೆ ಭ್ರಷ್ಟ ರಾಜಕಾರಣಿಗಳನ್ನು ಕಂಡು ಪಕ್ಷಾಂತರವನ್ನು ಗೇಲಿಯೊಂದಿಗೆ ಸಮರ್ಥಿಸುವ ಪರಿ ನೋಡಿದಾಗ ಅಧಿಕಾರದ ಆಸೆಗೆ ಹೆತ್ತ ತಾಯಿಯನ್ನು ಮರೆಯುವ ಮೂರ್ಖ ರಾಜಕಾರಣಿಗಳನ್ನು ಕುರಿತು

ಈ ಹೊತ್ತು ಈ ಕಡೆಗೆ ನಾಳೆ ಆ ಬದಿಗೆ
ನೇತಾಡುತಿದೆ ಇವನ ಕುರ್ಚಿ ಅಡಿಗಡಿಗೆ

ಕುಳಿತು ಕೊಳ್ಳುವನು ಸಖಿ ಸಿಕ್ಕಿದೆಡೆ ಜಾಗ
ಇದಕೆನ್ನುವರು ರಾಜಕಾರಣದ ತ್ಯಾಗ
ಈ ಪಕ್ಷದಿಂದ ಆ ಪಕ್ಷಕ್ಕೆ ಹಾರಿ
ಸಚಿವ ಸಂಪುಟ ಕೆಡವಿ ಹೊಡೆದರು ನಗಾರಿ
ಹಾರಿಸದವನಿಗೆ ಕಟ್ಟಿದರು ಮಂತ್ರಿ ಪದವಿ
ರಾಜಕಾರಣವಾಯ್ತು ಸೂಳೆಯರ ಮದುವಿ

ಎಂದು ಕಠೋರವಾಗಿ ಟೀಕಿಸಿದ್ದಾರೆ. ಅಧಿಕಾರ, ಅಂತಸ್ತು, ಐಶ್ವರ್ಯಕ್ಕೆ ಎಂತಹವರನ್ನೂ ಕಡೆಗಣಿಸುವ ಜನ ಇವರು.

ರಾಜಕಾರಣಿಗಳ ಹೊಟ್ಟೆಗೆ ಎಂಥ ಅದ್ಭುತ ಶಕ್ತಿ ಎಂದರೆ ಏನು ತಿಂದರೂ ಎಷ್ಟು ತಿಂದರೂ ಅಜೀರ್ಣವಾಗುವುದೇ ಇಲ್ಲ ಎಂಬ ಪವಾಡ ಸದೃಶ ದನ ಈ ಚೌಪದಿಯಲ್ಲಿ.

ದವಳ ಸಾಹೇಬರೆಲ್ಲ ಹೊರಟು ಹೋಗಿ
ಕವಳ ಸಾಹೇಬರನು ನಮಿಸು ತಲೆಬಾಗಿ
ಕವಳ ಒಂದೇ ಅಲ್ಲ ಎಲ್ಲವನು ತಿಂದು
ಸರಕಾರ ನಡೆಸುವರು ಹೇ ದೀನಬಂಧು!

ರಾಜಕಾರಣ ದಿನಕರರಿಗೆ ಲೋಕ ಹಿತಕ್ಕಾಗಿ ದುಡಿಯಬೇಕಾದ ಕಾರ್ಯಕ್ಷೇತ್ರ. ಪಕ್ಷಾಂತರ ಮಾಡುವ ಸ್ವಹಿತ ಸಾಧಕರನ್ನು ಕಂಡರೆ ಸಿಡಿದು ಬೀಳುತ್ತಿದ್ದರು. ಜನಸೇವಕರಿಗೆ ವಿರೋಧ ಪಕ್ಷದಲ್ಲಿದ್ದು ಜನಸೇವೆ ಮಾಡಬೇಕೆನ್ನುವವರು ಇಂತಹ ಖದೀಮರಿಂದ ಪ್ರಜಾಸತ್ತೆ ಉಳಿದೀತೇ? ಎಂಬ ಚಿಂತೆ ಉಳಿಸಿಕೊಳ್ಳಬೇಕೆಂಬ ಹಂಬಲ. ಟೀಕೆ, ಗೇಲಿ, ವ್ಯಂಗ್ಯ ಇತ್ಯಾದಿ ಕಟುನುಡಿಗಳನ್ನು ಈ ಮೂಲಕ ಸ್ವಚ್ಛ ರಾಜಕಾರಣವನ್ನು ಎತ್ತಿ ಹಿಡಿದಿದ್ದಾರೆ.

ಈ ಲೋಕವೆನ್ನುವುದು ಕಳ್ಳಬಜಾರ
ರಾಜ್ಯವಾಳುವ ಶಕ್ತಿ ಸುಳ್ಳು ಸರಕಾರ
ಕಳ್ಳರಿಗೆ ಸುಳ್ಳರಿಗೆ ವಿಪರೀತ ದೋಸ್ತಿ
ಜನಕೋಟಿಗಳ ಸುಲಿದು ಮಾಡಿದರು ಆಸ್ತಿ.

ಎಂದು ಸದ್ಯದ ರಾಜಕೀಯಕ್ಕೆ ಚುಟುಕಿನಲ್ಲಿ ಅತ್ಯಂತ ಮಾರ್ಮಿಕವಾಗಿ ಕನ್ನಡಿ ಹಿಡಿದಿರುವುದನ್ನು ಕಾಣಬಹುದು. ಇಂದಿನ ರಾಜಕಾರಣದಲ್ಲಿ ಅರ್ಹತೆ ಇದ್ದವರಿಗಿಂತ ಅನರ್ಹರನ್ನು, ಭ್ರಷ್ಟರನ್ನು ಚುನಾವಣೆಯಲ್ಲಿ ಆಯ್ಕೆ ಮಾಡುವ ಪ್ರವೃತ್ತಿ ಹೆಚ್ಚಾಗಿದೆ. ಕಾರಣ ಹೆಂಡ ಹಣ ಸುರಿದು ಆಸೆ-ಆಮಿಷಗಳ, ಭರವಸೆಗಳ ಮಹಾಪೂರವನ್ನೇ ಹರಿಸಿ ಓಟು ಹಾಕಿಸಿಕೊಳ್ಳುವುದನ್ನು ವ್ಯಂಗ್ಯವಾಗಿ ವಿಡಂಬಿಸಿದ್ದಾರೆ.

ಆ ಚುನಾವಣೆಯಲ್ಲಿ ಸರಕಾರಿ ಪಕ್ಷ
ವಿಪರೀತ ಹಣಚೆಲ್ಲಿ ಪಡೆದಿತ್ತು ಮೋಕ್ಷ
ಈ ಚುನಾವಣೆಯಲ್ಲಿ ಆಗಿ ಉಪರಾಟೆ
ಮುರಿದು ಹೋಯಿತು ಮಗನೆ ಸರಕಾರಿ ಕೋಟೆ
ಆಡಳಿತ ಪಕ್ಷದ ಚುನಾವಣಾ ಫಂಡು
ಆಶ್ಚರ್ಯ ಚಕಿತನಾದನು ಬಾಪು ಕಂಡು
ಶೇಕಡಾ ತೊಂಬತ್ತು ಶ್ರೀಮಂತರಿಂದ
ಟೇಬಲ್ಲಿನ ಕೆಳಗೆ ಕೈಹಾಕಿ ಬಂತೆಂದ
ಈ ಚುನಾವಣೆಯಲ್ಲಿ ಆನೆಗಳು ಬಿದ್ದು
ವೃತ್ತ ಪತ್ರಿಕೆಯಲ್ಲಿ ವಿಪರೀತ ಸದ್ದು
ಕೆಲವು ಕಡೆ ಕತ್ತೆಗಳಿಗೂ ಬಂತು ಗೆಲುವು
ಮತ್ತೆ ನರಿಗಳ ಜೊತೆಗೆ ಕರಡಿಗಳು ಹಲವು

ರಾಜಕಾರಣದ ಎಲ್ಲ ಮಜಲುಗಳನ್ನು ಅತೀ ಸಮೀಪದಿಂದ ಕಂಡು ಅದರೊಂದಿಗೆ ಇದ್ದು ಅಲ್ಲಿಯ ಹೊಲಸುಗಳನ್ನು ನೋಡಿ ಬೇಸರಪಟ್ಟುಕೊಂಡ ದಿನಕರರು ತಾವು ಬರೆದ ಚೌಪದಿಗಳು ಮತ್ತೆ ಯಾವ ಕವಿ ಬರೆದ ಚುಟುಕುಗಳೂ ಸರಿಯಾಗಲಾರವು.

ಅಮೃತ ಹಸ್ತದ ಅಡಿಗಲ್ಲುಗಳು ಹೇಗೆ ಜಡಿಗಲ್ಲುಗಳಾಗುತ್ತವೆ. ನೋಡಿ ಇವರ ಚುಟುಕದಲ್ಲಿ

ಕಟ್ಟಬೇಕೆಂದು ಹಾಕಿದರು ಅಡಿಗಲ್ಲು
ಅಡಿಗಲ್ಲ ಮೇಲೆ ಹುಟ್ಟಿದೆ ಭರ್ತಿಹುಲ್ಲು
ದನಗಳಿಗೆ ಮೇಯಲಿಕೆ ಬಹಳ ಅನುಕೂಲ
ಕೊಳಲನೂದುತ ಬಾರೋ ವೇಣಗೋಪಾಲ

ಇನ್ನು ರಾಜಕೀಯಕ್ಕೆ ಹೊರತಾದ ಜನಸಾಮಾನ್ಯರಾದ ನಾವು ನಮ್ಮ ಬದುಕುವ ವೈಖರಿ ಎಲ್ಲ ಹೇಗೆ? ಇವರ ಚುಟುಕುವಿನಲ್ಲಿ

ಇದು ಮಹಾಕ್ಷೇತ್ರ ಸಖಿ ಹೆಸರಿದಕೆ ಕಾಶಿ
ಇದರ ಜೋಳಿಗೆಯಲ್ಲಿ ಪಾಪಗಳಿಗೆ ರಾಶಿ
ಪುಣ್ಯಗಳಿಸಲಿಕೆಂದು ಎಲ್ಲರೂ ಬಂದು
ಇಲ್ಲಿ ಹೇರಿದ್ದಾರೆ ಪಾಪಗಳ ತಂದು.

ಇದು ಪಾಪ ಪ್ರಾಯಶ್ಚಿತ್ತವಾದರೆ ಔದಾರ್ಯ ಹೇಗೆ?

ಎಲೆ ಕೋಳಿ ವೃದ್ಧಿಯಾಗಲಿ ನಿನ್ನ ಬಾಳು

ಹೊಟ್ಟೆ ತುಂಬುವ ತನಕ ತಿನ್ನು ನೀ ಕಾಳು
ಇದು ನಿನಗೆ ನಾನು ಬಡಿಸುವ ಮೇಜುವಾನಿ
ಆ ಮೇಲೆ ಒಂದು ದಿನ ನಮಗೆ ಬಿರಿಯಾನಿ

ದೇಸಾಯಿಯವರು ತಮ್ಮನ್ನು ಬಿಡದೆ ವಿಮರ್ಶೆಗೆ ಒಳಪಡಿಸಿಕೊಂಡಿದ್ದಾರೆ. ವಿಡಂಬಿಸಿಕೊಂಡಿದ್ದಾರೆ.

ಅವರು ಎಂದರು ನನಗೆ ಚುಟುಕು ಸಾಮ್ರಾಟ
ನಾನೆಂದೆ ಈ ರೀತಿ ಕೊಡಬೇಡಿ ಕಾಟ
ಸಾಮ್ರಾಟರೆಲ್ಲರೂ ಮುಕ್ಕಿದರು ಮಣ್ಣು
ಕೊನೆಗೆ ಉಳಿಯುವುದೊಂದೆ ಕಬ್ಬಿಗನ ಕಣ್ಣು

ನಮ್ಮನ್ನು ನಾವು ಕೋಗಿಲೆ ಎಂದು ಕೊಂಡವರಿಗೆ ಎಂಥ ಶಾಕು?!

ಈ ಎಲ್ಲ ಅತಿರಥ ಮಹಾರಥರೊಂದಿಗೆ ಚುಟುಕು ಸಾಹಿತ್ಯವನ್ನು ಸಮರ್ಥವಾಗಿ ಮುಂದುವರಿಸಿಕೊಂಡು ಹೋಗುತ್ತಾ ಇನ್ನಷ್ಟು ಸಮೃದ್ಧಿಪಡಿಸುತ್ತಿರುವವರಲ್ಲಿ ಸಿ.ಪಿ.ಕೆ, ಎಂ.ಅಕಬರ್ ಅಲಿ, ಡುಂಡಿರಾಜ್, ಶಂ.ಗು.ಬಿರಾದಾರ್, ಎಚ್.ಎ.ಭಿಕ್ಷಾವರ್ತಿಮಠ, ಬಿ.ಟಿ.ಲಲಿತಾನಾಯ್ಕ, ಮತ್ತಿನ್ನು ಅನೇಕರ ಪಾತ್ರ ಹಿರಿದು. ಎಲ್ಲರ ಚುಟುಕುಗಳನ್ನು ಇಲ್ಲಿ ಹೇಳಲು ಸಾಧ್ಯವಾಗದೇ ಅನಿವಾರ್ಯವಾಗಿ ಚುಟುಕಿಗಿಳಿಸಬೇಕಾಗಿದೆ. ಈ ಕೆಲವು ಚುಟುಕುಗಳು ತಮ್ಮ ಸ್ವಾರಸ್ಯದಿಂದಾಗಿ ಮತ್ತೆ ಮತ್ತೆ ಮೆಲುಕು ಹಾಕುವಂತಿವೆ.

ಶಂ.ಗು.ಬಿರಾದಾರರ ಚುಟುಕುವಿನಲ್ಲಿ 'ಶಿಕ್ಷಣ' ಹೇಗಿದೆ ನೋಡಿ.

ಶಿಕ್ಷಣದ ಹೆಸರಿನಲಿ ನಡೆದಿಹುದು ವ್ಯಾಪಾರ
ಹಗಲು ದರೋಡೆಗಿದು ತೆರದಿಹುದು ದ್ವಾರ
ಯೋಗ್ಯತೆಗೆ ಎಳ್ಳಷ್ಟು ಇಲ್ಲಿಲ್ಲ ಇಂಬು
ಆದರೂ ಅನಿವಾರ್ಯ ಇಂಥವರ ನಂಬು

ರಾಜಕಾರಣಿಗಳು ತಮ್ಮ ಪಕ್ಷಕ್ಕಾಗಿ ತ್ಯಾಗ ಮಾಡಿರುವವರು ಅಪರೂಪ. ಸ್ವಾರ್ಥಪರ ಚಿಂತನೆಯ ಹುಚ್ಚು ಪ್ರೇರೇಪಿತರು, ಇರುವಾಗ ತ್ಯಾಗವೆಲ್ಲಿಂದ ಬಂದೀತು? ಎನ್ನುವ ಮಾತನ್ನು ಶಂ.ಗು.ಬಿರಾದಾರ ರಾಜಕಾರಣಿಗಳ ತ್ಯಾಗವನ್ನು ಕುರಿತು ಈ ಚುಟುಕುವಿನಲ್ಲಿ ವ್ಯಂಗ್ಯವಾಡಿದ್ದಾರೆ.

ಪುಣ್ಯವಂತರ ಸಾಲಿನಲ್ಲಿ ಕುಳಿತಿರುವಂಥ
ರಾಜಕಾರಣಿಯನು ಕೇಳಿದನು ಯಮದೂತ
ಮಾಡಿರುವೆ ಹೇಳಯ್ಯಾ ನೀನ್ಯಾವ ತ್ಯಾಗ?
ಎನಲು ಹೇಳಿದನವನು "ಬರಿ ಪಕ್ಷತ್ಯಾಗ"

ಎಂದು ಗೇಲಿ ಮಾಡಿದ್ದಾರೆ.

ದಿನಕರರಂತೆ ಎಂ.ಅಕಬರ ಅಲಿಯವರು ಚುಟುಕು ಕವಿಯಾಗಿ ರಾಜಕಾರಣಿಗಳ ಜೀವನ ಜಾಲಾಡಿದವರು. ಆದರೆ ದೇಸಾಯಿಯವರಂತೆ ರಾಜಕೀಯ ಕ್ಷೇತ್ರಕ್ಕೆ ಕಾಲಿಡದಿದ್ದರೂ ಈ ದೇಶ ಭ್ರಷ್ಟ ರಾಜಕಾರಣಿಗಳಿಂದ ಹದಗೆಟ್ಟ ಸ್ಥಿತಿಯನ್ನು ತಮ್ಮ ಕಾವ್ಯಗಳ ಮೂಲಕ ವ್ಯಂಗ್ಯ ವಿಡಂಬನೆಗಳ ಮೂಲಕ ವ್ಯಕ್ತಪಡಿಸಿದ್ದಾರೆ.

ಅಕಬರ ಅಲಿ ಅವರ ಬಹುತೇಕ ಚುಟುಕುಗಳ ಸಾಮಾಜಿಕ ಪ್ರಜ್ಞೆಯನ್ನು ಒಳಗೊಂಡವು. ಜೊತೆ ಜೊತೆಗೆ ರಾಜಕೀಯ ವಿಡಂಬನೆ ಅವರ ಕಾವ್ಯದ ಪ್ರಮುಖ ಅಂಶಗಳು. ಅಂತೆಯೇ ಪ್ರೊ.ಎಚ್ .ಅನಂತ ನಾರಾಯಣರು ಅಕಬರಅಲಿ ಅವರನ್ನು ಕುರಿತು ಅಭಿಪ್ರಾಯ ಪಡುವಂತೆ "ಇಲ್ಲಿ ವಿಡಂಬನೆ ಬಂದಾಗ ಸುಂದರವಾಗಿ ಧ್ವನಿಗೊಳ್ಳುವ ಪದ ಪ್ರಯೋಗ ಚುಚ್ಚು ಮುಳ್ಳಿನಂತೆ ತಾಗಿ ಚುರುಗಟ್ಟಿಸಿ. ಮೈ ಪರಚಿಕೊಳ್ಳುವಂತೆ ಮಾಡುವ ಟೀಕೆಯ ಬಗೆ, ಎಂತಹ ರಾಜಕೀಯದ ಬುಡದ ಹೊಲಸನ್ನು ತೋರಿಸುವ ಸಾಮಾಜಿಕ ಪ್ರಜ್ಞೆ, ದೊಂಬರಾಟ ಆಡಿ ದೊಡ್ಡವರೆನಿಸಿಕೊಳ್ಳುವವರ ಪೊಳ್ಳುತನವನ್ನು ಬಯಲಿಗೆಳೆಯುವ ಪ್ರಾಮಾಣಿಕತನ ಮತ್ತು ಚೆಲುವನ್ನು ಕಂಡಾಗ ಅದನ್ನು ಸವಿದು ಉಳಿದವರಿಗೂ ಅವರ ಸವಿ ತೋರಿಸಿ ಕೊಡುವ ರಸ ಪ್ರಜ್ಞೆ, ಇವೆಲ್ಲವೂ ಒಂದಕ್ಕೊಂದು ಹೊಂದಿಕೊಂಡು ಸೊಗಸಾದ ಚಿತ್ತಾರವನ್ನು ಸೃಷ್ಟಿಸಿದೆ" ಎಂದಿದ್ದಾರೆ. ಅಲಿಯವರ ರಾಜಕೀಯ ಪ್ರಜ್ಞೆಯನ್ನು ಕುರಿತಾದ ಚುಟುಕುಗಳನ್ನು ಗಮನಿಸಿದಾಗ

"ಮರಿ ರಾಜಕಾರಣಿ"
ನಮ್ಮ ಊರ ಕೋತಿ
ನೀತಿ-ಗೀತಿ ನೇತಿ
ಹೊತ್ತು ಬಂದ
ಹಾಗೆ ಕೊಡೆಯ
ಹಿಡಿಯುವಂಥ ಜಾತಿ

ಇಂದಿನ ಪುಡಿ ರಾಜಕಾರಣಿಗಳಿಗೆ ನೀತಿ-ನೇಮ ಅರಿಯದೇ ಈ ಬರೀ ಜಾತಿ ಹೆಸರಿನಲ್ಲಿ ಬೇಳೆ ಬೇಯಿಸಿಕೊಳ್ಳುವವರನ್ನು ಜಾಲಾಡಿಸಿದ್ದಾರೆ. ಜಾತ್ಯಾತೀತ ಮತಾತೀತ ಎಂದು ಹೇಳಿಕೊಳ್ಳುವ ಈ ದೇಶದಲ್ಲಿ ಜಾತಿ ಮತಕ್ಕೆ ಕೊಟ್ಟ ಪ್ರಾಧಾನ್ಯತೆ ಇನ್ನೊಂದಿರಲಿಕ್ಕಿಲ್ಲ. ಅಂತಹದೊಂದು ಚುಟುಕುವಿನಲ್ಲಿ-

ಹಾಲು ಹೊಳೆಯನು ಹರಿಸಿ, ಜೇನು ಮಳೆಯನು ಕರೆಸಿ
ಭುವಿಗೆ ಸ್ವರ್ಗವ ತರುವೆವೆಂದರಂದು
ಕೊಳ ಚರಂಡಿಯ ಹರಿಸಿ, ಹೊಲಸು ಜೊಲ್ಲನು ಸುರಿಸಿ
ನೊಣದ ಜಾತಿಯ ತಣಿಸುತಿರುವರಿಂದು!

ಗೋಸುಂಬೆ ರಾಜಕಾರಣಿಗಳ ಹುಚ್ಚಾಟ ಹೆಚ್ಚಾಗಿ ಈ ದೇಶದ ಔನತ್ಯ ಕೆಡುತ್ತಲಿದೆ ಎಂದು ಹೇಳಿರುವ ಈ ಚುಟುಕುವಿಗಿಂತ ಮತ್ತೊಂದು ವಿಚಾರ ಬೇಕಾಗಿಲ್ಲ.

ಅಕಬರ ಅಲಿಯವರ ಚುಟುಕುಗಳಿಗೆ ಮಿತಿಯಿಲ್ಲ. ಇವರ ಅನೇಕ ಕವಿತೆಗಳಲ್ಲಿ ರಾಜಕೀ ವಿಡಂಬನೆಯಲ್ಲಿ ಪುಂಡ-ಮುಖಂಡ ಎಂಬ ಚುಟುಕುವಿನಲ್ಲಿ ಹಳ್ಳಿಗೆ ಹನುಮಪ್ಪ ಚಂದ ಎನ್ನುವಂತೆ ಪುಡಾರಿಗಳು ಪ್ರತಿಭಾ ಸಂಪನ್ನರನ್ನು ಬೆದರಿಸಿ ಕೊಳ್ಳೆ ಹೊಡೆಯುವವರನ್ನು ಕುರಿತಾಗಿ

ಹಳ್ಳಿಯಲಿ ಚಲ್ಲಾಟ ನಡೆಸಿ ಸುಲಿಗೆಯ ಮಾಡು
ವಂಥ ಕ್ಷುದ್ರನೋ ಕಳ್ಳ-ಭಂಡ-ಪುಂಡ
ಹೆಮ್ಮೇಳವನೆ ಕಟ್ಟಿ ನೂರಾರು ಹಳ್ಳಿಗಳ
ಕೊಳ್ಳೆ ಹೊಡೆಯುವ ಕಿಳ್ಳಿಕೇತನೆ ಮುಖಂಡ!

ಅನರ್ಹರೂ ಎಂಥ ನೀತಿಗೆಟ್ಟ ಕೆಲಸ ಮಾಡುತ್ತಾರೆ ಎಂದು ಈ ಕಾವ್ಯದಲ್ಲಿ ತಿಳಿಸಿದರೆ ಮುಂದಿನ ಚುಟುಕುವಿನಲ್ಲಿ ರಾಜಕೀಯ ಪ್ರೇರೇಪಿತ ಅಧಿಕಾರಿಗಳು ಪುಡಿನಾಯಕರು ಲಂಚದ ಮೂಲಕ ತಮ್ಮ ಸಾಮ್ರಾಜ್ಯವನ್ನೇ ಹೆಚ್ಚಿಸಿಕೊಳ್ಳುವ ಈ ಚುಟುಕು ನೋಡಿದಾಗ

ಹೊಟ್ಟೆ ಹೊರಕೊಳ್ಳುವುದೆ ಕಷ್ಟವಾಗಿಹ ಜೀವಿ
ಬಿಡಿಕಾಸು ಕೊಂಡರೂ ಲಂಚಗುಳಿ !
ಬಂಡಿ ನುಂಗುವ ಬಕಾಸುರ ಕಾಯಿದೆಗೆ ಇಂಗು
ಹಚ್ಚಿ ಮೆರೆಯುವ ಸಾಧುವೇಷ ತಾಳಿ !

ಇಲ್ಲಿ ಬರುವ ವಾಗ್ದಂಡಗಳೆಲ್ಲವೂ ಮುಸುಕಿನ ಗುದ್ದುಗಳು ಇವುಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಓದುಗನು ಸ್ವಲ್ಪಮಟ್ಟಿಗೆ ಪ್ರತಿಭಾವಂತನಾಗಿ ಕಲ್ಪನಾ ಚತುರನಾಗಿರಬೇಕು. ಅಲಿಯವರ ಚುಟುಕುಗಳು ಚಿಂತೆಗಿಂತ ಚಿಂತನಕ್ಕೆ ದಾರಿ ಮಾಡಿಕೊಡುತ್ತವೆ. ಇವರ ಕವಿತೆಗಳಲ್ಲಿ ಆವೇಶವಿದ್ದರೂ ಅದು ಆಕ್ರೋಶವಾಗಿ ಚೀರಾಡುವುದಿಲ್ಲ.

ಜಡ್ಡುಗಟ್ಟಿದ ಈ ವ್ಯವಸ್ಥೆಯನ್ನು ಒಬ್ಬ ಪ್ರಾಮಾಣಿಕನಾದ ವ್ಯಕ್ತಿ ಕವಿತೆಯ ಮೂಲಕ ವಿರೋಧ ವ್ಯಕ್ತಪಡಿಸಿದಾಗ ಆತನಿಗೆ ಆತ್ಮ ಸಂತುಷ್ಟಿ ಸಿಗಬಹುದು. ಆದರೆ ಆನಂದ ಅಥವಾ ಸಂತೋಷ ಇರುವುದು ಯಾವುದೇ ವಸ್ತುವಿನಲ್ಲಿ ಅಥವಾ ಅದರ ಗಾತ್ರದಲ್ಲಲ್ಲ. ಅದನ್ನು ಸ್ವೀಕರಿಸುವ ಮನಸ್ಸಿನಲ್ಲಿ ಹಾಗೂ ಅದನ್ನು ಕಟ್ಟಿಕೊಡುವ ಕವಿಯಲ್ಲಿ, ಕಲೆಗಾರನಲ್ಲಿ ಅಕಬರ ಅಲಿಯವರ 'ಕಾಡುಕೋಣ' ಚುಟುಕು ಹಗಲು ದರೋಡೆ ಮಾಡುವ ರಾಜಕಾರಣಿಗಳನ್ನು ಬೆತ್ತಲಾಗಿಸುತ್ತದೆ. ಇಲ್ಲಿನ ವ್ಯಂಗ್ಯ ಮಾರ್ಮಿಕವಾಗಿದೆ. ಉಪಮೆಯ ಬೆಂಬಲದಿಂದ ಸದೃಢವಾಗಿದೆ.

ಊರ ಬೇಲಿ ಹೊಲ ಮೇದು ಕೊಬ್ಬಿ ಮೆರೆಯುತ್ತಿತ್ತು
ಊರಿನಲ್ಲೊಂದು ಮಾರು - ಕೋಣ
ನಾಡ ತಂದೆಯ ಹೆಸರಿನಲ್ಲಿ ಹಾಡೇ ಹಗಲು
ಪೀಡಿಸುತ್ತಲಿಹುದಿಂದ ಕಾಡುಕೋಣ

'ನಾಡಿನ ಚಕ್ಕಡಿ' ಎಂಬ ಚುಟುಕು ನಾಡಿನ ಆಡಳಿತ ಪರಂಪರೆಯನ್ನು ಹರಾಜಿಗೆ ಹಾಕಿದೆ. ಎಂಥವರು ಆಳುತ್ತಿದ್ದಾರೆ? ಏನು ತಮಾಷೆ ನಡೆದಿದೆ? ರೂಪಕಗಳಲ್ಲಿ ಮನೋಗತವಾಗಿ ಸುತ್ತಿದ್ದಾರೆ.

ಎತ್ತು ಎರೆಯ ಕಡೆ ಕೋಣ ಕೆರೆಯ ಕಡೆ
ಎಳೆದೆ ಎಳೆಯುತ್ತಿದೆ ಚಕ್ಕಡಿಯ
ಕಾಗೆ ಹೊಗಳುತಿವೆ ನಾಯಿ ಬೊಗಳುತಿವೆ
ನರಿಯು ತೂಗುತಿದೆ ತಕ್ಕಡಿಯ

ಹೀಗೆ ದಿಕ್ಕು ತಪ್ಪಿದ ಪರಿಸ್ಥಿತಿ ರಾಜ್ಯಕ್ಕೆ ಒದಗಿದೆ. ಒಂದೇ ಅಭಿಪ್ರಾಯ ಈ ಜನರಲ್ಲಿ ಬರುವವರೆಗೂ ದೇಶದ ಅಭಿವೃದ್ಧಿ ಸಾಧ್ಯವಿಲ್ಲ ಎಂದು ಅರ್ಥೈಸಿದ್ದಾರೆ. ಇಂತಹ ಅನೇಕ ಚುಟುಕುಗಳು ಅಕಬರ ಅಲಿಯವರಿಂದ ರಚಿತವಾಗಿದ್ದು ಒಂದು ವಿಶೇಷ. 'ಚುನಾವಣೆ' ಎನ್ನುವ ಚುಟುಕುವಿನಲ್ಲಿ ರಾಜಕೀಯ ಪಕ್ಷಗಳಲ್ಲಿ ಎಂಥವರು ಆಯ್ಕೆಯಾಗುತ್ತಾರೆ. ಚುನಾವಣೆಯಾದರೂ ಯಾಕೆ ಬೇಕು? ಎಂದು ಚುನಾವಣೆ ದೂಷಿಸಿದವರಲ್ಲ. ಆದರೆ ಆ ಕ್ಷೇತ್ರದಲ್ಲಿ ದುಷ್ಟರೇ, ದೂರ್ತರೇ ಆರಿಸಿ ಬರುತ್ತಿರುವುದರ ಬಗ್ಗೆ ಅವರಿಗೆ ನೋವಿದೆ. ದುಗುಡವಿದೆ. ಸೂಚ್ಯವಾಗಿ ಸಜ್ಜನರನ್ನು ಸಮರ್ಥರನ್ನು ಮೂಲೆಗುಂಪಾಗಿಸುವ ಮತದಾರರ ಕುರುಡು ತನಕ್ಕಾಗಿ, ಮೂರ್ಖತನಕ್ಕಾಗಿ ಪಶ್ಚಾತ್ತಾಪ ಪಡಲಾಗುತ್ತಿದೆ. ಅಂಥದ್ದೊಂದು ವಿಷಾದದ ಛಾಯೆ ಇಲ್ಲಿದೆ.

ಚುನಾವಣೆಯ ಕಣಕ್ಕಿಳಿಯೆ ಪ್ರಾಣಿ ಘನ
ಹುಲಿಯು, ಸಿಂಹ, ಮಿಕ, ತೋಳ, ನರಿ
ತಣ್ಣಗಿದ್ದು ಕಣ್ ಕಣ್ ಬಿಟ್ಟವು ಬಡ
ಆನೆ, ಕುದುರೆ, ಹಸು ಜಿಂಕೆ ಕುರಿ

ಸ್ವಾತಂತ್ರ್ಯ ಬಂದ ಮೇಲೆ ಏನೋ ಆಗಿಬಿಡುತ್ತದೆ ಎಂದು ನಂಬಿದವರಿಗೆಲ್ಲ ಭ್ರಮೆ ನಿರಸನವಾಗಿಬಿಟ್ಟಿದೆ. ಕವಿ ದನಿಗೂಡಿಸುತ್ತಾರೆ. ಬಿಡುಗಡೆಯು ಆಗಲಿಲ್ಲ. ನಿಜವಾದ ಬಿಡುಗಡೆಯಾಗಲಿಲ್ಲ. ಶೋಷಣೆ ನಿಲ್ಲಲಿಲ್ಲ ಆದುವಿಷ್ಟೇ ಬಿಳಿ ಜಿಗಣೆ ನಿರ್ನಾಮವಾಗಿದೆ. ಕರಿಜಿಗಣೆ ಪೀಠವೇರಿದೆ. ಕವಿ ತಣ್ಣಗೆ ಸುತ್ತಿಡುತ್ತಿದ್ದಾರೆ. ಇಂಥದೊಂದು ವಿಚಾರ ಅಕಬರ ಅಲಿ ಅವರ ತಲೆಯಲ್ಲಿ ಮೂಡಿಬಂದುದು ಈ ಚುಟುಕದಲ್ಲಿ.

ಬಿಡುಗಡೆಯ ಬರವಿನೊಡನೊಂದು ಬದಲಾವಣೆಯು
ನಾಡಿನುದ್ದಗಲದಲ್ಲಿ ಕಾಣತಿಹುದು
ಬಿಳಿ ಜಿಗಣೆ ಪೀಳಿಗೆಯು ನಿರ್ನಾಮವಾದರೂ
ಕರಿಜಿಗಣೆ ಕುಲ ತಲೆಯೆತ್ತುತಲಿಹುದು

ದೇಶದ ಸಂಪತ್ತು ಕೆಲವೇ ಕೆಲವರ ಪಾಲಾಗುತ್ತಿದೆ ಎಂಬುದು ಕವಿಯ ಕಳವಳವಾಗಿದೆ. ಅನ್ಯಾಯದ ದಾರಿಯಲ್ಲಿ ಕಬಳಿಸುವಿಕೆ ನಡೆದಿದೆ. ಲೂಟಿಗೆ ಶಾಮೀಲು ಆಗಿರುವವರು ಯಾರು? ಯಾರು ಆಗಬಾರದಿತ್ತೋ ಅಂಥವರೇ! ಇಂಥವರ ಅಗತ್ಯಗಳೇನು ಎಂದು ಗ್ರಹಿಸಿ, ಬಿಸಾಡಿ, ಕೊಂಡುಕೊಳ್ಳುವುದು ಇಡೀ ನುಂಗುವವರ ಸಂಚು. ಇವರ ಜಾಲದಲ್ಲಿ ಮಂತ್ರಿಯೂ ಬೀಳುತ್ತಾನೆ. ಅಧಿಕಾರಿಯೂ! ಇರುವರು. ಮಂತ್ರಿಯ ಜೊತೆ ಅಧಿಕಾರಿಗಳೂ ಶಾಮೀಲಾಗಿ ಹೊರಟಾಗ

ಕಳವು ದರೋಡೆಗೆ ಹೊರಡುವ ಕದೀಮ
ಕಿಸೆಯಲೊಯ್ಯುವನು ಹಸಿಮಾಂಸ
ಬೊಗಳುವ ನಾಯಿಗೆ ಒಂದಿಷ್ಟೆಸೆಯುತ
ಮೆಲ್ಲಗೆಲ್ಲ ಮಾಡುವ ಧ್ವಂಸ

ಸರಕಾರದಿಂದ ಭ್ರಷ್ಟಾಚಾರಿಗಳ ಶೋಧನೆ? ಭ್ರಷ್ಟಾಚಾರ ನಿರ್ಮೂಲನೆಗಾಗಿ ಸರಕಾರಗಳು ಕೊಡುವ ಪ್ರತಿಜ್ಞೆ, ಮಾಡುವ ಪ್ರಯತ್ನಗಳು ಕಣ್ಣೊರೆಸುವ ತಂತ್ರ ಎಂದು ಕುಟುಕುತ್ತಾರೆ.

ಹುಚ್ಚು ಮುಂಡೆಯು ತನ್ನ ಕೂಸ ಕಂಕುಳಲ್ಲಿಟ್ಟು
ಹುಡುಕಿಯೇ ಹುಡುಕಿದೊಲು ಊರಲ್ಲೆಲ್ಲ
ನಮ್ಮ ಸರಕಾರ ಭ್ರಷ್ಟಚಾರ ಶೋಧನೆಗೆ
ತೊಡಗಿರುವುದು ಎಬ್ಬಿಸುತ ಗೌಜಿ-ಗುಲ್ಲ

ಪ್ರಾಮಾಣಿಕ ವ್ಯಕ್ತಿಯೊಬ್ಬನಿಗೆ ದೇಶೋದ್ಧಾರದ ಕುರಿತು ಆಸಕ್ತಿ ಉಳ್ಳವನಿಗೆ ಚುನಾವಣೆಯನ್ನು ನ್ಯಾಯ ಮಾರ್ಗದಲ್ಲಿ ಗೆಲ್ಲುವುದು; ಆಗದಿದ್ದರೆ ಸೋಲು ಒಪ್ಪಿಕೊಳ್ಳುವುದು ಮರ್ಯಾದೆಯ ಮಾರ್ಗವಾಗುತ್ತದೆ. ಇಲ್ಲಿ ದೇಶ ಸೇವೆ, ದೇಶದ ಪ್ರಗತಿ ಇಷ್ಟರ ಹೊರತಾಗಿ ಇನ್ನು ಯಾವ ಸ್ವಾರ್ಥವೂ ಇರುವುದಿಲ್ಲ. ಆದುದರಿಂದಲೇ ಅಂಥವನು ಚುನಾವಣೆಯಲ್ಲಿ ಇತರರಂತೆ ನಡೆದುಕೊಳ್ಳುವುದಿಲ್ಲ. ಹಣ ಚೆಲ್ಲುವುದಿಲ್ಲ; ಮುಖ್ಯವಾದ ಮಾತೆಂದರೆ ಹಣ ಚೆಲ್ಲುವುದು, ಹಣ ಬೆಳೆಯುವುದಕ್ಕೆ ಆಗಿರುತ್ತದೆ. 'ನಾಯಕನ ಬಿತ್ತಿಗೆ' ಚುಟುಕು ಕಟಕಿನ ನುಡಿಯಲ್ಲಿ ಕಿಡಿ ಹಾರಿಸುವ ಪರಿ ಇಲ್ಲಿದೆ.

ಮಣಗಟ್ಟಲೆ ಕಾಳೊಕ್ಕುವ ಭರವಸೆ
ಯಿಂದ ರೈತ ಬಿತ್ತುವ ಮುಳ್ಳು

ಹಾಗೆಯೇ ಚುನಾವಣೆಯ ಸುಕ್ಷೇತ್ರದಿ
ಸುರಿಯುವನ್ನೆ ನಾಯಕ ರೊಕ್ಕ ||

ಹದ್ದು ಎಂಬ ಚುಟುಕವೂ 'ರಣಹದ್ದು' ಹಾಗೂ ಹದ್ದುಗಳಿಗಿರುವ ವ್ಯತ್ಯಾಸವನ್ನು ಕಣ್ಣಿಗೆ ರಾಚುವಂತಿದೆ. ಹದ್ದುಗಳು ಅವು ದಿಕ್ಕಿಲ್ಲದ ಹೆಣಗಳಿಗೆ ಮುಗಿಬೀಳುತ್ತವೆ. ರಣಹದ್ದು ಹಾಗಲ್ಲ ಬದುಕು ಕೊಡುವ ಸಾರ್ವಜನಿಕ ಹಣವನ್ನೇ ನುಂಗಿ ಬದುಕುಗಳನ್ನು ಹೆಣವಾಗಿಸುತ್ತದೆ.

ದಿಕ್ಕಿಲ್ಲದ ಹೆಣ ದೃಷ್ಟಿಗೆ ಬಿದ್ದಿತೊ
ಮುಗಿಬೀಳುವವ್ವೆ ರಣಹದ್ದು
ಸಾರ್ವಜನಿಕ ಹಣ ಸೂರೆ ಮಾಡಲಿಕೆ
ಜಿಗಿದೇಳುವವ್ವೆ ರಣಹದ್ದು||

ಹೀಗೆ ಅಕಬರ ಅಲಿಯವರು ರಾಜಕೀಯ ವಿಡಂಬನಾ ಚುಟುಕುಗಳನ್ನು ರಚಿಸಿದ್ದು, ಭ್ರಷ್ಟ ಪರಿಸ್ಥಿತಿಗೆ ತಿಲಾಂಜಲಿ ಇಡಲು ನೋಡಿದ್ದಾರೆ. ಆದರೆ ಈ ದೇಶ ಎಷ್ಟು ಶತಮಾನ ಬೇಕಿದೆ ಒಳ್ಳೆಯ ಸ್ಥಿತಿಯನ್ನು ಪಡೆಯಲು, ಕಾಯಬೇಕಾಗಿದೆ. ಅಲಿಯವರ ರಚನೆಗಳಲ್ಲಿ ಸಾಮಾಜಿಕ ರಾಜಕೀಯ ಶೈಕ್ಷಣಿಕವೇ ಮೊದಲಾದ ಕ್ಷೇತ್ರಗಳಲ್ಲಿನ ವೈಲಕ್ಷಣಗಳ ಕುರಿತು ವಿಡಂಬಿಸಿದ್ದು ಚುಟುಕುಗಳ ಸಾಧ್ಯತೆಯ ಮೇಲೆ ಮತ್ತಷ್ಟು ಪ್ರಖರವಾಗಿ ಚೆಲ್ಲಿದ ಬೆಳಕಾಗಿದೆ ಎನ್ನಬಹುದು.

ಚುಟುಕು ಸಾಹಿತ್ಯದಲ್ಲಿ ಸಾಮಾಜಿಕ ಹಾಗೂ ರಾಜಕೀಯ ವಿಡಂಬನೆಯಲ್ಲಿ ತಮ್ಮದೇ ಛಾಪು ಮೂಡಿಸಿದ ಕವಿ ದೇ.ಜ.ಗೌಡರು ಅವರು ಹೊಸಗನ್ನಡ ಸಾಹಿತ್ಯದ ಅಗ್ರಮಾನ್ಯ ಕವಿಗಳು. ಇವರು ಗದ್ಯದಲ್ಲಿ ಸಾಹಿತ್ಯವನ್ನು ವಿಪುಲವಾಗಿ ರಚಿಸಿದ್ದಾರೆ. ಅಷ್ಟೇ ಚುಟುಕು ಸಾಹಿತ್ಯದಲ್ಲೂ ಕೃಷಿ ಮಾಡಿದ್ದಾರೆ. ದೇ.ಜ.ಗೌ ಚುಟುಕು ಸಾಹಿತ್ಯಕ್ಕೆ ಡಿ.ವಿ.ಜಿ. ದಿನಕರ ದೇಸಾಯಿ, ಪರ್ಷಿಯನ್ ಕವಿ ಉಮರ್ ಖಯಾಮನ ತಾತ್ವಿಕ ಚಿಂತನೆಗಳು ಇವರ ಚೌಪದಿಗಳಿಗೆ ಆದರ್ಶವೆಂದು ಕಂಡುಬರುತ್ತದೆ. ಇವರ ಚುಟುಕುಗಳು ರಾಜಕೀಯ ವಿಡಂಬನೆ ಬಹುಮಹತ್ವ ಪೂರ್ಣವಾಗಿ ಕಂಡುಬರುತ್ತವೆ. ಮಂತ್ರಿಗಳಾಗಲು ಮಾನದಂಡಗಳೇನು? ಇಂದು ಅನೇಕ ಕೊಲೆ, ಸುಲಿಗೆ ಭ್ರಷ್ಟ ಕೆಲಸಗಳಲ್ಲಿದ್ದವ ಮಂತ್ರಿಯಾಗುವನು. ಹಳ್ಳಿಯಲ್ಲಿ ಮೂರನು ಬಿಟ್ಟವನು ಊರಿಗೆ ದೊಡ್ಡವನು ಎನ್ನುವಂತೆ ರಾಜಕಾರಣಿಯಾದವನ ಅರ್ಹತೆಗಳ ಬಗ್ಗೆ ವ್ಯಂಗ್ಯವಾಗಿ ವಿಡಂಬಿಸಿದ್ದಾರೆ ದೇಜಗೌ.

ಸಿಗರೇಟು ಕೈಯಲ್ಲಿ ಬಾಯಲ್ಲಿ ಬಾಟಲಿಯು
ಬಗಲಲ್ಲಿ ಕಪ್ಪು ಹಣ ನಡೆನುಡಿಗಳಲಿ ಕಪಟ
ಹಗಲೆಲ್ಲ ಇಸ್ಪೀಟು ಇರುಳು ಸೂಳೆಯ ಸಂಗ
ಬಗೆಯಿದುವೆ ಮಂತ್ರಿಗಳ ಲೀಲೆ ಮಗಳೆ

ಹೀಗೆ ಶಾಸಕರಾಗಲು, ಸಚಿವರಾಗಲು ಇಂತಹ ಯೋಗ್ಯತೆಗಳೇ ಇಂದು ಮಾನದಂಡವಾಗಿವೆ ಎಂದು ಗೇಲಿ ಮಾಡಿದ್ದಾರೆ. ಇತ್ತೀಚೆಗಂತೂ ಸಚಿವರಾದವರ ಹೆಣ್ಣಿನ ವ್ಯಾಮೋಹದಲ್ಲಿ ಸಿಲುಕಿ ಅತ್ಯಾಚಾರವೆಸಗಿದ ಪ್ರಕರಣಗಳು ಬೆಳಕಿಗೆ ಬಂದಿರುವುದು ನೋಡಿದರೆ ದೇಜಗೌ ವ್ಯಂಗ್ಯವಾಡಿರುವುದರಲ್ಲಿ ಅರ್ಥ ವೈಶಿಷ್ಟ್ಯವಿದೆ.

ರಾಜಕಾರಣಿಗಳಾದವರ ಚರಿತ್ರೆ ಹೀಗೆ ಎಂದು ಹೇಳುವಂತಿಲ್ಲ. ಜಾತಿ ಜಾತಿಗಳ ಮಧ್ಯೆ ವಿಷ ಬೀಜ ಬಿತ್ತಿ ಲಂಚ ಪಡೆದ ವೈಖರಿ ಕುರಿತಾದ ಚುಟುಕೊಂದು ನೋಡಿದಾಗ

ರಾಜಕಾರಣ ತೊರೆದು ಜಾತಿ ಕಾರಣ ಪೊರೆದು
ಪೈಜೆಯಿಂ ಬಡಜನರ ಸುಲಿವುತ್ತ ಕೇಳ್ಮಗಳೆ
ಪೂಜಿಸುತೆ ಶಾಸಕರ ಲಂಚ ನೈವೇದ್ಯದಿಂ
ಮೋಜನಿಂ ಬಾಳುವನು ಭಂಡಮಂತ್ರಿ

ಲಂಚ ಶಾಸಕರ ಮೊದಲನೇ ಸ್ಥಾನ. ಲಂಚ ರುಷುವತ್ತುಗಳಿಗೆ ಬಾಯ್ಬಿಟ್ಟ ರಾಜಕಾರಣಿಗಳಿಗೆ ಭದ್ರತೆ ಬೇಕೇಬೇಕು ಎಂದು ವ್ಯಂಗ್ಯವಾಡಿದ ಚುಟುಕುವಿನಲ್ಲಿ

ಪೋಲೀಸು ಪೇದೆಗಳ ರಕ್ಷೆಯಲಿ ಹಿರಿ ಸಚಿವ
ಲೀಲೆಯಲಿ ಸುಲಿಯುತಿಹ ಹಣದ ಗಮ್ಮತ್ತಿನಲಿ
ಶೀಲಹೃತ ರಂಚರತ ಕೊಂಡೆಯರ ಮೇಲದಲಿ
ನಾಲಗೆಯ ಲಂಬಿಪನು ಕೇಳು ಮಗಳೆ

ಭ್ರಷ್ಟಾಚಾರಗಳ ಸುರಿಮಳೆಯಲ್ಲಿ ಮಿಂದ ರಾಜಕಾರಣಿಗಳು ಮಾಡುವ ಕೆಲಸ ಅಂತಿಂಥದ್ದಲ್ಲ ಎಂದು ಹೇಳುವ ಈ ಚುಟುಕದಲ್ಲಿ

ಹಚ್ಚುವರು ಬೆಣ್ಣೆಯನು ನೆಕ್ಕುವರು ಬೂಟುಗಳ
ಚುಚ್ಚುವರು ಚಾರಡಿಯನು ಇಕ್ಕುವರು ಬೋಜನವ
ಮುಚ್ಚುವರು ಕಪಟವನು ಮೆಕ್ಕುವರು ಸ್ವಾರ್ಥವನು
ನೆಚ್ಚದಿರು ಮಳ್ಳಿಗಳ ಕೇಳು ಮಗಳೆ

ದೇಶವು ಅಭಿವೃದ್ಧಿಯತ್ತ ಸಾಗಲು ಖಾಕಿ, ಕಾವಿ, ಖಾದಿ ಇವು ಮೂರು ಭದ್ರವಾಗಿ ನ್ಯಾಯಪರತೆಯಿಂದ ಸಾಗಿದಾಗ ಮಾತ್ರ ಸಾಧ್ಯ. ರಾಜಕಾರಣಿಗಳು ದಿಕ್ಕು ತಪ್ಪಿದಾಗ ಸ್ವಾಮಿಗಳು ತಿದ್ದಬೇಕು. ಆದರೆ ಸ್ವಾಮಿಗಳ ಆಶ್ರಯದಲ್ಲಿ ರಾಜಕಾರಣಿಗಳು ಭ್ರಷ್ಟತೆಯಲ್ಲಿ ಮುಳುಗಿದಾಗ ಬೇಲಿಯೇ ಎದ್ದು ಹೊಲ ಮೇದಂತೆ ಎನ್ನುವುದು ಇಲ್ಲೊಂದು ವಿಡಂಬನಾ ಚುಟುಕು

ದೊರೆ ಪುರೋಹಿತರಿಬ್ಬರೂ ಸೇರಿ ಕೊಳ್ಳೆ ಹೊಡೆ
ದರು ಹಿಂದೆ ದೇಶವನು ರಾಜಕಾರಣಿಯೀಗ
ಬರಿದು ಬಾಚುತಲಿಹನು ಕಾವಿಧಾರಿಗಳೊಡನೆ
ಹರಿಹಂಚಿ ಕೊಳುತಿಹರು ಕೇಳು ಮಗಳೆ

ಹಿಂದಿನ ಕಾಲದಲ್ಲಿ ಕೆಲವೇ ಕೆಲವು ವರ್ಣದವರು ದೇಶವನ್ನು ಕೊಳ್ಳೆ ಹೊಡೆದದ್ದು ಅದೇ ಹೆಸರಿನಲ್ಲಿ ಇಂದು ರಾಜಕಾರಣಿಗಳು ಸಾಧುಸಂತರು ಲೂಟಿ ಮಾಡುತ್ತಾರೆ ಎಂದು ಗೇಲಿ ಮಾಡಿರುವುದು ನೋಡಿದರೆ ಇದಕ್ಕಿಂತ ವಿಡಂಬನಾತ್ಮಕ ಚುಟುಕು ಮತ್ತೊಂದು ಬೇಕಾಗಿಲ್ಲ.

ದೇಜಗೌರವರ ರಾಜಕೀಯ ವಿಡಂಬನೆಯುಳ್ಳ ಚುಟುಕುಗಳೆಂದರೆ

ರಾಜಕೀಯದ ಮೂಲ ಹಿಂಸೆ ಭ್ರಷ್ಟಾಚಾರ
ಮೂಜಗವೆ ನಡುಗುತಿದೆ ರಾಕ್ಷಸರ ಮುಷ್ಟಿಯಲಿ
ಸಾಜ ಸುತೆ ತಂದೆ ಮಗ ಗುರು ಶಿಷ್ಯರೆಂಬೆಣಿಕೆ
ರಾಜಕೀಯಕಿರದದೆ ಪಾಪಕೂಪ

ಇನ್ನೊಂದರಲ್ಲಿ ದೇಶ ಕಟ್ಟುವ ಜನರು ವಾಸಿಪರು ಗುಡಿಸಲೊಳು

ದೇಶ ತಿನ್ನುವ ಜನರು ಮೆರೆವರರಮನೆಯೊಳಗೆ
ಮೋಸ ಸುಲಿಗೆಗಳಿಂದ ಸಿರಿವಂತರೇಳ್ಗೆದಿಟ
ರಾಶಿಧನ ಹೂಳುವರು ಕೇಳು ಮಗಳೆ
ಹಾಗೂ ಸಜ್ಜನರ ಶಿಕ್ಷಿಸುತ ದುರ್ಜನರ ರಕ್ಷಿಸುತ
ಲಜ್ಜೆ ತೊರೆದಧಮ ಸರ್ವಾಧಿಕಾರದಿ ಸೊಕ್ಕೆ
ಬಿಜ್ಜುಗೆಣೆಯಹ ಮಂತ್ರಿ ನೆಹರು ಮಗಲಾದಡೆಯು
ಚೊಜ್ಜ ತಪ್ಪುವುದಿಲ್ಲ ಕೇಳು ಮಗಳೆ

ಚುಟುಕು ಚಕ್ರವರ್ತಿ ಎಂದೇ. ಖ್ಯಾತರಾದ ದುಂಡಿರಾಜ್ ರವರು ಹಾಸ್ಯ ವಿಡಂಬನೆ, ರಾಜಕೀಯ ಚಿಂತನೆಯಲ್ಲಿ ಸಿದ್ಧಹಸ್ತರು. ಅವರ 'ಹನಿಖಜಾನೆ' ಸಮಗ್ರ ಚುಟುಕು ಸಂಕಲನದಲ್ಲಿ ಸಾವಿರಾರು ಚುಟುಕುಗಳು ಅರ್ಥವಂತಿಕೆಯಿಂದ ಕೂಡಿರುವಂಥವು. ಇತ್ತೀಚಿಗಂತೂ ಪತ್ರಿಕೆಯಲ್ಲಿ ರಾಜಕಾರಣಿಗಳ ಜೀವನವನ್ನು ಚುಟುಕಾಗಿ ಗದ್ಯರೂಪದಲ್ಲಿ ಬರೆಯುತ್ತಾ ಅನೇಕ ಚುಟುಕುಗಳನ್ನು ಈ ನಾಡಿಗೆ ಪರಿಚಯಿಸುತ್ತಾರೆ. ಆಯಾ ಸಂದರ್ಭಕ್ಕೆ ತಕ್ಕಂತೆ ರಾಜಕೀಯ ಚಿತ್ರಣಗಳನ್ನು ವಿಡಂಬಿಸುವ ಸಾಹಿತಿಗಳು ಇವರ ಬರವಣಿಗೆಯಲ್ಲಿ ಕಾಕು, ವ್ಯಂಗ್ಯ, ವಿಡಂಬನೆ, ಹಾಸ್ಯ, ವಿವೇಕ, ಶಬ್ದ ಚಮತ್ಕಾರ, ಸಂಕ್ಷಿಪ್ತತೆ, ಸರಳತೆ ಕಂಡುಬರುತ್ತವೆ. ಇವರ 'ಪಂಚ್ ' ಸಮಾಜ ಜಾಗೃತಿ ಮೂಡಿಸುವಲ್ಲಿ ಹೆಚ್ಚು ಪಾತ್ರವಹಿಸುತ್ತವೆ. ಇವರದೇ ಆದ ರಾಜಕೀಯ ಚಿತ್ರಣದ ಚುಟುಕುಗಳಲ್ಲಿ

ಕೊಡು ದೇವರೆ
ವರ
ಪೊಳ್ಳು ಭರವಸೆ
ನೀಡದಂಥ
ಆಡದೇ ಮಾಡುವಂಥ
ಸಚಿ-ವರ

'ಸಚಿವರ' ಎನ್ನುವಲ್ಲಿ ವರ ಬಿಡಿಸಿ ಹೇಳುವಲ್ಲಿ ಒಂದು ಔನತ್ಯವಿದೆ. ಆದರೆ ರಾಜಕಾರಣಿಗಳ 'ವರ' ನೀಡುವ ಭರವಸೆಯ ಪ್ರತೀಕವಾಗಿದೆ. ಹಳ್ಳಿಗಳಲ್ಲಿ ರಾಜಕೀಯ ಎಂದರೆ ಹುಚ್ಚಾಟವಾಗಿದೆ. ಇತ್ತೀಚೆಗಂತೂ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಅನೇಕ ಬಣಗಳ ಮಧ್ಯೆ ಜಗಳವಾಡಿ ಮೇವಿನ ಬಣವಿಗಳು ಸುಡುವುದನ್ನು ಬಣಗಳ ಪ್ರತಿಮೆಗಳ ಮೂಲಕ ವ್ಯಂಗ್ಯವಾಡಿದ ರೀತಿ ನೋಡಿದಾಗ ಫಲಿತಾಂಶ ಎನ್ನುವ ಚುಟುಕದಲ್ಲಿ

ಎಲ್ಲರಿಗೂ ಕುತೂಹಲವಿತ್ತು
ಯಾರು ಗೆಲ್ಲಬಹುದು?
ಪಟೇಲರ ಬಣವೆ?
ಗೌಡರ ಬಣವೆ?
ಮತದಾರ ಗುಟ್ಟಾಗಿ
ಕಡ್ಡಿಗೀರಿದ ಸುಟ್ಟು
ಬೂದಿಯಾಯಿತು
ಎರಡು ಬಣವೆ!

ಭಿಕ್ಷಾಟನೆಯಲ್ಲಿ ಎರಡು ವಿಧ ಒಂದು ಹಸಿವಿನ ತೃಪ್ತಿಗೋಸ್ಕರ ಭಿಕ್ಷೆ, ಇನ್ನೊಂದು ಮತ ಪಡೆಯಲು, ಭಿಕ್ಷೆ. ಹಸಿವಿನಲ್ಲಿ ಜೀವನ ಇದೆ. ಮತ ಭಿಕ್ಷೆಯಲ್ಲಿ ಕೊಳ್ಳೆ ಸುಲಿಗೆಗಳ ದೊಂಬರಾಟವಿದೆ. ಯಾವತ್ತು ರಾಜಕಾರಣಿಗಳು ನಿಜ ಹೇಳದೇ ಸುಳ್ಳು ಭರವಸೆ ನೀಡಿ 'ಮತ' ಭಿಕ್ಷಾಟನೆ ಮಾಡುತ್ತಾರೆ.

ಕಣ್ಣಿಲ್ಲ, ಕಾಲಿಲ್ಲ
ಎಂದು ಸತ್ಯ ಹೇಳಿ
ಬೇಡುವುದು
ಭಿಕ್ಷಾಟನೆ
ಸಾವಿರ ಸುಳ್ಳು ಹೇಳಿ
ಮತ ಯಾಚಿಸುವುದು
ಚುನಾವಣೆ

ಚುನಾವಣೆ ಅಂದರೆ ಹೀಗೆಯೇ. ಮತ ಪಡೆಯಲು ಏನೆಲ್ಲ ಕಸರತ್ತು ನಡೆಸುತ್ತಾರೆ. ಹಣ, ಹೆಂಡ, ಆಮಿಷ ಇವೆಲ್ಲಕ್ಕೂ ಮೀರಿದ್ದು ಜಾತಿ ವ್ಯವಸ್ಥೆ.

ಚುನಾವಣೆಯಲ್ಲಿ ಈಗ
ತತ್ವಕ್ಕಿಂತ
ಜಾತಿಗೆ ಮಹತ್ವ.
ನಮ್ಮದು ಜಗತ್ತಿನಲ್ಲೇ
ಅತೀ ದೊಡ್ಡ
ಪ್ರಜಾಪ್ರಭುತ್ವ!

ಅಂತೂ ಜಾತಿಯ ಆಧಾರದಲ್ಲಿ ಗೆದ್ದರೂ ಒಂದೇ ಪಕ್ಷದಲ್ಲಿರಲು ಆಗುವುದಿಲ್ಲ ರಾಜಕಾರಣಿಗಳಿಗೆ. ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ, ಹರಿದಾಡುವ ರಾಜಕಾರಣಿಗಳಿಗೆ ಎಲ್ಲಿದ್ದರೂ ಅಧಿಕಾರದ ಗದ್ದುಗೆ ಬೇಕೇ ಬೇಕು ಎನ್ನುವುದನ್ನು ಬಹು ಸೊಗಸಾಗಿ ವ್ಯಂಗ್ಯವಾಡಿದ್ದಾರೆ ಡುಂಡಿರಾಜ್ ರವರು.

ಕಾಂಗ್ರೆಸ್ಸಿನಲ್ಲಾದರೂ ಇರು
ಭಾಜಪದಲ್ಲಾದರೂ ಇರು
ದಳದಲ್ಲಾದರೂ ಇರು
ಎಂದೆಂದಿಗೂ ನೀ
ಸಚಿವನಾಗಿರು!

ಅಧಿಕಾರದ ವ್ಯಾಮೋಹದಲ್ಲಿರುವವರಿಗೆ ನಾಡಾಭಿಮಾನ ಬರುವುದಾದರೂ ಹೇಗೆ? ಕುವೆಂಪುರವರು ಹೇಳುವಂತೆ

ಎಲ್ಲಾದರೂ ಇರು
ಎಂತಾದರೂ ಇರು
ಎಂದೆಂದಿಗೂ ನೀ
ಕನ್ನಡವಾಗಿರು
ಕನ್ನಡವೇ ಸತ್ಯ
ಕನ್ನಡವೇ ನಿತ್ಯ!

ಎನ್ನುವ ಮಾತಲ್ಲಿ? ಡುಂಡಿರಾಜ್ ವಿಡಂಭಿಸಿದ ಈ ರಾಜಕಾರಣಿ ಚಿತ್ರಣದಲ್ಲಿ ಯೋಚಿಸಬೇಕಾಗಿದೆ. ರಾಜಕಾರಣಿಗಳ ಚಿತ್ರಣವನ್ನೇ ಜಾಲಾಡಿದವರು. ಮೂಲತಃ ಬ್ಯಾಂಕಿನ ಅಧಿಕಾರಿಗಳಾದ ಡುಂಡಿರಾಜ್ ಅವರಿಗೆ ಭ್ರಷ್ಟ ರಾಜಕೀಯದ ಸುಳುವು ಸಿಕ್ಕಾಗ ಇಂತಹ ಕವಿತೆ ಮೂಡಿ ಬರಲು ಸಾಧ್ಯವಾದೀತು.

ವಿಧಾನ ಸಭೆ ಮತ್ತು ಲೋಕಸಭೆಯಲ್ಲಿ ನಡೆಯುವ ಕಲಾಪಗಳನ್ನು ಗಂಡ-ಹೆಂಡತಿ ಜಗಳವಾಡುವುದಕ್ಕೆ ರೂಪಕವಾಗಿ ಹೋಲಿಸಿದ್ದಾರೆ.

ಗಂಡ ಹೆಂಡತಿ
ನಗ್ತಿರಬೇಕು
ಮನೆಗೆ ಅದೇ ಶೋಭೆ
ಜಗಳವಾಡಿದರೆ
ಮನೆಯಾಗುತ್ತೆ
ಮಿನಿ ಲೋಕಸಭೆ

ರಾಜಕಾರಣಿಗಳು ಭಾಷಣಕ್ಕೆ ನಿಂತರೆ ಬಾಯಿ ವಾಸನೆ ಎನ್ನುವುದನ್ನು ಸೂಚ್ಯವಾಗಿ ತಿಳಿಸಿದ್ದಾರೆ.

ಅಧ್ಯಾಪಕರು
ಭಾಷಣ ನಿಲ್ಲಿಸಲು
ಹೊಡೆಯಬೇಕು
ಬೆಲ್ಲು
ರಾಜಕಾರಣಿಗಳು
ನಿಲ್ಲಿಸಲು
ಕೊಳೆತ ಮೊಟ್ಟೆ ಕಲ್ಲು

'ಸೂಚನೆ'

ಒಂದೆ ಸಮನೆ
ನುಡಿಸುತ್ತಿದ್ದಾನೆ
ಪುಢಾರಿ
ಭರವಸೆ ಬಾನ್ಸುರಿ
ಆಶ್ವಾಸನೆ ವೀಣೆ
ಬರುತ್ತಿದೆ
ಚುನಾವಣೆ

ಇನ್ನೊಂದರಲ್ಲಿ

'ತತ್ವ'

ಎಲ್ಲ ನಾಯಕರದ್ದು
ಒಂದೇ ಸಿದ್ದಾಂತ

ಒಂದೇ ತತ್ವ
ಒಮ್ಮೆ ಸಿಕ್ಕರೆ
ಬಿಡಲೇಬಾರದು
ನಾಯಕತ್ವ

ಹೀಗೆ ರಾಜಕಾರಣಿಗಳು ಅಧಿಕಾರ, ಅಂತಸ್ತು, ಐಶ್ವರ್ಯದ ಬಲೆಗೆ ಬಿದ್ದು ತಮ್ಮ ತತ್ವ ಸಿದ್ಧಾಂತಕ್ಕೆ ತಿಲಾಂಜಲಿ ನೀಡಿದ್ದಾರೆ. ಇಂತಹ ಅನೇಕ ಚುಟುಕುಗಳು ಹನಿ ಖಜಾನೆಯಲ್ಲಿದ್ದರೂ ಸಂಶೋಧನಾ ವ್ಯಾಪ್ತಿಗೆ ಸೀಮಿತಗೊಳಿಸಿ ಕೆಲವನ್ನು ಮಾತ್ರ ಇಲ್ಲಿ ಚರ್ಚಿಸಲು ಸಾಧ್ಯವಾಗಿದೆ.

ಚುಟುಕು ಕವಿಗಳಾಗಲಿ, ಇತರೆ ಸಾಹಿತಿಗಳಾಗಲಿ ಬರೆಯಬೇಕು ಎಂದು ಹಂಬಲಕ್ಕಾಗಿ ಬರೆಯಬೇಕಾಗಿಲ್ಲ! ಬರೆಯಲೇ ಬೇಕಾದ ಅನಿವಾರ್ಯತೆಯ ತುಡಿತ ಉಂಟಾದಾಗ ಬರೆಯುವುದು ಅನಿವಾರ್ಯ. 'ಶಿವರಾಮ ಕಾರಂತ'ರ ಮಾತಿನಲ್ಲಿ ಹೇಳುವುದಾದರೆ 'ಅನುಭವವೂ ಸವಿಯಲ್ಲ! ಅದರ ನೆನಪೇ ಸವಿಯು! ಇದು ಕಾವ್ಯತತ್ವವನ್ನು ಸಾರುವ ನುಡಿಮುತ್ತು! ಎನ್ನುವುದನ್ನು ನೋಡಿದರೆ ಒಂದು ಬರಹದ ಹಿಂದೆ ನೂರು ಚಿಂತನೆ ಇರಬೇಕು. ಇಂತಹ ಚಿಂತನೆಗಳು ಸಮಾಜ ಜಾಗೃತಿ ಮೂಡಿಸುವಂತಿರಬೇಕು. ಆ ನಿಟ್ಟಿನಲ್ಲಿ ಎಚ್.ಎ.ಭಿಕ್ಷಾವರ್ತಿ ಮಠ ಅವರದು ಸಾಮಾಜಿಕ ಚಿಂತನೆಯನ್ನೊಳಗೊಂಡ ಚುಟುಕುಗಳು ವ್ಯಂಗ್ಯ ವಿಡಂಬನೆಯ ಮೊನಚಿನಿಂದ ನಮ್ಮ ಸಾಂಸಾರಿಕ, ಸಾಮಾಜಿಕ, ನಾಗರೀಕ ವಸ್ತು ಸ್ಥಿತಿಯನ್ನು ಹಿಡಿದಿಡುತ್ತವೆ. ರಾಜಕಾರಣಿಗಳ ಕೈಯಲ್ಲಿ ಸಿಕ್ಕ ದೇಶ ಮೂರಾಭಟ್ಟೆಯಾಗಿದೆ. ಬ್ರಿಟೀಶರಿಂದ ನಮ್ಮ ದೇಶವನ್ನು ಬಿಡಿಸಿಕೊಳ್ಳಬೇಕಾದರೆ ಗಾಂಧೀಜಿಯಾದಿಯಾಗಿ ಹೋರಾಟ ಮಾಡಿದ್ದು ಸ್ಮರಣೀಯ. ಆದರೆ ಇಂದು ರಾಜಕಾರಣಿಗಳು ದೇಶವನ್ನು ಹರಾಜಿಗೆ ಇಡಲು ಹಿಂದು-ಮುಂದು ನೋಡುವುದಿಲ್ಲ ಎನ್ನುವ ವ್ಯಂಗ್ಯವಾದ ನುಡಿ 'ಮೀಸಲು' ಚುಟುಕುವಿನಲ್ಲಿದೆ.

ಹುದ್ದೆಗಳ ಮುದ್ದೆಗಳು
ಅವರಿಗಿಷ್ಟು ಇವರಿಗಿಷ್ಟು
ಕೂಗಾಡಿದವರಿಗಷ್ಟು ಮೀಸಲು
ಹೋಗಲಿ ಬಿಡಿಸ್ವಾಮಿ
ನಮ್ಮ ದೇಶವೇ ಈಗ
ಬಹುರಾಷ್ಟ್ರೀಯ ಕಂಪನಿಗೆ ಮೀಸಲು

ಇನ್ನೊಂದು 'ಕರೆ' ಎನ್ನುವ ಚುಟುಕದಲ್ಲಿ

ಅಂದು ಒಂದು ಕಂಪನಿ
ಸರಕಾರವನ್ನು ಓಡಿಸಲು
ನಮ್ಮವರು ಹೋರಾಡಿದರು

ಇಂದು ನೂರಾರು ಕಂಪನಿ
ಸರಕಾರಗಳನ್ನು ಬನ್ನಿ ಬನ್ನಿ
ಎಂದು ಇವರು ಕರೆದರು

ಹೀಗೆ ಭ್ರಷ್ಟಚಾರ ಇರುವವರೆಗೂ ದೇಶೀಯತೆಗೆ ಬೆಲೆಯಿಲ್ಲದಾಗಿದೆ. ಸ್ವದೇಶಿ ಚಳುವಳಿ ಗೊತ್ತಿದ್ದರೂ ಇಂದು ಸ್ವೀಕರಿಸುವವರು ಇಲ್ಲದಂತಾಗಿದೆ ಎನ್ನುವುದು ಕವಿಯ ಆಶಯ. ಸ್ವಾತಂತ್ರ್ಯ ಸಿಗುವ ಸಂದರ್ಭದಲ್ಲಿ ಇಂತಹ ಅನೇಕ ಚುಟುಕು ರಚನೆಯಾಗಿದ್ದು ವಿಶೇಷ. ಇಂದು ನಾಡಿನ ಪರಿಸ್ಥಿತಿಯನ್ನು ಕುರಿತಾಗಿ 'ಪರಿಣಾಮದಲ್ಲಿ'

ಉದಾರೀಕರಣ
ಖಾಸಗೀಕರಣ
ಜಾಗತೀಕರಣ
ವ್ಯಾಪಾರೀಕರಣದ
ವಿಷ, ವಿಕಿರಣ
ಪರಿಣಾಮ
ನಮ್ಮ ನಾಡು ನುಡಿ
ಸಂಸ್ಕೃತಿಯ ಹರಣ

ಗಾಂಧೀಜಿಯವರು ದೇಶದ ಸುಸ್ಥಿತಿಗೋಸ್ಕರ ರಾಮರಾಜ್ಯದ ಕನಸು ಕಂಡವರು. ಅಂದು ಗಾಂಧೀಜಿ ಸತ್ಯಾಗ್ರಹಕ್ಕೆ ಕುಳಿತುಕೊಳ್ಳುವರೆಂದರೆ ಬ್ರಿಟೀಷರಿಗೆ ಭಯ. ಅಷ್ಟು ಜನ ಬೆಂಬಲ ಮಹಾತ್ಮ ಗಾಂಧೀಜಿಗಿತ್ತು. ಆದರೆ ಅದೇ ಗಾಂಧೀಜಿಯವರು ಇಂತಹ ಭ್ರಷ್ಟಾಚಾರ ನಡೆಯುವ ಸಂದರ್ಭದಲ್ಲಿ ಇದ್ದಿದ್ದರೆ ಏನಾಗುತ್ತಿತ್ತು? ಎನ್ನುವುದನ್ನು ಚುನಾವಣಾ ಎನ್ನುವ ಚುಟುಕದಲ್ಲಿ ವಿಡಂಬನಾತ್ಮಕವಾಗಿ ತಿಳಿಸಿದ್ದಾರೆ ಎಚ್.ಎ.ಭಿ.ಅವರು.

ಇಂದು ಗಾಂಧೀಜಿ
ಎದುರಿಸಿದರೆ ಪಂಚಾಯಿತಿ
ಚುನಾವಣೆ
ಠೇವಣಿ ಕಳೆದುಕೊಳ್ಳುತ್ತಾರೆ
ದೇವರಾಣೆ

ಮತ್ತೊಂದರಲ್ಲಿ

ಮತ ಬೇಡುವವರ
ಆಸ್ತಿ-ಪಾಸ್ತಿ

ಕೋಟಿ ಕೋಟಿ
ಮತದಾನಿಗಳ ಅಸ್ತಿ
ಹರಿದ ಲಂಗೋಟಿ

ಕವಯಿತ್ರಿಯರಲ್ಲಿ ಪ್ರಸಿದ್ಧರಾದ ಸಾಹಿತಿ ಶ್ರೀಮತಿ, ಬಿ.ಟಿ.ಲಲಿತಾನಾಯ್ಕ ಅವರು ಸ್ವತಃ ರಾಜಕಾರಣಿಯಾಗಿ, ಸಾಹಿತಿಯಾಗಿ, ಭ್ರಷ್ಟ ವ್ಯವಸ್ಥೆಯ ವಿರುದ್ಧ ಸಿಡಿದೆದ್ದ ಲೇಖಕಿ. ಇವರ ಬರಹದಲ್ಲಿ ಮೊನಚಾದ ಚಾಟಿ ಏಟುಗಳ ಬರಹಗಳಿವೆ. ಪ್ರಕೃತಿ ಪ್ರೇಮ ಲೇಖಕಿಯಲ್ಲಿ ಮೂಡಿ ಬಂದ ಬಗೆ ಇಲ್ಲಿದೆ.

ಏನು ಸೂರರೇ ಯವ್ವಾ
ಈ ಸರಕಾರದ ಮಂದಿ
ಸಾಲು ಮರಗಳನೆಲ್ಲಾ ಸಪಾಟು ಮಾಡಿ
ನೆಲದವ್ವನ ಮಾಡಿ ಬಿಟ್ಟರು ಬಂಜೆ

ಎನ್ನುವಲ್ಲಿ ಈ ರಾಜಕಾರಣಿಗಳ ಕೈಯಲ್ಲಿ ಸಿಕ್ಕಿದ್ದೆಲ್ಲಾ ಬರಿದು. ಇವರು ತಿರುಗಾಡಿದ ಜಾಗದಲ್ಲಿ ಹುಲ್ಲುಹುಟ್ಟುವುದಿಲ್ಲವಂತೆ. ಇತ್ತೀಚೆಗಂತೂ ಚುನಾವಣೆ ಎಂದರೆ ಹೆಂಡದ ಸವಿ ತೋರಿಸಿ ಓಟು ಹಾಕಿಸಿಕೊಳ್ಳುವ ಪರಿ.

ಅಣ್ಣಾ ಅಕ್ಕಗಳಿರಾ
ದಯವಿಟ್ಟು ಕೊಡಿ ನಿಮ್ಮ ಓಟು
ಹಾಗಾದರೆ ಕೈಗಿಡು
ಗರಿಗರಿ ನೋಟು
ಮೇಲಷ್ಟು ಸಾರಾಯಿ ಪಾಕೆಟು!

ಹಣ-ಹೆಂಡ-ಸಾರಾಯಿಗಳು ಇಂದಿನ ಫೇವರೇಟ್‌ಗಳಾಗಿವೆ ಎಂದು ವ್ಯಂಗ್ಯವಾಡಿದ ಲಲತಾನಾಯ್ಕರು ಇಂದು ಖಯಾಲಿಯಾಗಿ ಬಿಟ್ಟಿದೆ ಎಂದು ವಿಡಂಬಿಸಿದ ಈ ಚುಟುಕು ಮಹತ್ವಪೂರ್ಣವೆನಿಸಿದೆ.

ಕಾಳುಕಡಿ ಬಣವೆಗಳ ನುಂಗಿ
ಮಾಡಿದರು ಬಡವರ ಬದುಕು ನಿಕಾಲಿ
ಮತ್ತೈದು ವರುಷಕೆ
ಮತದಾರರ ಬೆನ್ನೇರಿ
ಗವಾಕ್ಷಿಯಲಿ ತೂರಿ-ನಡಿಗೆಯಾಡಿದರು
ನಮಗಿದೊಂದು ಖಯಾಲಿ

ಬಿ.ಆರ್.ಲಕ್ಷ್ಮಣಗಾವ್ ಅವರು ಸ್ವತಂತ್ರ ಪಕ್ಷ ಅಧಿಕಾರಕ್ಕೆ ಬರಲು ಆಗುತ್ತಿಲ್ಲ ಎನ್ನುವುದನ್ನು ನೋಡಿದಾಗ

ಹಾವನ್ನು ಕೈಯಲ್ಲಿ ಹಿಡಿದ
ತಬ್ಬಿಬ್ಬು ಮಂಗ
ಕಾಂಗ್ರೆಸ್ ಬೆಂಬಲ ಪಡೆದ
ಸಂಯುಕ್ತ ರಂಗ.

ಯಾರಿಗೆ, ಯಾವಾಗ, ಯಾರು ಬೆಂಬಲ ಕೊಡುತ್ತಾರೆ ಎನ್ನುವುದೇ ಅನುಮಾನವಿದೆ. ಮುಖ್ಯಮಂತ್ರಿಯಾದವರಿಗೆ ಸಾಮಾನ್ಯ ಜನರ ನೋವು ನಲಿವುಗಳ ತಿಳುವಳಿಕೆ ಇರಬೇಕು. ಇಲ್ಲದಿದ್ದರೆ ಏನಾಗುತ್ತದೆ ಎನ್ನುವುದನ್ನು ಈ ಚುಟಕದಲ್ಲಿ ನೋಡಿದಾಗ

ಸತತ ಮಳೆಯ ದಾಳಿಗೆ
ಹಾಳಾಗಿವೆ ದಾರಿ
ಏನು ಮಾಡೋಣರೀ?!
ಅನ್ನುತ್ತಾರೆ ಸಿ.ಎಂ.
ವಿಮಾನವನ್ನೇರಿ

ರಾಜಕಾರಣಿಗಳು ನಿಷ್ಠೆಯಿಂದ ದುಡಿದರೆ ಈ ದೇಶದ ಅಭಿವೃದ್ಧಿ ಸಾಧ್ಯ ಎಂದು ಕುವೆಂಪುರವರು ರಾಜಕೀಯ ಕ್ಷೇತ್ರವನ್ನು ಕುರಿತಾಗಿ ಬರೆದ ಚಮತ್ಕಾರ ಚುಟುಕಿದು.

ನಮ್ಮ ನಾಡು ಸುಖದ ಬೀಡು
ನಿಷ್ಠೆಯಿಂದ ದುಡಿದರೆ
ಎಂದ ನಮ್ಮ ಮುಖ್ಯಮಂತ್ರಿ
ನಿಷ್ಠೆಯಿಂದ ದುಡಿದರೆ?

ಎಂದು ಪ್ರಶ್ನಿಸಿದ್ದಾರೆ.

ಇನ್ನು ಚದುರಂಗರು ಈ ದೇಶದ ರಾಜಕಾರಣಿಗಳ ಜೀವನ ಜಾಲಾಡಿದ ಪ್ರಸಂಗ ಇಲ್ಲಿದೆ. ಮಹಾತ್ಮಾಗಾಂಧಿಯೆಂದರೆ ಒಂದು ಕಾಲದಲ್ಲಿದ್ದ ಬೆಲೆ ಈಗ ಸಿಕ್ಕೀತೆ? ಈ ದೇಶದಲ್ಲಿ ಗಾಂಧಿಗೆ ಅವರ ಸಂದೇಶಕ್ಕೆ ಬೆಲೆಯೇ ಇಲ್ಲದಂತಾಗಿದೆ. ಅದರಲ್ಲೂ ಇತ್ತೀಚಿನ ತಲೆಮಾರಿನವರಿಗೆ ಗಾಂಧೀಜಿ ಎಂದರೆ ಒಂದು ದಂತಕತೆಯಾಗಿದೆ. ಇದು ದೇಶದ ದುರಂತ ಜಗತ್ತಿಗೆ ಮಾದರಿಯಾದುದನ್ನು ಇಲ್ಲಿ ಉಳಿಸಿಕೊಳ್ಳದೆ ದೂರಕ್ಕೆ, ಬಹುದೂರಕ್ಕೆ ಅಟ್ಟಿಬಿಡುವುದು ಈ ದೇಶದ ಅದರಲ್ಲೂ ಭ್ರಷ್ಟ ರಾಜಕಾರಣಿಗಳ ಸಂಸ್ಕೃತಿಯಾಗಿಬಿಟ್ಟಿದೆ ಎಂದು ಅಣಕವಾಡುವ ಈ ಕಾವ್ಯದಲ್ಲಿ

ಚೀನಾ ಜಪಾನಿಗೆ
ಬುದ್ಧ

ರವಾನೆ

ಗಾಂಧಿಗು ಸಂಭವ?

ಗುಮಾನಿ!

ಎಂದು ವ್ಯಂಗ್ಯವಾಡಿದ್ದಾರೆ.

ಡಿ.ವಿ.ಬಡಿಗೇರ ಅವರು ರಾಜಕಾರಣಿಗಳು. ಕುರ್ಚಿಗೆ ಅಂಟಿಕೊಂಡಿದ್ದಾರೆ ಎಂಬ ಹಾಸ್ಯಭರಿತ ವ್ಯಂಗ್ಯ ಚುಟುಕ ಇಲ್ಲಿದೆ.

ಈಗಿನ ರಾಜಕೀಯದಾಗ

ಅಂಗೀಗಿಂತ ಬಕ್ಕಣಾ

ಉದ್ದ ಆಗ್ಯಾವು

ಕೃತಿಗಿಂತ ಮಾತು

ಜಾಸ್ತಿ ಆಗ್ಯಾವು

ಕುಂಡೀಗಿಂತ ಕುರ್ಚಿ

ದೊಡ್ಡವು ಆಗ್ಯಾವು!

ಜರಗನಹಳ್ಳಿ ಶಿವಶಂಕರ್ ಅವರು ರಾಜಕಾರಣಿಗಳನ್ನು ಸೊಳ್ಳೆಗಳಿಗೆ ಹೋಲಿಸಿಕೊಂಡಾಗ

ಕೊಳಚೆ ಪ್ರದೇಶಗಳಿಗೆ

ದಂಡೆತ್ತಿ ಮುತ್ತಿಗೆ ಹಾಕುವುದು

ಹಗಲಲ್ಲಿ ನೊಣಗಳು

ರಾತ್ರಿಯಲ್ಲಿ ಸೊಳ್ಳೆಗಳು

ಚುನಾವಣಾ ಸಮಯದಲ್ಲಿ

ರಾಜಕಾರಣಿಗಳು

ಅಂದರೆ ರಾಜಕಾರಣಿಗಳು ಓಟು ಪಡೆಯುವಲ್ಲಿ ಹಣ, ಹೆಂಡ, ಸೀರೆ, ಹಗಲು ಹೊತ್ತಿನಲ್ಲಿ ಹಂಚಿದರೆ ಕಠಿಣ, ಆದರೆ ರಾತ್ರಿಯಲ್ಲಿ ತೊಂದರೆಯಿಲ್ಲ. ಇವರು ಓಣಿಯಲ್ಲಿ ಬಂದರೆ ಜನ ನಿದ್ರಾಹೀನ ಎನ್ನುವುದನ್ನು ಸೊಳ್ಳೆಗಳಿಗೆ ಪ್ರತೀಕವಾಗಿ ಹೋಲಿಸಿಕೊಂಡು ಬರೆದದ್ದು ಔಚಿತ್ಯವಿದೆ.

ಕನ್ನಡ ಸಾಹಿತ್ಯದ ಧೀಮಂತ ಕವಿ ಚನ್ನವೀರ ಕಣವಿಯವರು ಚುಟುಕಾಗಿ ವಿಡಂಬನೆ ಮಾಡಿರುವುದು ಹೆಚ್ಚಿದೆ. ಅವರ ಕಾವ್ಯದಲ್ಲಿ ಮೊನಚಾದ ಹರಿತವಿದೆ. ಈ ದೇಶದ ಪರಿಸ್ಥಿತಿ ಪರಿಸರ ವಿಮುಖವಾಗುವುದನ್ನು ಅವರ ಚುಟುಕದಲ್ಲಿ ರಾಜಕಾರಣಿಗಳು ಜಲಾವೃತವಾದ ಕೆರೆಯಲ್ಲಿ ಭವ್ಯವಾದಬಂಗಲೆಗಳನ್ನು ನಿರ್ಮಿಸಿಕೊಳ್ಳಲು ಅದರಲ್ಲಿರುವ ನೀರನ್ನೇ ಬರಿದಾಗಿಸಲು ಹೇಸುವುದಿಲ್ಲವಂತೆ. ಈ ಮುಂಚಿತವಾಗಿ

ನೋಡಿದ ಕೆರೆ ಇಂದು ಗೋರಿಗಳು ಎದ್ದಿರುವುದನ್ನು ವ್ಯಂಗ್ಯವಾಗಿ, ತುಂಬ ಸೊಗಸಾಗಿ ಚಿತ್ರಿಸಿದ್ದಾರೆ.

ಬತ್ತಿ ಹೋದ ಕೆರೆಯಲ್ಲಿ
ಬಂಗಲೆಗಳು ಎದ್ದು ಬಿಟ್ಟಿವೆ
ಜಲ ದೇವತೆಗೆ
ಎಷ್ಟೊಂದು ಗೋರಿಗಳು!

ಎಚ್ಚೆಸ್ಕೆಯವರು ಬಡವ ಶ್ರೀಮಂತರಿಗೆ ನಿಷ್ಠುರವಾಗದೆ. ಒಬ್ಬನಿಂದ ಹಣ, ಇನ್ನೊಬ್ಬನಿಂದ ಮತ ಪಡೆದು ಆಳುವ ನೀತಿಯನ್ನು ಟೀಕಿಸುವ ಪರಿ

ಧನಿಕನಿಂದ ಹಣ ಪಡೆದು ಬಡವನಿಂದ ಮತ ಪಡೆದು
ರಾಜಕಾರಣಿಯ ರೀತಿ
ಬಡವರಿಂದ ಧನಿಕರನು, ಧನಿಕನಿಂದ ಬಡವರನು
ರಕ್ಷಿಸುವುದವನ ನೀತಿ!

ಇವರ ನೀತಿ ಇಲ್ಲಿಗೇ ನಿಲ್ಲದೆ ನಮ್ಮಿಂದ ಮತ ಪಡೆದು ದಿನಭತ್ಯ, ಬಾಡಿಗೆ ಭತ್ಯ ತಿಂದು ತೇಗಿ ನೀರು ಕುಡಿದವರು ತೇಗಲೇಬೇಕಲ್ಲವೆ?

ನಮ್ಮ ರಾಜಕಾರಣಿಗಳು ಮಹಾಕದೀಮರು
ನಮ್ಮ ಮತವನು ಪಡೆದು ಗೆದ್ದ ಮೇಲೆ
ಶಾಸನ ಸಭೆಯಲಿ 'ಬಿಲ್ಲು' ಮಂಡಿಸಿಯೇ ತೀರುವರು
ಭಾರೀ ದಂಡವನ್ನೇ ತೆರಿಸಿಯಾರು.

ಈ ಹಿನ್ನೆಲೆಯಲ್ಲಿಯೇ ಮನುಷ್ಯ ಸರಳವಾಗಿ ಗಳಿಸುವ ಮಾರ್ಗವೆಂದರೆ ರಾಜಕಾರಣ ಎಂದು ಕಂಡುಕೊಂಡಿದ್ದಾನೆ. ಅದನ್ನು ಕುರಿತಾಗಿ

ಮಾತನಾಡಲೇನು ಇಲ್ಲದಾಗ ಮಾತಾಡಬಲ್ಲೆಯಾ?
ಮಾತಾಡಬೇಕಾದಾಗ ತೆಪ್ಪಗಿರಬಲ್ಲೆಯಾ?
ಹಾಗಾದರೆ ಹೋಗು
ರಾಜಕಾರಣಿಯಾಗು.

ಸಿದ್ದಯ್ಯ ಪುರಾಣಿಕರು -"ಏನಾದರೂ ಆಗು ನೀ ಮೊದಲು ಮಾನವನಾಗು" ಎಂದರೆ ಇಲ್ಲಿ ರಾಜಕಾರಣಿಯಾಗು ಎನ್ನುವ ವಿಚಾರ ಚರ್ಚಾಸ್ಪದವಾಗಿದೆ.

ಚುಟುಕು ಸಾಹಿತ್ಯ, ವ್ಯಂಗ್ಯ ವಿಡಂಬನೆ, ಕಟಕಿ, ಹಾಸ್ಯಕ್ಕೆ ಇಂಬುಕೊಟ್ಟಷ್ಟು ಮತ್ತಾವುದಕ್ಕೂ ನೀಡಿಲ್ಲವೆನ್ನಬಹುದು. ಇಂದಿನ ರಾಜಕಾರಣಿಗಳು ಮಾಡುವ ವ್ಯಭಿಚಾರಿ ವೃತ್ತಿ ಅಸಹನೀಯವಾದುದು.

ಒಟ್ಟಿನಲ್ಲಿ ಸೃಜನಶೀಲತೆ ಎನ್ನುವುದು ವೈವಿಧ್ಯಮಯ ಸಂಪತ್ತು. ಚುಟುಕು ಬರಹ ಎಂದರೆ ಭಾಷೆಯ ಸತ್ವಪೂರ್ಣ ಹಿಡಿತದ ಸಾಹಿತ್ಯ ಮಾಧ್ಯಮ. ಸತ್ಯವನ್ನು ಒರೆಗಲ್ಲಿಗೆ ಹಚ್ಚುವ ಪ್ರಮೇಯ ಇಲ್ಲಿ ಹೆಚ್ಚು. ಕಟ್ಟುಕತೆಗಿಂತಲೂ ಸತ್ಯ ಹೆಚ್ಚು ವಿಚಿತ್ರ ಆದರೆ. ಅಲ್ಲೇ ಇರುವುದು ಸ್ವಾರಸ್ಯ. ಸತ್ಯ ಎದುರಾದಾಗ ಅದನ್ನು ನಿರೀಕ್ಷಿಸದೇ ಇದ್ದಾಗ ಆಶ್ಚರ್ಯದಿಂದ ಉದ್ಗರಿಸುವುದು ಸಹಜ. ಸತ್ಯ ಎಲ್ಲರಿಗೂ, ಯಾವಾಗಲೂ ಗೋಚರಿಸುವುದಿಲ್ಲ. ಅಂತೆಯೇ ಕವಿ ಬೇಂದ್ರೆಯವರು "ನಿಜವ ಕಂಡವರಿಲ್ಲ, ನಿಜವ ಕಾಣುವಂತಿಲ್ಲ, ನಿಜವೇನು ಮಳಲ ಹುಡಿಗಿಂತ ಕೀಳೇ? ನಿಜವ ಕಂಡಿಹೆನೆಂಬ ಕಣ್ಣ ಜಂಬದ ಹುಂಬ! ಮಳಲ ಹುಡಿ ಗುಟ್ಟೇನು ಕಣ್ಣು ಕೂಳೇ? ಎಂದಿದ್ದಾರೆ. ಸಮಾಜದ ವಿಮರ್ಶೆ ಮಾಡಲು ಹಾಗೂ ಅದರ ಲೋಪದೋಷಗಳನ್ನು ನಿವಾರಿಸಲು ವಿಡಂಬನ ಸಾಹಿತ್ಯ ಒಂದು ಉಪಯುಕ್ತ ಸಾಧನ. ಹಾಗೆಯೇ ಅದು ಆತ್ಮ ವಿಮರ್ಶೆಯ ಉಪಕರಣ.

ಇಲ್ಲಿ ಚುಟುಕು ಸಾಹಿತ್ಯದಲ್ಲಿ ಸತ್ಯಾಂಶವನ್ನು ಹೊರತರುವುದು ಬಹುಮುಖ್ಯ ಉದ್ದೇಶ. ಯಾವುದೇ ವ್ಯಕ್ತಿಯು ದಾರಿ ತಪ್ಪಿದಾಗ ಅವರನ್ನು ಸರಿದಾರಿಗೆ ತರುವಲ್ಲಿ ಸಾಹಿತ್ಯವು ಆಶ್ರಯದಾಯಕ. ಹೀಗೆ ಕನ್ನಡ ಸಾಹಿತ್ಯದಲ್ಲಿ ಚುಟುಕು ಸಾಹಿತ್ಯ ಹಾಸ್ಯ, ವಿಡಂಬನೆ ವ್ಯಂಗ್ಯ ಮುಂತಾದ ಚಿತ್ರಣಗಳ ಕುರಿತು ರಚನೆಯಾದದ್ದು ಒಂದು ಕಾಲಘಟ್ಟದ ಸಾಂಸ್ಕೃತಿಕ ವಾತಾವರಣವನ್ನು ಚಿತ್ರಿಸುವಾಗ ರಾಜಕೀಯ ಚುಟುಕುಗಳ ಬಹುಮುಖ್ಯ ಪಾತ್ರವಹಿಸುತ್ತವೆ. ಅವುಗಳಲ್ಲಿ ವ್ಯಂಗ್ಯ ಕಟಕಿಗಳೇ ಹೆಚ್ಚಿರುತ್ತವೆ. ಅವು ರಾಜಕಾರಣಿಗಳಿಗೆ ಸಾಮಾಜಿಕ ಎಚ್ಚರವನ್ನು ನೀಡುತ್ತವೆ.

ಅಧ್ಯಾಯ ೬

ಜನಪದ ಸಾಹಿತ್ಯದಲ್ಲಿ ಚುಟುಕುಗಳು : ಸಾಮಾಜಿಕ ಪ್ರಜ್ಞೆ

೬

ಜನಪದ ಸಾಹಿತ್ಯದಲ್ಲಿ ಚುಟುಕುಗಳು : ಸಾಮಾಜಿಕ ಪ್ರಜ್ಞೆ

ಮಾನವನು ತನ್ನ ಭಾವನೆಯ ಅಭಿವ್ಯಕ್ತಿಗೆ ಭಾಷೆಯನ್ನು ಕರಗತ ಮಾಡಿಕೊಂಡೊಡನೆಯೇ ಅವನ ಜೀವನದ ಸುಖದುಃಖಗಳು ಶಬ್ಧರೂಪದಲ್ಲಿ ಮೈದೋರ ತೊಡಗಿವೆ. ಈ ರೀತಿ ಶಾಬ್ದಿಕವಾಗಿ ಹೊರಹೊಮ್ಮಿದ ಸಾಹಿತ್ಯ ಕ್ಷೇತ್ರದಲ್ಲಿ ಮೊದಲು ತಲೆಯೆತ್ತಿದುದು ಜಾನಪದ ಸಾಹಿತ್ಯ. ವೈಯಕ್ತಿಕತೆ ಅಳಿದು ಸಾರ್ವತ್ರಿಕ ಸ್ವರೂಪವನ್ನು ತಾಳಿ ಈ ಜಾನಪದ ಸಾಹಿತ್ಯವಾಗುತ್ತದೆ. ಅದರ ಕರ್ತೃ ಸಮಷ್ಟಿಯಲ್ಲಿ ಮರೆತು ಹೋಗಿ ಅದು ಲಿಖಿತವಲ್ಲದ ಅಲೇಖಶೂನ್ಯವಾಗಿ ಬದುಕುತ್ತದೆ. ಮೇಲಾಗಿ ಸಾವಿರ ವರುಷಗಳಿಂದಲೂ ಶಿಷ್ಟಕವಿಗಳು ಇದನ್ನು ಕಡೆಗಣಿಸಿದುದುಂಟು. ಹೀಗಾಗಿ ಜನತೆಯ ನಾಲಗೆಯೇ ಅದಕ್ಕೆ ತೂಗುದೊಟ್ಟಿಲವಾಗಿ ಬೆಳೆಸಿಕೊಂಡು ಬರುವುದು ಅನಿವಾರ್ಯವಾಯಿತು. ಆದುದರಿಂದ ಒಂದು ನಾಡಿನ ಜನಪದ ಸಾಹಿತ್ಯದ ಇತಿಹಾಸವನ್ನು ರಚಿಸುವುದು ಬಯಲಿಗೆ ಬಣ್ಣ ಬಳೆದಂತೆ. ಈ ರಚನೆಗೆ ಆಧಾರಗಳೆಂದರೆ ಅಲ್ಲಲ್ಲಿ ದೊರೆವ ಉಲ್ಲೇಖಗಳು ಮತ್ತು ಇನ್ನೂ ಉಳಿದು, ಬಂದಿರುವ, ಸಂಪ್ರದಾಯ ಅವಶೇಷಗಳು. ಕನ್ನಡವು ಈ ಸಾಮಾನ್ಯ ತತ್ತ್ವಕ್ಕೆ ಅಪವಾದವಾಗಿಲ್ಲ. ಸುಮಾರು ೨೦೦೦ ವರುಷಗಳ ಚರಿತ್ರೆಯುಳ್ಳ ಕನ್ನಡ ಭಾಷೆಗೆ ಜಾನಪದ ಸಾಹಿತ್ಯದ ಅಪೂರ್ವ ಪರಂಪರೆಯಿದ್ದಿರಲೂ ಸಾಕು.

ಜನಪದ ಸಾಹಿತ್ಯದಲ್ಲಿ ಗದ್ಯ ಮತ್ತು ಪದ್ಯ ಸಾಹಿತ್ಯವೆಂದು ಎರಡು ವಿಧ. ಪದ್ಯಸಾಹಿತ್ಯಕ್ಕೆ ಗೀತ ಸಾಹಿತ್ಯವೆಂದು ಕರೆಯುವರು. ಗದ್ಯ ಸಾಹಿತ್ಯಗಿಂತ ಪದ್ಯ ಸಾಹಿತ್ಯದ ವ್ಯಾಪ್ತಿ ದೊಡ್ಡದು. ಮತ್ತು ಅದರ ವೈವಿಧ್ಯವೂ ಅಪಾರವಾದುದು. ಗ್ರಾಮೀಣ ಸಂಸ್ಕೃತಿಯ ಸಾರವನ್ನೊಳಗೊಂಡ ಜನಪದ ಗೀತೆಗಳು ಜನಪದ ಸಂಸ್ಕೃತಿಯ ಅಧ್ಯಯನಕ್ಕೆ ಮೂಲ ಸಾಮಗ್ರಿಗಳಾಗಿವೆ. ಕರ್ನಾಟಕದ ಸಂಪ್ರದಾಯ ಜನಪದ ಗೀತೆಗಳಲ್ಲಿ ಲಾವಣಿ, ಕಥನ ಗೀತ, ಗೀಗೀ, ಗುಮ್ಮಟೆಪದ, ಡೊಳ್ಳಿನ ಹಾಡು, ಹಂತಿಪದ, ಗುಮ್ಮಟೆ ಹಾಡು, ಕಂಬಿ, ಭಜನೆ ಮುಂತಾದವು ಮುಖ್ಯವಾದವುಗಳಾಗಿವೆ. ಮನರಂಜನೆಗಾಗಿ, ಶ್ರಮಪರಿಹಾರಕ್ಕಾಗಿ ಜನಪದರು ಈ ಎಲ್ಲ ಸಂಪ್ರದಾಯದ ಗೀತೆಗಳನ್ನು ಹಾಡುತ್ತಾರೆ. ಗೀಗೀ, ಲಾವಣಿ, ಗುಮ್ಮಟೆಪದ ಹಾಡು, ಸಣ್ಣಾಟ, ಹಾಡುವುದನ್ನೇ ತಮ್ಮ ವೃತ್ತಿಯಾಗಿಸಿಕೊಂಡಿರುತ್ತಾರೆ. ಇವರು ಸಂಚಾರಿಗಳಾಗಿದ್ದು, ಮನರಂಜನೆಯೇ ಅವರ ಮುಖ್ಯ ಉದ್ದೇಶ. ಮಾನವನ ಬದುಕು ಸದಾಗತಿಶೀಲ, ಅಷ್ಟೇ ನಾಗಾಲೋಟದಿಂದ

ಓಡುತ್ತದೆ. ಹೀಗೆ ಬದುಕಿನ ಹೆಜ್ಜೆಗಳನ್ನು ಭರದಿಂದ ಇಡುವಾಗ ವಿವೇಚನೆ, ವಿಶ್ಲೇಷಣೆ ಇರಬೇಕಾದುದು ಅತಿ ಅವಶ್ಯ. ಬದುಕಿನ ಸಮಸ್ತ ಆಗು ಹೋಗುಗಳು ಚುಟುಕುಗಳಲ್ಲಿ ಕೆಲಮಟ್ಟಿಗೆ ಅಭಿವ್ಯಕ್ತವಾಗಿವೆ. ಜನಪದ ಸಾಹಿತ್ಯದ ಕೆಲವು ಪ್ರಕಾರಗಳನ್ನು ಅನುಲಕ್ಷಿಸಿ ಅಲ್ಲಿ ಬಳಕೆಯಾಗುವ ಚುಟುಕುಗಳ ಸ್ವರೂಪವನ್ನು ಕುರಿತು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

'ಹಂತಿ ಪದ ನಿಷ್ಪತ್ತಿ ಹಂತಿ > ಪಂತಿ > ಪಂಙ್ತಿ > ಪಂಕ್ತಿ ಎಂದಾಗಿರಬೇಕು. ಇದರರ್ಥ 'ಸಾಲು' ಎನ್ನುವ ಅರ್ಥದಲ್ಲಿ ಬಳಕೆಯಾಗುತ್ತದೆ. ಪಂಕ್ತಿಯೆ - ಪಂತಿ - ಹನ್ತಿಯೆಂದಾಗಿರುತ್ತದೆ. ಹಂತಿ ಅಥವಾ ಹನ್ತಿಗೆ ಸಾಲು, ದಾರಿ a, line, arow ಎನ್ನುವ ಅರ್ಥ ಕಿಟೆಲ್ ಕೋಶದಲ್ಲಿದೆ. ಎತ್ತುಗಳನ್ನು ಕಣದ ಮೇಟಿಯ ಸುತ್ತಲು ಸಾಲಾಗಿ ನಿಲ್ಲಿಸಿ ಕಣದ ಕೇಂದ್ರವಾದ ಮೇಟಿಗೆ ಹಗ್ಗ ಅಥವಾ ಮಿಣಿಯಿಂದ ಎತ್ತುಗಳ ಕೊರಳಿಗೆ ಥಳುಕು ಹಾಕಿ ಕಟ್ಟಿದರೆ ಹಂತಿ ಪಂಕ್ತಿ ಸಿದ್ಧವಾಗುತ್ತದೆ. ಮೇಟಿಯ ಸುತ್ತ ಸಾಲಾಗಿ ಕಟ್ಟಿದ ಎತ್ತುಗಳ ತಿರುಗಿಸಿದಾಗ ಎತ್ತುಗಳ ಕಾಲಿಗೆ ಸಿಕ್ಕ ತೆನೆ, ಹುಲ್ಲು ಯಾವುದಾದರೂ ಸರಿ ಕಾಳು ಬಿಚ್ಚುತ್ತದೆ. ಹೀಗೆ ನುರಿತ ತೆನೆಯನ್ನು ಕಣದ ಸುತ್ತ ಎತ್ತುಗಳ ಸಾಲಿನ ಹಿಂದೆ ತಿರುಗುವವನೇ ಹಂತಿ ಹೊಡೆಯುವವ. ಆಗ ಅವನು ಹಾಡುವ ಹಾಡೆ ಹಂತಿ ಹಾಡು ಎನಿಸಿಕೊಳ್ಳುತ್ತದೆ. ಹಂತಿ ಸಂಪ್ರದಾಯದ ಹಾಡುಗಳೆಂದರೆ ನಿಜಕ್ಕೂ ಜನಪದ ಹಾಡುಗಾರಿಕೆಗೆ ರೈತನು ಕೊಟ್ಟ ಅಪೂರ್ವ ಕಾಣಿಕೆ. ಸುಗ್ಗಿಯ ಕಣದಲ್ಲಿ ರೈತರು ಹಂತಿ ಕಟ್ಟಿದಾಗ ಹೇಳುವ ಹಾಡುಗಳೇ ಹಂತಿ ಹಾಡುಗಳು.

ಹಂತಿ ಕಟ್ಟುವುದು ಇಳಿ ಹೊತ್ತಿನಲ್ಲಿ ಮುಗಿಸುವುದು ಬೆಳಿಗ್ಗೆ. ಸುಗ್ಗಿಯ ಕಾಲದಲ್ಲಿ ತಿಂಗಳುಗಟ್ಟಲೆ ಈ ಕಾರ್ಯ ನಡೆಯುತ್ತದೆ. ಎತ್ತುಗಳಿಗಾಗಲಿ, ಹಂತಿ ಹೊಡೆಯುವವನಿಗಾಗಲಿ, ಕಂಕಿ ತೆಗೆಯುವವನಿಗಾಗಲಿ ನಿದ್ದೆ ಬಾರದಂತೆ ಹಂತಿ ಪದಗಳು ಸಹಾಯಕವಾಗುತ್ತವೆ. ಅವು ಶ್ರಮ ಪರಿಹಾರದ ಸೂಚನೆಗಳೂ ಆಗಿವೆ. ತಂಪು ರಾತ್ರಿಯಲ್ಲಿ ಇಂಪಾಗಿ ಏರು ಸ್ವರದಲ್ಲಿ ಇಡೀ ರಾತ್ರಿ (ಬೆಳೆತನಕ) ಹಾಡುತ್ತಾರೆ. ಹಂತಿ ಹೊಡೆಯುವಾಗ ಹತ್ತು ಹಲವು ವಿಷಯಗಳನ್ನು ಕುರಿತು ಹಾಡುತ್ತಾರೆ. ಒಳ್ಳೆಯ ಫಸಲು ಬರಲೆಂದು, ಉತ್ತಮವಾದ ಗಾಳೀ ಬೀಸಲೆಂದು, ಚೆನ್ನಾಗಿ ಮಳೆ ಬೀಳಲೆಂದು ದೇವರಲ್ಲಿ ಪ್ರಾರ್ಥಿಸುತ್ತಾರೆ. ಹರಕೆ ಹೊರುತ್ತಾರೆ. ಹಂತಿ ಹಾಡುಗಾರರು ಹೆಚ್ಚಾಗಿ ನಿರಕ್ಷರಿಗಳು. ಕೇಳಿ ತಿಳಿದ ಕಂಡುಂಡ ಅನುಭವದ ಮೇಲೆಯೇ ಬದುಕಿನ ಸಾರ್ವಕಾಲಿಕ ಸತ್ಯವನ್ನು ನಿಷ್ಕರ್ಷಿಸಬಲ್ಲರು. ಹಲವು ದೇವರ ಸ್ತುತಿ, ಪಾಂಡವರ - ಕೌರವರ ಕಥೆ, ಎತ್ತುಗಳನ್ನು ಕುರಿತು ಪ್ರಶಂಸಾತ್ಮಕ ಸಾಹಸ ಕತೆಗಳು, ಐತಿಹಾಸಿಕ ಜನರ ಸಾಹಸ ಚರಿತ್ರೆಗಳು, ಕೃಷಿ ಉಪಕರಣಗಳು ಇವು ಹಂತಿ ಹಾಡುಗಳ ಸರ್ವ ಸಾಮಾನ್ಯವಾದ ವಸ್ತುಗಳಾಗಿವೆ. ಹಂತಿ ಪದಗಳು ರೈತನ ಜೀವನಾನುಭವದ ಆತ್ಮಚರಿತ್ರೆಯ ಗೀತೆಗಳಾದಂತೆ ಗ್ರಾಮೀಣ ಜನತೆಯ ಬದುಕಿನ ಸಮಸ್ತ ಆಶೋತ್ತರಗಳನ್ನು ಸವಿವರವಾಗಿ ತಿಳಿಸುತ್ತವೆ.

ಕೃಷಿ ಸಮುದಾಯದಲ್ಲಿ ಬೀಸಕಲ್ಲಿನ ಪದಗಳು, ಬಲೋರಿ ಪದಗಳು, ಹಂತಿ ಪದಗಳನ್ನೇ ಹೋಲುತ್ತಿದ್ದರೂ ಅವುಗಳ ನಡುವೆ ಸಾಮ್ಯ-ವೈಷಮ್ಯಗಳಿವೆ. ಅವುಗಳನ್ನು ಗಮನಿಸಿದ ನಂತರ ಹಂತಿ ಪದಗಳ ಸ್ವರೂಪವನ್ನು ನೋಡಬೇಕಾಗುತ್ತದೆ. ಬೀಸುಕಲ್ಲಿನ ಪದಗಳು, ಹಂತಿ ಪದಗಳು, ಬಲೋರಿ ಪದಗಳು ಹೆಚ್ಚಾಗಿ ತ್ರಿಪದಿಯಲ್ಲಿವೆ. ಆದರೆ ಅವುಗಳ ಬಳಕೆಯ ಸಂದರ್ಭ ಬೇರೆ ಬೇರೆಯಾಗಿದೆ. ಬೀಸುಕಲ್ಲಿನ ಪದಗಳು ಹೆಣ್ಣು ಮಕ್ಕಳಿಗೆ ಸಂಬಂಧಪಟ್ಟಿವೆ. ಇವುಗಳ ಲಯ, ನಾದ ಸೌಮ್ಯವಾಗಿರುತ್ತದೆ. ಅಲ್ಲಿ ತೇಲುಧ್ವನಿ ಇರುತ್ತದೆ, ಹಂತಿ ಪದಗಳು ಗಂಡಸರಿಗೆ ಸಂಬಂಧಪಟ್ಟಿವೆ. ಇವುಗಳನ್ನು ಹಾಡುವಾಗ ಧ್ವನಿಯ ಏರಿಳಿತ ಕಂಡುಬರುತ್ತದೆ. ಬಲೋರಿ ಪದಗಳು ದೀರ್ಘವಾಗಿ ಸ್ವರ ಎಳೆದು ಹೇಳುತ್ತಾರೆ. ಇವು ಸಹಿತ ಗಂಡಸರಿಗೆ ಸಂಬಂಧಪಟ್ಟಿವೆ. ಬೀಸುಕಲ್ಲು ಮತ್ತು ಹಂತಿ ಸಂಪ್ರದಾಯಗಳ ಸಾಮ್ಯತೆಯನ್ನು ಬೀಸುಕಲ್ಲು ಮತ್ತು ಕಣದ ಆಕಾರ ವೃತ್ತಾಕಾರವಾಗಿರುತ್ತದೆ. ಬೀಸುಕಲ್ಲಿನ ಆಧಾರಗೂಟ ಕಣಕ್ಕೆ ಆಧಾರ ಮೇಟಿ ಎರಡೂ ಕ್ರಿಯೆಗಳು ಜೋಳಕ್ಕೆ ಸಂಬಂಧಪಟ್ಟಿವೆ. ಒಂದು ತೆನೆಯಿಂದ ಜೋಳ ಬೇರ್ಪಡಿಸುವ ಕ್ರಿಯೆಯಾದರೆ ಇನ್ನೊಂದು ಕಡೆಗಾದ ಜೋಳದ ಕಾಳನ್ನು ಅರೆಯುವ ಕೆಲಸ ಮಾಡುತ್ತದೆ. ಬೀಸುಕಲ್ಲಿಗೆ ಮುಕ್ಕುತ ಹಾಕಿದಂತೆ ಹಂತಿಯಲ್ಲಿ ರಾಗೋಲಿನಿಂದ ಮೇಲಿಂದ ಮೇಲೆ ದನದ ಕಾಲಿಗೆ ತೆನೆಗಳನ್ನು ಎಳೆಯುವ ಕೆಲಸ ನಡೆದಿರುತ್ತದೆ. ಬೀಸುವ ಕ್ರಿಯೆ ನಸುಕಿನಲ್ಲಿ ನಿಶ್ಯಬ್ದವಾದ ಆಹ್ಲಾದಕರವಾದ ವಾತಾವರಣದಲ್ಲಿ ನಡೆದರೆ 'ಹಂತಿ' ಕಟ್ಟುವ ಕ್ರಿಯೆಯು ಬೀಸುವ ಸಮಯವನ್ನೊಳಗೊಂಡು ಇಡೀ ರಾತ್ರಿ ನಡೆಯುತ್ತದೆ. ಬೀಸುವಾಗ ಹಂತಿ ಸಾಗಿದಾಗ ಸಹೃದಯರ ಹಾಜರಿ ಕಡಿಮೆ. ಬೀಸುಕಲ್ಲಿನ ಪದಗಳಲ್ಲಿ ಹೆಣ್ಣಿನ ಆತ್ಮನಿವೇದನೆಯಿದ್ದರೆ ಹಂತಿಯಲ್ಲಿ ರೈತ ತನ್ನ ಬದುಕಿನ ಪಾಡನ್ನು ಹೇಳಿಕೊಳ್ಳುತ್ತಾನೆ. ಹಂತಿಪದಗಳು ರೈತರ ಬದುಕಿನ ದಿನಚರಿಯನ್ನು ಒಳಗೊಂಡಿರುತ್ತವೆ.

ಹಂತಿಯ ಸಂದರ್ಭದಲ್ಲಿ ಬಲೋರಿ ಹಾಡುಗಳು ಕಂಡುಬರುತ್ತವೆ. ಕಣ ಮಾಡಿದ ಹೊಲಕ್ಕೆ ಬೇರೆ ಬೇರೆ ಹೊಲದಿಂದ ತೆನಿಕಣಕಿಯನ್ನು ತರುವಾಗ ಹಾಗೂ ರಾಶಿ ಮಾಡಿ ಕಾಳು ಕಣಿಕೆಯನ್ನು ಮನೆಗೆ ತರುವಾಗ ತಂಪೊತ್ತಿನಲ್ಲಿ ರೈತ ಬಂಡಿಯ ಮೇಲೆ ಕುಳಿತು ದೀರ್ಘ ಸ್ವರ ಎಳೆದು ಹರದಾರಿಗಟ್ಟಲೆ ದೂರ ಕೇಳುವಂತೆ ಸ್ವರ ಹಿಡಿದು ಹಾಡುತ್ತಾನೆ. ಹಂತಿ ಪದಗಳ ವಸ್ತು, ವಿಷಯ ಇಲ್ಲಿದ್ದರೂ ಹಾಡುವ ಧಾಟಿ ವ್ಯತ್ಯಾಸವಿರುತ್ತದೆ. ಇಲ್ಲಿ ದೀರ್ಘಿಕರಣ ಹೆಚ್ಚು. ಹಂತಿ ಪದಗಳಲ್ಲಿ ಪಲ್ಲವಿಯಂತೆ ಬರುವ 'ಹುಲ್ಲುಲಿಗ್ಯೊ' ಬಲೋರಿ ಪದಗಳಲ್ಲಿ ಇರುವುದಿಲ್ಲ. ಬಲೋರಿ ಪದಗಳ ದೀರ್ಘಿಕರಣಕ್ಕೆ ಕಾರಣವೇನೆಂದರೆ ಹೊಲದಲ್ಲಿರುವ ಕೆಲಸಗಾರರಿಗೆ ತಮ್ಮ ಬಂಡಿ ಬರುವುದನ್ನು ತಿಳಿಸುವ ಸಂಕೇತವೂ ಆಗಿದೆ. ಇದರಿಂದ ಅವನು ಬಂಡಿಗೆ ಕಣಿಕೆ, ತೆನೆ ಇತ್ಯಾದಿ ಹೇರುವ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾನೆ. ಕೆಲವು ವೇಳೆ ಜಾತ್ರೆಗೆ ಹೋಗುವಾಗ ದಾರಿ ಸಾಗುವುದಕ್ಕೆ ರೈತರು ಬಲೋರಿ ಪದಗಳನ್ನು ಹಾಡುತ್ತಾರೆ. ಹಂತಿ-ಬಲೋರಿ ಹಾಡುವ ಧಾಟಿಯಲ್ಲಿ ವ್ಯತ್ಯಾಸವಿರುತ್ತದೆ. ಹಂತಿ ಹೊಡೆಯುವಾಗ, ಹೊಡೆಯುವವರಿಗೆ ಬೇಸರವಾದಾಗ,

ನಿದ್ರೆ ಬಂದಾಗ ಮಧ್ಯ ಮಧ್ಯ ಕೃಷಿಗೆ ಸಂಬಂಧಿಸಿದಂತೆ ಚುಟುಕು ಹೇಳುತ್ತಾರೆ. ಆಗ ಬೇಸರ ನೀಗಿ ಮತ್ತೆ ಉಲ್ಲಾಸ ಬರುತ್ತದೆ. ಕೆಲವು ಚುಟುಕು ಹೀಗಿವೆ:

ಬಸವಣ್ಣ ಹಣಿಮ್ಯಾಲ ಎಸಳ ವಿಭೂತಿ ಕಟ್ಟು
ಕಾಲಾಗ ಕಟ್ಟಿ ಹುರಿಗೆಜ್ಜಿ| ಬಾಯೀಗಿ ಬಂಗಾರದ
ಬಾಯಿಚಾಳಿಗಿ ಹಾಕೋಣ| ಬಸವಣ್ಣನ ಪಾದಕ
ಶರಣ ಮಾಡುವ ನಾವು| ಹಾರಾಡಿ ಹಂತಿ ಹೊಡೆಯೋಣ

ಕತಿ ಕತಿ ಕಬ್ಬಿಣ ಕಾಕಾದೇವಿ
ಧೂಪಾ ಹೊದಿ| ಧೂಪಾ ಏನ್ ಮಾಡಿದಿ
ಗುರುವಿಗ್ ಕೊಟ್ಟು| ಗುರು ಏನ್ ಕೊಟ್ಟ
ಗಂಟಿಕೊಟ್ಟ| ಗಂಟಿ ಏನ್ ಮಾಡಿದಿ
ಎತ್ತಿಗೆ ಹಾಕೀದಿನಿ| ಎತ್ತ ಏನ ಕೊಟ್ಟಿತು
ಎತ್ತ ಗೊಬ್ಬರಾ ಕೊಟ್ಟಿತು| ಗೊಬ್ಬರ ಏನ ಕೊಟ್ಟಿತು
ಗೊಬ್ಬರ ಹೊಲ ಕೊಟ್ಟಿತು| ಹೊಲಾ ಎನ ಕೊಟ್ಟಿತು
ಹೊಲಾ ಜ್ವೋಳಾ ಕೊಟ್ಟಿತು| ಜ್ವೋಳಾ ಎನ ಕೊಟ್ಟಿತು
ಜ್ವೋಳಾ ರಾಶಿ ಕೊಟ್ಟಿತು ರಾಶಿ ರಾಶಿ ಹುಲಿಸೋ

ಬಾಯಕ್ಕ ಹತ್ತಿ ಹೊಲಕ್ಕ ಪಾರವ್ವ-ದುಂಡವ್ವಕೂಡಿಕೊಂಡ
ಹತ್ತಿ ಹೊಲಕ್ಕೆ ಹೋಗ್ಯಾರು
ಹತ್ತಿ ಗಂಟು ನೆತ್ತಿ ಮ್ಯಾಲ ಬಗಲಾಗ ತಂತ್ರಾಣ್ಗೆ ಹಾಕ್ಯಾರ
ಅಣ್ಣಗಳೆ ಹೂಡ್ಯಾಣು| ಬುತ್ತಿ ತಗೊಂಡು ಹೋಗೋಣ
ಬಾಯತ್ಕ ಹತ್ತಿ ಹೊಲಕ್ಕ

ಈ ವಾನದೊಳಗೆ ನಾ ಯಾರಿಗಾದನೆ|
ಬೀಸು ಬೀಸನಿಕಿಯಾದ ಹಾಕು ಸಗಣಿಯಾದೆ|
ಬಿತ್ತಿ ಬರುವ ಅಣ್ಣನ ಕೈಯನ್ ಸೆಡ್ಡಿ ಬಟ್ಲಾದನೆ|
ಬಿತ್ತಿ ಬರುವ ಅಣ್ಣನ ಕೈಯಾನ ಬಾರ ಕೋಲಾದನೆ|
ಬಿತ್ತಿ ಬರುವ ಅಣ್ಣ ಕೈಯಾನ ಕೊಟ್ಟಿನ ಜಲ್ಕ ಆದಾದನೆ|
ಈ ವಾದನೊಳಗೆ ನಾ ಯಾರಿಗಾದನೆ|

ಚಾಪುಡಿ ಸಕ್ಕರಿ| ಒಲಿಮ್ಯಾಗ
ಬೋಗಾಣಿ| ಸಾಂಗಲಿ ಗೊಗ್ಯಾನೋ
ಸರದಾರನ| ಬಾಗಲ ಮುಂದ ಉದರಿಸ

ಬ್ಯಾಗ| ಗಿಣಿರಾಮ ನಿನ್ನಂತಹ ಚದರ್
ಹೋಗ್ಯಾನ ಜಳಕಕ
ಬಂದಾವ ಬಂಗಾರ ಗಿಣಿಯಾ ಗಿಣಿಯಾ|
ಕಡದಾವ ಯಾಲಕ್ಕಿ ಗೊನಿಯಾ ಗೊನಿಯಾ|
ನಂ ಕಣದಾಗ ಮುತ್ತಿನ ತೆನಿಯಾ ತೆನಿಯಾ|

ಬೂದ ನಿಮ್ಮವ್ವ ಏನೆಂಬುತಾಳೊ ||ಪ||
ಯಾಲಕ್ಕಿ ಸಂಠಿ ಹದಮಾಡತಾಳೊ|
ಹಾಡಾಡಿ ಹಂತಿ ಹೊಡಿ ಅಂಬುತಾಳೊ |
ರಾಶಿಯ ಕಡಬಾ ಉಮಯಂಬುತಾಳೊ |

ಯಾಕೋ ಬಸವ ಮೆಲ್ಲಕ ನಡದಿ |
ಕಣಗಾಲ ರಾಶಿ ಮಣಕಾಲಿಗಿ ಬಂತೋ |
ಮುತ್ತಿನ ರಾಸ್ಯೋ ಮುಗುಲುದ್ದ ಸೆಳ್ಯೋ |
ಚೋಟುದ್ದ ಕುಂಟ್ಯೋ ಮಾರುದ್ದ ಬಾರ್ಕೋಲೋ |
ಮೂಡಲ ಹೋರಿಗಿ ಬೀಸುಮಾರ ಹಗ್ಗ |
ಹರಕೊಂಡ ಹೋತೋ ಕಡಬಿಯತನಕ |
ಮೇಟಿ ಎತ್ತಿಗಿ ಮಣಕಾಲ ಗಂಟ್ಯೋ |
ಕಡಿಸುತ್ತಿ ನೆತ್ತಿಗಿ ಕಣಗಾಲ ಗಂಟ್ಯೋ |
ಹಿಂಡಿನೆತ್ತಿನ್ಯಾಗ ಯಾವೆತ್ತ ಚೆಲುವೊ |
ಬೆಳ್ಳಿ ಕೋಡಿನೆತ್ತ ಬಿಳಿ ಎತ್ತ ಚೆಲುವೊ |
ಹಂತಿ ಹೊಡಿಯುವಾಗ ಏನೇನೊ ಊಟ
ಹಿಟ್ಟು ಹರವಿಪಲ್ಲೇ ಕೈತುಂಬಾ ನುಚ್ಚ
ಹೋ! ಹೋ! ಹೋ! ಹೋ! ಹುಲ್ಲುಲ್ಲಿಗೋ!

ಒಬ್ಬ : ಜಿಟಿ ಜಿಟಿ ಮಳಿಯೋ ಮಳಿಯೋ
ಇನ್ನೊಬ್ಬ : ನಮ್ಮ ಬಸವಣ್ಣನ ಪಾದಕ ಸುರಿಯೋ ಸುರಿಂಯೋ

ಕಣ್ಣೆತ್ತಿ ನೋಡಬ್ಯಾಡ
ಸಣ್ಣ ಬೈತಾಲಿ ನೋಡಿ ಮರುಳಾಗ ಬ್ಯಾಡ ||ಪ||
ಕಣ್ಣಿಟ್ಟು ಕೀಚಕ ಕೆಟ್ಟ ಪರ ಹೆಣ್ಣಿಗಾಗಿ ರಾವಣ ತಲಿಕೊಟ್ಟೋ |
ಹೇಳಲಾಗದಷ್ಟು ಪರರ ಹೆಣ್ಣು ಮೋಹಿಸಿ ಬರಬಾರದ ಕಷ್ಟ ಬರತಾವೊ
ಸೀರಿ ಬಿಗಿದುಟ್ಟ ಹೆಣ್ಣ, ವಾರಿ ನೋಟವ ನೋಡಿ ಹಾರ ಬೇಡಣ್ಣ

ಬೆಳ್ಳಿ ಮೂಡಿತೋ ಮೂಡಲ ಹರಿದಿತೋ |
ಬೆಳಗು ಮುಂಜಾನೆ ಸೂರ್ಯನ ಕಾವಲೋ ||
ಹೊತ್ತು ಮುಣಗಿತೊ ಕತ್ತಲಾದಿತೊ |
ಲಂಕಿ ಹನುಮನ ಕಾವಲೊ |

ದಂಡು ಕಲ್ಲಿನ ಮ್ಯಾಲ ದಂಡ ಮಗ್ಗಾ ಹೂಡಿ |
ಗೊಂಡೇನ ನೆಯ್ವಾರೊ ಹುಲ್ಲುಲ್ಲಿಗೋ ||

ಸಾಣಿ ಕಲ್ಲಿನ ಮ್ಯಾಲ ಜಾಣ ಹಗ್ಗವ ಮಾಡಿ |
ಮ್ಯಾಣೇವು ನೆಯ್ವಾರೋ ಹುಲ್ಲುಲ್ಲಿಗೊ ||

ಪತ್ರೀ ಗಿಡದ ಹೊಲದಾಗ ಕರ್ಕಿಯ ಹಬ್ಬೇತೊ
ನೂರಾರು ಆಳ ಹಚ್ಚಿದರೆ | ಸವಿವಲ್ಲದೊ ||
ತಾಸೊತ್ತಿನ್ನಾಗ ನಂ ಬಸವನ ಕರಕೊಂಡ | ಹರಗಿದರ
ಕರ್ಕಿಯ ಹೊಲವೆಲ್ಲ ಹಸನಾತೊ ||

ಶಿವನಿನ್ನ ಪಾಲಿಗಿ ಎಂಟೆತ್ತ ಕೊಟ್ಟಾನಂತ ಹೆಚ್ಚಿನ ಕ್ಯಾಣ ಕಟ್ಟಬ್ಯಾಡೊ
ಕಟ್ಟಿದ್ರ ಕಟ್ಟ ಕರೆ ಒಂದಮಾತ ಹೇಳ್ತೆನಿ
ಎತ್ತೀನ ಹಿಂಬಾಗಿಲಿ ಅದನ್ನ ಬಿಡಬ್ಯಾಡೊ | ಹಿಂದಗಡೆ ಮರಗಬ್ಯಾಡೊ
ತನ್ನ ಹೆಣ್ತಿ ಗರ್ತಿ ಅಂದು ಆರ್ತಿಂಗ್ಳ ತವರಮನ್ಯಾಗ ಬಿಡಬ್ಯಾಡೊ
ಬಿಟ್ರ ಬಿಡ ಕರೆ ಒಂದು ಮಾತ ಹೇಳ್ತೆನಿ
ತಿಂಗಳಿಗೊಂದ ಬಾರಿ ಹೋಗಲ್ದಂಗಿರ ಬ್ಯಾಡೊ | ಹಿಂದಾಗಡಿ ಮರಗಬಾರದೊ

ಶಿವಾಧನೆಯಂತೆ ಕೊಟ್ಟಾನಂತ ರಾತ್ರಿ ಹೊತ್ತ ರಾಶಿ ತೂರಬಾರದೊ
ತೂರೀದ್ರ ತೂರ ಕರೆ ಒಂದ ಮಾತ ಹೇಳ್ತೆನಿ
ದಾನ ಧರ್ಮಕ ಕೈ ಮರಿಬ್ಯಾಡೊ | ಅಡ್ಡವಾಗಬಾರದೊ

ಪಾಂಡವರಿಗಿ ಕೌರವರಿಗಿ ಎಡಮಾಡಿ ಪಾರಮ್ಮ
ಮೆಟ್ಟಿಲ ಕಾಲಿಗಿ ತೂರುವ ಬುಟ್ಟಿ
ಸೆಳ್ಳು ರಾಗೋಲಿಗೆ ಎಡಿ ಮಾಡಿ | ಪಾರಮ್ಮ
ಬೂದುಗ ಬೇಡ್ಯಾಳೊ ಸೆರಗೊಡ್ಡಿ | ಪಾರಮ್ಮ
ರಾಶಿ ತೂರೆಂದ ಅಣ್ಣಗಳ್ಯಾಳೊ ||

ಬಡಿ(ಗ್ಯಾ)ರಣ್ಣ ಕಣಕ ಬಾರೊ |
ಬಣ್ಣದ ರಾಗೋಲ ಕಣಕ ತಾರೊ |

ಕಂಬಾರಣ್ಣ ಕಣಕ ಬಾರೋ |
ಬಣ್ಣದ ತಾಳ ಕಣಕ ತಾರೊ |
ಕುಂಬಾರಣ್ಣ ಕಣಕ ಬಾರೊ |
ತುಂಬಿದ ಬಿಂದಿಗಿ ಕಣಕ ತಾರೊ |
ಮಾದಿಗಾರಣ್ಣ ಕಣಕ ಬಾರೊ |
ಹಂತಿಗಿ ಮಿಣಿ ಹೊತ್ತ ತಾರೊ |

ಒಬ್ಬ : ಅಚಿ ಹೊಲ್ದಾನ ಲಚಿಮಿ ಇಚಿಗ್ಯಾಕ ಬಂದಾಳ
ಇನ್ನೊಬ್ಬ : ತಂಬಾಕ ನೆವ ಮಾಡಿ ನುಂಗಾಕ ಬಂದಾಳ
ಒಬ್ಬ : ಆಚಿ ಹೊಲ್ದಾನ ಲಚಿಮಿ ಇಚಿಗ್ಯಾಕ ಬಂದಾಳ
ಇನ್ನೊಬ್ಬ : ರಾಶಿ ಬುತ್ತಿಯ ಕಿಚಡಿಗಿ ಆಶೆ ಮಾಡಾಕ ಬಂದಾಳ

ರಾಶಿಯ ಹೊತ್ತೀಗಿ ಬಂದಾಳೊ ಪಾರಮ್ಮ |
ಕೂರಗಿ ಪೂಜೆ ಮಾಡ್ಯಾಲೊ ||
ಮೇಟಿಯ ಪೂಜಿ ಮಾಡ್ಯಾಳೊ | ಪಾರಮ್ಮ
ಕುಂಟೆ ಪೂಜೆ ಮಾಡ್ಯಾಳೊ | ಪಾರಮ್ಮ
ಕಣದ ಪೂಜಿ ಮಾಡ್ಯಾಳೊ | ಪಾರಮ್ಮ
ಪತ್ರಿ ಗಿಡದ ಪೂಜಿ ಮಾಡ್ಯಾಳೊ | ಪಾರಮ್ಮ
ಬಸವಣ್ಣನ ಪಾದಕ್ಕೆ ನಮಿಸ್ಯಾಳೊ ||
ಕಣದಾಗ ನಿಂತ ಕೊಂಡ ಸುತ್ತು ದಿಕ್ಕಿಗೆ
ಕಂಚಿನಾರೂತಿ ಬೆಳಗ್ಯಾಲೊ | ಪಾರಮ್ಮ
ನಮ್ಮಣ್ಣ ಹಂತಿ ಹತ್ತು ದಿಕ್ಕಿಗೆ ಹಬ್ಬಲೆಂದು
ತವರಿಗಿ ಸೊರಗೊಡ್ಡಿ ಬೆಡ್ಯಾಲೊ | ಪಾರಮ್ಮ
ಉಡಕ್ಕಿ ಹಾಕ್ಕೊಂಡ ತಮ್ಮಣ್ಣಗೇಳಿ ಹೊಂಟಾಳೊ||

ಜೋಳದ ತೆನಿ ಕಣಿಕಿಗಿ ಗುಂಡಕ್ ಕಣ ಮಾಡಿ
ಕೂರಿಗಿ ಈಸ್ ಮೇಲ್ ಮಾಡಿ | ಬಂಡಿ ಬಿಗಿಬೇಕೊ
ಅಯ್ನನಾರು ಕರಸ್ಯಾರ ಪಂಚಾಂಗ ತಗಸ್ಯಾರ
ಐದ ಮುತ್ತೈದರನ್ ಕರಸ್ಯಾಗ | ಜ್ಯೋಳದ ಗೂಡ ಮುರಿಸ್ಯಾರೊ

ಮೂಲಾ ನಕ್ಷತ್ರ ನೋಡಿ ಊದ ನೀಡಿ ಕುಂತು ಮದ ಮಾಡಬೇಕೊ |
ರಾವ ತಿಳಿಬೇಕೊ | ಮೂಲಿಗಾಳಿ ಬಿಟ್ಟ ಮುತ್ತು ಸುರದಂಗಾಯ್ತು
ಬಾ ಹುಲಿಗ ಎಂದ್ | ಬುಟ್ಟಿ ತುಂಬ್ಯಾರೊ ||

ಕಡಿ ಎತ್ತಿನ ಸೆಗಣಿ ಹಿಡಿದು | ಕಲಿಸಿ ಬೂದುಗಮಾಡಿ
ಹತ್ತು ಎತ್ತಿನ ಬಾಲ ಕಿತ್ತಿ ಹಚ್ಚಿದರೂ | ಬೂದುಕ ಕಟ್ಟಿದರೂ
ಹಂತಿ ಹೊಡಿಯುವುದಾಯ್ತು | ಕಂಕಿ ಕಡಿಯಕಾಯ್ತು
ಕಡಿ ಎತ್ತಿನ ಸೆಗಣಿ ಹಿಡಿಬೇಕೊ | ಬೂದುಗ ಕಟ್ಟಬೇಕೊ
ಬೂದುಗ ಕಟ್ಟಬೇಕೊ | ಚೆಂಡೆಕ್ಕಿ ಹಚ್ಚಬೇಕೊ
ಬೂದುಗನ ಪದವೊಂದನಬೇಕೊ | ಹಂತಿ ಬಿಡಬೇಕೊ||

ಬೆಳ್ಳನ್ನ ಬೆಳಗಾಗಿ ಎಳಿ ಬಿಸಿಲು ಸುಕಾಡಿ
ಹಕ್ಕ್ಯಾನ ಸಗಣಿ ಬಳಿದಾರೊ |

ಆಕಳಿಗೆ ಮುರವಿಟ್ಟು ಎಮ್ಮಿಗೆ ಮರಗಿಟ್ಟ
ರಂಜಣಿಗಿ ಹಾಲ ಹಿಂಡ್ಯಾರೊ |

ನೀರ ಕಾಸ್ಯಾರೊ ಅಡಗಿಯ ಮಾಡ್ಯಾರೊ
ರೊಟ್ಟಿ ಮಾಡಿ ತಗಿದಾರೊ |

ಎಳ್ಳ ಹಚ್ಚಿದ ರೊಟ್ಟಿ ಯಣಿ ಬದನಿಕಾಯಿ
ಕಲಿಸಿದ ಬಾನ ಕೆನಿಮೊಸರಾ |

ಕಮ್ಮಾನ ಒಗ್ಗರಣಿ ಡೊಣ್ಣ ಮೆಣಸಿನಕಾಯಿ
ತಗೊಂಡ ರಾಶಿಯ ಪೂಜಿಗಿ ನಡೆದಾರೊ |

ಹತ್ತು ಹದಿನೈದ ಬಂಡಿ ಇತ್ತ್ಯಾಕ ಬಂದಾವ
ಸುತ್ತ ನೆರೆದವರ ಕೇಳ್ಯಾರೊ |

ದುಂಡಪ್ಪನ ರಾಶಿ ಪೂಜಿಗೆಂದು
ಬಂಡ್ಯಾಗ ಕುಂತವರ ಹೇಳ್ಯಾರೊ |

ಹೀಗೆ, ಹಂತಿ ಕ್ರಿಯೆಯಲ್ಲಿ ಚುಟುಕುಗಳು ಪ್ರಮುಖ ಪಾತ್ರವಹಿಸುತ್ತವೆ. ಹೆಚ್ಚಾಗಿ ಅವು ಕೃಷಿ ದೇವತೆಗಳಾದ ಬೂದ, ಬನದಮ್ಮರ ಸುತ್ತ ಇರುತ್ತವೆ. ಅಲ್ಲದೇ ಬೀಗರ ಅಂದರೆ ಅತ್ತೆ, ಮಾವರ ಮಕ್ಕಳ ಸುತ್ತಲೂ ಇರುತ್ತವೆ. ಅಲ್ಲಿ ಹಾಸ್ಯ, ವಿಡಂಬನೆ ಹೆಪ್ಪುಗಟ್ಟಿರುತ್ತದೆ. ಇಲ್ಲಿಯ ಚುಟುಕುಗಳು ಕೇಳಿ ಮರೆಯುವಂತಹುಗಳಲ್ಲ. ಕೇಳಿ ಗ್ರಹಿಕೆಗಳನ್ನು ಆಳವಾಗಿ ಕೆಣಕುವ, ಅನುಭವಗಳನ್ನು ಗಂಭೀರವಾಗಿ ವಿಸ್ತರಿಸುವ ಗುಣ ಅವುಗಳಿಗಿರುತ್ತವೆ.

II

ದೀಪಾವಳಿಯಲ್ಲಿ ದನಕಾಯುವ ಹುಡುಗರು ನಾಗರ ಹೆಡೆಯಾಕಾರದ ಹುಲ್ಲಿನ ಪೀಡೆಯನ್ನು ಮಾಡಿ ಅದನ್ನು ಹೂವಿನಿಂದ ಸಿಂಗರಿಸುತ್ತಾರೆ. ಅದರಲ್ಲೊಂದು ಪಣತಿ ಇಟ್ಟುಕೊಂಡು ಮೂರು ಸಂಜೆಯ ಹೊತ್ತಿನಲ್ಲಿ ತಾವು ಕಾಯುವ ದನಗಳ ಮನೆ ಮನೆಗೆ ಹೋಗಿ ಈ ಪೀಡೆ ಬೆಳಗುತ್ತಾರೆ. ಆಗ ಒಬ್ಬೊಬ್ಬರು ಒಂದೊಂದು ಹಾಡು ಹೇಳುತ್ತಾರೆ. ಇವಕ್ಕೆ ಅರ್ಥ ಬಹಳ ಕಡೆಗೆ ಇರದಿದ್ದರೂ ಧ್ವನಿ ಧಾಟಿಯಲ್ಲಿ ಭಾವಾವೇಗ ಭರಪೂರವಿರುತ್ತದೆ. ಶಾಲೆಗೆ ಮಕ್ಕಳು ಮಗ್ಗೀ ಹೇಳಿದಂತೆ ಉಸುರು ಬಿಡದೇ ಈ ಹಾಡು ಹೇಳುತ್ತಾರೆ. ಎತ್ತು, ಎಮ್ಮೆ, ಆಕಳು, ಹೋರಿ, ಆಡುಗಳಿಗೆ ಬೇರೆ ಬೇರೆ ಚುಟುಕು ಮಿಶ್ರಿತ ಹಾಡುಗಳೀವೆ. ಅವುಗಳಲ್ಲಿ ಕಂಡುಬರುವ ಲೇವಡಿ, ವ್ಯಂಗ್ಯ ವಿಡಂಬನೆಗಳಿಗೆ ಒಂದು ಚುಟುಕನ್ನು ಉದಾಹರಿಸಬಹುದು. ಇಲ್ಲೊಂದು ಸಣ್ಣ ಹಾಡಿದೆ ನೋಡಿ.

ಎತ್ತ ಮಾರಲಾಕ ಹ್ಯಾದೀನಪ್ಪ
ಕುಚನೂರು ಸಂತ್ಯಾಗ ಇಳದೀನಪ್ಪ
ಚಕಮಕಿ ಹೆಣ್ಣ ಕರದಾಳಪ್ಪ
ಸಣ್ಣ ಶ್ಯಾಂವಿಗಿ ಬಸದಾಳಪ್ಪ
ಚಿನ್ನೀ ಸಕ್ಕರಿ ತರಸ್ಯಾಳಪ್ಪ
ಒಲ್ಲೊಲ್ಲೆಂದರ ಉಣಿಸ್ಯಾಳಪ್ಪ
ಅರ್ಧದಾರೀ ಕಳುವ್ಯಾಳಪ್ಪ
ಕಣ್ಣಿಗಿ ನೀರ ತಂದಾಳಪ್ಪಾ
ಅಣೀ ಪೀಣಿಜಾಣಿಗೂ ಕೊಬ್ಬರಿ ಬಟ್ಟಲಾ ಬಾಯಾಗೋ

ಎಂದು ಹಾಡಿ ಕೊಬ್ಬರಿ ಬಟ್ಟಲನ್ನೊ ಚಿಲ್ಲರೆ ಹಣವನ್ನೋ ಪಡೆಯುತ್ತಾರೆ. ಹಾಡಿನ ಉದ್ದಕ್ಕೂ ಒಂದು ಬಗೆಯ ನಾಟಕೀಯತೆ ಇದೆ.

ಅರಿವೆ ಒಗೆಯುವ ಕೆಲಸವೂ ಅತ್ತೆಮನೆ ಸೊಸೆಗೆ ಕಟ್ಟಿಟ್ಟ ಕಾಯಕ. ಮನೆಯವರೆಲ್ಲರ ಮೈಲಿಗೆ ಅರಿವೆ ತೊಳೆಯಲು ಹಳ್ಳಕ್ಕೋ, ಬಾವಿಗೋ, ಕೆರೆಗೋ ಓಣಿಯ ಹಲವಾರು ಹೆಂಗಳೆಯರು ಕೂಡಿ ಹೋಗುವ ದೃಶ್ಯ ನಿತ್ಯ ಹಳ್ಳಿಗಳಲ್ಲಿ ಕಾಣಸಿಕ್ಕುವಂಥದ್ದು. ಈ ಸಂದರ್ಭದ ಹಲವು ಚುಟುಕುಗಳು ಉಪಲಬ್ಧವಿದೆ. ಆದರೆ ಯಾವ ಜಾನಪದ ಸಂಗ್ರಹಕಾರನೂ ಇವುಗಳನ್ನು ಪ್ರಸ್ತಾಪಿಸಿಲ್ಲ. ಉತ್ತರ ಕರ್ನಾಟಕ ಹಲವು ಭಾಗಗಳಲ್ಲಿ "ಶೂ", "ಸೌ" ಎಂಬ ಉಸಿರ್ದಾಣಗಳನ್ನಿಟ್ಟುಕೊಂಡ "ಧುಲಾರಿ" ಎಂಬ ಹಾಡಿನ ಪ್ರಕಾರ ಬಳಕೆಯಲ್ಲಿದೆ.

ಬಾರೆ ತಂಗೀ ನೀ ಹೋಗೊಣ ಬಾರೆ ತಂಗಿ ನೀ
ವಾರಿಜಮುಖಿ ಒಗಿಯಲಿಕ್ಕೆ ಹೋಗುಣ ಬಾರೆ

ಎಂಬ ಉದ್ದವಾದ ಚುಟುಕು ನನ್ನ ಹಳ್ಳಿಯಲ್ಲಿ ಬಳಕೆಯಲ್ಲಿದೆ. ಒಗೆಯುವುದೇ ತಮ್ಮ ಕುಲ ಕಸುಬಾದ ಅಗಸರೂ ಸಹ ಇಂಥ ಹಾಡುಗಳನ್ನು ಹಾಡುವುದುಂಟು.

ಹೊಗೆ ಸುತ್ತಿದರವಿಯ ಸೊಗಸ ಗಂಜಿಯ ಮಾಡುವ
ಅಗಸರೊ ನಾವು ಅಗಸರೊ

ದೇವಸ್ತುತಿ ಪರವಾದ ತ್ರಿಪದಿಗಳನ್ನು "ಶೌ ಶೌ"

ಎಂದು ಹೇಳಿಕೊಂಡು ಒಗೆಯುವ ರೂಢಿ ಇತ್ತು. ಇವು ವಾಸ್ತವಿಕತೆಯ ಕಾವು, ಕಸುವಿನಿಂದಾಗಿ ಅಭಿವ್ಯಕ್ತಿಯ ಓಜ-ತೇಜ ಹೆಚ್ಚಿಸಿವೆ.

ಇದಲ್ಲದೆ ಸಾಮೂಹಿಕವಾಗಿ ನೆಲಗಟ್ಟು ಬಡಿಯುವಾಗಲೂ, ನೂಲುವಾಗಲೂ ಹೆಣ್ಣು ಮಕ್ಕಳು ಹಾಡಿಕೊಳ್ಳುವರು. ಒಡಪುಗಳು ಇನ್ನೊಂದು ಪ್ರಕಾರದ ಜಾನಪದ ಸಾಹಿತ್ಯ. ಗಂಡ-ಹೆಂಡಿರ ಹೆಸರನ್ನು ಹೇಳುವಾಗ ವಿಶೇಷ ವಿಶೇಷಣ ಸೇರಿಸುವುದು ರೂಢಿ. ಹೆಂಗಸರು ತಮ್ಮ ಗಂಡಂದಿರ ಹೆಸರನ್ನು ಹೇಳುವಲ್ಲಿ, ಇನ್ನೊಬ್ಬರಿಂದ ಕೇಳುವಲ್ಲಿ ಅನಂದಪಡುತ್ತಾರೆ. ನೇರವಾಗಿ ಹೆಸರು ಹೇಳಲು ಬರುವ ನಾಚಿಕೆಯನ್ನು ಹೋಗಲಾಡಿಸಲು ಮೊದಲು ಒಡಪನ್ನು ಹಾಕುತ್ತಾರೆ. "ಒಡಪು" ಮತ್ತು "ಒಗಟು"ಗಳನ್ನು ಸಮನಾರ್ಥಕಪದಗಳೆಂದು ಬಳಸುತ್ತಾರೆ. ಅದರಲ್ಲಿ ಸುಶಿಕ್ಷಿತರು ಒಗಟೆಂದೂ, ಹಳ್ಳಿಗರೂ ಒಡಪೆಂದೂ ಹೇಳುವರು. ಆದರೆ ಜನಪದ ಬಾಯಲ್ಲಿ ಇದಕ್ಕಿರುವ ಅರ್ಥವೇ ಮುಖ್ಯ. ಇವೆರಡು ಭಿನ್ನಾರ್ಥ ಪದಗಳೆಂದೂ ಸ್ಪಷ್ಟವಾಗಿ ಹೇಳಬಹುದು.

ಮದುವೆ ಸೋಬಾನ, ಬಾಗಿನ ಮೊದಲಾದ ಮಂಗಲಕಾರ್ಯಗಳಲ್ಲಿ ಸಮಂಗಲೆಯರು ಅವರವರ ಗಂಡನ ಹೆಸರನ್ನು ಕೇಳಿ-ಹೇಳಿ ತಮ್ಮ ಪ್ರತಿಷ್ಠೆಯನ್ನು ಅವರಲ್ಲಿಯ ಪ್ರೀತಿಯನ್ನು ಪ್ರದರ್ಶಿಸಿಕೊಳ್ಳುತ್ತಾರೆ. ಚಂದಾದ ಒಡಪನ್ನು ಹೇಳಿ ತಮ್ಮ ಜಾಣ್ಮೆಯನ್ನು ಪ್ರದರ್ಶಿಸಲು ಇದೊಂದು ಸದಾವಕಾಶವೆಂದು ತಿಳಿಯುತ್ತಾರೆ. ಗಂಡಸರು ಮಾತ್ರ ಹೆಂಡಂದಿರ ಹೆಸರನ್ನು ಕೆಡಿಸಿ ವ್ಯಂಗ್ಯೋಕ್ತಿಯ ಒಡಪನ್ನು ಹಾಕಿ ಹೆಸರು ಹೇಳುತ್ತಾರೆ. ಹೆಣ್ಣಿನ ಹೆಣ್ಣಿನ ಚೆಲುವು-

ಬಂಗಾರ ವಂಕಿ ಬಂದಿs ಕುಬುಸ
ಚಂದನ ತುರುಬಿನಾಕಿ ಬಂದಾಳಿಲ್ಲಂತ
ಮಂದ್ಯಾಗ ನೋಡ್ತಾರ..... (ಇಲ್ಲಿ ಗಂಡನ ಹೆಸರು ಇರುತ್ತದೆ)

ತನ್ನ ಸಂಸಾರ ಚಿತ್ರ

ಕಟಕ ರೊಟ್ಟಿ, ತಟಕ ಎಣ್ಣಿ
ಕಟಗೊಂಡ ಹೋಗಂದ್ರ ಸೆಟಗೊಂಡು ಹೋಗ್ತಾರ ...
(ಇಲ್ಲಿ ಗಂಡನ ಹೆಸರು ಇರುತ್ತದೆ.)

ಮುದುಕಿಯು ಒಮ್ಮೊಮ್ಮೆ ಹಾಸ್ಯಕ್ಕಾಗಿ

ಹರಕ ಜತ್ರಿಗಿ ಮುರುಕ ಬಾರಕೋಲ

ಎತ್ತ ನಡಿಯೊಲ್ಲುವಂತ ಎದಿಎದಿ ಬಡ್ಕೋತಾನ... (ಇಲ್ಲಿ ಗಂಡನ ಹೆಸರು ಇರುತ್ತದೆ.)

ಎಂದು ಮುದುಕನ ಹೆಸರನ್ನು ಹೇಳಿ ಎಲ್ಲರನ್ನು ನಗಿಸುವುದೂ ಉಂಟು.

ಗಂಡನ ಹೆಸರು ಹೇಳುವಾಗ-

'ಹಗ್ಗದಲೆ ಹೊಡದರ ಮಗ್ಗಲಕ ಬರತಾಳ' ...(ಇಲ್ಲಿ ಹೆಂಡತಿಯ ಹೆಸರು ಇರುತ್ತದೆ.)

'ನಿಚ್ಚಣಿಕಿ ಮ್ಯಾಲಕುಂತ ನುಚ್ಚ ಉಣತಾನ' ...(ಇಲ್ಲಿ ಹೆಂಡತಿಯ ಹೆಸರು ಇರುತ್ತದೆ.)

ಮದುವೆ ಸಂದರ್ಭದಲ್ಲಿ ಅನೇಕ ಒಡಪುಗಳು ಬರುತ್ತವೆ. ಮದುವಣಗಿತ್ತಿ ಹಾಗೂ ಮದುಮಗನನ್ನು ಹಂದರದ ಕೆಳಗಡೆ ಕುರ್ಚಿ ಅಥವಾ ಮಂಚದ ಮೇಲೆ ಕೂಡಿಸಿ ಆರತಿ ಮಾಡುತ್ತಾರೆ. ಅಂಥ ಸಂದರ್ಭದಲ್ಲಿ ಮುತ್ತೈದೆಯರ ಆರತಿ ನಂತರ ಮದುಮಕ್ಕಳ ಸರದಿ ಬಂದಾಗ ಮೊದಲು ಗಂಡನ ಸರದಿ ಜಾನಪದರ ಒಡಪಿನಲ್ಲಿ ಪ್ರಾಸಾಕ್ಷರಗಳು ನಿರರ್ಗಳವಾಗಿ ಒಡ ಮೂಡಿವೆ. ಅಲ್ಲದೇ ಆ ಕ್ಷಣದಲ್ಲಿ ಒಡ ಮೂಡುವ ಚುಟುಕು ಒಡಪುಗಳು.

ಗಂಡ

ಹಂದರಕ್ಕೆ ಹಾಕೋದು ಗಳ

ಸೀರೆಗೆ ಹಾಕೋದು ಮೊಳ

ನನಗಿಂತ ಮೂರು ಮೊಳ

ಎತ್ತರ ನನ್ನೆಂಡ್ತಿ ಬಿತ್ತರಿ

ಇಲ್ಲಿ ಹೆಂಡತಿ ಹೆಸರು ಬಿದಿರಮ್ಮ. ಅವಳನ್ನು ಹೆಸರಿನಲ್ಲಿ ಬಿತ್ತರಿ ಎನ್ನುವುದು ಅಲ್ಲದೇ ಗಂಡ ಎತ್ತರದಲ್ಲಿ ಗಿಡ್ಡ. ೬ ಅಡಿ ಹೆಂಡತಿ, ೩ ಅಡಿ ಗಂಡ ಜನಪದರಲ್ಲಿ ಒಂದು ವಿಚಾರ ಇದೆ. ಗಂಡ ಹೆಂಡ್ತಿ ಜೋಡಿ ಹವಳ ಮುತ್ತು ಜೋಡಿಸಿದಾಂಗ, ಎತ್ತರದ ಹೆಂಡತಿಯನ್ನು ಅವಮಾನಿಸುವ ಪ್ರಕ್ರಿಯೆ ಈ ಒಡಪಿನಲ್ಲಿದೆ. ನಂತರ ಹೆಂಡತಿ ಸರದಿ

ಹೆಂಡತಿ

ಬೆಕ್ಕು ಬಂತಾ ಉಸ್ಯ

ನನ್ನ ಗಂಡ ಬಸ್ಯ

ಎಂದು ಹಾಸ್ಯಮಯವಾಗಿ ಗಂಡನ ಹೆಸರು ಬಸವರಾಜಪ್ಪ ಎಂತಿದ್ದರೂ ಬಸ್ಯ ಎಂದು ಮೊಟಕಾಗಿ ಹೇಳಿ ಕೇಳುಗರಿಗೆ ನಗೆ ಬರುವಂತೆ ಹೇಳುತ್ತಾರೆ. ಇದಾವುದು ವಿರಸಕ್ಕಲ್ಲ. ಸರಸಕ್ಕೆ ಮಾಡುತ್ತಿದ್ದರು ಜನಪದೀಯರು. ಇನ್ನೊಂದು ಸಂದರ್ಭದಲ್ಲಿ ಯಾವುದೇ ಹೆಣ್ಣು ತನ್ನ ಗಂಡ ಪರಸ್ತ್ರೀಯರ ಜೊತೆ

ಸಂಬಂಧ ಇರುವಂತಿಲ್ಲ. ಒಂದು ವೇಳೆ ಇದ್ದರೆ ಸಹಿಸುವುದಿಲ್ಲ. ತನ್ನ ಗಂಡನ ಹೆಸರು ಬೇರೆ ಹೆಣ್ಣು ಹೇಳಿದರೆ ಆಕೆಗೆ ಕೋಪ ಬರುತ್ತದೆ. ಇನ್ನೊರ್ವ ಹೆಣ್ಣುಮಗಳು ತನ್ನ ಗಂಡನ ಹೆಸರನ್ನು ನಗೆಚಾಟಿಕೆಗೆ ಹೇಳಿದಾಗ ಆ ಕ್ಷಣದಲ್ಲಿ ಈ ಹೆಣ್ಣು ಹೇಳುವ ಒಡಪೆಂದರೆ

ಸೆಗಣಿ ಒತ್ತಿ, ಬಿಳಿ ಜೋಳ ಬಿತ್ತಿ
ನನ್ನ ಗಂಡನ ಹೆಸರೇಳಿದವರ ಹೆಣ ಎತ್ತಿ

ಎಂದು ತನ್ನ ಸಿಟ್ಟನ್ನು ಈ ರೀತಿ ವ್ಯಕ್ತಪಡಿಸಿದ್ದಾಳೆ.

ಇಂಥವೆಷ್ಟೋ ರಸಮಯವಾದ ಒಡಪುಗಳು ಹೆಣ್ಣುಮಕ್ಕಳ ನಾಲಗೆಯ ಮೇಲಿದೆ. ಚುಟುಕುಗಳಂತೆ ಅವು ಹಾಸ್ಯ, ವಿಡಂಬನೆಯಿಂದ ಕೂಡಿವೆ. ಬಿಡುವಿನ ವೇಳೆಯ ಸದುಪಯೋಗಕ್ಕೆ ಆಸರ-ಬೇಸರ ನೀಗಿಸಲಿಕ್ಕೆ ಅವು ಬಳಕೆಯಾಗುತ್ತವೆ. ವಿಮರ್ಶಕರು ಇವುಗಳನ್ನು ಪ್ರತಿಮೆ-ಪ್ರತೀಕಗಳೆಂದು ಗಂಭೀರವಾಗಿ ಪರಿಗಣಿಸಿ ಅರ್ಥಸುವುದರತ್ತ ಗಮನಹರಿಸಿ ಜನಪದ ಸಾಹಿತ್ಯದ ನೈಜ ನೆಲೆಯನ್ನು ಗುರುತಿಸಬೇಕಾಗಿದೆ. ಅಂತಹ ಒಂದು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

III

ಜಾನಪದ ಸಣ್ಣಾಟಗಳಲ್ಲಿ ಸಂಗ್ಯಾ-ಬಾಳ್ಯ ತುಂಬ ಪ್ರಮುಖವಾಗಿದೆ, ಜನಪ್ರಿಯವಾಗಿದೆ. ಅದರ ಜನಪ್ರಿಯತೆಗೆ ಮೂರು ಕಾರಣಗಳಿವೆ.

೧. ಸಾಮಾಜಿಕ ವಸ್ತುವನ್ನೊಳಗೊಂಡ ವಾಸ್ತವಿಕ ಘಟನೆಯ ಮೇಲೆ ಆ ನಾಟಕ ರಚನೆಯಾಗಿದೆ.

೨. ನಾಟಕದ ಉದ್ದಕ್ಕೂ ಹಾಸ್ಯ, ಪ್ರಣಯ, ಶೃಂಗಾರಗಳೇ ತುಂಬಿಕೊಂಡಿವೆ. ಮೈ-ಮನ ಸೆಳೆಯುವ ಹಾಡುಗಳು ಪ್ರೇಕ್ಷಕರನ್ನು ಸೆರೆ ಹಿಡಿಯುತ್ತವೆ.(ಅವುಗಳ ಒಡಲಲ್ಲಿ ದುರಂತ ಅಡಗಿದೆ ಎಂಬುದನ್ನು ಮರೆಯಬಾರದು).

೩. ಪ್ರಾದೇಶಿಕ ಭಾಷಾವೈಶಿಷ್ಟ್ಯಗಳನ್ನು ಅದು ಬಳಸಿಕೊಂಡಿರುವುದರಿಂದ ಪ್ರೇಕ್ಷಕರಿಗೆ ಹೆಚ್ಚು ಹತ್ತಿರವಾಗಿದೆ. ಇದರಿಂದ ಭಾಷಾ ಸಂಕೀರ್ಣತೆ ದೂರವಾಗಿ ನಾಟಕದ ಆಶಯ ಜನರಿಗೆ ಸುಲಭವಾಗಿ ಅರ್ಥವಾಗುತ್ತದೆ.

ಈ ಎಲ್ಲ ಅಂಶಗಳಿಂದ ಈ ಸಣ್ಣಾಟ ಕನ್ನಡ ಜಾನಪದ ರಂಗಭೂಮಿಯ ಮೇಲೆ ತನ್ನದೇ ಆದ ಅನನ್ಯತೆಯನ್ನು ಪಡೆದುಕೊಂಡಿದೆ. ಸಂಗ್ಯಾಬಾಳ್ಯಾದಲ್ಲಿ ೧.ಮುದುಕ-ಮುದುಕಿರ ಸಂವಾದ ೨. ಗುಡಿಯಲ್ಲಿ ಪೂಜಾರಿ-ಗಂಗಾ-ಪರಮ್ಮರ ಸಂವಾದ ಈ ಎರಡು ಪ್ರಸಂಗಗಳಲ್ಲಿ ಚುಟುಕು ಮಿಶ್ರಿತ ಹಾಡುಗಳಿವೆ. ಮುದುಕನಾದ ತನ್ನ ಗಂಡನಿಗೆ ಹೇಳಿ ಹೋಗಲೆಂದು ಬಂದ ಪರಮ್ಮ ಅವನೊಡನೆ ವಾದಿಸಿ, ಜಗಳವಾಡಿ, ಅವನು ಬೇಡವೆಂದರೂ ತನ್ನ ಹಟ ಬಿಡದೆ ಗಂಗೆಯ ಜೊತೆಗಿರಲು ಹೊರಟು ಹೋಗುತ್ತಾಳೆ.

ಪರಮ್ಮ

ಗಂಗಾ ನನಗೆ ಬಾ ಅಂತ ಹೇಳ್ಯಾಳಲ್ಲಾ
ಹೊಗತೇನೊ ಮುದಕಾ ನಾನು ನಿಂದ್ರಾಣೆಯಲ್ಲಾ ||

ಮುದುಕ

ಹೋಗಬ್ಯಾಡ ಮುದಕಿ ತಂಡಿ ತಾಳಾಣಿಲ್ಲ
ತೆಕ್ಕಾಗಿದ್ರ ರಾಣಿ ಹಗಲಿ ಏನೇನಿಲ್ಲಾ ||
ನಿನ್ನ ಬಿಟ್ಟ ನನ್ನ ಬೀಜ ಗಮಸಾಣಿಲ್ಲಾ
ಹ್ಯಾದೆಂದ್ರ ನನ್ನ ಪ್ರಾಣ ಉಳಿಯಾನಿಲ್ಲಾ ||

ಪರಮ್ಮ

ತಂಗಳ ರೊಟ್ಟಿ ನನ್ನ ಹಲ್ಲಿಗಿ ಬರಾಣಿಲ್ಲಾ
ಹಸಿ ಹಾಲ ನನ್ನ ಹೊಟ್ಟಿಗಿ ಹತ್ತೋಣಿಲ್ಲ ||

ಪರಮ್ಮ

ಬಟ್ಟ ಗುಣದ ಕೆಟ್ಟ ಮುದುಕ ತಿಳಿಯೋಣಿಲ್ಲ
ಸಾವೂತನಕ ಅದ್ಯೋ ನೀ ನನಗ ಮೂಲಾ ||

ಮುದುಕ

ಕಟ್ಟ ರಂಡೆ ಎಟ್ಟ ಹೇಳಿದರೆ ಕೇಳೂದುಲ್ಲಾ
ಹಾಳಾಗಿ ಹೋಗ ನಿಲ್ಲಬ್ಯಾಡ ಇನ್ನ ಮ್ಯಾಗಾ ||

ಮುದುಕ ಮುದುಕಿಯರ ಸಂಭಾಷಣೆ, ಹಾಸ್ಯಭರಿತ ವಿಚಿತ್ರ ಚುಟುಕುಗಳು, ಹಾವಭಾವಗಳನ್ನು ನೋಡಿಯೋ, ಕೇಳಿಯೋ ಅನಂದಿಸಬೇಕು. ಪರಮ್ಮ ಮತ್ತು ಗಂಗಾ ಇಬ್ಬರೂ ಮರಡಿ ಬಸವಣ್ಣನ ಗುಡಿಗೆ ಬಂದಾಗ ಅಲ್ಲಿ ಜಾತ್ರೆ ನಡೆದಿರುತ್ತದೆ. ದಾರಿ ನಡೆ ನಡೆದು ಗಂಗೆಯ ಕಾಲು ಸೋತಿವೆ. ಗುಡಿಯಲ್ಲಿ ಪೂಜಾರಿಗೂ ಅವಳ ಚೆಲುವು ಹುಚ್ಚು ಹಿಡಿಸುತ್ತದೆ. ಪರಮ್ಮನನ್ನು ಬೇರೆ ಹೂವು ತರಲು ಕಳಿಸಿ ಪೂಜಾರಿ ಗಂಗೆಯನ್ನು ವಶಪಡಿಸಿಕೊಳ್ಳುವ ಹೊಂಚಿನಲ್ಲಿದ್ದಾನೆ. ಆದರೆ ಗಂಗೆ ಅವನಿಗೆ ಒಲಿಯುವುದಿಲ್ಲ.

ಗಂಗಾ

ಎಷ್ಟ ದೂರ ಐತೆ ಎವ್ವಾ ದೇವರಾ
ಅಹಾ | ದೇವರಾ
ನಡೆದು ಬಂದಿತು ಎನಗ ಬ್ಯಾಸರಾ ||ಪ||
ಗಿಡದ ಜಿದಿಪಿನ್ಯಾಗ ಕಾಣದು ದೇವರಾ

ಕೇಳ ಎವ್ವಾ ಜಾತರಿ ಸಡಗರಾ ||
ಸಾಲಮೇಲ ಹೊಡದ್ದಾವ ಗೂಡಾರ
ನೋಡ ಎವ್ವಾ ದೇವರ ಸಡಗರಾ ||
ದೇಶಕ ಜಾಹೀರಾ ಮರಡಿ ಬಸವೇಸೂರಾ
ಹಣಿಮ್ಯಾಲ ಈಬತ್ತಿ ರುದ್ರಾಕ್ಷಿ ಕೊರಳಾ ||

ಪೂಜಾರಿ

ಕೂಗ ಹೊಡೆದ ಕರಿವಾಕಿ ಯಾರದಿ ಹೇಳ ನಾ
ಹತ್ತವಲ್ಲದ ಕೂನಾ
ಏ ಎವ್ವಾ | ಯಾರದಿ ಹೇಳ ನೀನಾ ||
ಹಿಂದಿನ ಹುಡುಗಿ ಮೈಯ ಬಣ್ಣಾ
ಥೇಟ ಲಿಂಬಿಯ ಹಣ್ಣಾ
ನೋಡಿ ಮುಚ್ಯಾವ ಕಣ್ಣಾ
ಏ ಎವ್ವಾ | ಯಾರದಿ ಹೇಳ ನೀನಾ ||
ಹುರಿಗೆಜ್ಜಿ ಎತ್ತಿನ್ಹಾಂಗ ಏರಿ ಬರ್ತಿ ಮೈಯ ಮ್ಯಾಲ
ನಡ ಸಣ್ಣ ಕಾಡಿಗಿಗಣ್ಣಾ |
ನಾಗರಬಣ್ಣ | ನೋಡಲಾರೊ ಈಕಿ ವರ್ಣಾ
ಯಾರದಿ ಹೇಳ ನೀನಾ ||

ಪರಮ್ಮ

ಪುಕ್ಕ ಪೂಜೇರಿ ನೀನು
ಮಳ್ಳ ಪೂಜೇರಿ ನೀನು
ಬಂದ ಕೇಳತಿ ನಮನಾ |
ಲಗಳೇರ ಗಂಗಾ ಮಹಿತಿಲ್ಲೇನೊ ನಿನಗಾ ||ಪ||
ಇರಪಕ್ಷಿ ಬಸವಂತ
ಈರ್ಯಾ ಆಕಿ ಪ್ರಾಣಕಾಂತ
ಮತ್ಯಾರಾದರ ಬಿಡಾಕಿಲ್ಲ
ಕಿತ್ತಾರ ಬಾಯಾನ ಹಲ್ಲ
ಕಡ್ಡದ ಹಾಕ್ಯಾರೊ ನಿನಗ |
ಲಗಳೇರ ಗಂಗಾ ಮಾಹಿತಿಲ್ಲೇನೊ ನಿನಗಾ ||

ಈ ಎರಡು ಪ್ರಸಂಗಗಳಲ್ಲಿ ಚುಟುಕುಗಳು ಅರ್ಥಪೂರ್ಣವಾಗಿ ಬಳಕೆಯಾಗಿವೆ. ಹಾಸ್ಯ, ವಿಡಂಬನೆ ಹೆಪ್ಪುಗಟ್ಟಿದೆ. ಆ ಪ್ರಸಂಗಗಳು ರಂಗದ ಮೇಲೆ ಬಂದಾಗ ಪ್ರೇಕ್ಷಕರು ನಕ್ಕು ನಲಿಯುತ್ತಾರೆ. ಜನಪದ ಕವಿಯ ಭಾವನೆ, ಚಿಂತನೆ, ಆಸೆ-ಆಕಾಂಕ್ಷೆಗಳಿಂದಲೂ ಕವಿ ಪ್ರತಿಮೆ ಈ ಗೀತ ರೂಪಕದಲ್ಲಿ ಅರ್ಥಪೂರ್ಣವಾಗಿ ಅನಾವರಣವಾಗಿದೆ.

IV

ಹಂತಿ ಪದಗಳಂತೆ ಶಿಶುಪ್ರಾಸಗಳಲ್ಲಿಯೂ ಚುಟುಕುಗಳು ಧಾರಾಳವಾಗಿ ಬಳಕೆಯಾಗುತ್ತವೆ. ಅವುಗಳ ಸ್ವರೂಪ ಹೀಗಿದೆ : ಶಿಶುಪ್ರಾಸಗಳು ಮಕ್ಕಳಿಗಾಗಿ ಹಿರಿಯರು ರಚಿಸಿದಂತಹುವು. ಶಿಶುಪ್ರಾಸಗಳಲ್ಲಿ ಪ್ರಾಮುಖ್ಯತೆ ಇರುವುದು ಪ್ರಾಸಕ್ಕೆ ವಿನಃ ಅರ್ಥಕ್ಕಲ್ಲ. ಮಕ್ಕಳು ಹಠಮಾಡಿ ಆಳುತ್ತಿರುವಾಗ ಅವರನ್ನು ರಮಿಸಿ ಸಂತೋಷ ಪಡಿಸುವಾಗಲೋ, ಆಟವಾಡಿಸುವಾಗಲೋ, ಇನ್ನೊಬ್ಬರನ್ನು ಅಣಕಿಸುವಾಗಲೊ ಸಾಂದರ್ಭಿಕ ಸಮಯ ಸ್ಫೂರ್ತಿಯೇ ಶಿಶುಪ್ರಾಸಗಳ ಜನನಕ್ಕೆ ಕಾರಣವಾಗುತ್ತದೆ. ಸಾಮಾನ್ಯವಾಗಿ ಶಿಶುಪ್ರಾಸ ಎಂದರೆ ಪ್ರಾಸಯುಕ್ತ ಹಾಡು, ಗೀತೆ ಎಂದರ್ಥ. ಬೇರೆ ಬೇರೆ ಹಾಡುಗಳ ಶಿಲ್ಪವನ್ನು ಅವುಗಳ ಛಂದೋಕ್ರಮ, ಲಯಗಾರಿಕೆಯಲ್ಲಿ ಗುರುತಿಸಬಹುದಾದರೆ ಮಕ್ಕಳ ಹಾಡುಗಳನ್ನು ಪ್ರಾಸಗಳಲ್ಲಿಯೇ ಗುರುತಿಸಬೇಕು. ಪ್ರಾಸಪ್ರಧಾನವಾಗಿ ಅರ್ಥಗೌಣವಾಗುವ ಇವುಗಳು ಶಿಸುಪ್ರಾಸಗಳೆಂದು ಕರೆಯುವುದರಲ್ಲಿ ಔಚಿತ್ಯವಿದೆ. ಶಿಶುಪ್ರಾಸಗಳು ಸರಳವಾಗಿದ್ದು ನೆನಪಿಟ್ಟುಕೊಳ್ಳಲು ಸುಲಭವಾಗಿರುತ್ತವೆ.

ಕುಟುಂಬದ, ಸಮಾಜದ ಚಟುವಟಿಕೆಗಳ ಅನುಕರಣೆಯೇ ಪ್ರಾಸಕ್ಕೆ ಕಾರಣ. ಮಕ್ಕಳ ಅನುಕರಣ ಬುದ್ಧಿ ೫ ವರ್ಷದ ನಂತರ ಕಂಡುಬರುವುದು. ತಾಯಂದಿರು ಬೀಸುವಾಗ, ಕೇರುವಾಗ, ಮಕ್ಕಳು ಅದನ್ನು ನೋಡಿ ಅನುಕರಣ ಮಾಡುವರು. ಶಿಶುಪ್ರಾಸಗಳು ಆಟಗಳೊಂದಿಗೆ ಬೆರತುಕೊಂಡಿರುತ್ತವೆ. ಆಟದ ಸಾಮಗ್ರಿಗಳಿಗೆ ದುಡ್ಡು ತರಬೇಕಾಗಿಲ್ಲ. ಕಲ್ಲು, ಕಟ್ಟಿಗೆ, ಮಣ್ಣುಗಳೇ ಅವರ ಆಟಿಕೆಗಳು, ಮನೆಯ ಮುಂದಿನ ಅಂಗಳವೇ ಅವರ ರಂಗಭೂಮಿ, ಶಿಶುಪ್ರಾಸಗಳಲ್ಲಿ ಅಜ್ಜಿಯ ಪಾತ್ರ ಹಿರಿದಾದುದು ಮತ್ತು ಗೌರವಯುತವಾದುದು. ಅವುಗಳ ಹುಟ್ಟು ಬೆಳವಣಿಗೆಯಲ್ಲಿ ಅಜ್ಜಿಯರು ಪ್ರಮುಖ ಪಾತ್ರವಹಿಸುತ್ತಾರೆಂಬುದನ್ನು ಮರೆಯುವಂತಿಲ್ಲ. ಕೆಲವು ಸಾರಿ ಅಜ್ಜಿ ಮಕ್ಕಳ ಹಾಡುಗಳಲ್ಲಿ ತಾನು ಒಂದು ಪಾತ್ರವಾಗುತ್ತಾಳೆ.

ಶಿಶುಪ್ರಾಸಗಳನ್ನು ವರ್ಗೀಕರಿಸುವುದು ತುಂಬ ತೊಡಕಿನ ಕೆಲಸ. ಯಾವ ಬಗೆಯಲ್ಲಿ ವರ್ಗೀಕರಿಸಿದರು ವರ್ಗೀಕರಣ ಪರಿಪೂರ್ಣವಾಗುತ್ತದೆಂದು ಹೇಳಲಾಗದು ಬಾಲ್ಯಾವಸ್ಥೆಯಲ್ಲಿ ಮಕ್ಕಳು ಹೆಣ್ಣು-ಗಂಡೆಂಬ ಭೇದವಿಲ್ಲದೆ ಹಾಡುತ್ತಾರೆ. ಮಗುವಿನ ಬೆಳವಣಿಗೆಗನುಗುಣವಾಗಿ ಗಂಡುಮಕ್ಕಳ, ಹೆಣ್ಣುಮಕ್ಕಳ ಪ್ರಾಸಗಳೆಂದು ಗುರುತಿಸಬಹುದು. ಮಕ್ಕಳ ಹಾಡುಗಳನ್ನು ಉತ್ಸವದ ಹಾಡು, ಉತ್ಸಾಹದ ಹಾಡುಗಳೆಂದು ವಿಭಜಿಸಿ ಶಿಶುಪ್ರಾಸಗಳನ್ನು ಉತ್ಸಾಹದ ಹಾಡುಗಳಲ್ಲಿ ಸೇರುತ್ತವೆ. ಅದರಲ್ಲಿ ವಿನೋದದ ಪ್ರಾಸ, ಕ್ರೀಡಾ

ಪ್ರಾಸಗಳೆಂದು ಉಪವರ್ಗೀಕರಣ ಮಾಡಿದ್ದಾರೆ. ತಾಯಿ ಮತ್ತು ವಯಸ್ಕರರಿಂದ ಕಲಿಯುವಂತಹುವು ವಯಸ್ಕರ ಪ್ರಾಸವಾದರೆ ಮಕ್ಕಳಿಂದ ಕಲಿಯುವಂತಹವು ಶಾಲಾಪ್ರಾಸ. ಶಿಶುಪ್ರಾಸಗಳಲ್ಲಿಯ ಸಾಮಾನ್ಯ ಗುಣ ಮತ್ತು ಮತ್ತೊಂದರಲ್ಲಿರುವುದರಿಂದ ಅವುಗಳನ್ನು ಖಚಿತವಾಗಿ ವರ್ಗೀಕರಿಸುವುದು ಕಷ್ಟವೆಂದೇ ಹೇಳಬೇಕು. ಗೆಳೆಯ ಗೆಳತಿಯರನ್ನು ಗೇಲಿ ಮಾಡುವಾಗ ವಿನೋದ ಪ್ರಾಸಗಳು ಕಂಡುಬರುತ್ತವೆ.

ಒಬ್ಬೊಬ್ಬರ ತಲಿಮ್ಯಾಗ
ಗುಬ್ಬಿ ಕುಂತೈತಿ

ಎಂದಾಗ ಗೆಳೆಯನೊಬ್ಬ ತಲೆಯ ಮೇಲೆ ಕೈಯಾಡಿಸಿಕೊಳ್ಳುತ್ತಾನೆ ಏನು ಇರುವುದಿಲ್ಲ. ಆತ ಪ್ರಾಸ ಹೇಳಿದವರನ್ನು ಅಟ್ಟಿಸಿಕೊಂಡು ಹೋಗುತ್ತದೆ.

ನಿಂಗಪ್ಪ ನಿಂಗಪ್ಪ ನೀರಾಗ
ನಿಂಗಪ್ಪನ ಹೆಂಡತಿ ಊರಾಗ

ಆಡುವ ಸಂದರ್ಭಕ್ಕೆ ತಕ್ಕಂತೆ ಕೆಲವು ಪ್ರಾಸಗಳು ಬರುತ್ತವೆ. 'ಹಂತೊಂಬಳ್ಳಿನಾಟ'ವನ್ನು ಇದಕ್ಕೆ ಉದಾಹರಿಸಬಹುದು. ಮಕ್ಕಳು ಕೈ ಕೈ ಹಿಡಿದು ಸುತ್ತನಿಂತು 'ಹಂತೊಂಬಳ್ಳಹರಗಿಬಳ್ಳ' ಎಂದು ಹಾಡುತ್ತಾರೆ. ಮಕ್ಕಳು ಬಂಡಿಯ ನಗದ ಮೇಲೆ ಕುಳಿತು ಆಡುವಾಗ ನಗದ ಸಪ್ಪಳವೇ ಅವರಿಗೆ ಪ್ರಾಸಕ್ಕೆ ಪ್ರೇರಣೆಯಾಗುತ್ತದೆ.

ದಡಂ ದುಡಕಿ
ಪಾವಶೇರ ಅಡಕಿ

ಇಂತಹ ಪ್ರಾಸಗಳು ಸಾಕಷ್ಟು ದೊರೆಯುತ್ತವೆ. ಶಿಶುಪ್ರಾಸಗಳು ಮಕ್ಕಳ ವಯೋಮಾನಕ್ಕೆ ತಕ್ಕಂತೆ ಬೇರೆ ಬೇರೆಯಾಗಿರುತ್ತವೆ 'ಆನೆ ಬಂತಾನೆ', 'ಚಂದಪ್ಪ ಚಂದಪ್ಪ ಚಾರಿಕಾಯಿ' ಇವು ಹಸು ಮಕ್ಕಳಿಗೆ ಸಂಬಂಧಿಸಿದರೆ ಉಳಿದವು ೬ ರಿಂದ ೧೪ ವಯಸ್ಸಿನ ಮಕ್ಕಳಲ್ಲಿ ಅನ್ವಯಿಸುತ್ತವೆ. ಚುಟುಕುಗಳಲ್ಲಿ ಪ್ರಾಸಕ್ಕಾಗಿ ಪ್ರಾಸ ಬಂದಿಲ್ಲ, ಆಶಯದ ಪ್ರಭಾವ ಪೂರ್ಣ ಆವಿಷ್ಕಾರಕ್ಕಾಗಿ ಅಭಿವ್ಯಕ್ತಿಯ ಅಭಿನ್ನವಾಗಿ ಬಂದಿವೆ. ಅದರಿಂದ ಅರ್ಥವಂತಿಕೆ ಕಳೆಕಟ್ಟಿದೆ. ಶಿಶುಪ್ರಾಸಗಳು ಹಾಸ್ಯ, ವಿಡಂಬನೆ, ವ್ಯಂಗ್ಯ, ಚಮತ್ಕಾರ, ಅಣಕ, ಅಸಂಬದ್ಧತೆ ಮೊದಲಾದ ರಂಜನೀಯ ಅಂಶಗಳನ್ನು ಹೊಂದಿ ತಮ್ಮ ಚೆಲುವಿಕೆಯನ್ನು ಮೆರೆದಿವೆ.

ಹೆಣ್ಣು ಮಗಳ ಮಗ	ಕಾಗಿ ಬಾಬಾ ನಮ್ಮ ಅಜ್ಜನ ತಲಿ ಕುಕ್ಕ ಬಾ
ಗಂಡು ಮಗನ ಮಗ	ಕಾಗಿ ನಮ್ಮ ಅಜ್ಜನ ಸನೇಕ ಬಾ ನಿನ್ನ ನೋಡ

ಎನ್ನುವಲ್ಲಿಯ ಹಾಸ್ಯ ಗಮನಾರ್ಹವಾಗಿದೆ. ಗಂಡುಮಗನ ಮಗನಿಗೆ ತಮ್ಮ ಅಜ್ಜನ ಮೇಲೆ (ತಂದೆಯ ತಂದೆ) ಕಾಳಜಿ ಇದೆ. ಹೆಣ್ಣು ಮಗಳ ಮಗ (ತಾಯಿಯ ತಂದೆ) ಅಜ್ಜನ ಮೇಲೆ ಕಾಳಜಿಯ ಜೊತೆಗೆ ತಮಾಷೆಯನ್ನು ಮಾಡುತ್ತಾನೆ. ಅಜ್ಜ ಅಮ್ಮರಿಗೆ ಮಗಳ ಮಕ್ಕಳ ಮೇಲೆ ಕಾಳಜಿ ಹೆಚ್ಚು. ತಾಯಿಯನ್ನು ಕರೆಯಲಿಕ್ಕೆ ಮಾವಂದಿರರು ಮನೆಗೆ ಬಂದಾಗ ಮಕ್ಕಳು ಅವನನ್ನು ಗೇಲಿ ಮಾಡುತ್ತಾರೆ.

ಕಾಗಿ ಕಾಗಿ ಕೌ
ಯಾರೊ ಬಂದಾರೌ
ಮಾವ ಬಂದಾನೌ
ಏನು ತಂದಾನೌ
ಹಂಡೆದಂತಹ
ಕುಂಡಿ ಮಾಡಿಕೊಂಡ
ಹಂಗ ಬಂದಾನೌ
ಮಾವಗೇನು ಊಟ
ಬಿಸೇಕಲ್ಲ ಗೂಟ

ಹಾಸ್ಯದ ಕೋಲ್ಮಿಂಚುಗಳ ಬೆಡಗು ಕಣ್ಮುಂದೆ ಕಟ್ಟುತ್ತದೆ. ಇಲ್ಲಿಯ ವ್ಯಂಗ ನಾಟಕೀಯ ಸನ್ನಿವೇಶ, ದೇಶಿಯ ಮಾತಿನ ಧಾಟಿ ಗಮನಾರ್ಹವಾಗಿದೆ. ಶಿಶುಪ್ರಾಸಗಳಲ್ಲಿ ಹಾಸ್ಯ ವಿಡಂಬನೆಗೆ ಕೇಂದ್ರ ವ್ಯಕ್ತಿ ಮಾವನೇ.

ಅಡ್ನ ಗ್ಯಾಡಿಮ್ಯಾಲ
ಗಿಡ್ನ ಬಾಳಿಕಾಯಿ
ಯಾರನುಂಗ್ಯಾರವ್ವ
ಮಾವ ನುಂಗ್ಯಾನವ್ವ
ಮಾವನ ಹೊಟ್ಟಿಕಡಿಲಿ

'ಹಂಡೆದಂತಹ ಕುಂಡಿ ಮಾಡಕೊಂಡ ಹಂಗ ಬಂದಾನವ್ವ', 'ಮಾವನ ಹೊಟ್ಟಿ ಕಡಿಯಲಿ' 'ಮಾವಗೇನು' ಊಟ, 'ಬೀಸೇಕಲ್ಲಗೂಟ' ಎನ್ನುವಲ್ಲಿ ಮಕ್ಕಳಿಗೆ ಮಾವನ ಮೇಲಿರುವ (ಬೀಗರ) ಪ್ರೀತಿ, ಅಭಿಮಾನವನ್ನು ತೋರಿಸುತ್ತದೆ. ಶಿಶುಪ್ರಾಸಗಳ ಚುಟುಕುಗಳಲ್ಲಿ ಪದಗಳ ಪುನರುಕ್ತಿ ಪ್ರಾಸಗಳ ಸೌಂದರ್ಯವನ್ನು ಹೆಚ್ಚಿಸಿದೆ.

ಗುಂಡ ಗುಂಡ
ಗುಡು ಗುಡು ಗುಂಡ
ಬಹಳ ಮಂಡ

ಪದಗಳ ಆವೃತ್ತಿ ಗೆಜ್ಜೆನಾದದಂತೆ ಕಿವಿಗೆ ಅಪ್ಪಳಿಸುತ್ತವೆ. ಮಳೆ ಬರುವ ಪಟ ಪಟ ಹನಿಗಳ ಅನುಕರಣೆಯಂತೆ ಪದಗಳು ಬರುತ್ತವೆ. ಮಳೆ ಬರುವ ಕ್ರಿಯೆಯನ್ನು

ಧೋ ಧೋ ಮಳೆಯೆ
ಪಟ ಪಟ ಮಳೆಯೆ
ಬಾ ಬಾ ಮಳೆಯೆ

ಪುನರಾವೃತ್ತಿಯ ಅನುಪ್ರಾಸ ಮಳೆಯಾಗುವ ಕ್ರಿಯೆಯನ್ನು ಆಗಿನ ವಾತಾವರಣವನ್ನು ಅಭಿನಯದೊಂದಿಗೆ ಹೇಳಿದಂತಾಗಿದೆ. ಆಟವಾಡುವಾಗ ಆಟದ ಕ್ರಿಯೆಯೇ ಪ್ರಾಸವಾಗುತ್ತದೆ. 'ಬಗರಿ ಬಗರಿ ಬಣ್ಣದ ಬಗರಿ ಗಿರಿ ಗಿರಿ ತಿರುಗುವ ಮಾಟದ ಬಗರಿ' ಎನ್ನುವಲ್ಲಿ ಶಬ್ದಸಂಯೋಜನೆಯ ಶಬ್ದಾಲಂಕಾರಗಳು ನುಗ್ಗಿ ಬಂದಿವೆ. ಮಕ್ಕಳಿಗೆ ಬುದ್ಧಿ ತಿಳಿಯುತ್ತ ಬಂದಂತೆಲ್ಲ ಪ್ರಾಸ ಪ್ರೀಯತೆಗಿಂತ ಲಯಗಾರಿಕೆಯ ಕಡೆಗೆ ಮನಸ್ಸು ಹರಿಯುತ್ತದೆ. ಆಗ ಪ್ರಾಸಗಳ ವಸ್ತು ಮತ್ತು ರಚನೆಯಲ್ಲಿಯೂ ಮಾರ್ಪಾಟು ಆಗುತ್ತದೆ. ಶಿಶುಪ್ರಾಸಗಳಲ್ಲಿ ಪ್ರಾದೇಶಿಕ ವೈಶಿಷ್ಟತೆಗಳು ಎದ್ದು ಕಾಣುತ್ತವೆ.

ದಾವಣಗೆರೆ ಸಂತೆಗೆ ಹೋದಾರ (ಶಿವಮೊಗ್ಗ)
ಸೊಗಲ ಜಾತ್ರ್ಯಾಗ ನಿಂತಾರ (ಬೆಳಗಾವಿ)
ಆನೆ ಬಂತಾನೆ (ಮೈಸೂರು)
ಆನಿ ಬಂತಾನಿ (ಬೆಳಗಾವಿ)

ಪದರೂಪದಲ್ಲಿ ವಾಕ್ಯರಚನೆಯಲ್ಲಿ ಪ್ರಾದೇಶಿಕ ವ್ಯತ್ಯಾಸಗಳು ಕಂಡುಬರುತ್ತವೆ. ಪ್ರಾಸಗಳ ಭಾಷೆ ಸರಳ ಮತ್ತು ನೇರ ಆಡುನುಡಿ ಹಾಸುಹೊಕ್ಕಾಗಿ ಬಳಕೆಯಾಗುತ್ತದೆ. ಶಿಶುಪ್ರಾಸಗಳಲ್ಲಿಯ ಪ್ರಾಸ ಪದ್ಯದ ಕಟ್ಟನ್ನು ನಿರ್ಣಯಿಸುತ್ತದೆ. ಪ್ರಾಸಗಳಲ್ಲಿ ಯಾವುದೇ ರೀತಿಯ ಕಟ್ಟುನಿಟ್ಟಿಲ್ಲ ಹುಡುಗರು ತಮ್ಮ ಲಹರಿಯ ಝುರಿಯಲ್ಲಿ ತನ್ಮಯರಾಗಿ ಹಾಡುತ್ತಾರೆ. ಆಯಾ ಪ್ರದೇಶದ ಆಡುನುಡಿಗಳು ಕೇಳಿಬರುವುವು. ಇವು ಅಂಶಗಣಗಳನ್ನೊಳಗೊಂಡಿರುವುದರಿಂದ ಏರಿಳಿತಗಳು ಕೋಚನೆತ್ತಿದಾಗ ರಾಗ ಮಾಡಿ ಹಾಡಲು ಬರುತ್ತವೆ. ಮಕ್ಕಳು ಕಂಬವನ್ನು ಹಿಡಿದು ಅದರ ಸುತ್ತಲು ತಿರುಗುತ್ತ ಕಂಬ ಕಂಬಾಟ; ನಿಂಬಿ 'ತ್ಯಾಟ' ಎಂದು ಹಾಡುತ್ತಾರೆ. ಪ್ರಾಸವನ್ನು ಬಿಟ್ಟರೆ ಕಂಬಕ್ಕೂ ನಿಂಬಿ ತ್ಯಾಟಕ್ಕೂ ಯಾವುದೂ ಸಂಬಂಧವಿಲ್ಲ. ಗೆಳತಿಯರೆಲ್ಲ ಒಂದೆಡೆ ಕೂಡಿ ಕೈ ಕೈ ಹಿಡಿದು ವರ್ತಿಸುವಾಗ.

ಗಿರಿ ಗಿರಿ ಗಿಂಡಿ
ಇಬತ್ತಿ ಉಂಡಿ
ಆ ಕೈ ತಾ ಈ ಕೈ ತಾ ಬಲಗೈ ತಾ

ಇಲ್ಲಿ ಗಿಂಡಿಗೂ ಇಬತ್ತಿ ಉಂಡಿಗೂ ಸಂಬಂಧವಿಲ್ಲ ಕೈ ಕೈ ಹಿಡಿದು ಹಾಡುವಾಗ ಆಟದ ಕ್ರಿಯಾಸ್ವರೂಪ ಹಾಗೂ ಆಡುನುಡಿಯ ಸೊಗಸು ಇಲ್ಲಿ ಮುಖ್ಯವಾಗಿದೆ. ಮಂದಾನಿಲ ಲಯ ಗೆಳತಿಯರ ನರ್ತನಕ್ಕೆ ಸಹಾಯಕಾರಿಯಾಗಿದೆ. ಮಾತಿನ ಗತಿಯ ಲಯವು ಅಲೆ ಅಲೆಯಾಗಿ ಆಡುವ ಕ್ರಿಯೆ ಹಾಡಾಗಿ ತಿರುಗುತ್ತದೆ. 'ಹತ್ತಿಕಟಗಿ ಬತ್ತಿಕಟಗಿ ಬಾವನೂರು ಬಸವನೂರ್ ' ಸುಲಭವಾಗಿ ಅರ್ಥವಾಗುವ ನುಡಿಜೋಡನೆ ಇಲ್ಲಿದೆ, ಅವುಗಳಿಗೆ ಅರ್ಥವಿರದಿದ್ದರು ಹಾಡಿಗಾಗಿ ಸೇರಿವೆ. ಪ್ರಾಸದ ಲವಲವಿಕೆಯನ್ನು ಹೆಚ್ಚಿಸಿವೆ. ಪ್ರಾಸ ಪದ್ಯದ ಹೊರ ಚೆಲುವು ಮಾತ್ರ ಎಂದು ತಿಳಿಯಲಾಗದು ಅದು ನಮ್ಮ ಆಂತರ್ಯದ ಒಂದು ಬಯಕೆಯನ್ನು ತೃಪ್ತಗೊಳಿಸುತ್ತದೆ. ಶಿಶು ಪ್ರಾಸಗಳಲ್ಲಿ ಶಬ್ದಗಳಿಂದ ಹೊರಡುವ ನಾದಕ್ಕೆ ಬೆಲೆಯುಂಟು. ಮಕ್ಕಳು ಹಾಡುಗಳನ್ನು ನೆನಪಿಟ್ಟುಕೊಳ್ಳಲು ಲಯ, ನಾದ ಅನುಕೂಲವಾಗುತ್ತವೆ.

ಪಾರಮ್ಮ ಬಂದಾಳ
ಬತ್ತಿ ಹಾಕಾಕ ಬಂದಾಳ
ಇಳಕಲ್ಲ ಸೀರೆ ಉಟ್ಟಾಳ
ಗುಳೆದಗುಡ್ಡ ಕುಪ್ಪಸ ತೊಟ್ಟಾಳ

ಪ್ರತಿ ಚರಣಕ್ಕೂ 'ಪಾರಮ್ಮ' ಎಂಬ ಪದ ಆವೃತ್ತಿಯಾಗಿ ಆ ಸ್ತ್ರೀ ಬಾಳಿದ ರೀತಿಯನ್ನು ತಿಳಿಸುತ್ತಾ ಇಡೀ ಪ್ರಾಸಕ್ಕೆ ಒಂದು ರೂಪ ತರುತ್ತದೆ. ಪಕ್ಷಿಗಳ ಧ್ವನಿಯ ಉಲಿವು ಶಿಶು ಪ್ರಾಸಗಳಲ್ಲಿ ಕಾಣುತ್ತೇವೆ. 'ಕಾಕಾ-ಕಾಗೆ; ಬೌ ಬೌ ನಾಯಿ; ಮಿವ್ ಮಿವ್ ಬೆಕ್ಕು' ಇಲ್ಲಿ ಲಯ ಮತ್ತು ನಾದವೇ ಮುಖ್ಯ, ಆಡು ಮಾತು ಜಾನಪದ ಸಾಹಿತ್ಯದ ರಚನೆಗೆ ಮೂಲಪ್ರೇರಣೆ. ಆಡುಮಾತುಗಳಲ್ಲಿ ತೇಲುವ ವಿವಿಧ ಲಯಗಳನ್ನು ಒಂದು ಕಾಲ ಮಾನಕ್ಕೆ ಜಾನಪದ ಹಾಡು ಎಳೆದುಕೊಂಡು ತನ್ನ ರೂಪ ನಿರ್ಮಿತಿಯನ್ನು ಮುಂದುವರೆಸುತ್ತದೆ. ಇದನ್ನು ನಾವು ಆಡುನುಡಿಯ ಲಯ ಎಂದು ಕರೆಯುತ್ತೇವೆ. ಮಳೆ ಬರುವಾಗ ಮಕ್ಕಳು ಅಂಗಳಕ್ಕೆ ಬಂದು

ಬಾರೋ ಬಾರೋ ಮಳೆರಾಯ
ಬಾಳಿ ತ್ವಾಟಕ್ಕೆ ನೀರಿಲ್ಲ

ಇಲ್ಲಿ ಪ್ರಾಸ ಮತ್ತು ಅರ್ಥ ಎರಡಕ್ಕೂ ಪ್ರಾಮುಖ್ಯತೆ ಇದೆ. ಕೂಡಿ ಹಾಡುತ್ತಿರುವಾಗ ಪದ್ಯ ದ್ವಿಪದಿಯಾಗಿ ರೂಪುಗೊಳ್ಳುತ್ತದೆ. ಶಿಶುಪ್ರಾಸಗಳ ಚುಟುಕುಗಳಲ್ಲಿ ಛಂದಸ್ಸಿನಲ್ಲಿ ಲವಲವಿಕೆ, ಅಂಶಗಣ, ಮಂದಾನಿಲ, ಆದಿ ಅಂತ್ಯ ಪ್ರಾಸಗಳ ನಿಯತತೆ, ಪರಚಿತ ಮಾತುಗಳು ಸಹಜವಾಗಿ ಹಾಡಾಗಿ ರೂಪುಗೊಳ್ಳುತ್ತವೆ. ಸಂವಾದದ ರೂಪದ ಪ್ರಾಸಗಳಲ್ಲಿ ಪಲ್ಲವಿಗಳೂ ಕಾಣಿಸಿಕೊಳ್ಳುತ್ತವೆ.

ಶಿಶುಪ್ರಾಸಗಳ ಚುಟುಕುಗಳಲ್ಲಿ ಸಾಮಾಜಿಕ ಹಿನ್ನೆಲೆ ಇದೆ. ಒಕ್ಕಲುತನಕ್ಕೆ ಮುಖ್ಯವಾಗಿ ಬೇಕಾಗಿರುವುದು ಮಳೆ. ಅದು ಕೈಕೊಡಬಾರದೆಂದು ಪ್ರಾರ್ಥಿಸುತ್ತಾರೆ. ಮಳೆ ಬರುವ ವಾತಾವರಣ ಉಂಟಾದಾಗ

ಬಾರೋ ಬಾರೋ ಮಳೆರಾಯ
ಜೋಳದ ಹೊಲಕ್ಕ ನೀರಿಲ್ಲ
ಜನಾ ಬಾಯಿ ಬಿಡತಾರೊ
ಮುಗಿಲ ಮ್ಯಾಲ ನೋಡೆವು
ನಾವು ಕೈ ಮುಗಿದೇವು

ಮಕ್ಕಳ ಸಹಜವಾಗಿ ಹಾಡಿದರೂ ಅದರ ಹಿಂದೆ ಬದುಕಿನ ಸೂಕ್ಷ್ಮ ಸಂವೇದನೆ ಇದೆ. ಸಂಜೆ ಹೊತ್ತಿನಲ್ಲಿ ನಾಲ್ಕಾರು ಜನ ಹುಡುಗಿಯರು ಒಂದೆಡೆ ಸೇರಿ ಎರಡೆರಡು ಗುಂಪುಗಳಾಗಿ ನಿಂತು ಸಂವಾದ ಮಾಡುತ್ತಾರೆ.

ಒಬ್ಬರು	ಇನ್ನೊಬ್ಬರು
ಪಾರಮ್ಮನ ಹೋಳಿಗೆ	ಎಣ್ಣೆ ಹಚ್ಚಿದ ಹೋಳಿಗೆ
ಪಾರಮ್ಮನ ಹುಗ್ಗಿ	ಗೋದಿ ಕುಟ್ಟಿದ ಹುಗ್ಗಿ

ಆದರ್ಶ ಸ್ತ್ರೀಯೊಬ್ಬಳು ಅಡಿಗೆ ಮಾಡುವದರಲ್ಲಿ ಎಷ್ಟು ಪರಿಣಿತಳಿದ್ದಳು. ಅವಳ ಅಡಿಗೆಯ ಕೌಶಲ್ಯವನ್ನು ಪರಿಚಯಿಸುತ್ತವೆ. ಕಡಬ, ಮೊಸರು, ಅಂಬ್ರ, ರೊಟ್ಟಿ ಒಂದು ಪ್ರದೇಶದ ಊಟೋಪಚಾರಗಳನ್ನು ಶಿಶುಗೀತೆಗಳಲ್ಲಿ ಕಾಣುತ್ತವೆ. ಪಂಚಮಿಯಲ್ಲಿ ಮಾಡುವ ಬೇರೆ ತರಹದ ಉಂಡಿಗಳು ಗೋದಿ, ಹೆಸರು, ತಂಬಿಟ್ಟು, ಅಳ್ಳಿಟ್ಟು ಇಂತಹ ಉಂಡಿಗಳು, ಸ್ಥಳನಾಮಗಳು ಸುಂದರವಾಗಿ ಶಿಶುಪ್ರಾಸಗಳಲ್ಲಿ ಕಂಡುಬಂದು ಪ್ರಾದೇಶಿಕ ವೈಶಿಷ್ಟ್ಯತೆಯನ್ನು ನಿರ್ದೇಶಿಸುತ್ತವೆ. ಒಂದು ಜನಾಂಗದ ಸಂಸ್ಕೃತಿ ಅಧ್ಯಯನಕ್ಕೆ ಶಿಶುಪ್ರಾಸಗಳ ಚುಟುಕುಗಳ ಆಕರಗಳಾಗುತ್ತವೆ. ಪಂಚಮಿ ಬಂದಾಗ ಅಣ್ಣ ತಂಗಿಯನ್ನು ಕರೆಯಲಿಕ್ಕೆ ಹೋಗದಿದ್ದಾಗ ತಂಗಿಗೆ ವ್ಯಥೆಯಾಗುವ ಭಾವನೆ ಶಿಶುಪ್ರಾಸಗಳಲ್ಲಿ ವ್ಯಕ್ತವಾಗಿದೆ.

ಪಂಚಮಿ ಬಂತು ಸನೇಕ
ಅಣ್ಣ ಬರಲಿಲ್ಲ ಕರಿಯಾಕ
ಅವರೇನವ್ವ ಸಾಹುಕಾರ
ನಾವೇನವ್ವ ಬಡುರಾ

ತಂದೆ ತಾಯಿ ತೀರಿದ ಮೇಲೆ ತವರಿಗೆ ಹೋಗಬಾರದು, ಅಣ್ಣಂದಿರರು ಅತ್ತಿಗೆಯರ ಮಾತು ಕೇಳುತ್ತಾರೆ ! ಎಂಬ ಭಾವ ಅದರಲ್ಲಿ ಸೂಚ್ಯವಾಗಿ ವ್ಯಕ್ತವಾಗಿದೆ. ಪದದಿಂದ ಪದಕ್ಕೆ ಭಾವ ಹದಗೊಂಡ ಅರ್ಥ ತಟ್ಟೈಸಿ ನಿಲ್ಲುತ್ತದೆ. ಅಯಾ ಪ್ರದೇಶದ ವಿಶಿಷ್ಟ ತಿಂಡಿ ತಿನಿಸುಗಳು ಶಿಶುಪ್ರಾಸಗಳಲ್ಲಿ ಚೆನ್ನಾಗಿ ವ್ಯಕ್ತವಾಗುತ್ತವೆ. ಗೋಕಾವಿ ಕರ್ದಂಟು, ಬೆಳಗಾವಿ ಕುಂದಾ, ಮೂಡಲಗಿ, ಎಮ್ಮೆ, ರಾಮದುರ್ಗ ಬೆಣ್ಣೆ, ಧಾರವಾಡ ಪೇಡ ಮುಂತಾದುವು. ಆಯಾ ಹಬ್ಬಗಳು ಬಂದಾಗ ಮಾಡುವ ವಿಶಿಷ್ಟ ತಿಂಡಿ ತಿನಿಸುಗಳು.

ಪಂಚಮಿ ಬಂದಿತು ಎಳ್ಳು ಉಂಡಿ
ಸಂಕ್ರಾಂತಿ ಬಂದಿತು ಎಳ್ಳು ಬೆಲ್ಲ

ಹಬ್ಬಗಳ ಸರಮಾಲೆ ಬೆಳೆಯುತ್ತಲೇ ಹೋಗುತ್ತದೆ. ಬೇರೆ ಬೇರೆ ಬಣ್ಣಗಳಿಗೆ ಸಾದೃಶ್ಯವನ್ನು ಸೂಚಿಸುವಾಗ ಕೆಂಪು ಬಣ್ಣ ಟೊಮ್ಯಾಟೊ ಹಣ್ಣು, ಕಪ್ಪು ಬಣ್ಣ ಕವಳಿಯ ಹಣ್ಣು ಮುಂತಾದವು. ಮಕ್ಕಳಿಂದ ಸೊಗಸಾಗಿ ಕೇಳಿಬರುತ್ತವೆ. ಹಬ್ಬ, ವಾರ, ಅಂಕಿಸಂಖ್ಯೆಗಳು ಆಟಿಕೆಗಳನ್ನು ಕುರಿತಾದ ಹಾಡುಗಳನ್ನು ಮಕ್ಕಳು ಉತ್ಸಾಹದಿಂದ ಹಾಡುತ್ತಾರೆ. ಶಿಶುಪ್ರಾಸಗಳು ಆಯಾ ದೇಶ, ಸಂಸ್ಕೃತಿ, ಸಂಪ್ರದಾಯಗಳ ಆಶಯವನ್ನನುಸರಿಸಿ ಅಭಿವ್ಯಕ್ತವಾಗುತ್ತವೆ. ನಾಗರಿಕ ಹಿನ್ನೆಲೆ ಮತ್ತು ಸೌಕರ್ಯ ಗಳಿಗನುಗುಣವಾಗಿ ಅವು ಅಭಿವ್ಯಕ್ತವಾಗುತ್ತವೆ. ಗಮನಾರ್ಹ ಅಂಶವೆಂದರೆ ಸಂಸ್ಕೃತಿಯ ಬೇರೆ ಬೇರೆ ಅಂಶಗಳ ಪರಿಚಯ ಕೂಡ ಮಕ್ಕಳಿಗೆ ಆಟಗಳನ್ನು ಆಡುವ ಸಂದರ್ಭದಲ್ಲೇ ಆಗುತ್ತಿರುತ್ತದೆ.ಇದು ಶಿಶುಪ್ರಾಸಗಳಿಗೂ ಅನ್ವಯವಾಗುತ್ತದೆ. ಮಕ್ಕಳು ಹಾಡುವಾಗ ಅವರ ಹಾವ, ಭಾವ, ಅಭಿನಯ, ಲಯ ಮಾಧುರ್ಯವನ್ನು ಕೇಳುವುದೇ ಒಂದು ಸೊಗಸು. ಹಾಡುವುದರಲ್ಲಿ ಮಕ್ಕಳು ತನ್ಮಯರಾಗುತ್ತಾರೆ. ಪ್ರಾಸಗಳು ಬೇರೆ ಬೇರೆ ಸುದರ್ಭ ಸನ್ನಿವೇಶಗಳಲ್ಲಿ ತಾವೇ ತಾವಾಗಿ ಮಕ್ಕಳಿಂದ ಬರುತ್ತವೆ. ಪಾಠಗಳನ್ನು ಓದುವ ಗುಂಗಿನಲ್ಲಿ ಕೆಲವು ಸಂದರ್ಭದಲ್ಲಿ ಆರೋಗ್ಯದ ಪಾಠಗಳು ಕೇಳಿಬರುತ್ತವೆ. ಪುರಿ ಬಾಜಿ ಬ್ಯಾಡ ಜೋಳದ ರೊಟ್ಟಿ ಬೇಕು, ಐಸ್ ಕ್ರಿಮ್ ಬ್ಯಾಡ್ ತಂಪಾದ ಪಾನಿ ಸಾಕು' ಮೊದಲಾದ ಭಾವನೆಗಳು ಇಲ್ಲಿ ಚಿತ್ರಿತವಾಗಿವೆ.

ತಾಯಿಗೆ ತನ್ನ ಕೂಸಿನ ಮೇಲೆ ತುಂಬ ವಾತ್ಸಲ್ಯ. ತೊಟ್ಟಿಲಲ್ಲಿ ಕೂತು ಕಿರಿ ಕಿರಿ ಮಾಡಿ ಕಾಡುತ್ತಿರುವಾಗ ತಾಯಿ ತನ್ನೆಲ್ಲ ಕೆಲಸ ಬಿಟ್ಟು ತನ್ನ ತೊಡೆಯ ಮೇಲೆ ಹಾಕಿಕೊಂಡು ತನ್ನಷ್ಟಕ್ಕೆ ತಾನೆ ಆಡಿಸುತ್ತಾ ರಮಿಸಿ ಮಲಗಿಸುತ್ತಾಳೆ.

ಆಳೋಲ ಆಯವ್ವ
ಬಳೋಲ ಕಾಯವ್ವ
ಹಾಲ ಕುಡಿಯ ಹಕ್ಕಿ
ನೀರ ಕುಡಿಯ ಗುಬ್ಬಿ
ತುಪ್ಪಾರೆ ಕುಡಿಯ ನನಬಾಳ

ಮಕ್ಕಳಿಗೂ ತಾಯಿಯ ಮೇಲೆ ವಿಶೇಷ ಪ್ರೀತಿ. ಮಕ್ಕಳು ಆಟವಾಡಿ ತಾಯಿಯ ಹತ್ತಿರ ಹೋಗಿ ತಿಂಡಿ ಕೇಳುತ್ತಾರೆ. 'ಯವ್ವ ಯವ್ವ ಗೆಣಸ' ಎನ್ನುವಲ್ಲಿ ಈ ಭಾವ ವ್ಯಕ್ತವಾಗಿದೆ. ಹಿರಿಯರು ಮಕ್ಕಳಿಗಾಗಿ ಕಟ್ಟಿದ ಆಟದ ಪ್ರಾಸಗಳಲ್ಲಿ ಹಿರಿಯರ ಆಸೆ ಆಕಾಂಕ್ಷೆ, ಹರಕೆ, ದುಃಖ, ಮಮತೆ, ದೀನತೆ, ಶೋಷಣೆಯ ವಿರುದ್ಧ ಪ್ರತಿಭಟನೆ ವ್ಯಕ್ತವಾಗಿದೆ. ಜನಪದದ ಇತರ ಪ್ರಕಾರಗಳಲ್ಲಿ ಹಿರಿಯರು ತಮ್ಮ ಅನುಭವ,

ಒಡಲ ಬೇಗೆಯನ್ನು ವ್ಯಕ್ತಗೊಳಿಸಿದಂತೆ ಶಿಶುಪ್ರಾಸಗಳ ಶಾಬ್ದಿಕ ರಚನೆಯಲ್ಲಿಯೂ ಅದಕ್ಕೆ ಅವಕಾಶ ನೀಡಿದ್ದಾರೆ. ಮಕ್ಕಳು ಶಾಲೆಗೆ ಸೇರಿದಾಗ ಓರಗೆಯ ಗೆಳೆಯರೊಂದಿಗೆ ಪ್ರೀತಿ, ಸಲಗೆ, ಆತ್ಮೀಯತೆಯಿಂದ ವರ್ತಿಸುತ್ತಾರೆ. ಆ ಸಂದರ್ಭದಲ್ಲಿ ಅನೇಕ ಸಾರಿ ಲೈಂಗಿಕ ನಿರ್ಭಿಡೆಯ ಚುಟುಕು ಪ್ರಾಸಗಳು ಕೇಳಿಬರುತ್ತವೆ. ಮಾವನ ಮಕ್ಕಳು ಅತ್ತೆಯ ಮಕ್ಕಳ ಮೇಲಿರುವ ಕೆಲವು ಪ್ರಾಸಗಳು ಅಶ್ಲೀಲತೆಯಿಂದ ಕೂಡಿದರೂ ಅಲ್ಲಿ ಚಮತ್ಕಾರವಿದೆ. ಮಕ್ಕಳು ಜಾತ್ರೆಗಳಿಗೆ ಹೋಗುವಾಗ ಆಯಾ ಪ್ರದೇಶದ ದೇವತೆಗಳನ್ನು ಕುರಿತು ಕೆಲವು ಪ್ರಾಸಗಳು ಕಂಡುಬರುವವು.

ಅಡಕೆ ಸೂರ್ ಮಡಕೆ ಸೂರ್
ಚೆನ್ನಬಸವೇ ಸೂರ್ ಹರಹರ
ಮಹಾದೇವ

ಮುಂತಾದ ಪ್ರಾಸಗಳು ದೊರೆಯುತ್ತವೆ, ಹಾಡುಗಳ ಪಾವಿತ್ರ್ಯತೆಯನ್ನು ಉಳಿಸಿಕೊಳ್ಳುವುದಕ್ಕಾಗಿಯೋ ಅಥವಾ ಹಾಡುಗಳ ಆನಂದವನ್ನು ತಡೆಯುವುದಕ್ಕಾಗಿಯೋ ಅನೇಕ ಹಾಡುಗಳಿಗೆ ಧಾರ್ಮಿಕತೆಯ ಲೇಪನವಿದೆ.

ಶಿಶುಪ್ರಾಸಗಳ ವಸ್ತು ಮತ್ತು ರಚನೆಗಳಲ್ಲಿ ಎಷ್ಟೇ ಏಕತಾನತೆ ಇದ್ದರೂ ಅವುಗಳ ಸಾಹಿತ್ಯಕ ಗುಣಾಂಶವನ್ನು ಅಲ್ಲಗಳೆಯುವಂತಿಲ್ಲ. ಉಳಿದ ಜನಪದ ಸಾಹಿತ್ಯ ಪ್ರಕಾರಗಳಿಗೆ ಹೋಲಿಸಿದರೆ ಶಿಶುಪ್ರಾಸಗಳಲ್ಲಿ ಸಾಹಿತ್ಯಾಂಶ ಕಡಿಮೆ. ಆದರೆ ಅವುಗಳಲ್ಲಿರುವ ಪ್ರಾಸ, ನಾದ ಮತ್ತು ಲಯಗಾರಿಕೆಗಳು ಪರಿಣಾಮಕಾರಿಯಾದುವು. ಇದರಿಂದಾಗಿಯೇ ಇವುಗಳಲ್ಲಿ ಆನಂದಗೊಳಿಸುವ ಗುಣವಿದೆ. ಹಾಸ್ಯ, ವಿಡಂಬನೆ, ಶಬ್ದಚಿತ್ರ, ಸಾಮಾಜಿಕ ನಡವಳಿಕೆ, ಅನ್ಯೋಕ್ತಿ, ಶ್ಲೇಷೆ, ನಾಟಕೀಯತೆ ಬಿಡಿಬಿಡಿ ಚಿತ್ರಗಳಿಂದಾಗಿ ನಮ್ಮನ್ನು ಆಕರ್ಷಿಸುತ್ತವೆ. ಶಿಶುಪ್ರಾಸಗಳು ಒಳಗೊಳ್ಳುವ ಅನೇಕ ಕ್ರಿಯೆಗಳು, ಶಾಬ್ದಿಕ ರಚನೆಗಳು, ಅರ್ಥರಹಿತವಾದ ಉದ್ಗಾರಗಳು, ಬಳಕೆಯಾಗುವ ವಸ್ತು ವಿಶೇಷತೆಗಳು ಹಾಡುವಾಗ ನಿಲ್ಲುವ ರೀತಿ (ಎದುರುಬದುರು, ಕತ್ತರಿ, ತ್ರಿಕೋನ, ವರ್ತುಲಾಕಾರ ಚೌಕಾರಾದ ಇತ್ಯಾದಿ) ಮಕ್ಕಳು ಮಾಡುವ ಹಾವಭಾವಗಳಿಂದ ಆಯಾ ಸಮುದಾಯದ ದೃಷ್ಟಿ ಮತ್ತು ವೈಶಿಷ್ಟ್ಯತೆಗಳನ್ನು ತಿಳಿಯಬಹುದಾಗಿದೆ.

ಶಿಶುಪ್ರಾಸಗಳಲ್ಲಿಯ ಚುಟುಕುಗಳು ಜನಪದ ಆಟಗಳೊಂದಿಗೆ, ಬೆಳೆದುಬಂದಿರುವುದರಿಂದ ಮಕ್ಕಳಿಗೆ ಸಹಜವಾಗಿಯೇ ಆನಂದ, ಉತ್ಸಾಹ, ಉಲ್ಲಾಸ ಹಾಗೂ ಮನರಂಜನೆಯನ್ನು ಕೊಡುವವು. ಮಕ್ಕಳ ದೈಹಿಕ, ಬೌದ್ಧಿಕ ವಿಕಾಸಕ್ಕೆ ನೆರವು ನೀಡುತ್ತವೆ. ಹಾಳು ಹರಟೆ ಹೊಡೆಯುವ ಪ್ರವೃತ್ತಿಯನ್ನು ದೂರಮಾಡಿ ವಿರಾಮ ವೇಳೆಯ ಸದುಪಯೋಗವಾಗುವಂತೆ ಮನಸ್ಸು ಕಾರ್ಯನ್ಮುಖವಾಗುವಂತೆ ಅವರಿಗೆ ಉತ್ತೇಜನ ನೀಡುತ್ತವೆ. ಎಳೆಯ ವಯಸ್ಸಿನಿಂದಲೇ ಮಕ್ಕಳನ್ನು ಕ್ರಿಯಾಶೀಲರನ್ನಾಗಿ ಮಾಡಲು ಇವು ಸಹಕಾರಿ. ಮಕ್ಕಳಲ್ಲಿ ಶಿಸ್ತು, ಸಾಂಘಿಕ ಜೀವನ ನಡೆಸಲು ಪರೋಕ್ಷವಾಗಿ ತರಬೇತಿ ನೀಡುತ್ತವೆ.

ಶಿಶುಪ್ರಾಸಗಳಲ್ಲಿ ಅರ್ಥದ ಸೊಬಗಿಗಿಂತ ಶಬ್ದ ಸಂಯೋಜನೆಯೇ ಮುಖ್ಯವಾಗಿರುವುದರಿಂದ ಭಾಷಿಕ ಶುದ್ಧ ನಿರರ್ಗಳ ಉಚ್ಚಾರಣೆಗೆ ಇವು ತುಂಬ ನೆರವಾಗುತ್ತವೆ. ಆಧುನೀಕರಣದ ಅಥವಾ ವೈಜ್ಞಾನಿಕತೆಯ ಪ್ರಭಾವದಿಂದ ಚುಟುಕು ಶಿಶುಪ್ರಾಸಗಳು ಕಣ್ಮರೆಯಾಗುತ್ತಿವೆ. ಸಾಧ್ಯವಿದ್ದ ಮಟ್ಟಿಗಾದರೂ ಅವುಗಳನ್ನು ಉಳಿಸಿಕೊಳ್ಳಬೇಕಾಗಿದೆ. ಪೂರ್ವ ಪ್ರಾಥಮಿಕ ಪಠ್ಯಕ್ರಮದಲ್ಲಿ ಚುಟುಕುಗಳನ್ನು ಸೇರಿಸಬೇಕು. ಶಾಲೆಗಳಲ್ಲಿ ನಡೆಯುವ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಶಿಶುಪ್ರಾಸಗಳಿಗೆ ಪ್ರಾಧಾನ್ಯತೆ ಕೊಡಬೇಕು. ಇದರಿಂದ ಮಕ್ಕಳ ಗ್ರಹಣಶಕ್ತಿ, ಕಲ್ಪನಾಶಕ್ತಿ ಬೆಳೆಸಿದಂತಾಗುತ್ತದೆಯಲ್ಲದೆ ಬೋಧನೆಯು ಯಶಸ್ವಿಯಾಗುವುದು.

ಚುಟುಕು ಹಲವು ಬಿಡಿ ನುಡಿಗಳು. ಕವಿ ಭಾವನೆಗಳು ಮಿಂಚುಹುಳುಗಳಂತಿರುವ ನಾಲ್ಕರಿಂದ ಆರು ಸಾಲುಗಳ ಪದ್ಯಗಳ ಗೊಂಚಲು. ಇವು ನಾದದ ಮಿಂಚಿನ ಗೊಂಚಲು. ಇಲ್ಲಿ ಚುಚ್ಚುವ ವಿಡಂಬನೆಯಿದೆ, ವಿಡಂಬನೆಯ ಮಧ್ಯದಲ್ಲಿ ಮೆಚ್ಚುವ ವಿಚಾರವೂ ಇದೆ. ಸರ್ವಜ್ಞರ ಲೋಕೋಕ್ತಿಗಳಂತೆ ಭಾವಪೂರಿತ ನುಡಿಗಳಿವು. ಈ ನುಡಿಗಳಲ್ಲಿ ಸೌಂದರ್ಯವೂ ಅಡಕವಾಗಿದೆ. ಅನಿರೀಕ್ಷಿತ ಬೆರಗೂ ಇಲ್ಲಿಯ ನುಡಿಗಳಲ್ಲಿದೆ. ಇಲ್ಲಿ ಎರಡನೆಯ ಹಾಗೂ ನಾಲ್ಕನೆಯ ಸಾಲಿನಲ್ಲಿ ಅಂತ್ಯ ಪ್ರಾಸವಿದೆ. ಚುಟುಕು ಜೀವನ ಮೌಲ್ಯ ಮತ್ತು ಕಾವ್ಯ ಮೌಲ್ಯಗಳೆರಡನ್ನೂ ಒಳಗೊಂಡ ಒಂದು ವಿಶಿಷ್ಟ ಪದ್ಯ ಜಾತಿ.

ಇಡೀ ಚುಟುಕು ಸಾಹಿತ್ಯ ಸಾಮಾಜಿಕ ಚಿಂತನೆಯ ನೆಲೆಯಲ್ಲಿ ಹಾಗೂ ಸಾಮಾಜಿಕ ಚೌಕಟ್ಟಿನಲ್ಲಿ ಸೃಷ್ಟಿಗೊಂಡಿದೆಯೆಂದರೆ ಅಚ್ಚರಿಪಡಬೇಕಾಗಿಲ್ಲ. ಆಡುಮುಟ್ಟದ ಗಿಡವಿಲ್ಲ, ಚುಟುಕು ನಿರೂಪಿಸಲಾರದ ಸಾಮಾಜಿಕ ವಿಷಯ ಸಂಗತಿಗಳೇ ಇಲ್ಲವೆನ್ನಬಹುದು. ಚುಟುಕು ಕವಿ, ತನಗಿರುವ ಲೌಕಿಕಾನುಭವವನ್ನು ಬೀಜದಲ್ಲಿ ಮರವು ಹುದುಗಿಕೊಂಡಿರುವಂತೆ, ತನ್ನ ಚುಟುಕುಗಳಲ್ಲಿ ಹುದುಗಿಸಿದ್ದಾನೆ. ಸಮಾಜದ ಅಂಕು-ಡೊಂಕು, ಏರುಪೇರುಗಳನ್ನು ಕಂಡು ವಿಡಂಬಿಸಿದ್ದಾನೆ, ವಿಮರ್ಶಿಸಿದ್ದಾನೆ. ಚುಟುಕು ಕವಿ ಸಮಾಜ ಶಾಸ್ತ್ರಜ್ಞರ ಚಿಕಿತ್ಸಕ ಬುದ್ಧಿಯನ್ನು ಪಡೆದವನಾದುದರಿಂದ, ಸಮಾಜದ ಎಲ್ಲವನ್ನೂ, ಎಲ್ಲರನ್ನೂ ಪರಿಶೀಲಿಸುವ ಸಾಮಾಜಿಕ ಚಿಂತಕನೆನಿಸಿದ್ದಾನೆ. ಚುಟುಕು ಸಮಾಜವನ್ನು ಹೂವಿನ ಹಾಸಿಗೆ, ಸುಂದರ ಸ್ವಪ್ನವೆಂದು ಭಾವಿಸಿದಂತಿಲ್ಲ. ನಾಡಿನಲ್ಲಿಯ ಕಾಡುಮೃಗಗಳ ಶೋಷಣೆ, ದೌರ್ಜನ್ಯ, ದುರಾಸೆ, ವಂಚನೆ, ಪ್ರತ್ಯೇಕತೆ, ಭ್ರಷ್ಟಚಾರ ಮುಂತಾದುವನ್ನು ಚುಟುಕು ತದ್ವತ್ತಾಗಿ ಚಿತ್ರಿಸಿವೆ.

ಬಡತನ, ಹಸಿವು, ಲೈಂಗಿಕ ತೃಷೆ, ಅಂಧಾನುಕರಣೆಗಳ ವಾಸ್ತವ ಚಿತ್ರವನ್ನು ಮಾರ್ಮಿಕವಾಗಿ ನೀಡಿವೆ. ಈ ಎಲ್ಲ ಸಾಮಾಜಿಕ ವಿಷಯವನ್ನು ಜೀವನದ ದೇಸೀ ಭಾಷೆಯಲ್ಲಿ ಅಭಿವ್ಯಕ್ತಿಸಿದ್ದರಿಂದ ಚುಟುಕು ಅತ್ಯಂತ ತೀವ್ರವಾಗಿ ಓದುಗರ ಹೃದಯವನ್ನು ಮುಟ್ಟಿವೆ, ತಟ್ಟಿವೆ.

ಜನಪದ ಸಾಹಿತ್ಯದಲ್ಲಿ ಸಾವಿರಾರು ಚುಟುಕುಗಳಿವೆ. ಅವುಗಳ ಕೆಲವು ಮಾದರಿಗಳನ್ನು ಇಲ್ಲಿ ವಿವೇಚಿಸಲಾಗಿದೆ. ಜನಪದ ಬದುಕಿನ ಹಲವಾರು ಭಾವನೆಗಳು ಅಂದರೆ ನೋವು-ನಲಿವು, ಹಾಸ್ಯ-ಶೃಂಗಾರ

ಇವು ಚುಟುಕುಗಳಲ್ಲಿ ಅಭಿವ್ಯಕ್ತವಾಗಿವೆ. ಹಲವಾರು ಸಾಮಾಜಿಕ ಸಮಸ್ಯೆಗಳಿಗೆ ಅವು ಪರಿಹಾರವನ್ನು ಒದಗಿಸುತ್ತವೆ. ಒಟ್ಟಿನಲ್ಲಿ ಸಾಮಾಜಿಕ ಅಥವಾ ಸಾಂಸ್ಕೃತಿಕ ಮೌಲ್ಯಗಳು ಮತ್ತು ಆದರ್ಶಗಳು, ಅನುಕಂಪೆ, ಸಹೃದಯತೆ, ಸೃಜನಶೀಲತೆ ಮೊದಲಾದ ಸಾಮಾಜಿಕ ನೀತಿ ವಿಚಾರಗಳು ಹಾಗೂ ಸಾಮಾಜಿಕ ಜೀವನದ ಮುಖ್ಯ ಅಂಗ ರಾಜಕೀಯ ವಾತಾವರಣ. ಈ ನೆಲೆಗಳಲ್ಲಿ, ಚುಟುಕುಗಳು ಸಾಮಾಜಿಕ ಚಿಂತನೆಯನ್ನು ಪರಿಶೀಲಿಸುತ್ತವೆ. ಅವುಗಳ ಕ್ರಿಯಾಕಲ್ಪದ ಚಿಂತನೆ ಅದು ವ್ಯಂಜಿಸಬಹುದಾದ ವಾಸ್ತವತೆಯ ನೆಲಗಟ್ಟು ಸಾಮಾಜಿಕ ಅಧ್ಯಯನಕ್ಕೆ ನೆರವಾಗುತ್ತದೆ.

ಅಧ್ಯಾಯ ೭

ಕನ್ನಡ ಚುಟುಕು ಸಾಹಿತ್ಯ : ಭಾಷೆ ಮತ್ತು ಶೈಲಿ

೭

ಕನ್ನಡ ಚುಟುಕು ಸಾಹಿತ್ಯ : ಭಾಷೆ ಮತ್ತು ಶೈಲಿ

ಭಾಷೆಯ ಮುಖ್ಯ ಉದ್ದೇಶ ಭಾಷಿಕರ ಮಧ್ಯ ಸಂಪರ್ಕವನ್ನು ಸಾಧಿಸುವುದೇ ಆಗಿದೆ. ಭಾಷೆಯ ಮೂಲಕ ಮನುಷ್ಯ ಸಮಾಜದ ಮಧ್ಯ ತನ್ನ ಕಾರ್ಯ ನಿರ್ವಹಿಸುತ್ತಾನೆ. ಭಾಷೆಯ ಮೂಲಕವೇ ಭಾಷಿಕರು ತಮ್ಮ ತಮ್ಮ ವಿಚಾರಗಳನ್ನು, ಅನಿಸಿಕೆಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ಭಾಷೆಯೆಂದರೆ ಸಮಾಜದ ಸಂಪರ್ಕಕ್ಕಾಗಿ ಇರುವ ಯಾದೃಚ್ಛಿಕ, ಮೌಖಿಕ ಧ್ವನಿ ಸಂಕೇತಗಳ ವ್ಯವಸ್ಥೆಯಾಗಿದೆ. ಭಾಷೆಯಲ್ಲಿ ಧ್ವನಿಗಳು ವ್ಯವಸ್ಥಿತವಾಗಿ ನಿರ್ದಿಷ್ಟ ಧ್ವನಿಸಂಕೇತಗಳ ವ್ಯವಸ್ಥೆಯಾಗಿದೆ. ಭಾಷೆಯಲ್ಲಿ ಧ್ವನಿಗಳು ಸಂಕೇತಾತ್ಮಕವಾಗಿರುತ್ತವೆ. ಭಾಷೆಯಲ್ಲಿ ಬಳಕೆಯಾಗುವ ಶಬ್ದಗಳಲ್ಲಿ ಅರ್ಥ ಅಡಗಿ ಕುಳಿತಿರುವುದಿಲ್ಲ. ಭಾಷೆಯಲ್ಲಿ ಬಳಕೆಯಾಗುವ ಶಬ್ದಗಳು ಕಾಲ, ದೇಶ, ಪರಿಸರಗಳಿಂದ ಅರ್ಥ ಪಡೆದುಕೊಳ್ಳುತ್ತವೆ. ಒಂದು ಶಬ್ದಕ್ಕೆ ಒಂದು ಅರ್ಥ ರೂಢಿಗತವಾಗಿ ಪ್ರಾಪ್ತವಾಗುತ್ತದೆ. ಒಂದು ವಸ್ತು, ವಿಚಾರ, ಭಾವನೆಯನ್ನು ಇದೇ ಧ್ವನಿ ಮೊತ್ತದಿಂದ ಗುರುತಿಸಬೇಕೆಂಬ ಸಾರ್ವತ್ರಿಕ ನಿಯಮ ಇರುವುದಿಲ್ಲ. ಅವು ಒಂದು ಭಾಷಾ ಸಮುದಾಯದ ಭಾಷಿಕರ ಮನೋವೃತ್ತಿಯನ್ನು ಅವಲಂಬಿಸಿರುತ್ತವೆ. ಹೀಗಾಗಿ ಭಾಷೆಯ ಮುಖ್ಯ ಉದ್ದೇಶ ಸಾಮಾಜಿಕ ಸಂಪರ್ಕವಾಗಿದೆ.

ಭಾಷೆಯು ವ್ಯಕ್ತಿಗೆ ಪರಂಪರಾಗತವಾಗಿ ಬರದೆ ಕಲಿಕೆಯಿಂದ, ಅನುಕರಣೆಯಿಂದ ಬರುವಂತಹದಾಗಿದೆ. ಮನೆಯ, ಶಾಲೆಯ ಪರಿಸರದಲ್ಲಿ ಪಾಲಕರು, ಸಹೋದರ ಸಹೋದರಿಯರು, ಶಿಕ್ಷಕರು, ಸ್ನೇಹಿತರು ಮಗುವಿನ ಭಾಷಾಕಲಿಕೆಗೆ ಪರೋಕ್ಷವಾಗಿ ಇಲ್ಲವೇ ಪ್ರತ್ಯಕ್ಷವಾಗಿ ನೆರವಾಗಿರುತ್ತಾರೆ. ಭಾಷೆಯ ಮೂಲಕವೇ ನಮ್ಮ ನಡೆ-ನುಡಿ, ಆಚಾರ-ವಿಚಾರ ಹಾಗೂ ಮನಸ್ಸಿನ ಭಾವನೆಗಳು ಪೀಳಿಗೆಯಿಂದ ಪೀಳಿಗೆಗೆ ಸಾಗಿಸಲ್ಪಡುತ್ತವೆ. ಇದನ್ನು ಗಮನಿಸಿದರೆ ಭಾಷೆ ಸಂಸ್ಕೃತಿಯ ವಾಹಕವೂ ಆಗಿದೆ. ಭಾಷೆಯೂ ಸಮುದಾಯದ ಭಾಷಿಕರ ಅನುಭವದ ಫಲವಾಗಿ ರೂಪುಗೊಂಡಿದೆ. ಆದುದರಿಂದ ಅದು ಆ ಸಮುದಾಯದ ಚರಿತ್ರೆ ಮತ್ತು ಅಭಿವ್ಯಕ್ತಿಯಲ್ಲಿ ವ್ಯಕ್ತವಾಗುತ್ತದೆ. ಭಾಷೆಯಲ್ಲಿ ಬಳಕೆಯಾಗುವ ಪದಗಳಿಗೆ ಅರ್ಥವಿರುತ್ತದೆ. ಅರ್ಥರಹಿತ ಪದಗಳಿಗೆ ಭಾಷೆಯಲ್ಲಿ ಸ್ಥಾನವಿರುವುದಿಲ್ಲ. ಅರ್ಥವಿರುವುದರಿಂದಲೇ ಸಂವಹನಿಸಲು ಸಹಕಾರಿಯಾಗಿದೆ. ನಾವು ಒಮ್ಮೆ ಮಾತನಾಡಿದಂತೆ ಇನ್ನೊಮ್ಮೆ ಮಾತನಾಡುವುದಿಲ್ಲ. ಒಮ್ಮೆ ಬರೆದಂತೆ

ಇನ್ನೊಮ್ಮೆ ಬರೆಯುವುದಿಲ್ಲ. ಇದಕ್ಕೆ ಕಾರಣವೆಂದರೆ ಭಾಷೆಯು ಸೃಜನಶೀಲತೆಯ ಗುಣಹೊಂದಿರುತ್ತದೆ. ಹೀಗಾಗಿ ಸಂಸ್ಕೃತಿ ಸಂವಹನಕ್ಕೆ ಭಾಷೆ ಮುಖ್ಯ ಸಾಮಗ್ರಿ ಅದಿಲ್ಲದಿದ್ದರೆ ಮಾನವನ ನೈಜ ನಡವಳಿಕೆಯೇ ಇರುತ್ತಿರಲಿಲ್ಲ. ಭಾಷೆ ಮುಖ್ಯವಾಗಿ ರೂಪುಗೊಳ್ಳುವುದು ಮಾನವನ ಮಿದುಳು ಮತ್ತು ಧ್ವನ್ಯಂಗಗಳಿಂದ, ಮಾನವ ವರ್ತನೆಯ ಮೂರು ಮುಖ್ಯ ಅಂಶಗಳು ಅಂದರೆ ಸಮಾಜ, ಸಂಸ್ಕೃತಿ ಮತ್ತು ಭಾಷಿಕರ ಒಲವು ಇವುಗಳನ್ನು ತಿಳಿಯಲು ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಅರಿಯಲು ಭಾಷೆ ಸಹಾಯಕವಾಗಿದೆ.

ಕನ್ನಡದ ಮಟ್ಟಿಗೆ ಹೇಳುವುದಾದರೆ ನಾವು ನಮ್ಮ ಸುತ್ತಲಿನ ಪರಿಸರದ ಪ್ರಭಾವದಿಂದ ಹಾಗೂ ಅನುಕರಣೆಯಿಂದ ಕನ್ನಡವನ್ನು ಕಲಿತಿದ್ದೇವೆ. ನಿರಂತರ ಭಾಷಾ ಸಂಪರ್ಕವೇ ಭಾಷಾ ಕಲಿಕೆಗೆ ಉತ್ತಮ ಅವಕಾಶವಾಗಿರುತ್ತದೆ. ಕನ್ನಡ ಭಾಷೆ ಬೆಳೆದು ಬಂದ ಬಗೆ, ಆ ಸಂದರ್ಭದಲ್ಲಿ ಅದು ಕಂಡ ವಿಕಾಸಕ್ರಮಗಳನ್ನು ಸ್ಥೂಲವಾಗಿ ಗಮನಿಸುವುದು ಅಗತ್ಯವಾಗಿದೆ. ದ್ರಾವಿಡ ಭಾಷೆಗಳಲ್ಲಿ ತಮಿಳು ಭಾಷೆಯನ್ನು ಬಿಟ್ಟರೆ ಕನ್ನಡವು ಎರಡನೆಯ ಪ್ರಾಚೀನ ಭಾಷೆಯಾಗಿದೆ. ಕನ್ನಡವು ತಮಿಳಿನಂತೆ ಉತ್ತಮ ಸಾಹಿತ್ಯವನ್ನು ಸಂಪಾದಿಸಿದೆ. ಕನ್ನಡ ಭಾಷೆಯ ಅತ್ಯಂತ ಪ್ರಾಚೀನ ಲಿಖಿತ ದಾಖಲೆ ಎಂದರೆ ಕ್ರಿ.ಶ.೪೫೦ರ ಹಲ್ಮಿಡಿ ಶಾಸನ. ಈ ಶಾಸನ ರಚನೆಯಾಗುವ ವೇಳೆಗೆ ಕನ್ನಡ ಭಾಷೆಯಲ್ಲಿ ಪ್ರೌಢಸಾಹಿತ್ಯ ನಿರ್ಮಾಣವಾಗಿರಬಹುದೆಂದು ಊಹಿಸಲು ಅವಕಾಶವಿದೆ. ಯಾವುದೇ ಭಾಷೆ ಮೊದಲು ಆಡುನುಡಿಯ ಮೂಲಕ ಹೊರಹೊಮ್ಮಿದೆ. ಕಾಲಾನಂತರ ಅದರಲ್ಲಿ ಸಾಹಿತ್ಯ ನಿರ್ಮಾಣವಾಗುತ್ತದೆ. ಕ್ರಿ.ಶ.ಸು.೮೫೦ರ ಸುಮಾರಿಗೆ ರಚಿತವಾದ 'ಕವಿರಾಜಮಾರ್ಗ'ದಲ್ಲಿ ಕವಿರಾಜ ಮಾರ್ಗಕಾರ ಕನ್ನಡಿಗರ ಸ್ವಭಾವ, ಕನ್ನಡ ನಾಡಿನ ವಿಸ್ತಾರ, ಕನ್ನಡ ಭಾಷೆಯ ಪ್ರಭೇದಗಳು ಮುಂತಾದ ಹಲವಾರು ವಿಷಯಗಳನ್ನು ಹೇಳಿರುವುದರಿಂದ ಎಂಟು ಒಂಬತ್ತನೆಯ ಶತಮಾನದ ಸುಮಾರಿಗೆ ಕನ್ನಡ ಸಾಕಷ್ಟು ಪ್ರಬುದ್ಧ ಭಾಷೆಯಾಗಿ ಹೊರಹೊಮ್ಮಿತ್ತೆಂಬುದು ಸ್ಪಷ್ಟವಾಗುತ್ತದೆ. ನಂತರದ ಕಾಲಾವಧಿಯಲ್ಲಿ ಕನ್ನಡ ಭಾಷೆ ಇನ್ನಷ್ಟು ಪ್ರೌಢವಾಗುತ್ತ ನಡೆದು ಸಾಹಿತ್ಯ ರಚನೆಯೂ ತೀವ್ರವಾಗಿ ಸಾಗಿತು. ಕನ್ನಡ ಭಾಷೆಯ ಬದಲಾವಣೆಯ ಅವಸ್ಥಾಭೇದಗಳನ್ನು ಸ್ಥೂಲವಾಗಿ ಮೂರು ರೀತಿಯಾಗಿ ಗುರುತಿಸಬಹುದು. ಇಲ್ಲಿ ಒಂದು ಮಾತನ್ನು ಹೇಳಬೇಕೆನಿಸುತ್ತದೆ. ಬದಲಾವಣೆಯು ಭಾಷೆಯ ಬೆಳವಣಿಗೆಯ ಲಕ್ಷಣ. ಅತಿಯಾದ ವ್ಯಾಕರಣದ ಕಟ್ಟುಪಾಡುಗಳಿಂದ ಭಾಷೆಯ ಬಳಕೆ ನಿಂತು ಹೋಗಿ ಕ್ರಮೇಣ ಆ ಭಾಷೆ ಹತ್ಯೆಯಾಗುವುದುಂಟು. ಉದಾ. ಲ್ಯಾಟಿನ್, ಸಂಸ್ಕೃತ ಮುಂತಾದವು. ಆದರೆ ಕನ್ನಡ ಭಾಷೆಯು ಮಡಿವಂತಿಕೆಯನ್ನು ಮೀರಿ ಬಳಕೆಯ ಹೊಸ ಹೊಸ ಸಾಧ್ಯತೆಗಳನ್ನು ಅಳವಡಿಸಿಕೊಂಡು ಕಾಲದಿಂದ ಕಾಲಕ್ಕೆ ಬೇರೆ ಬೇರೆ ಅವಸ್ಥೆಗಳನ್ನು ಕಂಡುಬದಲಾವಣೆಯಾಗುತ್ತ ಬೆಳವಣಿಗೆ ಹೊಂದುತ್ತ ಬಂದಿತ್ತು. ಅದು ಕನ್ನಡ ಭಾಷೆಯ ಜೀವಂತಿಕೆ ಲಕ್ಷಣವಾಗಿದೆ.

ಕನ್ನಡದ ಉಪಲಬ್ಧ ಮೊದಲ ಕೃತಿ ಕವಿರಾಜಮಾರ್ಗ. ಆ ಕೃತಿ ರಚನೆಯ ಪೂರ್ವದಲ್ಲಿ ಅಂದರೆ ಕ್ರಿ.ಶ.ಸು.೮೫೦ಕ್ಕೂ ಪೂರ್ವದಲ್ಲಿದ್ದ ಕನ್ನಡವನ್ನು ಪೂರ್ವದ ಹಳಗನ್ನಡವೆಂದು ಹೆಸರಿಸಲಾಗುತ್ತದೆ.(ಸುಮಾರು ೪೫೦ ರಿಂದ ೮೫೦). ಕ್ರಿ.ಶ.೮ನೆಯ ಶತಮಾನದಿಂದ ೧೨ನೆಯ ಶತಮಾನದ ಅವಧಿಯನ್ನು ಹಳಗನ್ನಡವೆಂದು ಗುರುತಿಸಲಾಗಿದೆ. ಈ ಯುಗವು ಭಾಷೆ ಹಾಗೂ ಸಾಹಿತ್ಯದ ದೃಷ್ಟಿಯಿಂದ ಪ್ರೌಢ ಸಂಪ್ರದಾಯದ ಸ್ಥಿರತೆ ಮತ್ತು ಘನತೆಯನ್ನು ಹೊಂದಿತ್ತು. ರಾಜಕೀಯವಾಗಿ ಕದಂಬ-ಗಂಗ, ರಾಷ್ಟ್ರಕೂಟ, ಚಾಲುಕ್ಯರ ಆಡಳಿತದಿಂದ ಸಂಪದ್ಭರಿತವಾಗಿತ್ತು. ಜೈನ ಧರ್ಮ ಅತ್ಯಂತ ಪ್ರಮುಖ ಧರ್ಮವಾಗಿತ್ತು. ಚಂಪು ಕಾವ್ಯರೂಪ ಈ ಯುಗದಲ್ಲಿ ಕಳಸ ಮುಟ್ಟಿತ್ತು. ಪಂಪ-ಪೊನ್ನ-ರನ್ನ ಮುಂತಾದ ಶ್ರೇಷ್ಠರು ಈ ಕಾಲದಲ್ಲಿಯೇ ಇದ್ದರು. ಹೀಗೆ ಭಾಷೆ-ಶೈಲಿ, ವಸ್ತು, ಛಂದಸ್ಸು, ಅಲಂಕಾರ ಇವುಗಳಲ್ಲಿ ಸಂಸ್ಕೃತದ ಪ್ರಭಾವ ಹೇರಳವಾಗಿತ್ತು.

ಕ್ರಿ.ಶ.ಸು.೧೪ನೆಯ ಶತಮಾನದ ವೇಳೆಗೆ ಕನ್ನಡ ಭಾಷೆಗೆ ಹಳಗನ್ನಡ ಅವಸ್ಥೆಯಿಂದ ನಡುಗನ್ನಡಕ್ಕೆ ತಿರುಗಿತು. ಹಳಗನ್ನಡವು ಹೆಚ್ಚಾಗಿ ಆಸ್ಥಾನ ಭಾಷೆಯಾಗಿ ವಿದ್ವಾಂಸರಿಗೆ ಮಾತ್ರ ಸೀಮಿತವಾಗಿತ್ತು. ಜನಸಾಮಾನ್ಯರು ಸಾಹಿತ್ಯದಿಂದ ದೂರಸರಿದಿದ್ದರು. ಜೈನಧರ್ಮ ಮತ್ತು ರಾಜ್ಯಶಕ್ತಿಗಳು ಈ ಕಾಲಾವಧಿಯಲ್ಲಿ ಜನತೆಯ ಮೇಲೆ ತಮ್ಮ ಹಿಡಿತವನ್ನು ಕಳೆದುಕೊಳ್ಳಲಾರಂಭಿಸಿದವು. ತತ್ಪರಿಣಾಮವಾಗಿ ಸಾಹಿತ್ಯ ಜನಮುಖಿಯಾಗತೊಡಗಿತು, ಹಾಗೆ ನೋಡಿದರೆ ೧೨ನೆಯ ಶತಮಾನದ ಶಿವಶರಣರು ನಡುಗನ್ನಡ ಸಾಹಿತ್ಯದ ಹರಿಕಾರರೆನಿಸಿಕೊಳ್ಳುತ್ತಾರೆ. ಆ ಭಕ್ತಿ ಸಾಹಿತ್ಯವನ್ನು ಮುಂದೆ ದಾಸರು ಮುಂದುವರೆಸಿಕೊಂಡು ಹೋದರು. ವೈಚಾರಿಕ ಕ್ರಾಂತಿ, ಸಾಮಾಜಿಕ ಆಂದೋಲನ, ಸಾಮಾಜಿಕ ಬದಲಾವಣೆ ಇವು ಶರಣರ, ದಾಸರ ಮುಖ್ಯ ಗುರಿಯಾಗಿತ್ತು. ಅವರು ತಮ್ಮ ಕಾಲದ ಸಮುದಾಯದ ಭಾಷೆಯನ್ನೇ ತಮ್ಮ ಅಭಿವ್ಯಕ್ತಿಗೆ ಮಾಧ್ಯಮವನ್ನಾಗಿಸಿಕೊಂಡರು. ಆ ಮೂಲಕ ಜನಸಮುದಾಯಕ್ಕೆ ನೀತಿ ಬೋಧನೆ ಮಾಡಿ ಮಾರ್ಗದರ್ಶಕರಾದರು. ಬಸವಣ್ಣನವರು ಹೇಳುವಂತೆ

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗಮೆಚ್ಚಿ ಅಹುದೆನಬೇಕು

ಈ ವಚನದಲ್ಲಿ ಮಾತಿನ ಮಹತ್ವವನ್ನು ಹೇಳಿ ಸಾಮಾಜಿಕ ಪರಿವರ್ತನೆಗೆ ಅವರು ಭಾಷೆಯನ್ನು ಒಂದು ಸಾಧನವನ್ನಾಗಿ ಬಳಸಿದರು. ಭಾಷೆ ಬಳಕೆಗೆ ತಕ್ಕಂತೆ ವಚನ, ರಗಳೆ, ಸಾಂಗತ್ಯ, ಕೀರ್ತನೆ ಈ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿದರು. ಈ ಕಾಲಾವಧಿಯಲ್ಲಿ ಸಂಸ್ಕೃತದ ಪ್ರಭಾವ ಹಿಂದಕ್ಕೆ ಸರಿದು ದೇಸಿಯ ಸರಳತೆ ಮುನ್ನಡೆಗೆ ಬಂದಿತು. ಹಳಗನ್ನಡದ ಚಂಪು ಶೈಲಿಯ ಕಾವ್ಯಗಳು 'ವಸ್ತುಕ' ಎನಿಸಿಕೊಂಡರೆ ದೇಸಿ

ಮೂಲದ ಕೃತಿಗಳು 'ವರ್ಣಕ' ಎನಿಸಿಕೊಂಡವು. ರಾಜಾಶ್ರಯವಿರದಿದ್ದರೂ ಸಮಾಜದ ಬೆಂಬಲದಿಂದ ಈ ಯುಗದ ಪ್ರಮುಖ ಕವಿಗಳು (ಶರಣರು, ಹರಿಹರ-ರಾಘವಾಂಕ, ಕುಮಾರವ್ಯಾಸ, ದಾಸರು) ಕೃತಿ ರಚನೆ ಮಾಡಿದರು. ಈ ಅಧ್ಯಾಯದಲ್ಲಿ ಮಧ್ಯಕಾಲದ ಸಾಹಿತ್ಯ ಚುಟುಕುಗಳ ಭಾಷಾ ಸ್ವರೂಪ ಬಗೆಗೆ ಚರ್ಚೆ ಬೆಳೆಸಲಾಗಿದೆ.

II

ವಚನ ಭಾಷೆಯಲ್ಲಿ ಉದ್ದೇಶಪೂರ್ವಕವಾದ ಜಾಗರೂಕತೆ ಇರುತ್ತದೆ. ಸುಸೂತ್ರತೆ ಇರುತ್ತದೆ. ಅದರಲ್ಲಿ ಭಾಷಾ ಪ್ರಜ್ಞೆ ಹೆಚ್ಚು ಏಕಾಗ್ರತೆಯಿಂದ ಅರ್ಥಪೂರ್ಣವಾಗಿ ಕೆಲಸ ಮಾಡುತ್ತದೆ. ವಚನಕಾರರು ತಮ್ಮ ಕಾಲದ ವ್ಯವಹಾರಿಕ ಭಾಷೆಯನ್ನೇ ವಚನ ಕಟ್ಟುವ ಪ್ರಕ್ರಿಯೆಯಲ್ಲಿ ಬಳಸಿದ್ದಾರೆ. ಆ ಸಂದರ್ಭದ ಭಾಷೆಯಲ್ಲಿ ಒಂದು ಪುನರ್ ಸಂಯೋಜನೆ ಇರುತ್ತದೆ. ವಚನದೊಳಗೆ ಪ್ರಾಸ-ಛಂದಸ್ಸು-ಅಲಂಕಾರಗಳ ಬಳಕೆಯ ಮೂಲಕ ವಚನದ ಅಭಿವ್ಯಕ್ತಿಯ ಶಕ್ತಿ ಹೆಚ್ಚುತ್ತದೆ. ಭಾಷೆಗೆ ಒಂದು ಬಗೆಯ ಅಡಕತನದ ಸಿದ್ಧಿ ಪ್ರಾಪ್ತವಾಗುತ್ತದೆ. ಅಂದರೆ ಶೈಲಿಯ ಮುಖ್ಯ ತುಡಿತವೆಂದರೆ ಅನುಭವವನ್ನು ಹರಳುಗಟ್ಟಿಸುವ ಪ್ರಯತ್ನ, ಅಲ್ಲಿ ವಚನಕಾರರ ಪ್ರತಿಭಾ ಶಕ್ತಿ ಮತ್ತು ಪ್ರತಿರೂಪ ಭಾಷೆಯಲ್ಲಿ ಪಾಕಗೊಂಡಿರುತ್ತದೆ.

ಭಾಷೆಯ ಮೂಲಕ ಅಭಿವ್ಯಕ್ತಿಯನ್ನು ಕಾಣುವ ವಚನದಲ್ಲಿ ಪದ, ವಾಕ್ಯಗಳ ವಿನ್ಯಾಸ, ಕಾಕು, ಸ್ವರಭಾವಗಳ ಸಂಯೋಜನೆ ಇಲ್ಲೆಲ್ಲ ಹಲವು ಬಗೆಯ ಆಯ್ಕೆಗೆ ಅವಕಾಶವಿದೆ. ಶರಣರು ವಚನಗಳ ಮೂಲಕ ತಮ್ಮ ಪ್ರತಿಭೆಯ ಆವಿಷ್ಕರಣದಲ್ಲಿ ನಿಯಮಬದ್ಧವಾದ ಅಥವಾ ಸಿದ್ಧಮಾದರಿಯ ಭಾಷಾಪ್ರಯೋಗವನ್ನು ಮೀರಿ ನಡೆಯುತ್ತಾರೆ. ವಚನದಲ್ಲಿ ಭಾಷೆ ಆಡುಮಾತಾಗಿ ಬಂದಾಗ ಅದರ ಅರ್ಥಾಭಿವ್ಯಕ್ತಿಯ ಸಾಮರ್ಥ್ಯ ಹೆಚ್ಚುತ್ತದೆ. ಅಕ್ಷರಗಳು, ಸ್ವರಗಳು ಪುನರಾವರ್ತನೆಗೊಂಡಾಗ ಭಾವ ಜೀಕುತ್ತದೆ; ಅರ್ಥ ಹೊಮ್ಮುತ್ತದೆ.

ಗುರುವಿನಿಂದ ಲಿಂಗವ ಕಂಡೆ, ಜಂಗಮನ ಕಂಡೆ
ಗುರುವಿನಿಂದ ಪಾದೋದಕವ ಕಂಡೆ, ಪ್ರಸಾದವ ಕಂಡೆ
ಗುರುವಿನಿಂದ ನನ್ನ ನಾ ಕಂಡೆ, ಚೆನ್ನಮಲ್ಲಿಕಾರ್ಜುನ

ಅಕ್ಕಮಹಾದೇವಿ

ವಚನ ವಾಕ್ಯಗಳ ಅನುರೂಪತೆಯಿಂದ ಸಾಲುಗಳ ಒಂದು ಭಾಗ ಪುನರಾವರ್ತಿಯಾದರೆ, ಒಂದು ಭಾಗ ಸ್ಥಿರವಾಗುತ್ತದೆ. ವಾಕ್ಯ ಭಾಗಗಳ ಪುನರಾವೃತ್ತಿಯ ಮೂಲಕ ವಚನ ಲಕ್ಷಣಗಳಲ್ಲಿ ಒಂದಾದ ಸಾವಕಾಶತೆ. ವಚನಗಳು ಮುಖ್ಯವಾಗಿ ಭಕ್ತಿಯ ಅಭಿವ್ಯಕ್ತಿ ಎಂಬುದು ಸ್ಪಷ್ಟವಿದೆ. ಭಕ್ತಿ ಅವರಿಗೆ ಕೇವಲ ದೇವರ ಪೂಜೆಯ ವಿಧಾನವಾಗಿರಲಿಲ್ಲ. ಅದು ಅವರ ಸಂವಹನದ ಮಾಧ್ಯಮವೂ ಆಗಿದೆ. ಭಕ್ತಿಯ ಸ್ವರೂಪವನ್ನು ಹೇಳಲು ಕೆಲವು ಶರಣರು ಕೆಲವು ಉಪಮೆ ರೂಪಕಗಳನ್ನು ಬಳಸಿದರೆ ಮತ್ತೆ ಕೆಲವು ಶರಣರು ಬೇರೆ ಉಪಮೆ-ರೂಪಕಗಳನ್ನು ಬಳಸುತ್ತಾರೆ.

ನೆಲದ ಮರೆಯ ನಿಧಾನದಂತೆ
ಫಲದ ಮರೆಯ ರುಚಿಯಂತೆ
ಶಿಲೆಯ ಮರೆಯ ಹೇಮದಂತೆ
ತಿಲದ ಮರೆಯ ತೈಲದಂತೆ
ಮರದ ಮರೆಯ ಬ್ರಹ್ಮವಾಗಿಪ್ಪ
ಚೆನ್ನಮಲ್ಲಿಕಾರ್ಜುನನ ನಿಲುವನಾರೂ ಅರಿಯಬಾರದು.

- ಅಕ್ಕಮಹಾದೇವಿ

ಮುಗಿಲ ಮರೆಯ ಸೂರ್ಯನಂತೆ
ನೆಲದ ಮರೆಯನಿಧಾನದಂತೆ
ಒರೆಯ ಮರೆಯ ಅಲುಗಿನಂತೆ
ಹಣ್ಣಿನೊಳಗಿನ ರಸದಂತೆ
ಶರಣ ಶರೀರದ ಮರೆಗೊಂದು ಪರಮ ಪಾವನಮೂರ್ತಿ
ಪರಾಪರ ತಾನು ತಾನಾಗಿರ್ದುದನೇನೆಂಬೆನಯ್ಯಾ
ಮಹಾಲಿಂಗಗುರು ಶಿವಶಿದ್ದೇಶ್ವರ ಪ್ರಭುವೇ

- ತೋಂಟದ ಸಿದ್ದಲಿಂಗಯತಿ

ಇಂತಹ ವಚನಗಳಲ್ಲಿ ಶಬ್ದ-ಭಾವ, ಪ್ರತಿಮೆ, ಲಯ-ನಾದ ರಚನೆಗಳು ಪುನರಾವೃತ್ತಿಯಾಗುವುದನ್ನು ಕಾಣಬಹುದು. ಪುನರಾವರ್ತಿ ವಚನಗಳ ಶಾಬ್ದಿಕ ವಿನ್ಯಾಸದಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ. ಅಲ್ಲಿ ಪದಗಳ ಮತ್ತು ವಾಕ್ಯಾಂಗಗಳ ಸಮತೋಲನವನ್ನು ಗಮನಿಸಬಹುದಾಗಿದೆ. ಇದೆಲ್ಲ ಸಾಮೂಹಿಕ ವಚನ ಸಂಸ್ಕೃತಿಯೊಂದನ್ನು ಬೆಳೆಸುವ ಯೋಜನೆಯಾಗಿರುವಂತೆ ತೋರುತ್ತದೆ.

ಗಿರಡ್ಡಿ ಗೋವಿಂದರಾಜ ಅವರು ಅಭಿಪ್ರಾಯ ಪಡುವಂತೆ 'ಸಾಮಾನ್ಯವಾಗಿ ದಾಸರ ಕೀರ್ತನೆಗಳು, ಶಿವಶರಣರ ಹಾಡುಗಳ ರಾಚನಿಕ ವಿನ್ಯಾಸ ಸಡಿಲ ವಾಕ್ಯವನ್ನು ಹೋಲಿದರೆ ವಚನಗಳ ರಾಚನಿಕ ವಿನ್ಯಾಸ ಬಿಗಿ ವಾಕ್ಯದ ರೀತಿಯನ್ನು ಹೋಲುತ್ತದೆ. ದಾಸರ ಹಾಡುಗಳಲ್ಲಿ, ಶಿವಶರಣರ ಸ್ವರವಚನಗಳಲ್ಲಿ ಹಾಡಿನ ಮುಖ್ಯ ಸಂದೇಶ ಆರಂಭದ ಪಲ್ಲವಿ ಅನುಪಲ್ಲವಿ ಅಡಗಿರುತ್ತವೆ. ನಂತರದ ನುಡಿಗಳು ಏನಿದ್ದರೂ ಆ ಮುಖ್ಯ ಸಂದೇಶದ ಅರ್ಥವನ್ನು ವಿಸ್ತರಿಸುತ್ತ ಹೋಗುತ್ತವೆ.

ಉದಾ. ಶ್ರೀಪಾದರಾಜರ ಕೀರ್ತನೆ ಹೀಗಿದೆ

ನಾ ನೀನಗೇನು ಬೇಡುವುದಿಲ್ಲ ಎನ್ನ
ಹೃದಯ ಮಂಟಪದೊಳು ನಿಂತಿರೊ ಕೃಷ್ಣ
ಶಿರ ನಿನ್ನ ಚರಣದಲ್ಲೆರಗಲಿ ಎನ್ನ

ಚಕ್ಷುಗಳು ನಿನ್ನ ನೋಡಲಿ
ಕರ್ಣ ಗೀತಂಗಳ ಕೇಳಲಿ ಎನ್ನ
ನಾಸಿಕ ನಿರ್ಮಾಲ್ಯ ಘ್ರಾಣಿಸಲಿ ಕೃಷ್ಣ
ಭಕ್ತ ಜನರ ಸಂಗ ದೊರಕಲಿ ರಂಗ
ವಿಠಲ ನಿನ್ನ ದಯವಾಗಲಿ ಹರಿಯೆ

"ನಾ ನಿನಗೇನು ಬೇಡುವುದಿಲ್ಲ ಎನ್ನ ಹೃದಯ ಮಂಟಪದೊಳು ನಿಂತಿರೋ ಕೃಷ್ಣ" ಎಂಬ ಪಲ್ಲವಿ-ಅನುಪಲ್ಲವಿಯಲ್ಲಿಯೇ ಸಕಲ ಇಂದ್ರಿಯಗಳನ್ನು ನಿಗ್ರಹಿಸಿ ಅವುಗಳನ್ನು ಶ್ರೀ ಹರಿಸ್ಮರಣೆಯಲ್ಲಿ ತೊಡಗಿದಾಗ ಪರಮಾನಂದವಾಗುತ್ತದೆ ಎಂಬ ಧ್ವನಿಯಿದೆ. ಪ್ರತಿಯೊಂದು ನುಡಿಯ ಕೊನೆಗೂ ಪಲ್ಲವಿ-ಅನುಪಲ್ಲವಿ ಮತ್ತೆ ಮತ್ತೆ ಬಂದು ಕೀರ್ತನೆಯ ಶಿಲ್ಪಕ್ಕೆ ಅರ್ಥತುಂಬುತ್ತವೆ. ಇದಕ್ಕೆ ವಿರುದ್ಧವಾಗಿ ವಚನಗಳೂ ತಮ್ಮ ಮುಖ್ಯ ಸಂದೇಶವನ್ನು ಕೊನೆಯ ಚರಣದಲ್ಲಿ ಸ್ಫೋಟಿಸುತ್ತವೆ. ವಚನದ ಉಳಿದ ಸಾಲುಗಳು ಕೊನೆಯ ಸಾಲಿನ ಬರುವಿಕೆಯ ತಕ್ಕ ರಾಚನಿಕ ವಾತಾವರಣವನ್ನು ನಿರ್ಮಿಸುತ್ತವೆ. ಆ ಮುಖ್ಯ ಸಂದೇಶ ಬರುವುದನ್ನು ತಡೆಹಿಡಿದು, ಸಹೃದಯರ ಕುತೂಹಲವನ್ನು ಕೆರಳಿಸುತ್ತದೆ.

ಕಳಬೇಡ ಕೊಲಬೇಡ
ಹುಸಿಯ ನುಡಿಯಲು ಬೇಡ
ಮುನಿಯಬೇಡ
ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ
ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ
ಇದೇ ಬಹಿರಂಗ ಸುದ್ಧಿ

ಮೊದಲಿನ ಆರು ಸಾಲುಗಳು ಕೊನೆಯ ಸಾಲಿನ ಸಂದೇಶಕ್ಕೆ ಪುಷ್ಟಿ ಕೊಡುತ್ತವೆ. ಕೊನೆಯ ಸಾಲು ಉಳಿದ ಸಾಲಿಗಿಂತ ರಚನೆ ಮತ್ತು ಲಯದಲ್ಲಿ ಭಿನ್ನವಾಗಿರುತ್ತದೆ. ಅಂಕಿತವು ಕೊನೆಯ ಸಾಲಿನ ಲಯ ಮತ್ತು ವಾಕ್ಯ ರಚನೆಯನ್ನು ಬದಲಿಸಲು ಮತ್ತು ಆ ಸಾಲನ್ನು ದೀರ್ಘಗೊಳಿಸಲು ನೆರವಾಗುತ್ತದೆ. ಹೀಗೆ ದಾಸರ ಹಾಡುಗಳಲ್ಲಿ ಮುಖ್ಯ ಸಂದೇಶ ಕೊನೆಗೆ ಬರಲಾರದು; ಶರಣರ ವಚನಗಳಲ್ಲಿ ಅದು ಮೊದಲಿಗೆ ಬರಲಾರದು. ಅವುಗಳ ಅನುಭವವನ್ನು ಗ್ರಹಿಸುವ ಸ್ವರೂಪ, ಪ್ರಕ್ರಿಯೆಗಳೇ ಅದಕ್ಕೆ ಕಾರಣವಾಗಿವೆ. ಬಸವಣ್ಣನವರ ವಚನಗಳಲ್ಲಿ ಹೆಚ್ಚಿನ ಆತ್ಮೀಯತೆ ಕಾಣುತ್ತದೆ. ಅವರ ಕೆಲವು ವಚನಗಳಲ್ಲಿ ವೈರುಧ್ಯವೂ ಇರುತ್ತದೆ.

ಉಳ್ಳವರು ಶಿವಾಲಯ ಮಾಡಿಹರು
ನಾನೇನ ಮಾಡುವೆ? ಬಡವನಯ್ಯ
ಎನ್ನ ಕಾಲೆ ಕಂಬ, ದೇಹವೇ ದೇಗುಲ
ಶಿರವೇ ಹೊನ್ನ ಕಳಶವಯ್ಯ
ಕೂಡಲಸಂಗಮದೇವ ಕೇಳಯ್ಯ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ!

ಈ ವಚನದ ಅರ್ಥ ಏನಿದ್ದರೂ ರಾಚನಿಕವಾಗಿ ವೈರುದ್ಧದ ಜೋಡಿಯಿದೆ.

ಅ		ಆ
ಉಳ್ಳವರು	:	ಬಡವ
ಶಿವಾಲಯ	:	ದೇಹ
ಸ್ಥಾವರ	:	ಜಂಗಮ
ಮಾಡುವುದು	:	ಇರುವುದು
ಅಳಿವುಂಟು	:	ಅಳಿವಿಲ್ಲ.

ಇಂತಹ ವೈರುಧ್ಯಗಳು ವಚನದ ಭಾವವನ್ನು ತೀವ್ರಗೊಳಿಸುತ್ತವೆ. ಆ ಜೋಡಿಗಳಲ್ಲಿ ವಚನಕಾರರು 'ಅ' ಭಾಗವನ್ನು ನಿರಾಕರಿಸಿ, 'ಆ' ಭಾಗವನ್ನು ಎತ್ತಿ ಹಿಡಿಯುತ್ತಾರೆ. ಆ ವಚನಶಿಲ್ಪದ ಹಿಂದೆ ಸಾಮಾಜೀಕರಣದ ತತ್ವ ಅಡಗಿದೆ. ವಚನಗಳನ್ನು ಓದುವಾಗ ಅಥವಾ ಹಾಡುವಾಗ ಉಚ್ಚಾರದಲ್ಲಿ ಕಂಡುಬರುವ ಧ್ವನಿಯ ಏರಿಳಿತಕ್ಕೆ ತಕ್ಕಂತೆ ಅರ್ಥದಲ್ಲಿಯೂ ಏರಿಳಿತವಾಗುವುದು.

ಮರಕ್ಕೆ ಬಾಯಿ ಬೇರೆಂದು
ತಳಕ್ಕೆ ನೀರನೆರೆದರೆ ಮೇಲೆ ಪಲ್ಲವಿಸಿತ್ತು ನೋಡಾ !

ಒಂದೇ ವಚನ ಉದ್ಗಾರವಿಟ್ಟರೆ ಒಂದು ಅರ್ಥ, ಪ್ರಶ್ನೆಯಿಟ್ಟರೆ ಇನ್ನೊಂದು ಅರ್ಥ ಹೊರಡುತ್ತದೆ. ವಚನಗಳಲ್ಲಿ ಗದ್ಯದ ಸರಳತೆಯಿದೆ; ಪದ್ಯದ ಲಯವಿದೆ. ಅವು ಭಾವಗೀತೆಯಂತೆ ಸ್ವತಂತ್ರ ವಚನಕಾರರು ಶಿಷ್ಟ ಮತ್ತು ವ್ಯಾವಹಾರಿಕ ಭಾಷೆಯ ಶಬ್ದ ಸಾಮಗ್ರಿಗಳನ್ನು ಧಾರಾಳವಾಗಿ ಬಳಸಿಕೊಳ್ಳುವುದರಿಂದ ಅವರ ಶೈಲಿಗೆ ಜೋರು-ಹುರುಪುಗಳ ನೈಜತೆ ಒದಗಿದೆ. ಪುಟ್ಟ ಪುಟ್ಟ ವಾಕ್ಯಗಳ ರಚನೆ ವಚನಗಳ ವೈಶಿಷ್ಟ್ಯ ಶರಣರು ತಮ್ಮ ಪರಿಸರದ ರೂಪಕಗಳನ್ನು ವಚನ ರಚನೆಯಲ್ಲಿ ಪೋಣಿಸುತ್ತಾರೆ.

ತನುವೆಂಬ ಏರಿಗೆ ಮನವೆಂಬ ಕಟ್ಟೆಯ ಮಾಡಿ
ಬಲಿದು ಷಡ್ವಿಧ ಭಕ್ತಿಯೆಂಬ ಸೋಪಾನದಿಂದ
ಪರಮಾನಂದ ಜಲವು ತುಂಬಿ

ಕೆರೆಯ ಕಟ್ಟಬಲ್ಲವರನಾದರೂ ಕಾಣೆ
ನಾನು ಕಟ್ಟಿದ ಕೆರೆ ಸ್ಥಿರವಾಯಿತ್ತು ಗುಹೇಶ್ವರ ನಿಮ್ಮಾಣೆ

- ಅಲ್ಲಮ

ಸಾಮಾನ್ಯರಿಗೆ ಅದರಲ್ಲಿಯೂ ಬೇಸಾಯಗಾರರಿಗೆ ತೋಟದ ದೃಷ್ಟಾಂತದ ಮೂಲಕ ಆಧ್ಯಾತ್ಮ ರಹಸ್ಯವನ್ನು ಸುಲಭವಾಗಿ ಬೋಧಿಸಬಹುದೆಂದೂ ಅವರಿಗೆ ಬೇರೆ ಭಾಷೆ ಅರ್ಥವಾಗುವುದಿಲ್ಲವೆಂದೂ ಅಲ್ಲಮ ತಿಳಿದಿದ್ದನು. ಅವರವರ ಭಾಷೆಯಲ್ಲಿ ನೀಡುವ ಬೋಧನೆ ಪರಿಣಾಮಕಾರಿಯಾಗುತ್ತದೆಂಬ ಆಧುನಿಕ ಶೈಕ್ಷಣಿಕ ಸಿದ್ಧಾಂತವು ಹನ್ನೆರಡನೆಯ ಶತಮಾನದ ವಚನಕಾರರಿಗೆ ಪರಿಚಯವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಇಂತಹ ಹಲವಾರು ವಚನಗಳು ಕನ್ನಡದ ಶಕ್ತಿಯನ್ನು ಹೆಚ್ಚಿಸಿ, ಶೈಲಿಯ ವೈಶಿಷ್ಟ್ಯವನ್ನುಳಿಸಿವೆ. ಅನಾಯಾಸವಾಗಿ ಮಾಡುವ ಪ್ರಾಸಗಳ ವಿನ್ಯಾಸ ಭಾಷೆಗೆ ಅಪೂರ್ವ ಸೌಂದರ್ಯವನ್ನೊದಗಿಸಿವೆ. ಕೆಲವು ವಚನಗಳಲ್ಲಿಯ ವಾಕ್ಯ ಭಾಗಗಳು ಪುನರುಕ್ತಿಯಾಗಿವೆ.

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲಬೇಕು ಶರಣಂಗೆ ಪರದೈವವನೊಲ್ಲೆಂಬ
ಛಲಬೇಕು ಶರಣಂಗೆ ಲಿಂಗ ಜಂಗಮವೊಂದೆಂಬ
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ
ಛಲವಿಲ್ಲದವರ ಮೆಚ್ಚ ಕೂಡಲಸಂಗಮದೇವ

- ಬಸವಣ್ಣ

ಈ ವಚನಗಳಲ್ಲಿ 'ಛಲಬೇಕು ಶರಣಂಗೆ' ಈ ರಚನೆ ಐದು ಸಲ ಪುನರಾವರ್ತನೆಯಾಗಿದೆ.

ವಚನದ ಉದ್ದಕ್ಕೂ ಪ್ರಾಸಗಳನ್ನು ವಿವಿಧ ರೀತಿಯಲ್ಲಿ ಸಂಯೋಜಿಸಲಾಗಿದೆ. ಲಯ ಶುದ್ಧತೆ, ಶಬ್ದಗಳ ಸಮತೋಲನ, ನಿಖರತೆ, ಹ್ರಸ್ವತೆ, ಪದಗಳ ಆವೃತ್ತತೆ, ಪ್ರಾಸಾನುಪ್ರಾಸದ ಬಿಗಿ, ವಾಕ್ಯರಚನೆಯ ಬಿಗಿ ಮುಂತಾದ ಗುಣಗಳಿಂದಾಗಿ ವಚನದ ಶೃತಿ ಅನುದಾತ್ತವಾಗಿದೆ. ಇದರಿಂದಾಗಿ ಲಯದಲ್ಲಿ ಒಂದು ಬಗೆಯ ಉಯ್ಯಾಲೆ ಜೀಕಿದ ಪರಿಣಾಮ ಉಂಟಾಗಿದೆ. ಬಸವಾದಿ ಶರಣರು ಲಯಾತ್ಮಕ ಗದ್ಯವನ್ನೇ ವಿಶಿಷ್ಟ ರೀತಿಯಲ್ಲಿ ಪರಿಷ್ಕರಿಸಿ ವಾಕ್ಯ ರೀತಿಯಲ್ಲಿ ವಿನ್ಯಾಸಗೊಳಿಸಿ ಮುಕ್ತಕ ರೂಪದಲ್ಲಿ ರಚಿಸಿದರು.

ಬಸವಾದಿ ಶರಣರು ತಮ್ಮ ಅಭಿವ್ಯಕ್ತಿಯಲ್ಲಿ ಶಿಷ್ಟ (ಗ್ರಾಂಥಿಕ) ಮತ್ತು ವ್ಯಾವಹಾರಿಕ ಶೈಲಿಯನ್ನು ಬಳಸಿದ್ದಾರೆ. ಗ್ರಾಂಥಿಕ ಶೈಲಿಯು ಬರೆಹದ ಭಾಷೆಗೆ ನಿಕಟವಾಗಿರುತ್ತದೆ. ಮತ್ತು ಔಪಚಾರಿಕ ಭಾಷಿಕ ಸಂದರ್ಭದಲ್ಲಿ ಅದು ಬಳಕೆಯಾಗುತ್ತದೆ. ವ್ಯಾವಹಾರಿಕ ಶೈಲಿಯ ಮಾತು ಮತ್ತು ಬರವಣಿಗೆಯಲ್ಲಿ ಪರಸ್ಪರ ಆತ್ಮೀಯ ಸಲುಗೆ ಇರುತ್ತದೆ. ಅಲ್ಲಿ ಆಡುಮಾತಿನ ಬಳಕೆ ಹೆಚ್ಚಿರುತ್ತದೆ.

ಗ್ರಾಂಥಿಕ ಶೈಲಿ

ಅಪಾರ ಗಂಭೀರದ ಅಂಬುಧಿಯಲ್ಲಿ
ತಾರಾಪಥದ ನೋಡಿ ನಡೆಯೆ
ಛೈತ್ರದಿಂದ ದ್ವೀಪಾಂತರಕ್ಕೆ
ಸಕಲ ಪದಾರ್ಥವನೆಯ್ದಿಸುವುದು
ಎನ್ನದೇವ, ಚೆನ್ನಮಲ್ಲಿಕಾರ್ಜುನಯ್ಯನ ಸಮೀಪ
ತುರ್ಯ ಸಂಭಾಷಣೆಯನರಿದಡೆ ಮುನ್ನಿನಲ್ಲಿಗೆಯ್ದಿಸುವುದು

-ಅಕ್ಕಮಹಾದೇವಿ

ವ್ಯಾವಹಾರಿಕ ಶೈಲಿ

ಎಮ್ಮೆಗೊಂದು ಚಿಂತೆ ಸಮಗಾರನಿಗೊಂದು ಚಿಂತೆ
ಎನಗೆ ಚಿಂತೆ! ತನಗೆ ತನ್ನ ಕಾಮದ ಚಿಂತೆ
ಒಲ್ಲೆ ಹೋಗು ಸೆರಗ ಬಿಡು ಮರುಳೆ!

- ಅಕ್ಕಮಹಾದೇವಿ

ವ್ಯಾವಹಾರಿಕ ಶಿಷ್ಟ ಶೈಲಿ

ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ, ತನ್ನ ಬಣ್ಣಿಸಬೇಡ,
ಇದಿರ ಹಳಿಯಲು ಬೇಡ.... ಬಸವಣ್ಣ
ದಯವಿಲ್ಲದ ಧರ್ಮವಾವುದಯ್ಯ? ದಯವೇ ಬೇಕು ಸಕಲ ಪ್ರಾಣಿಗಳಲ್ಲಿ

-ಬಸವಣ್ಣ

ಆಮಾತು-ಈ ಮಾತು-ಹೋಮಾತು
ಹೋಯಿತ್ತಲ್ಲಾ ಭಕ್ತಿ ಜಲವ ಕೂಡಿ - ಅಲ್ಲಮ
ಸಜ್ಜನವಾಗಿ ಮಜ್ಜನಕೆರವೆ
ಶಾಂತಳಾಗಿ ಪೂಜೆಯೆ ಮಾಡುವೆ - ಅಕ್ಕಮಹಾದೇವಿ
ಅಡಕ ತಿಂಬರು ಕಣಕದ ಅಡಿಗೆ ಇರಲ್ಕೆ
ಕುಡಿವರು ಸುರೆಯ ಹಾಲಿರಲ್ಕೆ - ಜೇಡರ ದಾಸಿಮಯ್ಯ

ಶರಣರು ಆಯಾ ಸಾಮಾಜಿಕ ಸಂದರ್ಭಗಳಿಗೆ ತಕ್ಕಂತೆ ಮೇಲಿನ ಭಾಷಿಕ ಶೈಲಿ ಪ್ರಭೇದಗಳನ್ನು ತಮ್ಮ ಅಭಿವ್ಯಕ್ತಿಯಲ್ಲಿ ಬಳಸಿದ್ದಾರೆ. ಅವು ವಚನ ವಾಚನದಲ್ಲಿ ಮಹತ್ವದ ಘಟಕಗಳಾಗಿವೆ. ಅಲ್ಲಮನ ವಚನ ಒಂದರಲ್ಲಿಯೇ ಗ್ರಾಂಥಿಕ ಮತ್ತು ವ್ಯಾವಹಾರಿಕ ಶೈಲಿಗಳನ್ನು ಗುರುತಿಸಬಹುದು.

ವೇದವೆಂಬುದು ಓದಿನ ಮಾತು
ಶಾಸ್ತ್ರವೆಂಬುದು ಸಂತೆಯ ಸುದ್ದಿ
ಪುರಾಣವೆಂಬುದು ಪುಂಡರ ಗೋಷ್ಠಿ
ತರ್ಕವೆಂಬುದು ತಗರರ ಹೋರಟೆ
ಭಕ್ತಿಯೆಂಬುದು ತೋರುಂಬಲಾಭ
ಗುಹೇಶ್ವರನೆಂಬುದು ಮೀರಿದ ಘನವು

-ಅಲ್ಲಮ

ಇಲ್ಲಿ ಪುನರಾವೃತ್ತವಾಗಿರುವ ವಾಕ್ಯರಚನೆಯನ್ನು ಶೈಲಿ ಪರಿಭಾಷೆಯಲ್ಲಿ ಹೀಗೆ ತೋರಿಸಬಹುದು.

ಗ್ರಾಂಥಿಕ ಶೈಲಿ	ವ್ಯಾವಹಾರಿಕ ಶೈಲಿ
ವೇದವೆಂಬುಂದು	ಓದಿನ ಮಾತು
ಶಾಸ್ತ್ರವೆಂಬುದು	ಸಂತೆಯ ಸುದ್ದಿ
ಪುರಾಣವೆಂಬುದು	ಪುಂಡರ ಗೋಷ್ಠಿ
ತರ್ಕವೆಂಬುದು	ತಗರರ ಹೋರಟೆ

ವಚನಕಾರರು ತಮ್ಮ ವಚನಗಳಲ್ಲಿ ವಿವಿಧ ಸಾಮಾಜಿಕ ಶೈಲಿಯನ್ನು ಬಳಸಿದ್ದಾರೆ. ಅಲ್ಲಿಯ ತಾತ್ವಿಕ ಅರ್ಥ ಇನ್ನೇನೋ ಇರಬಹುದು. ಆದರೆ ಭಾಷೆಯ ಬಳಕೆಯಲ್ಲಿ ಒಂದು ಕಥೆ, ಘಟನೆ, ಸಾದೃಶ್ಯಗಳು ಹೇಗೆ ವ್ಯಕ್ತಗೊಂಡಿರುತ್ತವೆ ಎಂಬ ಅಂಶವೇ ಇಲ್ಲಿ ಮುಖ್ಯವಾಗಿರುತ್ತದೆ. ವಚನಕಾರರು ತಮ್ಮ ಅಭಿವ್ಯಕ್ತಿಯಲ್ಲಿ ತಮ್ಮ ಕಾಲದಲ್ಲಿ ಬಳಕೆಯಾದ ಅಥವಾ ತಾವೇ ನಿರ್ಮಿಸಿದ ಜಾನಪದ ಪ್ರಕಾರಗಳನ್ನು ವಚನಗಳಲ್ಲಿ ಪೋಣಿಸಿದ್ದಾರೆ. ಇದರಿಂದ ಅವರ ವಚನಗಳಿಗೆ ಸಾಂಸ್ಕೃತಿಕ ಅನನ್ಯತೆ ಪ್ರಾಪ್ತವಾಗಿದೆ.

ಬಂಜೆ ಬೇನೆಯರಿವಳೇ?
ಮಲತಾಯಿ ಮುದ್ದ ಬಲ್ಲಳೇ?
ನೊಂದ ನೋವ ನೋಯದವರೆತ್ತ ಬಲ್ಲರು?
ಚೆನ್ನಮಲ್ಲಿಕಾರ್ಜುನ ನಿರಿದಲಗು ಒಡಲಲ್ಲಿ ಮುರಿದು
ಹೊರಳುವೆನ್ನಳನು ನೀವೆತ್ತ ಬಲ್ಲಿರೇ, ಎಲೆ ತಾಯಿಗಳಿರಾ!

- ಅಕ್ಕಮಹಾದೇವಿ

ಇತರರಂತೆ ಶರಣರು ತಮ್ಮ ವಚನಗಳಲ್ಲಿ ಗಾದೆಗಳನ್ನು ಬಳಸಿದ್ದಾರೆ.

- ಊರ ಸೀರೆಗೆ ಅಗಸ ತಡೆಬಡೆಗೊಂಬಂತೆ
- ಹೆಂಡದ ಮಡಿಕೆಯ ಹೊರಗೆ ತೊಳೆದಂತೆ

- ಓಡೆತ್ತ ಬಲ್ಲುದು ಅವಲಕ್ಕಿಯ ಸವಿಯ?

- ಬಳ್ಳಿಗೆ ಕಾಯಿ ದಿಮ್ಮಿತ್ತೇ?

- ಹಾಲಹರವಿಯ ಮೇಲೆ ಮಜ್ಜಿಗೆಯ ತುಂಬಿರಿಸಿದಡೇನು?

ಹೆಪ್ಪಾಗಬಲ್ಲುದೆ? ಸಮ್ಮಿಶ್ರಮದಿಂದಲ್ಲದೆ

ತಮ್ಮ ಮಾತಿಗೆ ಅಧಿಕೃತತೆ ಬರುವುದು ಗಾದೆ ಬಳಕೆಯಿಂದ ಎಂದು ಅವರು ಭಾವಿಸಿದ್ದರು. ಗಾದೆ ಬಳಕೆಯಿಂದ ಅಭಿವ್ಯಕ್ತಿಗೆ ಸಂಕ್ಷಿಪ್ತತೆ, ಬೆಡಗು ಹಾಗೂ ವ್ಯಂಜಕ ಶಕ್ತಿ ಬರುತ್ತದೆ. ಗಾದೆಗಳಂತೆ ವಚನಗಳಲ್ಲಿ ನುಡಿಗಟ್ಟುಗಳೂ ದೊಡ್ಡಪ್ರಮಾಣದಲ್ಲಿ ಕಾಣಿಸುತ್ತವೆ.

- ಮೂಗ ಕೊಯ್ಯದೆ ಮಾಣ್ಬನೆ?

- ತಲೆದಂಡ, ತಲೆದಂಡ

- ಕೊಂಬು ಮೆಟ್ಟಿಕೂಗು

- ಸೆರಗು ಬಿಡುಮರುಳೆ; ಹಲ್ಲು ಕಳೆವರು

- ಸೆರಗು ಹಾಸುವವಳು

- ಕೆನ್ನೆವಾರೆಸೀಳು, ನೂರು ಓದು ನೂರು ಕೇಳು

ಇಂತಹ ನುಡಿಗಟ್ಟುಗಳಲ್ಲಿ ಅಲ್ಲಿಯ ಪದಗಳು ನೀಡುವ ಅರ್ಥಕ್ಕಿಂತ ಭಿನ್ನವಾದ ಅರ್ಥ ಕೊಡುತ್ತವೆ. ನುಡಿಗಟ್ಟುಗಳ ಬಳಕೆಯಿಂದ ವಚನಗಳ ಧ್ವನಿಶಕ್ತಿ ಹೆಚ್ಚುತ್ತದೆ; ಕಾವ್ಯಾತ್ಮಕತೆ ಹಿಗ್ಗುತ್ತದೆ. ಭಾಷೆಯ ಕಸುವು ಮಿಗಿಲಾಗುತ್ತದೆ. ವಚನಕಾರರು ತಮ್ಮ ಅಂತರಂಗದ ಅಮೂರ್ತ ಅನುಭವವನ್ನು ಮೂರ್ತಗೊಳಿಸುವ ಕಾರ್ಯವನ್ನು ಪ್ರತಿಮೆಗಳ ಮೂಲಕ ಮಾಡಿದ್ದಾರೆ. ಇದರಿಂದ ಕಾವ್ಯಭಾಷೆಗೆ ಮೊನಚು ಏರ್ಪಡುತ್ತದೆ. ಅರ್ಥ ಸ್ವಾರಸ್ಯ ಹೆಚ್ಚುತ್ತದೆ. ವಚನ ಭಾಷೆ ಅಡಕವಾಗುತ್ತದೆ.

- ನಿಮ್ಮ ಬೇರಬಲ್ಲರಿಗೆ ಎಲೆಯ ತೋರಿ

- ಅಳವಾಡಿ ಕಾಡುವರೆ

-ಉರಿಲಿಂಗಪೆದ್ದಿ

- ಹೂವಿನ ಪರಿಮಳವ ತುಂಬಿಯಲ್ಲದೆ

- ಹೊರಗಿನ ನೊಣವೆತ್ತ ಬಲ್ಲುದೋ

- ಹಾವಿನಹಾಳ ಕಲ್ಲಯ್ಯ

- ಉರಿಯ ಕಿಚ್ಚಿಗೆ ಮೈಯೆಲ್ಲ ಬಾಯಿ

- ಅಲ್ಲಮ

- ಉರಿ ನೀರು ಕುಂಭದಂತೆ ಆಗಬಲ್ಲಡೆ ಕಾಯಿಲಿಂಗ ಸಂಬಂಧಿ.

- ಸಕಲ ಪುರಾತನರ ವಚನ

ಶರಣರ ಭಾವನೆಗಳು ವಚನ ಸಂಯೋಜನೆಯ ಕ್ರಿಯೆಯಲ್ಲಿ ಧ್ವನಿಶಕ್ತಿ ಪಡೆದಾಗ ಪ್ರತಿಮೆಯಾಗುತ್ತದೆ. ವಚನಕಾರರು ಮಾತನಾಡುವುದೇ ಪ್ರತಿಮೆಗಳ ಮೂಲಕ. ಸಸ್ಯ, ಪ್ರಾಣಿ, ಸಾಮಾಜಿಕ ವಸ್ತುವನ್ನು ಪ್ರತಿಮೆ ಮೂಲಕ ಪ್ರತಿಬಿಂಬಿಸುತ್ತಾರೆ. ಮಾತನ್ನು ಪರಿಣಾಮಕಾರಿಯಾಗಿ ರೂಪಿಸುವಲ್ಲಿ, ಅಮೂರ್ತ ಅನುಭವವನ್ನು ಮೂರ್ತಗೊಳಿಸುವಲ್ಲಿ ಪ್ರತಿಮೆಗಳು ಪ್ರಮುಖ ಪಾತ್ರವಹಿಸುತ್ತವೆ. ವಚನಗಳಲ್ಲಿ ಗಾದೆ, ನುಡಿಗಟ್ಟು, ಪ್ರತಿಮೆಗಳಂತೆ ಅನುಕರಣ ವಾಚಕಗಳು, ಆಯಾ ಸನ್ನಿವೇಶವನ್ನು ಬಿಂಬಿಸುವಾಗ ಜೀವನಾಡಿಯಂತೆ ಪ್ರವೇಶಿಸಿ ವಚನಗಳಿಗೆ ಕಳೆತರುವಲ್ಲಿ ಸಹಾಯಕವಾಗಿವೆ.

ಚಿಲಿಪಿಲಿ ಎಂದೋದುವ ಗಿಳಿಗಳಿರಾ
ನೀವು ಕಾಣಿರೆ? ನೀವು ಕಾಣಿರೆ?

- ಅಕ್ಕಮಹಾದೇವಿ

ಇಂತಹ ಉದಾಹರಣೆಗಳನ್ನು ನೋಡಿದಾಗ ಅನುಕರಣ ವಾಚಕ ಶಬ್ದಗಳು ಕ್ರಿಯೆಯನ್ನು ಅಭಿನಯಿಸು ವಂತೆ ಭಾಸವಾಗಿ ವಚನದ ಸೌಂದರ್ಯವನ್ನು ಹೆಚ್ಚಿಸಿವೆ. ಅವು ಕಲಾತ್ಮಕವಾಗಿ, ಸಹಜವಾಗಿ ಮೂಡಿಬಂದಿವೆಯೇ ಹೊರತು ಹೊರೆಯಾಗಿ ಅಲ್ಲ. ಇದು ವಚನ ಶೈಲಿಯ ವೈಶಿಷ್ಟ್ಯಗಳಲ್ಲಿ ಒಂದಾಗಿದೆ.

ಒಟ್ಟಿನಲ್ಲಿ, ವಚನಗಳಲ್ಲಿ ಬಳಕೆಯಾದ ಶೈಲಿ ದೇಸಿ ಶೈಲಿ. ಒಂದು ಭಾಷೆಯನ್ನು ಸೃಜನಾತ್ಮಕವಾಗಿ ಬಳಸಿದಾಗ ಮಾತ್ರ ಅಂತಹ ಶೈಲಿ ವಿಧಾನ ಮೂಡಿಬರುತ್ತದೆ. ಭಾಷೆಯನ್ನು ಸೃಜನಾತ್ಮಕವಾಗಿ ಬಳಸುವುದೆಂದರೆ ಚಿಂತನಶೀಲ ಮನಸ್ಸೊಂದು ಭಾಷೆಯ ರೂಢಿ ಜಡವಾದ ವ್ಯಾವಹಾರಿಕ ಸ್ವರೂಪವನ್ನು ಮುರಿದು ತನ್ನ ಸಮೃದ್ಧವೂ ತೀವ್ರವೂ ಆದ ಅನುಭವಗಳಿಗೆ ತಕ್ಕ ಭಾಷಿಕ ಮಾಧ್ಯಮಗಳನ್ನು ಕಟ್ಟುವ ಕ್ರಿಯೆಯಲ್ಲಿ ತೊಡಗುವುದೆಂದರ್ಥ. ಹನ್ನೆರಡನೆಯ ಶತಮಾನದ ಶರಣರು ಸಾಮಾಜಿಕ ಆಂದೋಲನದಲ್ಲಿ ತೊಡಗಿಸಿಕೊಂಡಾಗ ಕನ್ನಡ ಭಾಷೆಯನ್ನು ಅತ್ಯಂತ ಸೃಜನಾತ್ಮಕವಾಗಿ ಬಳಸುವುದರ ಮೂಲಕ 'ವಚನ' ಎಂಬ ವಿಶಿಷ್ಟ ಅಭಿವ್ಯಕ್ತಿ ಪ್ರಕಾರವೊಂದನ್ನು ಕನ್ನಡ ಸಾಹಿತ್ಯ ಪರಂಪರೆಗೆ ಸೇರಿದ್ದು ತುಂಬ ಮಹತ್ವದ ಸಂಗತಿಯಾಗಿದೆ.

III

ದಾಸರ ಅಭಿವ್ಯಕ್ತಿಯ ಮಾಧ್ಯಮದಲ್ಲಿ ಭಾಷೆಯೂ ಒಂದಾಗಿದೆ. ಅವರು ಹಾಡು, ಕುಣಿತ, ಸಂಗೀತದೊಂದಿಗೆ ಪ್ರಾದೇಶಿಕ ಭಾಷೆಯನ್ನು ಹಾಡುವಿಕೆಯಲ್ಲಿ ಸಮ್ಮಿಳನ ಮಾಡಲು ಹಾತೊರೆಯುತ್ತಾರೆ. ಇದು ಕೇಳುಗರ ಕುತೂಹಲ, ಆಸಕ್ತಿ ಕೆರಳಿಸಿ ಸಹೃದಯರನ್ನು ಆಕರ್ಷಿಸುತ್ತದೆ. ಈ ಪ್ರಕ್ರಿಯೆಯು ಭಾಷೆಯ ಸೃಜನಶೀಲತೆಯ ನೆಲೆಯಲ್ಲಿಯೇ ನಡೆಯುತ್ತದೆ. ಅಂತಹ ಸಂದರ್ಭದಲ್ಲಿ ಅವರು ಬಳಸದ

ಭಾಷಾ; ಪ್ರಯೋಗ ಮತ್ತು ಸಂಗೀತವು ಶಿಥಲತೆಯ ಹಾದಿ ತುಳಿಯುತ್ತದೆ. ಆಗ ಹೊಸ ಪದಗಳ ಸೃಷ್ಟಿಯಾಗುವುದು. ಹಾಗೂ ಹಳೆಯ ಪದಗಳಿಗೆ ಸ್ಥಾಪಿತ ಅರ್ಥಗಳು ಬಿದ್ದುಹೋಗಿ ಹೊಸ ಅರ್ಥ ಬರುವ ಪ್ರಕ್ರಿಯೆ ನಡೆಯುತ್ತದೆ. ಹೊಸ ವಾಕ್ಯ ರಚನೆಗಳು ಸಿದ್ಧವಾಗುವ ಈ ಪ್ರಕ್ರಿಯೆ ನಡೆಯುತ್ತದೆ.

ದುರ್ಜನರ ಸಂಗ ಎಂದಿಗೂ ಒಲ್ಲೆನು ಇಂಥ
ಸಜ್ಜನರ ಸಂಗದೊಳಗಿರಿಸೆನ್ನರಂಗ
ಉಂಡ ಮನೆಗೆರಡನು ಎಣಿಸುವಾತನ ಸಂಗ
ಕೊಂಡೆಯುವ ಪೇಳಿ ಕಾದಿಸುವವನ ಸಂಗ
ತಂದೆತಾಯನು ಬೈದು ಬಾಧಿಸುವವನ ಸಂಗ
ನಿಂದಕರ ಸಂಗ ಬಹು ಭಂಗ ರಂಗ.....

ಕನಕದಾಸರ ಈ ಕೀರ್ತನೆ ತುಂಬ ಹೃದ್ಯವಾಗಿದೆ. ದುರ್ಜನರ ಸಂಗ ಸಲ್ಲದು. ಇದರಿಂದ ವ್ಯಕ್ತಿಯ ಹಾಗೂ ಸಮುದಾಯದ ಉನ್ನತಿಗೆ ಮಾರಕವಾಗುವುದಾಗಿ ಸೂಚಿಸುತ್ತಾರೆ. ಸುಲಭ ಗ್ರಾಹ್ಯವಾದ ಸರಳ ವಿಚಾರವನ್ನು ವಿವರಣಾತ್ಮಕವಾಗಿ ಅರ್ಥಪೂರ್ಣವಾಗಿ ಸಾದೃಶ್ಯಗಳ ಮೂಲಕವಾಗಿ ಮಂಡಿಸುವ ರೀತಿ ಇದು. 'ಸಂಗ', 'ರಂಗ' ಎಂಬ ಪದಗಳು ಪುನರಾವರ್ತನೆಯಾದರೂ ಕೇಳುವುದಕ್ಕೆ ಹಿತಕಾರಿಯಾಗಿವೆ. ಇಲ್ಲಿ ದಾಸರ ಸೂಕ್ಷ್ಮಸಂವೇದನೆ ಪ್ರಕಟವಾಗುವುದಲ್ಲದೆ ಪದಗಳ ಬಳಕೆಯೂ ಗಮನಾರ್ಹವಾಗಿದೆ.

ಗಳಿಸಿಕೊಳ್ಳಿರೊ ಸಾಧುಸಜ್ಜನ ಸಂಗವ
ಗಳಿಗಿಯೊಳು ತೋರಿಕೊಡುವರು ಅಂತರಂಗವ
ಹೊಟ್ಟಿಗೆ ಮೊಟ್ಟಿಗೆ ಕೊಟ್ಟು ಹೊಗಬ್ಯಾಡಿರೊ
ಹುಟ್ಟಿ ಬಂದ ಮ್ಯಾಲೆ, ಹರಿನಾಮ ಘಟ್ಟಿಸಿಕೊಳ್ಳಿರೊ

ಸಾಧು ಸಜ್ಜನರ ಸಂಗವನು ಗಳಿಸಿಕೊಳ್ಳುವಂತೆ ಕರೆ ನೀಡಿದ್ದಾರೆ. ಮಹಿಪತಿದಾಸರು. ಲೌಕಿಕ ಆಸೆಗೆ ಬಲಿಯಾಗಿ ಮನುಷ್ಯತ್ವವನ್ನು ಕಳೆದುಕೊಳ್ಳದಂತೆ ಸೂಚಿಸಿದ್ದಾರೆ. ಇಲ್ಲಿ ಭಾಷೆ ಪ್ರಜ್ಞಾಪೂರ್ವಕವಾಗಿ ಪ್ರಕಟವಾಗಿದೆ. ಭಾಷೆ ಅರ್ಥಸಾಧ್ಯತೆಗಳನ್ನು ಸಂವಹನಗೊಳಿಸಲು ಪದಗಳು ಬಳಕೆಯಾದರೆ ಅದು ಹೊರಡಿಸುವ ಅರ್ಥಸಾಧ್ಯತೆಗಳ ಹೊಸ ಆಯಾಮಗಳನ್ನು ಅಧ್ಯಯನಕಾರ ವಿಶ್ಲೇಷಿಸಬೇಕಾಗುತ್ತದೆ. ಮಹಿಪತಿದಾಸರು ರಾವಣ, ಕೌರವರ ದೃಷ್ಟಾಂತವನ್ನು ನೀಡಿ ಅವರ ಪತನದಿಂದ ಎಚ್ಚರಗೊಳ್ಳುವಂತೆ ಹಾಗೂ ಅದರಿಂದಾದ ಪರಿಣಾಮವನ್ನು ಕುರಿತು ಹೇಳುತ್ತಾರೆ. ಅಲ್ಲಿಯ ಭಾಷೆಯ ಬಳಕೆ ಸಹೃದಯರ ಮೇಲೆ ಬೀರಬಹುದಾದ ಪರಿಣಾಮ ಅದ್ಭುತವಾಗಿದೆ. ಪದಗಳ ಬಳಕೆ ಕೇವಲ ನುಡಿಗಳಾಗದೆ ಅವು ಒಂದು ಭಾಷಾ ಸಮುದಾಯದ ಸಂವೇದನೆಯ ಭಾಗವಾಗಿ ರೂಪು ಪಡೆಯುತ್ತವೆ. ಸಮಕಾಲೀನ ಸಂವೇದನಗಳಿಗೆ ಪೌರಾಣಿಕ ವಿಷಯಗಳನ್ನು ಲೇಪಿಸಿ ವಿಭಿನ್ನ ನೆಲೆಯಿಂದ ಮನುಷ್ಯ ಸ್ವಭಾವವನ್ನು

ದಾಸರು ಚಿತ್ರಿಸುತ್ತಾರೆ. ಅಂತಹ ಸಂದರ್ಭದಲ್ಲಿ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸುತ್ತಾರೆ.

ದಾಸ ಸಾಹಿತ್ಯದ ಸಾಧನೆಗಳಲ್ಲಿ ಮುಖ್ಯವಾದುದೆಂದರೆ ಭಾಷೆಯ ಮತ್ತು ಚಿಂತನೆಯ ದಿಕ್ಕನ್ನು ಸಮಾಜದ ಕಡೆಗೆ ಹೊರಳಿಸಿದುದು. ಗಹನವಾದ ಧಾರ್ಮಿಕ ಅಂಶಗಳನ್ನು ಜನರಿಗೆ ಸುಲಭವಾಗಿ ತಿಳಿಯುವ ಸರಳಗನ್ನಡದಲ್ಲಿ ಹೇಳಿದುದು ದಾಸರು ಮಾಡಿದ ವೈಚಾರಿಕ ಕ್ರಾಂತಿಯಾಗಿದೆ. ಎಲ್ಲಿ ಭಾಷೆ ಬದಲಾಗುತ್ತದೆಯೊ ಅಲ್ಲಿ ಹೊಸ ಚಿಂತನಾಕ್ರಮ ಶುರುವಾಗುತ್ತದೆ. ಹೊಸ ಸಂವೇದನೆಗಳನ್ನು ಸಮರ್ಥವಾಗಿ ಮೂಡಿಸುವ ಮುನ್ನ ಭಾಷೆ ತಾನೇ ಒಂದು ಬಗೆಯ ಸಂಸ್ಕರಣಕ್ಕೆ ಒಳಗಾಗುತ್ತದೆ. ಜನಸಾಮಾನ್ಯರ ನೋವು-ನಲಿವು, ಸಂತೋಷ-ಹತಾಶೆ ಇವುಗಳನ್ನು ಸಾಹಿತ್ಯ ರಚನೆಗೆ ವಸ್ತುವಾಗಿಟ್ಟುಕೊಂಡು ಐತಿಹಾಸಿಕ ದಾಖಲೆಗಳ ದಾಸರ ಕೀರ್ತನೆಗಳು ರೂಪುತಾಳಿವೆ. ಸಮಾಜವು ನಿರೀಕ್ಷಿಸುವ ದಾಸರ ಕೀರ್ತನೆಗಳು ರೂಪುತಾಳಿವೆ. ಹೊಸ ಸಮಾಜವು ನಿರೀಕ್ಷಿಸುವ ಸಂವೇದನೆಗಳು ಭಾಷೆಯ ಮೂಲಕ ಅಭಿವ್ಯಕ್ತವಾಗುತ್ತವೆ. ತಾವು ಹೇಳಬೇಕಾದುದುದನ್ನು ನಿಖರವಾಗಿ, ಸ್ಪಷ್ಟವಾಗಿ ವ್ಯಕ್ತಪಡಿಸುತ್ತಾರೆ ದಾಸರು. ಕನಕದಾಸರ ಕೀರ್ತನೆ ಹೀಗಿದೆ.

ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ
ನಿತ್ಯ ಅನ್ನದಾನವಿರಲು ಭಯವು ಯಾತಕೆ
ತಾನು ಉಣ್ಣದೆ ಪರರಿಗಿಕ್ಕದ ಧನವಿದ್ಯಾತಕೆ
ಮಾನಿನಿಯ ತೊರೆದ ಮೇಲೆ ಭೋಗವ್ಯಾತಕೆ
ಜ್ಞಾನವಿಲ್ಲದೆ ನೂರುಕಾಲ ಬದುಕಲ್ಯಾತಕೆ
ಮಾನಹೀನವಾಗಿ ಬಾಳ್ವ ಮನುಜನ್ಯಾತಕೆ
ಮಾತುಕೇಳದೆ ಮಲೆತು ನಡೆವ ಮಕ್ಕಳ್ಯಾತಕೆ
ಪ್ರೀತಿಯಿಲ್ಲದೆ ಎಡೆಯಲಿಕ್ಕಿದ ಅನ್ನವ್ಯಾತಕೆ
ನೀತಿಯರಿತು ನಡೆಯದಿರುವ ಭಂಟನ್ಯಾತಕೆ
ಸೋತ ಹೆಣ್ಣಿಗೆ ಹೆದರಿ ನಡೆವ ಪುರುಷನ್ಯಾತಕೆ
ಸನ್ನೆಯನರಿತು ನಡೆಯದಿರುವ ಸತಿಯಿದ್ಯಾತಕೆ
ಮನ್ನಣೆಯಿಂದ ನಡೆಯದಿರುವ ದೊರೆಯಿದ್ಯಾತಕೆ
ಚೆನ್ನ ಆದಿಕೇಶವನಲ್ಲದೆ ದೈವವ್ಯಾತಕೆ

ಕಡುನಿಷ್ಠೆಯ ಭಕ್ತಿಯನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕೆನ್ನುವುದು ದಾಸರ ನಿಲುವು. ಬದುಕು ಸಹ್ಯವಾಗಬೇಕಾದರೆ ಮನುಷ್ಯ ಕೆಲವೊಂದು ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ದಾನಶೀಲತೆ, ಜ್ಞಾನದ ಹಸಿವು, ಧೈರ್ಯವಂತಿಕೆ, ನಯನೀತಿಯ ಸೊಗಸು ಬದುಕಿನಲ್ಲಿ ಏರ್ಪಟ್ಟಾಗಲೇ ಅದು ನಿಜವಾದ

ಬದುಕಾಗುತ್ತದೆ ಎನ್ನುವುದು ಈ ಕೀರ್ತನೆಯ ಹಿಂದಿನ ಆಶಯವಾಗಿದೆ. 'ನೀತಿಯರಿತು ನಡೆಯದಿರುವ ಭಂಟನ್ಯಾತಕೆ' 'ಮನ್ನಣೆಯಿಂದ ನಡೆಸದಿರುವ ದೊರೆಯು ಇದ್ದುಯಾತಕೆ' ಇಂತಹ ಮಾತುಗಳು ವಿಜಯನಗರ ಕಾಲದ ಅರಸರ ಸ್ಥಿತಿಯನ್ನು ನಿರ್ವಚಿಸುತ್ತವೆ. ಭಾಷೆ ವ್ಯಾವಹಾರಿಕ ನೆಲೆಯಿಂದ ಸಿಡಿದು ಸಾಮಾಜಿಕ ಚಿಂತನೆಯ ನೆಲೆಯಲ್ಲಿ ಪ್ರವೇಶಿಸುತ್ತದೆ. ಸರಳತೆ, ಸ್ಪಷ್ಟತೆಗಳಿಗೆ ಒತ್ತು ಕೊಡುವ ನಿರೂಪಣ ವಿಧಾನವನ್ನು ಕವಿ ಬೆಂಬಲಿಸಿರುವುದು ಇಲ್ಲಿ ಸ್ಪಷ್ಟವಾಗಿದೆ. ತನ್ನ ಕಾಲದ ಸಾಮಾಜಿಕ ಮತ್ತು ಪರಿಸರದ ಸಮಸ್ಯೆಗಳಿಗೆ ಸ್ಪಂದಿಸದೆ ಬರಿಯ ಶಾಸ್ತ್ರೋಕ್ತ ಅಲಂಕಾರಗಳನ್ನು ವರ್ಣಿಸುವ ನಿರ್ಜನ ಭಾಷಾ ಪ್ರೌಢಿಮೆ ದಾಸರಿಗೆ ಹಿಡಿಸುವುದಿಲ್ಲ. ಶಬ್ದಸ್ಫೋಟದಿಂದ ಸಾಮಾಜಿಕ ದರ್ಶನವಾಗುತ್ತದೆಂಬ ತಾತ್ತ್ವಿಕ ವಿವೇಚನೆ ಕೀರ್ತನೆಗಳ ರಚನೆಗೆ ಒಂದು ಪ್ರಬಲವಾದ ಕಾರಣವೆನಿಸುತ್ತದೆ. ಬಳಸುವ ಶಬ್ದಗಳ ಹಿಂದೆ ಸೂಕ್ತವಾದ ಅರ್ಥವಂತಿಕೆ ತುಂಬಿರಬೇಕೆಂದು ದಾಸರು ನಂಬಿದ್ದಾರೆ. ಶಬ್ದಾರ್ಥಗಳ ಬಳಕೆಯಲ್ಲಿ ಪ್ರಾಮಾಣಿಕತೆಯ ಕಡೆಗೆ ಅವರು ಒತ್ತುಕೊಡುತ್ತಾರೆ. ಸಾಹಿತ್ಯ ಸಮಾಜದ ಪ್ರತಿಬಿಂಬ ಎನ್ನುವುದು ಕೀರ್ತನೆಗಳಲ್ಲಿ ಸೊಗಸಾಗಿ ವ್ಯಕ್ತವಾಗಿದೆ. ಸಮಾಜದ ವಸ್ತುಸ್ಥಿತಿಯನ್ನೇ ಸಹೃದಯರ ಮುಂದೆ ತೆರೆದಿಡುತ್ತಾರೆ.

ಹೆಣ್ಣು ಕೊಟ್ಟತ್ತೆ ಮಾವಂದಿರ ಮನೆಯಲ್ಲಿ
ಸೇರಿ ಇರುವರೆ ಎಲೆ ಮನುಜ
ಬಂದ ಮೊದಲು ಇತ್ತ ಬನ್ನಿಕುಳ್ಳಿರೆಂದು ಬಲು ಉಪಚರಿಸುವರು
ಅಂದಿನ ಮರುದಿನ ಬಂದ ಸ್ನೇಹಿತರನ್ನು ಕಂಡಂತೆ ಕಾಣುವರೊ
ಬಂದ ಮೂರರಲ್ಲಿ ಪರದೇಶಿಯ ಕಂಡಂತೆ ಸಡ್ಡೆ ಮಾಡದೆ ಇಹರೊ
ಮುದದಿಂದ ನಾಲ್ಕು ದಿವಸವಿದ್ದರೆ ಮಾನಭಂಗ ಮಾಡಿ ಮಾತಾಡುವರೋ

ಸ್ವಾಭಿಮಾನರಹಿತ ವ್ಯಕ್ತಿಯೊಬ್ಬ ಅತ್ತೆಮಾವಂದಿರ ಮನೆಯಲ್ಲಿ ನೆಲೆಸಿದಾಗ ಅಲ್ಲಿ ಅವನಿಗಾದ ದುಸ್ಥಿತಿಯನ್ನು ಈ ಕೀರ್ತನೆಯಲ್ಲಿ ಪುರಂದರ ದಾಸರು ಸೊಗಸಾಗಿ ಹೇಳಿದ್ದಾರೆ. ಕನಕದಾಸರು 'ವರಕವಿಗಳ ಮುಂದೆ' ಎಂಬ ಕೀರ್ತನೆಯಲ್ಲಿ ಇಂತಹದೆ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. 'ಬಡತನ ಬಂದಾಗ ನೆಂಟರ ಬಾಗಿಲ ಸೇರಬಾರದು' ಎಂದು ಸೂಚಿಸಿದ್ದಾರೆ. ಇಲ್ಲಿ ಭಾಷೆ ಅಪಾರ ಅನುಭವದ ಪರಿಣಾಮವಾಗಿ ರೂಪುಗೊಂಡಿದೆ. ಅನುಭವ ಜನ್ಯದ ಇಂತಹ ಕೀರ್ತನೆಗಳಲ್ಲಿ ಭಾಷೆ ಅರ್ಥಪೂರ್ಣವಾಗಿ ಬಳಕೆಯಾಗಿವೆ. ಕೀರ್ತನೆಗಳ ರಚನೆ ಕನ್ನಡ ಭಾಷೆಗೆ ವಿಶಿಷ್ಟವಾಗಿದೆಯಲ್ಲದೆ, ಹೊಸ ಹೊಸ ಸಾಮಾಜಿಕ ಭಾವನೆಗಳಿಗೆ ಸ್ಪಂದಿಸಲು ಯೋಗ್ಯವಾಗಿದೆ. ಭಾಷೆ ಸಮುದಾಯದೊಂದಿಗೆ ಮುಖಾಮುಖಿಯಾಗಿ ತಾತ್ವಿಕ ಹೊಳಹನ್ನು ಚಿತ್ರಿಸುತ್ತದೆ. ದಾಸರು ಸಮುದಾಯವನ್ನು ಸೂಕ್ಷ್ಮ ನಿರೀಕ್ಷಣ ದೃಷ್ಟಿಯಿಂದ ನೋಡಿ ಲೋಕಜ್ಞಾನ, ಗೇಯತೆ, ಆಡುಮಾತಿನ ಲಯ ಇವುಗಳಿಂದ ಸತ್ಯವನ್ನು ಕಂಡುಕೊಳ್ಳುವ, ಕಂಡುದನ್ನು ಪ್ರಾಮಾಣಿಕವಾಗಿ ನಿರೀಕ್ಷಿಸುವ ಖಚಿತ ಉದ್ದೇಶ ಅವರಿಗಿದೆ ಎಂಬ ಅಂಶವೂ ಇದರಿಂದ ತಿಳಿದುಬರುತ್ತದೆ.

ದಾಸರ ಸಾಮಾಜಿಕ ಪ್ರಜ್ಞೆ ಎರಡು ರೀತಿಯಲ್ಲಿ ಅಭಿವ್ಯಕ್ತವಾಗುತ್ತದೆ. ಮೊದಲನೆಯ ಹಾಡು, ಎರಡನೆಯದು ಪ್ರದರ್ಶನ, ಕುಣಿಯುತ್ತ ಹಾಡಿನ ಭಾವವನ್ನು ಅಥವಾ ಕೀರ್ತನೆಯ ತಿರುಳನ್ನು ಪುನರ್ ಸೃಷ್ಟಿ ಮಾಡುತ್ತಾನೆ. ಆ ಸಂದರ್ಭದಲ್ಲಿ ಕೀರ್ತನಕಾರನ ಹಾವಭಾವವೇ ಸಹೃದಯ ಸಮುದಾಯವನ್ನು ತಲುಪುವುದು.

ದಾಸರು ತಮ್ಮ ಅನಿಸಿಕೆಗಳನ್ನು, ದರ್ಶನವನ್ನು ಕೀರ್ತನೆಗಳ ಮೂಲಕ ಅಭಿವ್ಯಕ್ತಿಸಿದರು. ಈ ಕಾರಣಕ್ಕಾಗಿಯೇ ಕೀರ್ತನೆಗಳ ಭಾಷೆಯಲ್ಲಿ ದೇವರು - ಭಕ್ತರ ನಡುವೆ ನಡೆಯುವ ಸಂಭಾಷಣೆಯಲ್ಲಿ ಆತ್ಮೀಯವೆನ್ನಬಹುದಾದ ತೀವ್ರತೆಯಿದೆ; ಕಳಕಳಿಯಿದೆ. ಇಲ್ಲಿ ಒಂದು ಅಂಶವನ್ನು ಮತ್ತೆ ಸ್ಪಷ್ಟಪಡಿಸಬೇಕಾಗಿದೆ. ಭಾಷೆಯಲ್ಲಿ ಬಳಸುವ ಶಬ್ದಕ್ಕೂ ಅದು ಸೂಚಿಸುವ ಅರ್ಥಕ್ಕೂ ಯಾವ ಸಂದರ್ಭವೂ ಇಲ್ಲ ಎಂಬುದನ್ನು ಭಾಷಾ ವಿಜ್ಞಾನಿಗಳು ಬಲ್ಲರು. ದಾಸರು ಶಬ್ದ ಮತ್ತು ಅರ್ಥಗಳ ಸ್ವರೂಪವನ್ನು ತಮ್ಮದೇ ಆದ ಶೋಧನೆಯ ಪಥದಿಂದ ಕಂಡುಕೊಂಡಿದ್ದಾರೆ. ಕೀರ್ತನೆಗಳ ರಚನೆಯ ಹಿಂದೆ ಇಂತಹದೊಂದು ಚಿಂತನೆಯಿದೆ. ಬಹುಶಃ ಸಮಾಜದಲ್ಲಿ ಶಬ್ದಾರ್ಥಗಳ ಹಿನ್ನೆಲೆಯಲ್ಲಿ ಈ ಬಗೆಯ ಆಲೋಚನೆ ಸಮೂಹ ಪ್ರಜ್ಞೆಗೆ ದಾಸರು ಸರಿಯಾಗಿ ಸ್ಪಂದಿಸಿದ್ದಾರೆ.

ಕೀರ್ತನೆಗಳ ಸ್ವರೂಪವು ವಿಶೇಷವಾದದ್ದಾಗಿದೆ. ದಾಸರು ಬಾಯಿ ಮಾತನ್ನೇ ಅವಲಂಬಿಸಿ ತಮ್ಮ ಅನುಭವಕ್ಕೆ ಅಭಿವ್ಯಕ್ತಿಯನ್ನು ಕೊಟ್ಟರು. ನಮ್ಮ ಮಾತುಗಾರಿಕೆ ಮೂರ್ತರೂಪ ತಾಳಬೇಕಾದರೆ ಬರವಣಿಗೆ ಬೇಕಾಗುತ್ತದೆ. ದಾಸರು ಬಾಯಿಮಾತಿನಲ್ಲಿ ಹೇಳಿದ್ದನ್ನು ಇಂದು ವಚನಗಳಲ್ಲಿ ಬರೆದಿಟ್ಟುಕೊಳ್ಳುವ ವ್ಯವಸ್ಥೆ ಆಗ ಇತ್ತೆಂದು ಕಾಣುತ್ತದೆ. ಆ ವ್ಯವಸ್ಥೆ ಇಲ್ಲದಿದ್ದರೆ ಕೀರ್ತನೆಗಳು ಈಗ ಲಭ್ಯವಾಗುತ್ತಿರಲಿಲ್ಲ. ಇದು ಅಷ್ಟು ಮಹತ್ವದ ಸಂಗತಿಯಲ್ಲ. ದಾಸರ ಕೀರ್ತನೆಗಳು ಮುಖ್ಯವಾಗಿ ಬಾಯಿ ಮಾತಿನ ರೂಪಗಳಾಗಿವೆ. ನಮ್ಮ ನಾಡಿನಲ್ಲಿ ಬರವಣಿಗೆಯ ಸಂಪ್ರದಾಯಕ್ಕಿಂತ ಬಾಯಿ ಮಾತಿನ ಸಂಪ್ರದಾಯ ಹೆಚ್ಚು ಗಟ್ಟಿಮುಟ್ಟಾಗಿರುವುದರಿಂದ ಕೀರ್ತನೆಗಳು ಇಂದಿಗೂ ಉಳಿದುಕೊಂಡು ಬೆಳೆದುಕಂಡು ಬಂದಿವೆ ಎಂಬುದು ಗಮನಿಸಬೇಕಾದ ಅಂಶ.

ದಾಸರ ಕೀರ್ತನೆಗಳ ಇನ್ನೊಂದು ಮುಖ ಅವರ ಬಾಷೆಯ ಬಳಕೆಯಲ್ಲಿದೆ. ಪಾದದ ನಿಯತತೆ, ಪ್ರಾಸದ ಕಟ್ಟು, ಸಂಸ್ಕೃತ ಸಮಾಸಗಳ ಹೆಣಿಗೆ; ಪೆಡಸು, ಶೈಲಿ ಈ ಎಲ್ಲ ಬಂಧಗಳಿಂದ ಪಾರಾಗಲು ಅವರು ದೇಸಿ ಮಾದರಿಯ ಕೀರ್ತನ ಉಗಾಭೋಗ, ಸುಳಾದಿ ಮುಂತಾದ ರೂಪಕಗಳನ್ನು ಬಳಸಿಕೊಂಡರು. ಪದ್ಯದ ಅಂತಃ ಸ್ವರೂಪವನ್ನು ಕಾಯ್ದುಕೊಂಡು ಗದ್ಯದ ಲಯವನ್ನು ಮರೆಯುವ ಕೀರ್ತನೆಗಳು ಅವರ ಅಭಿವ್ಯಕ್ತಿಗೆ ಸೂಕ್ತ ಮಾಧ್ಯಮವಾಯಿತು. ಸವೆದ ದಾರಿಯಾಗಿದ್ದ ಸಿದ್ಧ ಶೈಲಿಯನ್ನು ಬಿಟ್ಟು ಶಾಸ್ತ್ರ

ಸಂಕಲೆಯಿಂದ ಕಳಚಿಕೊಂಡ ಮುಕ್ತಗೇಯ ರಚನೆಗಳನ್ನು ಸೃಷ್ಟಿಸಿಕೊಂಡರು. ಆಡುಮಾತಿನ ಧಾಟಿಯನ್ನು ವಿಶೇಷವಾಗಿ ಹಿಡಿದಿಟ್ಟರು.

ಆಕೋ	ತರಿದ್ಯೊ	ಎಂಬೋ
ಬ್ಯಾಡ	ಮೀರಿದ್ಯ	ಹೇಳ್ವ
ಮ್ಯಾಲೆ	ಸೇರಿದ್ಯ	ಮಾಡ್ಯಾರೊ
ನೀನಾಕೋ	ಉಂಬೋ	ತಕ್ಕೊಂಡು
ನೀನಾದ್ಯೋ	ತಿಂಬೋ	ಎಂದ್ಹೇಳಿ
ಗಳಿಸಿಕೊಳ್ಳಿರೊ	ಹೊಡದಾಡದಿರೊ	ಹ್ಯಾಂಗೆ

ಮುಂತಾದ ವಿಶಿಷ್ಟ ರಚನೆಯ ನುಡಿಗಳನ್ನು ಬಳಸಿದ್ದಾರೆ. ಇಲ್ಲಿಯ ಒಂದೊಂದು ಮಾತು ಕ್ರಿಯಾವಾಚಿಗಳಾಗಿಯೇ ಉಳಿಯದೆ, ಕ್ರಿಯೆಗಳಾಗಿ ಪರಿಣಮಿಸುತ್ತವೆ. ಕೀರ್ತನೆಗಳ ಪಂಕ್ತಿಗಳು ಅರ್ಥ. ಲಯಕ್ಕೆ ಅನುಗುಣವಾಗಿ ಪುನರಾವರ್ತನೆಯಾಗುವ ರೀತಿ ಸಂವಾದ ಕೌಶಲ್ಯದ ದೃಷ್ಟಿಯಿಂದ ಔಚಿತ್ಯಪೂರ್ಣವಾಗಿವೆ. ಅಯ್ಯ, ಅಣ್ಣ, ಅಪ್ಪ, ಅಣ್ಣಯ್ಯ, ಅಪ್ಪಯ್ಯ, ಮಾವಯ್ಯ, ಕಂದಾ ಮುಂತಾದ ಸಂಬೋಧನೆಗಳು ದಾಸ ಸಾಹಿತ್ಯದ ಭಾಷೆಯ ಮೆರುಗಿನ ಅಂಶಗಳಾಗಿವೆ. ಸಂದರ್ಭಕ್ಕೆ ತಕ್ಕಂತೆ ಭಾಷೆಯನ್ನು ಬಳಸುವುದು ಗಮನಾರ್ಹ ಅಂಶ. ಪುರಂದರ ದಾಸರ ಬುಡುಬುಡಿಕೆಯ ಪದದಲ್ಲಿ ಬುಡುಬುಡಿಕೆಯ ಭಾಷೆ, ಪ್ರಸನ್ನ ವೆಂಕಟದಾಸರ ಬಾಲಕೃಷ್ಣನ ವರ್ಣನೆಯಲ್ಲಿ ಬಾಲಭಾಷೆ ಬಳಕೆಯಾಗಿದೆ. ದಾಸರ ಚಿಂತನೆಯಲ್ಲಿ ತಾರ್ಕಿಕತೆಯಿರುವುದರಿಂದ ಬಳ್ಳಿಯಿಂದ ಹೂ ಅರಳಿದಂತೆ ಒಂದು ಮತ್ತೊಂದಕ್ಕೆ ಪೂರಕ ಪೋಷಕವಾಗಿ ವಿಚಾರಗಳು ಹೊರಹೊಮ್ಮುತ್ತವೆ. ಪ್ರಥಮ ಘಟ್ಟದ ಹರಿದಾಸರಾದ ಶ್ರೀಪಾದರಾಜ, ವ್ಯಾಸರಾಯ, ವಾದಿರಾಜ ಹಾಗೂ ದ್ವಿತೀಯ ಘಟ್ಟದ ದಾಸರಾದ ವಿಜಯದಾಸ, ಜಗನ್ನಾಥದಾಸ, ಗೋಪಾಲದಾಸ ಇವರ ಕೀರ್ತನೆಗಳ ಭಾಷೆ ಬಳಕೆಯಲ್ಲಿ ಸ್ವಲ್ಪ ಪೆಡಸು ಶೈಲಿ ಮತ್ತು ಸಂಸ್ಕೃತ ಮಿಶ್ರಣವಿರುವಂತೆ ಮಿಕ್ಕ ದಾಸರ ಕೀರ್ತನೆಗಳ ಭಾಷಾ ಬಳಕೆಯಲ್ಲಿ ಆಡುಮಾತಿನ ಛಾಯೆ ಎದ್ದುಕಾಣುತ್ತದೆ. ಸ್ಥೂಲವಾಗಿ ಹೇಳುವುದಾದರೆ ದಾಸರ ರಚನೆಯಲ್ಲಿ ಪುಟ್ಟಪುಟ್ಟ ವಾಕ್ಯಗಳು; ಅಪ್ಪಟ ಕನ್ನಡ ಮಾತುಗಳೇ ಅಧಿಕ. ಕ್ರಿಯೆಯನ್ನು ನಿರ್ವಿಘ್ನವಾಗಿ ಮುಂದೆ ಮುಂದೆ ಹರಿಸುವ ಚಾಲನ ಶಕ್ತಿಯಾಗಿ ಇಲ್ಲಿಯ ಭಾಷೆ ಮೂಡಿದೆ.

ಕನ್ನಡ ಅನುಭಾವ ಸಾಹಿತ್ಯದಲ್ಲಿ ವಚನ ಸಾಹಿತ್ಯದ ನಂತರದ ಕಾಲದಲ್ಲಿ ದಾಸ ಸಾಹಿತ್ಯ ಕಣ್ಣು ಕಟ್ಟಿ ನಿಲ್ಲುತ್ತದೆ. ಶಿವಶರಣರಂತೆ ಹರಿದಾಸರು ಭಕ್ತಿ ಪ್ರಧಾನ ಸಾಹಿತ್ಯವನ್ನು ವಿಪುಲವಾಗಿ ನಿರ್ಮಿಸಿದರು. ತಿಳಿಯಾದ ನಿರೂಪಣೆ, ಹೃದಯ ವೈಶಾಲ್ಯ, ಆಡುಮಾತಿನ ಲಯ ಇವು ದಾಸ ಸಾಹಿತ್ಯದ ಜನಪ್ರಿಯತೆಗೆ ಕಾರಣಗಳು. ಸುಮಾರು ಐದು ಶತಮಾನಗಳ ವ್ಯಾಪ್ತಿಯ ಈ ಭಕ್ತಿ ಸಾಹಿತ್ಯವನ್ನು ಹಲವಾರು ಹರಿದಾಸರು

ಪೋಷಿಸಿ, ಬೆಳೆಸಿದರು. ಹದಿನೈದನೆಯ ಶತಮಾನದಲ್ಲಿ ಅಂಕುರಿಸಿದ ದಾಸ ಪರಂಪರೆ ಮಧ್ಯ ಮಧ್ಯದಲ್ಲಿ ಮುಗ್ಗರಿಸಿದರೂ ಹದಿನೆಂಟನೆಯ ಶತಮಾನದವರೆಗೆ ಜೀವಂತ ಶಕ್ತಿಯಾಗಿ ಕಾರ್ಯನಿರ್ವಹಿಸಿ ಕನ್ನಡ ಸಾಹಿತ್ಯಕ್ಕೆ ಬೆಲೆಯುಳ್ಳ ಕೊಡುಗೆ ನೀಡಿದೆ.

IV

ಕವಿ ಸರ್ವಜ್ಞ ಅದ್ಭುತ ಚುಟುಕು ಕವಿ. ಅವನ ವಚನಗಳಲ್ಲಿ ಚುಟುಕು ಭಾಷೆ ಅರ್ಥಪೂರ್ಣವಾಗಿ ಬಳಕೆಯಾಗಿದೆ. ತನ್ನ ಅಭಿಜಾತ ಪ್ರತಿಭೆಗೆ ಜ್ವಲಂತ ನಿದರ್ಶನಗಳಾದ ಅನೇಕ ಅದ್ದೋಜ್ವಲ ನವೀನ ನುಡಿಗಟ್ಟುಗಳನ್ನು ಸರ್ವಜ್ಞ ಸೃಷ್ಟಿಸಿದ್ದಾನೆ.

ಹೊಟ್ಟದೇವ (ಹೊಟ್ಟೆಗಾಗಿಯೇ ಬದುಕುವವ, ಕೂಳಿಗೆ ಆಳಾದವ ೨೮)
ಕವುದಿಯನು ಹೊದ್ದಾತ (ಭಿಕ್ಷುಕ ಇಲ್ಲವೆ ಸಬರದ ಎತ್ತುವ, ೯೨೭/೮೩೫)
ನೋಟ ಬೇಟ (ಕಣ್ಣಿನ ಅನುರಾಗ, ಕೇವಲ ನೋಡಿ ಆನಂದಪಡುವಿಕೆ; ವ.೧೧೫೪/೧೦೫೦)
ಬಿದ್ದ ನಡು (ಆಲಸ್ಯ;ವ, ೧೩೭೦/೧೨೪೦)
ಊರ ನರಿ (ಕುತಂತ್ರಿ, ಸ್ವಾರ್ಥಿ; ವ, ೧೭೧೭/೧೫೬೪)
ಅರನಾರಿ ಪುರುಷ (ಪಂಢ, ಪೌರುಷಹೀನ; ವ, ೧೭೧೭/೧೫೬೪)
ಮೋಚಿದ ಹೆಣ್ಣು (ವಿಧ್ವೆ : ವ.೧೭೧೭/೧೫೮೨)
ಮುರವಾಳ (ಮುರಿದ ಬಾಳುವೆಯುವ, ವಿಧುರ; ವ.೧೮೯೯/೧೭೩೮)
ಅಟ್ಟಿಕ್ಕುವಾಕೆ (ಪತ್ನಿ; ವ. ೧೫೬೧/೧೪೨೨)
ಇಂಬರಿವಳು (ಪತ್ನಿ; ವ. ೮೮೯೯/೭೬೩)
ಸೋರುಗಣ್ಣಾಕೆ (ಸ್ವಲ್ಪ ಮಾತಿಗೆ ಅಳುವಾಕೆ, ಡೋಕಾರಗಿತ್ತಿ; ವ. ೧೭೫೩/೧೮೫೭)
ಬಣ್ಣವನು ಬರೆವ ಸತಿ (ನಟನೆ ಮಾಡುವಾಕೆ, ಡೋಕಾರಗಿತ್ತಿ; ವ. ೧೭೪೦/೧೫೮೫)
ಸಜ್ಜನೆ(ಪಾತಿವ್ರತ್ಯ;ವ, ೧೨೭೪/೧೧೬೪)

ಮೇಲೆ ಉದಾಹೃತವಾದ ಒಂದೊಂದು ಪದಪುಂಜದಲ್ಲಿ ಒಂದೊಂದು ವಿಧವಾದ ಭಾವದ ಒಗರು, ಅಥವಾ ಬಣ್ಣದ ಹೊಗರು, ತಾನೆ ತಾನಾಗಿ ವಿಜೃಂಭಿಸಿ ಅಭಿವ್ಯಕ್ತಿಗೆ ಅಪರೂಪದ ಶಕ್ತಿ-ಕಾಂತಿಯನ್ನು ಒದಗಿಸಿದೆ.

ಇನ್ನು ಕೆಲ ಪದಪುಂಜಗಳಂತೂ ಕಣ್ಣಿಗೆ ಕಟ್ಟಿ, ಮನದಲ್ಲಿ ನಟ್ಟು ನಿಲ್ಲಬಹುದಾದ ಅಪೂರ್ವ ಮುಖಚಿತ್ರಗಳೇ ಆಗಿವೆ. 'ಗುದ್ದು ಗಣ್ಣಾದವ' (ವ. ೧೮೦೪/೧೬೪೬) ಹಣ್ಣು ಹಣ್ಣು ಮುದುಕನ ಮುಖಮುದ್ರೆಯನ್ನು ಯಶಸ್ವಿಯಾಗಿ ಸೆರೆಹಿಡಿಯುತ್ತದೆ. ಡೋರು ಮೈಯಾದ ಮುದುಕಿ' (ವ. ೧೭೯೭/೧೬೩೯), 'ಹತ್ತು ಹೆತ್ತಾಕೆ' (ವ. ೧೭೯೮/೧೬೮೦), 'ಬಿದ್ದ ಮೊಲೆಯವಳು' (ವ.೧೮೯೧/೧೭೦೦; ೧೭೩೮/

೧೫೮೩), - ಈ ಒಂದೊಂದು ಶಬ್ದಚಿತ್ರ ಮುಪ್ಪಿನ ಮುದ್ರೆ ಎನ್ನಿಸಬಹುದಾದ ಒಂದೊಂದು ಅಂಶದ ಮೇಲೆ ಪ್ರಖರ ಪ್ರಕಾಶ ಚೆಲ್ಲಿ, ಕವಿಯ ಚಿತ್ರಶಕ್ತಿಯನ್ನು ಎತ್ತಿ ತೋರುತ್ತದೆ. ಇದೇ ಬಗೆಯಲ್ಲಿ ವೇಶ್ಯೆಯನ್ನು ನಿರ್ದೇಶಿಸುವ ಕೆಲವು ಪದಗಳು ಕೂಡ ಗಮನಾರ್ಹವಾಗಿದೆ ಪರಂಪರೆಯ 'ಬೆಲೆವೆಣ್ಣು' ಪದವಲ್ಲದೆ, 'ಮಾರಿಕೊಂಬವಳು' (ವ.೧೯೩೨/೧೭೬೯) 'ಒತ್ತೆ' (=ಸೂಳೆಯರಿಗೆ ಮುಂಗಡ ಕೊಡುವ ಹಣ)ಗೊಂಬಳು' (ವ.೧೧೫೪/೧೦೫೫), 'ಅಪ್ಪಿಸಪ್ಪಾದವಳು' (ವ. ೧೯೩೫/೧೭೭೨), 'ಹಲವು ಸಂಗದ ತಾಯಿ' (ವ.೨೭೬/೨೨೯)- ಎಂದು ಪ್ರಯೋಗಿತವಾದ ಪದಗಳೂ ಅರ್ಥಪೂರ್ಣವಾಗಿವೆ.

ಇವುಗಳಲ್ಲಿ 'ಮಾರಿಕೊಂಬವಳು' ಮತ್ತು ಒತ್ತೆಗೊಂಬಳು' ಎಂಬವು ವೇಶ್ಯೆಯ ಬದುಕಿನ ಬಗೆಯನ್ನು ಬೆರಳು ಮಾಡಿ ತೋರಿಸಿದರೆ, 'ಅಪ್ಪಿಸಪ್ಪಾದವಳು ಮತ್ತು 'ಹಲವು ಸಂಗದ ತಾಯಿ' ಎಂಬವು ಆಕೆಯ ಬದುಕಿನ ದುರಂತದ ಮೇಲೆ ಬೆಳಕು ಚೆಲ್ಲುತ್ತವೆ. 'ಹಲವು ಸಂಗದ ತಾಯಿ' ಎಂಬ ನುಡಿಚಿತ್ರದಲ್ಲಿಯ 'ತಾಯಿ' ಎಂಬ ಮಾತು, ಕವಿ ಹೃದಯದ ಆರ್ದ್ರತೆ ಅಂತಃಕರಣಗಳನ್ನು ಧ್ವನಿಸಿ, ಸಹೃದಯರ ಹೃನ್ಮನಗಳನ್ನು ತೇವುಗೊಳಿಸಬಲ್ಲುದಾಗಿದೆ.

ಇದೇ ಸಂದರ್ಭದಲ್ಲಿ ಸರ್ವಜ್ಞ ಸಾಹಿತ್ಯದ ವಿಶೇಷವೆನ್ನಬಹುದಾದ ಚಿತ್ರಮಾಲಿಕೆಯೊಂದರ ಬಗ್ಗೆಯೂ ಒಂದೆರಡು ಮಾತು ಹೇಳಬೇಕೆನ್ನಿಸುತ್ತದೆ. ನಮ್ಮ ಹಿರಿಕಿರಿಯ ಕವಿಗಳನೇಕರು ಹೆಣ್ಣಿನ ಅಂಗಾಗಗಳನ್ನು ಒಂದನ್ನು ಬಿಡದಂತೆ ಬಣ್ಣಿಸುವ ಚಪಲ ಧಾರಾಳತನವನ್ನು ಸಾಕಷ್ಟು ತೋರಿಸಿದ್ದುಂಟು, ಆದರೆ ಹೆಣ್ಣಿನ ಗುಪ್ತಾಂಗದ ವರ್ಣನೆಗೆ ಕೈಹಾಕಿದರು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ.

ಇದಕ್ಕೆ ಅಪವಾದವೆಂಬಂತೆ, ವೈರಾಗ್ಯದ ತುತ್ತತುದಿಗೇರಿದ ಅಕ್ಕಮಹಾದೇವಿ ಮಾತ್ರ., ಆ ಕುರಿತು ತಾತ್ಸಾರ ಭಾವವನ್ನು ಕೆರಳಿಸಿ ವಿರಕ್ತಿಯನ್ನು ಕದುರಿಸಬಲ್ಲ ಒಂದು ಸಶಕ್ತ ಚಿತ್ರ ಕೊರೆದದ್ದು ಗಮನಾರ್ಹವಾಗಿದೆ. ಸರ್ವಜ್ಞನಲ್ಲಿ ಇಂತಹ ಹಲವು ಚಿತ್ರಗಳಿವೆ, ಸಾಹಿತ್ಯಿಕ ಪರಂಪರೆಯಿಂದ ಸಿಡಿದು ನಿಲ್ಲುವ, ಜಾನಪದ ಜೀವನಾಡಿಯನ್ನು ಮಿಡಿಯುವ ಸರ್ವಜ್ಞನ ವ್ಯಕ್ತಿವಿಶೇಷವನ್ನು ಅವು ಕನ್ನಡಿಸುವಂತಿವೆ.

'ಸಂದಿಯ ಗಾಯ' (ವ.೧೬೬೬-೧೫೨೨), 'ತಗ್ಗಿನ ಕುಣಿ' (ವ.೧೬೬೦/೧೫೧೬)
'ಹೆಣ್ಣಿನ ಕುಳಿ' (ವ. ೧೮೦೭/೧೬೪೯), 'ಕಚ್ಚೆಯಲಿ ಉಚ್ಚೆ ಬರು...
ಠಾವು' (ವ.೧೮೦೦/೧೬೪೨)
'ಗಂಜಳದ ಬಾವಿ' (ವ.೧೬೭೦/೧೫೨೪), 'ಮಹಾಕೆರೆ' (ವ.೧೬೭೨/೧೫೨೬)
'ಹೊಲೆಗೇರಿ' (ವ.೯೬೦/೮೬೭), 'ಹೊಲೆಬಿಲ' (ವ.೯೬೩/೮೬೭)

ಇವು ಕಣ್ಮನದಲ್ಲಿ ನೆಟ್ಟು ನಿಲ್ಲುವ ನುಡಿಚಿತ್ರಗಳಾಗಿರುವುದರೊಂದಿಗೆ, ಕಾಮಭಾವನೆಯನ್ನು ಕೆರಳಿಸು ವಂತಹ ಕಿತಾಪತಿಯನ್ನು ಮಾಡದ ವಾಸ್ತವದ ವರ್ಣದಲ್ಲಿ ಒಡಮೂಡಿದವುಗಳಾಗಿವೆ. ವಿರಕ್ತಿಯನ್ನು ಕೆರಳಿಸುವ ಒಂದು ಒಳದನಿಯೂ ಅವುಗಳಲ್ಲಿ ಅಂತರ ಗಂಗೆಯಾಗಿ ಪ್ರವಹಿಸಿದಂತಿದೆ.

ಈವರೆಗೆ ಪರಿಶೀಲನೆಗೆ ಒಳಗಾದ ಒಂದೊಂದು ಪದಪುಂಜ ಅಥವಾ ನುಡಿಗಟ್ಟು, ಒಂದೆರಡು ಗೆರೆಗಳಲ್ಲಿಯೇ ಅಂಕಿತವಾದ 'ಪುಟಾಣಿ ಚಿತ್ರ'ವಾಗಿದ್ದರೆ, ಇವುಗಳಿಗಿಂತ ಇನ್ನೂ ಒಂದಿಷ್ಟು ವಿವರವಾಗಿ, ಒಂದೊಂದು ಪಾದದಲ್ಲಿಯೊ ಪದ್ಯದಲ್ಲಿಯೊ ಬಿಚ್ಚಿಕೊಂಡಿರುವ ಹೆಚ್ಚು ರೋಚಕವಾದ 'ಕಡಲೆ ಚಿತ್ರ'ಗಳೂ ಇವೆ.

ಆಳುತೇಳುತ, ಬೆರಳು | ಚೌಳಿ, ಮಿಡುಕುವು ಬಾಯಿ |
ಮೇಳದೊಳು ತೊಡಕ ಬಿಡದವನ ಜಪವದುವೆ |
ಹಾಳುಮನೆಯಂತೆ ಸರ್ವಜ್ಞ || (ವ. ೧೭೩/೧೩೭)
ಕಣ್ಣು ಸಣ್ಣದು ಆಗಿ | ಹಣ್ಣದಿಹುದೊಂದಿಲ್ಲ |
ತಣ್ಣಗಿಹ ಮನವನುರಿಸುವದು...(ವ.೧೨೮೧/೧೧೭೦)
ಉರಿ ಬಂದು ಬೇಲಿಯನು ಹರಿದು ಹೊಕ್ಕುವ ಕಂಡೆ (೨೦೨೮/೧೮೬೦)

ಮೊದಲ ಪದ್ಯದಲ್ಲಿ, ನೀರಿನಲ್ಲಿ ಮುಳುಗಿ ಏಳುವ, ಜಪದ ಅಂಗವಾಗಿ ಬೆರಳು ಅಲ್ಲಾಡಿಸುವ, ಮಂತ್ರ ಪಠಿಸುತ್ತ ಬಾಯಿ ಮಿಡುಕುವ, ಬಹಿರಾಚಾರದ ವ್ಯರ್ಥತೆಯನ್ನು ವ್ಯಂಜಿಸುವ ಕ್ರಿಯಾರೂಪದ ಚಿತ್ರಮಾಲಿಕೆ, ಯಾವುದೇ ವಿಧದ ಬಣ್ಣ - ಬೆಡಗುಗಳಿಲ್ಲದ ಸ್ವಭಾವೋಕ್ತಿಯ ಸಹಜ ಸೌಂದರ್ಯಕ್ಕೆ ನೆಲೆಯಾಗಿದೆ.

ಎರಡನೆಯ ಉದಾಹರಣೆಯಲ್ಲಿ ಕಣ್ಣು ಹೊಡೆದು ಕೈವಶಪಡಿಸಿಕೊಳ್ಳಬಯಸಿದ ವ್ಯಕ್ತಿ, ಸಂಬಂಧಿಸಿದ ವ್ಯಕ್ತಿಯ ಮನಸ್ಸಿನ ನೆಮ್ಮದಿಯನ್ನು ಕದಡಿ, ಕಾಮಭಾವದ ಕಿಡಿಯನ್ನು ಹೊತ್ತಿಸುವ ಕ್ರಿಯೆಯನ್ನು ಸರಳ ಮಾತುಗಳಲ್ಲಿ ಸಜೀವ ಸೆರೆಹಿಡಿಯಲಾಗಿದೆ. ಕೊನೆಯ ಕಾವ್ಯಪಂಕ್ತಿಯಲ್ಲಿ ಮಾಡಲಾಗಿರುವ ಬೆಳಗಿನ ಎಳಬಿಸಿಲಿನ ಬರವಿನ ಬಣ್ಣನೆಯೊ ಶುಭ್ರವರ್ಣದ ಸ್ಫಟಿಕ ಶಿಲಾಚಿತ್ರವಾಗಿದೆ. ಇವೆಲ್ಲವುಗಳನ್ನು ಮಿಕ್ಕು ಮೀರಿಸಬಲ್ಲ, ಕವಿಯ ಚಿತ್ರಕ ಶಕ್ತಿಗೆ ಕೈಮರವೆನ್ನಬಹುದಾದ ಒಂದೆರಡು ಸಶಕ್ತ ಚಿತ್ರಗಳೂ ಇವೆ;

ಬಿದ್ದ ಮೊಲೆಯವಳು ತಾ | ನೆದ್ದೋಡಿ ಬರುವಾಗ |
ಎದ್ದೆದ್ದು ಬದಿಯ ಬಡಿಯುತ್ತ ಹಾರುವ |
ಹದ್ದಿನಂತಿಹಳು ಸರ್ವಜ್ಞ || (ವ. ೧೮೬೧/೧೭೦೦)
ಉದ್ದ ಮೊಲೆ ಜಾರೆ ತಾ | ಮುದ್ದು ಮುದುಕನ ಕೂಡೆ |
ಬಿದ್ದ ಮೊಲೆ ಎದ್ದು ಬಡಿದಾಗ ಹಾಳೂರ |
ಹದ್ದಾಡಿದಂತೆ ಸರ್ವಜ್ಞ || (ವ.೧೮೬೨/೧೭೦೧)

ಮುಪ್ಪಿನ ಜಾರೆಯೊಬ್ಬಳ ಚಿತ್ರ ಇಲ್ಲಿ ಪಡಿಮೂಡಿದೆ. ಮೊದಲ ಪದ್ಯದಲ್ಲಿ ಆಕೆ, ಜಾರತನದ ಸುಖ ಸೂರೆ ಮಾಡಲು ಹೊರಟ 'ಅತ್ಯವಸರದ ಓಟ' ಗೆರೆಯಲ್ಪಟ್ಟಿದ್ದರೆ, ಮುಂದಿನ ಪದ್ಯದಲ್ಲಿ ಆಕೆಯ

'ಸರಸ ಕ್ರೀಡೆಯ ನೋಟ' ಕೊರೆಯಲ್ಪಟ್ಟಿದೆ. ಈ ಎರಡೂ ಚಿತ್ರಗಳಲ್ಲಿಯ ಭಾವಾಭಿನಯ ಅರ್ಥಪ್ರತೀತಿಗೆ ಪೂರಕವಾಗಿದೆ.

ಹಾರುವ ಹದ್ದಿನ ಪ್ರತಿಮೆ ಸಕ್ರಿಯ ಜೀವಂತಿಕೆಗೆ ನೆಲೆಯಾಗಿದ್ದು, ಕೊಳೆತ ಮಾಂಸಕ್ಕಾಗಿ ಹಪಿಹಪಿಸು ವುದನ್ನು, ಹಾತೊರೆಯುವುದನ್ನು ವ್ಯಂಜಿಸುತ್ತ ಮುದುಕಿ ಜಾರೆಯ ಮನೋಭಾವವನ್ನು ಸಮರ್ಥವಾಗಿ ಕನ್ನಡಿ ಬಲ್ಲುದಾಗಿದೆ. ಅದರಲ್ಲೂ ಎರಡನೆಯ ಚಿತ್ರದಲ್ಲಿಯ 'ಹಾಳೂರಿನ ಹದ್ದು' ಕಾಮಾಂಧ ಜೀವಯ ಉಗ್ರತೆ, ವ್ಯಗ್ರತೆಗಳನ್ನೂ ಪ್ರತಿಫಲಿಸಬಲ್ಲುದಾಗಿದೆ.

ಸರ್ವಜ್ಞನ ಬಳಕೆಗನ್ನಡದ ಬನಿಯೂ ಗಮನಾರ್ಹವಾಗಿದೆ. ಕನ್ನಡಿಗರಲ್ಲಿ ಮನೆ ಮಾತಾಗಿರುವ ಅನೇಕ ಹಿಡಿನುಡಿ ಅಥವಾ ಪಡೆನುಡಿಗಳು ಇವನಲ್ಲಿ ಸದ್ದಿಲ್ಲದೆ ಕಾವ್ಯದ ಪಟ್ಟಕ್ಕೇರಿವೆ. 'ಕುಟ್ಟಿ ಹೇಳು' (ಒತ್ತಿ ಹೇಳು; ವ. ೨೮-) 'ಗಿಳಿಯೊಂದು' (ವ.೨೭೪; ೨೨೭;೫೭೦/೬೫), 'ಹಿತ್ತಲದ ಗಿಡ' (ವ.೩೭೮/ ೩೧೭), 'ಕೊಳೆಗಾಣು' (ಹಾಳಾಗಿ ಹೋಗು ; ವ. ೧೧೮೭/೧೦೮೨). ಕರಿಗ್ಯೆ ಮತ್ತು ಕರಿಬಾಯಿ ಕೆಟ್ಟ (ಕೆಲಸ ಮಾಡುವಿಕೆ ಮತ್ತು ಕೆಟ್ಟ ಮಾತಾಡುವಿಕೆ ವ. ೧೭೪೧), 'ನಗ್ಗು ನುಸಿಯಾಗು' (ವ. ೧೭೯೦/ ೧೬೩೨), ಹಂದು ಹರಿಯಾಗು ಹಾಳಾಗು (ವ. ೩೪೮/೨೮೯) 'ಹೆಣ ಬೀಳ ಹೊಡೆ' ಮತ್ತು 'ಮೊಣಕಾಲ ಗಣಿಕೆ ಮುರಿ' (ವ.೧೨೧೬/೧೧೧೯) 'ಎದ್ದೇಳು' (ಸಾಯು; ೬೫/೬೧೫), - ಇಂತ ನಾಡಿನ ನಾಲಗೆ ಮೇಲೆ ನಲಿಯುವ, ನೂರಾರು ನುಡಿಗಳು ಸರ್ವಜ್ಞನಲ್ಲಿ ತುಂಬಿ ತುಳುಕಿವೆ.

ಗಾದೆಯಂತಹ ಮಾತುಗಳೂ ಹಾಸುಹೊಕ್ಕಾಗಿ ತುಂಬಿಕೊಂಡು, ಸರ್ವಜ್ಞನ ಅಭಿವ್ಯಕ್ತಿಗೆ ಒಂದು ಮಿಂಚನ್ನು, ಒಂದು ಮೊನಚನ್ನು ಒದಗಿಸಿವೆ. ಇವುಗಳಲ್ಲಿ ಜನ ವಾಣಿಯಿಂದ ನೇರವಾಗಿ ಎತ್ತಿಕೊಂಡು ಪರಿಷ್ಕರಿತವಾದವು ಕೆಲವು ಇದ್ದಿರಬಹುದಾಗಿದ್ದು, ಅವು ಸ್ವತಂತ್ರವಾಗಿ ಸರ್ವಜ್ಞನಿಂದಲೇ ಟಂಕಿತವಾಗಿ ನಡೆಯ ನಾಣ್ಯವಾದವುಗಳಲ್ಲಿ, ಗುರುತಿಸಲು ಬಾರದಂತೆ ಬೆರೆತುಕೊಂಡು ಹೋಗಿರಬಹುದೆಂದು ಕಂಡು ಬರುತ್ತದೆ.

> ಊರಿಂಗೆ ದಾರಿಯನು ಆರು ತೋರಿದಡೇನು? (ವ. ೩೮/೩೧)
> ಹಂಗಿನ ಹಾಲಿನಿಂದಂಬಲಿಯ ತಿಳಿ ಲೇಸು (ವ. ೧೧೧೪/೧೦೧೮)
> ತನ್ನಂತೆ ಪರರ ಬಗೆವಡೆ ಕೈಲಾಸ ಬಿನ್ನಾಣವಕ್ಕು (ವ. ೬೦೩/೫೨೭)
> ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಂಗೆ (ವ. ೬೧೭/೫೪೦)

ಇಂತಹ ನೂರಾರು ಗಾದೆಯಂತಹ ಮಾತು, ಅಥವಾ ಗಾದೆಯಾಗಿ ಪರಿಣಮಿಸಿದ ಮಾತು, ಸರ್ವಜ್ಞನ ಶಕ್ತಿಯುತ ಭಾಷೆಯ ಸಂಪನ್ಮೂಲವಾಗಿವೆ; ಆಶಯದ ಆವಿಷ್ಕಾರದಲ್ಲಿ ಜೀವಾಳದ ಪಾತ್ರವಹಿಸಿವೆ. ಆತನ ಅನುಭವದ ವೈವಿಧ್ಯ-ಶ್ರೀಮಂತಿಗೆ ಸಾಕ್ಷೀಭೂತವೂ ಆಗಿವೆ.

ಹೀಗೆ ಕನ್ನಡದ ವಿವಿಧ ಬಗೆಯ ಸಹಜ ಸಂಪತ್ತನ್ನು ಬಳಸಿಕೊಳ್ಳುವುದರೊಂದಿಗೆ, ಅದರ ಸಿರಿಯನ್ನು ಹೆಚ್ಚಿಸಲು ಸರ್ವಜ್ಞ ಹೆಣಗಿದ್ದಾನೆ. ಬಳಕೆಗೆ ಒಗ್ಗಿ ಹೋಗಿರುವ ಸಂಸ್ಕೃತ ಪದಗಳನ್ನು ಇದ್ದಕ್ಕಿದ್ದಂತೆ ಸ್ವೀಕರಿಸಲು ಹಿಂದೆಮುಂದೆ ನೋಡಿಲ್ಲ. ಕನ್ನಡಾಭಿಮಾನದ ಹೆಸರಿನಲ್ಲಿ ಅಸಹಜ ಹಟಕ್ಕೆ ಬಿದ್ದು ಬಳಸ ಬಯಸಿದ ಪ್ರತಿಯೊಂದು ಸಂಸ್ಕೃತ ಪದವನ್ನೂ ಪಾಂಡಿತ್ಯಪೂರ್ಣ ತದ್ಭವವಾಗಿ ಪರಿವರ್ತಿಸಿ, ಜನಸಾಮಾನ್ಯರ 'ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕುವ' ಗೋಜಿಗೆ ಹೋಗಿಲ್ಲ.

ಆದರೆ ಅಲ್ಲಲ್ಲಿ ಕೆಲವು ತದ್ಭವಗಳನ್ನು ಸೊಗಸಾಗಿ ಬಳಸಿದ್ದಾನೆ. 'ತಿರದ' (ತ್ಸ. ಸ್ಥಿರವಾದ; ವ. ೧೨೯/೧೧೨) 'ಸತು' (ಸತುವು, ತ್ಸ, ಸತ್ವ; ವ. ೭೨೨/೬೩೯), 'ಅದ್ದ' (ತ್ಸ. ಅರ್ಧ, ವ. ೬೯೪/೬೧೪). ಆದರೆ ಇಂಥಲ್ಲೆಲ್ಲ ತದ್ಭವಗಳ ಮೂಲಭೂತ ಗುರಿಯನ್ನು ಗಮನದಲ್ಲಿಟ್ಟುಕೊಂಡು, ಶಬ್ದಗಳನ್ನು 'ತಿಳಿ' ಮಾಡುವುದರ, ಅಂದರೆ ತಿಳಿವಂತೆ ಮಾಡುವದರ, ಕಡೆಗೇ ಲಕ್ಷ್ಯವಹಿಸಿದ್ದಾನೆ. ಅಪರೂಪಕ್ಕೆಂಬಂತೆ ಪದಗುಚ್ಛಗಳನ್ನು ಇದ್ದಕ್ಕಿದ್ದಂತೆಯೋ ಅಲ್ಪಸ್ವಲ್ಪ ಬದಲಾವಣೆಯೊಡನೆಯೋ ತನ್ನ ಅಭಿವ್ಯಕ್ತಿಯಲ್ಲಿ ಅಳವಡಿಸಿಕೊಂಡುದೂ ಉಂಟು, 'ಸರ್ವಾಂತರ್ಯಾಮಿ | ಒರ್ವವೆಂಬುವ ತತ್ವ' (ವ. ೩೩೩೭/೬೨೯) - ಎಂಬಲ್ಲಿ ಅದನ್ನು ಕಂಡು

ಅಲಂಕಾರ ಯೋಜನೆ

'ಅಲಂಕಾರ'ದ ಮೂಲಕಲ್ಪನೆ, ಅಲಂಕಾರಗಳ ಬಳಕೆ - ಇವುಗಳನ್ನು ಸಮೀಕ್ಷಿಸಿದರೆ ಇವುಗಳ ಪರಮ ಗುರಿ. ಉದ್ದಿಷ್ಟ ವಸ್ತುವಿನ ಅಲಂಕರಣ ಅಥವಾ ಸೌಂದರ್ಯವರ್ಧನವೇ ಆಗದ್ದಿತೆಂಬುದು ವಿದಿತವಾಗುತ್ತದೆ. ಹಾಗೆಂದುಕೊಂಡೇ ಇಂತಹ ಅಲಂಕಾರಗಳನ್ನು ಅಳವಡಿಸಿಕೊಂಡು ಅಭಿವ್ಯಕ್ತಿಯಲ್ಲಿ ಒಂದು ಹೊಸ ಬೆಳಕನ್ನು ಹಾಯಿಸುವ, ಬಣ್ಣದ ಒಂದು ಬೆಡಗನ್ನು ಹೊಳೆಯಿಸುವ ಪ್ರಯತ್ನವನ್ನು ಸಾಹಿತಿಗಳು ಮಾಡುತ್ತಲೇ ಬಂದಿದ್ದಾರೆ. ಇದನ್ನು ಸಾಧಿಸಲು ಅಭಿಜಾತ ಕವಿಯಾದವನು. ತನ್ನ ಅನುಭವದ ಉಗ್ರಾಣ ದಲ್ಲಿ ಸ್ಮೃತಿರೂಪದಲ್ಲಿ ಸಂಗ್ರಹಗೊಳ್ಳುತ್ತ ಬಂದಿರುವ ವಿಲಕ್ಷಣ ಸಂಗತಿ. ವಿಶೇಷ ಅನುಭೂತಿಗಳನ್ನು, ತನ್ನ ಅಗತ್ಯಕ್ಕೆ ಅನುಗುಣವಾಗಿ 'ಅಲಂಕಾರ'ಗಳಾಗಿ ರೂಪಿಸಿಕೊಂಡು, ತನ್ನ ಅಭಿವ್ಯಕ್ತಿಗೆ ಒಂದು ತೇಜಸ್ಸ ತೀಕ್ಷ್ಣತೆ, ಸಮೃದ್ಧಿ-ಸ್ಫುಟತೆಯನ್ನು ತಂದುಕೊಳ್ಳಲು ಹವಣಿಸಿದ್ದುಂಟು.

ಆದರೆ ಎಷ್ಟೋ ಬಾರಿ ಈ ಬಗೆಯ ಅಲಂಕಾರಯೋಜನೆ ಅಭಿವ್ಯಕ್ತಿಯ ಅಂತರಂಗಿಕ ಚೆಲುವಿಗೆ ಪೋಷಕವಾಗದೆ ಬಾಹ್ಯದ ಬೆಡಗಿಗೆ ಕಾರಣವಾಗಿ, ಒಮ್ಮೊಮ್ಮೆ ಅನಗತ್ಯವಾದ ಹೊರೆಯಾಗಿ, ಮತ್ತೆ ಕೆಲವೊಮ್ಮೆ ಗತಾನುಗತಿಕವಾಗಿ ಪರಿಣಮಿಸಿ, ಅಭಿವ್ಯಕ್ತಿಯ ಸೋಲಿಗೆ ಕಾರಣೀಭೂತವಾದುದೂ ಉಂಟು.

ಆದರೆ ಸರ್ವಜ್ಞ ಈ ಮಾತಿಗೆ ಹೊರತಾಗಿದ್ದಾನೆ. ಅಲಂಕಾರಗಳು ಇವನ ಮಟ್ಟಿಗೆ 'ಕಲಿಯ ಕೈಯ ಕೈದು'ಗಳಾಗಿವೆ; ಅಭಿವ್ಯಕ್ತಿಯ ಪರಿಣಾಮರಮಣೀಯತೆಯನ್ನು ಸಂವರ್ಧಿಸಿವೆ.

ಸಾಹಿತ್ಯ ಪ್ರಪಂಚದಲ್ಲಿ ಪ್ರಚಲಿತವಿರುವ ನೂರಾರು ಅಲಂಕಾರಗಳಲ್ಲಿ ಉಪಮೆ ಮತ್ತು ರೂಪಕಗಳು ಮೂಲಭೂತವೂ ಜನಪ್ರಿಯವಾದುವೂ ಆಗಿವೆ. ದಿನದಿನದ ವ್ಯವಹಾರದಲ್ಲಿಯ ಇವುಗಳ ಬಳಕೆ ಜನಸಾಮಾನ್ಯರಿಂದ ನಡೆಯುವುದುಂಟು. ಇಂಥವುಗಳನ್ನು ಒಮ್ಮೊಮ್ಮೆ ಕವಿಗಳಾದವರು, ವಿಶೇಷ ಮೆರುಗಿತ್ತು ಹೆಚ್ಚಿನ ಕುಶಲತೆಯಿಂದ ಬಳಸಿಕೊಳ್ಳುವುದೂ ಉಂಟು.

ಹೀಗೆ ಎಲ್ಲೆಲ್ಲೂ ಸಲ್ಲುವ ಈ ಉಪಮೆ-ರೂಪಕಗಳು ಸಾದೃಶ್ಯ-ಸಾಧರ್ಮ್ಯಗಳಿಂದ ಪ್ರೇರಿತವಾಗಿದ್ದು, ಒಂದು ವಿಧದ ದೃಕ್ ಚಿತ್ರಗಳೇ ಆಗಿರುತ್ತವೆ.

ವರ್ಣ್ಯವಸ್ತುವಾದ 'ಉಪಮೇಯ' ಮತ್ತು ಹೋಲಿಕೆಯ ವಸ್ತುವಾದ 'ಉಪಮಾನ'ದಲ್ಲಿಯ ಸಾಮ್ಯ, ಉಪಮಾ ಅಲಂಕಾರದಲ್ಲಿ ಕಣ್ಣಿಗೆ ಹೊಡೆವಂತೆ ಬಿಚ್ಚಿಕೊಂಡಿದ್ದರೆ, ರೂಪಕಾಲಂಕಾರದಲ್ಲಿ ಅದು ಹೊರಗಣ್ಣಿಗೆ ಕಾಣದಂತೆ ಮುಚ್ಚಿಕೊಂಡಿರುತ್ತದೆ. ಆದರೆ ಒಂದೊಂದಕ್ಕೂ ತನ್ನದೇ ಆದ ಸವಿ-ಸೊಬಗು ಕಳೆ ಸೆಳೆ ಇದೆ.

ನಾಡಿನ ಉದ್ದಗಲಕ್ಕೂ ಸಂಚರಿಸಿ, ಹಳ್ಳಿಗಾಡಿನ ದಿನದಿನದ ಬದುಕಿನ ಅನಂತ ಮುಖಗಳನ್ನು ನೇರವಾಗಿ ಕಂಡುಂಡ ಸರ್ವಜ್ಞನ ಉಪಮೆ-ರೂಪಕಗಳಲ್ಲಿ ನಾಗರಿಕ ಜೀವನದ ನಯ ನಾಜೂಕಗಳಿಗೆ ಎಡೆಯಿಲ್ಲವಾಗಿದ್ದು ಹಳ್ಳಿಗಾಡಿನ ಗಂಡುಗುಣ-ಖಂತಿತತನಕ್ಕೇ ಅವಕಾಶವೊದಗಿದೆ.

ಇಂತಹ ಪೆಡಸುತನದಿಂದ ಕೂಡಿದ ಅಲಂಕಾರಗಳು ಸರ್ವಜ್ಞನ ವಚನರಾಶಿಯ ಉದ್ದಕ್ಕೂ ವಿಜೃಂಭಿಸಿ, ಆತನ ಉಕ್ತಿಗೆ ವಿಲಕ್ಷಣವಾದ ಮೊನಚ-ಮಿಂಚು ತಂದುಕೊಟ್ಟಿವೆ, ಇದರ ಪರಿಶೀಲನೆ, ಈವರೆಗಿನ ಅಧ್ಯಯನದಲ್ಲಿ ಅಲ್ಲಲ್ಲಿ ಬಂದಿದೆಯಾದರೂ, ಅವುಗಳಲ್ಲಿಯ ವಿಶೇಷವಾದ ಕೆಲವೊಂದರ ಓಜಸ್ಸು-ತೇಜಸ್ಸನ್ನು ಮಾತ್ರ ಸಮಾಲೋಚಿಸಿದರೆ ಸಾಕು ಎಂದೆನಿಸುತ್ತದೆ.

ಉಪಮೆಗಳು

ಸರ್ವಜ್ಞನ ಉಪಮೆ-ರೂಪಕಾದಿಗಳಲ್ಲಿ ಹಾಳೂರಿನ ಸ್ಥಿತಿಗತಿಯ ಹೊಳೆನೋಟ ತುಳುಕಿರುವುದುಂಟು. ವಿರಾಗಿಯಾಗಿ ಒಂಟಿಯಾಗಿ ನಿತ್ಯಸಂಚಾರಿಯಾಗಿ ಬದುಕಿರಬಹುದಾದ ಸರ್ವಜ್ಞ, ಹಾಳೂರಿನಲ್ಲಿ ಹಾದು ಹೋಗಬಹುದಾದ, ಬೀಡುಬಿಟ್ಟಿರಬಹುದಾದ ಸಂಭವವಿಲ್ಲದಿಲ್ಲ. ಅಂತಹ ಪ್ರಸಂಗಗಳಲ್ಲಿ ಅವನ ಅನುಭವಕ್ಕೆ ಬಂದ ಹಲವಾರು ಸಂಗತಿಗಳ ಜ್ವಲಂತ ಸ್ಮೃತಿಯೇ ಇಂತಹ ಅಲಂಕಾರ ಸೃಷ್ಟಿಗೆ ಕಾರಣವಾಗಿ, ಸರ್ವಜ್ಞನ ಅಭಿವ್ಯಕ್ತಿ ಒಂದು ಅಪೂರ್ವ ಕಳೆಯನ್ನು ಕಟ್ಟಿಕೊಳ್ಳಲು ಸಾಧ್ಯವಾಗಿದೆ.

ಜೋಲು ಬಿದ್ದ ಮೊಲೆಗಳ ಮುದುಕಿ ಜಾರೆಯೊಬ್ಬಳ 'ಹಾರಾಟ'ದ ಚಿತ್ರಣದ ಸಂದರ್ಭದಲ್ಲಿ ಬಂದಿರುವ 'ಹಾಳೂರ ಹದ್ದಾಡಿದಂತೆ' (ವ. ೧೮೬೯/೧೭೦೧) ಎಂಬ ಉಪಮೆಯಲ್ಲಿಯ ಔಚಿತ್ಯ ಹಾಗೂ

ಕಲಾತ್ಮಕ ಶಕ್ತಿಯನ್ನು ಆಗಲೇ ಕಂಡಾಗಿದೆ. ಇದಕ್ಕೆ ಪ್ರತಿಯಾಗಿ ಅಂಥದೇ ಆಗ ಉಪಮೆ, 'ವಿದ್ಯವಿಲ್ಲದವನ ಬರಿಮುಖವು ಹಾಳೂರ ಹದ್ದಿನಂತಕ್ಕು' (ವ. ೧೩೧೭/೧೧೬೬), ಎಂಬಲ್ಲಿ ಸರಳತೆಗೆ ಎಡೆಯಾಗಿ ಸಪ್ಪೆಯಾಗಿದೆ. ಆದರೆ ಇದೇ ಹದ್ದಿನ ಉಪಮೆ ಇನ್ನೊಂದೆಡೆಯಲ್ಲಿ ಅತ್ಯಂತ ಶಕ್ತಿಯುತವಾಗಿ ಕೆತ್ತಲ್ಪಟ್ಟಿದೆ. ಉದ್ಯೋಗಶೀಲನಾದ ವ್ಯಕ್ತಿ ಎಂದೂ ಆಲಸಿಯಾಗಿ ಕಾಲ ಕಳೆಯದೆ, ಹೇಗಾದರೂ ಮಾಡಿ ಪರಿಶ್ರಮಿಸಿ, ಪ್ರಯೋಜನ ಕಾರಿ ಕೆಲಸ ಕೈಕೊಳ್ಳದೆ, ಲಾಭ ಗಿಟ್ಟಿಸಿಕೊಳ್ಳದೆ ಬಿಡಲಾರನು- ಎಂಬ ಆಶಯವನ್ನು ಮಾತಿನಲ್ಲಿ ಕಟ್ಟಿ ಕೊಡುವಾಗ, 'ಹದ್ದು ನೆವನವನು ಈಡಾಡಿ ಹಾವ ಕೊಂಡೆದ್ದು ಹೋದಂತೆ' (ವ. ೧೩೭/೧೨೦೫) ಎಂಬ ವಿನೂತನ ಉಪಮೆಯನ್ನು ಬಳಸಿದ್ದಾನೆ. ಈ ಮೂಲಕ ಹೋರಾಟದ ಬದುಕು, ಜಿಗುಟುತನದ ಸಾಧನೆಗಳನ್ನು ಸೊಗಸಾಗಿ ವ್ಯಂಜಿಸಿದ್ದಾನೆ.

'ಹದ್ದಿ'ಗಿಂತ ಹೆಚ್ಚು ಜೀವಂತವಾಗಿ, ವೈವಿಧ್ಯಪೂರ್ಣವಾಗಿ, ಎರಕ ಹೊಯ್ಯಲಾಗಿರುವ ಉಪಮೆಗಳು 'ನಾಯಿಗೆ' ಸಂಬಂಧಿಸಿದವುಗಳಾಗಿವೆ. ನಾಯಿ ಸರ್ವಸಾಮಾನ್ಯವಾಗಿ ನಂಬಿಗೆಯ ಪ್ರಾಣಿಯೆಂದು ಪ್ರಖ್ಯಾತವಾಗಿದೆ. ಆದರೆ ಸರ್ವಜ್ಞನ ಅಭಿವ್ಯಕ್ತಿಯಲ್ಲಿ ಅದು ಹೀನ ಮನ, ಹೀನತನಗಳಿಗೆ ಸಂಕೇತವಾಗಿದೆ. ಅದಕ್ಕೆ ಕಾರಣವಿಲ್ಲದಿಲ್ಲ.

> ...ನಾಯಿ...ಪ್ರತಿರೂಪ ಕಂಡರೆ ಕಾಳಗವೆಂದ (ವ. ೧೫೧/೧೩೮೧)
>
> ವಿನಯವಿದ್ದಧಿಕರನು | ತನುಗೆಟ್ಟ ಬಡವರನು |
> ಘನ ಹೀನವಳಿದು ಕರೆದುಣ್ಣದವನೂಟ |
> ಶುನಕ ತಿಂದಂತೆ ಸರ್ವಜ್ಞ || (ವ. ೬೬೦/೫೮೩)

ಸ್ವಜನದ್ರೋಹ ಅಥವಾ ಸ್ವಜಾತ-ಶತ್ರು ಭಾವಕ್ಕೆ ನಾಯಿ ಸುವಿಖ್ಯಾತಾಗಿದೆ. ಈ ಕಾರಣಕ್ಕಾಗಿಯೇ ಸರ್ವಜ್ಞ ಅದನ್ನು ಅರ್ಥಪೂರ್ಣವಾದ ಸಂಕೇತವಾಗಿ ಬಳಸಿಕೊಂಡಿದ್ದಾನೆ. ಮಾನವ, ನಾಯಿಯ ಈ ನಾಯಿತನವನ್ನು ಮೀರಿ ಮೇಲಕ್ಕೆ ಏರಬೇಕು. ವಿನಯಶಾಲಿಗಳಾದ ಹಿರಿಯರಿಂದ ಮೊದಲು ಮಾಡಿ ದುರ್ಬಲರಾದ ಬಡವರವರೆಗಿನ ಎಲ್ಲರನ್ನೂ- ಅವರ ಸ್ಥಿತಿ ಘನವಾದದ್ದಿರಲಿ, ಹೀನವಾದದ್ದಿರಲಿ, ಅದನ್ನು ಗಣನೆಗೆ ತೆಗೆದುಕೊಳ್ಳದೆ - ಸರ್ವ ಸಮಾನತೆ ದೃಷ್ಟಿಯಿಂದ ಬರಮಾಡಿಕೊಂಡು ಅವರೊಡನೆ ತನ್ನ ಅನ್ನ-ಆಹಾರಾದಿಗಳನ್ನು ಹಂಚಿಕೊಳ್ಳಬೇಕು : ಸಹಭೋಜನ ನಡೆಸಬೇಕು. ಇದು ಮಾನವೀಯತೆ ಇದಕ್ಕೆ ಹೊರತಾದ ನಡತೆ ನಾಯಿತನವೇ ಸರಿ. ನಾಯಿಯ ಉಪಮೆ, ಇನ್ನು ಕೆಲವೆಡೆ, ವಾಚ್ಯವೆನ್ನಿಸಬಹುದಾದರೂ ಹೆಚ್ಚು ಪ್ರಭಾವಪೂರ್ಣವಾಗಿ ಬಂದಿದೆ.

> ಅಪ್ಪಿ ಸಪ್ಪಾದವಳ | ನಪ್ಪುವನು ಕಡು ಹೆಡ್ಡ |
> ತುಪ್ಪವುಂಡೊಗೆದ ಎಲೆ ನೆಕ್ಕಿ ನಾಯಿ ಬಾಯ್ |
> ಚಪ್ಪರಿಸಿದಂತೆ ಸರ್ವಜ್ಞ || (ವ. ೧೯೩೫/೧೬೭೭)

....

ಹರೆಯು ಹೋದವಳ ಒಡನಾಟ, ನಾಯಿ ಹಳೆ |

ಕೆರವ ಕಡಿದಂತೆ ಸರ್ವಜ್ಞ || (ವ. ೧೭೩೫/೧೫೮೦)

....

ಚಿತ್ತವಿಲ್ಲದವಳ ಸಂಸಾರ, ಶುನಿ, ಹೆಣನ |

ಹತ್ತಿ ತಿಂದಂತೆ ಸರ್ವಜ್ಞ || (ವ. ೧೭೦೭/೧೫೪೯)

ಅನುಕ್ರಮವಾಗಿ ವೇಶ್ಯಾಸಂಗ, ಮುದುಕಿಯೊಂದಿಗಿನ ಸರಸ ಮತ್ತು ಚಿತ್ತವಿಲ್ಲದವಳ ಸಂಭೋಗ ಇವು ಎಷ್ಟು ನಿಕೃಷ್ಟ-ನಿಂದನೀಯ, ಹೀನ - ಹೇಸಿ ಎಂಬುದನ್ನು ಮನಂಬುಗಿಸಲು ಬಳಸಲಾದ 'ತುಪ್ಪವುಂಡೊಗೆದ ಎಲೆ ನೆಕ್ಕಿ ನಾಯಕ ಬಾಯ್ ಚಪ್ಪರಿಸಿದಂತೆ' 'ನಾಯಿ ಹಳೆ ಕೆರವ ಕಡಿದಂತೆ' ಮತ್ತು 'ಶುನಿ ಹೆಣನ ಹತ್ತಿ ತಿಂದಂತೆ' ಎಂಬ ಉಪಮೆಗಳು ಮರ್ಮಕ್ಕೆ ತಾಗುವಂತಹ ಮೊನಚನ್ನು ಒಳಗೊಂಡಿವೆ.

ಹದ್ದು-ನಾಯಿಗಳ ಹಾಗೆಯೇ ಇತರ ಕೆಲ ಪಕ್ಷಿ - ಪ್ರಾಣಿಗಳಿಗೆ ಸಂಬಂಧಿಸಿದ ಮಾರ್ಮಿಕವಾದ ಉಪಮೆಗಳೂ ಅಲ್ಲಲ್ಲಿ ಸಾಕಷ್ಟು ಮಿಂಚಿವೆ

ವನಿತೆಯೆನಗೊಲಿದಳೆನಬೇಡ, ಬೆಳ್ಳಕ್ಕಿ |

ದನವ ಕಾದಂತೆ ಸರ್ವಜ್ಞ || (ವ. ೧೭೬೬/೧೬೦೮)

ವಿನಯವಿಲ್ಲದವಳಲ್ಲಿ | ಮನವಿಕ್ಕುವನೆಗ್ಗ |

ಘನವಪ್ಪ ಬೂರ ಫಲಕಾಗಿ ಪಕ್ಕಿಗಳ

ಜಿನುಗಿ ಸತ್ತಂತೆ ಸರ್ವಜ್ಞ || (ವ. ೧೭೦೨/೧೫೪೮)

ಚಿತ್ತವಿಲ್ಲದೆ ಹೆಣ್ಣ | ಗರ್ತಿ ಮಾಡುವನೆಗ್ಗ |

ಬತ್ತಿದ ಕೆರೆಗೆ ಗಿಣಿ ಹಾರಿ ಬಾಯಾರಿ |

ಸತ್ತು ಹೋದಂತೆ ಸರ್ವಜ್ಞ || (ವ.೧೭೦೨/೧೫೫೪)

ಈ ವಿವಿಧ ಉಪಮೆಗಳ ವಿವೇಚನೆ ಈ ಹಿಂದೆ ಅಲ್ಲಲ್ಲಿ ಬಂದಿದೆಯಾದರೂ ಈ ಸಂದರ್ಭದಲ್ಲಿ ಅವುಗಳ ವಿಶೇಷ ಕಳೆ-ಸೆಳೆಯನ್ನು ಸಂಕ್ಷೇಪವಾಗಿಯೇ ಸಮೀಕ್ಷಿಸುವುದು ಅಗತ್ಯವಾಗಿದೆ. ಅದರಿಂದ ಸರ್ವಜ್ಞನ ಉಪಮೆಗಳ ಒಪ್ಪಂದದ ಸತ್ವ. ನಮಗೆ ಅವಗತವಾಗಬಹುದಾಗಿದೆ. ಇಲ್ಲಿಯೇ ಒಂದೊಂದು ಉಪಮೆಯಲ್ಲಿಯೂ ಒಂದಿಲ್ಲೊಂದು ಬಗೆಯ ಒಗರು-ಹೊಗರು ಇದೆ.

ಹೆಣ್ಣಿನ ಪ್ರೀತಿ ತನಗೆ ದಕ್ಕಿತೆಂದು ನಂಬಿ ಕೆಡುವ ದುರ್ದೈವಿಗೆ ಕೊಡಲಾದ ದನಕಾಯುವಂತೆ ಅದನ್ನನುಸರಿಸುವ ಬೆಳ್ಳಕ್ಕಿಯ ಹೋಲಿಕೆ; ವಿನಯರಹಿತ ಹೆಣ್ಣನ್ನು ನೆಚ್ಚಿ ನೋವಿಗೀಡಾಗುವ ನಿರ್ಭಾಗ್ಯಜೀವಿಗೆ ಕೊಡಲಾದ ಬೂರಲ ಫಲಗಳಿಗಾಗಿ ಜಿನುಗಿ ಸಾಯುವ ಪಕ್ಷಿ ಸಮೂಹದ ಉಪಮೆ; ಮನವಿಲ್ಲದ

ಹೆಣ್ಣಿನೊಂದಿಗೆ ಸರಸವಾಡುವ ಸ್ಥಿತಿಗೆ ಕೊಡಲಾದ ಬತ್ತಿದ ಕೆರೆಗೆ ಹಾರಿಹೋಗಿ ಬಾಯಾರಿ ಸಾಯುವ ಗಿಳಿಯ ದುರಂತದ ತುಲನೆ; ಗಂಡನ ಅನುಪಸ್ಥಿತಿಯಲ್ಲಿಯ ಜಾರೆಗೆ ಪ್ರಾಪ್ತವಾಗುವ ಪರಿಸ್ಥಿತಿಗೆ ಕೊಡಲಾದ ಕಾಗೆಗೆ ಮೊಸರನ್ನು ತೋರಿಸಿಕೊಟ್ಟಂತೆ ಎಂಬುವ ಸಾಮ್ಯ - ಇವುಗಳಲ್ಲಿಯ ವಾಸ್ತವದ ಸೊಗಡು, ಅಭಿವ್ಯಕ್ತಿಯ ಮೊನಚು ಸ್ವಯಂವೇದ್ಯವಾಗಿದೆ.

ವಿರಹವೇದನೆಗೀಡಾದ ಶ್ರೀರಾಮನಿಗೆ ಕೊಡಲಾದ ಅಂಬು ತಾಗಿದ ಹುಲ್ಲೆಯ ಉಪಮೆಯಲ್ಲಿಯ ಭಾವಾವೇಗ ಮನಸ್ಸನ್ನು ಮಿಡಿಯವಂಥದಾಗಿದೆ. ಅನಂತಪುರದಲ್ಲಿ ಉದ್ಧೃತವಾಗಿರುವ ನರಿಯ ಉಪಮೆ, ಮೂಲತಃ ಒಂದೇ ಆಗಿದ್ದು ಮೂರು ವೇಷದಲ್ಲಿ ಮೂರು ಆಶಯಗಳ ಮೇಲೆ ಮೂರು ನಿಟ್ಟಿನ ಪ್ರಕಾಶ ಚೆಲ್ಲುವಲ್ಲಿ ಕೃತಾರ್ಥವಾಗಿದೆ.

ಆಮೇಲೆ ಬಂದ ಕೋಣನ ಉಪಮೆ, ಹಿಂದೆ ಬಂದ ಕಾಗೆಯ ಉಪಮೆಯ ಜಾಡನ್ನೇ ಅನುಸರಿಸುವಂಥದಾಗಿದೆ. ಕೊನೆಯಲ್ಲಿಯ ಒತ್ತಿ ಅಥವಾ ಓತಿಕಾಟದ ಉಪಮೆ, ಬೇಲಿಯ ಮೇಲೆ ಕೂತುಕೊಂಡು ಅರ್ಥವಾಗಲಿ ಬಿಡಲಿ, ಕಾರಣವಿರಲಿ ಬಿಡಲಿ-ಯಾವುದಕ್ಕೂ ತಲೆ ಹಾಕುವ ಅದರ ಹುಟ್ಟುಗುಣವನ್ನು ಧ್ವನಿಸುತ್ತ, ಅಭಿವ್ಯಕ್ತಿಗೆ ಒಂದು ಹೊಸ ಒಪ್ಪವನ್ನು ಒದಗಿಸಬಲ್ಲುದಾಗಿದೆ.

ದೃಷ್ಟಾಂತಗಳು

ಸರ್ವಜ್ಞನ ದೃಷ್ಟಾಂತಗಳನ್ನು ಕೂಡ ಉಪಮೆಯಗಳ ಹಾಗೆಯೇ ತನ್ನ ಅನುಭವದ ಸಮೃದ್ಧಿಯನ್ನು ಸಾಬೀತು ಪಡಿಸುವಂತೆ ಸೂರೆ ಮಾಡಿದ್ದಾನೆ. ದಿನದಿನದ ಬದುಕಿನ ವಿವಿಧ ಕ್ಷೇತ್ರಗಳಿಂದ ಹೆಕ್ಕಿ ತಂದಿರುವ ಇವು ವೈವಿಧ್ಯಪೂರ್ಣವೂ, ಅರ್ಥದ ಆಯಾಮವೊಂದನ್ನು ಕಲ್ಪಿಸುವ ಮೂಲಕ ಅಭಿವ್ಯಕ್ತಿಯನ್ನು ಶಕ್ತಿಯುತವಾಗಿಸುವಂಥವೂ ಆಗಿವೆ.

ಜಾತಿಹೀನರ ಮನೆಯ ಜೋತಿ ತಾ ಹೀನವೇ. (ವ. ೯೭೪/೮೮೩)
ಯಾತರದು ಹೂವೇನು | ನಾತರದು ಸಾಲದೇ? (ವ. ೯೨೮/೮೮೫)
ಉಣ್ಣೆ ಕೆಚ್ಚಲೊಳಿರ್ದು ಉಣ್ಣದದು ನೊರೆವಾಲ (ವ. ೬೬೦/೫೮೨)
ಬೆಣ್ಣೆ, ಬೆಂಕಿಯ ನಡುವೆ ತಣ್ಣಗಿರಬಲ್ಲುದೇ? (ವ. ೫೩೪/೪೬೩)
ಕಲ್ಲಿನೊಳಗಣ ಕಪ್ಪೆಗೆಲ್ಲಿಹರು ತಾಯ್ತಂದೆ? (ವ. ೫೨೧/೪೫೧)
ಮೆಲ್ಲನೆಯೆ ಸರಿನೀರು ಕಲ್ಲ ಭೇದಿಸಲಕ್ಕ (ವ. ೧೩೫೬-)
ಹಸಿಯ ಸವುಧೆಯ ತಂದು ಹೊಸೆದರುಂಟೇ ಕಿಚ್ಚು? (ವ. ೯೩/೭೮)
ಆನೆ ನೀಗಾಟದಲಿ ಮೀನ ಕಂಡಂಜುವುದೇ? (ವ. ೩೭೩/೩೧೪)
ಹೆರೆಗಳೆದ ಉರಗನ ಗರಳ ತಾ ತಪ್ಪುವದೇ? (ವ.೧೦೧೮/೯೨೩)

ಒಂದೊಂದು ಹನಿ ಬಿದ್ದು ನಿಂದಲ್ಲಿ ಮಡುವಕ್ಕು (ವ. ೪೨೮/೩೬೨)

ಗುರಿಯ ತಾಗದ ಬಾಣ ನೂರಾರನೆಸೆದೇನು ? (ವ. ೪೩೨/೩೬೬)

ಇಂತಹ ನೂರಾರು ದೃಷ್ಟಾಂತಗಳು ಕೈಹಾಕಿದಲ್ಲಿ ಸಿಕ್ಕುತ್ತವೆ. ಇವು ತಮ್ಮ ವಾಸ್ತವಿಕತೆಯ ಕಾವು-ಕಸುವಿನಿಂದಾಗಿ ಅಭಿವ್ಯಕ್ತಿಯ ಓಜ-ತೇಜ ಹೆಚ್ಚಿಸಿವೆ. ಇವುಗಳಲ್ಲಿಯ ಕೆಲವೊಂದರ ವಿವರವಾದ ವಿಶ್ಲೇಷಣೆ ಈ ಹಿಂದೆ ಅನುಷಂಗಕವಾಗಿ ಬಂದದ್ದುಂಟು. ಇನ್ನಿತರ ಕೆಲ ದೃಷ್ಟಾಂತಗಳು ಸತ್ವಪೂರ್ಣವಾಗಿವೆ. ಉದಾಹರಣೆಗೆ,

ಜರಿವ ಜಲ ತಡೆದಿರ್ದ | ಗಿರಿಯನೇ ಕೊರೆದಿತ್ತು |
ಹಿರಿಯರ ಮುನಿಸು ಗುರುವರರ ಗರುವವನು |
ಹಿರಿಸಿತ್ತು ನೋಡ ! ಸರ್ವಜ್ಞ || (ವ. ೫೨೭-)

ಎಂಬುದನ್ನು ಪರಿಶೀಲಿಸಬಹುದಾಗಿದೆ. ಹಿರಿಯರ ಮುನಿಸು ಎಂತಹ ಗರ್ವಿಷ್ಠರ ಗರ್ವವನ್ನೂ ಬಗ್ಗು ಬಡಿಯುವಂತಹ ಉಗ್ರತೆಯನ್ನು ಒಳಗೊಂಡಿರುತ್ತದೆ ಎಂಬ ಆಶಯದ ಸಮರ್ಥನೆಗೆ ದೃಷ್ಟಾಂತವಾಗಿ ಬಂದ 'ಜರಿವ ಜಲ ತಡೆದಿರ್ದ ಗಿರಿಯನೇ ಕೊರೆದಿತ್ತು' ಎಂಬುದು ಮೊದಲ ನೋಟಕ್ಕೆ ಅಸಂಭವನೀಯ ಉಕ್ತಿ ಎಂದೆನ್ನಿಸಬಹುದಾದರೂ ವಾಸ್ತವಿಕ ಅನುಭವದಿಂದ ಉಕ್ಕಿ ಬಂದುದಾಗಿದೆ.

ಬೆಳಗಾವಿ ಜಿಲ್ಲೆಯ ಸವದತ್ತಿ - ಮುನವಳ್ಳಿ ಬಳಿಯ 'ನವಿಲು ತೀರ್ಥ'ವೆಂದು ಹೆಸರಾಗಿದ್ದ 'ಒಡಕು ಹೊಳೆ'ಯ ದರ್ಶನ-ಸ್ಥಳಪುರಾಣಗಳಿಂದ ಪ್ರೇರಿತವಾದುದಾಗಿದೆ. ಅಲ್ಲಿ, ಮಲಪ್ರಭಾ ನದಿ ತಡೆದ ಬೆಟ್ಟವನ್ನು ಸುತ್ತುವರಿದು ಹೋಗುವುದನ್ನು ಕಂಡು, ಬೆಟ್ಟದ ನೆತ್ತಿಯ ಮೇಲೆ ಕೂತಿದ್ದ ನವಿಲೊಂದು ಬೆಟ್ಟಕ್ಕೆ ಹೆದರಿ ಹಿಂದಿರುಗಿದಳೋಮಲ್ಲಿ' ಎಂದು ಕೇಕೆ ಹಾಕಿ ಮೂದಲಿಸಿದಂತೆ ! ಆಗ ಕೋಪಗೊಂಡ ಮಲಪ್ರಭೆ ಮರಳಿ, ಆ ನವಿಲಿನೊಂದಿಗೆ ಬೆಟ್ಟದ ನೆತ್ತಿಯನ್ನೇ ಸೀಳಿಕೊಂಡು ಮುಂದೆ ಹೋಯಿತಂತೆ! ಅಂತೂ ಹಿರಿಯರ ಮುನಿಸಿನ ರುದ್ರತೆಯನ್ನು ಮನಂಬುಗಿಸುವಲ್ಲಿ ಈ ದೃಷ್ಟಾಂತವೂ ಸಶಕ್ತವಾಗಿದೆ. ಇನ್ನು ಕೆಲವೆಡೆ, ಒಂದೇ ಎಂಬಂಥ ಆಶಯದ ಸಮರ್ಥನೆಗೆ ಅನೇಕ ದೃಷ್ಟಾಂತಗಳು, ಹರಿಹರನಲ್ಲಿ ಬರುವ ಉಪಮೆಗಳ ಹಾಗೆ, ಮಾಲೆ ಮಾಲೆಯಾಗಿ ಬರುತ್ತವೆ.

ಮುತ್ತು ನೀರೊಳು ಪುಟ್ಟಿ | ಮತ್ತೆ ನೀರಪ್ಪುದೆ ?|
ಸತ್ಯವನಿದ ಜ್ಞಾನಿ ಸಂಸಾರವನು |
ಮತ್ತೆ ಹೊದ್ದುವೆನ? ಸರ್ವಜ್ಞ || (ವ. ೩೫೭/೨೯೮)
ತಿಳಿಯ ಕಾಸಿದ ತುಪ್ಪ | ವಳಿದು ಹಾಲಪ್ಪುದೆ ?|
ಕಳೆ ಬೆಳಗಿನರಿದ ಶಿವಯೋಗಿ ಸಂಸಾರ |
ದೊಳಗೆ ಸಿಲುಕುವನೆ? ಸರ್ವಜ್ಞ || (ವ. ೩೫೪/೨೯೯)

ಗಗನಕ್ಕೆ ಹೊಗೆ ಹೋಗಿ | ಮಿಗೆ ಜಗಕೆ ಬಪ್ಪುದೇ ?|
ಅಘುಹರನ ಪದದ ಸವಿದವನು ಸಂಸಾರ |
ದಘುವ ಹೊದ್ದುವನೆ? ಸರ್ವಜ್ಞ || (ವ. ೩೬೦/೩೦೧)
ಓದು ಮಣ್ಣಲಿ ಹುಟ್ಟಿ | ಕೂಡುವದೆ ಜಾತಿಯನು ?|
ರೂಢೀಗೀಶ್ವರನ ಬೆರೆದಿಹನು ಸಂಸಾರ |
ಕುಡಿ ಹೋಗುವನೆ? ಸರ್ವಜ್ಞ || (ವ. ೩೬೧/೩೦೨)

ಮೇಲಿನ 'ಮುತ್ತು ನೀರೊಳು ಪುಟ್ಟಿ ಮತ್ತೆ ನೀರಪ್ಪುದೆ?' 'ತಿಳಿಯ ಕಾಸಿದ ತುಪ್ಪವಳಿದು ಹಾಲಪ್ಪುದೆ?' 'ಗಗನಕ್ಕೆ ಹೊಗೆ ಹೋಗಿ ಮಿಗೆ ಜಗಕೆ ಬಪ್ಪುದೆ?' ಮತ್ತು 'ಓಡು ಮಣ್ಣಲ್ಲಿ ಹುಟ್ಟಿ ಕೂಡುವದೆ ಜಾತಿಯನು?' ಎಂಬ ದೃಷ್ಟಾಂತಗಳಲ್ಲಿಯ ಸ್ವೋಪಜ್ಞತೆ ಅರ್ಥವಂತಿಕೆ ಮಾರ್ಮಿಕವಾಗಿದೆ.

ಅಂತೂ ಸರ್ವಜ್ಞನಲ್ಲಿ ಅಲಂಕಾರಕ್ಕಾಗಿ 'ಅಲಂಕಾರ' ಬಂದಿಲ್ಲ; ಆಶಯದ ಪ್ರಭಾವ ಪೂರ್ಣ ಅವಿಷ್ಕಾರಕ್ಕಾಗಿ ಅಭಿವ್ಯಕ್ತಿಯ ಅಭಿನ್ನ ಅಂಗವಾಗಿ ಬಂದಿವೆ; ಅರ್ಥವಂತಿಕೆಗೆ ಕಳೆಕಟ್ಟುವ ಮೂಲಕ ಕೃತಾರ್ಥವಾಗಿವೆ.

V

ಹೊಸಗನ್ನಡ ಸಾಹಿತ್ಯದಲ್ಲಿ ಚುಟುಕುಗಳು ಧಾರಾಳವಾಗಿ ಬಳಕೆಯಾಗಿವೆ. ಈ ಭಾಗದಲ್ಲಿ ಅವುಗಳ ಭಾಷೆ ಸ್ವರೂಪವನ್ನು ಕುರಿತು ಚರ್ಚೆ ಮಾಡಲಾಗಿದೆ.

ಡಿ.ವಿ.ಜಿ. ಯವರ ಮಂಕುತಿಮ್ಮನ ಕಗ್ಗ ವಿಡಂಬನೆಗಳಿಂದ ಸಮೃದ್ಧವಾಗಿದೆ. ಅದರಲ್ಲಿ ಕೆಲವು ಚೌಪದಿಗಳನ್ನು ಮಾತ್ರ ಆಯ್ಕೆ ಮಾಡಿಕೊಂಡಿದ್ದೇನೆ.

ದೇವರೆಂಬುದದೇನು ಕಗ್ಗತ್ತಲೆಯ ಗವಿಯೆ?
ನಾವರಿಯಲಾರದೆಲ್ಲದರೊಟ್ಟು ಹೆಸರೆ?
ಕಾವನೋರ್ವನಿರಲ್ಕೆ ಜಗದ ಕತೆ ಏಕಿಂತು?
ಸಾವು ಹುಟ್ಟುಗಳೇನು ಮಂಕುತಿಮ್ಮ?

ಬದುಕಿನ ನಿಗೂಢತೆಯನ್ನು ಅವರು ಪ್ರಶ್ನಿಸುವ ಬಗೆಯಿದು

ಒಂದೆ ಗಗನವ ಕಾಣುತೊಂದೆ ನೆಲವನು ತುಳಿಯು
ತೊಂದ ಧಾನ್ಯವನುಣ್ಣುತೊಂದೆ ನೀರ್ಗುಡಿದು
ಒಂದೆ ಗಾಳಿಯನುಸಿರ್ವ ನರಜಾತಿಯೊಳಗೆಂತು
ಬಂದುದೀ ವೈಷಮ್ಯ? ಮಂಕುತಿಮ್ಮ

ಮತ್ತೆ ಕೇಳುತ್ತಾರೆ.

ತೃಣಕೆ ಹಸಿರೆಲ್ಲಿಯದು? ಬೇರಿನದೆ? ಮಣ್ಣಿನದೆ?
ದಿನಪನದೆ? ಚಂದ್ರನದೆ? ನೀರಿನದೆ? ನಿನದೆ?
ತಣಿ ತಣಿವ ನಿನ್ನ ಕಣ್ಣಿನ ಪುಣ್ಣವೋ? ನೋಡ
ಗುಣಕ್ಕೆ ಕಾರಣವೊಂದೆ? ಮಂಕುತಿಮ್ಮ

ಸರ್ವಜ್ಞನ ವಚನಗಳ ವ್ಯಂಗ್ಯಭಾವವೇ ಸೂಕ್ಷ್ಮವಾಗಿ ಈ ಚೌಪದಿಗಳಲ್ಲಿ ಬಿಂಬಿತವಾಗಿದೆ ಎನಿಸುತ್ತದೆ. ಮನಸ್ಸಿನ ಮಾಯಾವ್ಯಾಮೋಹಗಳನ್ನು ನಾನು ಗೆದ್ದೆ ಎಂದು ಎದೆತಟ್ಟಿ ಹೇಳಿಕೊಳ್ಳುವ ಮನುಷ್ಯನಿಗೆ ನೇರ ಎಚ್ಚರಿಕೆ ಈ ಚೌಪದಿ.

ಸತ್ತವೆನ್ನಾಸೆಗಳು.... ಗದ್ದೆನಿಂದ್ರಿಯಗಣವ
ಚಿತ್ತವೆನ್ನಲುಗದೆಂಬಾ ಜಂಬ ಬೇಡ
ಎತ್ತಣಿಂದಲೋ ಗಾಳಿ, ಮೋಹಬೀಜವ ತಂದು
ಬಿತ್ತಲಾರದೆ ಮನದಿ ? ಮಂಕುತಿಮ್ಮ

ಉದರ ದೈವಕೆ ಜಗದೊಳೆದುರು ದೈವವೆಲ್ಲಿ?
ಮೊದಲದರ ಪೂಜೆ.... ಮಿಕ್ಕೆಲ್ಲವದರಿಂದ
ಮದಿಸುವದದಾದರಿಸೆ.... ಕುದಿವುದು ನಿರಾಕರಿಸಿ
ಹದಗೊಳಿರಿಸುವದೆಂತೂ ಮಂಕುತಿಮ್ಮ?

ಉದರ ದೈವ, ಎಲ್ಲ ದೇವರನ್ನೂ ಮೀರಿದ್ದು ಎಂಬುದನ್ನು ಒಪ್ಪದವರಾರು? ಕಡುಕಷ್ಟಕರ ಬದುಕಿನ ಭಿನ್ನ ಮುಖಗಳನ್ನು ಪರಿಚಯಿಸುತ್ತಲೇ ಎದೆಗುಂದದೇ ಮುನ್ನಡೆವಂತೆ ಧೈರ್ಯತುಂಬುವ ಪರಿಕೂಡ ಸ್ವಾರಸ್ಯಕರ.

ತೋಯಿಸುತ, ಬೇಯಿಸುತ ಹೆಚ್ಚುತ್ತ ಕೊಚ್ಚುತ್ತ
ಕಾಯಿಸುತ ಕರಿಯುತ ಹುರಿಯುತ್ತ ಸುಡುತ
ಈ ಯವನಿಯೊಲೆಯೊಳೆಮ್ಮಯ ಬಾಳನುಟ್ಟು ವಿಧಿ
ಬಾಯ ಚಪ್ಪರಿಸುವನು ಮಂಕುತಿಮ್ಮ

ಮತ್ತೆ

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ

ಹೆಸರು-ಮನ್ನಣೆ - ಪ್ರಚಾರಗಳಿಗೆ ಹಾತೊರೆಯುವ ನಮ್ಮ ವ್ಯಕ್ತಿತ್ವವನ್ನು ಮಾರ್ಮಿಕವಾಗಿ ಅನಾವರಣಗೊಳಿಸುವ ಪರಿ ಎಂಥ ಅದ್ಭುತ !

ಅನ್ನದಾತುರಕಿಂತ ಚಿನ್ನದಾತುರ ತೀಕ್ಷ್ಣ
ಚಿನ್ನದಾತುರಕಿಂತ ಹೆಣ್ಣುಗಂಡೊಲವು
ಮನ್ನಣೆಯು ದಾಹವೀ ಎಲ್ಲರಂ ತೀಕ್ಷ್ಣತಮ
ತಿನ್ನುವದದಾತ್ಮವನೆ ಮಂಕುತಿಮ್ಮ

ಮನುಷ್ಯನಿಗಿರುವ ಮನ್ನಣೆಯ ಮೋಹ ಎಂಥ ಅಪಾಯಕಾರಿ ಎಂದು ಬಿಚ್ಚಿ ಹೇಳಿದರೂ... ನಾವು?

ಎದ್ದೆದ್ದು ಬೀಳುತಿಹೆ ಗುದ್ದಾಡಿ ಸೋಲುತಿಹೆ
ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ
ಉದ್ಧರಿಸುವೆನು ಜಗವೆನ್ನುತಿಹ ಸಖನೆ ನಿ-
ನ್ನುದ್ಧಾರವೆಷ್ಟಾಯ್ತು? ಮಂಕುತಿಮ್ಮ

ಜೊತೆಗೆ ಇನ್ನೊಂದು ಅಮೂಲ್ಯ ಮುತ್ತು ಒಂದೊಂದು ವಿಸ್ಮಯ, ಪವಾಡದಲ್ಲೂ ಸೃಷ್ಟಿ ಮೌನವಾಗೇ ಸದ್ದಿಲ್ಲದೇ ತೊಡಗಿಕೊಂಡಿರುವಾಗ, ಅದೇ ದೃಷ್ಟಿಯಲ್ಲಿ ಹುಟ್ಟಿದ ಮನುಷ್ಯರಾದ ನಮಗೆ, ಏನು ಆಡಂಬರ! ಎಂಥ ಪ್ರದರ್ಶನ?

ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ
ಫಲ ಮಾಗುವಂದು ತುತ್ತುರಿ ದನಿಯಿಲ್ಲ
ಬಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ
ಹೊಲಿ ನಿನ್ನ ತುಟಿಗಳನು ಮಂಕುತಿಮ್ಮ.

ಹೇಳುತ್ತ ಹೋದರೆ ಡಿ.ವಿ.ಜಿ.ಯವರ ಕಗ್ಗ ಮುಗಿಯುವುದೇಯಿಲ್ಲ.

ಬರೆಯುತ್ತ ಹೋದರೆ
ಪೆನ್ನಿಗೆ ಶಾಯಿ, ಇಳಿಸುವ ಹಾಳೆ
ಸಾಲುವುದೇಯಿಲ್ಲ

ದಿನಕರ ದೇಸಾಯಿಯವರ ಚುಟುಕುಗಳಲ್ಲಿ ರಾಜಕೀಯ ವಿಡಂಬನೆಗಳದೇ ಪ್ರಮುಖ ಪಾತ್ರ. ಹೇಳುವ ರೀತಿ ಅಷ್ಟೇ ಹರಿತ.

ಅಲಲ ಕೇಳೋ ಮಗನೆ ಪೌರುಷದ ಸುದ್ದಿ
ಎಷ್ಟು ಮಂದಿಗೆ ಉಂಟು ಈ ತರದ ಬುದ್ಧಿ

ಹತ್ತು ವರುಷದ ಹಿಂದೆ ಇತ್ತು ಲಂಗೋಟಿ
ಈ ಹೊತ್ತು ನೋಡಿದರೆ ಬರಿ ಹತ್ತು ಕೋಟಿ

ಇನ್ನೊಂದು.....

ಇವರು ಬಿಳಿಟೋಪಿ ಧರಿಸುವುದೇಕೆ ಅಣ್ಣ?
ಕಪ್ಪಗಲ್ಲವೇ ತಲೆಯ ಕೂದಲಿನ ಬಣ್ಣ
ಬಿಳಿಯಿಂದ ಕಪ್ಪೆಲ್ಲವೂ ಮುಚ್ಚಿಹೋಗಿ
ಬೆಳಗುವುದು ಅಮಾವಸ್ಯೆ ಬೆಳದಿಂಗಳಾಗಿ

ಭ್ರಷ್ಟಾಚಾರವನ್ನು ಬಿಚ್ಚಿ ತೋರುವ ಇಂಥ ಚೌಪದಿಗಿಂತ ಸಮರ್ಥವಾಗಿ ಬರೆಯಲು ಸಾಧ್ಯವೇ?

ಈ ಹೊತ್ತು ಈ ಕಡೆಗೆ ನಾಳೆ ಆ ಬದಿಗೆ
ನೇತಾಡುತಿದೆ ಇವನ ಕುರ್ಚಿ ಅಡಿಗಡಿಗೆ
ಕುಳಿತುಕೊಳ್ಳುವುದು ಸಖಿ ಸಿಕ್ಕಿದೆಡೆ ಜಾಗ
ಇದಕೆನ್ನುವರು ರಾಜಕಾರಣದ ತ್ಯಾಗ

ಪಕ್ಷಾಂತರವನ್ನೂ ಗೇಲಿಯೊಂದಿಗೆ ಸಮರ್ಥಿಸುವ ಪರಿ. ರಾಜಕಾರಣಿಗಳ ಹೊಟ್ಟೆಗೆ ಎಂಥ ಅದ್ಭುತ ಶಕ್ತಿ ಎಂದರೆ ಏನು ತಿಂದರೂ ಎಷ್ಟು ತಿಂದರೂ ಅಜೀರ್ಣವಾಗುವುದೇ ಇಲ್ಲ ಎಂಬ ಪವಾಡ ಸದೃಶ ತನ ಈ ಚೌಪದಿಗೆ-

ಧವಳ ಸಾಹೇಬರೆಲ್ಲ ಹೊರಟು ಹೋಗಿ
ಕವಳ ಸಾಹೇಬರನು ನಮಿಸು ತಲೆಬಾಗಿ
ಕವಳ ಒಂದೇ ಅಲ್ಲ ಎಲ್ಲವನು ತಿಂದು
ಸರಕಾರ ನಡೆಸುವರು ಹೇ ದೀನಬಂಧು !

ಅಮೃತ ಹಸ್ತದ ಅಡಿಗಲ್ಲುಗಳು, ಹೇಗೆ ಜಡಗಲ್ಲುಗಳಾಗುತ್ತವೆ ನೋಡಿ ಇವರ ಚುಟುಕದಲ್ಲಿ

ಕಟ್ಟಬೇಕೆಂದು ಹಾಕಿದರು ಅಡಿಗಲ್ಲು
ಅಡಿಗಲ್ಲ ಮೇಲೆ ಹುಟ್ಟಿದೆ ಭರ್ತಿ ಹುಲ್ಲು
ದನಗಳಿಗೆ ಮೇಯಲಿಕೆ ಬಹಳ ಅನುಕೂಲ
ಕೊಳಲನೂದುತ ಬಾರೋ ವೇಣುಗೋಪಾಲ

ಇನು ರಾಜಕೀಯಕ್ಕೆ ಹೊರತಾದ ಜನಸಾಮಾನ್ಯರಾದ ನಾವು... ನಮ್ಮ ಬದುಕುವ ವೈಖರಿ ಎಲ್ಲ ಹೇಗೆ? ಇವರ ಚುಟುಕದಲ್ಲಿ...

ಇದು ಮಹಾಕ್ಷೇತ್ರ ಸಖಿ ಹೆಸರದಕೆ ಕಾಶಿ
ಇದರ ಜೋಳಿಗೆಯಲ್ಲಿ ಪಾಪಗಳಿಗೆ ರಾಶಿ

ಪುಣ್ಯಗಳಿಸಲಿಕೆಂದು ಎಲ್ಲರೂ ಬಂದು
ಇಲ್ಲಿ ಹೇರಿದ್ದಾರೆ ಪಾಪಗಳ ತಂದು

ಇದು ಪಾಪ ಪ್ರಾಯಶ್ಚಿತ್ತವಾದರೆ, ಔದಾರ್ಯ ಹೇಗೆ?

ಎಲೆ ಕೋಳಿ ವೃದ್ಧಿಯಾಗಲಿ ನಿನ್ನ ಬಾಳು
ಹೊಟ್ಟೆ ತುಂಬುವ ತನಕ ತಿನ್ನು ಈ ಕಾಳು
ಇದು ನಿನಗೆ ನಾನು ಬಡಿಸುವ ಮೇಜವಾನಿ
ಆಮೇಲೆ ಒಂದು ದಿನ ನಮಗೆ ಬಿರಿಯಾನಿ

ದೇಸಾಯರು ತಮ್ಮನ್ನೂ ಬಿಡದೆ, ವಿಮರ್ಶೆಗೆ ಒಳಪಡಿಸಿಕೊಂಡಿದ್ದಾರೆ, ವಿಡಂಬಿಸಿಕೊಂಡಿದ್ದಾರೆ.

ಅವರು ಎಂದರು ನನಗೆ ಚುಟುಕ ಸಾಮ್ರಾಟ
ನಾನಂದೆ ಈ ರೀತಿ ಕೊಡಬೇಡ ಕಾಲ
ಸಾಮ್ರಾಟರೆಲ್ಲರೂ ಮುಕ್ಕಿದರು ಮಣ್ಣು
ಕೊನೆಗೆ ಉಳಿಯುವುದೊಂದೆ ಕಬ್ಬಿಗನ ಕಣ್ಣು

ಇನ್ನೊಂದು

ಎಲ್ಲರೂ ಹೊಗಳಿದರು ಕವಿ ಎಂದು ನನ್ನ
ಬಹುಮಾನ ನೀಡಿದರು ಉಂಗುರದ ಚಿನ್ನ
ಉಪಕಾರ ಸ್ಮರಿಸಲಿಕೆ ಹಾಡಿದೆನು ಮತ್ತೆ
ಅಜ್ಜಿ ಎಂದಳು ಕವಿಯಲ್ಲ ಕತ್ತೆ.
ನಮ್ಮನ್ನು ನಾವು ಕೋಗಿಲೆ ಎಂದುಕೊಂಡವರಿಗೆ ಎಂಥ ಶಾಕು?!

ಈ ರೀತಿ ಅತಿರಥ, ಮಹಾರಥರೊಂದಿಗೆ, ಚುಟುಕು ಸಾಹಿತ್ಯವನ್ನು ಸಮರ್ಥವಾಗಿ ಮುಂದುವರೆಸಿಕೊಂಡು ಹೋಗುತ್ತ, ಇನ್ನಷ್ಟು ಸಮೃದ್ಧಪಡಿಸುತ್ತಿರುವವರಲ್ಲಿ ಸಿ.ಪಿ.ಕೆ, ಎಂ.ಅಕಬರ ಅಲಿ, ಎಂ.ಎನ್. ವ್ಯಾಸರಾವ್, ದೊಡ್ಡರಂಗೇಗೌಡ, ಶಂ.ಗು.ಬಿರಾದರ್, ಡುಂಡಿರಾಜ ಭಿಕ್ಷಾವರ್ತಿಮಠ ಮತ್ತಿನ್ನೂ ಅನೇಕರ ಪಾತ್ರ ಹಿರಿದು. ಎಲ್ಲರ ಚುಟುಕುಗಳನ್ನು ಇಲ್ಲಿ ಹೇಳಲು ಸಾಧ್ಯವಾಗದೆ ಅನಿವಾರ್ಯವಾಗಿ ಚುಟಕಿಗಿಳಿಸಬೇಕಾಗಿದೆ. ಈ ಕೆಲವು ಚುಟುಕುಗಳು ನನ್ನ ಸ್ವಾರಸ್ಯದಿಂದಾಗಿ ಮತ್ತೆ ಮತ್ತೆ ಮೆಲಕು ಹಾಕುವಂತಿದೆ.

ಶಂ.ಗು.ಬಿರಾದಾರರ ಚುಟುಕಿನಲ್ಲಿ 'ಶಿಕ್ಷಣ' ಹೇಗಿದೆ ನೋಡಿ

ಶಿಕ್ಷಣದ ಹೆಸರಿನಲಿ ನಡೆದಿಹುದ ವ್ಯಾಪಾರ
ಹಗಲು ದರೋಡಿಗಿದು ತೆರೆದಿಹುದು ದ್ವಾರ
ಯೋಗ್ಯತೆಗೆ ಎಳ್ಳಷ್ಟು ಇಲ್ಲಿಲ್ಲ ಇಂಬು
ಆದರೂ ಅನಿವಾರ್ಯ ಇಂಥವರ ನಂಬು

ಡುಂಡಿರಾಜರ ಚುಟುಕುಗಳ ಸೊಗಸೇ ಸೊಗಸು. ಅದು ಪ್ರೇಯಿಸಿಗಾಗಿ ಕಟ್ಟಿದ ಅದ್ಭುತ ಸ್ಮಾರಕ ಹೀಗಿದೆ.

ಸತ್ತಮೇಲಲ್ಲವೇ
ಷಹಜಹಾನ ಕಟ್ಟಿಸಿದ್ದು ತಾಜಮಹಲ್ಲು?
ಬದುಕಿರುವಾಗಲೆ
ನನ್ನ ಪ್ರೇಯಸಿಗೆ
ಕಟ್ಟಿಸಿದ್ದೇನೆ ಹಲ್ಲು

ಯುಗಾದಿ

ವರ್ಷವಿಡೀ ಯುಗಾದಿ
ಆಚರಿಸುವೆವು ನಾವು
ನನ್ನ ಮಾತೆಲ್ಲ ಬೆಲ್ಲ
ನನ್ನವಳದ್ದು ಬೇವು

ಇವರ ಪಕ್ಕಾವಾದ್ಯ ಎಂಥ ಅದ್ಭುತ

ಹುಡುಗ ಹೇಳಿದ : ಪ್ರಿಯೆ
ನಿನ್ನ ಹೃದಯವೀಣೆ
ನಾನು ನುಡಿಸುತ್ತೇನೆ
ಹುಡುಗಿ ಹೇಳಿದಳು
'ನಿನ್ನ ಖಾಲಿ ತಲೆ ಮದ್ದಳೆ'
ನಾನು ಬಾರಿಸಲೆ?

ಆಯ್ಕೆ

ಪದ್ಯದಲ್ಲಿ ಬರೆಯಲೋ
ಗದ್ಯದಲ್ಲಿ ಬರೆಯಲೋ
ಎಂಬ ಸಂದಿಗ್ಧಕ್ಕೆ ಸಿಕ್ಕ
ಯುವ ಲೇಖಕ
ಕೊನೆಗೆ ಆರಿಸಿದ್ದು
ಮದ್ಯವನ್ನು

ಹೇಳಲು ಸಂಕೋಚವಾದರೂ ಇವರು

ಇ...ದ್ದಾ...ರೆ
ಅಂದು ಗೋಕುಲದಲ್ಲಿ

ಇದ್ದರಂತೆ

ಕರೆದ ತತ್ ಕ್ಷಣ ಬರುವ

ಗೋಪಿಯರು

ಇಂದಿನ ಕಾಲದಲ್ಲೂ

ಇದ್ದಾರೆ... ಬರೇ

ಮುಂ...ಗೋಪಿಯರು.

ಗೀತಾ ಶಾಸ್ತ್ರಿಯವರು ಒಂದು ಅತ್ಯಂತ ಸಮಯೋಚಿತ ಚುಟುಕು ಹೇಳುತ್ತಾರೆ.

ಹೊಂದಾಣಿಕೆ

ಹೆಂಡತಿ

ಗಂಡನ

'ವ್ಯವಹಾರಗಳನ್ನು'

ನೋಡಿ

ಕಣ್ಣಿದ್ದೂ ಕುರುಡಿಯಾದಳು.

ಗಂಡ ಹೆಂಡತಿಯ

ಮಾತಿಗೆಲ್ಲ

ಕಿವಿಯಿದ್ದೂ ಕಿವುಡಾದ

ಈಗ ಇವರಿಬ್ಬರದು

ಅನ್ಯೋನ್ಯ ಸಂಸಾರ !

ಜರಗನಹಳ್ಳಿಯವರ ಈ ಚುಟುಕು ಬಲು ವ್ಯಂಗವಾಗಿ ಹೆಚ್ಚಿನ 'ವಿಕಾಸ'ವನ್ನು ಬಿಂಬಿಸುತ್ತದೆ.

ರಾಮನಿಗೆ ಹೆಣ್ಣಾದವಳು

ರಾವಣನಿಗೆ ಹುಣ್ಣಾದಳು

ಭೀಮನಿಗೆ ಮುದ್ದಾದವಳು

ಕೀಚಕನಿಗೆ ಗುದ್ದಾದಳು

ಒಲಿದರೆ ಮಾರಿಯಾದಳು

ಸತ್ಯವಾನನ ಸಾವು ಗೆದ್ದವಳು

ಸಹಗಮನದಲ್ಲಿ ಬೆಂದಳು

ವರದಕ್ಷಿಣೆ ಕೊಟ್ಟು ಕೊಂಡವಳು

ಕೆರೊಸಿನ್, ಕೆರೆ ಬಾವಿಗೆ ಮೊರೆ ಹೋದವಳು.

ಹಾಗೆ ನೋಡಿದರೆ ನಾನು ಹೇಳಿದ್ದೆಲ್ಲ ಚುಟುಕಿನಲ್ಲೇ ಎನ್ನಬಹುದು. ಇದರಲ್ಲಿ ಬಿಟ್ಟಿದ್ದು ಬಹಳ. ಬಿಟ್ಟು ಹೋದವರೂ ಬಹಳ. ಅಸಂಖ್ಯೆ ಚುಟುಕು ಸಾಹಿತಿಗಳುಂಟು ಈಗ. ಹಾಗೇ ಚುಟುಕು ಸಂಗ್ರಹ ಕೂಡ ಬೃಹತ್ತಾದದ್ದೇ.

ಚುಟುಕಿಗಾಗಿ ಚುಟುಕು ಹೆಣೆಯುವದಲ್ಲ. ದಿನನಿತ್ಯದ ಸಣ್ಣ ಅಂದರೆ ದಟ್ಟ ಅನುಭವಗಳಿಂದ ತಾನೇತಾನಾಗಿ ಸಹಜವಾಗಿ ಹುಟ್ಟಿಬರುವ ಚುಟುಕಿನಲ್ಲಿರುವ ಸ್ವಾರಸ್ಯ ಅದ್ಭುತವಾದದ್ದು, ನಮ್ಮದ್ದು ತಟ್ಟನೆ ಹಿಡಿದಿಡುವಂಥದು.

ಎಚ್.ಎ.ಭಿಕ್ಷಾವರ್ತಿಮಠ ಇವರ ಚುಟುಕುಗಳ ರಚನೆಗಳಲ್ಲಿ ವಿಚಾರಗಳು ಭಾವಗಳು ಇದ್ದರೂ ಶಬ್ದ ಶಿಲ್ಪದ ಸಹಜ ಖುಷಿ ಆಗುವುದಿಲ್ಲ. ಕ್ಲುಪ್ತವಾದ ಭಾಷೆ, ಮಾತಿನ ದುಂದಿರದೆ ಹೇಳಬೇಕಾದ್ದನ್ನು ಹೇಳುವ ಜಾಣ್ಮೆ, ಆರೋಗ್ಯಪೂರ್ಣ ಚಿಂತನೆ, ನಿಸರ್ಗ, ಪ್ರೇಮ ಮುಂತಾದವು ಓದುಗರ ಅಭಿರುಚಿಯನ್ನು ಕಾಯ್ದುಕೊಳ್ಳುವ ಹೊಣೆ ಹೊತ್ತಿವೆ. ಇವರು ತಮ್ಮ ರಚನೆಗಳಲ್ಲಿ ಭಾಷಾ ಎಚ್ಚರವನ್ನು ಕಾಪಾಡಿಕೊಂಡು ಸುತ್ತಲೂ ಜಗತ್ತಿನ ಆಗು ಹೋಗುಗಳ ಬಗ್ಗೆ ಸೂಕ್ಷ್ಮ ಕವಿ ಮನಸ್ಸಿನಿಂದ ಪ್ರತಿಕ್ರಿಯಿಸುತ್ತ ಕೆಲವು ಸುಂದರ ಚುಟುಕುಗಳನ್ನು ರಚಿಸಿದ್ದಾರೆ. ಬರೆದುದೆಲ್ಲವೂ ಕಾವ್ಯವಲ್ಲವೆಂದು ಅರ್ಥಪೂರ್ಣ ಸಾಹಿತ್ಯ ಕುರಿತಾಗಿ

ಕಾವ್ಯ

ಅಕ್ಕಪಕ್ಕ ಕುಂತ
ಗಂಡು ಹೆಣ್ಣುಗಳು
ಗಂಡ ಹೆಂಡತಿಯರಲ್ಲ
ಸಾಲಿನ ಕೆಳಗೆ ಸಾಲು
ಬರೆದದ್ದೆಲ್ಲ ಕಾವ್ಯವಲ್ಲ

ಹಣತೆಯು ತನ್ನ ಮೈ ಸುಟ್ಟುಕೊಂಡರೂ ಜಗತ್ತಿಗೆ ಬೆಳಕನ್ನು ನೀಡುವಲ್ಲಿ ತನ್ನದೇ ಮಹತ್ತರ ಪಾತ್ರವಹಿಸಿದೆ

ಹಣತೆಯ ಬೆಳಕಿನ
ಮುಗುಳು ನಗೆ
ಕತ್ತಲೆಯ
ರಾಕ್ಷಸನನ್ನು ಕ್ಷಣ ಕಾಲ
ದಂಗು ಬಡಿಸಿತು
ಅಂತಿಯೇ
ದೀಪ ಉರಿದರೆ

ಸುತ್ತಲೂ ಬೆಳಕು

ಮಾನವ ಉರಿದರೆ

ಸುತ್ತಲೂ ಬೆಂಕಿ

ಹೀಗೆ ಇವರ ಚುಟುಕುಗಳಲ್ಲಿ ನಯವಾದ ಭಾಷಾ ಸೌಂದರ್ಯವಿದ್ದು, ಇಂತಹ ಅನೇಕ ಚುಟುಕುಗಳು ಇವೆ. ಚುಟುಕು ಸಾಹಿತ್ಯಕ್ಕೆ ವಯಸ್ಸಿನ ಮಿತಿ ಖಂಡಿತ ಇಲ್ಲ. ಮೂರು ವರ್ಷದ ಮಗುವಿನ ಜೀವಂತ ಚುಟುಕಿನೊಂದಿಗೆ ಪ್ರಬಂಧ ಮುಗಿಸುತ್ತೇನೆ.

ಬೆಂಗಳೂರಲ್ಲಿ ಪಕ್ಕದ ಮನೆಯ ಮೂರು ವರ್ಷದ ಮಗುವಿನ ತಾಯಿ ಈಕ್ಯಾಡ್ ಕಂಪನಿಯಲ್ಲಿ ಕೆಲಸ ಮಾಡುವಾಕೆ. 'ಈಕ್ಯಾಡ್' ಇದು ಎಲೆಕ್ಟ್ರಾನಿಕ್ಸ್ ಕಂಪ್ಯೂಟರ್ ಏಡೆಡ್ ಡಿಜೈನಿಂಗ್'ನ ಶಾರ್ಟ್‌ಫಾರ್ಮ್. ದಿನವೆಲ್ಲ ತನ್ನವರನ್ನು ತನ್ನಿಂತ ದೂರವಿಡುವ 'ಈಕ್ಯಾಡ್' ಮೇಲೆ ಮಗುವಿಗೆ ಎಲ್ಲಿಲ್ಲದ ದ್ವೇಷ, ತಿರಸ್ಕಾರ.

ಸಾಯಂಕಾಲ ತಾಯಿ ಮನೆಗೆ ಮರಳಿದ ಮೇಲೆ, ಕಪ್ಪು ಹಲಗೆಯ ಮೇಲೆ ವರ್ಣಾಕ್ಷರ ಬರೆಯಲು ನಯವಾಗೇ ಹೇಳಿದರೂ, ಖಡು ಎಳೆದಾಗ ಅದು ಚೀಂ, ಚೀಂ ಗುಟ್ಟುವ ಸ್ವರಕ್ಕೆ ಮಗು ಗಾಢವಾಗಿ ಪ್ರತಿಕ್ರಿಯಿಸುವ ಬಗೆಗೆ, ಕವಿ-ಸಾಹಿತಿ ಎಂದುಕೊಳ್ಳುವ ನಾವೂ ಬೆಪ್ಪಾಗಬೇಕು.

ಅಪ್ಪಾ.... ಬರೇ ಬರೇ .....ಅ ...ಅ ....ಅ ...ಅ .....ಬರೀ

ಅಂತೀಯಲ್ಲಾ......

ಬರಿಯಾಕ ನಂಗೇನೂ ಬ್ಯಾಸ್ರಿಲ್ಲಾ

ಆದ್ರ.....

'ಅ' ಅಂತ ಬಂದ ಗೀರ್ ಎಳದ್ರ..... ಸಾಕ

ಇದು ಬರೇ ಈ ಕ್ಯಾಡ್ ...... ಈ ಕ್ಯಾಡ್ ಅಂತೈತಲ್ಲಾ.....?!

ಏನಂತೀರಿ ಈ ಅದ್ಭುತ ಚುಟುಕಿಗೆ ! ಮಗುವಿನ ಗಾಢ ಅಭಿವ್ಯಕ್ತಿಗೆ !! ಅನುಸೂಯ ಸಿದ್ಧರಾಮ ಜೊತೆಗೆ ನನ್ನ ಎರಡೆ ಎರಡು ಹನಿಗಳು

ಮೇಕಪ್

'ಛೇ...... ಈ ವಯಸ್ಸಲ್ಲೂ ನಿಮಗೆ ಮೇಕಪ್ಪೆ?

ಬೇಗ ಬನ್ನಿ' ಎಂದರವರು

'ಅರೆ, ನಿಮ್ಮೆಲ್ಲರಿಗಿಂತ ಅದರ ಅಗತ್ಯ

ಇರುವುದೇ ಹೆಚ್ಚು ನನಗೆ ......

ಈ ..... 'ಅಪ್' ಎಲ್ಲ, ತಪ್ಪಿಲ್ಲದಂತೆ

'ಒಪ್ಪ' ಆಗಬೇಕಲ್ಲ .....' ಎಂದೆ ನಾನು

ಕಣ್ಣಿಗೆ ಕನ್ನಡಕ .....

ಕಿವಿಗೆ ಶ್ರವಣಾಭರಣ

ಕೃತಕ ದಂತದ ಸಾಲು

ಮಾತು ಆಡುವ ಮೊದಲು

ಇಷ್ಟಿಲ್ಲದೆ, ನಿಮ್ಮೊಂದಿಗೆ ಬರುವುದು ಹೇಗೆ?

ಇತಿ-ಮಿತಿ

ಪ್ರಿಯೆ

ನಿನ್ನ ನೆನಪು

ಮಿತವಾಗಿದ್ದರೆ

ಎನರ್ಜಿ......

'ಮಿತಿ'

ಮೀರಿರೆ

ಎನಸ್ತೀಸಿಯಾ.....

ಲೋಕಸಭೆಯ ಚುನಾವಣೆ ಸಮಯದಲ್ಲಿ ಚಂಪಾ ಅವರು ಬಳಸಿದ ಚುಟುಕುಗಳು ಅರ್ಥಪೂರ್ಣವಾಗಿವೆ.

ಬೀಕೇಸಿ-ಡೀಕೇಸಿ

ಭೂಕೈಲಾಸದಲ್ಲಿ ವಿಪ್ರರಿಗೆ

ಸೀಟು ನೀಡದ ನೀವು

ಹೋಗುತ್ತಿರಿ ನರಕಕ್ಕೆ - ಎಂದ ಬೀಕೇಸಿ

ವೈಕುಂಠವೇ ನಿಮಗೆ ವಾಸಿ

ಅಂಥ ಅಲ್ಲಿ ಕಾದಿರಿಸಿದ್ದೇವೆ

ನಿಮಗಾಗಿ ಸಿಂಹಾಸನ - ಎಂಬ ಡೀಕೇಸಿ.

ಮೊಯ್ಲಿ ಮಾತ-ಮೌನ

ನಮ್ಮ ಪರವಾಗಿ ಮಾತಾಡೆಂದರ

ಮೊಯ್ಲಿ ಮಾತಾಡಿ ಕೈಯೊಡ್ಡಿದರು

'ನೀಡಿರಿ ಬೆಳ್ಳಿಯ ಲೋಟಾ'

ಮಾತು ಹೆಚ್ಚಾಯಿತು ಅಂದರು ಬಡಿದರು

ಕೊರಳಿಗೆ ಬಂಗಾರದ ಗೂಟಾ

ಚಂಪಾ ಅವರ ಚುಟುಕುಗಳಲ್ಲಿ ಶ್ಲೇಷೆ ಅರ್ಥಪೂರ್ಣವಾಗಿ ಬಳಕೆಯಾಗಿದೆ. ಇಂತಹ ಚುಟುಕುಗಳಲ್ಲಿ ಬಳಕೆಯಾಗುವುದು ದೇಸಿ ಶೈಲಿ. ಅದು ಸರಳ ಮತ್ತು ನೇರವಾಗಿದೆ. ಹಾಸ್ಯ ವಿಡಂಬನೆ, ನೀತಿಗೆ ಚುಟುಕುಗಳ ಅಭಿವ್ಯಕ್ತಿ ತಂತ್ರ ಪರಿಣಾಮಕಾರಿಯಾಗಿದೆ. ಇಲ್ಲಿಯವರೆಗೆ ಚುಟುಕುಗಳ ಭಾಷಾ ಸ್ವರೂಪವನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡಲು ಪ್ರಯತ್ನಿಸಲಾಗಿದೆ.

ಅಧ್ಯಾಯ ೮

ಸಮಾರೋಪ

೮

ಸಮಾರೋಪ

ಕನ್ನಡ ಕಾವ್ಯದ ದೃಷ್ಟಿಯಿಂದ ನೋಡಿದಾಗ ಚುಟುಕು ಸಾಹಿತ್ಯಕ್ಕೆ ಮಹತ್ವದ ಸ್ಥಾನವಿದೆ. ಇದು ತನ್ನದೇ ಆದ ವಿಶಿಷ್ಟತೆಯನ್ನು ಉಳಿಸಿಕೊಂಡ ಕಾವ್ಯವಾಗಿದೆ. ಒಂದು ಕಾಲಘಟ್ಟದ ಮತ್ತು ಪ್ರದೇಶದ ಸತ್ವವನ್ನು ಮೈಗೂಡಿಸಿಕೊಂಡು ಈ ನೆಲದ ಸಾಂಸ್ಕೃತಿಕ ಒತ್ತಡದಲ್ಲಿ ಅರಳಿದ ಕಾವ್ಯವಾಗಿದೆ. ಕನ್ನಡ ಕಾವ್ಯದ ಬಿಕ್ಕಟ್ಟಿನ ಸಂದರ್ಭದಲ್ಲಿ ಚುಟುಕು ಸಾಹಿತ್ಯ ಮಹತ್ವದ ಹೆಜ್ಜೆಯನ್ನಿಟ್ಟಿದೆ. ಕಾಲದ ಅಗತ್ಯಕ್ಕೆ ತಕ್ಕಂತೆ ವೈವಿಧ್ಯಮಯವಾದ ಪ್ರಯೋಗಗಳ ಮೂಲಕ, ಹೊಸದಾದ ಚಿಂತನೆಯ ಮೂಲಕ ಕನ್ನಡ ಕಾವ್ಯದಲ್ಲಿ ಭಿನ್ನವಾಗಿ ಕಾಣಿಸಿಕೊಂಡಿದೆ. ಈ ಹೊಸ ಹೆಜ್ಜೆಗಳನ್ನೇ ಪ್ರತ್ಯೇಕ ಅಧ್ಯಾಯಗಳಲ್ಲಿ ವಿಶ್ಲೇಷಿಸಲಾಗಿದೆ.

ಭಾಷೆ ಮತ್ತು ಛಂದಸ್ಸಿನ ದೃಷ್ಟಿಯಿಂದ ಚುಟುಕು ಸಾಹಿತ್ಯ ಹೊಸ ಪ್ರಯೋಗಗಳನ್ನು ಮಾಡಿದೆ. ರೂಢಿಯಲ್ಲಿರುವ ಗ್ರಾಂಥಿಕ ಕನ್ನಡ ಭಾಷೆಯ ಮೂಲಕವೇ ಕಾವ್ಯ ಸೃಷ್ಟಿ ಮಾಡುವ ಸವಾಲನ್ನು ದಿಟ್ಟವಾಗಿ ಎದುರಿಸಿದೆ. ಕಾವ್ಯಾನುಭವಕ್ಕೆ ತಕ್ಕಂತೆ ಭಾಷೆಯನ್ನು ವೈವಿಧ್ಯಮಯವಾಗಿ ದುಡಿಸಿಕೊಳ್ಳುವ ಮೂಲಕ ಸಾರ್ಥಕವಾದ ಕವನಗಳನ್ನು ನೀಡಿದೆ. ಇಲ್ಲಿನ ದೇಸಿ ಲಯಗಳ ಸಹಾಯದಿಂದ ಭಾಷೆಯನ್ನು ನವೀನಗೊಳಿಸಿದೆ. ಜನಪದ ಸಾಹಿತ್ಯದ ಪ್ರಮುಖ ಅಂಶಗಳಾದ ನಾಟಕೀಯತೆ, ರೋಚಕತೆ, ಶ್ಲೇಷೆ, ಧ್ವನಿಶಕ್ತಿಯನ್ನೇ ಬಳಸಿಕೊಂಡು ಕಾವ್ಯಕ್ಕೆ ಹೊಸ ರೂಪವನ್ನು ಕೊಟ್ಟಿದೆ.

ಪ್ರಕೃತಿ ಬಣ್ಣನೆಯಲ್ಲಿಯೂ ಭಿನ್ನತೆ ಇದೆ. ಪ್ರಕೃತಿಯನ್ನು ದೈವತ್ವಕ್ಕೇರಿಸದೆ ಮಾನವನ ಸಹಜ ಬದುಕಿನ ಚೈತನ್ಯಶೀಲತೆಯ ಕುರುಹಾಗಿ ಪ್ರಕೃತಿ ಬಂದಿದೆ. ಪ್ರಕೃತಿಯ ಇರುವಿಕೆ ಮನುಷ್ಯನ ಮಾನಸಿಕ ಸ್ಥಿತಿಯೂ ಹಾಗು ಕಲ್ಪನೆ ಚುಟುಕು ಸಾಹಿತ್ಯ ಕಾವ್ಯದಲ್ಲಿ ಸಿಗುತ್ತದೆ. ಚುಟುಕುಗಳ ಸಾಮಾಜಿಕ ಪ್ರಜ್ಞೆಯಲ್ಲೂ ಹೊಸ ದೃಷ್ಟಿಕೋನವಿದೆ. ಅಭಿಜಾತ ಕಾವ್ಯದ ಮಾದರಿಯಲ್ಲಿ ಮತ್ತು ರೂಪಕಗಳ ಬಳಕೆಯ ಮೂಲಕ ಸಾಮಾಜಿಕ ಪ್ರಜ್ಞೆ ಚುಟುಕು ಕಾವ್ಯದಲ್ಲಿ ಕಾಣಿಸಿಕೊಂಡಿದೆ. ಹಾಗಾಗಿ ವಾಚಾಳಿತನದಿಂದ ಕಾವ್ಯ ಕೇವಲ ಹೇಳಿಕೆಯಾಗುವ ಅಪಾಯದಿಂದ ಪಾರಾಗಿದೆ. 'ಸಾಮಾಜಿಕ ಪ್ರಜ್ಞೆ'ಯ ಚುಟುಕುಗಳಲ್ಲಿ ಸಾಮಾಜಿಕ ಆಕ್ರೋಶವನ್ನು ಮಂದ್ರಸ್ವರದಲ್ಲಿ ಸೂಚಿಸುವ ದೃಷ್ಟಿಕೋನವಿದೆ. ಕೆಳವರ್ಗದ ಜನರ

ನೋವುಗಳನ್ನು, ಸಮಸ್ಯೆಗಳನ್ನೂ, ಅನುಕಂಪ, ವಿಷಾದದಿಂದ ನೋಡುವ ಮೂಲಕ ಅದಕ್ಕೆ ಮಾನವೀಯವಾಗಿ ಸ್ಪಂದಿಸುವ ಕಾಳಜಿಯನ್ನು ಚುಟುಕು ಕವಿಗಳು ವ್ಯಕ್ತಪಡಿಸಿದ್ದಾರೆ. ಈ ಕಾಳಜಿ ಕೇವಲ ಜಾತಿಯ ಮಟ್ಟಕ್ಕೆ ಸೀಮಿತವಾಗದೇ ಪ್ರಾದೇಶಿಕ ನೆಲೆಯಲ್ಲೂ ಕಾಣಿಸಿಕೊಳ್ಳುವ ಮೂಲಕ ವೈಶಾಲ್ಯತೆಯನ್ನು ಪಡೆದುಕೊಂಡಿದೆ. ಹೀಗೆ ಚುಟುಕು ಸಾಹಿತ್ಯದ ನೆಲೆಗಳನ್ನು ಬೇರೆ ಬೇರೆ ವಿಷಯಗಳ ಆಧಾರವನ್ನಿಟ್ಟುಕೊಂಡು ಚರ್ಚಿಸಿದಾಗ ಕಂಡುಬರುವ ಚುಟುಕು ಸಾಹಿತ್ಯದ ನೆಲೆಗಳನ್ನು ಸ್ಥೂಲವಾಗಿ ಹೀಗೆ ಗ್ರಹಿಸಬಹುದು.

ಮೊದಲನೆಯದಾಗಿ ಭಾಷೆಯಲ್ಲಿ ನವೀನತೆಯನ್ನು ತಂದದ್ದು ಚುಟುಕು ಕಾವ್ಯದ ಮುಖ್ಯ ವಿಶಿಷ್ಟತೆಯಾಗಿದೆ. ಚುಟುಕು ಕವಿಗಳು ಹೆಚ್ಚಾಗಿ ತಮ್ಮ ಪ್ರದೇಶದ ಆಡುಭಾಷೆ ಬಳಸಿದರು. ಹೀಗಿದ್ದರೂ ಕೂಡ ಕನ್ನಡದ ಗ್ರಾಂಥಿಕ ಭಾಷೆಗೆ ಇಲ್ಲಿ ಜಾನಪದ ಮಟ್ಟುಗಳ ಲಯ, ನುಡಿಗಟ್ಟು, ಅದರ ಸ್ವರೂಪವನ್ನು ಕಸಿಮಾಡುವ ಮೂಲಕ ಚುಟುಕು ಕವಿಗಳು ಹೊಸ ಭಾಷೆಯನ್ನು ಸೃಷ್ಟಿಸಿದರು. ಮುಖ್ಯ ದೇಸಿ ಲಯಗಳಾದ ಜನಪದದ ಲಯಗಳನ್ನು ಸಮರ್ಥವಾಗಿ ಬಳಸಿಕೊಳ್ಳುವ ಮೂಲಕ ಚುಟುಕು ಕವಿಗಳು ಕಾವ್ಯಕ್ಕೆ ಹೊಸತನ ತಂದರು. ದೇ.ಜ.ಗೌ, ಸಿ.ಪಿ.ಕೆ. ಮೊದಲಾದವರ ಕವನಗಳಲ್ಲೆಲ್ಲ ಇದನ್ನು ಕಾಣಬಹುದಾಗಿದೆ. ಈ ನವೀನವಾದ ಭಾಷಾಸೃಷ್ಟಿಯಿಂದಾಗಿಯೇ ಉಳಿದ ಪ್ರದೇಶದ ಕಾವ್ಯಕ್ಕಿಂತ ಚುಟುಕು ಕಾವ್ಯ ಭಿನ್ನವಾಗಿ ಕಾಣುತ್ತದೆ. ಉದಾಹರಣೆ : ಚುಟುಕುಗಳು ಸಾಮಾನ್ಯ ಮನುಷ್ಯನ ಅನುಭವ ಗಳಿಗೆ ಆಡುಮಾತಿನ ಬಳಕೆಗೆ ಒತ್ತುಕೊಟ್ಟವು. ಇದರಿಂದ ಕಾವ್ಯವನ್ನು ಪ್ರಜಾಪ್ರಭುತ್ವೀಕರಣಗೊಳಿಸಿದ ರೀತಿಯ ಬಿಡಿಘಟಕಗಳಿವು.

ನೆಗಡಿಬಂದಂತಾಗಿ ನಾಸಿಕ ಪುಡಿಯ ಮೂಗಿ
ಗೇರಿಸುತ್ತ ಜೋರಾಗಿ ಅಜ್ಜ ಸೀತ
ಅದರ ರಭಸಕ್ಕೆ ಹೊರಸುಳಿದು ಬಿತ್ತು
ಸಿಂಬಳಗೊನ್ನಿ, ಕೃತಕ ಹಲ್ಲುಗಳ ಸಹಿತ

ಎಂ.ಅಕಬರ್ ಅಲಿಯವರ 'ಅಜ್ಜನ ಸೀನು' ಈ ಚುಟುಕು ತುಂಬ ವಿಡಂಬನೆಯಿಂದ ಕೂಡಿದೆ. ಇದರಂತೆ ನಯಸೇನ, ಸರ್ವಜ್ಞರ ಕಾವ್ಯಗಳಲ್ಲಿ ಇಂತಹ ನಾಡುನುಡಿಗಳಿವೆ.

ಎರಡನೆಯದಾಗಿ ಕಾವ್ಯಾನುಭವವನ್ನು ನಾದಮಯತೆಯಿಂದ ಅರ್ಥದ ನೆಲೆಗೆ ಒಯ್ದದ್ದು ಚುಟುಕು ಕಾವ್ಯದ ಮುಖ್ಯ ನೆಲೆಯಾಗಿದೆ. ಅದುವರೆಗಿನ ಕಾವ್ಯ ಅಂದರೆ ನವೋದಯದ ಕಾವ್ಯದ ಮುಖ್ಯ ಗುಣವೆಂದರೆ ನಾದಮಯತೆಯೇ ಆಗಿತ್ತು. ಇದಕ್ಕೆ ಕಾರಣವೂ ಇತ್ತು. ಉತ್ತರ ಕರ್ನಾಟಕದಲ್ಲಿ ಬೇಂದ್ರೆಯಂತಹ ಕವಿಗಳು ಆಡುನುಡಿಯನ್ನೇ ಕಾವ್ಯವನ್ನಾಗಿ ಪರಿವರ್ತಿಸಿದರು. ಉತ್ತರ ಕರ್ನಾಟಕದಲ್ಲಿ ಮಾತಿನ ರೂಪದಲ್ಲಿರುವ ಕನ್ನಡಕ್ಕೆ ಒಂದು ರೀತಿಯ ಸೊಗಡು, ನಾದಮಯತೆ ಇತ್ತು. ಹಾಗಾಗಿ ಮಾತನ್ನೇ ಕಾವ್ಯಾನುಭವವನ್ನಾಗಿ ಪರಿವರ್ತಿಸುತ್ತಿದ್ದಂತಹ ಬೇಂದ್ರೆಯವರಿಗೆ ಕಾವ್ಯಾನುಭವದಲ್ಲಿ ನಾದಮಯತೆಯನ್ನು

ತರಲು ಕಷ್ಟವಿರಲಿಲ್ಲ. ಕಾವ್ಯಾನುಭವದ ಉತ್ಕರ್ಷ ಸ್ಥಿತಿಯೇ ಬ್ರಹ್ಮಾನಂದ ಎಂಬ ಕಲ್ಪನೆ ಅದುವರೆಗಿನ ಕಾವ್ಯದ ಕಲ್ಪನೆಯಾಗಿತ್ತು. ಇದಕ್ಕೆ ಭಿನ್ನವಾದದ್ದೇ ಚುಟುಕು ಕಾವ್ಯದ ಸಾಧನೆಯಾಗಿದೆ. ಪ್ರಾದೇಶಿಕ ಸೊಗಡು ಆಡುಭಾಷೆಯಲ್ಲಿತ್ತು. ಕಲಿತು ಬಂದ ಭಾಷೆಯಲ್ಲಿಯೇ ಸೊಗಡನ್ನು ತರಲು ಸಾಧ್ಯವಿರಲಿಲ್ಲ. ಮಾತ್ರವಲ್ಲದೇ ಕುವೆಂಪು ಅವರಂತೆ ಸಂಸ್ಕೃತಭೂಯಿಷ್ಟವಾಗಿ ಬರೆಯಲೂ ಸಾಧ್ಯವಿರಲಿಲ್ಲ. ಯಾಕೆಂದರೆ ಮುದ್ದಣ ಹಳೆಯ ಪರಂಪರೆಗೆ ನಮಸ್ಕಾರ ಹೊಡೆದು ಹೊಸದಾರಿಯನ್ನು ತೋರಿಸಿದ್ದ. ಹೀಗಾಗಿ ಚುಟುಕು ಕವಿಗಳು ನಾದಮಯತೆಯ ಕೊರತೆಯನ್ನು ತಪ್ಪಿಸಲು ಕಾವ್ಯವನ್ನು ನಾದದಿಂದ ಅರ್ಥದ ನೆಲೆಗೆ ಒಯ್ದರು. ಕಾವ್ಯದಲ್ಲಿ ನಾದವೇ ಪ್ರಾಮುಖ್ಯವಲ್ಲ, ಅರ್ಥದ ಹುಡುಕಾಟವೇ ಮುಖ್ಯ. ನಾದ ಕೇವಲ ಸೌಂದರ್ಯಾನುಭೂತಿಯಲ್ಲಿಯೇ ಮೈಮರೆಸುವ ಮೂಲಕ ಅನುಭವದ ಶೋಧನೆಗೆ ಅಡ್ಡಿಯಾಗುತ್ತದೆ, ಹಾಗಾಗಿ ನಿಜವಾಗಿಯೂ ಅನುಭವದ ಶೋಧನೆಯಾಗಬೇಕಾದರೆ ಅಲ್ಲಿ ನಾದಕ್ಕಿಂತಲೂ ಅರ್ಥದ ನೆಲೆ ಮುಖ್ಯವಾಗಲೇಬೇಕು ಎಂಬ ವಿಚಾರವನ್ನು ಇಟ್ಟುಕೊಂಡ ಚುಟುಕು ಕವಿಗಳು ಕಾವ್ಯವನ್ನು ನಾದದ ನೆಲೆಯಿಂದ ಅರ್ಥದ ನೆಲೆಗೆ ಕೊಂಡೊಯ್ದರು. ಇದು ಭಾಷೆಯಲ್ಲಿಯೇ ಆದ ಎರಡನೆಯ ಘಟ್ಟವೂ ಆಗಿದೆ. ಈ ದಾರಿಯೇ ಚುಟುಕು ಕಾವ್ಯ ಹೊಸ ಸ್ವರೂಪವನ್ನು ಪಡೆದುಕೊಳ್ಳುವುದಕ್ಕೆ ಕಾರಣವಾಯಿತೆನ್ನಬಹುದು. ಆಡುಭಾಷೆಯನ್ನು ಅರ್ಥಪೂರ್ಣವಾಗಿ ಚುಟುಕು ಕವಿಗಳು ಬಳಸಿದ್ದಾರೆ. ಉದಾಹರಣೆ : ಜಿ.ಪಿ.ರಾಜರತ್ನಂ ಅವರು ಹಳೆ ಮೈಸೂರಿನ ವಿಶಿಷ್ಟ ಬಗೆಯ ಕನ್ನಡವನ್ನು ಅರ್ಥಪೂರ್ಣವಾಗಿ ಬಳಸಿದ್ದಾರೆ.

ಅರ್ಥ ಮಾಡ್ಕಂಡ್ ಇಂಗಲ್ಲ್ ಇಂಗೆ
ಅನ್ನೋರ್ ಮಾತು ಗಂಗೆ
ಅರ್ಥ ಆಗ್ದಿದ್ರು ಸಿಕ್ದಂಗ್ ಅನ್ನಾದ್
ಚಂದ್ರನ್ ಮುಕ್ಕ್ ಉಗದಂಗೆ

ಐದು ಮಾತ್ರೆಗಳ ಲಯದ ಚತುಷ್ಪದಿಯನ್ನು ಚಾಲ್ತಿಗೆ ತಂದರು. ಈ ಕ್ರಮವನ್ನೇ ಶಿಶು ಸಂಗಮೇಶ, ಸಿ.ಪಿ.ಕೆ, ವಿ.ಜಿ.ಭಟ್ಟ ಮುಂತಾದವರು ಅನುಸರಿಸಿದ್ದೂ ಉಂಟು. ಇತ್ತೀಚೆಗೆ ಈ ಮಿತಿಯನ್ನು ದಾಟಿದ ಚುಟುಕುಗಳ ವಿವಿಧ ಛಂದೋವಿನ್ಯಾಸದಲ್ಲಿ ಪ್ರಾಸಾನುಪ್ರಾಸಗಳ ಬಂಧದಲ್ಲಿ ಹನಿಗವನಗಳಾಗಿ, ಮಿನಿಗವನಗಳಾಗಿ ಜನಪ್ರಿಯವಾಗುತ್ತಿವೆ.

ಮೂರನೆಯದಾಗಿ ಕಾವ್ಯದಲ್ಲಿ ಹಾಸ್ಯ, ನಾಟಕೀಯತೆಯನ್ನು ತಂದದ್ದು ಚುಟುಕು ಕಾವ್ಯದ ಮೂರನೆಯ ವಿಶಿಷ್ಟತೆಯಾಗಿದೆ. ಇದು ಚುಟುಕು ಕಾವ್ಯದ ಪ್ರಯೋಗಶೀಲತೆಯ ಮೂರನೆಯ ಹಂತವೂ ಹೌದು. ಕಾವ್ಯಾನುಭವವನ್ನು ನಾದದ ನೆಲೆಯಿಂದ ಅರ್ಥದ ನೆಲೆಗೆ ಕೊಂಡೊಯ್ಯುವುದಕ್ಕೆ ಚುಟುಕು ಕವಿಗಳು ಈ ನಾಟಕೀಯತೆಯನ್ನು ಕಾವ್ಯದಲ್ಲಿ ತಂದರು. ಈ ನಾಟಕೀಯತೆ ಜನಪದ ಸಾಹಿತ್ಯದ

ಮೂಲಕವಾಗಿ ಕಾವ್ಯಕ್ಕೆ ಬಂತು. ಅಂದರೆ ಅದುವರೆಗಿನ ಕಾವ್ಯದಲ್ಲಿ ನಾಟಕೀಯತೆ ಇರಲಿಲ್ಲವೆಂದಲ್ಲ. ಹಳಗನ್ನಡ ಕಾವ್ಯದಲ್ಲಿಯೇ ನಾಟಕೀಯ ಗುಣ ಕಂಡುಬರುತ್ತದೆ. ಆದರೆ ಇದರಲ್ಲಿ ಸೂಕ್ಷ್ಮವಾದ ವ್ಯತ್ಯಾಸವಿದೆ. ಅದುವರೆಗೆ ಕಾವ್ಯದಲ್ಲಿದ್ದ ನಾಟಕೀಯತೆಯೆಂದರೆ ನೇರವಾದ ಸಂಭಾಷಣೆಯ ರೂಪದಲ್ಲಿತ್ತು. ಪಾತ್ರ-ಪಾತ್ರಗಳ ಸಂಭಾಷೆಯ ಮೂಲಕ ಪಾತ್ರದ ಭಾವವನ್ನು, ವ್ಯಕ್ತಿತ್ವವನ್ನು ಅದರ ಅಂತಸ್ಸತ್ವವನ್ನು ಹೊರಹಾಕುವ ಗುಣವನ್ನು ಅದುವರೆಗಿನ ಕಾವ್ಯದಲ್ಲಿನ ನಾಟಕೀಯ ಗುಣದಲ್ಲಿ ಕಾಣುತ್ತೇವೆ. ಇದನ್ನು ರನ್ನನ ಕಾವ್ಯದಲ್ಲಿ ವಿಶೇಷವಾಗಿ ಕಾಣಬಹುದಾಗಿದೆ. ಆದರೆ ಜನಪದ ಸಣ್ಣಾಟದಲ್ಲಿ ನಾಟಕೀಯ ಶೈಲಿಯೇ ಬೇರೆ. ಅದು ಮೇಲ್ನೋಟಕ್ಕೆ ಅಸಹಜವಾಗಿ ಕಾಣಿಸುವಂತಹುದು. ಆದರೆ ಆಂತರಿಕವಾಗಿ ನೋಡಿದಾಗ ಮಾತ್ರ ಸುಸಂಬದ್ಧವಾದ ಸಂಬಂಧ ಅದರಲ್ಲಿ ಕಾಣಿಸುತ್ತದೆ. ಪಾತ್ರಧಾರಿಗಳು ಕುಣಿಯುವ ವೇದಿಕೆ ಏಕಕಾಲದಲ್ಲಿ ದೇವಲೋಕದ, ಭೂಲೋಕದ, ಪಾತಾಳದ ವೇದಿಕೆಯೂ ಆಗುತ್ತಿರುತ್ತದೆ. ಹಾಗೆಯೇ ಪಾತ್ರಧಾರಿಗಳು ಆಡುವ ಮಾತೂ ಕೂಡಾ ವಿಶಿಷ್ಟತೆಯನ್ನು ಹೊಂದಿದೆ. ಇದಕ್ಕಿಂತಲೂ ಮುಖ್ಯವಾಗಿ ಶ್ರೀಕೃಷ್ಣ ಪಾರಿಜಾತದಲ್ಲಿ ಕೃಷ್ಣ-ದೂತರ ಅಭಿನಯವನ್ನು ಗಮನಿಸಬಹುದು. ಕೃಷ್ಣ ಕುಣಿಯುತ್ತಿರುತ್ತಾನೆ. ದೂತ ಅದನ್ನು ಅನುಕರಿಸುತ್ತಿದ್ದಾನೆ. ಆದರೆ ಸೂಕ್ಷ್ಮವಾಗಿ ಕೃಷ್ಣ, ದೂತರ ವ್ಯಕ್ತಿತ್ವದ ಟೊಳ್ಳುತನವನ್ನು ಅಣಕಿಸುತ್ತಿರತ್ತಾನೆ. ಈ ರೀತಿಯ ವಿರುದ್ಧ ಅರ್ಥಗಳನ್ನು ಹೊಮ್ಮಿಸುವ ನಾಟಕೀಯತೆ ಜನಪದದಲ್ಲಿದೆ. ಗ್ರಾಂಥಿಕ ಭಾಷೆಗೆ ಹೊಸ ರೂಪವನ್ನು ಕೊಡುವ ಸಲುವಾಗಿ, ಗ್ರಾಂಥಿಕ ಭಾಷೆಯಲ್ಲಿ ಸಾಧ್ಯವಾಗದ ನಾದದ ನೆಲೆಯ ಕೊರತೆಯನ್ನು ತುಂಬಿಸುವ ಸಲುವಾಗಿ, ಕಾವ್ಯಾನುಭವವನ್ನು ಅರ್ಥದ ನೆಲೆಗೆ ಕೊಂಡೊಯ್ಯು ವುದಕ್ಕಾಗಿ ಚುಟುಕು ಕವಿಗಳು ಈ ನಾಟಕೀಯತೆಯನ್ನು ಕಾವ್ಯಕ್ಕೆ ತಂದರು. ಉದಾಹರಣೆ: ಹಾಸ್ಯದ ಅಭಿವ್ಯಕ್ತಿ ಎರಡು ರೀತಿ ಸಾಧ್ಯ. ಮೊದಲನೆಯ ಸಾಂಸಾರಿಕ ವಲಯದೊಳಗೇ ಸಂಕೋಚದ ಎಲ್ಲೆ ದಾಟದೆ. ಅದರಾಚೆ ಈಚೆ ಸುಳಿದಾಡುತ್ತಲೇ ವ್ಯಕ್ತವಾಗುವ ಬಗೆ, ಮತ್ತೊಂದು ನಮ್ಮ ಜಾನಪದದಲ್ಲಿ ಕಂಡುಬರುವ ನಿಸ್ಸಂಕೋಚ. ಚುಟುಕು ಸಾಹಿತ್ಯದಲ್ಲಿ ಮೊದಲನೆಯ ರೀತಿಗೆ ಅತ್ಯುತ್ತಮ ನಿದರ್ಶನ. ಹಾಸ್ಯದ ಚಿತ್ರಣವನ್ನು ಔಚಿತ್ಯ ಮೀರದೆ ತುಂಬ ಸೊಗಸಾಗಿ ತಂದಿದ್ದಾರೆ. ಚುಟುಕು ಕವಿಗಳು.

ಇದು-ಅದು
ಬೆಚ್ಚಗೆ ಮಾಡಿ
ಕುಡಿಯುವುದು
ಆಕಳ ಹಾಲು,
ಕುಡಿದರೆ, ಬೆಚ್ಚಗೆ ಮಾಡುವುದು
ಆಲ್ಕೋಹಾಲು

ಎಚ್.ಡುಂಡಿರಾಜ್

"ಮೇಳ"

ಇದ್ದವರು ಇಲ್ಲದವರು

ಎಲ್ಲರೂ ಬಂದರು

ಸಾಲವೇಳದಲ್ಲಿ,

ಇದ್ದ ಕೆಲವರೂ

ಎದ್ದು ಹೋದರು,

ಕವಿ ಮೇಳದಲ್ಲಿ

ಬಿ.ಆರ್.ಲಕ್ಷ್ಮಣರಾವ್

ಇದರಂತೆ, ಅಕ್ಬರ್ ಅಲಿ, ಚಂಪಾ ಎಚ್ .ಎ.ಭಿಕ್ಷಾವರ್ತಮಠ ಇವರ ಚುಟುಕುಗಳು ತುಂಬ ಹಾಸ್ಯ ವಿಡಂಬನೆಯಿಂದ ಕೂಡಿವೆ. ಅಲ್ಲಿಯೂ ಸಾಮಾಜಿಕ ಪ್ರಜ್ಞೆ ಅಂತರ್ಗತವಾಗಿದೆ ಎಂಬುದು ಗಮನಿಸಬೇಕಾದ ಅಂಶವಾಗಿದೆ.

ನಾಲ್ಕನೆಯದಾಗಿ ಹೊಸ ದೃಷ್ಟಿಕೋನವೊಂದರ ದರ್ಶನ ಚುಟುಕು ಕಾವ್ಯದ ಮುಖ್ಯ ನೆಲೆಯಾಗಿದೆ. ಅದು ವಾಸ್ತವತಾವಾದದ ನೆಲೆಯಿದ್ದು, ಈ ವಾಸ್ತವತಾವಾದ ರೋಮ್ಯಾಂಟಿಸಂಗೆ ವಿರುದ್ಧವಲ್ಲ. ಯಾವುದೇ ವಿಷಯವನ್ನು ದೈವತ್ವಕ್ಕೇರಿಸದೆ ಅದನ್ನು ಸಹಜ ಬದುಕಿನ ಜೊತೆಗೆ ಹೊಂದಿಸಿ ನೋಡುವ ಪ್ರಯತ್ನವನ್ನು ಚುಟುಕು ಕವಿಗಳು ಮಾಡಿದರು. ಉಳಿದ ಕಾವ್ಯದಂತೆ ಭಾವುಕತೆಗೆ ಒಳಗಾದ ಕಾವ್ಯ ಇಲ್ಲಿಯದ್ದಲ್ಲ. ಬದಲಾಗಿ ವಾಸ್ತವತೆಗೆ ಹೆಚ್ಚು ಬದ್ಧವಾದ ಕಾವ್ಯ ಚುಟುಕು ಕಾವ್ಯದ್ದು. ಮುಖ್ಯವಾಗಿ ನಿಸರ್ಗ ದರ್ಶನದಲ್ಲಿ ಈ ಒಂದು ದೃಷ್ಟಿಕೋನವನ್ನು ಕಾಣಬಹುದು. ನಿಸರ್ಗವು ಚುಟುಕು ಕವಿಗಳಿಗೆ ಅರಾಧನೆಯ ವಸ್ತುವಾಗಿರಲಿಲ್ಲ. ಅದು ಪ್ರೀತಿಯ ವಸ್ತುವಾಗಿದೆ. ಅದು ಕಟ್ಟುಕಟ್ಟಳೆಯಿಂದ ಮುಕ್ತವಾದ ಸಹಜ ಬದುಕನ್ನು ಕೊಡುವ ತಾಣವೂ ಆಗಿದೆ. ಚುಟುಕು ಕವಿಗಳಿಗೆ. ಹೀಗಾಗಿ ಒಂದು ನೆಲೆಯಲ್ಲಿ ವಾಸ್ತವವಾದಿಗಳಾಗಿ ಕಂಡರೆ, ಇನ್ನೊಂದು ದೃಷ್ಟಿಯಿಂದ ನಿಜವಾದ ರೋಮ್ಯಾಂಟಿಕ್ ಧೋರಣೆ ಇಲ್ಲಿನ ಕಾವ್ಯದ ಮುಖ್ಯ ನೆಲೆಯಾಗಿದೆ. ಜಿ.ಪಿ.ರಾಜರತ್ನಂ, ಎಸ್.ವಿ.ಪರಮೇಶ್ವರಭಟ್ಟ, ಇವರ ಚುಟುಕುಗಳಲ್ಲಿ ಈ ದೃಷ್ಟಿಕೋನವನ್ನು ಕಾಣಬಹುದಾಗಿದೆ. ಬಿ.ಆರ್.ಲಕ್ಷ್ಮಣರಾವ್ ಚುಟುಕುದಲ್ಲಿಯೂ ಇದೇ ದೃಷ್ಟಿಕೋನವಿದೆ. ಉದಾಹರಣೆ : ಚುಟುಕು ಕವಿಗಳಲ್ಲಿ ಪ್ರತಿಭಟನೆ ಯಾವಾಗಲೂ ಅಬ್ಬರದ ಮಾತು ಗಳಲ್ಲಿ, ನಗಾರಿಯ ದನಿಯ ರೀತಿಯಲ್ಲಿ ಕಾಣಿಸಿಕೊಳ್ಳುವುದಿಲ್ಲ, ಅಥವಾ ಅದು ಭಾವಾವೇಶಕ ಅಭಿವ್ಯಕ್ತಿಯೂ ಅಲ್ಲ. ಪ್ರತಿಭಟನೆ ಎಂದರೆ ಏರಿದ ದನಿಯಲ್ಲಿ ಹೇಳುವುದಲ್ಲ. ಅಲ್ಲಿ ಹಾಸ್ಯಮಿಶ್ರಿತ ಸಾಮಾಜಿಕ ಎಚ್ಚರಿಕೆ ಇದೆ.

ಕತ್ತಲೆಯಲ್ಲಿ - ಬತ್ತಲೆ ತಿರುಗುತ್ತಿರುವ

ನಮ್ಮ ಶೀಲದ ಕನ್ನಿಕೆ

ಒಂದು ಬೆಳಕಿನ ಸೀರೆ
ತರುವುದಿದೆ
ಬರುವಿರಾ ?

ಚಂದ್ರಕಾಂತ ಕುಸನೂರು

ಜೀವನ ಕ್ಷಣ
ದೇಹವು ತೃಣ
ಭಟ್ಟರ ಬಾಯ್ ಅಂದಿತು
ಸನಿಯ ನಿಂತ ಗೂಳಿಗೆಂಥ
ಬುದ್ಧಿ ! ಮೇಯಬಂದಿತು.

ವಿ.ಜಿ.ಭಟ್ಟ

ಅವಳಿಗೆ ಸಮೀಪ ದೃಷ್ಟಿ
ಅವರ ವಿಸ್ತಾರಗಳು
ಕಾಣಲಿಲ್ಲ;
ಅವನಿಗೋ ದೂರ ದೃಷ್ಟಿ
ಅವಳ ವಿವರಗಳು
ಗೋಚರಿಸಲೇ ಇಲ್ಲ

ಬಿ.ಆರ್.ಲಕ್ಷ್ಮಣರಾವ್

ಇದರಂತೆ ಪಂಪಾದಿ ಚಂಪೂ ಕವಿಗಳು, ವಚನಾದಿ ನಡುಗನ್ನಡ ಕವಿಗಳಲ್ಲಿಯೂ ಇಂತಹ ಪ್ರತಿಭಟನೆ ವ್ಯಕ್ತವಾಗಿದೆ. ನವ್ಯ ಕಾವ್ಯ ಸಂದರ್ಭದಲ್ಲಿ ಚುಟುಕು ಕವಿಗಳ ಪ್ರತಿಭೆ ಇಡೀ ಕಾವ್ಯ ಆವರಣವನ್ನು ಆಕ್ರಮಿಸಿತು. ಬದುಕಿನ ಹಲವು ಸಮಸ್ಯೆಗಳಿಗೆ ಚುಟುಕು ಕವಿಗಳು ಉತ್ತರ ಕೊಟ್ಟರು. ಕವಿಯ ತಾತ್ವಿಕ ನಿಲುವು ಆತನ ಜೀವವಾನುಭವಗಳಿಂದ ರೂಪುಗೊಳ್ಳುತ್ತವೆ ಎಂಬುದಕ್ಕೆ ಚುಟುಕುಗಳು ಉತ್ತಮ ನಿದರ್ಶನಗಳಾಗಿವೆ.

ಐದನೆಯದಾಗಿ ಪರಂಪರೆ ಮತ್ತು ಆಧುನೀಕತೆಯ ಸಮನ್ವಯದಲ್ಲಿ ಕಾವ್ಯ ಬರೆದದ್ದು ಚುಟುಕು ಕಾವ್ಯದ ಮುಖ್ಯ ನೆಲೆಯಾಗಿದೆ. ಪರಂಪರೆಯನ್ನು ಇಲ್ಲಿನ ಕವಿಗಳು ಅಲ್ಲಿದ್ದಂತೆಯೆ ಸ್ವೀಕರಿಸಿಲ್ಲ. ಪರಂಪರೆಯಿಂದ ಅಗತ್ಯವಾದ ಅಂಶಗಳನ್ನು ಕರಗಿಸಿಕೊಂಡು ಚುಟುಕು ಕವಿಗಳು ಕಾವ್ಯ ರಚಿಸಿದ್ದಾರೆ. ಇಲ್ಲಿನ ಹೆಚ್ಚಿನ ಕವಿಗಳು ಕಾವ್ಯ ಸ್ವರೂಪದ ದೃಷ್ಟಿಯಿಂದ ಪರಂಪರೆಯ ನೆಲೆಯವರೇ, ಆದರೆ ವಿಚಾರದಲ್ಲಿ ಆಧುನಿಕರಾಗುತ್ತಾ ಹೋದರು. ಪರಂಪರೆಯಿಂದ ಬಂದ ಅಭಿಜಾತ ಕಾವ್ಯದ ಲಯ, ಬಂಧ, ಸ್ವರೂಪವನ್ನು ಬಳಸಿಕೊಂಡೇ ಹೊಸ ಅನುಭವವೊಂದಕ್ಕೆ ಕಾವ್ಯದ ರೂಪ ಕೊಡುವ ಪ್ರಯತ್ನವನ್ನು

ಇಲ್ಲಿನ ಕವಿಗಳು ಮಾಡಿದರು. ಎಸ್ .ವಿ.ಪಿ., ದೇ.ಜ.ಗೌ. ಮೊದಲಾದ ಕವಿಗಳ ಕವನಗಳಲ್ಲಿ ಈ ಪರಂಪರೆ ಮತ್ತು ಆಧುನಿಕತೆಯ ಸಮನ್ವಯ ಕಾಣುತ್ತೇವೆ. ಚಂಪಾ, ಡುಂಡಿರಾಜ್‌ರ ಕೆಲವು ಕವನಗಳಲ್ಲೆಲ್ಲ ಈ ಅಂಶವನ್ನು ಕಾಣಬಹುದು. ಪರಂಪರೆಯ ಅಂಶಗಳನ್ನು ಬಳಸಿಕೊಳ್ಳುತ್ತಲೇ ಹೊಸದರ ಕಡೆಗೆ ತುಡಿಯುವ ದೃಷ್ಟಿಕೋನವಿಲ್ಲಿದೆ.

ಆರನೆಯದಾಗಿ 'ಸಾಮಾಜಿಕ ನೆಲೆ' ಚುಟುಕು ಕಾವ್ಯದ ಮುಖ್ಯ ನೆಲೆಯಾಗಿದೆ. ಇದಕ್ಕೆ ಇಲ್ಲಿ ಬರೆದ ಕವಿಗಳೆಲ್ಲರೂ ಪ್ರಗತಿಪರ ಚಿಂತನೆಯಿಂದ ಬಂದಿರುವುದು ಒಂದು ಕಾರಣವಾಗಿದೆ. ಸಾಮಾಜಿಕ ನೆಲೆಯೆಂದರೆ ಮನುಷ್ಯನನ್ನು ಸಮಾಜೀಕರಿಸುವುದು. ಪರಂಪರೆ ಮತ್ತು ಆಧುನಿಕತೆಯ ಸಮನ್ವಯದಲ್ಲಿ ಹುಟ್ಟಿಬರುವ ಸಮರ್ಥ ಪ್ರತಿನಿಧಿಯೊಂದರ ಹುಡುಕಾಟವೇ ಈ ಸಾಮಾಜಿಕ ನೆಲೆಯ ಮುಖ್ಯ ಅಂಶವಾಗಿದೆ. ಆಧುನಿಕ ವ್ಯವಸ್ಥೆಗೆ ಪ್ರತಿಕ್ರಿಯೆಯಾಗಿ ತಕ್ಕ ಪ್ರತಿರೂಪವೊಂದನ್ನು ಹುಡುಕುವುದು ಈ ನೆಲೆಯ ಮುಖ್ಯ ಧೋರಣೆಯಾಗಿದೆ. ಪರಂಪರೆಯನ್ನು ಧಿಕ್ಕರಿಸಿದ ವ್ಯಕ್ತಿತ್ವ ಮತ್ತು ಪರಂಪರೆಯನ್ನು ಮಾತ್ರ ಒಪ್ಪಿಕೊಂಡ ವ್ಯಕ್ತಿತ್ವ ಇವೆರಡೂ ದುರ್ಬಲವಾದದ್ದು ಎಂಬ ನಂಬಿಕೆ ಇಲ್ಲಿನ ಕವಿಗಳದ್ದು. ಹಾಗಾಗಿ ಆಧುನಿಕ ವ್ಯವಸ್ಥೆಗೆ ಪ್ರತಿಕ್ರಿಯೆಯಾಗಿ ಪರಂಪರೆ ಮತ್ತು ಆಧುನಿಕತೆಯ ಸಮನ್ವಯದಲ್ಲಿ ಸೂಕ್ತ ಪ್ರತಿನಿಧಿಗಾಗಿ ಹುಡುಕಾಡುವ ಒಂದು ಶೋಧನೆಯನ್ನು ಇಲ್ಲಿನ ಕವಿಗಳು ಮಾಡಿದ್ದಾರೆ. ಚಂಪಾ, ಡುಂಡಿರಾಜ್ ಕವನಗಳಲ್ಲೆಲ್ಲಾ ಈ ಸಾಮಾಜಿಕ ನೆಲೆ ಕಾಣಿಸುತ್ತದೆ. ನಮ್ಮೆಲ್ಲ ಸಣ್ಣತನಗಳನ್ನೂ ಮೀರಿದ ಮಾನವೀಯವಾದ ಪರಿಸರವೊಂದರ, ಭಾರತೀಯ ವ್ಯಕ್ತಿತ್ವವೊಂದರ ಶೋಧ ಈ ಧಾರ್ಮಿಕ ನೆಲೆಯ ಹುಡುಕಾಟದ ಮುಖ್ಯ ಅಂಶವಾಗಿದೆ. ಭಾರತೀಯ ಪರಂಪರೆಯೊಂದರ ಹಿನ್ನೆಲೆಯಿದ್ದರೂ ಮಾನವೀಯವಾದ ಮೌಲ್ಯಗಳ ಶೋಧನೆಯೇ ಇಲ್ಲಿ ಮುಖ್ಯವಾಗಿರುವುದನ್ನು ಕಾಣಬಹುದಾಗಿದೆ. ಹೀಗೆ ಚುಟುಕು ಕಾವ್ಯದ ಮುಖ್ಯ ನೆಲೆಯೂ ಆಗಿದೆ.

ಏಳನೆಯದಾಗಿ ಮೇಲೆ ಸೂಚಿಸಲಾದ ಮಾನವೀಯ ನೆಲೆ, 'ಸಾಮಾಜಿಕ ಪ್ರಜ್ಞೆ'ಯಲ್ಲೂ ಕಾಣಿಸುತ್ತದೆ. ಸಾಮಾಜಿಕ ನೆಲೆ, ಸಾಮಾಜಿಕ ಸಂಘಟನೆ, ಪ್ರತಿಭಟನೆ, ಸಮಾಜಮುಖಿ ಚಿಂತನೆ ಚುಟುಕು ಕವನಗಳಲ್ಲಿ ಢಾಳವಾಗಿ ಕಾಣಿಸುತ್ತದೆ.

ಎಂಟನೆಯದಾಗಿ ಬದುಕಿನ ಸಂಕೀರ್ಣ ನೆಲೆಗಳು ಜನಪದ ಚುಟುಕುಗಳಲ್ಲಿ ಅರ್ಥಪೂರ್ಣವಾಗಿ ಅಭಿವ್ಯಕ್ತವಾಗಿವೆ. ಉದಾಹರಣೆ : ಮಗುವಿನ ಮನಮೋಹಕ ಬಾಲ ಲೀಲೆಗಳನ್ನು ಚಿತ್ರಿಸುವ ಒಂದು ತ್ರಿಪದಿ.

> ಹಲಗ್ಯಾಗೆ ಹಾಡುವ ಕರಡ್ಯಾಗೆ ಕುಣಿಯುವ
> ಕರದಲ್ಲಿ ಕುಸ್ತಿ ಹಿಡಿಯುವ-ಕಂದಯ್ಯನ
> ಕರೆದು ಕುಡಿಸೀನ ನೊರೆಹಾಲು!

ತನ್ನ ಕಂದನ ಆಟಪಾಟಗಳನ್ನು ಕಂಡ ತಾಯಿಯೊಬ್ಬಳು ಕೆತ್ತುವ ಮುತ್ತಿನ ಶಬ್ದಚಿತ್ರ. ತಮ್ಮಟೆಯ ಸದ್ದಿಗೆ ಹಾಡುವ, ಕರಡೆಯನ್ನು ನುಡಿಸಿದರೆ ಕುಣಿಯುವ, ಕೈಗಳನ್ನು ಆನಿಸಿ ಕುಸ್ತಿಗೆ ನುಗ್ಗುವ ಮುದ್ದು ಕಂದಯ್ಯನನ್ನು ಕಂಡ ಯಾವ ತಾಯಿಯ ಹೃದಯ ತಾನೆ ಹಿಗ್ಗಿ ಹೀರೇಕಾಯಿಯಾಗುವುದಿಲ್ಲ. ಅವಳು ತಾಯ್ತನದಿಂದ ತನ್ನ ಹೆಣ್ತನದ ಸಾರ್ಥಕ್ಯವನ್ನು ಆ ಕಂದನಿಗೆ ಹಾಲು ಕುಡಿಸುವುದರಿಂದ ಕಂಡು ಆನಂದದ ಅಸೀಮ ಅನುಭವದಲ್ಲಿ ಮುಳುಗಿ ಹೋಗಿದ್ದಾಳೆ. ಅಣ್ಣ ತಂಗಿಯರ ಅನುಪಮ ಬಾಂಧವ್ಯದ ಭಾವಗಳನ್ನು ಸುಂದರವಾಗಿ ಚಿತ್ರಿಸುವ ತ್ರಿಪದಿಗಳಲ್ಲಿ ಇದು ಒಂದು.

ಹಟ್ಟೀಲಿ ಹತ್ತೆಮ್ಮೆ ಕೊಟ್ಟಿಗೇಲಿ ನಾಕೆಮ್ಮೆ
ಕೊಟ್ಟರೆ ನನಗೊಂದಿ ಎಮ್ಮೆಯ - ಅಣ್ಣಯ್ಯ
ನಿನ್ಹೆಸರೇಳಿ ಮೊಸರು ಕುಡಿದೇನು!

ಹೆಣ್ಣು ಮಕ್ಕಳಿಗೆ ತವರಿನಿಂದ ಕೊಂಡುಹೋದ ಯಾವುದೇ ವಸ್ತು ವಾರಗಿತ್ತಿಯರ ನಡುವೆ ಬೀಗುತ್ತ ಹೇಳಿಕೊಳ್ಳುವುದಕ್ಕೆ ಹೆಮ್ಮೆಯ ವಿಷಯವಾಗಿರುತ್ತದೆ. ಅಷ್ಟು ಮಾತ್ರವೇ ಅಲ್ಲ; ಇಲ್ಲಿ ಅಣ್ಣ-ತಂಗಿಯರ ನಡುವಣ ಆತ್ಮೀಯ ಬಾಂಧವ್ಯವೂ ಎದ್ದುಕಾಣುತ್ತದೆ. ಮತ್ತೊಂದು ತ್ರಿಪದಿಯಲ್ಲಿ ತಂಗಿಯೊಬ್ಬಳು ಸ್ತ್ರೀ ಸಹಜವಾದ ಒಳಗುದಿ ಇದು.

ಹತ್ತು ಮೊಳದ ಬಣ್ಣ ಮುತ್ತಿನಂಚಿನ ಬಣ್ಣ
ಅತ್ತಿಗೆಗೆಂದು ತಂದವನೆ - ನಮ್ಮಣ್ಣ
ಮತ್ಯಾಕೆ ಮರೆತ ತಂಗೀಯ!

ಇಂಥ ತ್ರಿಪದಿಗಳ ಸಹಜ ಸೌಂದರ್ಯಕ್ಕೆ ವ್ಯಾಖ್ಯಾನಗಳ ವಿರೂಪವೇಕೆ ಅದರಂತೆ, ನಾಗರಿಕ ಜಗತ್ತಿಗೆ ಜಾನಪದ ಲೋಕದ ಒಂದು ಅನನ್ಯ ಪ್ರೇಮ ಪ್ರಕರಣವನ್ನು ಹೇಳುವ ಒಂದು ತ್ರಿಪದಿ ಇದು.

ಆಡುಕಾಯೋನ ಕೂಡ ಓಡಿ ಹೋಗ್ಯಾಳ ಬಾಲಿ
ಅರಣ್ಯದಾಗ ಹಸಿದಾಳ - ಆ ಹುಡುಗ
ಆಡಹಿಂಡಿ ಹಾಲ ಕುಡಿಸ್ಯಾನು!

ಒಲಿದ ಹೃದಯಗಳಿಗೆ ಸಿರಿತನ-ಬಡತನ, ಜಾತಿ-ಮತ, ಅಧಿಕಾರ-ಅಂತಸ್ತು ಈ ಯಾವುದೂ ಮುಖ್ಯವಾಗುವುದಿಲ್ಲ. ಸಮಾನಸ್ಪಂದನವೇ ಮುಖ್ಯವಾಗುತ್ತದೆ. ಆಡು ಕಾಯುವವನ ಜೊತೆಗೆ ಓಡಿ ಹೋದ ಶ್ರೀಮಂತನ ಮಗಳ ಹಸಿವೆಗೆ ಆ ಹುಡುಗ ಅರಣ್ಯದ ಮಧ್ಯದಲ್ಲಿ ಆಡನ್ನು ಹಿಂಡಿ ಹಾಲನ್ನು ಕುಡಿಸಿದನಂತೆ. ಈ ಮಾತು ನೆನೆನೆನೆಸಿದಂತೆಲ್ಲ ಧ್ವನಿ ಅನುರಣನಗೊಳ್ಳುವ ಗಣಿಯಾಗುತ್ತದೆ.

ಹೀಗೆ, ಚುಟುಕು ಕಾವ್ಯವು ತನ್ನದೇ ಆದ ಪ್ರತ್ಯೇಕತೆಯನ್ನು ಉಳಿಸಿಕೊಂಡಿದೆ. ಈ ಭಿನ್ನ ಅಂಶಗಳೇ ಚುಟುಕು ಕಾವ್ಯದ ಶ್ರೇಷ್ಠ ಅಂಶವೆಂದೂ, ಇಲ್ಲಿನ ಕಾವ್ಯ ಉಳಿದ ಸಾಹಿತ್ಯ ರೂಪಗಳಿಗಿಂತ ಶ್ರೇಷ್ಠವಾದುದು

ಎಂಬುದು ಇದರರ್ಥವಲ್ಲ. ಬದಲಿಗೆ ಕನ್ನಡ ಕಾವ್ಯ ಭಿನ್ನ ದಾರಿಯನ್ನು ತುಳಿಯಲು ಚುಟುಕು ಕಾವ್ಯ ಕೊಟ್ಟ ಕಾಣಿಕೆಗಳ ಕಡೆಗೆ ಗಮನ ಸೆಳೆಯುವುದೇ ಈ ಅಧ್ಯಯನದ ಉದ್ದೇಶ. ಹೊಸ ಭಾಷೆ, ಹೊಸ ಶೈಲಿ, ನಾಟಕೀಯತೆ, ಹೊಸ ದೃಷ್ಟಿಕೋನ ಇವೆಲ್ಲವುಗಳ ಮೂಲಕ ಚುಟುಕು ಕಾವ್ಯ ಹೊಸ ಮಾರ್ಗವನ್ನು ಹಿಡಿದಿದೆ. ಕನ್ನಡ ಕಾವ್ಯ ಜಿಡ್ಡುಗಟ್ಟುವ ಸ್ಥಿತಿಯಲ್ಲಿದ್ದಾಗ ಹೊಸ ಪ್ರಯೋಗಗಳ ಮೂಲಕ ಕಾವ್ಯ ಹೊಸದಿಕ್ಕಿನಲ್ಲಿ ಹರಿಯುವಂತೆ ನೋಡಿಕೊಂಡಿವೆ. ಪ್ರಾದೇಶಿಕ ವಿಶಿಷ್ಟತೆಯಿದ್ದು ಅದನ್ನೂ ಮೀರಿ ಕಾವ್ಯದಲ್ಲಿ ಮಹತ್ವದ ಪ್ರಯೋಗಗಳನ್ನು ಮಾಡಿದೆ. ಹಾಗಾಗಿಯೇ ಪಂಪಾದಿ ಚಂಪೂ ಕವಿಗಳು, ವಚನಕಾರರು, ದಾಸರು, ಹೊಸಗನ್ನಡ ಕವಿಗಳು ಕನ್ನಡ ಕಾವ್ಯದಲ್ಲಿಯೇ ಪ್ರಮುಖರಾಗಿ ಕಂಗೊಳಿಸುತ್ತಾರೆ. ಇದು ಚುಟುಕು ಕಾವ್ಯದ ಮುಖ್ಯ ಸಾಧನೆಯಾಗಿದೆ.

ಅನುಬಂಧಗಳು

೧. ಆಕರ ಗ್ರಂಥಗಳು

೨. ವಿಶೇಷ ಸಂಚಿಕೆಗಳು

೩. ಪಿಎಚ್.ಡಿ.ಪ್ರಬಂಧಗಳು

೪. ಪತ್ರಿಕೆಗಳು

೧

ಆಕರ ಗ್ರಂಥಗಳು

೧. ಅಕಬರ ಅಲಿ ಎಂ., ಅಕಬರ ಅಲಿ ಸಮಗ್ರ ಕಾವ್ಯ, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೨೦೦೬

೨. ಅಕಬರ ಅಲಿ ಎಂ., ಬೆಳಕಿನ ಆರಾಧನೆ, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೨೦೦೫

೩. ಅಕಬರ ಅಲಿ ಮತ್ತು ತೋಪಖಾನೆ ಸಂ, ಅನ್ನ ಚುಟುಕು ಸಂಕಲನ, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೧೯೫೨

೪. ಅನಂತರಂಗಾಚಾರ್ ಎನ್., ಪಂಪಭಾರತಂ, ಗದ್ಯಾನುವಾದ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೭೭

೫. ಅನಂತನಾರಾಯಣ ಎನ್., ಹೊಸಗನ್ನಡ ಕವಿತೆಯ ಮೇಲೆ ಇಂಗ್ಲೀಷ್ ಕವಿಯ ಪ್ರಭಾವ, ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು, ೧೯೬೨

೬. ಅಜಯ್ ಬಣಕಾರ, ಹನಿಸಂಪಿಗೆ, ಕವನ ಪ್ರಕಾಶನ, ಕೊಟ್ಟೂರು, ೨೦೦೫

೭. ಅಪಾರ, ಮಧ್ಯಸಾರ, ಛಂದ ಪುಸ್ತಕೆ, ಬೆಂಗಳೂರು, ೨೦೦೮

೮. ಅಮೃತ ಸೋಮೇಶ್ವರ, ಹೃದಯ ವಚನಗಳು, ಪ್ರಕೃತಿ ಪ್ರಕಾಶನ, ದಕ್ಷಿಣ ಕನ್ನಡ, ೧೯೯೯

೯. ಅರಸ್ ಎಂ.ಜಿ.ಆರ್.(ಸಂ), ಸಿ.ಪಿ.ಕೆ.ಚುಟುಕುಗಳು, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೧೯೯೭

೧೦. ಅರಸ್ ಎಂ.ಜಿ.ಆರ್.(ಸಂ), ಚದುರಂಗರ ಚುಟುಕುಗಳು, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೧೯೯೮

೧೧. ಅರಸ್ ಎಂ.ಜಿ.ಆರ್.(ಸಂ), ಚುಟುಕು ಸಾಹಿತ್ಯ ವಿಮರ್ಶೆ, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೧೯೯೮

೧೨. ಅರಸ್ ಎಂ.ಜಿ.ಆರ್.(ಸಂ), ಚುಟುಕು ಚೈತ್ರ, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೧೯೯೯

೧೩. ಅರಸ್ ಎಂ.ಜಿ.ಆರ್.(ಸಂ), ಎಚ್ಚೆಸ್ಕೆ ಚುಟುಕುಗಳು, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೧೯೯೯

೧೪. ಅರಸ್ ಎಂ.ಜಿ.ಆರ್.(ಸಂ), ಚುಟುಕು ಮಂದಾರ, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೨೦೦೦

೧೫. ಅರಸ್ ಎಂ.ಜಿ.ಆರ್.(ಸಂ), ಅಕಬರ ಅಲಿ ಚುಟುಕುಗಳು, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೨೦೦೩

೧೬. ಅರಸ್ ಎಂ.ಜಿ.ಆರ್.(ಸಂ), ಚುಟುಕು ನೆಲೆ ಬೆಲೆ, ಚುಟುಕು ಸಾಹಿತ್ಯ ಪರಿಷತ್, ಕೇಂದ್ರ ಸಮಿತಿ, ಮೈಸೂರು, ೨೦೦೪

೧೭. ಅರಸ್ ಎಂ.ಜಿ.ಆರ್.(ಸಂ), ಎಚ್ಚೆಸ್ಕೆ ೮೫, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೨೦೦೪

೧೮. ಅರಸ್ ಎಂ.ಜಿ.ಆರ್.(ಸಂ), ವಿ.ಗ.ನಾ.ಚುಟುಕುಗಳು, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೨೦೦೫

೧೯. ಅರಸ್ ಎಂ.ಜಿ.ಆರ್.(ಸಂ), ಬಿ.ಟಿ.ಲಲಿತಾನಾಯ್ಕ ಚುಟುಕುಗಳು, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೨೦೦೬

೨೦. ಅರಸ್ ಎಂ.ಜಿ.ಆರ್.(ಸಂ), ಎಚ್ಚೆಸ್ಕೆ ಚುಟುಕು ದರ್ಶನ, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೨೦೦೬

೨೧. ಅರಸ್ ಎಂ.ಜಿ.ಆರ್.(ಸಂ), ಚುಟುಕು ವೈಶಾಖ, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೨೦೦೬

೨೨. ಅರಸ್ ಎಂ.ಜಿ.ಆರ್.(ಸಂ), ದೇಜಗೌ ಕಾವ್ಯ ಸಂಕಲನ, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೨೦೦೬

೨೩. ಅಂಗಡಿ ಎಸ್.ಎಸ್., ಹಂತಿ-ಪಂತಿ ಪದಗಳು, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೭

೨೪. ಅಂಗಡಿ ಎಸ್.ಎಸ್, ಕನ್ನಡ ಶಿಶುಪದಗಳು, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೭

೨೫. ಅಂಗಡಿ ಎಸ್.ಎಸ್., ಜನಪದ ಸಾಹಿತ್ಯ ಭಾಷೆ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೮

೨೬. ಅಂಗಡಿ ಎಸ್.ಎಸ್., ಕುರುಬ ಸಮುದಾಯ ಭಾಷೆ, ಆನಂದ ಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ, ೨೦೦೯

೨೭. ಅಂಗಡಿ ಎಸ್.ಎಸ್., ಸರಳ ಕವಿರಾಜ ಮಾರ್ಗ, ಮಂಗಳಾ ಪ್ರಕಾಶನ, ಹೊಸಪೇಟೆ, ೨೦೦೯

೨೮. ಎಚ್ಚೆಸ್ಕೆ(ಸಂ), ದಾಸ ಸಾಹಿತ್ಯ ದರ್ಶನ, ಮಂಗಳ ಭಾರತಿ ಪ್ರಕಾಶನ, ಮೈಸೂರು, ೧೯೮೪

೨೯. ಎಚ್ಚೆಸ್ಕೆ(ಸಂ), ಚುಟುಕು ಮಲ್ಲಿಗೆ, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೨೦೦೦

೩೦. ಎಚ್ಚೆಸ್ಕೆ, ತುಂಬೆ ಹೂ, ಸಾಹಿತ್ಯ ಪಲ್ಲವ ಪ್ರಕಾಶನ, ಮೈಸೂರು, ೨೦೦೬

೩೧. ಕಮಲಾ ಹೆಮ್ಮಿಗೆ(ಸಂ), ಹನಿಹನಿ, ಸಂಕ್ರಮಣ ಪ್ರಕಾಶನ, ಬೆಂಗಳೂರು, ೧೯೯೭

೩೨. ಕಲಬುರ್ಗಿ ಎಂ.ಎಂ., ಮಾರ್ಗ, ಸಂಪುಟ ೧, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೯೮

೩೩. ಕಲಬುರ್ಗಿ ಎಂ.ಎಂ., ಉತ್ತರ ಕರ್ನಾಟಕದ ಜನಪದ ಸಾಹಿತ್ಯ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೮

೩೪. ಕಲಬುರ್ಗಿ ಎಂ.ಎಂ., ಮಾರ್ಗ, ಸಂಪುಟ ೨, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೯೫

೩೫. ಕಳಕೇಶ ವಿ ಬಳಿಗಾರ, ಸುಖದ ಬಾಗಿಲು ಹನಿಗವನಗಳು, ವಿವೇಕನಂದ ಪ್ರಕಾಶನ, ಬೆಂಗಳೂರು, ೨೦೦೭

೩೬. ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ(ಸಂ), ಕರ್ಣಾಟಕ ಭಾರತ ಕಥಾಮಂಜರಿ, ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಮೈಸೂರು, ೧೯೫೮

೩೭. ಕುವೆಂಪು(ಸಂ), ಪಂಪ ಭಾರತವೆಂಬ ವಿಕ್ರಮಾರ್ಜುನ ವಿಜಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೬೦

೩೮. ಕೃಷ್ಣಮೂರ್ತಿ ಕೆ., ಆನಂದ ವರ್ಧನನ ಕಾವ್ಯಮೀಮಾಂಸೆ ಮತ್ತು ಕನ್ನಡ ಧ್ವನ್ಯಾಲೋಕ, ಅನುಭವ ಪ್ರಕಾಶನ, ಬೆಂಗಳೂರು, ೨೦೦೭

೩೯. ಕೃಷ್ಣಮೂರ್ತಿ ಕೆ., ಕನ್ನಡ ಧ್ವನ್ಯಾಲೋಕ ಮತ್ತು ಲೋಚನ ಸಾರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೦

೪೦. ಕೃಷ್ಣಕುಮಾರ ಸಿ.ಪಿ., ಜನ್ನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೧

೪೧. ಕೃಷ್ಣಕುಮಾರ ಸಿ.ಪಿ., ಬಂಧು ಬೆರಗು, ತನುಮನ ಪ್ರಕಾಶನ, ಮೈಸೂರು, ೨೦೦೦

೪೨. ಕೃಷ್ಣಕುಮಾರ ಸಿ.ಪಿ., ಕುಮಾರವ್ಯಾಸ ವಿರಚಿತ ಅರಣ್ಯಪರ್ವ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೬

೪೩. ಕೇಶವ ಭಟ್ಟ ಟಿ., ಮುದ್ದಣ್ಣ ಪ್ರಶಸ್ತಿ ಗ್ರಂಥ, ಕನ್ನಡ ಸಾಹಿತ್ಯ ಕುಟೀರ, ಬೆಂಗಳೂರು, ೧೯೭೬

೪೪. ಕೊಟ್ರೇಶ ಸಿ.ಪಿ., ಕನ್ನಡ ಚುಟುಕು ಸಾಹಿತ್ಯ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೭

೪೫. ಗದ್ದಿಗಿಮಠ ಬಿ.ಎಸ್., ಕನ್ನಡ ಜಾನಪದ ಗೀತೆಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೩

೪೬. ಗಣಪತಿ ಸಚ್ಚಿದಾನಂದ ಸ್ವಾಮಿ, ಚುಟುಕು ಸಪ್ತಪತಿ, ರಾಗರಾಗಿಣಿ ಟ್ರಸ್ಟ್, ಮೈಸೂರು, ೨೦೦೫

೪೭. ಗೀತಾ ಕಬ್ಬಳ್ಳಿ, ಭಾವದ ಮೊಳಕೆಗಳು ಚುಟುಕು ಸಂಕಲನ, ಅನು ಪ್ರಕಾಶನ, ಹರಪನಹಳ್ಳಿ, ೨೦೦೫

೪೮. ಗೀತಾ ಮಹದೇವ ಪ್ರಸಾದ್, ತಾಯಿಗಾಗಿ, ಕಾರ್ತಿಕ ಪ್ರಕಾಶನ, ಬೆಂಗಳೂರು, ೨೦೦೫

೪೯. ಗುಡಿ ಆರ್.ಬಿ., ದಾಸ ಸಾಹಿತ್ಯ ಒಂದು ಸೈದ್ಧಾಂತಿಕ ಅಧ್ಯಯನ, ಶ್ರೀನಿಧಿ ಪ್ರಕಾಶನ, ಅಥಣಿ, ೧೯೯೪

೫೦. ಗುಂಡಪ್ಪ ಎಲ್., ಕರ್ನಾಟಕ ಭಾರತ ಕಥಾಮಂಜರಿ ಗದ್ಯಾನುವಾದ, ಹೇಮಂತ ಪ್ರಕಾಶನ, ಬೆಂಗಳೂರು, ೨೦೦೭

೫೧. ಚನ್ನವೀರ ಕಣವಿ, ಕಣವಿ ಚುಟುಕುಗಳು, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೨೦೦೯

೫೨. ಚೊಕ್ಕಮೂರ್ತಿ ವಿ.ಪಾಟೀಲ್, ಕನ್ನಡ ಛಂದಶಾಸ್ತ್ರ ಪರಿಚಯ, ಅಭಯ ಪ್ರಕಾಶನ, ಹರಿಹರ, ೧೯೮೬

೫೩. ಚಂದ್ರಶೇಖರ ಪಾಟೀಲ(ಸಂ), ಸಂಕ್ರಮಣ ಮಾಸಿಕ, ಸಂಕ್ರಮಣ ಪ್ರಕಾಶನ, ಬೆಂಗಳೂರು, ೨೦೦೯

೫೪. ಚಂದ್ರಶೇಖರ ಪಾಟೀಲ, ಚಂಪಾ ಚುಟುಕುಗಳು, ಸಂಕ್ರಮಣ ಪ್ರಕಾಶನ, ಬೆಂಗಳೂರು, ೨೦೦೪

೫೫. ಚಂದ್ರಶೇಖರ ಕಂಬಾರ(ಸಂ), ಕನ್ನಡ ಜಾಪನದ ವಿಶ್ವಕೋಶ, ಸಂಪುಟ ೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫

೫೬. ಜ್ಯೋಶಿ ಜಿ.ಬಿ. ಮತ್ತು ಕುರ್ತುಕೋಟಿ ಕೆ.ಡಿ.(ಸಂ), ನಡೆದು ಬಂದ ದಾರಿ, ಸಂಪುಟ ೩, ಮನೋಹರ ಗ್ರಂಥಮಾಲೆ, ಧಾರವಾಡ, ೧೯೬೧

೫೭. ಡುಂಡಿರಾಜ ಎಚ್., ಅಳಿಲು ಸೇವೆ ಹನಿಗವನಗಳು, ಅಂಕಿತ ಪುಸ್ತಕಾಲಯ, ಬೆಂಗಳೂರು, ೨೦೦೦

೫೮. ಡುಂಡಿರಾಜ್ ಎಚ್, ಹನಿಖಜಾನೆ, ಅಂಕಿತ ಪುಸ್ತಕಾಲಯ, ಬೆಂಗಳೂರು, ೨೦೦೭

೫೯. ತಿಪ್ಪೇರುದ್ರಸ್ವಾಮಿ ಎಚ್., ಪ್ರಸಾದ, ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೬೪

೬೦. ತೇಜಸ್ವಿನಿದೇವಿ ಅರಸ್ ಬಿ.ಎನ್., ಚುಟುಕು ವರ್ಷಿಣಿ, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೨೦೦೩

೬೧. ದ್ವಾರಕನಾಥ ಎನ್.ಎಸ್., ಮೌನಧ್ವನಿ ಚುಟುಕು ಸಂಕಲನ, ವೈದ್ಯವಾರ್ತಾ ಪ್ರಕಾಶನ, ಮೈಸೂರು, ೨೦೦೨

೬೨. ದಿವಾಕರ ಆರ್.ಆರ್., ಶರಣರ ಅನುಭವ ಅನುಭಾವ ಅನುಭೂತಿ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೬

೬೩. ದೇಜಗೌ, ಚುಟುಕು ಮಹಾಕವಿ ಸರ್ವಜ್ಞ, ವೈದ್ಯವಾರ್ತಾ ಪ್ರಕಾಶನ, ಮೈಸೂರು, ೨೦೦೦

೬೪. ದೇಜಗೌ, ದೇಜಗೌ ಚುಟುಕುಗಳು, ವೈದ್ಯವಾರ್ತಾ ಪ್ರಕಾಶನ, ಮೈಸೂರು, ೨೦೦೦

೬೫. ದೇಜಗೌ, ನಿತ್ಯ ಸಾಹಿತ್ಯೋತ್ಸವ, ವೈದ್ಯವಾರ್ತಾ ಪ್ರಕಾಶನ, ಮೈಸೂರು, ೨೦೦೩

೬೬. ದೇಜಗೌ, ಕೇಳು ಮಗಳೆ ಚುಟುಕು ಸಂಕಲನ, ವೈದ್ಯವಾರ್ತಾ ಪ್ರಕಾಶನ, ಮೈಸೂರು, ೨೦೦೯

೬೭. ದೇವುಡು ನರಸಿಂಹಶಾಸ್ತ್ರಿ(ಸಂ), ಲಕ್ಷ್ಮೀಶ ಕವಿಯ ಜೈಮಿನಿ ಭಾರತ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫

೬೮. ನರಸಿಂಹಶಾಸ್ತ್ರಿ ಕೆ.ಎಲ್.(ಸಂ), ಆದಿಪುರಾಣಂ, ಗದ್ಯಾನುವಾದ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೨೦೦೯

೬೯. ನಾಯಕ ವಿ.ಗ., ಕನ್ನಡದಲ್ಲಿ ಹನಿಗವನಗಳು, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ೧೯೯೯

೭೦. ನಾಯಕ ಹಾ.ಮಾ., ಡಿ.ವಿ.ಜಿ. ಕೃತಿ ಶ್ರೇಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೫

೭೧. ನಾಯಕ ಹಾ.ಮಾ., ಜನಪದ ಸ್ವರೂಪ, ಟಿ.ವಿ.ಮೆಮೋರಿಯಲ್, ಮೈಸೂರು, ೧೯೯೬

೭೨. ನಾಯಕ ಹಾ.ಮಾ. ಮತ್ತು ವೆಂಕಟಾಚಲಶಾಸ್ತ್ರೀ, ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ ೧,೨,೩,೪, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೭

೭೩. ನಾರಾಯಣ ಜಿ.ಟಿ., ಅತ್ರಿಸೂನ ಉವಾಚ ಚುಟುಕುಗಳು, ವೈದ್ಯವಾರ್ತಾ ಪ್ರಕಾಶನ, ಮೈಸೂರು, ೨೦೦೮

೭೪. ಪರಮೇಶ್ವರ ಭಟ್ ಎಸ್.ವಿ., ಆಯ್ದ ಕವನಗಳು, ಗೀತಾ ಬುಕ್‌ಹೌಸ್, ಮೈಸೂರು, ೧೯೮೦

೭೫. ಪ್ರಭುಶಂಕರ, ಕನ್ನಡದಲ್ಲಿ ಭಾವಗೀತೆ, ನಿವೇದಿತಾ ಪ್ರಕಾಶನ, ಮೈಸೂರು, ೧೯೮೧

೭೬. ಪಾಟೀಲ ಎಸ್.ಸಿ., ನಯಸೇನನ ಸಂಪುಟ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೬

೭೭. ಬಸವರಾಜ ಸಬರದ, ವಚನ ಸಂಸ್ಕೃತಿ, ಪಲ್ಲವಿ ಪ್ರಕಾಶನ, ಗುಲಬರ್ಗಾ, ೨೦೦೬

೭೮. ಬಸವರಾಜ ಕಲ್ಗುಡಿ, ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೮೮

೭೯. ಭಾರತೀ ಪಾಟೀಲ, ಮಧುವಂತಿ, ಭೂಮಿ ಪ್ರಕಾಶನ, ಸಿಂದಿಗಿ, ೨೦೦೧

೮೦. ಭಿಕ್ಷಾವರ್ತಿಮಠ ಎಚ್.ಎ., ಹೂಬಾಣ ಚುಟುಕು ಸಂಕಲನ, ಪರಂಜ್ಯೋತಿ ಪ್ರಕಾಶನ, ಹರಿಹರ, ೨೦೦೭

೮೧. ಭೀಕ್ಷಾವರ್ತಿಮಠ ಎಚ್.ಎ., ಮಿಂಚುಗೊಂಚಲು ಚುಟುಕುಗಳು, ಪರಂಜ್ಯೋತಿ ಪ್ರಕಾಶನ, ಹರಿಹರ, ೨೦೦೧

೮೨. ಭಿಕ್ಷಾವರ್ತಿಮಠ ಎಚ್.ಎ., ಕನ್ನಡ ಶಾಯಿರಿ ಲೋಕ, ಪರಂಜ್ಯೋತಿ ಪ್ರಕಾಶನ, ಹರಿಹರ, ೨೦೦೫

೮೩. ಭೀಮಸೇನರಾವ್ ಬಿ., ಲಕ್ಷ್ಮೀಶನ ಜೈಮಿನಿ ಭಾರತ, ಟಿ.ಎನ್.ಕೃಷ್ಣಯ್ಯ ಶೆಟ್ಟಿ ಅಂಡ್ ಸನ್ಸ್, ಬೆಂಗಳೂರು, ೧೯೭೩

೮೪. ಭೂಸುನೂರುಮಠ ಸಂ.ಶಿ., ಪ್ರಭುದೇವರ ಶೂನ್ಯ ಸಂಪಾದನೆ, ರಾವೂರು ಶ್ರೀ ಸಿದ್ಧಲಿಂಗೇಶ್ವರ ಸಂಸ್ಥಾನ ಮಠ, ಆದವಾನಿ, ೧೯೯೯

೮೫. ಭೂಸುನೂರುಮಠ ಸಂ.ಶಿ., ವಚನ ಸಾಹಿತ್ಯ ಸಂಗ್ರಹ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೬

೮೬. ಬ್ಯಾಳಿ ಕೆ.ಬಿ., ಕನ್ನಡ ಹಾಯಿಕಗಳು, ತಾಯಿ ಪ್ರಕಾಶನ, ಕುಕನೂರು, ಕೊಪ್ಪಳ, ೨೦೦೪

೮೭. ಬ್ಯಾಳಿ ಕೆ.ಬಿ., ಧರೆ ಹತ್ತಿ ಉರಿದರೆ, ತಾಯಿ ಪ್ರಕಾಶನ, ಕುಕನೂರು, ಕೊಪ್ಪಪ ೧೯೯೭

೮೮. ಮಹೇಶವಾಡಿ ಬಿ.ಬಿ., ಮತ್ತು ಪಾಟೀಲ್ ಎಸ್.ಪಿ., ನಯಸೇನನ ಧರ್ಮಾಮೃತಂ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೪

೮೯. ಮಲ್ಲೇಪುರಂ ಜಿ.ವೆಂಕಟೇಶ, ನಾಗವರ್ಮನ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೯೦. ಮುಗುಳಿ ರಂ.ಶ್ರೀ., ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೮೫

೯೧. ಮುಗುಳಿ ರಂ.ಶ್ರೀ., ಪ್ರಾಚೀನ ಕನ್ನಡ ಕಾವ್ಯ ಸಂಚಯ, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೭೦

೯೨. ಮುಗುಳಿ ರಂ.ಶ್ರೀ., ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್‌ಹೌಸ್, ಮೈಸೂರು, ೧೯೯೩

೯೩. ಮಂಜುನಾಥ ಜಿ.ಬಿ., ಕನಕದಾಸರ ಮೋಹನ ತರಂಗಿಣಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೯

೯೪. ರಾಜಪ್ಪಗೌಡ ಎಚ್.ಎಂ., **ಚಟುಕು ಸಿರಿ**, ವೈದ್ಯವಾರ್ತಾ ಪ್ರಕಾಶನ, ಮೈಸೂರು, ೨೦೦೩

೯೫. ರಾಜಶೇಖರಯ್ಯ ಎ.ಎಂ.(ಸಂ), **ಭಾವ ಬಿಂದುಗಳು**, ಪೃಥ್ವಿ ಪ್ರಕಾಶನ, ಅಂಬಳಿ, ಬಳ್ಳಾರಿ, ೨೦೦೨

೯೬. ರಾಮರಾವ್ ಆರ್.ಎಸ್., **ರಾಘವಾಂಕನ ಸಿದ್ಧರಾಮಚರಿತೆ**, ಗದ್ಯಾನುವಾದ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯

೯೭ ರಿಯಾಜ್ ಭಾಷ್, **ಡಾಕ್ಟರ್ ಭಾಷ ಚುಟುಕುಗಳು**, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೨೦೦೬

೯೮. ರಂಗಣ್ಣ ಎಸ್.ವಿ., **ಹಾಸ್ಯ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೧

೯೯. ಲಕ್ಕಪ್ಪಗೌಡ ಎಚ್.ಜಿ., **ಕುಲಪತಿ ಚುಟುಕುಗಳು**, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೨೦೦೭

೧೦೦. ಲಲಿತಾಂಬ ವೃಷಬೇಂದ್ರಸ್ವಾಮಿ, **ವಚನಾಂಜಲಿ**, ಪ್ರಸಾದ ಪ್ರಕಾಶನ, ಧಾರವಾಡ, ೧೯೯೫

೧೦೧. ಲಕ್ಷ್ಮಣರಾವ್ ಬಿ.ಆರ್., **ಹನಿಗವಿತೆಗಳು**, ಅಂಕಿತ ಪ್ರಕಾಶನ, ಬೆಂಗಳೂರು, ೨೦೦೬

೧೦೨ ವಸಂತ ಫ.ಅಗಸಿಮನಿ (ಸಂ), **ಹಳೆಬೇರು ಹೊಸ ಚಿಗುರು**, ಸಂಸ್ಕೃತಿ ಪ್ರಕಾಶನ, ಹುಬ್ಬಳ್ಳಿ, ೨೦೦೨

೧೦೩. ವಿಜಯ ಹೆಮ್ಮಿಗೆ, **ಕಚಗುಳಿ ಹನಿಗವನಗಳು**, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೨೦೦೧

೧೦೪. ವಿಶ್ವನಾಥ ಡಿ.ಎಸ್., **ಸೆಳವು, ಚುಟುಕು ಸಂಕಲನ**, ವೈದ್ಯ ವಾರ್ತಾ ಪ್ರಕಾಶನ, ಮೈಸೂರು, ೧೯೯೪

೧೦೫. ವಿಷ್ಣುನಾಯಕ್, **ಕವಿ ಕರ್ಮಯೋಗಿ, ದಿನಕರ ದೇಸಾಯಿ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪

೧೦೬. ವೀರಣ್ಣ ಸಿ., **ಕನ್ನಡ ಪ್ರತಿಭಟನಾ ಕಾವ್ಯ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧

೧೦೭. ವೀರಣ್ಣ ಮಂಠಾಳಕರ(ಸಂ), **ಹನಿಜೇನು**, ಹುವಪ್ನೋರ ಪ್ರಕಾಶನ, ಬಸವ ಕಲ್ಯಾಣ, ೨೦೦೩

೧೦೮. ವೆಂಕಟಾಚಲಶಾಸ್ತ್ರೀ ಟಿ.ವಿ., **ಹಳೆಯ ಹೊನ್ನು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೧

೧೦೯. ವೃಷಬೇಂದ್ರಸ್ವಾಮಿ ಎನ್.ಎಂ., **ಕನ್ನಡ ಸಾಹಿತ್ಯದಲ್ಲಿ ಅಲ್ಲಮ ಪ್ರಭುದೇವ**, ಪ್ರಸಾದ ಪ್ರಕಾಶನ, ಧಾರವಾಡ, ೧೯೭೮

೧೧೦. ಶಕುಂತಲ ಸಿದ್ಧರಾಮ ದುರಗಿ, **ಆಧುನಿಕ ಕನ್ನಡದಲ್ಲಿ ಮಹಿಳಾ ಸಾಹಿತ್ಯ**, ಉಜ್ವಲ ಪ್ರಕಾಶನ, ಗುಲಬರ್ಗಾ, ೧೯೯೯

೧೧೧. ಶಾರದ ಮಳ್ಳೂರು, **ಕನ್ನಡಿ ಚುಟುಕುಗಳು**, ವಿನಯ ಪ್ರಕಾಶನ, ಜಮಖಂಡಿ, ೨೦೦೮

೧೧೨. ಶ್ಯಾಮರಾಯ ತ.ಸು.(ಸಂ), ಕುಮಾರ ವ್ಯಾಸಭಾರತ, ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೭೨

೧೧೩. ಶಾರದ ಮಳ್ಳೂರು, ಮಂದಹಾಸ, ವಿನಯ ಪ್ರಕಾಶನ, ಜಮಖಂಡಿ, ೨೦೦೭

೧೧೪. ಶಿವಶಂಕರ ಜರಗನಹಳ್ಳಿ, ಝರಿ, ಶುಭದ ಪ್ರಕಾಶನ, ಬೆಂಗಳೂರು, ೨೦೦೨

೧೧೫. ಶಿವರುದ್ರಪ್ಪ ಜಿ.ಎಸ್., ಸೌಂದರ್ಯ ಸಮೀಕ್ಷೆ, ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೬೫

೧೧೬. ಶಿವರುದ್ರಪ್ಪ ಜಿ.ಎಸ್., ಕಾವ್ಯಾರ್ಥ ಚಿಂತನ, ಶಾರದ ಪ್ರಕಾಶನ, ಬೆಂಗಳೂರು, ೧೯೮೩

೧೧೭. ಶಿವರುದ್ರಪ್ಪ ಜಿ.ಎಸ್., ಪಂಪ ಒಂದು ಅಧ್ಯಯನ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ,, ಬೆಂಗಳೂರು, ೧೯೭೪

೧೧೮. ಶ್ರೀಕಾಂತ(ಸಂ), ಮರಳು ಮುನಿಯನ ಕಗ್ಗ, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು, ೨೦೦೪

೧೧೯. ಶ್ರೀಕಂಠ ಕೂಡಿಗೆ(ಸಂ), ಜನಪದ ಶಿಶು ಪ್ರಾಸಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧

೧೨೦. ಶ್ರೀಕಂಠಯ್ಯ ತೀ.ನಂ., ರನ್ನಕವಿಯ ಗದಾಯುದ್ಧ ಸಂಗ್ರಹ, ಗೀತಾ ಬುಕ್ ಹೌಸ್, ಮೈಸೂರು, ೧೯೯೫

೧೨೧. ಶ್ರೀಪಾದ ಶೆಟ್ಟಿ, ದಿನಕರ ದೇಸಾಯಿ ಬದುಕು ಬರಹ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೫

೧೨೨. ಶೇಷಗಿರಿ ಕೆ.ಆರ್., ಕುಮಾರವ್ಯಾಸ ವಿರಚಿತ ಆದಿಪರ್ವ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೮

೧೨೩. ಸಣ್ಣಯ್ಯ ಬಿ.ಎಸ್., ಮತ್ತು ರಾಮೇಗೌಡ, ರನ್ನ ವಿರಚಿತ ಸಾಹಸಭೀಮ ವಿಜಯಂ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೫

೧೨೪. ಸಿದ್ದೇಶ್ವರ ಸ್ವಾಮಿಗಳು, ಅಲ್ಲಮ ಪ್ರಭುದೇವರ ವಚನ ನಿರ್ವಚನ ಸಂಪುಟ ೨, ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೨೦೦೧

೧೨೫. ಸೀತಾರಾಮ್ ಪಿ.ಕಣೇಕಲ್, ಪ್ರೇಮದಾ ಬಂಡಿ ಚುಟುಕುಗಳು, ಸತ್ಯಬೋದ ಪ್ರಕಾಶನ, ರಾಣಿಬೆನ್ನೂರು, ೨೦೦೫

೧೨೬. ಸೋಮಶೇಖರ ಇಮ್ರಾಪೂರ, ಹಂತಿ ಗೀಗೀ ಲಾವಣಿ ಸಂಪ್ರದಾಯಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೨

೧೨೭. ಹರಿಕೃಷ್ಣ ಭರಣ್ಯ, ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ, ಪ್ರಭಸ ಬಿಡುಗಡೆ, ಮಧುರೈ, ೧೯೯೦

೧೨೮. ಹಳಕಟ್ಟಿ ಫ.ಗು., ಹರಿಹರನ ರಗಳೆಗಳು, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೮

೧೨೯. ಹಿರೇಮಠ ಎಸ್.ಎಸ್., ಜನಪದ ಸಮಾಜ ಸಂಸ್ಕೃತಿ, ಸೂರ್ಯ ಪ್ರಕಾಶನ, ಮಲ್ಲಾಡಿಹಳ್ಳಿ, ೨೦೦೫

೧೩೦. ಹಿರೇಮಠ ಆರ್.ಸಿ., ಇಪ್ಪತ್ತೇಳು ಶಿವಶರಣೆಯರ ವಚನಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦

೧೩೧. ಹೂಗಾರ್ ಎಂ.ಬಿ., ಜನಪದ ತ್ರಿಪದಿಗಳಲ್ಲಿ ಜೀವನ ಮೌಲ್ಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೩

೨. ವಿಶೇಷ ಸಂಚಿಕೆಗಳು

೧. ದಿನಕರ ದೇಸಾಯಿಯವರ ಸಾಹಿತ್ಯ, ವಿಚಾರ ಸಂಕಿರಣ ಮಾಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೨

೨. ಪ್ರಜಾವಾಣಿ, ದೀಪಾವಳಿ ವಿಶೇಷ ಸಂಚಿಕೆ, ೧೯೯೩

೩. ಚುಟುಕು ಬೆಳಕು, ಚುಟುಕು ಸಾಹಿತ್ಯ ಸಮ್ಮೇಳನ, ವಿಶೇಷ ಸಂಚಿಕೆ, ೧೯೯೭

೪. ವೈದ್ಯ ವಾರ್ತಾ, ಚುಟುಕು ಸಾಹಿತ್ಯ ಪರಿಷತ್ತು, ಕೇಂದ್ರ ಸಮಿತಿ, ಮೈಸೂರು, ೨೦೦೨

೫. ಚುಟುಕು ಮೇರು, ಸ್ಮರಣ ಸಂಚಿಕೆ, ರಾಜ್ಯದ ೧೩ನೇ ಚುಟುಕು ಸಾಹಿತ್ಯ ಸಮ್ಮೇಳನ, ೨೦೦೩

೬. ಚುಟುಕು ಸಿರಿ, ಚುಟುಕು ಸಾಹಿತ್ಯ ಪರಿಷತ್ತು, ಜಿಲ್ಲಾ ಘಟಕ, ದಾವಣಗೆರೆ, ೨೦೦೯

೩. ಪಿಎಚ್.ಡಿ.ಮಹಾಪ್ರಬಂಧಗಳು

೧. ಮಂಜಪ್ಪ ಶೆಟ್ಟಿ ಮಸಗಲಿ, ಕನ್ನಡ ಮುಕ್ತಕ ಸಾಹಿತ್ಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೨. ಸುಬ್ರಹ್ಮಣ್ಯ ಹೆಗಡೆ, ಕನ್ನಡದಲ್ಲಿ ಚುಟುಕು ಸಾಹಿತ್ಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪. ಪತ್ರಿಕೆಗಳು

೧. ಸಂಪ್ರಭಾ, ಮಾಸಪತ್ರಿಕೆ, ಏಪ್ರಿಲ್, ಮೇ, ಜೂನ್, ಸುಮುಕಾ ಪ್ರಕಾಶನ, ಕಿನ್ನಿಗೊಳ, ದಕ್ಷಿಣ ಕನ್ನಡ ಜಿಲ್ಲೆ, ೧೯೯೮

೨. ನಾರಾಯಣಸ್ವಾಮಿ ಜ.ಹೋ., ಸಂಯುಕ್ತ ಕರ್ನಾಟಕ, ಸಾಪ್ತಾಹಿಕ ಸೌರಭ, ಜುಲೈ ೧೪, ೨೦೦೨

೩. ಸಂಯುಕ್ತ ಕರ್ನಾಟಕ, ಸಾಪ್ತಾಹಿಕ, ೦೫.೦೫.೨೦೦೨

೪. ಸಂಯುಕ್ತ ಕರ್ನಾಟಕ ಸಾಪ್ತಾಹಿಕ, ೧೯.೫.೨೦೦೨

೫. ಪ್ರಕಾಶ ಖಾಡೆ, ಚುಟುಕು ಸಾಹಿತ್ಯ ಮತ್ತು ಜಾನಪದ ರೂಪಗಳು, ಸಂಯುಕ್ತ ಕರ್ನಟಕ, ಸಾಪ್ತಾಹಿಕ ಸೌರಭ, ೧.೧೨.೨೦೦೨

೬. ಲಕ್ಷ್ಮಣ್‌ರಾವ್ ಬಿ.ಆರ್., ಹನಿ ಹನಿಗೂಡಿದ್ರೆ ಹಳ್ಳ, ವಿಜಯಕರ್ನಾಟಕ, ಸಾಪ್ತಾಹಿಕ, ಮೇ ೪, ೨೦೦೩

೭. ವೈಯನ್ಕೆ, ವಿಜಯ ಕರ್ನಾಟಕ, ಡಿಸೆಂಬರ್ ೨೮, ೨೦೦೩

೮. ವಿಜಯ ಕರ್ನಾಟಕ, ಜನಗಳ ಮನೆ, ಡಿಸೆಂಬರ್ ೧೪, ೨೦೦೩

೯. ಪ್ರಜಾವಾಣಿ, ಸಾಪ್ತಾಹಿಕ, ೧೧.೦೯.೨೦೦೫

೧೦. ಕನ್ನಡ ಪ್ರಭ, ಸಾಪ್ತಾಹಿಕ ಪ್ರಭ, ೧೨.೧೦.೨೦೦೮

೧೧. ವಿಜಯಕರ್ನಾಟಕ, ಸಾಪ್ತಾಹಿಕ, ೧೪.೦೯.೨೦೦೮

೧೨. ಜಿನದತ್ತರ ಚುಟುಕುಗಳು, ವಿಜಯ ಕರ್ನಾಟಕ, ಸಾಪ್ತಾಹಿಕು, ೮.೬.೨೦೦೮

೧೩. ವಿಷ್ಣುನಾಯಕ, ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ೧೪.೦೯.೨೦೦೮

೧೪. ಶ್ರೀವತ್ಸ ಜೋಶಿ, ಪರಾಗ ಸ್ಪರ್ಶ ದಿನಕರರ ಜೀವನ ಕುರಿತು ಲೇಖನ, ವಿಜಯ ಕರ್ನಾಟಕ, ಜನವರಿ ೨೦೦೮

೧೫. ಸಂಕ್ರಮಣ ಮಾಸಿಕ, ಬೆಂಗಳೂರು, ಜೂನ್ ೨೦೦೯